|| ಶ್ರೀಃ ||

ಶ್ರೀ ಜಯಚಾಮರಾಜೇಂದ್ರಗ್ರಂಥರತ್ನಮಾಲಾ

(ಸಂ. ೩೨)

ಶ್ರೀ ಶಿವರಹಸ್ಯ

ಸಂಪುಟ ೮

ಅನುವಾದಕ

ಆಸ್ಥಾನವಿದ್ವಾನ್ ಎಚ್. ಗಂಗಾಧರಶಾಸ್ತ್ರೀ

ಧರ್ಮಪ್ರಕಾಶ ಡಿ. ಬನುಮಯ್ಯನವರ ಹೈಸ್ಕೂಲು ಅಧ್ಯಾಪಕ

ಮೈಸೂರು

ಮೈಸೂರು

ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್

1947

॥ ಶ್ರೀಃ ॥

ಶ್ರೀ ಜಯಚಾಮರಾಜೇಂದ್ರಗ್ರಂಥರತ್ನಮಾಲಾ

(ಸಂ. ೩೨)

ಶ್ರೀಶಿವರಹಸ್ಯ

ಸಂಪುಟ ೮

ಅನುವಾದಕ

ಆಸ್ಥಾನವಿದ್ವಾನ್ ಎಚ್. ಗಂಗಾಧರಶಾಸ್ತ್ರೀ

ಧರ್ಮಪ್ರಕಾಶ ಡಿ. ಬನುಮಯ್ಯನವರ ಹೈಸ್ಕೂಲು ಅಧ್ಯಾಪಕ

ಮೈಸೂರು

ಮೈಸೂರು

ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್

1947

Printed by D. Rajarathnam,
Sree Panchacharya Electric Press
Sayaji Rao Road, Mysore.
For The Palace Mysore.

ಮುನ್ನುಡಿ

ಲೋಕದಲ್ಲಿ ಸಕಲ ಪ್ರಾಣಿಗಳಿಗಿಂತಲೂ ಮನುಷ್ಯನು ಬುದ್ಧಿಶಕ್ತಿಯಲ್ಲಿ ನಿಪುಣನು. ಊಹಾಪೋಹಶಕ್ತಿಯಲ್ಲಿ ಪ್ರಬಲನು. ಆದರೆ ಮಾನವವರ್ಗಕ್ಕೆ ಸಹಜವಾಗಿ ಬರುವ ಸ್ವಭಾವವೆಂದರೆ ರಾಗದ್ವೇಷಮೋಹಗಳು. ದಯಾದಾಕ್ಷಿಣ್ಯವಿನಯಾದಿಗಳು ಅಭ್ಯಾಸಬಲದಿಂದ ಬರತಕ್ಕವುಗಳು. ಈ ಗುಣಗಳನ್ನು ಮಾನವಸ್ವಭಾವವೆಂದು ಹೇಳುವುದಕ್ಕೆ ಬದಲಾಗಿ, ಮಾನವವರ್ಗದ ಶತ್ರುಗಳೆಂದರೆ ತಪ್ಪಾಗದು. ಗುರುಗಳ ಉಪದೇಶ, ಶಾಸ್ತ್ರಗಳ ಅಭ್ಯಾಸ, ಕರ್ಮಗಳ ಅನುಷ್ಠಾನ, ಇವೆಲ್ಲವೂ ಆ ಶತ್ರುವರ್ಗವನ್ನು ನಿರ್ಮೂಲಗೊಳಿಸುವುದಕ್ಕಾಗಿಯೇ ಪ್ರಾಚೀನರಿಂದ ನಿರೂಪಿತಗಳಾಗಿವೆ. ಆದರೆ ಅವು ಎಲ್ಲರಿಗೂ ಸುಲಭವಾಗಿ ಸಾಧ್ಯವಾಗಲಾರವು. ಯಥೋಚಿತವಾಗಿ ರಾಗಾದಿಗಳನ್ನು ತಗ್ಗಿಸುವುದಕ್ಕೆ ಶಾಂತಿಯೆಂದು ಹೆಸರು. ಸಕಲ ಕರ್ಮಗಳಿಗೂ, ಎಲ್ಲ ಪ್ರಯತ್ನಗಳಿಗೂ ಶಾಂತಿಯೇ ಮುಖ್ಯೋದ್ದೇಶವೆಂಬುದರಲ್ಲಿ ಸಂಶಯವಿಲ್ಲ. ಇಂತಹ ಶಾಂತಿಯನ್ನು ಸಂಪಾದಿಸಬೇಕಾದರೆ ಮೊದಲು ಮನಸ್ಸು ಮಾನವನ ಅಧೀನದಲ್ಲಿ ನಿಲ್ಲಬೇಕು. ಹಾಗೆ ಚಿತ್ತವನ್ನು ಸ್ಥಿರೀಕರಿಸಲು ಸಾಮಾನ್ಯ ಮಾನವರಿಗೆ ಪ್ರಾಜ್ಞರಾದವರು ದರ್ಶನಗಳು, ಮತಗಳು, ಎಂಬ ಹೆಸರಿನಿಂದ ಕೆಲವು ಸಾಧನೆಗಳನ್ನು ಕಲ್ಪಿಸಿರುವರು. ತಾತ್ತ್ವಿಕಮಾರ್ಗದಲ್ಲಿ,

"ಕಣಾದಸ್ಯಾಕ್ಷಪಾದಸ್ಯ ವ್ಯಾಸಸ್ಯ ಕಪಿಲಸ್ಯ ಚ ।
ಪತಂಜಲೇರ್ಜೈಮಿನೇಶ್ಚ ದರ್ಶನಾನಿ ಷಡೇವ ಹಿ ॥"

ಎಂಬ ಶ್ಲೋಕಾನುಸಾರವಾಗಿ ದರ್ಶನಪ್ರವರ್ತಕರ ಹೆಸರುಗಳಿಂದ, ವೈಶೇಷಿಕ, ನ್ಯಾಯ, ವೇದಾಂತ, ಸಾಂಖ್ಯ, ಯೋಗ, ವೇದ ಎಂಬ ಆರು ದರ್ಶನಗಳು ಪ್ರಚಾರದಲ್ಲಿವೆ. ಅದೇರೀತಿ "ಶೈವಂ ಚ ವೈಷ್ಣವಂ ಶಾಕ್ತಂ ಸೌರಂ ವೈನಾಯಕಂ ತಥಾ । ಸ್ಕಾಂದಂ ಚ ಭಕ್ತಿಮಾರ್ಗಸ್ಯ ದರ್ಶನಾನಿ ಷಡೇವ ಹಿ" ಎಂಬ ಉಕ್ತಿಯು, ಭಕ್ತಿಮಾರ್ಗಪ್ರಚೋದಕಗಳಾದ, ಶೈವ, ವೈಷ್ಣವ, ಶಾಕ್ತ, ಸೌರ, ಗಾಣಾಪತ್ಯ, ಸ್ಕಾಂದಗಳೆಂಬ ಷಣ್ಮತಗಳು ಪೂಜ್ಯದೇವತಾವಿಭಾಗದಿಂದ ವಿಭಕ್ತಗಳಾಗಿವೆ. ಯಾವ ದರ್ಶನವನ್ನಾಗಲಿ, ಯಾವ ಮತವನ್ನಾಗಲಿ, ಒಂದಕ್ಕಿಂತ ಮತ್ತೊಂದು ಹೆಚ್ಚು, ಅಥವಾ ಕಮ್ಮಿ, ಇದು ಪ್ರಾಚೀನ, ಇದು ಅರ್ವಾಚೀನ ಎಂಬ ಭಾವದಿಂದ

ವಿಚಾರಮಾಡಿ ಚರ್ಚಿಸುವುದು, ವಿವೇಕಿಗಳಿಗೆ ರುಚಿಸುವುದಿಲ್ಲ. ಅದು ಧರ್ಮವೂ ಅಲ್ಲ. ಎಲ್ಲವೂ ಮೋಕ್ಷಸಾಧಕಗಳೇ, ರೀತಿನೀತಿಗಳಲ್ಲಿ ಅಲ್ಪಸ್ವಲ್ಪ ವ್ಯತ್ಯಾಸವಿದ್ದರೂ, ನಂಬಿದವರನ್ನು ಎಲ್ಲವೂ ಒಂದೇ ಕಡೆಗೆ ಎಳೆದೊಯ್ಯುವುವೆಂಬುದನ್ನು ನಾವು ಮರೆಯಬಾರದು. ಶೈವಮತವನ್ನೂ ಶೈವಧರ್ಮವನ್ನೂ ವಿಸ್ತಾರವಾಗಿ ಪ್ರತಿಪಾದಿಸಿ, ಆದರಲ್ಲಿ ಮಾನವರನ್ನು ಪ್ರೇರಿಸಿ, ತನ್ಮೂಲಕ ಜನತೆಗೆ ಸಹಾಯಮಾಡಲಿರುವ ಈ ಶಿವರಹಸ್ಯ ಗ್ರಂಥವು ಆಸ್ತಿಕಮಹಾಶಯರಿಗೆ ಅತ್ಯಾದರಣೀಯವಾದುದೇ ಸರಿ.

ಶಿವರಹಸ್ಯಗ್ರಂಥದ ಈ ಎಂಟನೆಯ ಭಾಗವು "ಸ್ತ್ರೀಪುರುಷರಿಬ್ಬರೂ ಅಯೋನಿಜರಾಗಿ ಜನಿಸಿ, ಕೊನೆಗೆ ಅವರಿಬ್ಬರೇ ಪರಸ್ಪರವಾಗಿ ದಂಪತಿಗಳಾದರು" ಎಂಬ ಕಥೆಯಿಂದ ಆರಂಭವಾಗುವುದು. ಮುಂದಿನ ಹತ್ತು ಅಧ್ಯಾಯಗಳಲ್ಲಿಯೂ, ಶಿವಪೂಜಾಮಹಿಮೆ, ಶಿವಸ್ತುತಿಕ್ರಮ, ಶಿವಧರ್ಮ, ಶೈವಕರ್ತವ್ಯ ಈ ವಿಷಯಗಳೇ ಹೆಜ್ಜೆಹೆಜ್ಜೆಗೂ ವರ್ಣಿತವಾಗುತ್ತಾ ಮುಂದುವರಿಯುವುವು. ಬಿಲ್ವಪತ್ರೆಗೆ ದೊರೆತಿರುವ ಪ್ರಾಶಸ್ತ್ಯ, ಶನಿಪ್ರದೋಷ ದಿನದ ಶಿವಪೂಜಾಫಲ, ಇವು ಇಲ್ಲಿರುವ ಅಪೂರ್ವ ವಿಷಯಗಳು. ಎಂದಿನಂತೆ ವೃತ್ತವೈಚಿತ್ರ್ಯ, ಮನಮೋಹಕವಾದ ಕವಿತಾಶೈಲಿ, ವಿಷಯವಿವರಣೆಯ ಪರಾಕಾಷ್ಠತೆ, ಇವನ್ನು ಈ ಹತ್ತು ಅಧ್ಯಾಯಗಳಲ್ಲಿಯೂ ಹೃದಯಂಗಮವಾಗಿರುವಂತೆ ಕಾಣಬಹುದು.

ಧಾರ್ಮಿಕಗ್ರಂಥಗಳ, ಧಾರ್ಮಿಕಮತಗಳ ಹಾಗೂ ಧಾರ್ಮಿಕವಾದ ಸಕಲ ಕಾರ್ಯಜಾಲಗಳಿಗೂ ಮಾರ್ಗದರ್ಶಕರಾಗಿ ನಿಂತು, ಸಕಲ ಜನಸಮುದಾಯಕ್ಕೂ ಸಾರಸ್ವತಸಂಪತ್ತನ್ನು ಈ ಮೂಲಕ ಹರಡುತ್ತಿರುವ ನಮ್ಮ ಶ್ರೀಮನ್ಮಹಾರಾಜರವರಾದ **ಶ್ರೀ ಜಯಚಾಮರಾಜೇಂದ್ರ ಒಡೆಯರ್ ಬಹದ್ದೂರ್, ಜಿ. ಸಿ. ಬಿ., ಜಿ. ಸಿ. ಎಸ್. ಐ.,** ಮಹಾಪ್ರಭುಗಳವರಿಗೂ, ಅವರ ಕುಟುಂಬವರ್ಗಕ್ಕೂ ಈ ಗ್ರಂಥಾಭಿಮಾನಿಯಾದ ಸರ್ವೇಶ್ವರನು ಸಕಲ ಸನ್ಮಂಗಳಗಳನ್ನೂ ಅನುಗ್ರಹಿಸಲೆಂದು ಸರ್ವದಾ ನಾನು ಭಗವಂತನಲ್ಲಿ ಮೊರೆಯಿಡುವೆನು.

ಸರ್ವಜಿನ್ನಾಮ ಸಂವತ್ಸರದ
ಕಾರ್ತಿಕ ಶುದ್ಧ ಪ್ರತಿಪತ್
ಶುಕ್ರವಾರ
14—11—1947.

ಇತಿ ಸಜ್ಜನವಿಧೇಯ,
ಹೊನ್ನೇನಹಳ್ಳಿ ಗಂಗಾಧರಶಾಸ್ತ್ರೀ,
ಆಸ್ಥಾನವಿದ್ವಾನ್, ಮೈಸೂರು.

ಶ್ರೀಶಿವರಹಸ್ಯದ ಹರನಾಮಕವಾದ ತೃತೀಯಾಂಶ ಉತ್ತರಾರ್ಧದ ವಿಷಯಾನುಕ್ರಮಣಿಕಾ

(ಹದಿನೇಳನೆಯ ಅಧ್ಯಾಯದಿಂದ ಇಪ್ಪತ್ತೇಳನೆಯ ಅಧ್ಯಾಯ ಪೂರ್ತಿಯಾಗಿ)

ಇಪ್ಪತ್ತೊಂದನೆಯ ಅಧ್ಯಾಯ

ಇಪ್ಪತ್ತೆರಡನೆಯ ಅಧ್ಯಾಯ

ಇಪ್ಪತ್ತಮೂರನೆಯ ಅಧ್ಯಾಯ

ಇಪ್ಪತ್ತುನಾಲ್ಕನೆಯ ಅಧ್ಯಾಯ

ಇಪ್ಪತ್ತೈದನೆಯ ಅಧ್ಯಾಯ

ಇಪ್ಪತ್ತಾರನೆಯ ಅಧ್ಯಾಯ

ಇಪ್ಪತ್ತೇಳನೆಯ ಅಧ್ಯಾಯ

॥ ಶ್ರೀಃ ॥

ಅಥ ಶ್ರೀಶಿವರಹಸ್ಯೇ

ತೃತೀಯಾಂಶೇ

ಉತ್ತರಾರ್ಧೇ

ಸಪ್ತದಶೋಽಧ್ಯಾಯಃ

॥ ಯಾಜ್ಞವಲ್ಕ್ಯ ಉವಾಚ ॥

ಇತಿ ತದ್ವಚನಂ ಶ್ರುತ್ವಾ ವಿಧಿರ್ವ್ಯಾಕುಲಮಾನಸಃ ।
ರಾಜಾಪಿ ರಾಜ್ಞೀ ಕನ್ಯಾಪಿ ವ್ಯಾಕುಲಾಭಿಮತಾದಿತಿ ॥೧॥

ಅಹೋ ಕಲ್ಯಾಣಸಮಯೋ ನಾದ್ಯಾಪ್ಯಸ್ಯಾಪ್ಯುಪಾಗತಃ ।
ಕನ್ಯಾಯಾಶ್ಚ ವಿಶೇಷೇಣ ಕಿಂ ಕರ್ತವ್ಯಮತಃ ಪರಂ ॥೨॥

ಶ್ರೀಶಿವರಹಸ್ಯ ತೃತೀಯಾಂಶದ ಉತ್ತರಾರ್ಧದಲ್ಲಿ ಹದಿನೇಳನೆಯ ಅಧ್ಯಾಯು

ಬಳಿಕ ಯಾಜ್ಞವಲ್ಕ್ಯಋಷಿಯು ಜನಕರಾಜನಿಗೆ ಹೀಗೆಂದು ಹೇಳಿದನು– "ಅಯೋನಿಜಬಾಲಕನ ಚಿಂತಾಜನಕವಾದ ಅಭಿಪ್ರಾಯವನ್ನು ಸೂಚಿಸುವ ಆ ಮಾತನ್ನು ಕೇಳಿ ಪಿತಾಮಹನಾದ ಬ್ರಹ್ಮನು ಚಿಂತಾಕ್ರಾಂತನಾದನು. ಹಾಗೆಯೇ ರಾಜನೂ ರಾಣಿಯೂ ಮತ್ತು ರಾಜಪುತ್ರಿಯೂ ಇವನ ಸ್ಥಿರಪ್ರತಿಜ್ಞೆಗೆ ಅಪ್ರತಿಭರಾದರು. ॥೧॥

ಆಗ ಬ್ರಹ್ಮನು ಹೀಗೆ ಯೋಚಿಸಿದನು — ಅಯ್ಯೋ ! ಈ ಬಾಲಕನಿಗೆ ವಿವಾಹವಾಗುವ ಕಾಲವು ಇನ್ನೂ ಸಮೀಪಿಸಿರುವುದಿಲ್ಲ. ಮುಖ್ಯವಾಗಿ ಈ ಬಾಲಿಕೆಗೂ ಮಂಗಳಕರವಾದ ಕಾಲವು ಸೇರಿಲ್ಲವೆಂದು ತೋರುವುದು. ಮುಂದೇನು ಮಾಡುವುದು ? ॥೨॥

ಅತ್ಯುದಾರೋಽಪಿ ಧೀರೋಽಪಿ ಹಾರೋ ವೀರೋಽಪಿ ಸುಂದರಃ ।
ಪಂಚರೇಘಾನ್ವಿತಸ್ತಾವದ್ಧಾರೋಽಯುಮತಿದುರ್ಲಭಃ ॥೩॥

ಸಾ ತಾವದ್ಯುವತೀ ತಾವನ್ಮದನಜ್ವರಪೀಡಿತಾ ।
ಬದ್ಧಾ ಕಮಲನಾಳಾನಾಂ ತಂತುಭಿಶ್ಶೀತಲೈಃ ಪರಂ ॥೪॥

ಪಶ್ಯಂತಿ ಚಿತ್ರರೂಪಾಣಿ ಪುರುಷಾಣಾಂ ಪುನಃ ಪುನಃ ।
ತನ್ನ ಪಶ್ಯತಿ ತಚ್ಚಿತ್ರೇ ತತ್ತುಲ್ಯೋಽಪ್ಯಧಿಕಸ್ತು ನ ॥೫॥

ಮನಸಾ ಕೇವಲಂ ಧ್ಯಾತ್ವಾ ತಂ ಪಂಚಶರಖಂಡಿತಾ ।
ಖಂಡಿತೇವಾತಿವಿಮಲಾ ಸಾ ಬಾಲಾ ಕಮಲಾನನಾ ॥೬॥

ಈ ಬಾಲಕನಾದರೋ, ಅತ್ಯಂತ ಉದಾರನೂ, ಧೀರನೂ, ಶಿವಭಕ್ತಾಗ್ರೇಸರನೂ, ವೀರನೂ, ಸುಂದರನೂ ಆಗಿರುವನು. ಹೀಗೆ ಐದು ರೇಫ (ರಕಾರ) ಗಳುಳ್ಳ ಇಂತಹ ಸುಲಕ್ಷಣಗಳಿಂದ ಶೋಭಿಸುವ ವರನು ಮತ್ತೆಲ್ಲಿಯೂ ದೊರಕಲಾರನು. ॥೩॥

ತರುಣಿಯಾದ ಆ ರಾಜಪುತ್ರಿಯಾದರೋ, ಕಾಮಜ್ವರದಿಂದ ಪೀಡಿತಳಾಗಿರುವಳು. ಕಾಮವಿಕಾರದಿಂದ ಸಂತಪ್ತಳಾದ ಅವಳನ್ನು ಸಖಿಯರು, ತಣ್ಣಗಿರುವ ಕಮಲನಾಳಗಳ ತಂತುಗಳಿಂದ ಬಂಧಿಸಿ ಉಪಚರಿಸುತ್ತಿರುವರು. ॥೪॥

ಕಾಮಪೀಡಿತಳಾದ ಅವಳು ಪುರುಷರ ಚಿತ್ರಗಳನ್ನು ಬಾರಿಬಾರಿಗೂ ನೋಡುವಳು. ಆದರೆ, ಆ ಚಿತ್ರಗಳಲ್ಲಿ ಈ ಬಾಲಕನ ಚಿತ್ರವು ಮಾತ್ರ ಅವಳಿಗೆ ಕಾಣಿಸುವುದಿಲ್ಲ. ಅವನಂತೆ ಸುಂದರನಾದ ಇನ್ನಾವ ಪುರುಷನೂ ಆ ಚಿತ್ರಗಳಲ್ಲಿ ಆಕೆಗೆ ಕಂಡುಬರುವುದಿಲ್ಲ. ॥೫॥

ಸುಂದರನಾದ ಈ ಬಾಲಕನು ಆ ಚಿತ್ರಗಳ ನಡುವೆ ಕಾಣಿಸಿಕೊಳ್ಳದಿರಲು, ಪದ್ಮಮುಖಿಯಾದ ಇವಳು ಕಾಮಪೀಡಿತಳಾಗಿ, ಪತಿವಿರಹದಿಂದ ಶೋಕಿಸುತ್ತಿರುವ ಲಲನೆಯೋಪಾದಿಯಲ್ಲಿ ಇವನನ್ನೇ ಧಾನಮಾಡುತ್ತಾ ಕಾಲವನ್ನು ಕಳೆಯುತ್ತಿರುವಳು. ॥೬॥

ನಾವಾಪ ನಿದ್ರಾಂ ಮುದ್ರಾಂ ಚ ಪಶ್ಯಂತೀ ಸಾ ಪುನಃ ಪುನಃ ।
ಇತಸ್ತತೋಽಪಿ ದಿಙ್ಮಾತ್ರಮನ್ಯಚ್ಛೂನ್ಯಂ ವಿಪಶ್ಯತಿ ॥೭॥

ಸಿನೀವಾಲೀ ವಿಧುಕಲಾ ಕೋಮಲಾ ವಿಮಲಾ ಕಿಲ ।
ಸಾ ಬಾಲಾ ಕಮಲೈವಾಲೀ ಕಮಲೈರಿವ ಲಾಲಿತಾ ॥೮॥

ನ ಕ್ಷೀರೇಚ್ಛಾ ನ ನೀರೇಚ್ಛಾ ನಾಹಾರೇಚ್ಛೇತರಾಮಪಿ ।
ಹಾರೇಚ್ಛಾ ನ ತುಷಾರೇಚ್ಛಾ ನ ನೀಹಾರಕರಸ್ಪೃಹಾ ॥೯॥

ನೀಹಾರಕರ ದೂರತಃ ಕರತಲಾಭಿಘಾತೈರಲಂ
ನ ತೇ ತವ ಕರಃ ಪರಂ ಶರಪರಂಪರಾ ಯಾಮಿನೀಂ ।
ಯಮೋಽನುಸರತೀತ್ಯತಃ ಸರತಿ ಸಾ ಶರೀರಂ ಪರಂ
ಹರಿಷ್ಯತಿ ಯಮಸ್ಯ ಸಾ ಹರದಯಾವಿಹೀನೇ ಮನಃ ॥೧೦॥

ಬಾರಿಬಾರಿಗೂ ಅತ್ತ ಇತ್ತ ನೋಡುತ್ತಾ ರಾತ್ರಿಯಲ್ಲಿ ನಿದ್ದೆಮಾಡಲಿಲ್ಲ. ಅವಳು ದಿಙ್ಮಂಡಲವನ್ನು ನೋಡುತ್ತಾ, ಪ್ರಪಂಚವೇ ಸರ್ವಶೂನ್ಯವಾಗಿರುವುದೆಂದು ಭಾವಿಸುತ್ತಿರುವಳು. ||೭||

ಶುಕ್ಲಪಕ್ಷದ ಚಂದ್ರನಲ್ಲಿ ಅಭಿವೃದ್ಧಿಹೊಂದುತ್ತಾ ಸ್ಥಿರವಾಗಿರುವ ಸಿನೀವಾಲೀ ಎಂಬ ಚಂದ್ರಕಲೆಯಂತೆ ಕಾಣಿಸುತ್ತಿರುವ ಆ ತರುಣಿಯು, ಕೋಮಲವಾದ ಶರೀರ ವುಳ್ಳವಳಲ್ಲವೇ? ಮದನಜ್ವರದಿಂದ ಸಂತಪ್ತಳಾದ ಅವಳು ಕಮಲಪುಷ್ಪದಲ್ಲಿ ಅಡಗಿರುವ ದುಂಬಿಯಂತೆ ಪದ್ಮಪತ್ರಗಳಿಂದ ಆವರಿಸಲ್ಪಟ್ಟಿರುವಳು. ||೮||

ಕಾಮಪರವಶಳಾದ ಅವಳಿಗೆ ಹಾಲನ್ನಾಗಲಿ, ನೀರನ್ನಾಗಲಿ ಕುಡಿಯುವ ಇಚ್ಛೆಯೇ ಇಲ್ಲ. ಆಹಾರವನ್ನೇ ಸೇವಿಸಳು. ಅನವರತವೂ ಆ ಬಾಲಕನನ್ನೇ ಸ್ಮರಿಸುತ್ತಾ ಅವನನ್ನು ಸೇರಬಯಸುತ್ತಿರುವಳು. ಸಂತಾಪಗೊಂಡ ಅವಳು ತಣ್ಣ ಗಿರುವ ಹಿಮಬಿಂದುಗಳನ್ನಾಗಲಿ ಅಥವಾ ತಂಪಾಗಿರುವ ಚಂದ್ರನ ಪ್ರಕಾಶವನ್ನಾಗಲಿ ಇಚ್ಛಿಸಳು. ||೯||

ಎಲೈ ಚಂದ್ರನೇ, ನಿನ್ನ ತಂಪಾದ ಕಿರಣಗಳನ್ನು ಈ ಬಾಲಕನ ಮೇಲೆ ಪ್ರಯೋಗಿಸುವುದರಿಂದ ಯಾವ ಜಯವೂ ನಿನಗೆ ಲಭಿಸಲಾರದು. ರಾತ್ರಿಯಲ್ಲಿ ಬಾಣಪರಂಪರೆಯಂತೆ ತೋರಿಬರುವ ನಿನ್ನ ಕಿರಣಜಾಲವು ಎಲ್ಲರನ್ನೂ ಆಕರ್ಷಿಸು ವುದು. ಈಶ್ವರಾನುಗ್ರಹಪಾತ್ರರನ್ನು ಮಾತ್ರ ಏನೂ ಮಾಡಲಾರದು. ಯಮನಿಗೂ

ತಲ್ಪಾನ್ಯನಲ್ಪಾನಲರತ್ನಕಲ್ಪಾನ್ಯಮುಂಪಕುಂದಚ್ಛದಸುಂದರಾಣಿ ।
ಮಂದಾರಮಾಕಂಪಮರಂದಧಾರಾ ನೀಹಾರಧಾರಾಕರಕಾಕುಲಾನಿ ॥೧೧॥

ಸಾ ನಾಂಬರಂ ಪಶ್ಯತಿ ದೃಶ್ಯಮಾನಂ
ವಿಹಾಯ ತಾವದ್ವಸನಂ ನಿಶಾಯಾಂ ।
ಆಶಾವಿಕಾರಂ ಪರಿಹರ್ತುಮಿಚ್ಛಾಂ
ಚಕಾರ ಧೌರ್ಯಾಪಗಮೇನ ಧೀರಾ ॥೧೨॥

ಅಯಂ ನ ತಾವದ್ರಮಣಃ ಸ ತಾವತ್
ವರೋ ವರೇಣ್ಯೋ ರಮಣೋ ಮಮೇತಿ ।
ತಲ್ಪಾಂತರಾಣ್ಯಾಪ ವಿಕಲ್ಪಮಾನಾ
ಸ್ತಂಭೇಽಪಿ ಗಂಭೀರವರಸ್ವರೂಪೇ ॥೧೩॥

ಪಾಶದಂತಿರುವ ಈ ನಿನ್ನ ಕಿರಣವು ಈ ಬಾಲಕನ ವಿಷಯದಲ್ಲಿ ಏನನ್ನೂ ಮಾಡಲಾರದಲ್ಲಾ ! ॥೧೦॥

ಮನ್ಮಥಜ್ವರದಿಂದ ಸಂತಪ್ತಳಾದ ಆವಳಿಗೆ ಕೋಮಲವಾದ ಮಲ್ಲಿಗೆಯ ಹೂವುಗಳಿಂದ ರಚಿಸಲ್ಪಟ್ಟ ಹಾಸಿಗೆಯೂ ಸಹ ಧಗಧಗಿಸುವ ಬೆಂಕಿಯಂತೆ ಅಧಿಕವಾದ ತಾಪವನ್ನುಂಟುಮಾಡುವುದು. ಮಂಜಿನ ಗೆಡ್ಡೆ, ಮತ್ತು ಮಂದಾರ, ಮಾವು ಮುಂತಾದುವುಗಳ ಮಕರಂದಪ್ರವಾಹ, ಇವೆಲ್ಲವೂ ಅವಳ ತಾಪವನ್ನು ಹೋಗಲಾಡಿಸುವುದರಲ್ಲಿ ಅಸಮರ್ಥವಾದುವು. ॥೧೧॥

ಅವಳು ರಾತ್ರಿಯಲ್ಲಿ ದೇಹದಿಂದ ಜಾರಿಹೋಗಿರುವ ವಸ್ತ್ರವನ್ನೇ ಗಮನಿಸಳು. ಚಂದ್ರತಾರೆಗಳಿಂದ ಕೂಡಿರುವ ಅಂತರಿಕ್ಷವನ್ನು ಕಣ್ಣೆತ್ತಿಯೂ ನೋಡಳು. ದೇಹದಲ್ಲಿ ಧರಿಸಿರುವ ವಸ್ತ್ರದ ಭಾರವನ್ನು ಹೋಗಲಾಡಿಸುವ ನೆವದಿಂದ ತನ್ನ ಆಸೆಯನ್ನು ವ್ಯಕ್ತಪಡಿಸುವಳು. ॥೧೨॥

ಕಾಮವಿಕಾರದಿಂದ ಮೋಹಗೊಂಡ ಅವಳು ತನ್ನ ಗೃಹದಲ್ಲಿರುವ ಕಂಬಗಳನ್ನು ನೋಡಿ, ಇವನು ನನ್ನ ಕಾಂತನಲ್ಲ. ನನ್ನ ಆ ರಮಣನಾದರೋ, ಅತ್ಯಂತ ಸುಂದರನೂ, ಶ್ರೇಷ್ಠನೂ ಆಗಿರುವನು, ಎಂಬಿವೇ ಮುಂತಾದ ವಿಕಲ್ಪಗಳನ್ನು ಮನಸ್ಸಿನಲ್ಲಿ ತಂದುಕೊಂಡು ತಾನು ಮಲಗಿರುವ ಹಾಸಿಗೆಯನ್ನು ಬಿಟ್ಟು, ಬೇರೊಂದು ಹಾಸಿಗೆಯ ಬಳಿಗೆ ಹೋಗುವಳು. ॥೧೩॥

ತಾಂತಾ ನಿತಾಂತಮವನೀತಲಮಾಪ ಬಾಲಾ
ಲೀಲಾವಿಲಾಸಕಮಲಾ ಕಮಲಾಕುಲಾ ಸಾ ।
ಸಾ ಭೂತಿಭೂಷಿತತನುಃ ಶಮನಾವಕಾಶ
ಮಾಶಂಸಮಾನಮನಿಶಂ ಚ ತಿರಶ್ಚಕಾರ ॥೧೪॥

ರೇವಾತೀರಂ ಸಾಪಿ ನೀತಾ ವಿನೀತಾ
ತತ್ತೀರೇ ಸಾ ಶೀತವಾತೇನ ವೀತಾ ।
ಲಿಂಗೇ ತುಂಗೇ ಸಂಗತಾ ಸಾಪಿ ದೃಷ್ಟ್ವಾ
ರಾಜ್ಞಾ ತ್ವಷ್ಟ್ವಾ ತ್ವಾಮುವಾಚಾಹ ಬಾಲಂ ॥೧೫॥

ರೇವಾತೀರಂ ಪರಂ ಹಾರಂ ಶರೀರಂ ತುಂಗಲಿಂಗಕಂ ।
ವಿಭೂತಿಭಾಸ್ವರಂ ಪಶ್ಯ ತತ್ರಾಯಾಸ್ಯತಿ ಶಂಕರಃ ॥೧೬॥

ಮನ್ಮಥನ ತಾಪದಿಂದ ಅತ್ಯಂತವಾಗಿ ಬಳಲಿದ ಅವಳು, ವಿನೋದಾರ್ಥವಾದ ಕಮಲವನ್ನು ಕೈಯಲ್ಲಿ ಧರಿಸಿ, ಭೂಮಿಯ ಮೇಲೆ ಮಲಗುವಳು. ದೇಹದ ಆದ್ಯಂತವೂ ವಿಭೂತಿಯನ್ನು ಬಳಿದುಕೊಳ್ಳುವಳು. ಅವಳ ಅಸಹ್ಯಕರವಾದ ಆ ತಾಪವನ್ನು ಹೋಗಲಾಡಿಸಲು ಯಾವ ಯಾವ ಉಪಾಯಗಳನ್ನು ಯೋಚಿಸಿದರೂ ಅವುಗಳೆಲ್ಲವನ್ನೂ ತಿರಸ್ಕರಿಸುವಳು. ॥೧೪॥

ಆ ಸಂತಾಪವನ್ನು ಹೋಗಲಾಡಿಸುವ ಉದ್ದೇಶದಿಂದ ರಾಜನು ತನ್ನ ಪುತ್ರಿಯನ್ನು ರೇವಾನದೀ ದಡಕ್ಕೆ ಕರೆತಂದಿರುವನು. ಇಲ್ಲಿ ನದಿಯಮೇಲೆ ಮೆಲ್ಲ ಮೆಲ್ಲನೆ ಬೀಸಿಬರುವ ಮಂದಮಾರುತದ ಶೀತಲವಾದ ಸ್ಪರ್ಶವೂ ಆಕೆಗೆ ಲಭಿಸಿತು. ಅದರಿಂದಲೂ ಇನ್ನೂ ಅಧಿಕವಾದ ಅವಳ ಸಂತಾಪವು ಹೋಗದಿರಲು, ಉನ್ನತವಾದ ಈ ಶಿವಲಿಂಗದ ಸಮೀಪವನ್ನು ಪಡೆದು ಅದರ ಪೂಜೆಯಲ್ಲಿ ಆಸಕ್ತಳಾಗಿರುವಳು. ಅದನ್ನು ರಾಜನು ನೋಡಿ ಮರುಗುವನು, ಎಂದು ಬಾಲಕನನ್ನು ಕುರಿತು ಬ್ರಹ್ಮನು ಮತ್ತೆ ಹೀಗೆಂದನು. ॥೧೫॥

ಎಲೈ ಬಾಲಕನೇ! ರೇವಾನದಿಯ ಈ ದಡವನ್ನು ನೋಡು. ಇಲ್ಲಿ ಜಗನ್ನಾಥನಾದ ಪರಮೇಶ್ವರನು ಲಿಂಗದ ಆಕಾರವನ್ನು ಧರಿಸಿ ನೆಲಸಿರುವನು. ಆ ಲಿಂಗವು ಭಸ್ಮಭೂಷಿತವಾಗಿರುವುದಲ್ಲವೇ! ಅಗೋ ಅತ್ತ ನೋಡು! ಆ ಲಿಂಗದ ಸನ್ನಿಧಿಯಲ್ಲಿ ಶಂಕರನು ವಿರಾಜಿಸುತ್ತಿರುವನು. ॥೧೬॥

ತದಂಗಸ್ಪರ್ಶನೇನಾಪಿ ಪವಿತ್ರಂ ಗಾತ್ರಮಿತ್ಯತಃ ।
ಸ ಸೇವನೀಯೋ ಯತ್ನೇನ ಸ್ಪೃಷ್ಟಂ ಚೇದಿಷ್ಟದಂ ಚ ತತ್ ॥೧೭॥

ಇತಿ ತದ್ವಚನಂ ಶ್ರುತ್ವಾ ಸ ಗತಸ್ತತ್ರ ಬಾಲಕಃ ।
ವಿಧಿನಾ ತೇನ ರಾಜ್ಞಾಪಿ ವಿಧಿನಾ ಪ್ರೇರಿತಸ್ತದಾ ॥೧೮॥

ತದ್ಭಾಲಂ ಸಿತಭೂತಿಭೂಷಿತಮಿದಂ ಬಾಲೋ ವಿಲೋಕ್ಯಾದರಾತ್
ದೂರೇಣಾಪಿ ಸ ಮಾರಭಲ್ಲನಿಹತಃ ಸಾ ಬಾಲಿಕಾ ಚೇತನಾಂ ।
ಪ್ರಾಪ್ತಾ ಬಾಲವಿಲೋಕನೇನ ವಿಮಲಾ ಪುಷ್ಟಾತಿಹೃಷ್ಟಾ ಚ ಸಾ
ಸಾಚೀಕೃತ್ಯ ಮುಖಂ ಮುಖೇನ ಸುಸಖೀವೃಂದೈರಮಂದೈರ್ವೃತಾ ॥೧೯॥

ತತಃ ಪರಂ ಸ ಬಾಲೋಽಪಿ ಪ್ರಾಹ ತಂ ಚತುರಾನನಂ
ಇಯಂ ಶಿವರತಾ ಬಾಲಾ ಕಮಲಾಮಲಲೋಚನಾ ॥೨೦॥

ಆವನ ಲಿಂಗಗಳ ಸ್ಪರ್ಶವುಂಟಾದ ಮಾತ್ರದಿಂದಲೇ ನಮ್ಮ ಈ ಶರೀರವು ಪವಿತ್ರವಾಗುವುದು. ಶಿವನನ್ನು ಪ್ರಯತ್ನ ಪುರಸ್ಸರವಾಗಿ ಸೇವಿಸಬೇಕು. ಶಿವಲಿಂಗದ ಸ್ಪರ್ಶಮಾತ್ರದಿಂದಲೇ ಸಕಲ ಅಭೀಷ್ಟಗಳೂ ಸಿದ್ಧಿಸುವುವು. ಹಾಗೆ ಶಿವಲಿಂಗ ಸ್ಪರ್ಶಮಾಡಿ, ಪವಿತ್ರವೆನಿಸಿದ ಈ ರೇವಾತೀರದಲ್ಲಿ ನೆಲಸುವುದು ಉಚಿತವಲ್ಲವೆ! ॥೧೭॥

ಹೀಗೆಂದು ಹೇಳಿದ ಬ್ರಹ್ಮನ ಆ ಮಾತನ್ನು ಕೇಳಿ, ರಾಜನಿಂದಲೂ ಬ್ರಹ್ಮನಿಂದಲೂ ಪುನಃ ಪುನಃ ಪ್ರೇರಿತನಾಗಿ ಶಿವಲಿಂಗವಿದ್ದೆಡೆಗೆ ಹೋದನು. ॥೧೮॥

ಅಲ್ಲಿ ಶಿವಲಿಂಗವನ್ನು ನೋಡಲು ಕುತೂಹಲದಿಂದ ರೇವಾತೀರದ ಬಳಿಗೆ ಹೋದ ಆ ಬಾಲಕನು ಲಿಂಗದ ಸಮೀಪದಲ್ಲಿಯೇ ಹಣೆಯಲ್ಲಿ ವಿಭೂತಿಯನ್ನು ಧರಿಸಿ ನಿಂತಿರುವ ಆ ಬಾಲಿಕೆಯನ್ನು ನೋಡಿ ಕಾಮಪರವಶನಾದನು. ಕಾಮ ವಿಕಾರದಿಂದ ಮೋಹಗೊಂಡ ಆ ಬಾಲಿಕೆಯೂ ಸಹ ತನ್ನ ಪ್ರಿಯತಮನ ದರ್ಶನಮಾತ್ರದಿಂದಲೇ ಎಚ್ಚೆತ್ತವಳಾಗಿ ಆನಂದಾಧಿಕ್ಯದಿಂದ ರೋಮಾಂಚಿತಳಾದಳು. ಬಳಿಕ, ಬಾಲಕನ ಮೇಲೆ ವಕ್ರವಾದ ತನ್ನ ದೃಷ್ಟಿಯನ್ನೊಮ್ಮೆ ಬೀರಿ ನಾಚಿಕೆಯಿಂದ ಮುಖವನ್ನು ತಿರುಗಿಸಿ ಸಖಿಯರ ನಡುವೆ ನಿಂತಳು. ॥೧೯॥

ತರುವಾಯ ಆ ಬಾಲಕನು ಬ್ರಹ್ಮನನ್ನು ಕುರಿತು ಇಂತೆಂದನು. "ಪಿತಾಮಹನೇ! ವಿಶಾಲವಾದ ನೇತ್ರಗಳಿಂದ ಶೋಭಿಸುತ್ತಿರುವ ಶಿವಭಕ್ತೆಯಾದ ಈ

ಈದೃಶೀ ದುರ್ಲಭಾ ಲೋಕೇ ಭಾಲಲೋಚನಪೂಜನೇ ।
ಸಾಧನಂ ಸಾಧನಂ ನೂನಂ ಧನಾನಾಮಪಿ ಸಾ ಧನಂ ॥೨೧॥

ಇತಿ ತದ್ವಚನಂ ಶ್ರುತ್ವಾ ವಿಧಿಃ ಸಂತುಷ್ಟಮಾನಸಃ ।
ರಾಜಾಪಿ ಬಾಲಿಕಾ ಸಾಪಿ ಹರ್ಷವರ್ಷಪರಿಪ್ಲುತಾ ॥೨೨॥

ತತಃ ಸೋಮೇಶಕುಂಡೇ ಸಾ ಬಾಲಿಕಾ ಫಾಲಲೋಚನಂ ।
ಸ್ಮೃತ್ವಾ ಸ್ನಾತ್ವಾ ವಿಭೂತ್ಯಾಪಿ ಭೂಷಿತಾ ಭೂತಿಭೂಷಣಾಂ ॥೨೩॥

ತತಃ ಸೋಮೇಶಲಿಂಗೇ ಸಾ ಹರಂ ಗೌರೀಮನೋಹರಂ ।
ಪೂಜಯಾಮಾಸ ವಿವಿಧೈರುಪಚಾರೈರನೇಕಧಾ ॥೨೪॥

ತತೋ ದುಕೂಲವಸನಾ ತ್ರಿಪುಂಡ್ರನಿಟಿಲಾಲಕಾ ।
ದಿವ್ಯಾಭರಣಸಂಪನ್ನಾ ನನರ್ತಾವರ್ತಚೇಷ್ಟಯಾ ॥೨೫॥

ಬಾಲಿಕೆ ಅತಿ ದುರ್ಲಭಳು. ಬೇರೆ ಎಲ್ಲಿಯೂ ದೊರಕಲಾರಳು. ಇವಳು ತ್ರಿನೇತ್ರನಾದ ಶಿವನ ಆರಾಧನೆಯಲ್ಲಿ ಸಹಾಯಕಳಾಗುವಳು. ಇವಳೇ ನನ್ನ ಸರ್ವಸ್ವ. ನಿಜವಾಗಿಯೂ ಇವಳು ಸಕಲ ಸಂಪತ್ತುಗಳಿಗೂ ನಿಧಿಯಂತಿರುವಳು" ||೨೦-೨೧||

ಬಾಲಕನ ಈ ಮಾತನ್ನು ಕೇಳಿ, ಬ್ರಹ್ಮನೂ ರಾಜನೂ ಸಂತುಷ್ಟರಾದರು. ರಾಜಕುಮಾರಿಯಾದರೋ ಹರ್ಷಾಧಿಕ್ಯದಿಂದ ಮೈಮೇಲಿನ ಪರಿವೆಯೇ ಇಲ್ಲದಂತಾದಳು. ||೨೨||

ಅನಂತರ ಆ ಬಾಲಿಕೆಯು ಸೋಮೇಶನಾಮಕವಾದ ನೀರಿನ ಕುಂಡದಲ್ಲಿ ಸ್ನಾನಮಾಡಿ ವಿಭೂತಿಯಿಂದ ಅಲಂಕೃತಳಾದಳು. ||೨೩||

ಬಳಿಕ ಸೋಮೇಶಕುಂಡದ ಸಮೀಪದಲ್ಲಿರುವ ಲಿಂಗದಲ್ಲಿ ಉಮಾರಮಣನಾದ ಶಿವನನ್ನು, ಧೂಪ, ದೀಪ, ನೈವೇದ್ಯಗಳೇ ಮೊದಲಾದ ನಾನಾ ಬಗೆಯಾದ ಉಪಚಾರಗಳಿಂದ ಪೂಜಿಸಿದಳು. ||೨೪||

ತರುವಾಯ ಪಟ್ಟವಸ್ತ್ರವನ್ನುಟ್ಟು, ಹಣೆಯಲ್ಲಿ ಭಸ್ಮ ತ್ರಿಪುಂಡ್ರವನ್ನು ಧರಿಸಿ, ಅಮೂಲ್ಯವಾದ ಆಭರಣಗಳಿಂದ ಅಲಂಕೃತಳಾಗಿ, ಶಿವನ ಸನ್ನಿಧಿಯಲ್ಲಿ ನಾಟ್ಯವನ್ನು ಅಭಿನಯಿಸಿದಳು. ||೨೫||

ಸೋಽಪಿ ಬಾಲಃ ಪ್ರಗೇ ಸ್ನಾತ್ವಾ ಭೂತಿಭೂಷಿತವಿಗ್ರಹಃ ।
ಸೋಮೇಶ್ವರಾಲಯಂ ಪ್ರಾಪ ಸರ್ವಸೌಭಾಗ್ಯಸಂಯುತಂ ॥೨೬॥

ತತಃ ಪೂಜೋಪಕರಣಂ ದಾಪಯಾಮಾಸ ಬಾಲಿಕಾ ।
ಸಂಜ್ಞಯಾ ಬಾಲಕಾಯಾಯಮರ್ಚಯಾಮಾಸ ತೇನ ತಂ ॥೨೭॥

ಉಪಚಾರೈರ್ಬಹುವಿಧೈರ್ದ್ರವ್ಯೈಃ ಪಂಚಾಮೃತಾದಿಭಿಃ ।
ಉತ್ಪಶ್ಯನ್ನೇವ ತಾಂ ಬಾಲಾಂ ಪೂಜಯಾಮಾಸ ಬಾಲಕಃ ॥೨೮॥

ಸ್ಮೇರಾನನಂ ಸ್ಮರಹರಾರ್ಚನತತ್ಪರಂ ಸಾ
ಬಾಲಾ ವಿಲೋಕ್ಯ ಮುಹುರಾದರತೋಽತಿಧೀರಾ ।
ಮಂದಸ್ಮಿತೇನ ಮದನಪ್ರಸವಾಯುಧೇನ
ವೀತೇವ ಸಾಪಿ ವಿರತಾ ವಿವಿಧಾರ್ಯನಾಟ್ಯೈಃ ॥೨೯॥

ಆ ಬಾಲಕನೂ ಸಹ, ಪ್ರದೋಷಕಾಲದಲ್ಲಿ ಸ್ನಾನಮಾಡಿ ವಿಭೂತಿಯನ್ನು ಧರಿಸಿ ಸಕಲ ಸೌಭಾಗ್ಯಗಳಿಂದ ಯುಕ್ತವಾದ ಶಿವಾಲಯವನ್ನು ಕುರಿತು ತೆರಳಿದನು. ||೨೬||

ಬಳಿಕ, ಕುಮಾರಿಯು ಸಖಿಯರನ್ನು ಸಂಜ್ಞೆಮಾಡಿ ಅವರ ಮೂಲಕ ಪೂಜಾಸಾಮಗ್ರಿಗಳನ್ನು ಬಾಲಕನಿಗೆ ಕೊಡಿಸಿದಳು. ಆ ಬಾಲಕನು ಅವುಗಳನ್ನು ತೆಗೆದುಕೊಂಡು ಶಿವನನ್ನು ಅರ್ಚಿಸಿದನು. ||೨೭||

ಅವನು ಕತ್ತನ್ನು ಮೇಲಕ್ಕೆತ್ತಿ ಎವೆಯಿಕ್ಕದೇ ಆ ಬಾಲಿಕೆಯನ್ನೇ ನೋಡುತ್ತಾ, ಪಂಚಾಮೃತವೇ ಮುಂತಾದ ಪೂಜಾದ್ರವ್ಯಗಳಿಂದಲೂ ಮತ್ತು ಧೂಪ ದೀಪ ನೈವೇದ್ಯಾದಿ ಉಪಚಾರಗಳಿಂದಲೂ ಲಿಂಗವನ್ನು ಪೂಜಿಸಿದನು. ||೨೮||

ಹಸನ್ಮುಖನಾಗಿ, ಶಿವಪೂಜೆಯಲ್ಲಿ ಆಸಕ್ತನಾದ ಅವನನ್ನು ಪ್ರೀತಿಯಿಂದ ಬಾರಿಬಾರಿಗೂ ನೋಡಿ, ಕಾಮವಿಕಾರದಿಂದುಂಟಾದ ಮಂದಹಾಸವನ್ನು ಬೀರುತ್ತಾ, ವಿವಿಧವಾದ ಭರತನಾಟ್ಯಗಳನ್ನು ಮುಗಿಸಿ, ವಿಶ್ರಾಂತಿಯನ್ನು ಪಡೆದಳು. ||೨೯||

ಸೀಮಂತಸಿಂದೂರವಿರಾಜಮಾನಾಂ
ತ್ರಿಪುಂಡ್ರರೇಖಾರುಚಿರಾನುಫಾಲಾಂ ।
ಬಾಲಾಂ ವಿಲೋಕ್ಯಾದರತಃ ಸ ಬಾಲಃ
ನಾವಾಪ ಧೈರ್ಯಂ ಮದನಾಶ್ರಿತೋಽಸೌ ॥೩೦॥

ಬಾಲಾ ಲೋಚನಗೋಚರಾ ಯದಿ ಮುಹುರ್ನ ಸ್ಯಾತ್ತದಾ ಧೀರತಾ
ಪುಂಸಾಂ ಸಾ ಯದಿ ದೈವತೋ ಭವತಿ ಚೇತ್ತಲ್ಲೋಚನಾಲೋಚನಂ ।
ನೂನಂ ವಂಚಿತ ಏವ ಚಂಚುರಮನಃ ಪಂಚಾಯುಧೇನ ಕ್ಷಣಂ
ತದ್ಧೈರ್ಯಂ ಯದಿ ತರ್ಹಿ ಶರ್ವನಿಭತಾ ಸ್ಯಾದೇವ ಸರ್ವಾತ್ಮನಾ ॥೩೧॥

ರುರುರಪಿ ತರುಮೂಲೇ ಸ್ವಾನುಕೂಲಾಬಲಾನಾಂ
ಕಲನಮಶನಹೀನೋ ಜೀರ್ಣಪರ್ಣಾಶನೋಽಹಿ ।
ಫಲಮಪಿ ಕುರುತೇಽತಃ ಕ್ವಾನುರಕ್ತೋ ವಿರಕ್ತೋ
ನ ಖಲು ಪುರುಷಭಾವೈಃ ಸ್ವಾನುಭಾವಾನುಭಾವೇ ॥೩೨॥

ಸೀಮಂತದ (ಬೈತಲೆಯ) ಅಗ್ರಭಾಗದಲ್ಲಿ ಕುಂಕುಮವನ್ನು ಧರಿಸಿ ಹಣೆಯಲ್ಲಿ ತ್ರಿಪುಂಡ್ರವನ್ನಿಟ್ಟು ಕಂಗೊಳಿಸುತ್ತಿರುವ ಅವಳನ್ನು ನೋಡಿ, ಆ ಬಾಲಕನು ಕಾಮಪರವಶನಾಗಿ ಮುಂದೆ ಒಂದು ಹೆಜ್ಜೆಯನ್ನೂ ಇಡಲಾರದೆ ದಿಗ್ಭ್ರಮೆಗೊಂಡವನಾದನು. ॥೩೦॥

ಯಾವ ತರುಣಿಯಾದರೂ ಅಕಸ್ಮಾತ್ತಾಗಿ, ದೃಷ್ಟಿಪಥಕ್ಕೆ ಗೋಚರಳಾದುವೇ ಆದರೆ ಅವಳನ್ನು ನೋಡುವ ಯುವಕನಿಗೆ ಕಾಮವಿಕಾರವನ್ನು ತಡೆಗಟ್ಟುವ ಧೈರ್ಯವು ಎಂದಿಗೂ ಉಂಟಾಗಲಾರದು. ಒಂದುವೇಳೆ ಅಂತಹ ಧೀರಸ್ವಭಾವವು ಒಬ್ಬನಲ್ಲಿ ಕಂಡುಬಂದುದೇ ಆದರೆ, ಆಗ ಮನ್ಮಥನು ಮೋಸಹೋದಂತೆಯೇ ಸರಿ. ಲೋಕದಲ್ಲಿ ಅಂತಹ ಧೈರ್ಯವನ್ನು ಪಡೆದಿರುವವನು ಸಾಕ್ಷಾನ್ಮಹೇಶ್ವರ ಸದೃಶನೇ ಆಗಿರುವನು. ॥೩೧॥

ಪುಷ್ಟಿಕರವಾದ ಆಹಾರವನ್ನು ತಿನ್ನದೆ ಒಣಗಿದ ತರಗೆಲೆಗಳನ್ನು ತಿಂದು ಜೀವಿಸುವ ಪ್ರಾಣಿಗಳಲ್ಲೊಂದಾದ ಕೃಷ್ಣಸಾರಂಗಮೃಗವೂ (ಜಿಂಕೆ, ಹರಿಣ) ಸಹ ತನ್ನ ಪ್ರಿಯತಮೆಯರಾದ ಹೆಣ್ಣುಹರಿಣಗಳೊಂದಿಗೆ ಬೆರತು ರತಿಸೌಖ್ಯವನ್ನು ಅನುಭವಿಸುವುದು. ಹೀಗಿರುವಾಗ ಪ್ರಬಲವಾದ ವೈರಾಗ್ಯಶಾಲಿಯಾಗಿದ್ದರೂ

ರೆ ಏ ೕಮಾಂಚಾಂಚಿತಕಾಂಚನಾಭತನುಭಿಃ ಸಂಭಾವಿತಾ ಭಾಮಿನೀ
ಭಾವೈರ್ಭಾವಜಕೇಲಿಲೋಲನಯನೈಃ ಕೈರ್ವಾ ಜನೈಃ ಸಜ್ಜನೈಃ ।
ಕಃ ಸಂಭಾವಿತಮರ್ಥಮಪ್ಯನುದಿನಂ ವ್ಯರ್ಥಂ ಕಥಂ ವಾ ವ್ಯಥಾಃ
ತ್ಯಕ್ತ್ವಾ ತಾಂ ಚ ಕದರ್ಥನಾಮಪಿ ಮುಧಾ ಯದ್ದುರ್ಜನಾನರ್ಜಿತಂ॥೩೩॥

ಪರಸ್ಪರವಿಲೋಕನಸ್ಮಿತವಿತಾನಸಂವೀತಯೋಃ
ವಿಲೋಕನವಿಲೋಭನೈರಪಿ ಮುಹುರ್ಮುಹುರ್ಧೀರತಾ ।
ಗತೇತಿ ಸ ಸಖೀಜನೋ ವಿರಲ ಏವ ಮಂದಂ ಮುದಾ
ಸ್ಮರಾವಸರಸೂಚಕಃ ಖಲು ಸ ಕೋಽಪಿ ಕಾಲಸ್ತಯೋಃ ॥೩೪॥

ಪುರುಷನು ಅದೃಷ್ಟವಶದಿಂದ, ಹಾವಭಾವಾದಿಗಳನ್ನು ತೋರ್ಪಡಿಸುವ ಅನುಕೂಲ ಳಾದ ಯುವತಿಯನ್ನು ಸಂದರ್ಶಿಸಿದರೆ ಅವಳಲ್ಲಿ ಅನುರಕ್ತನಾಗದಿರುವುದು ಸಾಧ್ಯವಾದೀತೆ ? ॥೩೨॥

ಲೋಕದಲ್ಲಿ ಜನರು ಎಂತಹ ಸತ್ಪುರುಷರಾಗಿದ್ದರೂ ಸಹ ಕಾಮಪರವಶ ರಾಗಿ ರೋಮಾಂಚದಿಂದ ಕೂಡಿ, ಚಿನ್ನದಂತೆ ಥಳಥಳನೆ ಮಿರುಗುವ ದೇಹಕಾಂತಿ ಯಿಂದ ಕಂಗೊಳಿಸುವ ಸ್ತ್ರೀಯರನ್ನು ನೋಡಿ ಅವರ ರೂಪಕ್ಕೆ ಮರುಳಾಗಿ, ಅವರಲ್ಲಿ ಅನುರಾಗವನ್ನು ತೋರ್ಪಡಿಸುವುದು ಸ್ವಾಭಾವಿಕವಾಗಿರುವುದು. ಮನುಷ್ಯನು ದಾರುಣವಾದ ವ್ಯಥೆಯನ್ನು ಅನುಭವಿಸುತ್ತಿದ್ದರೂ, ಆ ಕಾಲದಲ್ಲಿ ಅವನಿಗೆ ನಿರ್ದುಷ್ಟವೂ ದುರ್ಜನರಿಂದ ದೂರವಾದುದೂ (ಸುಗುಣಗಳಿಂದ ಕೂಡಿ ರುವುದೂ) ಅನಿರೀಕ್ಷಿತವೂ ಆದ ಒಂದಾನೊಂದು ವಸ್ತುವು ಲಭಿಸಿದರೆ ತನ್ನ ಆ ವ್ಯಥೆಯನ್ನು ತಡೆದು ಆ ವಸ್ತುವನ್ನು ಸ್ವೀಕರಿಸಲು ಯತ್ನಿಸುವನು. ॥೩೩॥

ಈ ರೀತಿಯಲ್ಲಿ ಅವರಿಬ್ಬರು ಬಹುಕಾಲದವರೆಗೆ ಒಬ್ಬರನ್ನೊಬ್ಬರು ನೋಡುತ್ತಾ ಮಂದಹಾಸವನ್ನು ವ್ಯಕ್ತಪಡಿಸುತ್ತಿದ್ದರು. ಮೆಲ್ಲ ಮೆಲ್ಲನೆ ಅವರಲ್ಲಿದ್ದ ಧೈರ್ಯವು ಮಾಯವಾಗಿ ಪರಸ್ಪರವಾಗಿ ಅನುರಕ್ತರಾದರು. ಇದನ್ನು ತಿಳಿದು ರಾಜ ಪುತ್ರಿಯ ಸಖೀ ಜನರು ಮೆಲ್ಲ ಮೆಲ್ಲನೆ ಆ ಪ್ರದೇಶವನ್ನು ಬಿಟ್ಟು ಬೇರೆಯ ಕಡೆಗೆ ಸಾಗಿದರು. ಆ ಕಾಲವು ಅವರಿಬ್ಬರಲ್ಲಿ ಕಾಮ ವಿಕಾರವನ್ನು ಸೂಚಿಸುವಂತಿತ್ತು. ॥೩೪॥

ಕಮಲಾಮಲಲೋಚನಾನುರಕ್ತಃ
ಸವಿರಕ್ತಸ್ತ್ವವಿರಕ್ತ ಏವ ಶಕ್ತಃ ।
ಅವಿರಕ್ತ ಇವಾಹ ಕಾಮಕಾಲ
ಮವಿಚೇಷ್ಟಾಭಿರಲಂಕೃತಾಂ ನತಾಂಗೀಂ ॥೩೫॥

॥ ಬಾಲಕ ಉವಾಚ ॥

ಕಾಸಿ ಮಧ್ಯಮವಯಸ್ಯಮಧ್ಯಮೇ
ಲೋಚನೇ ಶಫರಗರ್ವಮೋಚನೇ ।
ಫಾಲಮಪ್ಯಮಲಭಲ್ಲಸನ್ನಿಭಂ
ದುರ್ಲಭಂ ಭುವನಮಂಡಲೇ ಖಲು ॥೩೬॥

ಅಭಿನವಕಮಲೇನ ನಾಭಿಮೂಲಂ
ಕಿಮಪಿ ತವೇದಮಭೂತಪೂರ್ವಮೇವಂ ।
ತದುಪರಿ ಕಿಮಯಂ ಸ ರೋಮರಾಜಿಃ
ಮದನವಿನೋದವಿಶೇಷಕೇತುರೇವ ॥೩೭॥

ಬಾಲಕನು ಸುಂದರಿಯಾದ ಆ ಬಾಲಿಕೆಯಲ್ಲಿ ಅನುರಕ್ತನಾಗಿದ್ದರೂ ಸಹ ತಾನು ವಿರಕ್ತನಾದವನಂತೆಯೇ ನಟಿಸಿದನು. ಬಳಿಕ, ಚಿತ್ರದಲ್ಲಿದ್ದ ಗೊಂಬೆಯಂತೆ ಸ್ತಬ್ಧಳಾಗಿ ನಿಂತಿರುವ ಅವಳನ್ನು ಕುರಿತು ಅನುರಾಗಿಯಂತೆ ಇಂತೆಂದನು. ॥೩೫॥

"ಎಲೌ ತರುಣಿಯೇ! ನೀನು ಯಾರು! ನಿನ್ನ ಈ ನೇತ್ರಗಳು ಮತ್ಸ್ಯಗಳ ಗರ್ವವನ್ನೂ ಸಹ ತಿರಸ್ಕರಿಸುವಂತಿರುವುದಲ್ಲ! ಅಂದವಾದ ನಡುವು ಕಣ್ಣಿಗೆ ಕಾಣದಷ್ಟು ಸೂಕ್ಷ್ಮವಾಗಿದೆ. ನಿನ್ನ ಈ ಹಣೆಯು ಶುಭ್ರವಾದ ಭಲ್ಲೆಯಂತೆ (ಆಯುಧ ವಿಶೇಷ) ಋಜುವಾಗಿದ್ದು ಮಿರುಗುತ್ತಿರುವುದಲ್ಲ! ॥೩೬॥

ನಿನ್ನ ಈ ನಾಭಿಯು ಆಗತಾನೇ ವಿಕಸಿತವಾದ ಕಮಲದಿಂದ ನಿರ್ಮಿಸಲ್ಪಟ್ಟಿರುವುದೋ ಎಂಬಂತೆ ಕಂಗೊಳಿಸುತ್ತಿರುವುದು. ಇದೇನು ವಿಚಿತ್ರ! ಆ ನಾಭಿ ಕಮಲದ ಮೇಲೆ ಹಬ್ಬಿರುವ ರೋಮಗಳ ಪಂಕ್ತಿಯು ಮನ್ಮಥನ ವಿನೋದಾರ್ಥವಾದ ಲೀಲೆಯನ್ನು ಸೂಚಿಸುತ್ತಿರುವ ಧ್ವಜವೋ ಎಂಬಂತೆ ಕಂಗೊಳಿಸುತ್ತಿರುವುದು. ॥೩೭॥

ಮೇರುದ್ವಯಂ ಕ್ವಾಪಿ ನ ದೃಷ್ಟಮೇವ
ತಚ್ಚಂದ್ರರೇಖಾಭಿರಲಂಕೃತಂ ಚ ।
ಅಹೋ ಕಥಂ ತೇ ಭುಜಮಧ್ಯಭಾಗೇ
ರುದ್ರಾಕ್ಷಮಾಲಾವಲಯಾನುಕೂಲಂ ॥೩೮॥

ಬಾಲಾ ವಿದ್ರುಮವಲ್ಲಿಕಾ ಕಥಮಭೂದಂಭೋಜಪಾರ್ಶ್ವೇ ಕಥಂ
ತನ್ಮಧ್ಯೇ ನವಹೀರಜಾಲರಚನಾ ತಸ್ಮಿನ್ ಕ್ವ ವಾ ರಕ್ತಿಮಾ ।
ಬಾಲೇಂದುದ್ವಯಮಸ್ತಿ ಭಾಲನಿಕಟೇ ವೇಣೀಫಣೀ ಕೋಪ್ಯಯಂ
ಸೃಷ್ಟಿಸ್ತಾವದಿಹಾಷ್ಟಮೂರ್ತಿಕರುಣಾಭೇದೇನ ಜಾತಾ ತ್ವಯಿ ॥೩೯॥

ಈ ಲೋಕದಲ್ಲಿ ಒಂದೇ ಒಂದು ಮೇರುಪರ್ವತವು ಇರುವುದೆಂದು ಪ್ರಸಿದ್ಧವಾಗಿದೆ. ಆದರೆ ಇಲ್ಲಿ ಎರಡು ಮೇರುಪರ್ವತಗಳು (ಸ್ತನಗಳು) ಕಾಣಿಸುತ್ತಿರುವುವಲ್ಲ! ಇದೇನು ಆಶ್ಚರ್ಯ? ಆದರಲ್ಲಿಯೂ ಚಂದ್ರನ ರೇಖೆಗಳಿಂದ ಅಲಂಕರಿಸಲ್ಪಟ್ಟ ಎರಡು ಮೇರು ಪರ್ವತಗಳನ್ನು ನಾನು ಒಟ್ಟಾಗಿ ಎಲ್ಲಿಯೂ ನೋಡಿರುವುದಿಲ್ಲ. ಆದರೆ ಇಲ್ಲಿ ಅದ್ಭುತವಾದ ಆ ದೃಶ್ಯವು ಕಾಣಿಸುತ್ತಿರುವುದು. ಅಯ್ಯೋ, ಇದೇನಾಶ್ಚರ್ಯ! ನಿನ್ನ ಭುಜಗಳ ನಡುವೆ ವರ್ತುಲಾಕಾರವಾದ (ದುಂಡಗಿರುವ) ರುದ್ರಾಕ್ಷ ಮಾಲೆಯು ಬೇರೆ ಶೋಭಿಸುತ್ತಿದೆ. ರುದ್ರಾಕ್ಷಿಯ ಕೈ ಬಳೆಯೂ ನಿನ್ನ ಶೋಭಾಸಾಧಕವಾಗಿದೆ. ॥೩೮॥

ಮುಖಕಮಲದ ಮಧ್ಯದಲ್ಲಿ ಹವಳದ ಬಳ್ಳಿಯು (ಎಸಳಾದ ತುಟಿ) ಹೇಗೆ ಬೆಳೆಯಿತು? ಅಲ್ಲಿಯೇ ಅಮೂಲ್ಯವಾದ ಹೀರರತ್ನಗಳು (ಹಲ್ಲುಗಳು) ಹೇಗೆ ಸೇರಿದುವು? ಅದರಲ್ಲಿ ತೋರಿಬರುವ ಕೆಂಪು (ಅನುರಾಗವು) ಎಲ್ಲಿಯದು? ಹಣೆಯ ಮೇಲೆ ಎರಡು ವಕ್ರಚಂದ್ರಕಲೆಗಳು (ಹುಬ್ಬುಗಳು) ಹೇಗೆ ಸಂಬಂಧಿಸಿದುವು? ಅದೂ ಅಲ್ಲದೆ ದೊಡ್ಡ ಸರ್ಪವೊಂದು (ನೀಳವಾದ ಜಡೆ) ಶಿರಸ್ಸನ್ನು ಆಶ್ರಯಿಸುವುವಲ್ಲ! ಇಂತಹ ವಸ್ತುಯೋಜನೆಗಳಿಂದ ಈ ಆಕಾರವು ಹೇಗೆ ಸ್ಪಷ್ಟವಾಯಿತೋ ಕಾಣೆನಲ್ಲಾ! ಪರಶಿವನ ಅನುಗ್ರಹದಿಂದಲೇ ನೀನು ಇಷ್ಟು ಸುಂದರಿಯಾಗಿರುವೆ. ॥೩೯॥

ಆನಂದರಾಶಿರೇವಾಯಂ ನಾರೀರೂಪಮುಪಾಗತಃ ।
ನೃತ್ಯತ್ಯಗ್ರೇ ಮಹೇಶಸ್ಯ ಮಹೇಶಾನುಗ್ರಹೇಚ್ಛಯಾ ॥೪೧॥

ತಟಿತ್ಕೋಟಿಕೋಟಂ ಪ್ರಭಾ ಕೇವಲೇಯಂ
ವಧೂರೂಪಮಾಸಾದ್ಯ ಸದ್ಯೋಽನವದ್ಯಾ ।
ಶಿವಾಚಾರವಿಸ್ತಾರಚಾತುರ್ಯರಾಶಿ
ಪ್ರಕಾಶಾಯ ತಾವತ್ಪ್ರನೃತ್ಯತ್ಯಹೋ ಕಿಂ ॥೪೧॥

ಕಿಮೇಷಾ ಸಂತೋಷಂ ವಿತರತಿ ಮುಹುರ್ಮೋಽಹಮಸಕೃತ್
ನಿಜಾಪಾಂಗಾಸಂಗೈರನುಗತಾನಂಗನಿಯತೈಃ ।
ಕಥಂ ನೀತಾ ಕಾಂತಿರ್ನಲಿನದಲನೀಲೋತ್ಪಲಗತಾ
ಕಿಮನ್ಯಾಯೋ ನ ಸ್ಯಾದಿಹ ಯದಿ ಭವೇತ್ಕಜ್ಜಲಜಲಂ ॥೪೨॥

ಆನಂದಸಮುದಾಯವೇ ಸುಂದರಿಯಾದ ಈ ತರುಣಿಯ ರೂಪವನ್ನು ಧರಿಸಿ, ಈಶ್ವರನ ಅನುಗ್ರಹವನ್ನು ಸಂಪಾದಿಸುವ ಇಚ್ಛೆಯಿಂದ ಶಿವನ ಮುಂಭಾಗದಲ್ಲಿ ನಾಟ್ಯವನ್ನು ಅಭಿನಯಿಸುತ್ತಿರುವುದೋ ಎಂಬಂತೆ ತೋರುವುದು. ॥೪೦॥

ನನ್ನ ಮುಂದೆ ಕಾಣಿಸುತ್ತಿರುವ ಈ ಪ್ರಭಾರಾಶಿಯು ಕೋಟ್ಯಂತರವಾದ ವಿದ್ಯುತ್ತುಗಳ (ಮಿಂಚುಗಳ) ಸಮುದಾಯವೋ ಎಂಬಂತೆ ಇರುತ್ತದೆ. ಮಿಂಚುಗಳ ಸಮುದಾಯವೇ ಈ ತರುಣಿಯ ವೇಷವನ್ನು ಧರಿಸಿ, ತನಗೆ ಶಿವನಲ್ಲಿರುವ ಭಕ್ತ್ಯತಿಶಯವನ್ನು ತೋರ್ಪಡಿಸುವುದಕ್ಕೋಸ್ಕರ ಶಿವನ ಮುಂದುಗಡೆಯಲ್ಲಿ ನರ್ತಿಸುತ್ತಿರುವುದೋ ಎಂಬಂತೆ ತೋರುತ್ತಿರುವುದಿಲ್ಲ. ಇದೇನಾಶ್ಚರ್ಯ! ॥೪೧॥

ಈ ರಮಣಿಯು ದರ್ಶನಮಾತ್ರದಿಂದಲೇ ಅನಿರ್ವಚನೀಯವಾದ ಆನಂದವನ್ನುಂಟುಮಾಡುತ್ತಿರುವಳಲ್ಲ! ಅಯ್ಯೋ! ಕಾಮವಿಕಾರವನ್ನು ಸೂಚಿಸುವ ಇವಳ ಕಟಾಕ್ಷವೀಕ್ಷಣಗಳಿಂದ ನನ್ನನ್ನು ಬಾರಿಬಾರಿಗೂ ಮೋಹವು ಆವರಿಸುತ್ತಿರುವುದಲ್ಲ! ಕನ್ನೈದಲೆಯಲ್ಲಿ ಕಂಡು ಬರುವ ಕಾಂತಿಯು ಈಕೆಯ ಕಣ್ಣುಗಳಲ್ಲಿ ಬಂದಿರುವುದು ಅನ್ಯಾಯವಲ್ಲವೆ! ಕಾಡಿಗೆಯಿಂದ ಮಿಶ್ರಿತವಾದ ನೀರಿನ ರಾಶಿಯು ಒಂದು ವೇಳೆ ಕಣ್ಣುಗಳಲ್ಲಿ ಇರುವುದಾದರೆ ಅದು ಇಲ್ಲಿ ಉಚಿತವೆನಿಸುವುದು. ಇಲ್ಲದಿದ್ದರೆ ಇದು ಕನ್ನೈದಿಲೆಗಳಿಗೆ ಅವಮಾನವನ್ನುಂಟುಮಾಡುವ ಪ್ರಸಂಗವಾಗಿರುವುದಿಲ್ಲವೇ! ॥೪೨॥

ಇತ್ಯಾನಂದವಚೋವೀಚೀಪ್ರಪಂಚಮಪಿ ಬಾಲಿಕಾ ।
ವಿಧಾಯ ಹೃದಯೇ ಮಂದಮನಂಗೋದ್ರೇಕಮಾಹ ಸಾ ॥೪೩॥

॥ ಕನ್ಯಕೋವಾಚ ॥

ಪಾಣಿಗ್ರಹೋತ್ತರಮಹಂ ಮದನೋತ್ಸವಾಯ
ರಾಕಾಸುಧಾಕರಕರಾಕರಕಲ್ಪತಲ್ಪೇ ।
ಆಕಲ್ಪಕಲ್ಪನಪುರಃಸರಮೇವ ಹಾರಂ
ಆಹಾರಸಾರಮುಪಭುಜ್ಯ ವಿರಜ್ಯ ರಕ್ತಾ ॥೪೪॥

ಇತಿ ತದ್ವಚನಂ ಶ್ರುತ್ವಾ ಸ್ಮರಾಸಾರಪುರಃಸರಂ ।
ಮದನಾನಂದಸಂದೋಹಸಂವೀತ ಇವ ಬಾಲಕಃ ॥೪೫॥

ತತಃ ಪರಂ ನಾಟ್ಯಸಮಾಪ್ತಿಮಾಶು
ಕೃತ್ವಾ ಸುಖಂ ವೇಶ್ಮ ಸಮಾವಿವೇಶ ।

ಈ ರೀತಿಯಲ್ಲಿ ಆ ಬಾಲಿಕೆಯು, ತರುಣನಾದ ಈ ಬಾಲಕನಲ್ಲಿ ಆನಂದ ತರಂಗಗಳನ್ನು ಅಭಿವೃದ್ಧಿಗೊಳಿಸುವ ಕಾಮವಿಕಾರಾತಿಶಯವನ್ನುಂಟುಮಾಡಿ ಬಳಿಕ ಅವನನ್ನು ಕುರಿತು ಮೆಲ್ಲ ಮೆಲ್ಲನೆ ಹೀಗೆಂದಳು. ॥೪೩॥

ಓ ಪ್ರಿಯತಮನೇ, ನಾನು ರತಿಸೌಖ್ಯವನ್ನು ಅನುಭವಿಸುವುದಕ್ಕೋಸ್ಕರ ನಿನ್ನೊಂದಿಗೆ ವಿವಾಹಿತಳಾಗಿ, ಆಹ್ಲಾದಕರವಾದ ಪೂರ್ಣಿಮೆಯ ಚಂದ್ರನ ಅಮೃತ ಮಯವಾದ ಕಿರಣಗಳಿಂದ ವ್ಯಾಪ್ತವಾಗಿರುವ ಶುಭ್ರವಾದ ತಲ್ಪ (ಹಾಸಿಗೆ)ದಲ್ಲಿ ಭಕ್ತಶ್ರೇಷ್ಠನಾದ ನಿನ್ನೊಂದಿಗೆ ಯಥೇಚ್ಛವಾಗಿ ಕ್ರೀಡಿಸಿ, ಬಳಿಕ ನಿನ್ನಂತೆಯೇ ಶಿವಧ್ಯಾನ ತತ್ಪರಳಾಗಿ, ಈ ಸಂಸಾರದಲ್ಲಿ ವೈರಾಗ್ಯವನ್ನು ತಾಳಬೇಕೆಂದಿರುವೆನು. ಇದೇ ನನ್ನ ಜೀವನದ ಮುಂದಿನ ಧ್ಯೇಯವಾಗಿರುವುದು. ॥೪೪॥

ಕಾಮವಿಕಾರದ ಪರಾಕಾಷ್ಠತೆಯನ್ನು ಸೂಚಿಸುತ್ತಿರುವ, ಅವಳ ಆ ಮಾತನ್ನು ಕೇಳಿ ಬಾಲಕನು ಅವಳಲ್ಲಿ ಅನುರಕ್ತನಾಗಿ, ಆನಂದದ ಪ್ರವಾಹದಲ್ಲಿಯೇ ಮುಳುಗಿದವನಂತೆ ಆದನು. ॥೪೫॥

ಬಳಿಕ ಆ ರಾಜಕುಮಾರಿಯು, ನಾಟ್ಯವನ್ನು ಪೂರೈಸಿ, ಸಂತೋಷದಿಂದ ತನ್ನ ಗೃಹವನ್ನು ಸೇರಿದಳು. ಆಗ ದೇವತೆಗಳಿಗೂ ಪೂಜ್ಯಳಾದ ಆಕೆಯು

ಸಾ ರಾಜಕನ್ಯಾ ಸುರವೃಂದಮಾನ್ಯಾ
ನವೇಂದುರೇಖೇವ ಜನಾಭಿಮಾನಾ ॥೪೬॥

ಸಾ ದಿವ್ಯತೂರ್ಯಧ್ವನಿಭಿಃ ಪ್ರವಿಷ್ಟಾ
ಸ್ವಮಂದಿರಂ ಶಂಕರಮಂದಿರೇ ಚ ।
ಸಾ ಶೋಭನಾಚಾರವಿಚಾರಯುಕ್ತಾ
ಚಕಾರ ರಾಜ್ಞೀಮಪಿ ತಾಮಭಿಜ್ಞಾಂ ॥೪೭॥

ಸಾ ರಾಜ್ಞೀ ತಾಂ ವಿಲೋಕ್ಯಾಶು ಹರ್ಷವರ್ಷಸಮಾವೃತಾ ।
ಮಂಗಲಾಚರಣೋದ್ಯುಕ್ತಾ ದೇವದುಂದುಭಿನಿಃಸ್ವನೈಃ ॥೪೮॥

ಸ ರಾಜಾ ವಿಧಿನಾ ಸಾಕಂ ಸ್ನಾತ್ವೋದ್ಧೂಲ್ಯ ಚ ಭಸ್ಮನಾ ।
ತ್ರಿಪುಂಡ್ರರುದ್ರಾಕ್ಷಧರೋ ಯಯೌ ಸೋಮೇಶ್ವರಾಲಯಂ ॥೪೯॥

ತತಃ ಪರಂ ಮಹಾದೇವಮುಪಚಾರೈರನೇಕಧಾ ।
ಪೂಜಯಾಮಾಸ ಸವಿಧಿಂ ಭೂಪಾಲೋ ಮುಕ್ತಿಕಾಂಕ್ಷಯಾ ॥೫೦॥

ಮನಸ್ಸಿಗೆ ಅತಿಯಾದ ಆಹ್ಲಾದವನ್ನುಂಟುಮಾಡುವುದರಿಂದ ಜನರ ಪ್ರೀತಿಗೆ ಪಾತ್ರವಾದ ನೂತನ ಚಂದ್ರನ ರೇಖೆಯೋ ಎಂಬಂತೆ ಕಂಗೊಳಿಸಿದಳು. ॥೪೬॥

ಅವಳು ದಿವ್ಯವಾದ ವಾದ್ಯಘೋಷಗಳಿಂದ ತನ್ನ ಮಂದಿರದಲ್ಲಿರುವ ಶಿವಾಲಯವನ್ನು ಪ್ರವೇಶಿಸಿದಳು. ಹಾಗೆಯೇ ಮಗಳ ವಿಪನ್ನಾವಸ್ಥೆಯನ್ನು ಸಹಿಸಲಾರದೇ ಮೂರ್ಛೆಗೊಂಡಿದ್ದ ತನ್ನ ತಾಯಿಯನ್ನು ಆದರದಿಂದ ಸಂತೈಸಿದಳು. ॥೪೭॥

ಮೂರ್ಛೆಯಿಂದ ಎಚ್ಚೆತ್ತ ರಾಣಿಯು ಮಂದಹಾಸವನ್ನು ಬೀರುತ್ತಿರುವ ಮಗಳನ್ನು ನೋಡಿ, ವಿಷಯವನ್ನೆಲ್ಲಾ ತಿಳಿದು ಸಂತೋಷಗೊಂಡವಳಾಗಿ, ದೇವದುಂದುಭಿಗಳ ಘೋಷಗಳೊಂದಿಗೆ ಮುಂದಿನ ಮಂಗಳಕಾರ್ಯವನ್ನು ನೆರವೇರಿಸುವುದರಲ್ಲಿ ಉದ್ಯುಕ್ತಳಾದಳು. ॥೪೮॥

ರಾಜನೂ ಸಹ ಬ್ರಹ್ಮನಿಂದೊಡಗೂಡಿ ಕೊಳದಲ್ಲಿ ಸ್ನಾನಮಾಡಿ ಸರ್ವಾಂಗಗಳಲ್ಲಿಯೂ ಭಸ್ಮವನ್ನು ಲೇಪಿಸಿ, ಹಣೆಯಲ್ಲಿ ತ್ರಿಪುಂಡ್ರವನ್ನಿಟ್ಟು ಕೊರಳಲ್ಲಿ ರುದ್ರಾಕ್ಷಮಾಲೆಯನ್ನು ಧರಿಸಿ, ಶಿವಾಲಯವನ್ನು ಕುರಿತು ತೆರಳಿದನು. ॥೪೯॥

ಬಳಿಕ ಅವನು ಮೋಕ್ಷಾಭಿಲಾಷೆಯಿಂದ, ದೇವೇಶನಾದ ಶಿವನನ್ನು ಅರ್ಘ್ಯಪಾದ್ಯಾದ್ಯುಪಚಾರಗಳಿಂದ ವಿಧಿವತ್ತಾಗಿ ಪೂಜಿಸಿದನು. ॥೫೦॥

ತತಃ ಪರಂ ಸ ರಾಜಾಪಿ ತಸ್ಯ ಬಾಲಸ್ಯ ಚೇಷ್ಟಿತಂ ।
ಪಾಣಿಗ್ರಹಾನುಕೂಲತ್ವಂ ವಿಚಾರ್ಯಾತಿಪ್ರಹರ್ಷಿತಃ ॥೫೧॥

ತತಃ ಪರಂ ಸಮಾಹೂಯ ಮಂತ್ರಿವರ್ಗಾನ್ವಿಶೇಷತಃ ।
ಮಂಗಳಾಚಾರಸಂಪತ್ತಿವಿಚಾರನಿರತೋಽಭವತ್ ॥೫೨॥

ಅಲಂಕೃತಂ ಚ ನಗರಂ ಮಂದಿರಂ ಚ ವಿಶೇಷತಃ ।
ಅಲಂಕೃತೇನ ಬಾಲೇನ ವಿಧಿನಾ ಗಂತುಮುದ್ಯತಃ ॥೫೩॥

ಸಿತಭೂತಿಸಮಾಕ್ರಾಂತಂ ಕರ್ಪೂರನಿಭಮಾದರಾತ್ ।
ವಿಲೋಕ್ಯ ರಾಜಾ ಸಂತುಷ್ಟೋ ರುದ್ರಾಕ್ಷಾಭರಣಂ ಚ ತಂ ॥೫೪॥

ವಿಲೋಕ್ಯ ಬಾಲಂ ಚತುರಂ ತು ಯಾನೇ
ಸಂವಿಷ್ಟಮಿಷ್ಟಾಭರಣಂ ದುಕೂಲೈಃ ।

ತರುವಾಯ ರಾಜನು ಬಾಲಕನ ಮನಸ್ಸನ್ನು ಅವನ ಹಾವಭಾವಗಳಿಂದ ಅರಿತು ಬಾಲಕನು, ವಿವಾಹಕ್ಕೆ ಸಮ್ಮತಿಸಿದುದನ್ನು ಇದೇ ಇವರಿಬ್ಬರ ವಿವಾಹಕ್ಕೆ ಯೋಗ್ಯವಾದ ಕಾಲವಾಗಿರುವುದೆಂಬುದನ್ನೂ ಯೋಚಿಸಿ ಸಂತೋಷಗೊಂಡನು. ॥೫೧॥

ಅನಂತರ ಅವನು ತನ್ನ ಮಂತ್ರಿಗಳನ್ನು ತಡೆದು, ಅವರೊಂದಿಗೆ ವಿವಾಹ ಕಾರ್ಯದಲ್ಲಿ, ಉಪಯುಕ್ತವಾದ ಸಾಧನ ಸಂಪತ್ತುಗಳನ್ನು ಸಿದ್ಧಪಡಿಸುವ ಯೋಚನೆಯಲ್ಲಿ ಮಗ್ನನಾದನು. ॥೫೨॥

ರಾಜಧಾನಿಯು ಅಲಂಕರಿಸಲ್ಪಟ್ಟಿತು. ರಾಜನ ಅರಮನೆಯಾದರೋ ಪ್ರೇಕ್ಷಕರ, ಕಣ್ಣುಗಳನ್ನು ಕೋರೈಸುವಂತೆ ಸುಂದರವಾಯಿತು. ಇತ್ತ ರಾಜನು ಯೋಗ್ಯವಾದ ಉಡಿಗೆ ತೊಡಿಗೆಗಳಿಂದ ಅಲಂಕೃತನಾದ ಬಾಲಕನನ್ನು ಕರೆದುಕೊಂಡು ಬ್ರಹ್ಮನೊಂದಿಗೆ ರಾಜಧಾನಿಗೆ ಹೋಗಲು ಉದ್ಯುಕ್ತನಾದನು. ॥೫೩॥

ರುದ್ರಾಕ್ಷಿಯ ಮಾಲೆಯನ್ನು ಧರಿಸಿ, ಅತಿಶುದ್ಧವಾದ ವಿಭೂತಿಯನ್ನಿಟ್ಟು ಶುಭ್ರವಾಗಿರುವ ಕರ್ಪೂರದಂತೆ ಕಾಣಿಸಿಕೊಳ್ಳುತ್ತಿದ್ದ ಆ ಬಾಲಕನನ್ನು ನೋಡಿ ರಾಜನು ಸಂತೋಷಭರಿತನಾದನು. ॥೫೪॥

ಶುಭ್ರವಾದ ಪಟವಸ್ತ್ರಗಳನ್ನು ಧರಿಸಿ, ವಿವಾಹಯೋಗ್ಯವಾದ ಆಭರಣಗಳಿಂದ ಅಲಂಕೃತನಾಗಿ ರಥದಲ್ಲಿ ಕುಳಿತಿರುವ ಆ ಬಾಲಕನನ್ನು ನೋಡಿ ಸಂತುಷ್ಟನಾದ

ಆವೇಷ್ಟಿತಂ ತ್ವಷ್ಟುರಪೀಷ್ಟಮಿಷ್ಟಂ
ಪ್ರಧಾನವರ್ಗಸ್ಯ ಚ ತಂ ಪದರ್ಶ ॥೫೫॥

ದೇವದುಂದುಭಯೋ ನೇದುಃ ಖತೂರ್ಯಧ್ವನಿಭಿಃ ಸಹ ।
ಮಂದಾರಪುಷ್ಪವೃಷ್ಟಿಶ್ಚ ಬಭೂವ ಗಮನೋತ್ಸವೇ ॥೫೬॥

ತತಃ ಪರಂ ಸ ನಗರಂ ನಗರಂಧ್ರಕರಾರ್ಚಿತಃ ।
ವಿವೇಶ ನಗರಾವಾಸೇ ವಾಸವೈರಿವ ಪೂಜಿತಃ ॥೫೭॥

ಕೇಚಿದ್ವಿಚಿಕ್ಷಿಪುರ್ಲಾಜಾನ್ಮಂಗಲಾಚಾರಸೂಚಕಾನ್ ।
ವಿಚಿಕ್ಷಿಪುಃ ಪಲ್ಲವಾಂಶ್ಚ ಕುಸುಮಾನ್ಯಪಿ ಕೇಚನ ॥೫೮॥

ಮಂದಾರಮಕರಂದಾನಾಂ ಧಾರಾಭಿಃ ಪಥಿ ಸೇಚನಂ ।
ಕೃತಮೇವಾಮರೈಃ ಸರ್ವೈಃ ನಗರಂ ಸಮಲಂಕೃತಂ ॥೫೯॥

ರಾಜನು ವೇಷಭೂಷಿತನಾದ ಆ ಬಾಲಕನನ್ನು ತನ್ನ ಮಂತ್ರಿಗಳಿಗೂ ಮತ್ತು ಬ್ರಹ್ಮನಿಗೂ ತೋರಿಸಿದನು. ॥೫೫॥

ಆ ಸಮಯದಲ್ಲಿ ವಾದ್ಯಘೋಷಗಳು ದೇಶದಿಗಂತಗಳನ್ನು ವ್ಯಾಪಿಸುತ್ತಿರಲು, ದೇವದುಂದುಭಿಗಳೂ ಸಹ ಮೊಳಗಿದುವು. ಮಂದಾರದ ಹೂವುಗಳು ಮಳೆಗರೆದವು. ॥೫೬॥

ಸಕಲರಿಂದಲೂ ಪುಷ್ಪವೃಷ್ಟಿಯಿಂದಲೂ ಪೂಜಿತನಾದ ಆ ವರನು ಸಂತೋಷದಿಂದ ಇಂದ್ರಾದಿಗಳಿಂದಲೂ ಪೂಜಿಸಲ್ಪಟ್ಟು ತನ್ನ ಬಿಡಾರವನ್ನು ಸೇರಿದನು. ॥೫೭॥

ಪಟ್ಟಣಿಗರಲ್ಲಿ ಕೆಲವರು, ಶುಭಸಂದೇಶವನ್ನು ಸೂಚಿಸುವ ಅರಳುಗಳನ್ನು ಅವನ ಮೇಲೆ ಚೆಲ್ಲಿದರು. ಇನ್ನು ಕೆಲವರು ಘಮಘಮಿಸುವ ಹೂವುಗಳನ್ನೂ ಮತ್ತು ಕೋಮಲವಾದ ಚಿಗುರುಗಳನ್ನು ಎರಚಿದರು. ॥೫೮॥

ದೇವತೆಗಳೆಲ್ಲರೂ, ರಥವು ಬರುವ ಮಾರ್ಗದಲ್ಲಿ, ಮಂದಾರ ಪುಷ್ಪಗಳ ಮಕರಂದದ ಪ್ರವಾಹವನ್ನೇ ಹರಿಸಿದರು. ಈ ರೀತಿಯಲ್ಲಿ ಪಟ್ಟಣವು ಎಲ್ಲೆಡೆಯಲ್ಲಿಯೂ ಅಲಂಕರಿಸಲ್ಪಟ್ಟಿತು. ॥೫೯॥

ವಿತಾನಧ್ವಜಮಾಲಾಭಿಸ್ತೋರಣೈರಪಿ ಕೋಟಿಶಃ ।
ಮುಕ್ತಾಜಾಲೈರಪಾರೈಶ್ಚ ಕೃತಂ ನಗರಮಂಡನಂ ॥೬೦॥

ತತೋ ದಿಗಂತವಿಶ್ರಾಂತತೂರ್ಯಧ್ವನಿವಿರಾಜಿತಂ ।
ಮಂದಿರಂ ಸುಂದರಂ ಪ್ರಾಪ ರತ್ನಪ್ರಾಕಾರಮಂಡಿತಂ ॥೬೧॥

ರತ್ನಸಿಂಹಾಸನಾಕೀರ್ಣಂ ಸುಂದರೇ ಶಿವಮಂದಿರೇ ।
ಉಪವಿಶ್ಯಾರ್ಚಯಾಮಾಸ ಸ ರಾಜಾ ಸವಿಧಿಃ ಶಿವಂ ॥೬೨॥

ತತಃ ಪರಂ ಮಂಗಳಮಂಟಪಾನಾಂ
ಸತೋರಣಾನಾಂ ಕುಸುಮಾನ್ವಿತಾನಾಂ ।
ವಿಲೋಕನೇನೈವ ಸುಖಂ ಸ ರಾಜಾ
ಪ್ರಾಪಾಮೃತೇನೈವ ಸುರೇಂದ್ರವರ್ಗಃ ॥೬೩॥

ತತಃ ಪರಂ ಸ ಬಾಲೋಽಪಿ ದೃಷ್ಟ್ವಾ ಶಂಕರಮಂದಿರಂ ।
ಪೂಜಯಾಮಾಸ ವಿಧಿವದುಪಚಾರೈರ್ಮಹೇಶ್ವರಂ ॥೬೪॥

ಅಂದವಾದ ಮೇಲ್ಕಟ್ಟುಗಳಿಂದಲೂ, ಬಾವುಟಗಳಿಂದಲೂ ಮತ್ತು ರತ್ನ ತೋರಣಗಳಿಂದಲೂ, ಹೇರಳವಾದ ಮುತ್ತಿನಹಾರಗಳಿಂದಲೂ ನಗರವು ಅಲಂಕರಿಸಲ್ಪಟ್ಟಿದ್ದಿತು. ॥೬೦॥

ಬಳಿಕ ಬಾಲಕನು ವಾದ್ಯಘೋಷಗಳು ದಿಗಂತಗಳನ್ನು ವ್ಯಾಪಿಸುತ್ತಿರಲು ರತ್ನಖಚಿತವಾದ ಕೋಟೆಯಿಂದ ಶೋಭಿಸುವ ಮನೋಹರವಾದ ರಾಜಮಂದಿರವನ್ನು ಪ್ರವೇಶಿಸಿದನು. ॥೬೧॥

ತರುವಾಯ ರಾಜನು ಬ್ರಹ್ಮನಿಂದೊಡಗೂಡಿ, ಸುಂದರವಾದ ಶಿವದೇವಾಲಯದಲ್ಲಿ ಕುಳಿತುಕೊಂಡು, ರತ್ನಖಚಿತವಾದ ಸಿಂಹಾಸನದಲ್ಲಿ ವಿರಾಜಮಾನನಾದ ಶಿವನನ್ನು ಪೂಜಿಸಿದನು. ॥೬೨॥

ಬಳಿಕ ರಾಜನು, ತೋರಣಗಳಿಂದಲೂ, ಪುಷ್ಪಗಳಿಂದಲೂ, ಅಲಂಕರಿಸಲ್ಪಟ್ಟ ಮಂಟಪಗಳನ್ನು ನೋಡಿದಮಾತ್ರದಿಂದಲೇ ಅಮೃತಪಾನದಿಂದ ದೇವತೆಗಳು ತೃಪ್ತಿಪಟ್ಟಂತೆ ನಿರತಿಶಯವಾದ ಸುಖವನ್ನೈದಿದನು. ॥೬೩॥

ತರುವಾಯ ಆ ಬಾಲಕನೂ ಸಹ ಶಿವಾಲಯವನ್ನು ನೋಡಿ ಶಿವನನ್ನು ನಾನಾಬಗೆಯ ಉಪಚಾರಗಳಿಂದ ಯಥಾವಿಧಿಯಾಗಿ ಅರ್ಚಿಸಿದನು. ॥೬೪॥

ರಾಜಾ ರಾಜ್ಞೀಸಮೇತಃ ಸನ್ ತಯಾ ಕನ್ಯಕಯಾ ಸಹ ।
ಚಕಾರ ಮಂಗಳಸ್ನಾನಂ ಮುಹೂರ್ತೇ ವಿಧಿಬೋಧಿತೇ ॥೬೫॥

ನವಗ್ರಹಮುಖಂ ಕೃತ್ವಾ ನಾಂದೀಂ ಕೃತ್ವಾ ವಿಶೇಷತಃ ।
ಸಿಂಹಾಸನಾಶ್ರಿತಂ ಚಕ್ರೇ ಸ ರಾಜಾ ಬಾಲಕಂ ಮುದಾ ॥೬೬॥

ಮಂಗಲಾಚಾರಸಂಯುಕ್ತಾಂ ಕನ್ಯಕಾಂ ಭೂತಿಭೂಷಿತಾಂ ।
ವಿಲೋಕ್ಯ ರಾಜಾ ಸಂತುಷ್ಟೋ ವಿಧಿನಾ ಸಹ ಸಾದರಂ ॥೬೭॥

ಕಥಂ ದೇಯಾ ಕನ್ಯಕೇಯಮಿತ್ಯಾಹ ಸ ಮಹೀಪತಿಃ ।
ಗೋತ್ರಸೂತ್ರಾದಿಕಂ ನಾತ್ರ ನ ಚ ಪಿತ್ರಾದಿಕಂ ವಿಧೇ ॥೬೮॥

ಕಃ ಸಂಕಲ್ಪೋಽತ್ರ ಕರ್ತವ್ಯಸ್ತಮಾಹೇತಿ ಸ್ಮಿತೈರ್ಮುಹುಃ ।
ಇತಿ ಶ್ರುತ್ವಾ ವಚಸ್ತಸ್ಯ ಬ್ರಹ್ಮಾ ರಾಜಾನಮಬ್ರವೀತ್ ॥೬೯॥

ರಾಜನು ಪಟ್ಟಮಹಿಷಿಯಿಂದೊಡಗೂಡಿ, ತನ್ನ ಮಗಳೊಂದಿಗೆ ಶಾಸ್ತ್ರೋಕ್ತವಾದ ಮುಹೂರ್ತದಲ್ಲಿ ವಿವಾಹಾಂಗವಾದ ಮಂಗಳಸ್ನಾನವನ್ನು ಮಾಡಿದನು. ||೬೫||

ಬಳಿಕ ನವಗ್ರಹಹೋಮವನ್ನು ಮಾಡಿ, ನಾಂದೀಶ್ರಾದ್ಧವನ್ನು ನೆರವೇರಿಸಿ ಬಾಲಕನನ್ನು ಪ್ರೀತಿಯಿಂದ ಸಿಂಹಾಸನದ ಮೇಲೆ ಕುಳ್ಳಿರಿಸಿದನು. ||೬೬||

ವಿಭೂತಿಯನ್ನು ಧರಿಸಿ, ಶೋಭನವಾದ ಆಚಾರಗಳಿಂದ ಕೂಡಿದ ಕುಮಾರಿಯನ್ನು ಅಕ್ಕರೆಯಿಂದ ನೋಡಿ, ಬ್ರಹ್ಮನೊಂದಿಗೆ ಅತ್ಯಂತ ಸಂತೋಷವನ್ನು ಹೊಂದಿದನು. ||೬೭||

ಕನ್ಯಾದಾನದ ಸಮಯವು ಸನ್ನಿಹಿತವಾಗಲು, ರಾಜನು ಬ್ರಹ್ಮನನ್ನು ಕುರಿತು "ಪಿತಾಮಹನೇ, ಅಯೋನಿಜಳಾದ ಈ ಕನ್ಯೆಯನ್ನು ದಾನಮಾಡುವ ಬಗೆ ಹೇಗೆ? ಇವಳಿಗೆ ತಂದೆತಾಯಿಗಳಾಗಲಿ, ಗೋತ್ರವಾಗಲಿ, ಸೂತ್ರವಾಗಲಿ ಯಾವುದೂ ತೋರುವುದಿಲ್ಲ. ||೬೮||

ಆದುದರಿಂದ ದಾನಾಂಗವಾದ ಸಂಕಲ್ಪವನ್ನು ಮಾಡುವ ಬಗೆ ಹೇಗೆ?" ಎಂದು ಬಿನ್ನವಿಸಲು ರಾಜನ ಆ ಮಾತನ್ನು ಕೇಳಿ ಬ್ರಹ್ಮನು ಇಂತೆಂದನು. ||೬೯||

॥ ಬ್ರಹ್ಮೋವಾಚ ॥

ಶಿವಸ್ವರೂಪಾಯ ಶಿವಾಸ್ವರೂಪಾ
ಕನ್ಯಾಶಿವಸ್ತುಷ್ಯತು ದತ್ತಯಾಯಂ ।
ಇತ್ಯೇವ ಸಂಕಲ್ಪ್ಯ ವಿಭೂತಿಪೂತಾಂ
ಪ್ರಯಚ್ಛ ತಾಂ ಭೂತಿವಿಭೂಷಣಾಯ ॥೭೦॥

ಕನ್ಯಾಪ್ರದಾನೇನ ಮಹೇಶ್ವರೋ ಮೇ
ತುಷ್ಟೋ ಭವತ್ವದ್ಯ ಶಿವಾಪಿ ತುಷ್ಟಾ ।
ಇತಿ ಪ್ರದೇಯಾ ಖಲು ಕನ್ಯಕಾಪಿ
ತೇನಾಶು ತಾವತ್ಸುಖಮಾಪ್ನುವಂತಿ ॥೭೧॥

ಯಃ ಕನ್ಯಕಾಂ ಭಸ್ಮವಿಭೂಷಣಾಯ
ತ್ರಿಪುಂಡ್ರರುದ್ರಾಕ್ಷವಿಭೂಷಿತಾಂ ತಾಂ ।
ದದಾತಿ ತೇನಾಖಿಲಭೂಪ್ರದಾನ
ಪುಣ್ಯೇನ ಯುಕ್ತೋ ಭವತೀತಿ ಮನ್ಯೇ ॥೭೨॥

ಎಲೈ ಭೂಪಾಲನೇ, ಈ ಕನ್ಯೆಯು ಅಯೋನಿಜಳಾಗಿರುವುದರಿಂದ ಇವಳ ಗೋತ್ರಾದಿಗಳನ್ನು ಉಚ್ಚರಿಸಿ, ಸಂಕಲ್ಪವನ್ನು ಮಾಡುವುದು ಅಪ್ರಕೃತ. ಆದುದರಿಂದ ಈಗ ನೀನು "ಗೌರಿಯಸ್ವರೂಪಳಾದ ಈ ಕನ್ಯೆಯನ್ನು ಶಿವಸ್ವರೂಪನಾದ ವರನಿಗೆ ದಾನಮಾಡುವೆನು. ಈ ಕನ್ಯಾದಾನದಿಂದ ಶಿವನು ಸುಪ್ರೀತನಾಗಲಿ" ಎಂದು ಸಂಕಲ್ಪಿಸಿ, ಭಸ್ಮಭೂಷಿತಗಳಾದ ಈ ಕನ್ಯೆಯನ್ನು ಭಸ್ಮಧಾರಿಯಾದ ಈ ವರನಿಗೆ ದಾನಮಾಡುವವನಾಗು. ಇದಲ್ಲದೇ ಬೇರೆ ಯಾವ ಉಪಾಯವೂ ನನಗೆ ತೋರುವುದಿಲ್ಲ. ॥೭೦॥

ದಾನಮಾಡುವವನು "ನಾನು ನೆರವೇರಿಸುವ ಈ ಕನ್ಯಾದಾನದಿಂದ ಪಾರ್ವತೀಪರಮೇಶ್ವರರು ಸುಪ್ರೀತರಾಗಲಿ" ಎಂದು ಸಂಕಲ್ಪಿಸಿ ಈ ಕನ್ಯೆಯನ್ನು ಈ ವರನಿಗೆ ದಾನಮಾಡಲಿ. ಅದರಿಂದ ವಧೂವರರು ಶೀಘ್ರವಾಗಿಯೇ ಸುಖವನ್ನು ಹೊಂದುವರು. ಇದರಲ್ಲಿ ಸಂಶಯವಿಲ್ಲ. ॥೭೧॥

ಯಾವ ಮನುಜನು, ಶಿವಪ್ರಿಯವಾದ ರುದ್ರಾಕ್ಷ, ಭಸ್ಮತ್ರಿಪುಂಡ್ರ ಮುಂತಾದ ಚಿಹ್ನೆಗಳಿಂದ ಅಲಂಕೃತಳಾದ ಕನ್ಯೆಯನ್ನು ಭಸ್ಮಧಾರಿಯಾದ ವರನಿಗೆ

ಧನ್ಯಂ ಶಾಂಭವರೂಪಮಾತ್ರಮನಘಂ ಭೂತಿಪ್ರಭಾಭೂಷಿತಂ ।
ಕನ್ಯಾರತ್ನಮಿದಂ ಮನೋಹರತಮಂ ದೇಯಂ ತತೋ ದೀಯತಾಂ
ಏತದ್ದಾನಸಮಂ ನ ದಾನಮಿತಿ ಮೇ ಸಿದ್ಧಾಂತ ಏವ ಧ್ರುವಂ
ತಸ್ಮಾಚ್ಛಾಂಭವದಂಪತೀಮತಿರಪಿ ಪ್ರಾಪಾದ್ಯ ಪುಣ್ಯೋದಯೈಃ॥೭೩॥

ಇತಿ ತದ್ವಚನಂ ಶ್ರುತ್ವಾ ದದೌ ತಸ್ಮೈ ಸ ಕನ್ಯಕಾಂ ।
ತದಾ ದುಂದುಭಯೋ ನೇದುಃ ಪುಷ್ಪವೃಷ್ಟಿಸಮನ್ವಿತಾಃ ॥೭೪॥

ವಿವಾಹಹೋಮೇ ಸತಿ ಲಾಜಹೋಮೇ
ಚಕಾರ ಪಾಣಿಗ್ರಹಣಂ ಸ ಬಾಲಃ ।
ರರಾಜ ರಾಜೇವ ಸ ರೋಹಿಣೀಂ ತಾಂ
ಸಂಪ್ರಾಪ್ಯ ಸಸ್ಮೇರವಿಹಾರಭೂಮಿಃ ॥೭೫॥

ದಾನಮಾಡುವನೋ ಅವನಿಗೆ ಭೂದಾನದ ಪುಣ್ಯವು ಲಭಿಸುವುದೆಂದು ನಾನು ಭಾವಿಸುವೆನು. ||೭೨||

ವಿಭೂತಿಯ ಕಾಂತಿಯಿಂದ ಶೋಭಿಸುತ್ತಿರುವ ಶಿವಭಕ್ತನ ಮನೋಹರವಾದ ಈ ಆಕೃತಿಯೇ ಧನ್ಯವಾದುದು. ಮನೋಹರವಾದ ಈ ಕನ್ಯಾರತ್ನವನ್ನು ಅಯೋನಿಜನೂ ಶಾಂಭವನೂ ಆದ ಈ ಬಾಲಕನಿಗೆ ದಾನಮಾಡುವುದು ಉಚಿತವಾದುದಲ್ಲವೆ! ಆದುದರಿಂದ ಇವನಿಗೆ ಆ ಕನ್ಯಾರತ್ನವನ್ನು ದಾನಮಾಡುವವನಾಗು. ಇಂತಹ ಕನ್ಯಾದಾನಕ್ಕೆ ಸದೃಶವಾದ ಮತ್ತೊಂದು ದಾನವು ಇರುವುದಿಲ್ಲವೆಂದು ನಾನು ನಿಶ್ಚಯಿಸಿರುವೆನು. ಶಿವಭಕ್ತರಾದ ಈ ದಂಪತಿಗಳನ್ನು ನೋಡುವ ಯೋಗವು ನಿನಗೆ ಪೂರ್ವಜನ್ಮದ ಸುಕೃತ ವಿಶೇಷದಿಂದಲೇ ಲಭಿಸಿರುವುದು. ||||೭೩||

ಬ್ರಹ್ಮನು ಹೇಳಿದ ಆ ಮಾತನ್ನು ಕೇಳಿ, ರಾಜನು ಕನ್ಯೆಯನ್ನು ಬಾಲಕನಿಗೆ ಅದರಂತೆಯೇ ದಾನಮಾಡಿದನು. ಆಗ ದೇವದುಂದುಭಿಗಳು ಮೊಳಗಿದವು. ಪುಷ್ಪಗಳು ಮಳೆಗರೆದವು. ||೭೪||

ಪಾಣಿಗ್ರಹಣಾಂಗವಾದ ಪ್ರಧಾನಹೋಮ, ಲಾಜಾಹೋಮಾದಿಗಳು ನೆರವೇರಲು, ಆ ಬಾಲಕನು ಕನ್ಯೆಯ ಪಾಣಿಗ್ರಹಣ ಮಾಡಿದನು. ಆಗ ಕನ್ಯಾಸಮೇತನಾದ ಅವನು ನಸುನಗುವಿನಿಂದ ಕೂಡಿದವನಾಗಿ, ರೋಹಿಣೀ ನಕ್ಷತ್ರದಿಂದ ಯುಕ್ತನಾದ ಚಂದ್ರನೋಪಾದಿಯಲ್ಲಿ ಶೋಭಿಸಿದನು. ||೭೫||

ವಧೂವರಾಭ್ಯಾಂ ಸಮುಪೇತ್ಯಮಂದ
ಮಾನಂದಧಾರಾಂ ಸಮುಪೇತ್ಯ ನಿತ್ಯಾಂ ।
ಕೃತಾ ನತಿಃ ಶಂಕರಮಂದಿರಾಂತಃ
ಸಾಂಬಾಯ ಲಿಂಗೋನ್ನತವಿಗ್ರಹಾಯ ॥೭೬॥

ಕೃತ್ವಾ ತತಃ ಪರಮುಮಾರಮಣಾರ್ಚನಂ ಚ
ಸಾಯಂ ಶಿವಾಯ ವಿನಿವೇದಿತಮೇವ ಭುಕ್ತ್ವಾ ।
ರಾಜಾಪಿ ತೇನ ವಿಧಿನಾ ದ್ವಿಜಪುಂಗವೈಶ್ಚ
ಸಂತೋಷಮಾಪ ಸ ಪರಂ ಸ ವಧೂಸಮೇತಃ ॥೭೭॥

ತಸ್ಮಿನ್ ವಿವಾಹಸಮಯೇ ವಿಧಯೇ ಸ ರಾಜಾ
ಕೃತ್ವಾರ್ಹಣಾಮನಘರತ್ನಸಮನ್ವಿತಾಭಿಃ ।
ವಸ್ತ್ರಾದಿಭಿಸ್ತದನು ಶಾಂಭವಪುಂಗವಾನಾಂ
ಪೂಜಾಂ ಚಕಾರ ಸಕಲೋತ್ಸವವತ್ಸಲೋಽಯಂ ॥೭೮॥

ವಿವಾಹವು ವಿಜೃಂಭಣೆಯಿಂದ ನೆರವೇರಲು, ಬಳಿಕ ವಧೂವರರು ಆನಂದ ತುಂದಿಲರಾಗಿ ಶಿವಾಲಯವನ್ನು ಪ್ರವೇಶಿಸಿ ಶಿವಲಿಂಗರೂಪದಿಂದ ನೆಲಸಿರುವ ಅರ್ಧನಾರೀಶ್ವರ ಸ್ವರೂಪನಾದ ಶಿವನಿಗೆ ಭಕ್ತಿಯಿಂದ ನಮಸ್ಕರಿಸಿದರು. ॥೭೬॥

ಬಳಿಕ ಆ ಬಾಲಕನು ಉಮಾಕಾಂತನಾದ ಪರಮೇಶ್ವರನನ್ನು ಭಕ್ತಿಯಿಂದ ಅರ್ಚಿಸಿ, ಸಾಯಂಕಾಲದಲ್ಲಿ ಶಿವನಿಗೆ ನಿವೇದಿಸಿದ ಪಕ್ವಾನ್ನವನ್ನು ಪತ್ನಿಯೊಂದಿಗೆ ಭುಜಿಸಿ ಸಂತೋಷವನ್ನೈದಿದನು. ರಾಜನೂ ಸಹ ಬ್ರಹ್ಮನಿಂದಲೂ ಮತ್ತು ಬ್ರಾಹ್ಮಣ ಶ್ರೇಷ್ಠರಿಂದಲೂ ಕೂಡಿದವನಾಗಿ ಶಿವನೈವೇದ್ಯವನ್ನು ಭುಜಿಸಿ ಪರಮ ಸಂತೋಷವನ್ನು ಹೊಂದಿದನು. ॥೭೭॥

ವಿವಾಹಕಾಲದಲ್ಲಿ, ಆ ರಾಜನು, ಪಿತಾಮಹನಾದ ಬ್ರಹ್ಮನನ್ನು ಅಮೂಲ್ಯವಾದ ರತ್ನಗಳಿಂದಲೂ ಮತ್ತು ದಿವ್ಯವಾದ ವಸ್ತ್ರಗಳಿಂದಲೂ ಉಪಚರಿಸಿ, ಬಳಿಕ, ಶಿವಭಕ್ತಾಗ್ರೇಸರರಾದ ಶಾಂಭವರನ್ನು ವಿಧಿವತ್ತಾಗಿ ಪೂಜಿಸಿ, ಅವರಿಗೆ ರತ್ನಗಳನ್ನು ಮತ್ತು ವಸ್ತ್ರಗಳನ್ನು ಕೊಟ್ಟು ಸನ್ಮಾನಿಸಿದನು. ॥೭೮॥

ಚತುರ್ಥದಿನಪರ್ಯಂತಮೇವಮುತ್ಸವಸಂಯುತಃ ।
ಯಯೌ ವಿಧಿರ್ಬ್ರಹ್ಮಲೋಕಂ ನಿವೇದ್ಯ ಸ ಮಹೀಪತಿಂ ॥೭೯॥

ರಾಜಾಪಿ ಪಾಣಿಗ್ರಹಣೋತ್ತರಂ ಮುಹುಃ
ಸ್ವಾನಂದಮಾತ್ರಾಭಿನಯೈರ್ವಿನೋದಂ ।
ಉತ್ಪಾದಯನ್ನೇವ ನಿನಾಯ ಕಾಲಂ
ಸ್ವಾಭೀಷ್ಟಸಿದ್ಧ್ಯಾ ಖಲು ಹರ್ಷವರ್ಷಃ

ಸಾ ರಾಜ್ಞೀ ಮಣಿಮಂಟಪಾಂತರಗತೇ ಮಂಚೇ ವಿಪಂಚೀಯುತೇ
ಯುಕ್ತೇ ಪಂಚಶರಾತಿಸುಂದರಶರೈಃ ಕಂದಾದಿಭಿರ್ಭೂರಿ ಯಾ ।
ಸಂವಿಷ್ಟೌ ನವದಂಪತೀ ಮನಸಿಜಕ್ರೀಡಾವಿನೋದೋತ್ಸವೇ
ದೃಷ್ಟ್ವಾ ಸ್ಮೇರಮುಖಾಗತಾ ಗತಮತಿಂ ಮಂದಾಂ ಚಕಾರಾದರಾತ್ ॥೮೧॥

ತಯೋಸ್ತು ತಾವನ್ಮದನೋತ್ಸವೋಽಪಿ
ವೃತ್ತಃ ಸ್ಮರಾರಿಸ್ಮರಣೈರಪಾರೈಃ ।

ಈ ರೀತಿಯಲ್ಲಿ ಬ್ರಹ್ಮನು ನಾಲ್ಕು ದಿವಸಗಳವರೆಗೂ ಇಲ್ಲಿಯೇ ವಾಸವಾಗಿದ್ದು ಸಂತೋಷಚಿತ್ತನಾಗಿ ಬಳಿಕ, ರಾಜನ ಅನುಮತಿಯನ್ನು ಪಡೆದು ಬ್ರಹ್ಮಲೋಕವನ್ನು ಕುರಿತು ತೆರಳಿದನು. ॥೭೯॥

ರಾಜನೂ ಸಹ ವಿವಾಹ ಕಾರ್ಯವು ಸಾಂಗವಾಗಿ ನೆರವೇರಿದ ಬಳಿಕ, ತನಗುಂಟಾದ ಸುಖಾತಿಶಯದಿಂದ ವಿಜಾತೀಯ ಆನಂದವನ್ನು ವ್ಯಕ್ತಪಡಿಸುತ್ತಾ ಕಾಲವನ್ನು ಕಳೆದನು. ಲೋಕದಲ್ಲಿ ಜನರಿಗೆ ತಮ್ಮ ಮನೋರಥವು ಈಡೇರಿದ ಮೇಲೆ ನಿರತಿಶಯವಾದ ಆನಂದವುಂಟಾಗುವುದಲ್ಲವೇ ! ॥೮೦॥

ಅಯೋನಿಜೆಯಾದ ವಧುವು ಒಂದು ದಿನ ಮಂಚದಮೇಲೆ ವೀಣೆ ಹಿಡಿದು ಗಾನಮಾಡುತ್ತಿರಲು, ಅಲ್ಲಿಯೇ ಕುಳಿತಿದ್ದ ಪತಿಯೂ ಸಹ ಇದನ್ನು ನೋಡಿ, ಕಾಮಬಾಣಪೀಡಿತನಾಗಿ, ನೂತನ ದಂಪತಿಗಳೆನಿಸಿದ ಅವರಿಬ್ಬರೂ ಸುರತಕ್ರೀಡಾದಿಗಳನ್ನು ಅನುಭವಿಸಿದರು. ಕ್ರೀಡಾನುಭವದಿಂದಲೇ ತಮ್ಮ ಕಾಮಪಿಪಾಸೆಯನ್ನು ಕಮ್ಮಿ ಮಾಡಿಕೊಂಡರು ಎಂಬುದನ್ನು ಕೇಳಿ ರಾಣಿಯೂ ಸಂತುಷ್ಟಳಾದಳು. ॥೮೧॥

ಆ ನೂತನ ದಂಪತಿಗಳು ಬಾರಿಬಾರಿಗೂ ಮನ್ಮಥಾರಿಯಾದ ಶಂಕರನನ್ನೇ ನೆನೆಸುತ್ತಾ, ಅನಿರ್ವಚನೀಯವಾದ ರತಿಸೌಖ್ಯವನ್ನು ಅನುಭವಿಸಿದರು. ಅವರು

ತಾಭ್ಯಾಂ ಮಹೇಶಾಯ ಸಮರ್ಪಿತೋಽಪಿ
ಭಕ್ತ್ಯಾ ಪರಂ ಮಾರಮಹೋತ್ಸವೋಽಪಿ ॥೮೨॥

ತತಃ ಪರಂ ಪುಷ್ಟಿರಿಯಂ ಪ್ರಕೃಷ್ಟಾ
ಜಾತಾ ಪ್ರವೃದ್ಧಾ ಮದನೋತ್ಸವಸ್ಯ ।
ತತಃ ಪರಂ ಸಾಪಿ ಬಭಾರ ಗರ್ಭಂ
ಶನೈಃ ಶನೈಃ ವೃದ್ಧಿಮವಾಪ ಗರ್ಭಃ ॥೮೩॥

ಸಾ ಗರ್ಭಚಿಹ್ನೈಃ ಪರಿಚಿಹ್ನಿತಾಭೂತ್
ಲಜ್ಜಾಮವಾಪ ಸ್ಮರಚೇಷ್ಟಯಾಪಿ
ತತಃ ಪರಂ ಸಾ ಸುಷುವೇ ಕುಮಾರಂ
ಕುಮಾರಕಲ್ಪಂ ಸುಮುಹೂರ್ತಯೋಗೇ ॥೮೪॥

ಸ ಜಾತ ಏವಾಶು ಮಹೇಶ ಶಂಭೋ
ಪಾಹೀತಿ ನತ್ವಾ ಗಿರಿಶಾಯ ಭಕ್ತ್ಯಾ ।

ಅಂತಹ ಮನ್ಮಥೋತ್ಸವವನ್ನೂ ಸಹ ಅಚಲವಾದ ಭಕ್ತಿಯಿಂದ ಈಶ್ವರನಿಗೆ ಅರ್ಪಿಸಿದರು. ॥೮೨॥

ಮನ್ಮಥನ ಉತ್ಸವದಂತಿರುವ ಅವರ ರತಿಕ್ರೀಡೆಯು ಬರುಬರುತ್ತಾ ಅತ್ಯಂತವಾಗಿ ವೃದ್ಧಿಯನ್ನೈದಿತು. ತರುವಾಯ ಕೆಲವು ಕಾಲವು ಅತಿಕ್ರಮಿಸಲು, ಆ ತರುಣಿಯು ಗರ್ಭವತಿಯಾದಳು. ಹೀಗೆಯೇ ಕೆಲವು ಕಾಲ ಕಳೆಯುತ್ತಾ ಮೆಲ್ಲ ಮೆಲ್ಲನೆ ಆ ಗರ್ಭವು ಅಭಿವೃದ್ಧಿಯನ್ನು ಹೊಂದಿತು. ॥೮೩॥

ಸಂಪೂರ್ಣವಾದ ಗರ್ಭಚಿಹ್ನೆಗಳಿಂದ ಕೂಡಿದ ಅವಳು ಪತಿಯೊಂದಿಗೆ ಕಾಮ ಚೇಷ್ಟೆಗಳನ್ನು ಅಭಿನಯಿಸಲೂ ನಾಚಿಕೆಗೊಂಡವಳಾದಳು. ಹೀಗೆಯೇ ನವಮಾಸಗಳು ತುಂಬಲು ಆ ತರುಣಿಯು ಒಂದಾನೊಂದು ಸುಮುಹೂರ್ತದಲ್ಲಿ ಕುಮಾರ ಸ್ವಾಮಿಯಂತೆ (ಷಣ್ಮುಖನಂತೆ) ಪರಾಕ್ರಮಿಯೂ, ತೇಜಸ್ವಿಯೂ ಆದ ಒಬ್ಬಾನೊಬ್ಬ ಪುತ್ರನನ್ನು ಪ್ರಸುವಿಸಿದಳು. ॥೮೪॥

ಆ ಶಿಶುವು ಜನಿಸಿದ ಮರುಕ್ಷಣದಲ್ಲಿಯೇ "ಓ, ಮಹೇಶನೇ! ಓ, ಶಂಭುವೇ! ನನ್ನನ್ನು ರಕ್ಷಿಸು" ಎಂದು ಶಿವನಾಮಗಳನ್ನೇ ಉಚ್ಚರಿಸುತ್ತಾ,

ಚಕಾರ ಪೂಜಾಂ ವಚನೈರಪಾರೈಃ
ಮಹೇಶ್ವರಾಖ್ಯಾನ್ವಯಪಾವನೈಸ್ತೈಃ ॥೮೫॥

ಶಿವನಾಮಸುಧಾಪಾನಪೀನಮಾಲೋಕ್ಯ ಬಾಲಕಂ ।
ತತ್ಪಿತಾತೀವ ಸಂತುಷ್ಟಃ ಸ ರಾಜಾಪಿ ವಿಶೇಷತಃ ॥೮೬॥

ಸಾ ರಾಜ್ಞೀ ತೋಷಮಾಪನ್ನಾ ಸಖಿಭಿಃ ಸಹ ಮಂತ್ರಿಣಃ ।
ನಗರಸ್ಥಾಶ್ಚ ಸರ್ವೇಽಪಿ ಸಂತೋಷಂ ಪರಮಂ ಯಯುಃ ॥೮೭॥

ಜಾತಕರ್ಮಾದಿಕಂ ಕೃತ್ವಾ ಬ್ರಾಹ್ಮಣೇಭ್ಯೋ ಮಹೋತ್ಸವೈಃ ।
ದದೌ ರತ್ನಾನ್ಯಪಾರಾಣಿ ಗಾಸ್ತುರಂಗಾಶ್ಚ ದಂತಿನಃ ॥೮೮॥

ಏಕಾದಶೇಽಹ್ನಿ ಸಂಪ್ರಾಪ್ತೇ ನಾಮಕರ್ಮ ಚಕಾರ ಸಃ ।
ಪುಣ್ಯಾಹವಾಚನಂ ಕೃತ್ವಾ ಭೋಜಯಿತ್ವಾ ದ್ವಿಜೋತ್ತಮಾನ್ ॥೮೯॥

ಭಕ್ತಿಯಿಂದ ಶಿವನಿಗೆ ನಮಸ್ಕರಿಸಿ, ಅನೇಕವಾದ ಶಿವನಾಮಗಳಿಂದ ಸ್ತುತಿಸಿತು. ॥೮೫॥

ಶಿವನಾಮಾಮೃತವನ್ನು ಪಾನಮಾಡಿ ತೃಪ್ತಿಯನ್ನು ಹೊಂದಿದ ಆ ಬಾಲಕನನ್ನು ನೋಡಿ, ತಂದೆಯು ಅತ್ಯಾನಂದವನ್ನು ಹೊಂದಿದನು. ರಾಜನೂ ಸಹ ಆ ಬಾಲಕನನ್ನು ನೋಡಿ ಆಶ್ಚರ್ಯಗೊಂಡನು. ॥೮೬॥

ರಾಜಪತ್ನಿಯು ತನ್ನ ಸಖಿಯರೊಂದಿಗೆ ಅತ್ಯಂತ ಸಂತೋಷವನ್ನು ಹೊಂದಿದಳು. ಇದಲ್ಲದೇ ಮಂತ್ರಿಗಳೂ ಮತ್ತು ಪುರಜನರೂ ಸಹ ಇದರಿಂದ ಆನಂದಭರಿತರಾದರು. ॥೮೭॥

ರಾಜನು ಶಿಶುವಿಗೆ ಜಾತಕರ್ಮವೇ ಮುಂತಾದ ಸಂಸ್ಕಾರಗಳನ್ನು ನಡೆಸಿ, ಬ್ರಾಹ್ಮಣರಿಗೆ ದಿವ್ಯವಾದ ರತ್ನಗಳನ್ನೂ ಹಸುಗಳನ್ನೂ, ಆನೆ ಕುದುರೆಗಳನ್ನೂ ದಾನಮಾಡಿದನು. ॥೮೮॥

ಹನ್ನೆರಡನೆಯ ದಿವಸವು ಬರಲು ತಂದೆಯು ಶಿಶುವಿಗೆ ನಾಮಕರ್ಮವನ್ನು ನಡೆಸಿದನು. ಮೊಟ್ಟಮೊದಲು ಬ್ರಾಹ್ಮಣರಿಂದ ಪುಣ್ಯಾಹವಾಚನವನ್ನು ನಡೆಸಿ ಬಳಿಕ ಅವರಿಗೆ ಭೋಜನವನ್ನೂ ಮಾಡಿಸಿದನು. ॥೮೯॥

ತದಾನೀಮಾಗತೋ ಬ್ರಹ್ಮಾ ತದುತ್ಸಾಹನಿಲೋಕನಂ ।
ಕರ್ತುಮೇವಾಗತಂ ವೀಕ್ಷ್ಯ ಪೂಜಯಾಮಾಸ ಭೂಪತಿಃ ॥೯೦॥

ತತಃ ಪರಂ ಸ ರಾಜಾಪಿ ತನ್ನಾಮಕರಣೋತ್ಸವೇ ।
ತೇನ ನಾಮ್ನಾ ಚಿಹ್ನಿತಃ ಸ್ಯಾದಯಮಿತ್ಯಾಹ ತಂ ವಿಧಿಂ ॥೯೧॥

॥ ಬ್ರಹ್ಮೋವಾಚ ॥

ಮಮ ನಾಮೇತಿ ವೇದೇನ ದ್ವಿಜಾನಾಂ ನಾಮ ಬೋಧಿತಂ ।
ತೇನೈವ ನಾಮ್ನಾ ಬಾಲೋಽಯಂ ಚಿಹ್ನಿತೋಽಸ್ತು ಮಹೀಪತೇ ॥೯೨॥

ರುದ್ರೋಽಗ್ನಿರಿತಿ ವೇದೇನ ರುದ್ರಶಬ್ದೋಽಗ್ನಿಶಬ್ದವತ್ ।
ಶಿವಬೋಧಕ ಏವೇತಿ ಶಿವಶಬ್ದಾನ್ವಿತಃ ಸ್ವಯಂ ॥೯೩॥

ಆ ಸಮಯದಲ್ಲಿ ಅವರಿಗುಂಟಾದ ಆ ಉತ್ಸಾಹವನ್ನು ನೋಡಬೇಕೆಂಬ ಕುತೂಹಲದಿಂದ ಬ್ರಹ್ಮನು ಅಲ್ಲಿಗೆ ಬಂದನು. ಅಭ್ಯಾಗತನಾದ ಬ್ರಹ್ಮನನ್ನು ನೋಡಿ ರಾಜನು ಅರ್ಘ್ಯಪಾದ್ಯಾದಿಗಳಿಂದ ಸತ್ಕರಿಸಿದನು. ||೯೦||

ತರುವಾಯ ರಾಜನು ಶಿಶುವಿನ ನಾಮಕರಣದ ಸಮಯದಲ್ಲಿ ಬ್ರಹ್ಮನನ್ನು ಕುರಿತು "ಈ ಶಿಶುವಿಗೆ ಯಾವ ಹೆಸರನ್ನು ಇಡುವುದು ಉಚಿತ ?" ಎಂದು ಕೇಳಲು, ||೯೧||

ಅವನನ್ನು ಕುರಿತು ಬ್ರಹ್ಮನು ಹೀಗೆಂದು ಹೇಳಿದನು—ಎಲೈ ರಾಜನೇ, [1] ವೇದಸ್ವರೂಪಿಯಾದ ಶಿವನು "ಬ್ರಾಹ್ಮಣರ ಯಾವ ನಾಮಧೇಯಗಳಿದ್ದರೂ ಅವೆಲ್ಲವೂ ಶಿವನಾಮದಿಂದ ಕೂಡಿಯೇ ಇರುವುವು" ಎಂದು ಹೇಳಿರುವನು. ಆದುದರಿಂದ ಈ ಶಿಶುವಿಗೆ ಶಿವನೆಂಬ ಅರ್ಥವನ್ನು ಕೊಡುವ ಹೆಸರನ್ನು ಇಡುವವನಾಗು. ||೯೨||

ಸಕಲ ನಾಮಧೇಯಗಳೂ, ಶಿವನಾಮಧೇಯದಿಂದಲೇ ಹೇಗೆ ಕೂಡಿರುವುವು, ಎಂಬುದನ್ನು ನಿನಗೆ ತಿಳಿಸುವೆನು. ಅದನ್ನು ಕೇಳು. "ರುದ್ರೋಽಗ್ನಿಃ" ಎಂಬ ಈ ವೇದವಾಕ್ಯದಲ್ಲಿ ಅಗ್ನಿಶಬ್ದವು ಶಿವನನ್ನು ಬೋಧಿಸುತ್ತದೆ, ಎಂಬ ಅಂಶವು ತಿಳಿದುಬರುವುದು. ಆದುದರಿಂದ ಅಗ್ನಿ ಶಬ್ದವು ಹೇಗೆ ಶಿವಶಬ್ದದಿಂದ ಕೂಡಿರು

---

1 "ವೇದಃ ಶಿವಃ ಶಿವೋ ವೇದಃ" ಎಂದು ಪುರಾಣದಲ್ಲಿ ಹೇಳಲ್ಪಟ್ಟಿರುತ್ತದೆ.

ಅಗ್ನಿಶಬ್ದಃ ಶಿವಂ ಪ್ರಾಹ ವೇದೇಷು ಬಹುಧಾ ತತಃ ।
ಶಿವಃ ಶಿವಂಕರತ್ವೇನ ಸೋಽಯಮಿತ್ಯುಚ್ಯತಾಂ ಸದಾ ॥೯೪॥

ಏವಂ ಕುಮಾರಾಃ ಶತಶೋ ಭವಿಷ್ಯಂತಿ ಶಿವಾಖ್ಯಯಾ ।
ಚಿಹ್ನಿತಾಶ್ಚ ಭವಿಷ್ಯಂತಿ ಶೂರಾಃ ಶಾಂಭವಪುಂಗವಾಃ ॥೯೫॥

ಇತಿ ತದ್ವಚನಂ ಶ್ರುತ್ವಾ ಶಿವನಾಮಾನ್ವಿತಾನ್ ಸುತಾನ್ ।
ಚಕಾರ ಶಿವಭಕ್ತಾರ್ಯೋಽ ಶಿವಭಕ್ತಾರ್ಯಸಂಜ್ಞಯಾ ॥೯೬॥

ತತಃ ಪರಂ ತಮುತ್ಸಾಹಂ ದೃಷ್ಟ್ವಾ ಧರ್ಮಾವಬೋಧಸಂ ।
ಕೃತ್ವಾ ಯಯೌ ಬ್ರಹ್ಮಲೋಕಂ ಬ್ರಹ್ಮಾ ಸಂತುಷ್ಟಮಾನಸಃ ॥೯೭॥

ವುದೋ, ಅದರಂತೆ ರುದ್ರಶಬ್ದವೂ ಸಹ ಶಿವನಾಮದಿಂದಲೇ ಯುಕ್ತವಾಗಿರುವುದು. ॥೯೩॥

ವೇದದಲ್ಲಿ ಅನೇಕ ಕಡೆಗಳಲ್ಲಿ, ಅಗ್ನಿಶಬ್ದವು ಶಿವನೆಂಬ ಅರ್ಥವನ್ನು ಬೋಧಿಸುತ್ತಿರುವುದು. ಈ ಶಿಶುವೂ ಸಹ ದೊಡ್ಡದಾದ ಬಳಿಕ, ಲೋಕಕ್ಕೆಕಲ್ಯಾಣವನ್ನುಂಟು ಮಾಡುವುದರಿಂದ, ಇವನನ್ನು ಶಿವ ಎಂಬ ನಾಮಧೇಯದಿಂದಲೇ ಸಂಬೋಧಿಸುವುದು ಶ್ರೇಯಸ್ಕರವಾಗಿರುವುದು. ॥೯೪॥

ಎಲೈ ಭೂಪತಿಯೇ, ಈ ಕುಮಾರನಲ್ಲದೆ ಇನ್ನೂ ಅನೇಕ ಜನ ಪುತ್ರರು ಸೌಭಾಗ್ಯವತಿಯಾದ ಇವಳಲ್ಲಿ ಜನಿಸುವರು. ಅವರೆಲ್ಲರೂ ಶಿವನಾಮಧೇಯದಿಂದಲೇ ಲಾಂಛಿತರಾಗುವರಲ್ಲದೇ, ಶಿವಭಕ್ತಾಗ್ರೇಸರರಾಗಿಯೂ ಮತ್ತು ಶೂರರಾಗಿಯೂ ಬಾಳಿ ಪ್ರಸಿದ್ಧಿಯನ್ನು ಹೊಂದುವರು. ॥೯೫॥

ಬ್ರಹ್ಮನ ಆ ಮಾತನ್ನು ಕೇಳಿ ರಾಜನು ಶಿಶುವಿಗೆ ಶಿವನೆಂಬ ನಾಮಧೇಯವನ್ನಿಟ್ಟನು. ಇದಲ್ಲದೇ ಇನ್ನು ಮುಂದೆ ಇವಳಲ್ಲಿ ಜನಿಸುವ ಪುತ್ರರನ್ನೆಲ್ಲಾ ಶಿವನಾಮದಿಂದ ಕೂಡಿರುವ ಸಂಜ್ಞೆಯಿಂದಲೇ ಸಂಬೋಧಿಸುವೆನೆಂದು ಸಂಕಲ್ಪಿಸಿದನು. ॥೯೬॥

ಬಳಿಕ ಬ್ರಹ್ಮನು ರಾಜನ ಆ ಉತ್ಸಾಹವನ್ನು ನೋಡಿ, ಅವನಿಗೆ ಯೋಗ್ಯವಾದ ಧರ್ಮೋಪದೇಶವನ್ನು ಮಾಡಿ ಸಂತೋಷದಿಂದ ಬ್ರಹ್ಮಲೋಕವನ್ನು ಕುರಿತು ತೆರಳಿದನು. ॥೯೭॥

ಸ ತಾವದ್ವವೃಧೇ ಬಾಲಃ ಶಿವಪೂಜಾಪರಾಯಣಃ ।
ತಂ ದೃಷ್ಟ್ವಾ ಪರಮಂ ಪ್ರಾಪ ಸುಖಂ ತಜ್ಜನಕೋ ಮುಹುಃ ॥೯೮॥

ಶಿವಾಯಾಹಿ ಪಶ್ಯೇದಮೀಶಾನಲಿಂಗಂ
ಶಿವಾರ್ಘ್ಯಂ ಪ್ರಯಚ್ಛಾತ್ರ ಬಿಲ್ವಂ ಪ್ರಯಚ್ಛ ।
ಶಿವ ತ್ವಂ ಶಿವಂ ಪೀಕ್ಷ್ಯ ಹೃಷ್ಟಃ ಶಿವತ್ವಂ
ಭಜಸ್ವೇತಿ ಮಾತಾ ಪಿತಾಪ್ಯಾಹ ರಾಜಾ ॥೯೯॥

ಶಿವೋ ಭೋಜನೀಯಃ ಪ್ರದೇಯಂ ಚ ವಸ್ತ್ರಂ
ಶಿವಾಯಾನಘಂ ಚಂದನಂ ರತ್ನಹಾರಂ ।
ಇತಿ ಪ್ರೀತಿಪೂರ್ವಂ ಸ ತನ್ನಾಮ ನಿತ್ಯಂ
ಗೃಹೀತ್ವಾ ಶಿವಾರಾಧನಾಸಕ್ತಚಿತ್ತಃ ॥೧೦೦॥

ಇತ್ತ ಶಿವಪೂಜಾಸಕ್ತನಾದ ಈ ಬಾಲಕನು ಕೆಲವು ವರ್ಷಗಳು ಕಳೆಯಲು ಪ್ರಾಪ್ತವಯಸ್ಕನಾದನು. ಬಾಲಕನ ತಂದೆಯು ಅವನನ್ನು ನೋಡುತ್ತಾ, ಸುಖಿಯಾಗಿದ್ದನು. ||೯೮||

ತಂದೆಯು ಈಶ್ವರನನ್ನು ಪೂಜಿಸುವ ಸಮಯದಲ್ಲಿ ಮಗನಾದ ಶಿವನನ್ನು ಕುರಿತು ಹೀಗೆಂದು ಹೇಳುವನು—ಶಿವ! ಇಗೋ ಇತ್ತ ಬಾ! ಈ ಶಿವಲಿಂಗವನ್ನು ನೋಡು! ಶಿವನನ್ನು ಅರ್ಘ್ಯಪಾದ್ಯಾದಿಗಳಿಂದ ಸತ್ಕರಿಸು! ಶಿವನೇ, ಬಿಲ್ವಪತ್ರೆಯಿಂದ ಅವನನ್ನು ಪೂಜಿಸು ಎಂದು ಹೇಳುವನು. ಇದಲ್ಲದೆ, ಬಾಲಕನ ತಾಯಿ ತಂದೆಗಳೂ ಮತ್ತು ಮಾತಾಮಹನಾದ (ತಾತನಾದ) ರಾಜನೂ ಶಿವನನ್ನು ಕುರಿತು "ಶಿವನೇ" "ನೀನು ಶಿವಸ್ವರೂಪವನ್ನೇ ಹೊಂದುವವನಾಗು" ಎಂದು ಅವನನ್ನು ಹರಸುವರು. ||೯೯||

ಬಾಲಕನ ತಂದೆಯು ಪ್ರತಿ ನಿತ್ಯವೂ ಶಿವನಿಗೆ ಭೋಜನವನ್ನು ಮಾಡಿಸಬೇಕು. ಶಿವನಿಗೆ ವಸ್ತ್ರಗಳನ್ನು ಕೊಡಬೇಕು. ಶಿವನಿಗೆ ಪರಿಮಳಯುಕ್ತವಾದ ಗಂಧವನ್ನೂ ಮತ್ತು ರತ್ನಮಾಲಿಕೆಯನ್ನೂ ಅರ್ಪಿಸಬೇಕು ಎಂದು ಹೇಳುತ್ತಾ, ಪ್ರೀತಿಪೂರ್ವಕವಾಗಿ ಶಿವನಾಮಧೇಯವನ್ನೇ ಉಚ್ಚರಿಸುತ್ತಾ, ಶಿವಪೂಜೆಯಲ್ಲಿಯೇ ಆಸಕ್ತನಾಗಿರುತ್ತಿದ್ದನು. ||೧೦೦||

ತತಃ ಪರಮಭೂತ್ಪುತ್ರಃ ಪುನರನ್ಯೋ ಮನೋಹರಃ ।
ಸ ಶಂಕರ ಇತಿ ಖ್ಯಾತಃ ಶಂಕರತ್ವೇನ ಶಂಕರಃ ॥೧೦೧॥

ಅನ್ಯೋಽಪ್ಯಭೂತ್ಸುತಸ್ತಸ್ಯ ಸ ಮಹಾದೇವಸಂಜ್ಞಯಾ ।
ಪ್ರಸಿದ್ಧಸ್ತೇನ ಪುತ್ರೇಣ ಸುಖಮಾಪ ಮಹೀಪತಿಃ ॥೧೦೨॥

ತದನ್ಯೋಽಪ್ಯಭವತ್ಪುತ್ರೋ ಸ ಮಹಾರುದ್ರಸಂಜ್ಞಯಾ ।
ಖ್ಯಾತಸ್ತೇನ ಸುಖಂ ಪ್ರಾಪ ಜನಕೋ ಜನನೀ ಚ ಸಾ ॥೧೦೩॥

ಪುನರಪ್ಯಭವತ್ಪುತ್ರಃ ಸ ಮಹೇಶ್ವರಸಂಜ್ಞಯಾ ।
ಖ್ಯಾತಃ ಶಿವಾಚಾರರತಃ ಶಿವಪೂಜಕಪೂಜಕಃ ॥೧೦೪॥

ಏವಮಷ್ಟೋತ್ತರಶತಂ ಪುತ್ರಾಸ್ತಸ್ಯ ಮನೋಹರಾಃ ।
ಶಿವಾರ್ಚನಪರಾಃ ಸರ್ವೇ ಸರ್ವೇ ಸುಂದರವಿಗ್ರಹಾಃ ॥೧೦೫॥

ಕೆಲವು ವರ್ಷಗಳು ಕಳೆದ ಬಳಿಕ ಶಿವಭಕ್ತೆಯಾದ ಅವಳಲ್ಲಿ ಮತ್ತೂ ಸುಂದರನಾದ ಪುತ್ರನೊಬ್ಬನು ಜನಿಸಿದನು. ಅವನಿಗೆ ಶಂಕರನೆಂದು ನಾಮಕರಣ ಮಾಡಿದರು. ಅವನೂ ಸಹ ಮುಂದೆ ಲೋಕ ಕಲ್ಯಾಣವನ್ನು ಮಾಡಿ, ತನ್ನ ಹೆಸರನ್ನು ಅನ್ವರ್ಥಗೊಳಿಸಿದನು. ||೧೦೧||

ತರುವಾಯ, ಶಿವಭಕ್ತನಾದ ಅವನಿಗೆ ಮತ್ತೊಬ್ಬ ಪುತ್ರನು ಹುಟ್ಟಿದನು. ಅವನು, ಮಹಾದೇವನೆಂಬ ಹೆಸರಿನಿಂದ ಪ್ರಸಿದ್ಧನಾದನು. ಆ ಪುತ್ರನಿಂದ ರಾಜನು ಅತ್ಯಂತ ಸುಖವನ್ನು ಪಡೆದನು. ||೧೦೨||

ಹೀಗೆಯೇ ಮತ್ತೆ ಕೆಲವು ವರ್ಷಗಳನ್ನು ಕಳೆಯಲು, ಶಿವಭಕ್ತಾಗ್ರೇಸರನಾದ ಅವನಿಗೆ ಇನ್ನೊಬ್ಬ ಮಗನು ಜನಿಸಿದನು. ಆ ಪುತ್ರನು ಮಹಾರುದ್ರನೆಂಬ ಹೆಸರಿನಿಂದ ಪ್ರಸಿದ್ಧಿಯನ್ನು ಹೊಂದಿದನು. ಅವನ ಜನನದಿಂದ ತಾಯಿತಂದೆಗಳು ಅತ್ಯಂತ ಸಂತೋಷಭರಿತರಾದರು. ||೧೦೩||

ಮತ್ತೆರಡು ವರ್ಷಗಳು ಕಳೆಯಲು, ಇನ್ನೂ ಓರ್ವ ಪುತ್ರನು ಜನಿಸಿದನು. ಅವನೂ ಸಹ, ಮಹೇಶ್ವರನೆಂಬ ಹೆಸರಿಂದಲೇ ಪ್ರಸಿದ್ಧನಾಗಿ, ಶಿವಭಕ್ತರನ್ನು ಆರಾಧಿಸುತ್ತಾ ಸದಾ, ಶಿವಪ್ರಿಯವಾದ ಅನುಷ್ಠಾನಗಳಲ್ಲೇ ತತ್ಪರನಾದನು. ||೧೦೪||

ಈ ರೀತಿಯಲ್ಲಿ ಆ ಶಿವಭಕ್ತಾಗ್ರಣಿಗೆ ನೂರೆಂಟು ಪುತ್ರರು ಜನಿಸಿದರು. ಅವರೆಲ್ಲರೂ ಅತಿಸುಂದರರಾಗಿಯೂ ಶಿವಪೂಜಾಸಕ್ತರಾಗಿಯೂ ಇದ್ದರು. ||೧೦೫||

ತೇ ಸರ್ವೇಽಸಕೃದೇವೇಶಂ ಶಿವಾರಾಧನತತ್ಪರಾಃ ।
ಹೃಷ್ಟಾಃ ಪ್ರಕೃಷ್ಟಾಃ ಸಂತುಷ್ಟಾಃ ಪಿತ್ರೋಃ ಸಂತೋಷವರ್ಧಕಾಃ ॥೧೦೬॥

ತಾನ್ ಕುಮಾರಾನ್ ವಿಲೋಕ್ಯೈವ ಜನಕೌ ಹೃಷ್ಟಮಾನಸೌ ।
ತೌ ಶಿವಾರಾಧನೋದ್ಯುಕ್ತಾವಹರ್ನಿಶಮನುಕ್ಷಣಂ ॥೧೦೭॥

ರೇವಾಲಿಂಗಾನಿ ತುಂಗಾನಿ ತಾಭ್ಯಾಂ ಪ್ರತ್ಯಹಮಾದರಾತ್ ।
ಆಸಾಯಮರ್ಚಿತಾನ್ಯೇವ ಬಿಲ್ವಪತ್ರಾದಿಸಾಧನೈಃ ॥೧೦೮॥

ಪೂಜಾಂ ಪ್ರದೋಷಕಾಲೀನಾಂ ಸಮಾಪ್ಯ ಪ್ರತ್ಯಹಂ ಮುದಾ ।
ಭುಕ್ತಃ ಶಿವೋಪಹಾರಸ್ತು ಶಿವಚಿಂತನಪೂರ್ವಕಂ ॥೧೦೯॥

ತಯೋರಹರ್ನಿಶಂ ನಿತ್ಯಂ ಕೃತ್ಯಂ ಶಂಕರಪೂಜನಂ ।
ತದ್ವಿಹಾಯ ಕ್ಷಣಂ ವಾಪಿ ತಾಭ್ಯಾಂ ನ ಸ್ಥಿತಮೇವ ಹಿ ॥೧೧೦॥

ತಾಭ್ಯಾಂ ಶಿವಪ್ರಸಾದೇನ ವಿಶ್ವೇಶ್ವರಸಮರ್ಚನಂ ।
ಪ್ರತ್ಯಹಂ ಕ್ರಿಯತೇ ಕಾಶ್ಯಾಂ ವೀರೇಶಸ್ಯಾಪಿ ಪೂಜನಂ ॥೧೧೧॥

ಪುತ್ರರೆಲ್ಲರೂ ಅನವರತವೂ ಶಿವಪೂಜೆಯಲ್ಲಿಯೇ ಆಸಕ್ತರಾಗಿ ಸದಾ ಸಂತೋಷದಿಂದಿರುತ್ತಾ, ತಂದೆತಾಯಿಗಳ ಮನಸ್ಸನ್ನೂ ಸಂತೋಷಪಡಿಸಿದರು. ||೧೦೬||

ಪುತ್ರರ ದರ್ಶನ ಮಾತ್ರದಿಂದಲೇ ತಾಯಿತಂದೆಗಳು, ಆನಂದತುಂದಿಲರಾಗಿ ಹಗಲು ರಾತ್ರಿ, ಶಿವನನ್ನು ಪೂಜಿಸುವುದರಲ್ಲೇ ನಿರತರಾದರು. ||೧೦೭||

ಆ ದಂಪತಿಗಳು ಪ್ರತಿನಿತ್ಯ ಬೆಳಗಿನಿಂದ ಸಾಯಂಕಾಲದವರೆಗೂ ಬಿಲ್ವಪತ್ರೆಯೇ ಮೊದಲಾದ ಪೂಜಾ ಸಾಮಗ್ರಿಗಳಿಂದ, ರೇವಾನದಿಯ ದಡದಲ್ಲಿರುವ ಉನ್ನತವಾದ ಶಿವಲಿಂಗಗಳನ್ನು ಪೂಜಿಸುತ್ತಿದ್ದರು. ||೧೦೮||

ಅವರು ಪ್ರದೋಷಕಾಲದಲ್ಲಿ ಶಿವಪೂಜೆಯನ್ನು ಮುಗಿಸಿ ಬಳಿಕ, ಶಿವಸ್ಮರಣೆಯನ್ನು ಮಾಡುತ್ತಾ, ಪ್ರೀತಿಯಿಂದ ಶಿವನೈವೇದ್ಯವನ್ನು ಭಕ್ಷಿಸುತ್ತಿದ್ದರು. ||೧೦೯||

ಹಗಲಿರುಳು ಪ್ರತಿದಿನವೂ ಆ ಶಂಕರನನ್ನು ಪೂಜಿಸುವುದೇ ದಂಪತಿಗಳಾದ ಅವರ ನಿತ್ಯಕರ್ಮವಾಗಿದ್ದಿತು. ಅವರು ಕ್ಷಣಕಾಲವಾದರೂ ಶಿವಪೂಜೆಯನ್ನು ಬಿಟ್ಟಿರುತ್ತಿರಲಿಲ್ಲ. ||೧೧೦||

ಅವರು, ಕಾಶೀಕ್ಷೇತ್ರದಲ್ಲಿ ನೆಲಸಿದವರಾಗಿ ಪ್ರತಿದಿನವೂ ವಿಶ್ವೇಶ್ವರನನ್ನು ಪೂಜಿಸುವರಲ್ಲದೇ, ವೀರೇಶ್ವರಲಿಂಗವನ್ನೂ ವಿಶೇಷವಾಗಿ ಪೂಜಿಸುತ್ತಿದ್ದರು. ||೧೧೧||

ಪಂಚಕ್ರೋಶಸ್ಥಲಿಂಗಾನಿ ಪೂಜ್ಯಂತೇ ತೈರನೇಕಧಾ ।
ಕುಮಾರೈಃ ಸಹಿತೈಃ ಸರ್ವೈಃ ಶಿವಪೂಜಾಪರಾಯಣೈಃ ॥೧೧೨॥

ರಾತ್ರಿಃ ಶಿವಕಥಾಲಾಪೈಸ್ತಾಭ್ಯಾಂ ಸರ್ವಾಽಪಿ ನೀಯತೇ ।
ನ ಜಾತಾ ಸುಖಭೋಗೇಚ್ಛಾ ತಯೋಃ ಶಂಕರಪೂಜಯಾ ॥೧೧೩॥

ಸ ಭಸ್ಮೋದ್ಧೂಳಿತಾನ್ ದೃಷ್ಟ್ವಾ ರುದ್ರಾಕ್ಷಾವಲಯಾವೃತಾನ್ ।
ಶಿವಪೂಜನಸಂಸಕ್ತಾನವಾಪ ಪರಮಂ ಸುಖಂ ॥೧೧೪॥

ಸಾಪಿ ದೃಷ್ಟ್ವಾ ಶಿವಾಚಾರಪರಾಯಣಮನಾಮಯಂ ।
ಭರ್ತಾರಂ ಸುಖಸಂಪನ್ನಾ ಕುಮಾರಾನಪಿ ಶಾಂಕರಾನ್ ॥೧೧೫॥

ಚಂದ್ರಚೂಡ ಮಹಾದೇವ ಶಿವ ರುದ್ರ ಮಹೇಶ್ವರ ।
ಭವ ಶರ್ವ ವ್ಯೋಮಕೇಶ ತ್ರಿಪುರಾಂತಕ ಶಂಕರ ॥೧೧೬॥

ಶಿವಭಕ್ತಾಗ್ರೇಸರರಾದ ಆ ಪುತ್ರರೆಲ್ಲರೂ ಒಟ್ಟುಗೂಡಿ, ಕಾಶೀಕ್ಷೇತ್ರದಲ್ಲಿರುವ [1]ಪಂಚಕ್ರೋಶ ಕ್ಷೇತ್ರದಲ್ಲಿದ್ದ ಶಿವಲಿಂಗಗಳನ್ನೆಲ್ಲಾ ಪ್ರತಿದಿನವೂ ಪೂಜಿಸುತ್ತಿದ್ದರು. ॥೧೧೨॥

ದಂಪತಿಗಳು, ಶಿವಕಥಾಮೃತವನ್ನು ಕೇಳುತ್ತಾ ರಾತ್ರಿಯನ್ನೆಲ್ಲಾ ಸುಖವಾಗಿ ಕಳೆಯುವರು. ಶಿವಪೂಜೆಯಲ್ಲಿ ಆಸಕ್ತರಾದ ಅವರಿಗೆ, ಇತರ ಯಾವ ಸುಖಗಳಲ್ಲಿಯೂ ಅಪೇಕ್ಷೆಯಿರಲಿಲ್ಲ. ॥೧೧೩॥

ಕೈಗಳಲ್ಲಿ ರುದ್ರಾಕ್ಷಿಗಳ ಕಂಕಣವನ್ನು ಧರಿಸಿ, ಶರೀರದ ಆದ್ಯಂತವೂ, ಭಸ್ಮವನ್ನು ಲೇಪಿಸಿಕೊಂಡು ಶಿವಪೂಜೆಯಲ್ಲಿ ತತ್ಪರರಾದ ಮಕ್ಕಳನ್ನು ನೋಡಿ, ತಂದೆಯು ವರ್ಣಿಸಲಸಾಧ್ಯವಾದ ಆನಂದವನ್ನು ಹೊಂದುತ್ತಿದ್ದನು. ॥೧೧೪॥

ರಾಜಪುತ್ರಿಯೂ ಸಹ, ಶಿವನಿಗೆ ಹಿತಕರವಾದ ಅನುಷ್ಠಾನಗಳಲ್ಲಿ ಮಗ್ನನಾದ ತನ್ನ ಪತಿಯನ್ನೂ, ಮತ್ತು ಶಿವಭಕ್ತಾಗ್ರಣಿಗಳಾದ ತನ್ನ ಮಕ್ಕಳನ್ನೂ ನೋಡಿ ಪರಮಸಂತೋಷವನ್ನೈದಿದಳು. ॥೧೧೫॥

ತಾಯಿಯು ಮಕ್ಕಳನ್ನು, ಎಲೈ, ಚಂದ್ರಚೂಡನೇ! ಮಹಾದೇವ! ಶಿವ! ರುದ್ರ! ಮಹೇಶ್ವರ! ಭವ! ಶರ್ವ! ವ್ಯೋಮಕೇಶ! ತ್ರಿಪುರಾಂತಕ! ಶಂಕರ!

(ಮೂರು ಮೈಲಿಗಳ ದೂರಕ್ಕೆ ಬಂದು ಕ್ರೋಶವೆಂದು ಪ್ರಾಚೀನರ ಸಂಜ್ಞೆ)

ಆಯಾಹೀತಿ ಸುತಾನುಕ್ತ್ವಾ ಸಂತೋಷಂ ಪರಮಂ ಯಯೌ॥೧೧೭॥

ಹೇ ವಿಶ್ವನಾಥ ಗಿರಿಶ ತ್ರಿಪುರಾಂತಕೇತಿ
ಹೇ ಭೂತಿಭೂಷಣ ಗಿರೀಶ ಮೃಡಾಂತಕಾರೇ ।
ಮೃತ್ಯುಂಜಯೇತಿ ಮುಹುರಾದರತಃ ಕುಮಾರಾನ್
ಆಹೂಯ ಸಾ ಸುಖಮವಾಪ ಸಹೈವ ಭರ್ತ್ರಾ ॥೧೧೮॥

ತೌ ವೀಕ್ಷ್ಯ ಶಂಕರರತಾನನುವಾರಮಾಶು
ರಾಜ್ಞೀ ಚ ಭೂಪತಿಯುತಾ ಸುಖಮಾಪ ನಿತ್ಯಂ ।
ತೌ ಸಚ್ಚರಿತ್ರಕಮನೀಯಪವಿತ್ರಗಾತ್ರೌ
ನೇತ್ರೋತ್ಸವಾಯ ಜಗತಾಮುಪಕಾರಕೌ ತೌ ॥೧೧೯॥

ತದಾಚಾರಮಾಲೋಕ್ಯ ಸರ್ವೇಽಪಿ ಹಾರಾಃ
ತಿರಸ್ಕೃತ್ಯ ಸಂಸಾರವಾರ್ತಾಂ ಹರಾರ್ಚಾಂ ।
ಪರಂ ಕೃತ್ಯಮಿತ್ಯೇವ ಮತ್ವಾ ಸ್ಥಿತಾಸ್ತೇ
ಚಿರಂ ನರ್ಮದಾತೀರಲಿಂಗಾರ್ಚನೇನ ॥೧೨೦॥

ಎಲ್ಲರೂ ಇತ್ತ ಬನ್ನಿ ಎಂದು ಕರೆಯುತ್ತಾ, ತನ್ನ ಬಳಿಗೆ ಬಂದ ಅವರನ್ನು ನೋಡಿ ಅತ್ಯಂತ ಸಂತೋಷವನ್ನು ಹೊಂದುತ್ತಿದ್ದಳು. ||೧೧೬-೧೧೭||

ಆಕೆಯು ಮಕ್ಕಳನ್ನು " ಎಲೈ, ವಿಶ್ವನಾಥನೇ! ಗಿರಿಶನೇ! ತ್ರಿಪುರಾಂತಕನೇ ಎಲೈ ಭೂತಿಭೂಷಣನೇ! ಗಿರೀಶನೇ! ಅಂತಕಾರಿಯೇ! ಮೃತ್ಯುಂಜಯನೇ! ಎಂದು ಬಾರಿಬಾರಿಗೂ, ಶಿವನನ್ನೇ ಸಂಬೋಧಿಸುತ್ತಾ ತನ್ನ ಪತಿಯೊಂದಿಗೆ ಸುಖದಿಂದಿದ್ದಳು. ||೧೧೮||

ರಾಜನೂ ಮತ್ತು ರಾಣಿಯೂ ಇಂತಹ ಪರಮೇಶ್ವರಭಕ್ತರಾದ ದಂಪತಿಗಳನ್ನು ನೋಡಿ, ಪರಮಾನಂದವನ್ನೈದಿದರು. ಆ ದಂಪತಿಗಳು ಸಚ್ಚರಿತ್ರರಾಗಿಯೂ ಲೋಕಕಲ್ಯಾಣವನ್ನುಂಟುಮಾಡುವವರಾಗಿಯೂ ಇದ್ದುದರಿಂದ ಪಟ್ಟಣಿಗರೆಲ್ಲರೂ ಅವರನ್ನು ನೋಡಿ ನೋಡಿ ದಣಿಯುತ್ತಿದ್ದರು. ||೧೧೯||

ಶಿವಭಕ್ತಾಗ್ರೇಸರರಾದ ಅವರ ಸದಾಚಾರವನ್ನು ನೋಡಿ, ಇತರ ಆಸ್ತಿಕರೂ ಸಹ, ಸಂಸಾರದಲ್ಲಿ ವೈರಾಗ್ಯವನ್ನು ತಾಳಿ, ಶಿವಪೂಜೆಯೇ ನಮ್ಮ ಮುಖ್ಯವಾದ

ತಯೋರ್ಹರಾರಾಧನಮೇವ ಕೃತ್ಯಂ ತೇನೈವ ತಾವತ್ಸಕಲಾರ್ಥಸಿದ್ಧಿಃ ।
ತಾಭ್ಯಾಂ ಪವಿತ್ರಂ ನಗರಂ ಚ ಸರ್ವೇ ರೇವಾ ಪವಿತ್ರಾಪಿ ಪವಿತ್ರಿತಾ ಸಾ ॥೧೨೧

ವಿಚಿತ್ರತಚ್ಚರಿತ್ರಾಣಿ ವಿಲೋಕ್ಯ ಮುನಯೋಽಪಿ ತೇ ।
ತತ್ತೀರವಾಸಿನಃ ಸರ್ವೇ ಮಹಾಶಾಂಭವತಾಂ ಗತಾಃ ॥೧೨೨॥

ನಿತ್ಯಂ ಮುನಿವಧೂವರ್ಗಃ ಕರ್ತುಂ ತದ್ದರ್ಶನಂ ಪರಂ ।
ಸಮಾಯಾಂತಿ ಪ್ರದೋಷೇಽಪಿ ಮಧ್ಯಾಹ್ನೇಽಪಿ ಪ್ರಗೇಷ್ವಪಿ ॥೧೨೩॥

ತದ್ವಿಲೋಕನಮಾತ್ರೇಣ ಪಾಪಿನೋಽಪ್ಯತಿಪಾವನಾಃ ।
ಭವಂತ್ಯೇವ ತಯೋಸ್ತಾವದ್ದರ್ಶನಂ ಖಲು ದುರ್ಲಭಂ ॥೧೨೪॥

ನಿತ್ಯಕರ್ಮವಾಗಿದೆಯೆಂದು ಭಾವಿಸಿ, ನರ್ಮದಾನದಿಯ ದಡದಲ್ಲಿದ್ದ ಶಿವಲಿಂಗ ವನ್ನು ಪೂಜಿಸುತ್ತಾ ಬಹುಕಾಲ ಅಲ್ಲಿಯೇ ನೆಲಸತೊಡಗಿದರು. ||೧೨೦||

ಶಿವನನ್ನು ಅರ್ಚಿಸುವುದೇ ಆ ದಂಪತಿಗಳ ಮುಖ್ಯವಾದ ನಿತ್ಯಕರ್ಮವಾಗಿದ್ದಿತು. ಅದರಿಂದಲೇ ಅವರ ಸಕಲ ಇಷ್ಟಾರ್ಥಗಳೂ ಸಿದ್ಧಿಸುತ್ತಿದ್ದುವು. ಅವರಿಂದ ಆ ಪಟ್ಟಣವು ಪವಿತ್ರವಾಯಿತು. ಪಟ್ಟಣಿಗರೂ ಪವಿತ್ರರಾದರು. ಹೆಚ್ಚೇಕೆ! ಸ್ವತಃ ಪವಿತ್ರವಾದ ಆ ನರ್ಮದಾ ನದಿಯೂ ಸಹ ಅವರಿಂದ ಮತ್ತೂ ಪವಿತ್ರವಾಯಿತು. ನಿಜವಾದ ಪವಿತ್ರತೆ ಎಂದರೆ ಇದೇ ಇಲ್ಲವೆ! ||೧೨೧||

ಅವರ ಅದ್ಭುತವಾದ ಆ ಸದಾಚಾರಗಳನ್ನು ನೋಡಿ ನರ್ಮದಾ ನದಿಯ ತೀರದಲ್ಲಿ ವಾಸವಾಗಿದ್ದ ಮುನಿಶ್ರೇಷ್ಠರೂ ಸಹ ಅಂದಿನಿಂದ ಪರಮ ಶಿವಭಕ್ತರಾದರು. ||೧೨೨||

ಋಷಿಪತ್ನಿಯರು ಪ್ರತಿನಿತ್ಯವೂ ಆವರನ್ನು ಸಂದರ್ಶಿಸಲು ತ್ರಿಕಾಲಗಳಲ್ಲಿಯೂ ಅವರಿದ್ದಲ್ಲಿಗೆ ಬರುತ್ತಿದ್ದರು. ||೧೨೩||

ಅವರ ದರ್ಶನಮಾತ್ರದಿಂದಲೇ ಮಹಾಪಾತಕಿಗಳೂ ಸಹ ಪಾಪ ವಿನಿರ್ಮುಕ್ತರಾಗುವರು. ಆದರೆ ಅಂತಹ ಪುಣ್ಯಶಾಲಿಗಳ ದರ್ಶನವು ದುರ್ಲಭವಾಗಿರುವುದಲ್ಲವೇ! ||೧೨೪||

ತಾಭ್ಯಾಂ ತು ವ್ಯವಹಾರೇಷು ಲೌಕಿಕೇಷ್ವಪಿ ಶಂಕರಃ ।
ಸ್ಮರ್ಯತೇ ಶಿವನಾಮ್ನೈವ ಪದಾರ್ಥೋ ವ್ಯವಹಾರ್ಯತೇ ॥೧೨೫॥

ಯದ್ಯತ್ಕೃತಂ ಸುಕೃತಕರ್ಮ ತದೀಶ್ವರಾಯ
ತಾಭ್ಯಾಂ ಸಮರ್ಪಿತಮಘಾಪಹರಂ ಹರಾಯ ।
ಕೃತ್ವಾ ನಿವೇದಯತಿ ಕರ್ಮ ಸ ಏವ ಮುಕ್ತಃ
ಯುಕ್ತೋಽಪಿ ಬಂಧುಜನದಾರಕುಮಾರವರ್ಗೈಃ ॥೧೨೬॥

ಸ್ವಾಧೀನೇ ಮನಸಿ ಸ್ಥಿತೇ ಸತಿ ಶಿವೇ ಕಃ ಶಂಕರಾರಾಧನಂ
ತ್ಯಕ್ತ್ವಾ ತಿಷ್ಠತಿ ಬಿಲ್ವಪಲ್ಲವಜಲೈಃ ತುಂಗೇಷು ಲಿಂಗೇಷ್ವಪಿ ।
ರೇವಾತೀರಗತೇಷು ತೇಷು ಬಹುಷು ವ್ಯಾಪ್ತೇಷು ರೇವಾತಟಂ
ತ್ಯಕ್ತ್ವಾ ಯಾತಿ ಹಿತಾರ್ಥಮರ್ಥನಿಕರಪ್ರಾಪ್ತ್ಯರ್ಥಮಿತ್ಯಾದರಾತ್ ॥೧೨೭॥

ಅವರು ಸಕಲ ಲೌಕಿಕವಾದ ಶಬ್ದವನ್ನು ಉಚ್ಚರಿಸುವಾಗಲೂ ಸಹ ಶಿವನಾಮದಿಂದಲೇ ಅದನ್ನು ಉಚ್ಚರಿಸುವರು. ಇದರಂತೆಯೇ ಯಾವ ಪದಾರ್ಥವನ್ನು ವ್ಯವಹರಿಸಬೇಕಾದರೂ, ಅದನ್ನು ಶಿವನಾಮದಿಂದಲೇ ವ್ಯವಹರಿಸುತ್ತಿದ್ದರಲ್ಲದೇ ಅನ್ಯಥಾ ಮಾತನಾಡುತ್ತಿರಲಿಲ್ಲ. ||೧೨೫||

ಆ ದಂಪತಿಗಳು ಯಾವ ಸತ್ಕರ್ಮವನ್ನು ಆಚರಿಸಿದರೂ, ಅದಕ್ಕೆ ಯಾವ ಫಲವನ್ನೂ ಅಪೇಕ್ಷಿಸದೇ ಈಶ್ವರಾರ್ಪಣ ಬುದ್ಧಿಯಿಂದ ಆಚರಿಸುತ್ತಿದ್ದರು. ಯಾವನು ಫಲಾಪೇಕ್ಷೆಯಿಲ್ಲದೆ ಈಶ್ವರಾರ್ಪಣ ಬುದ್ಧಿಯಿಂದ ಕರ್ಮಗಳನ್ನು ಆಚರಿಸುವನೋ, ಅವನು ನಿಷ್ಕಾಮಕರ್ಮಿಯೆಂದು ಹೇಳಿಸಿಕೊಳ್ಳುವನು. ಆತನು ಪುತ್ರಮಿತ್ರ ಕಲತ್ರರೂಪವಾದ ಈ ಸಂಸಾರದಿಂದ ಕೂಡಿದವನಾಗಿದ್ದರೂ ಮುಕ್ತನಾದಂತೆಯೇ ಸರಿ. ||೧೨೬||

ಜಿತೇಂದ್ರಿಯನಾಗಿ ಚಿತ್ತೈಕಾಗ್ರ್ಯದಿಂದ ಶಿವಧ್ಯಾನದಲ್ಲಿಯೇ ತತ್ಪರನಾದ ಮನುಜನು ಶಿವಪೂಜೆಯನ್ನು ಬಿಟ್ಟು ಇತರ ವ್ಯಾಪಾರಗಳಲ್ಲಿ ಆಸಕ್ತನಾಗುವನೇ? ಅಂತಹ ಶಿವಭಕ್ತಾಗ್ರೇಸರನು ನರ್ಮದಾನದಿಯ ದಡದಲ್ಲಿ ನೆಲಸಿರುವ ಉನ್ನತವಾದ ಶಿವಲಿಂಗಗಳ ಆರಾಧನೆಯನ್ನು ಬಿಟ್ಟು ಅನಿತ್ಯವಾದ ಧನಕನಕಾದಿ ವಸ್ತುಗಳನ್ನು ಸಂಪಾದಿಸುವುದರಲ್ಲಿ ಮಗ್ನನಾಗುವನೇ? ಎಂದಿಗೂ ಇಲ್ಲ. ||೧೨೭||

ಪೂರ್ವಂ ರೇವಾತೀರಮಾಸಾದ್ಯ ಸರ್ವೇ
ಮುಕ್ತಾಸ್ತೇಷಾಂ ಸಂತತಿಶ್ಚ ಪ್ರವೃದ್ಧಾ ।
ರೇವಾಲಿಂಗಾರಾಧನೇನೈವ ನಿತ್ಯಂ
ರೇವಾಲಿಂಗಂ ದುರ್ಲಭಂ ಭೂತಲೇಷು ॥೧೨೮॥

ರೇವಾಲಿಂಗಂ ಸರ್ಪಚಿಹ್ನಂ ಸಕೃದ್ವಾ
ಯೋ ವಾ ನಿತ್ಯಂ ಪೂಜಯೇತ್ತಸ್ಯ ಸಂಗಃ ।
ಪಾಪಾಪಾರವ್ಯಾಧಿನಾಶಾಯ ನೂನಂ
ತಲ್ಲಿಂಗಾರ್ಚಾ ಸರ್ವಸಂತೋಷಹೇತುಃ ॥೧೨೯॥

ಜನ್ಮ ಮಾನುಷಮವಾಪ್ಯ ಸಂತತಂ
ನರ್ಮದಾನಿಲಯಲಿಂಗಪೂಜನಂ ।
ಯಃ ಕರೋತಿ ಸ ತು ವಂದ್ಯ ಏವ ಮೇ
ತತ್ಪದಾಂಬುಜರಜೋಽಪಿ ಪಾವನಂ ॥೧೩೦॥

ಪೂರ್ವಕಾಲದಲ್ಲಿ ಅನೇಕ ಜನರು ನರ್ಮದಾತೀರದಲ್ಲಿ ವಾಸವಾಗಿದ್ದು, ಅಂತ್ಯದಲ್ಲಿ ಅವರೆಲ್ಲರೂ ಮುಕ್ತಿಯನ್ನು ಹೊಂದಿದರು. ಮುಕ್ತರಾದ ಅವರ ವಂಶಸ್ಥರೂ ಸಹ ನರ್ಮದಾ ನದಿಯ ತೀರದಲ್ಲಿರುವ ಶಿವಲಿಂಗಗಳನ್ನು ಪೂಜಿಸಿದುದರಿಂದ ಅಭಿವೃದ್ಧಿಯನ್ನು ಹೊಂದಿದರು. ನರ್ಮದಾ ತೀರದಲ್ಲಿರುವ ಶಿವಲಿಂಗದಂತೆ ಪವಿತ್ರವಾದ ಮತ್ತೊಂದು ವಸ್ತುವು ಈ ಭೂಲೋಕದಲ್ಲಿ ಇನ್ನೆಲ್ಲಿಯೂ ಇರುವುದಿಲ್ಲ.॥೧೨೮॥

ಯಾವ ಮನುಜನು, ಸರ್ಪಭೂಷಿತವಾದ ನರ್ಮದಾಲಿಂಗವನ್ನು ಒಂದೇ ಒಂದು ಸಲವಾದರೂ ಪೂಜಿಸುವನೋ, ಅಂತಹ ಭಕ್ತನ ಸಹವಾಸದಿಂದ ಸಕಲ ಪಾಪಗಳೂ ಕ್ಷಯಿಸುವುವಲ್ಲದೆ, ಸಕಲರೋಗಗಳೂ ದೂರವಾಗುವುವು. ನರ್ಮದಾ ತೀರದಲ್ಲಿರುವ ಆ ಶಿವಲಿಂಗವನ್ನು ಆರಾಧಿಸುವುದರಿಂದ, ಸಕಲ ಸೌಖ್ಯಗಳೂ ಲಭಿಸುವುವು. ॥೧೨೯॥

ಎಲೈ ದ್ವಿಜೋತ್ತಮರೇ! ಭೂಲೋಕದಲ್ಲಿ ಮನುಷ್ಯಜನ್ಮವನ್ನೆತ್ತಿ, ಯಾವನು ನಿರಂತರವೂ ನರ್ಮದಾ ತೀರದಲ್ಲಿರುವ ಶಿವಲಿಂಗವನ್ನು ಪೂಜಿಸುವನೋ, ಅವನು ನನಗೂ ಪೂಜ್ಯನಾಗಿರುವನು. ಪರಶಿವಭಕ್ತನಾದ ಅವನ ಅಡಿದಾವರೆಗಳ ಧೂಳಿಯೂ ಪರಮಪವಿತ್ರವಾದುದು. ॥೧೩೦॥

**ಲೋಕೇ ಪಾವನಪಾವನೋ ವಿಜಯತೇ ಯಃ ಕಾಲಕಾಲಾರ್ಚಕಃ
ತತ್ಪಾದಾಂಬುಜರೇಣುರೇಣುರಜಸಾ ಗಂಗಾಪಿ ಸಾ ಪಾವನಾ ।
ತಸ್ಮಾತ್ತದ್ಭಜನೇನ ಮುಕ್ತಿರಿತಿ ಯಾ ಮುಕ್ತಿಃ ಪರಂ ದುರ್ಲಭಾ
ಸಾ ಮುಕ್ತ್ಯೈ ಭವತೀತಿ ಮುಕ್ತಿವನಿತಾ ಡಿಂಡೀರವೋ ರಾಜತೇ ॥೧೩೧॥**

**ಉಚ್ಚೈಃ ಶಂಕರ ಶಂಕರೇತ್ಯಪಿ ಮುಹುಃ ಯಃ ಕಾಲಕಾಲಾರ್ಚನ
ಧ್ಯಾನಾನಂದನಿಮಗ್ನ ಏವ ಪರಯಾ ಭಕ್ತ್ಯಾ ವದೇದನ್ವಹಂ ।
ತತ್ಪಾದಾಂಬುಜಪೂಜನೋದ್ಯತಮತಿಃ ಬ್ರಹ್ಮಾಪಿ ನಾರಾಯಣಃ
ಶರ್ವಾಣೀರಮಣಪ್ರಸಾದಮಹಿಮಾ ಮರ್ತ್ಯೈಃ ಕಥಂ ಜ್ಞಾಯತೇ ॥೧೩೨॥**

**ಯೋ ಭಕ್ತ್ಯಾ ಸಕೃದೇವ ವಾ ಸ್ಮರಹರಂ ಸ್ಮೃತ್ವಾ ಕೃತಾರ್ಥಂ ಪರಂ
ಮತ್ವಾ ತಚ್ಚರಣಾರವಿಂದಭಜನಾಸಕ್ತಃ ಸ ವಂಶೋನ್ನತೈಃ ।**

ಈ ಲೋಕದಲ್ಲಿ ಯಾವ ಮನುಜನು ಮೃತ್ಯುಂಜಯನಾದ ಶಿವನನ್ನು ಪೂಜಿಸುವನೋ ಅವನೇ ಸರ್ವಶ್ರೇಷ್ಠನಾಗಿರುವನು. ಅವನ ಪಾದಧೂಳಿಯ ಲೇಶಮಾತ್ರದಿಂದಲೇ ಗಂಗೆಯೂ ಸಹ ಪರಮ ಪಾವನಳಾಗುವಳು. ಆದುದರಿಂದ ಶಿವಭಕ್ತಾಗ್ರಣಿಯಾದ ಅವನನ್ನು ಸೇವಿಸುವುದರಿಂದ ಮೋಕ್ಷವು ಲಭಿಸುವುದು. ಆದರೆ ಅದು ಪಾಮರರಾದ ಜನರಿಗೆ ದುರ್ಲಭವಾದುದಲ್ಲವೇ! ಮುಕ್ತಿಯೆಂಬ ಆ ವನಿತೆಯೇ, ಭಕ್ತರಿಗೆ ಮುಕ್ತಿಯನ್ನು ದಯಪಾಲಿಸುವುದೆಂದರೆ ಶಿವಾರ್ಚನೆಯು ಎಂದು ಘಂಟಾಘೋಷವಾಗಿ ಸಾರುತ್ತಿರುವಳು. ||೧೩೧||

ಯಾವ ಮನುಜನು, ಓ ಶಂಕರ! ಶಂಕರ! ಎಂದು ಗಟ್ಟಿಯಾಗಿ ಶಂಕರನ ನಾಮವನ್ನು ಉಚ್ಚರಿಸುತ್ತಾ, ಶಿವನನ್ನು ಪೂಜಿಸಿ, ಅಚಲವಾದ ಭಕ್ತಿಯಿಂದ ಶಿವಧ್ಯಾನದಲ್ಲಿ ಆಸಕ್ತನಾಗುವನೋ, ಅವನ ಅಡಿದಾವರೆಗಳನ್ನು ಬ್ರಹ್ಮ ಮತ್ತು ವಿಷ್ಣು ಇವರೂ ಸಹ ಪೂಜಿಸತೊಡಗುವರು. ಉಮಾರಮಣನಾದ ಆ ಪರಶಿವನ ವರ್ಣನಾತೀತವಾದ ಮಹಿಮೆಯನ್ನು ಪಾಮರರಾದ ಮನುಷ್ಯರು ಹೇಗೆ ತಾನೇ ತಿಳಿಯಲು ಸಮರ್ಥರಾದರು? ||೧೩೨||

ಯಾವ ಮನುಷ್ಯನು ಒಂದು ಬಾರಿಯಾದರೂ ಶಿವನನ್ನು ಸ್ಮರಿಸಿ ತನ್ನನ್ನು ಕೃತಕೃತ್ಯನಾದೆನೆಂದು ತಿಳಿದುಕೊಳ್ಳುವನೋ, ಅಂತಹವನ ಅಡಿದಾವರೆಗಳನ್ನು ಸೇವಿಸುವವನು ಸತ್ಸಂತಾನದಿಂದ ಯುಕ್ತನಾಗಿ ಅಭಿವೃದ್ಧಿಯನ್ನೈದುವನು. ಆದರೆ

ತತ್ಸಂಗಃ ಖಲು ದುರ್ಲಭಃ ಶುಭದ ಇತ್ಯೇವ ಪ್ರಸಿದ್ಧೋ ಬುಧೈಃ
ಸರ್ವಾಶಾಸ್ಯತಯಾ ಪ್ರಸಿದ್ಧ ಇತಿ ಕಿಂ ನಾಶಾಸ್ಯ ಏವಾನ್ವಹಂ ॥೧೩೩॥

ಇತಿ ಶ್ರೀಶಿವರಹಸ್ಯೇ ಹರಾಖ್ಯೇ ತೃತೀಯಾಂಶೇ ಉತ್ತರಾರ್ಧೇ ಅಯೋನಿಜ ದಂಪತ್ಯೋಃ ಸಂತಾನಾಭಿವೃದ್ಧ್ಯಾದಿ ಸಚ್ಚರಿತ್ರವರ್ಣನಂ ನಾಮ ಸಪ್ತದಶೋಽಧ್ಯಾಯಃ

ಶಿವಭಕ್ತಾಗ್ರಣಿಯಾದ ಅವನ ಸಹವಾಸವು ದುರ್ಲಭ. ಅವನು ದೇವತೆಗಳಿಗೂ ಪೂಜ್ಯನಾಗಿರುವನು. ಹೀಗಿರುತ್ತಿರಲು ಅವನು ಯಾರಿಗೆ ತಾನೇ ಪೂಜ್ಯನಾಗಿರುವುದಿಲ್ಲ? ಎಂದು ಯಾಜ್ಞವಲ್ಕ್ಯಋಷಿಯು ರಾಜನಿಗೆ ಶಿವಧರ್ಮವನ್ನು ಬೋಧಿಸಿದನು. ॥೧೩೩॥

ಇಲ್ಲಿಗೆ ಶ್ರೀ ಶಿವರಸ್ಯದ ಮೂರನೆಯ ಅಂಶದ ಉತ್ತರಾರ್ಧದಲ್ಲಿ "ಅಯೋನಿಜ ದಂಪತಿಗಳ ಸಂತಾನಾಭಿವೃದ್ಧಿಯೇ ಮೊದಲಾದ ಸಚ್ಚರಿತೆಯ ವರ್ಣನೆ"ಯೆಂಬ ಹದಿನೇಳನೆಯ ಅಧ್ಯಾಯವು ಮುಗಿದುದು.

|| ಶ್ರೀಃ ||

ಅಥ ಶ್ರೀಶಿವರಹಸ್ಯೇ

ತೃತೀಯಾಂಶೇ

ಉತ್ತರಾರ್ಧೇ

ಅಷ್ಟಾದಶೋಽಧ್ಯಾಯಃ

|| ಯಾಜ್ಞವಲ್ಕ್ಯ ಉವಾಚ ||

ಏವಂ ಶಿವಾರಾಧನಸಕ್ತಚಿತ್ತಃ ಸುಖಾಂಬುರಾಶಿಂ ಸಮವಾಪ್ಯ ಪುತ್ರೈಃ
ಪೌತ್ರೈಃ ಪ್ರಪೌತ್ರೈಸ್ತತ್ಪ್ರಪೌತ್ರೈರ್ಮುಕ್ತೋ ಭವಿಷ್ಯತ್ಯಪಿ ನರ್ಮದಾಯಾಂ ||೧||

ಅಧ್ಯಾಯಮೇನಂ ಪಠತಿ ಪ್ರಭಾತೇ
ಯಃ ಪುತ್ರಕಾಮೋ ಧನಧಾನ್ಯಕಾಮಃ ।
ಸ ತಾವದಾಪ್ನೋತಿ ತಮಿಷ್ಟಮಾದೌ
ಮಹೇಶ್ವರಾರ್ಚಾನಿರತೋಽಪಿ ಭೂಯಾತ್ ||೨||

ಹದಿನೆಂಟನೆಯ ಅಧ್ಯಾಯ

ಬಳಿಕ ಯಾಜ್ಞವಲ್ಕ್ಯನು ಶಿವಕಥಾಮೃತವನ್ನು ಮುಂದುವರಿಸುತ್ತಾ, ಜನಕ ರಾಜನನ್ನು ಕುರಿತು ಇಂತೆಂದನು—"ರಾಜಶ್ರೇಷ್ಠನೇ, ಈ ರೀತಿಯಲ್ಲಿ, ರೇವಾ ಲಿಂಗಾರ್ಚನೆಯಲ್ಲಿಯೇ ಸ್ಥಿರಮನಸ್ಸುಳ್ಳಮನುಜನು ಸುಖಸಾಗರದಲ್ಲಿ ತೇಲಾಡುತ್ತಾ, ಮಕ್ಕಳೊಂದಿಗೂ, ಮೊಮ್ಮಕ್ಕಳೊಂದಿಗೂ ಮತ್ತು ಮರಿಮಕ್ಕಳ ಮರಿಮಕ್ಕಳೊಂದಿಗೂ ಸಮೇತನಾಗಿ ನರ್ಮದೆಯ ದಡದಲ್ಲಿಯೇ ಇದ್ದು, ಅಂತ್ಯದಲ್ಲಿ ಮುಕ್ತನಾಗುವನು. ||೧||

ಯಾವ ಮನುಜನು ಈ ಅಧ್ಯಾಯವನ್ನು (ಹದಿನೇಳನೆಯ ಅಧ್ಯಾಯವನ್ನು) ಪಠಿಸುವನೋ ಅವನು ಪುತ್ರಾರ್ಥಿಯಾಗಿದ್ದರೆ, ಸತ್ಪುತ್ರರನ್ನು ಪಡೆಯುವನು.

ಇತಿ ಕಶ್ಯಪವಾಕ್ಯಾನಿ ಶ್ರುತ್ವಾ ತಾವತ್ಸ ಭೂಪತಿಃ ।
ಸಂತೋಷಂ ಪರಮಂ ಪ್ರಾಪ ಪೂಜಯಾಮಾಸ ಕಶ್ಯಪಂ ॥೩॥

ಇತಿ ನಾರದವಾಕ್ಯಾನಿ ಶ್ರುತ್ವಾ ತಾವತ್ಸ ಭೂಪತಿಃ ।
ದೃಷ್ಟ್ವಾ ಪುತ್ರಂ ಸುಖಂ ಪ್ರಾಪ ಪೂತಂ ಶಾಂಭವವಿದ್ಯಯಾ ॥೪॥

ಸ ತಾವದ್ವನೃಧೇ ರಾಜಾ ನಿತ್ಯಂ ಶಂಕರಪೂಜಯಾ ।
ಸ ಶಿವಾರಾಧನಂ ಕೃತ್ವಾ ಕದಾಚಿದ್ವಿಪಿನಂ ಯಯೌ ॥೫॥

ಸ ಬಿಲ್ವತರುಸಂಕೀರ್ಣಂ ಮಂದಾರತರುಶೋಭಿತಂ ।
ಜಂಬೀರಬೀಜಪೂರಾದಿತರುಕೋಟಿವಿರಾಜಿತಂ ॥೬॥

ತದ್ವನಂ ಪೂಗಪುನ್ನಾಗನಾರಿಕೇಲೈರ್ವಿರಾಜಿತಂ ।
ಸುವರ್ಣಕದಲೀಕೋಟಿಪನಸಾಮ್ರವಿರಾಜಿತಂ ॥೭॥

ಧನಧಾನ್ಯಗಳನ್ನು ಅಪೇಕ್ಷಿಸುವವನು, ಅತಿಶಯವಾದ ಧನಧಾನ್ಯಗಳನ್ನು ಪಡೆಯುವನು ಮತ್ತು ಸದಾ ಶಿವಾರಾಧನೆಯಲ್ಲಿಯೇ ಆಸಕ್ತನಾಗುವನು. ॥೨॥

ಕಶ್ಯಪನ ಈ ಮಾತುಗಳನ್ನು ಕೇಳಿ ಮಗಧರಾಜನು ಅತ್ಯಂತ ಸಂತೋಷಭರಿತನಾಗಿ ಕಶ್ಯಪಮಹರ್ಷಿಯನ್ನು ಪೂಜಿಸಿದನು. ॥೩॥

ಎಂದು ಹೇಳಿದ ನಾರದನ ಈ ಮಾತುಗಳನ್ನು ಕೇಳಿ, ಆ ರಾಜನು ಶಿವಭಕ್ತನಾದ ತನ್ನ ಮಗನನ್ನು ನೋಡಿ, ಸುಖಸಂತೋಷಮಗ್ನನಾದನು. ॥೪॥

ಆ ರಾಜನಾದರೋ ನಿತ್ಯವೂ ಶಂಕರನನ್ನು ಆರಾಧಿಸಿ, ಅದರಿಂದ ಅತಿಶಯವಾದ ಏಳಿಗೆಯನ್ನು ಹೊಂದಿದನು. ಹೀಗಿರುತ್ತಿರಲು, ಒಂದಾನೊಂದು ದಿನ ಆ ರಾಜನು ಶಿವಪೂಜೆಯನ್ನು ಮುಗಿಸಿ ಅರಣ್ಯವನ್ನು ಕುರಿತು ತೆರಳಿದನು. ॥೫॥

ಆ ಅರಣ್ಯವು ಬಿಲ್ವವೃಕ್ಷಗಳಿಂದಲೂ, ಮಂದಾರತರುಗಳಿಂದಲೂ, ಕಿತ್ತಳೆ, ನಿಂಬೆ ಮುಂತಾದ ಮರಗಳಿಂದಲೂ ತುಂಬಿ ಮನೋಹರವಾಗಿದ್ದಿತು. ॥೬॥

ಅಲ್ಲದೇ ಆ ವನವು ಅಡಕೆ, ಸುರಗಿ, ತೆಂಗು, ಬಾಳೆ, ಮಾವು, ಹಲಸು ಮುಂತಾದ ವೃಕ್ಷರಾಜಿಗಳಿಂದ ಶೋಭಿಸುತ್ತಿದ್ದಿತು. ॥೭॥

ಕೇತಕೀಚಂಪಕಾದೀನಾಂ ರಾಜಿಭಿಶ್ಚ ವಿರಾಜಿತಂ ।
ಮಲ್ಲಿಕಾಕುಂದವಲ್ಲೀಭಿಃ ಸುಪುಷ್ಪಾಭಿರ್ವಿರಾಜಿತಂ ॥೮॥

ಶಾಲಾವಿದ್ರುಮವಲ್ಲೀನಾಂ ಕೋಟಿಭಿಶ್ಚ ವಿರಾಜಿತಂ ।
ಉತ್ಫುಲ್ಲಹೇಮಕಮಲಸರೋಮಾಲಾವಿರಾಜಿತಂ ॥೯॥

ತತ್ರ ರತ್ನಸಮಾಕೀರ್ಣಂ ಹೇಮಪ್ರಾಸಾದರಂಜಿತಂ ।
ಹೇಮಗೋಪುರಸಂಕೀರ್ಣಂ ದದರ್ಶ ಸ ಮಹೀಪತಿಃ ॥೧೦॥

ತದ್ದೃಷ್ಟ್ವಾತೀವ ಸಂತುಷ್ಟೋ ರಾಜಾ ಶಂಕರಪೂಜನಂ ।
ಚಕಾರ ಸರಸಿ ಸ್ನಾತ್ವಾ ಭಸ್ಮರುದ್ರಾಕ್ಷಭೂಷಣೈಃ ॥೧೧॥

ಸೇನಾಂ ದೂರೇ ಪರಿತ್ಯಜ್ಯ ದ್ವಿತ್ರೈಃ ಶಾಂಭವಪುಂಗವೈಃ ।
ಸಹ ತತ್ರ ಶಿವಧ್ಯಾನಂ ಕೃತ್ವಾ ನಾಟ್ಯಂ ಚಕಾರ ಸಃ ॥೧೨॥

ಆ ವನದಲ್ಲಿ ಕೇತಕೀವೃಕ್ಷಗಳೂ, ಸಂಪಿಗೆಯ ಮರಗಳೂ, ಗಿರಿಮಲ್ಲಿಗೆಯ ಬಳ್ಳಿಗಳೂ, ಮಾಗಿಯಮಲ್ಲಿಗೆಯ ಲತೆಗಳೂ, ಸುಗಂಧಯುಕ್ತವಾದ ಪುಷ್ಪಗಳಿಂದ ಶೋಭಿಸುತ್ತಾ, ದಟ್ಟವಾಗಿ ಹಬ್ಬಿದ್ದುವು. ಮತ್ತು ವನದಲ್ಲಿ ಅಲ್ಲಲ್ಲಿ ಸೂರ್ಯರಶ್ಮಿಯಿಂದ, ಚೆನ್ನಾಗಿ ಅರಳಿರುವ ಕಮಲಪುಷ್ಪಗಳಿಂದ ಕೂಡಿರುವ ಸರೋವರಗಳು ಕಂಗೊಳಿಸುತ್ತಿದ್ದುವು. ||೮-೯||

ಆ ಉದ್ಯಾನವನದಲ್ಲಿ, ಸುವರ್ಣಮಯವಾದ ಗೋಪುರಗಳಿಂದಲೂ, ಅಮೂಲ್ಯವಾದ ರತ್ನಗಳಿಂದಲೂ ಅಲಂಕೃತವಾದ ಒಂದಾನೊಂದು ಪ್ರಾಸಾದವು ಕಂಗೊಳಿಸುತ್ತಿದ್ದಿತು. ಅದನ್ನು ಕಂಡನು. ||೧೦||

ರಮ್ಯವಾದ ಆ ವನವನ್ನು ನೋಡಿ ರಾಜನು ಅತ್ಯಂತ ಸಂತೋಷಭರಿತನಾಗಿ, ಕೊಳದಲ್ಲಿ ಸ್ನಾನಮಾಡಿ ಭಸ್ಮವನ್ನು ಲೇಪಿಸಿ, ರುದ್ರಾಕ್ಷಗಳನ್ನು ಧರಿಸಿ ಶಿವನನ್ನು ಪೂಜಿಸಿದನು. ||೧೧||

ಅವನು ತನ್ನ ಸೈನ್ಯವನ್ನು ದೂರದಲ್ಲಿ ನಿಲ್ಲಿಸಿ ಇಬ್ಬರು ಮೂವರಾದ ಶಾಂಭವರೊಡಗೂಡಿ, ಶಿವನನ್ನು ಧ್ಯಾನಿಸಿ ನರ್ತನಮಾಡಲಾರಂಭಿಸಿದನು. ||೧೨||

ತತಃ ಪರಂ ರುದ್ರವೀಣಾಂ ಗೃಹೀತ್ವಾ ಶಿವಗಾಯನಂ ।
ಚಕಾರ ಹರ ಗೌರೀಶ ಶಿವ ಶಂಕರ ಇತ್ಯಪಿ ॥೬೩॥

ತದಾನೀಂ ತಾವದಸ್ಮಾಭಿರ್ಗಂಧರ್ವನಗರಾತ್ಪರಂ ।
ತತ್ರಾಗತಂ ಸ ದೃಷ್ಟಶ್ಚ ಭೂಪಾಲೋ ಗಾನತತ್ಪರಃ ॥೧೪॥

ತತಃ ಪರಂ ಸ ಗಾನೇನ ತೋಷಯಾಮಾಸ ಶಂಕರಂ ।
ಪುನಃ ಪುನಃ ಶಿವಾನಂದತರಂಗಪರಿವಾರಿತಃ ॥೧೫॥

ತತಸ್ತದ್ದರ್ಶನೇನೈವ ಹೃದಿ ಪಂಚಶರಃ ಪರಂ ।
ಪ್ರವಿಷ್ಟಸ್ತೇನ ಸಾಸ್ಮಾಕಮನ್ಯತ್ರಾಸೀದ್ಗತಂ ಖಲು ॥೧೬॥

ತದಾ ಗಂಧರ್ವರಾಜಾಪಿ ತತ್ರ ಶಂಕರಪೂಜನಂ ।
ಕರ್ತುಮಭ್ಯಾಗತೋ ದೈವಾಚ್ಚಕಾರ ಶಿವಪೂಜನಂ ॥೧೭॥

ನಾಟ್ಯವು ಮುಗಿದ ಬಳಿಕ, ಕೈಯಲ್ಲಿ ರುದ್ರವೀಣೆಯನ್ನು ಹಿಡಿದು ಬಾರಿಸುತ್ತಾ, ಗೌರೀಶನೇ! ಶಿವ! ಶಂಕರ! ಎಂದು ಶಿವನಾಮುಗಳನ್ನುಚ್ಚರಿಸುತ್ತಾ ಗಾನ ಮಾಡಿದನು. ||೧೩||

ಆಗ ನಾವೆಲ್ಲರೂ ಗಂಧರ್ವಲೋಕದಿಂದ ಅಲ್ಲಿಗೆ ಬರಲು, ಶಿವಗಾನದಲ್ಲಿ ಆಸಕ್ತನಾದ ರಾಜನು ನಮಗೆ ಕಾಣಿಸಿಕೊಂಡನು. ||೧೪||

ಬಳಿಕ ಅವನು, ಶಿವದರ್ಶನದಿಂದುಂಟಾದ ಪರಮಾನಂದವನ್ನು ಅನುಭವಿಸುತ್ತಾ, ಮಧುರವಾದ ಗಾನದಿಂದ ಶಿವನನ್ನು ಸಂತೋಷಪಡಿಸಿದನು. ||೧೫||

ಶಿವಾರಾಧನೆಯಲ್ಲಿ ಮಗ್ನನಾದ ಅವನ ದರ್ಶನಮಾತ್ರದಿಂದಲೇ ನಮ್ಮಲ್ಲಿ ಕಾಮಕ್ರೋಧಗಳೆಲ್ಲಾ ಮಾಯವಾದವು. ನಮ್ಮ ಚಿತ್ತವು ಶಿವನಲ್ಲಿಯೇ ಮಗ್ನವಾಯಿತು. ||೧೬||

ಆಗ ಗಂಧರ್ವರಾಜನೂ ಸಹ ಶಿವನನ್ನು ಆರಾಧಿಸುವುದಕ್ಕೋಸ್ಕರ ಆ ವನಕ್ಕೆ ಬಂದು ಶಿವನನ್ನು ಪೂಜಿಸಿದನು. ||೧೭||

ಗಂಧರ್ವಗಾನಚತುರಃ ಸ ಗಂಧರ್ವಃ ಶಿವಪ್ರಿಯಂ ।
ಗಾನಂ ಚಕಾರ ಮನಸಾ ಸಂಸ್ಮರನ್ನೇವ ಶಂಕರಂ ॥೧೮॥

ರಾಜಾ ತದ್ಗಾನಮಾಕರ್ಣ್ಯ ಶಿವಭಕ್ತಕೃತಂ ಮುದಾ ।
ಪ್ರಾಹ ಗಂಧರ್ವರಾಜಾನಂ ಶಿವಗಾನರತಂ ಮುಹುಃ ॥೧೯॥

॥ ರಾಜೋವಾಚ ॥

ಗಂಧರ್ವವರ ಕಿಂ ವಾ ತೇ ವದ ತಾವದಭೀಪ್ಸಿತಂ ।
ಗಾನೇನಾನೇನ ಸಂತುಷ್ಟೋ ಶಿವನಾಮಾಂಕಿತೇನ ಹಿ ॥೨೦॥

ಶಿವನಾಮರತೋ ಯಸ್ತು ತಸ್ಮಾದೇಯಂ ನ ಮೇ ಭುವಿ ।
ಇತೋಽಪಿ ನಾಧಿಕಂ ಲೋಕೇ ದಾನಪಾತ್ರಂ ಚ ದೃಶ್ಯತೇ ॥೨೧॥

ಇದಂ ತು ಶಾಂಭವಂ ಕ್ಷೇತ್ರಂ ಶಾಂಭವಾಯಾತ್ರ ಯದ್ವಸು ।
ದೀಯತೇ ತದ್ಭವತ್ಯೇವ ತತ್ಕೋಟಿಗುಣಿತಂ ಖಲು ॥೨೨॥

ಗಾನದಲ್ಲಿ ನಿಪುಣನಾದ ಆ ಗಂಧರ್ವನು ಮನಸ್ಸಿನಲ್ಲಿ ಈಶ್ವರನನ್ನು ಸ್ಮರಿಸುತ್ತಾ ಈಶ್ವರನಿಗೆ ಪ್ರಿಯಕರವಾದ ಗಾನವನ್ನು ಮಾಡಿದನು. ॥೧೮॥

ಶಿವಭಕ್ತನಾದ ಅವನ ಕರ್ಣಮಧುರವಾದ ಗಾನವನ್ನು ಕೇಳಿ ರಾಜನು, ಪ್ರೀತಿಯಿಂದ ಅವನನ್ನು ಕುರಿತು ಹೀಗೆಂದನು. ॥೧೯॥

“ಗಂಧರ್ವರಾಜನೇ, ನಿನ್ನ ಶಿವನಾಮದಿಂದ ಕೂಡಿರುವ ಮಧುರವಾದ ಈ ಗಾನದಿಂದ ನಾನು ಅತ್ಯಂತ ಸಂತೋಷಭರಿತನಾಗಿರುವೆನು. ನಿನ್ನ ಇಷ್ಟಾರ್ಥವೇನು ? ಅದನ್ನು ಹೇಳುವವನಾಗು ! ॥೨೦॥

ಯಾವನು ಶಿವನಾಮದಲ್ಲಿ ಆಸಕ್ತನಾಗಿರುವನೋ ಅವನಿಗೆ ದಾನಮಾಡಲು ಅನರ್ಹವಾದ ಯಾವ ವಸ್ತುವೂ ಲೋಕದಲ್ಲಿ ಇರುವುದಿಲ್ಲ. ನಿನಗಿಂತಲೂ ದಾನಕ್ಕೆ ಪಾತ್ರನಾದವನು ಮತ್ತಾರಿರುವನು ? ॥೨೧॥

ಇದು ಶಿವಕ್ಷೇತ್ರವಾಗಿರುವುದು. ಈ ಕ್ಷೇತ್ರದಲ್ಲಿ ಶಾಂಭವನಾದ ಸತ್ಪಾತ್ರನಿಗೆ ಯಾವ ವಸ್ತುವನ್ನು ದಾನಮಾಡುವೆವೋ, ಆ ವಸ್ತುವು ಇನ್ನೂ ಅಧಿಕವಾಗಿ ಅಭಿವೃದ್ಧಿಯನ್ನು ಹೊಂದುವುದು.” ॥೨೨॥

ಇತಿ ತದ್ವಚನಂ ಶ್ರುತ್ವಾ ಗಂಧರ್ವೋ ಹೃಷ್ಟಮಾನಸಃ ।
ಶಿವಭಕ್ತಿರತಂ ಪ್ರಾಹ ರಾಜಾನಮತಿಸುಂದರಂ ॥೨೩॥

ಅನೃತೋಕ್ತಿವಿರಕ್ತಿರದ್ಭುತಾ ಭುವಿ ತಾವದ್ಬಹುಧಾ ನೃಪೋತ್ತಮ ।
ನ ಚ ಸತ್ಯಮಹಾವ್ರತೇ ರತಿಃ ಶಿವಭಕ್ತಸ್ಯ ಪರಂ ತು ತದ್ವ್ರತಂ ॥೨೪॥

ಶಿವಃ ಸತ್ಯಂ ತಸ್ಮಾಚ್ಛಿವಭಜನಕಾಲೇ ಶಿವರತಃ ।
ಶಿವಂ ಸ್ಮೃತ್ವಾ ಸತ್ಯಂ ವದತಿ ಬಹುಧಾ ಸತ್ಯಮಸಕೃತ್
ತ್ವಯಾ ಸತ್ಯಂ ತಾವದ್ವ್ರತಮಿತಿ ಗೃಹೀತಂ ಮುಹುರಪಿ ।
ಸ್ಮೃತೋ ಭಕ್ತ್ಯಾ ಭಾವ್ಯೈಃ ಸಹಕೃತಮುಮಾಕಾಂತಭಜನಂ ॥೨೫॥

ಸತ್ಯವ್ರತಂ ಯಸ್ಯ ನಿರಂತರಾಯಂ
ಸ ಏವ ಧನ್ಯಃ ಶಿವಪೂಜಕೋಽಪಿ ।
ಶಿವಾಲಯಂ ಶಾಂಭವಪುಂಗವೇಷು ।
ಸತ್ಯಂ ವದಂತ್ಯೇವ ವಿಶೇಷತಸ್ತು ॥೨೬॥

ರಾಜನ ಈ ಮಾತನ್ನು ಕೇಳಿ ಗಂಧರ್ವನು ಸಂತೋಷಭರಿತನಾಗಿ ಸುಂದರನಾದ ರಾಜನನ್ನು ಕುರಿತು ಹೀಗೆಂದನು. ॥೨೩॥

ಎಲೈ ರಾಜೇಂದ್ರನೇ! ಈ ಲೋಕದಲ್ಲಿ ಅಸತ್ಯವನ್ನು ನುಡಿಯದಿರುವುದೇ ಉತ್ಕೃಷ್ಟವಾದ ನಡತೆ. ಆದರೆ ಅದನ್ನು ನುಡಿಯದಿರುವ ಜನರೇ ವಿರಳ. ಜನರಿಗೆ ಸತ್ಯವನ್ನು ನುಡಿಯುವುದರಲ್ಲಿ ಆಸಕ್ತಿಯೇ ಇಲ್ಲ. ಅದನ್ನು ನುಡಿಯುವುದೇ ಈಶ್ವರಭಕ್ತನ ಮಹಾವ್ರತವಾಗಿರುವುದು. ॥೨೪॥

ಶಿವನು ಸತ್ಯಸ್ವರೂಪನಾಗಿರುವನು. ಆದುದರಿಂದಲೇ, ಈಶ್ವರಭಕ್ತನು ಸದಾ ಶಿವಾರಾಧನೆಯಲ್ಲಿಯೇ ತತ್ಪರನಾಗಿ ಮನಸ್ಸಿನಲ್ಲಿ ಅವನನ್ನು ನೆನೆಸುತ್ತಾ, ಸತ್ಯವನ್ನೇ ನುಡಿಯುವನು. ನೀನಾದರೋ ಸತ್ಯವನ್ನು ನುಡಿಯುವುದೇ ಪರಮ ವ್ರತವೆಂದು ಭಾವಿಸಿ, ಸತ್ಯರೂಪನಾದ ಶಿವನನ್ನು ನೆನೆಯುತ್ತಾ ಆರಾಧಿಸುವೆ. ॥೨೫॥

ಯಾವಾಗಲೂ ಎಡಬಿಡದೇ ಸತ್ಯರೂಪನಾದ ಶಿವನು ತನ್ನ ಭಕ್ತಾಗ್ರೇಸರರ ಹೃದಯದಲ್ಲಿ ಸದಾ ವಾಸವಾಗಿರುವನು. ಆದುದರಿಂದಲೇ ಅವರು ನಿರಂತರವೂ ಸತ್ಯವನ್ನೇ ನುಡಿಯುವರು. ॥೨೬॥

ದಿವ್ಯಂ ಸತ್ಯಂ ಸತ್ಯಸಂಕಲ್ಪಮಾಹುಃ
ಸತ್ಯೇ ತಾವತ್ಸರ್ವದಾ ಸರ್ವಸಿದ್ಧಿಃ ।
ತಸ್ಮಾತ್ಸತ್ಯಂ ಮಯ್ಯವಶ್ಯಂ ತ್ವಯಾ ತು
ವಕ್ತವ್ಯಂ ತೇ ಸತ್ಯಮಸ್ತು ವ್ರತಂ ಚ ॥೨೭॥

ಮತ್ಪ್ರಾರ್ಥನೀಯಮಿದಮೇವ ನೃಪೋತ್ತಮಾಸ್ತಿ
ಕನ್ಯಾಶತಂ ತದಧುನಾದ್ಯ ಮುದಾ ಗೃಹಾಣ ।
ತತ್ತಾವದಿಂದುವನಿತಾಗಣತುಲ್ಯಮೇವ
ಪ್ರೀತಿಸ್ತವಾಸ್ತು ನೃಪ ಸಂತತಮೇವ ತತ್ರ ॥೨೮॥

ಅತ್ರಾಸ್ತಿ ಕನ್ಯಾಶತಕಂ ಪ್ರಪಶ್ಯ
ಶಿವಾರ್ಚನಾರ್ಥಂ ಸಮುಪಾಗತಂ ಚ ।
ರಾಜನ್ ಸರಸ್ತೀರಗತಂ ಪ್ರಪಶ್ಯ
ವಿಲಾಸಯೋಗ್ಯಂ ಚ ವನಂ ಕಿಲೇದಂ ॥೨೯॥

ಅಮೂಲ್ಯವಾದ ಸತ್ಯವಚನವನ್ನೇ ಸತ್ಯಪ್ರತಿಜ್ಞೆಯೆಂದೂ ಹೇಳುವರು. ಸತ್ಯವನ್ನು ನುಡಿಯಲು ಸಕಲ ಇಷ್ಟಾರ್ಥಗಳೂ ಸಿದ್ಧಿಸುವುವು. ಆದುದರಿಂದ ಈಶ್ವರ ಭಕ್ತನಾದ ನಿನಗೆ ನನ್ನೊಡನೆ ಸತ್ಯವನ್ನಾಡುವುದು ಉಚಿತವೂ ಆಗಿರುವುದು. ಸತ್ಯವೇ ನಿನ್ನ ಪರಮವ್ರತವಾಗಿರಲಿ. ॥೨೭॥

ಎಲೈ ರಾಜೇಂದ್ರನೇ, ನಾನು ನಿನಗೆ ಕೊಡುವ ಈ ನೂರು ಮಂದಿ ಕನ್ಯೆಯರನ್ನು ವಿಶ್ವಾಸದಿಂದ ವರಿಸುವವನಾಗು. ಈ ಕನ್ಯೆಯರು, ಚಂದ್ರನ ಮಡದಿಯರೋಪಾದಿಯಲ್ಲಿ ಪತಿಭಕ್ತಿಯುಳ್ಳವರೂ ಸುಂದರಿಯರೂ ಆಗಿರುವರು. ಆದುದರಿಂದ, ನೀನು ಇವರನ್ನು ಸದಾ ಪ್ರೀತಿಸುತ್ತಿರು. ಇದೇ ನನ್ನ ಕೋರಿಕೆ. ॥೨೮॥

ರಾಜನೇ! ಇಗೋ! ಈ ಕನ್ಯೆಯರನ್ನು ನೋಡು! ಅವರು ಇಲ್ಲಿ ಕಾಣಿಸುತ್ತಿರುವ ಸರೋವರದ ಬಳಿ ಇರುವರು. ಅವರು ಶಿವನನ್ನು ಅರ್ಚಿಸುವುದಕ್ಕೋಸ್ಕರ ಇಲ್ಲಿಗೆ ಬಂದಿರುವರು. ಫಲಪುಷ್ಪಗಳಿಂದ ಶೋಭಿಸುತ್ತಲಿರುವ ಈ ಉದ್ಯಾನವನವು ಅವರ ಕ್ರೀಡೆಗೆ ಯೋಗ್ಯವಾಗಿರುವುದು. ॥೨೯॥

ತಾಸಾಂ ಶಿವಾರಾಧನಮೇವ ತಾವತ್
ವ್ರತಂ ವಿಭೂತಿಃ ಪರಮಾ ವಿಭೂಷಾ ।
ರುದ್ರಾಕ್ಷಮಾಲಾ ಚ ಶಿವಾರ್ಚಕೇಷು
ತೇಷಾಂ ಖಲು ಪ್ರೀತಿರನಂತರಾ ಯಾ ॥೩೦॥

ತ್ರಿಪುಂಡ್ರರೇಖಾಲಲಿತೋತ್ತಮಾಂಗಾಃ
ತಾಸ್ತಾವದಾಲೋಕನಮಾತ್ರತೋಽಪಿ ।
ಹರಂತ್ಯಘಾನೀತಿ ವಿನಿಶ್ಚಯೋ ಮೇ
ಹಾರಾಂಗನಾ ಹಾರರತಾ ವಿರಕ್ತಾಃ ॥೩೧॥

ಏತಾವದೇತತ್ಖಲು ತಾವದದ್ಯ
ಮತ್ಪ್ರಾರ್ಥನೀಯಂ ಮಮ ಭಾಗ್ಯಮೇತತ್ ।
ತುಲ್ಯಸ್ತ್ವಯಾ ಕೋಽಪಿ ನ ಭೂತಲೇಷು
ಜಾತೋ ಭವಿಷ್ಯತ್ಯಪಿ ವರ್ತತೇ ವಾ ॥೩೨॥

ಆ ಕನ್ಯೆಯರಿಗೆ ಶಿವಪೂಜೆಯೇ ಮುಖ್ಯವಾದ ವ್ರತವಾಗಿದೆ. ವಿಭೂತಿಯೇ ಅವರ ಅಲಂಕಾರ ದ್ರವ್ಯವಾಗಿದೆ. ಶಿವಪೂಜಕರಿಗಾದರೋ ರುದ್ರಾಕ್ಷಮಾಲೆಯೇ ಭೂಷಣವಲ್ಲವೇ! ಆದುದರಿಂದಲೇ ಅವರು ಶಿವಪೂಜಕರಲ್ಲಿ ಅತಿಶಯವಾದ ವಿಶ್ವಾಸವನ್ನಿಟ್ಟಿರುವರು. ॥೩೦॥

ತ್ರಿಪುಂಡ್ರಧಾರಣೆಯಿಂದ, ತೇಜಸ್ವಿಗಳಾಗಿ ತೋರುವ ಅವರ ದರ್ಶನಮಾತ್ರ ದಿಂದಲೇ ಸಕಲ ಪಾಪಗಳೂ, ಕ್ಷಯಿಸುವುವು. ಶಿವಭಕ್ತರ ಪ್ರಿಯ ಪತ್ನಿಯರು ಸದಾ ಪತಿಭಕ್ತಿಯುಳ್ಳವರೂ ವಿರಕ್ತರೂ ಆಗಿರುವರು. ॥೩೧॥

ಇದೇ ನನ್ನ ಪ್ರಾರ್ಥನೆಯಾಗಿರುವುದು. ಇದೇ ನನ್ನ ಮನೋರಥ ಸರ್ವಸ್ವವೂ ಆಗಿರುವುದು. ಎಲೈ ಈಶ್ವರಭಕ್ತನೇ! ಈ ಲೋಕದಲ್ಲಿ ನಿನಗೆ ಸದೃಶ ನಾದ ಇನ್ನೊಬ್ಬನು ಯಾವ ಲೋಕದಲ್ಲಿಯೂ ಕಾರಣಲಾರನು. ಮುಂದೆ ಜನಿಸು ವಂತೆಯೂ ತೋರುವುದಿಲ್ಲ. ॥೩೨॥

ಆಜನ್ಮಶುದ್ಧೋಽಸಿ ವಿಭೂತಿಪೂತಃ
ರುದ್ರಾಕ್ಷಮಾಲಾಭರಣೋ ಮಹೀಶ ।
ತ್ವಯಾಸ್ತಿ ಮೇ ಪ್ರೀತಿರಿಯಂ ಪ್ರವೃದ್ಧಾ
ಭವತ್ವಿಹಾನ್ಯಂ ನ ಮಯೋಕ್ತಮೇವ ॥೩೩॥

ಪಶ್ಯ ಪಶ್ಯ ನೃಪಪುಂಗವ ಪಶ್ಚಾತ್
ಕನ್ಯಕಾಶತಮುಮಾಪತಿಪೂಜಾಂ ।
ಕರ್ತುಮೇತಿ ವಿವಿಧೈರುಪಚಾರೈ
ರಾದರೇಣ ಶಿವನಾಮರತಾಸ್ತಾಃ ॥೩೪॥

ಶಿವ ಶಿವ ಮೃಡ ರುದ್ರ ಚಂದ್ರಮೌಳೇ
ಸ್ಮರಹರ ಶಂಕರ ಶರ್ವ ನೀಲಕಂಠ ।
ಇತಿ ವದತಿ ಮುಹುಃ ಶೃಣು ಪ್ರಣಾನ್ಯೈ
ರಲಮಲಮೇವ ಯುವಾಸಿ ಭೂಪತೇ ತ್ವಂ ॥೩೫॥

ರಾಜೇಂದ್ರನೇ! ವಿಭೂತಿಯನ್ನು ಧರಿಸಿ, ರುದ್ರಾಕ್ಷಮಾಲೆಯಿಂದ ಅಲಂಕೃತನಾದ ನೀನು ಆಜನ್ಮಶುದ್ಧನಾಗಿರುವೆ. ನಿನ್ನಲ್ಲಿ ಪ್ರತಿಕ್ಷಣದಲ್ಲಿಯೂ ನನ್ನ ಪ್ರೀತಿಯು ಅಭಿವೃದ್ಧಿಯನ್ನು ಹೊಂದುತ್ತಿರುವುದು. ಇದಕ್ಕಿಂತಲೂ ಹೆಚ್ಚಾಗಿ, ನಾನು ಇನ್ನೇನನ್ನೂ ಹೇಳ ಬಯಸುವುದಿಲ್ಲ. ॥೩೩॥

ನೃಪವರ್ಯನೇ! ಇಗೋ! ಇತ್ತ ನೋಡು. ಆ ಕನ್ಯೆಯರು ವಿವಿಧವಾದ ಉಪಚಾರಗಳಿಂದ ಶಿವನನ್ನು ಪೂಜಿಸುವ ಉತ್ಸಾಹದಿಂದ ನಿನ್ನ ಹಿಂಭಾಗದಲ್ಲಿ ಬರುತ್ತಿರುವವರು. ಅವರು ಭಕ್ತಿ ಪೂರ್ವಕವಾಗಿ ಶಿವನಾಮವನ್ನು ಉಚ್ಚರಿಸುತ್ತಿರುವರು. ॥೩೪॥

ಆ ಕನ್ಯೆಯರು, ಶಿವ, ಶಿವ, ಮೃಡ, ರುದ್ರ, ಚಂದ್ರಶೇಖರ, ಸ್ಮರಹರ, ಶಂಕರ, ಶರ್ವ, ನೀಲಕಂಠ, ಎಂದು ಬಾರಿಬಾರಿಗೂ ಶಿವನಾಮಗಳನ್ನು ಉಚ್ಚರಿಸುತ್ತಿರುವರು. ಆದುದರಿಂದ ಶಿವಸನ್ನಿಧಿಯಲ್ಲಿ ನಿನ್ನ ನಮಸ್ಕಾರಗಳನ್ನು ಈಗ ಸಾಕು ಮಾಡು. ಎಲೈ ರಾಜನೇ, ನೀನು ಯುವಕನಾದುದರಿಂದ ಈ ಕನ್ಯೆಯರನ್ನು ಪರಿಗ್ರಹಿಸಲು ಯೋಗ್ಯನಾಗಿರುವೆ. ॥೩೫॥

ಇತಿ ತದ್ವಚನಂ ಶ್ರುತ್ವಾ ಸ ರಾಜಾ ಸತ್ಯವತ್ಸಲಃ ।
ಓಮಿತ್ಯಾಹ ಶಿವಂ ಪಶ್ಯನ್ ಶಿವಾರ್ಚನಪರಾಯಣಃ ॥೩೬॥

ತತಃ ಸಮಾಗತಾಃ ಕನ್ಯಾಸ್ತಾಸ್ತಾವದತಿಸುಂದರಾಃ ।
ದದರ್ಶ ಶಿವಪೂಜಾರ್ಥಮುದ್ಯತಾಃ ಪ್ರಯತಾ ಅಪಿ ॥೩೭॥

ತಂ ವಿಲೋಕ್ಯ ಮದನಾತುರಚಿತ್ತಾಃ
ತಾಃ ಶಿವಾರ್ಚನಪರಾ ಅಪಿ ಸೋಽಪಿ ।
ಪಂಚಬಾಣವಶಮಾಪ ಸ ಪಾಪೈಃ
ಭೀರುರೇವ ಹರಪೂಜನಪೂತಃ ॥೩೮॥

ಶಿವಮಭ್ಯರ್ಚ್ಯ ತಾಃ ಸರ್ವಾಃ ಪ್ರಾರ್ಥಯಿತ್ವಾ ವರೋಽಸ್ತ್ವಯಂ
ಹರಾಸ್ಮಾಕಮಿತಿ ಸ್ಮೃತ್ವಾ ಪ್ರಣತಾಸ್ತಾಃ ಪುನಃ ಪುನಃ ॥೩೯॥

ಗಂಧರ್ವರಾಜನ ಆ ಮಾತನ್ನು ಕೇಳಿ ಸತ್ಯಪ್ರಿಯನಾದ ರಾಜನು ಹಾಗೆಯೇ ಆಗಲೆಂದು, ಅವನ ವಚನವನ್ನು ಅನುಮೋದಿಸಿದನು. ॥೩೬॥

ಬಳಿಕ ಅತಿಸುಂದರಿಯರಾದ ಆ ಕನ್ಯೆಯರು ಅಲ್ಲಿಗೆ ಬಂದರು. ಅಲ್ಲಿಯೇ ಶಿವಪೂಜೆಯಲ್ಲಿ ಉದ್ಯುಕ್ತನಾಗಿದ್ದ ರಾಜನು, ಅವರು ಶಿವಪೂಜಾ ನಿರತರಾಗಿದ್ದರೂ ಕುತೂಹಲದಿಂದ ನೋಡಿದನು. ॥೩೭॥

ಅವರೂ ಸಹ ಶಿವಪೂಜೆಯಲ್ಲಿ ಆಸಕ್ತರಾಗಿದ್ದರೂ ರಾಜನನ್ನು ನೋಡಿದೊಡನೆಯೇ ಕಾಮುಪರವಶರಾದರು. ಶಿವಪೂಜೆಯಿಂದ ಶುದ್ಧನಾದ ಆ ರಾಜನು ಪಾಪಭೀರುವಾಗಿದ್ದರೂ, ಮನ್ಮಥನ ಬಲೆಗೆ ಸಿಲುಕಿದನು. ॥೩೮॥

ಕನ್ಯೆಯರೆಲ್ಲರೂ ಶಿವನನ್ನು ಹೀಗೆಂದು ಪ್ರಾರ್ಥಿಸಿದರು. "ಶಿವನೇ, ನಿನ್ನ ಭಕ್ತರಾದ ನಮ್ಮನ್ನು, ರಾಜನ ಪ್ರೀತಿಗೆ ಪಾತ್ರರನ್ನಾಗಿ ಮಾಡು! ಇದೇ ನಮ್ಮ ಪ್ರಾರ್ಥನೆಯಾಗಿರುವುದು," ಹೀಗೆಂದು ಪ್ರಾರ್ಥಿಸುತ್ತಾ ಅವರು ಮತ್ತೆ ಮತ್ತೆ ಶಿವನನ್ನು ವಂದಿಸಿದರು. ॥೩೯॥

ತತಃ ಪರಂ ತುಂಗಕುರಂಗಲೋಚನಾಃ
ತಾಸ್ತಾವದಾನಂದಮುಖಾಂಬುಜಾಸ್ತಂ ।
ಉದ್ವೀಕ್ಷ್ಯ ಸಸ್ಮೇರಮುಖಂ ಸಿತಾನನಾಃ
ವಿನಿರ್ಗತಾಃ ಶಂಕರಮಂದಿರೇಭ್ಯಃ ॥೪೦॥

ತತಃ ಸರಸ್ತೀರಗತೇ ಮನೋಜ್ಞೇ
ಹರ್ಮ್ಯೇ ಸುಗಂಧಾನಿಲಪೋತವೀತೇ ।
ಸ್ಥಿತಾಃ ಪರಂ ರತ್ನವರಾಸನೇಷು
ವರಂ ಸ್ಮರಂತೋಽಪಿ ಹರಂ ಸ್ಮರಂತಃ ॥೪೧॥

ತತಃ ಸ ಗಂಧರ್ವವಿವಾಹಮೇವ
ಚಕಾರಗಂಧರ್ವಪತಿಃ ಪ್ರಮೋದೈಃ ।
ಸಮರ್ಚಯಿತ್ವಾ ಗಿರಿಶಂ ಸ ರಾಜಾ
ಪುನರ್ವಿವಾಹೋತ್ಸವಮೇವ ಕರ್ತುಂ ॥೪೨॥

ಅದಾದ ಬಳಿಕ, ಹರಿಣಾಕ್ಷಿಯರಾದ ಅವರು, ಸಂತುಷ್ಟವಾದ ಮುಖ ಮುದ್ರೆಯಿಂದ, ರಾಜನನ್ನು ನೋಡಿ, ಮಂದಹಾಸವನ್ನು ವ್ಯಕ್ತಪಡಿಸುತ್ತಾ, ಈಶ್ವರನ ಮಂದಿರದಿಂದ ಹೊರಬಿದ್ದರು. ॥೪೦॥

ತರುವಾಯ ಅವರು ಸರೋವರದ ಬಳಿಯಲ್ಲಿರುವ, ಅತಿ ಸುಂದರವಾಗಿ ಮತ್ತು ಸುಗಂಧಯುಕ್ತವಾದ ಮಂದಮಾರುತದಿಂದ ಕೂಡಿರುವ ಪ್ರಾಸಾದವನ್ನು ಪಡೆದರು. ಅಲ್ಲಿ ರತ್ನಖಚಿತವಾದ ಆಸನಗಳಲ್ಲಿ ಕುಳಿತುಕೊಂಡರು. ಆಗ ಅವರು ಮನಸ್ಸಿನಲ್ಲಿ ವರನನ್ನು ಸ್ಮರಿಸುತ್ತಿದ್ದರೂ ಸಹ ಹರನನ್ನೇ ಸ್ಮರಿಸುತ್ತಿರುವರೋ ಎಂಬಂತೆ ತೋರುತ್ತಿದ್ದರು. (ಅಥವಾ ಅವರು ವರನನ್ನು ಸ್ಮರಿಸುತ್ತಿದ್ದರೂ ಸಹ, ವರನನ್ನು ಶಿವನೆಂಬ ಭಾವನೆಯಿಂದಲೇ ಸ್ಮರಿಸುತ್ತಿದ್ದರು ಎಂಬ ಅರ್ಥ ವಿಶೇಷವೂ ಇಲ್ಲಿ ತೋರುವುದು) ॥೪೧॥

ಅನಂತರ ಗಂಧರ್ವರಾಜನು, ರಾಜನೊಂದಿಗೆ ತನ್ನ ಕನ್ಯೆಯರ ಗಾಂಧರ್ವ ವಿವಾಹವನ್ನು ನಡೆಸುವುದಕ್ಕೆ ಯತ್ನಿಸಿದನು. ಅವನು ವಿವಾಹಕ್ಕೆ ಮೊದಲು ಅದರ ಅಂಗವಾಗಿ ಈಶ್ವರನನ್ನು ಅರ್ಚಿಸಿದನು. ॥೪೨॥

ತತಃ ಪರಂ ತಾಭಿರಪಾರಸೌಖ್ಯ ಪ್ರದಾನಲೋಲಾಭಿರಲಂಕೃತೋಽಸೌ ।
ಉವಾಸ ಭುಕ್ತ್ವಾ ವಿವಿಧಾನ್ನಮನ್ನಂ ದತ್ವಾಮಹೇಶಾಯ ವಿಭೂಷಣಾನಿ ॥೪೩॥

ತತಃ ಪರಂ ಸ ಗಂಧರ್ವಃ ಸಂತುಷ್ಟಃ ಪ್ರಾಹ ಭೂಪತಿಂ ।
ಸುಖಾಸೀನಂ ಸುಖಾಸೀನಃ ಸ್ಮರನ್ನೇವ ಮಹೇಶ್ವರಂ ॥೪೪॥

॥ ಗಂಧರ್ವ ಉವಾಚ ॥

ಲಕ್ಷಂ ಗಂಧರ್ವಕನ್ಯಾನಾಮಸ್ತಿ ಮೇ ನಗರೇ ನೃಪ ।
ತಾಃ ಸರ್ವಾಃ ಪರಿಣೇಯಾಸ್ತೇ ತಾ ಅಪ್ಯತ್ಯಂತಸುಂದರಾಃ ॥೪೫॥

ಕಾಮನಾ ತಾಸು ಕನ್ಯಾಸು ಸುರಾಣಾಮಪಿ ತಿಷ್ಠತಿ ।
ದುರ್ಲಭಾ ಏವ ತಾಃ ಕನ್ಯಾಃ ಪ್ರಿಯಾಃ ಸಂತು ತವಾಧುನಾ ॥೪೬॥

ಏತಾವತ್ ಪ್ರಾರ್ಥನೀಯಂ ಮೇ ನ ತಾವದಧಿಕಂ ನೃಪ ।
ಇತ್ಯುಕ್ತಂ ತದ್ವಚಃ ಶ್ರುತ್ವಾ ಗಂಧರ್ವಂ ಪ್ರಾಹ ಭೂಪತಿಃ ॥೪೭॥

ಹಾಗೆಯೇ, ನಾನಾವಿಧವಾದ ಸುಖಸಾಧನದ್ರವ್ಯಗಳಿಂದ ಕೂಡಿದವನಾಗಿ, ಗಂಧರ್ವನು ಮಹಾದೇವನಿಗೆ ವಿಧವಿಧವಾದ ಸ್ವಾದುನೈವೇದ್ಯಗಳನ್ನೂ, ಭೂಷಣಗಳನ್ನೂ ಸಮರ್ಪಿಸಿ, ಅಲ್ಲಿಯೇ ವಾಸಮಾಡಿದನು. ಅನಂತರ ಗಂಧರ್ವನು ಮಹೇಶ್ವರನನ್ನು ಧ್ಯಾನಿಸುವವನಾಗಿ, ಸುಖಾಸನದಲ್ಲಿ ಕುಳಿತಿದ್ದ ರಾಜನನ್ನು ನೋಡಿದನು. ॥೪೩-೪೪॥

ಬಳಿಕ ಗಂಧರ್ವರಾಜನು, ರಾಜನನ್ನು ಕುರಿತು ಹೀಗೆಂದನು— ಎಲೈ ಭೂಪಾಲನೇ! ನನ್ನ ಪಟ್ಟಣದಲ್ಲಿ, ಒಂದು ಲಕ್ಷ ಮಂದಿ ಗಂಧರ್ವಕನ್ಯೆಯರಿರುವರು. ಅವರೆಲ್ಲರನ್ನೂ ನೀನು ವರಿಸು. ಅವರು ಅತ್ಯಂತ ಸುಂದರಿಯರಾಗಿರುವರು. ॥೪೫॥

ದೇವತೆಗಳೂ ಸಹ ಆ ಕನ್ಯೆಯರನ್ನು ವರಿಸಲು ಇಚ್ಛಿಸುವರು. ಅಷ್ಟು ಸುಂದರಿಯರಾದ ಕನ್ಯೆಯರು ಮತ್ತೆಲ್ಲಿಯೂ ದೊರಕಲಾರರು. ಆದುದರಿಂದ ನೀನು ಅವರನ್ನು ಪ್ರೀತಿಸು. ॥೪೬॥

ಭೂಪತಿಯೇ! ಇದಕ್ಕಿಂತಲೂ ಅಧಿಕವಾಗಿ ನಾನು ಏನನ್ನೂ ಪ್ರಾರ್ಥಿಸುವುದಿಲ್ಲ. ಇದೇ ನನ್ನ ಅಪೇಕ್ಷೆ ಎಂದು ಗಂಧರ್ವನು ಹೇಳಲು ಅದನ್ನು ಕೇಳಿ ರಾಜನು ಹೀಗೆಂದನು. ॥೪೭॥

ತವ ಯದ್ವಚನಂ ತಸ್ಯ ಕರ್ತವ್ಯಂ ಪರಿಪಾಲನಂ ।
ತೇನ ಸತ್ಯಾ ಪ್ರತಿಜ್ಞಾ ಮೇ ಭವಿಷ್ಯತ್ಯನ್ಯಥಾ ತು ನ ॥೪೮॥

ಕಿಂ ಚ ಯದ್ಯತ್ತ್ವಯಾ ತಾವದ್ವಕ್ತವ್ಯಂ ಮೇ ಹಿತಂ ಭವೇತ್ ।
ತತ್ಸರ್ವಮಪಿ ಕರ್ತವ್ಯಂ ಯತಃ ಸತ್ಯವ್ರತಂ ಮಮ ॥೪೯॥

ಇತ್ಯುಕ್ತಃ ಪ್ರೀತಹೃದಯಃ ಪ್ರೇಷಯಾಮಾಸ ಚಾರಣಂ ।
ಗಂಧರ್ವನಗರಸ್ಥಾಯ ಮಂತ್ರಿಣೇ ಸ್ವಹಿತಾಯ ಸಃ ॥೫೦॥

ಸ ಮಂತ್ರೀ ಚಾರಣೋಕ್ತಾನಿ ಶ್ರುತ್ವಾ ವಾಕ್ಯಾನಿ ಸಾದರಂ ।
ಅನೇಕಮಂತ್ರಿಸಂಯುಕ್ತಃ ಕನ್ಯಕಾಭಿರ್ಯಯೌ ವನಂ ॥೫೧॥

ತದಾಗಮನಕಾಲೇಷು ಪುಷ್ಪವೃಷ್ಟಿರಭೂತ್ತದಾ ।
ದೇವದುಂದುಭಯೋ ನೇದುರ್ಜಗುರ್ಗಂಧರ್ವಕನ್ಯಕಾಃ ॥೫೨॥

ಎಲೈ ಗಂಧರ್ವರಾಜನೇ! ನಿನ್ನ ವಚನವನ್ನು ಕಾಪಾಡುವುದೇ ನನ್ನ ಕರ್ತವ್ಯ. ಅದರಿಂದಲೇ ನಾನು ಸತ್ಯಸಂಧನೆಂದೆನಿಸಿಕೊಳ್ಳುವೆನು. ಅದಲ್ಲದೆ ನಿನ್ನ ವಚನವನ್ನು ಅಲಗಳೆದರೆ, ನಾನು ಸತ್ಯಪ್ರತಿಜ್ಞನೆನಿಸಿಕೊಳ್ಳಲಾರೆನು. ॥೪೮॥

ಇದಲ್ಲದೇ, ನೀನು ನನ್ನನ್ನು ಕುರಿತು ಯಾವ ವಚನಗಳನ್ನು ನುಡಿಯುವೆಯೋ ಅವೆಲ್ಲವೂ ನನಗೆ ಹಿತಕರಗಳಾಗಿಯೇ ಇರುವುವು. ಸತ್ಯಪಾಲನೆಯೇ ನನ್ನ ವ್ರತವಾಗಿರುವುದರಿಂದ ನಿನ್ನ ವಚನವನ್ನು ಕಾಪಾಡುವುದು ನನ್ನ ಕರ್ತವ್ಯವಲ್ಲವೆ! ॥೪೯॥

ರಾಜನು ಹೀಗೆನ್ನಲು, ಅದರಿಂದ ಸಂತೋಷಭರಿತನಾದ ಗಂಧರ್ವನು ಗಂಧರ್ವನಗರದಲ್ಲಿದ್ದ ತನ್ನ ಹಿತೈಷಿಯಾದ ಮಂತ್ರಿಯ ಬಳಿಗೆ ಒಬ್ಬ ಚಾರಣನನ್ನು ಕಳುಹಿಸಿದನು. ॥೫೦॥

ಮಂತ್ರಿಯು ಚಾರಣನ ಮಾತನ್ನು ಕೇಳಿ ಸಂತುಷ್ಟನಾಗಿ ತನ್ನ ಸಂಗಡಿಗರಾದ ಇನ್ನಿತರ ಅನೇಕ ಮಂತ್ರಿಗಳಿಂದೊಡಗೂಡಿ ಕನ್ಯೆಯರನ್ನು ಕರೆದುಕೊಂಡು ರಾಜನಿದ್ದ ವನಕ್ಕೆ ಬಂದನು. ॥೫೧॥

ಅವನು ಬರುವ ವೇಳೆಯಲ್ಲಿ ಹೂವುಗಳು ಮಳೆಗರೆದವು. ದೇವದುಂದುಭಿಗಳು ಮೊಳಗಿದುವು. ಗಂಧರ್ವಸ್ತ್ರೀಯರು ಮಧುರವಾಗಿ ಹಾಡಿದರು. ॥೫೨॥

ಅತ್ಯುತ್ಸವಸಮಾಕೀರ್ಣಾಸ್ತೇ ತತ್ಪ್ರಾಪ್ಯ ವನಂ ಮುದಾ ।
ಸ್ನಾತ್ವಾ ಸರಸಿ ಪೂಜಾಂ ಚ ಚಕ್ರುಸ್ತೇ ಶಂಕರಸ್ಯ ತು ॥೫೩॥

ಕಮಲೈರಮಲೈಃ ಪುಷ್ಪೈಃ ವಿಮಲೈರ್ಬಿಲ್ವಪಲ್ಲವೈಃ ।
ದಿವ್ಯೈಃ ಪರಿಮಲದ್ರವ್ಯೈರುಪಚಾರೈಃ ಸಹಸ್ರಶಃ ॥೫೪॥

ತಾಶ್ಚ ಕನ್ಯಾಃ ಸಮಾಲೋಕ್ಯ ಶಿವಪೂಜನತತ್ಪರಾಃ ।
ಸ ರಾಜಾತೀವ ಸಂತುಷ್ಟಃ ತತ್ಪಾಣಿಗ್ರಹಣೋದ್ಯತಃ ॥೫೫॥

ತಾಶ್ಚ ಸರ್ವಾಃ ಸಮಾಲೋಕ್ಯ ರಾಜಾನಮತಿಸುಂದರಂ ।
ಮಮೈವಾಯಂ ಮಮೈವಾಯಮಿತ್ಯೂಚುಸ್ತಾಃ ಪರಸ್ಪರಂ ॥೫೬॥

ರತ್ನಹರ್ಮ್ಯೇಷು ದಿವ್ಯೇಷು ಪುಷ್ಪಶಯ್ಯಾಕುಲೇಷ್ವಯಂ ।
ಚಚಾರ ರಾಜಾ ಸರ್ವತ್ರಾಪ್ಯೇಕೋಽನೇಕತ್ವಮಾಗತಃ ॥೫೭॥

ತೇಷು ಸರ್ವೇಷು ಹರ್ಮ್ಯೇಷು ಸ್ವಯಮೇಕೋಽಪಿ ಭೂಪತಿಃ ।
ದೃಷ್ಟಸ್ತಾಭಿರ್ಮಯಾ ಸಾಕಂ ಮಯಾ ಸಾಕಮಿತಿ ಸ್ಥಿತಃ ॥೫೮॥

ಅತ್ಯಂತಸಂತೋಷಭರಿತರಾದ ಆ ಮಂತ್ರಿಗಳೂ ಉದ್ಯಾನವನಕ್ಕೆ ಬಂದು ಸರೋವರದಲ್ಲಿ ಸ್ನಾನಮಾಡಿ, ಈಶ್ವರನನ್ನು ಆರಾಧಿಸಿದರು. ||೫೩||

ಅವರು ಶುದ್ಧವಾದ ಕಮಲ ಪುಷ್ಪಗಳಿಂದಲೂ ಮತ್ತು ಶ್ರೇಷ್ಠವಾದ ಸುಗಂಧ ದ್ರವ್ಯಗಳಿಂದಲೂ ವಿವಿಧವಾದ ಉಪಚಾರಗಳಿಂದೂ ಶಿವನನ್ನು ಪೂಜಿಸಿದರು. ||೫೪||

ಈಶ್ವರಾರಾಧನೆಯಲ್ಲಿ ಮಗ್ನರಾದ ಆ ಕನ್ಯೆಯರನ್ನು ನೋಡಿ ರಾಜನು ಸಂತೋಷಭರಿತನಾಗಿ ಅವರನ್ನು ವರಿಸಲಿಚ್ಛಿಸಿದನು. ||೫೫||

ಆ ಗಂಧರ್ವಕನ್ಯೆಯರೂ ಸಹ ಅತ್ಯಂತ ಸುಂದರನಾದ ರಾಜನನ್ನು ನೋಡಿ "ಇವನು ನನ್ನವನು "ಇವನು ನನ್ನ ಪ್ರಿಯನು "ಎಂದು ಅನ್ಯೋನ್ಯವಾಗಿ ಮಾತನಾಡಿಕೊಂಡರು. ||೫೬||

ರಾಜನು ಒಬ್ಬನಾದರೂ ಹೂವಿನ ಹಾಸಿಗೆಗಳಿಂದ ಅಲಂಕೃತವಾದ, ರತ್ನಮಯವಾದ ಪ್ರಾಸಾದದಲ್ಲಿ, ಅನೇಕ ರೂಪಗಳನ್ನು ತಾಳಿರುವನೋ ಎಂಬಂತೆ ಅಲ್ಲೆಲ್ಲಾ ಸಂಚರಿಸಿದನು. ||೫೭||

ರಾಜನೂ, ಒಬ್ಬನಾಗಿದ್ದರೂ ಸಹ, ರತ್ನಖಚಿತವಾದ ಎಲ್ಲಾ ಪ್ರಾಸಾದಗಳಲ್ಲಿಯೂ ಮಹಿಮೆಯಿಂದ ಅವನ ಆಕೃತಿಯು ಬೇರೆ ಬೇರೆ ಪ್ರತಿಬಿಂಬಿಸಿರಲು ಅದನ್ನು

ಏಕ ಏವ ಸ ಭೂಪಾಲಃ ಶತಲಕ್ಷಶರೀರಭಾಕ್ ।
ಏಕದಾ ತಾಭಿರಾನಂದಕ್ರೀಡಯಾ ಪರಯಾ ಸ್ಥಿತಃ ॥೫೯॥

ಸ ರಾಜಾ ವಿಸ್ಮಯಂ ದೃಷ್ಟ್ವಾ ಮಂತ್ರಿಭಿಃ ಸಹ ಸಾದರಂ ।
ಸಂತೋಷಂ ಪರಮಂ ಪ್ರಾಪ ಕೃತ್ಯಂ ಜಾತಮಿತಿ ಸ್ವಕಂ ॥೬೦॥

ಕೃತಂ ತತ್ರೈವ ನಗರಂ ರತ್ನಪ್ರಾಕಾರವೇಷ್ಟಿತಂ ।
ರತ್ನಮಂದಿರಸಂಕೀರ್ಣಂ ಶಿವಮಂದಿರವೀಕ್ಷಣಂ ॥೬೧॥

ಕರ್ತುರ್ಮಾಯಾಂತಿ ಗಂಧರ್ವಾಃ ಕೋಟಿಶಃ ಪ್ರತ್ಯಹಂ ಮುದಾ ॥೬೨॥

ತಸ್ಮಿನ್ವನೇ ನಿತ್ಯಮಹೋತ್ಸವಾನಾಂ ವಿಲೋಕನಾಯಾಮರಸುಂದರೀಣಾಂ।
ಗಣಃ ಸಮಾಯಾತಿ ಗಣೇಶ್ವರಾಣಾಂ ಗಣೋಽಪಿ ಗಂಧರ್ವಗಣೋಽಪಿ ನಿತ್ಯಂ ॥೬೩॥

ಭಾಗ್ಯಂ ಪ್ರವೃದ್ಧಂ ಮಹದಸ್ಯ ರಾಜ್ಞಃ
ಸಂಖ್ಯಾ ನ ಭಾಗ್ಯಸ್ಯ ವಿಶೇಷತಸ್ತು ।

ನೋಡಿ ಆ ಗಂಧರ್ವಸ್ತ್ರೀಯರು "ರಾಜನು ನನ್ನೊಂದಿಗೆ ಕ್ರೀಡಿಸಲು ಬರುತ್ತಿರುವನು. ನನ್ನೊಂದಿಗೆ ಬರುತ್ತಿರುವನು" ಎಂದು ಒಬ್ಬೊಬ್ಬರು ಭಾವಿಸಿದರು.॥೫೮॥

ಹೀಗೆ ಆ ರಾಜನು ಒಬ್ಬನೇ ಆಗಿದ್ದರೂ ಒಂದೇ ಕಾಲದಲ್ಲಿ ನೂರು ಲಕ್ಷ ಶರೀರಗಳನ್ನು ಧರಿಸಿ ಆ ರಮಣಿಯರೊಂದಿಗೆ ಕ್ರೀಡಿಸುತ್ತಿದ್ದನು. ॥೫೯॥

ಗಂಧರ್ವರಾಜನು ಅದ್ಭುತವಾದ ಈ ಕೃತಿಯನ್ನು ನೋಡಿ ತನ್ನ ಇಷ್ಟಾರ್ಥವು ನೆರವೇರಿತೆಂದು ತಿಳಿದು, ಮಂತ್ರಿಗಳೊಂದಿಗೆ ಪರಮಾನಂದವನ್ನೈದಿದನು. ॥೬೦॥

ಬಳಿಕ ಕ್ಷಣಕಾಲದಲ್ಲಿಯೇ, ಆ ವನದಲ್ಲಿ ಒಂದಾನೊಂದು ಪಟ್ಟಣವು ನಿರ್ಮಿಸಲ್ಪಟ್ಟಿತು. ಅದು ರತ್ನಖಚಿತವಾದ ಕೋಟೆಗಳಿಂದಲೂ ಮನೆಗಳಿಂದಲೂ ಕೂಡಿದ್ದಿತು. ಅಲ್ಲಿ ಶಿವಮಂದಿರಗಳು ಬಹು ಮನೋಹರವಾಗಿದ್ದುವು. ಅವುಗಳನ್ನು ನೋಡಲು ಪ್ರತಿದಿನವೂ ಅನೇಕ ಮಂದಿ ಗಂಧರ್ವರು ಅಲ್ಲಿಗೆ ಬರುತ್ತಿದ್ದರು. ॥೬೧-೬೨॥

ಆ ವನದಲ್ಲಿ ನಿತ್ಯವೂ ನಡೆಯುವ ಶಿವೋತ್ಸವವನ್ನು ನೋಡುವ ಕುತೂಹಲದಿಂದ ಅನೇಕ ದೇವತಾಸ್ತ್ರೀಯರೂ, ಪ್ರಮಥಗಣಗಳೂ ಮತ್ತು ಗಂಧರ್ವರೂ ಅಲ್ಲಿಗೆ ಗುಂಪು ಗುಂಪಾಗಿ ಬರುತ್ತಿದ್ದರು. ॥೬೩॥

ಕಾಲವು ಕಳೆದಂತೆಲ್ಲಾ ರಾಜನ ಭಾಗ್ಯವು ವೃದ್ಧಿಯನ್ನು ಹೊಂದುತ್ತಾ ಬಂದಿತು. ಆ ಭಾಗ್ಯವನ್ನು ವರ್ಣಿಸಲು ಅಸಾಧ್ಯವಾಗಿತ್ತು. ಅವನ ಎಲ್ಲಾ ಪತ್ನಿ

ಜಾತಾಃ ಕುಮಾರಾಶ್ಚ ಕುಮಾರತುಲ್ಯಾಃ
ಸರ್ವಾಸು ಭಾರ್ಯಾಸು ಶಿವಾರ್ಚಕಾಸ್ತೇ ॥೬೪॥

ಲಕ್ಷಂ ತದ್ವನಿತಾಃ ಸ್ವಭಾಗ್ಯಲಲಿತಾಃ ಭೂತಿತ್ರಿಪುಂಡ್ರಾಂಕಿತಾಃ
ರುದ್ರಾಕ್ಷೈಃ ಸಮಲಂಕೃತಾಃ ಶಿವಮಹಾದೇವೇತಿ ಗಾನೋದ್ಯತಾಃ ।
ಸರ್ವಾಸ್ತಾಶ್ಚ ಪತಿವ್ರತಾಃ ಶಿವಕಥಾಧ್ಯಾನಾನುವಾದೇ ರತಾಃ
ತನ್ಮಧ್ಯೇ ವಯಮಪ್ಯಪಾರವಿಭವಾಸ್ತತ್ಪಾಣಿಸಂಸ್ಪರ್ಶನಾತ್ ॥೬೫॥

ಏತಾದೃಶಂ ಭಾಗ್ಯಮನೇನ ಲಬ್ಧಂ
ಪ್ರದೋಷಕಾಲೇ ಶಿವದರ್ಶನೇನ ।
ಶಿವಾರ್ಚನಂ ಚೇತ್ಕ್ರಿಯತೇ ಪ್ರದೋಷೇ
ತತ್ಪುಣ್ಯಸಂಖ್ಯಾಗಣನಾಪಿ ಕೇನ ॥೬೬॥

ಅಯಂ ಮಹಾದೇವಪರಾಯಣತ್ವಾತ್
ನಾರಾಯಣಾದ್ಯೈರಪಿ ಪೂಜನೀಯಃ ।
ಪ್ರದೋಷಕಾಲೇ ಶಿವದರ್ಶನೇನ
ಕೋ ವಾ ನ ಸರ್ವಾಣಿ ಸುಖಾನಿ ಭುಂಕ್ತೇ ॥೬೭॥

ಯರಲ್ಲಿಯೂ ಕುಮಾರಸ್ವಾಮಿಯಂತೆ ಪರಾಕ್ರಮಿಗಳೂ, ಸುಂದರರೂ ಆದ ಸತ್ಪುತ್ರರು ಜನಿಸಿದರು. ಅವರೆಲ್ಲರೂ ಈಶ್ವರಾರಾಧಕರೇ ಆದರು. ॥೬೪॥

ಆ ಲಕ್ಷಸಂಖ್ಯಾಕರಾದ ಸ್ತ್ರೀಯರು ಭಾಗ್ಯವತಿಯರೂ, ವಿಭೂತಿಯನ್ನು ಧರಿಸಿದವರೂ, ರುದ್ರಾಕ್ಷಮಾಲಾಭೂಷಿತರೂ ಆಗಿ " ಶಿವ! " ಮಹಾದೇವ " ಎಂದು ಶಿವನನ್ನೇ ಸ್ಮರಿಸುತ್ತಾ ಗಾನವನ್ನು ಮಾಡುತ್ತಿದ್ದರು. ಮತ್ತು ಪತಿಭಕ್ತಿಯುಳ್ಳವರೂ ಶಿವಕಥಾಮೃತವನ್ನು ಕೇಳುವುದರಲ್ಲಿ ಆಸಕ್ತರೂ ಆಗಿದ್ದರು. ಅಂತಹ ಸ್ತ್ರೀಯರ ಪಾಣಿಸ್ಪರ್ಶದಿಂದ ನಾವೂ ಭಾಗ್ಯಶಾಲಿಗಳಾಗುವೆವು. ॥೬೫॥

ಪ್ರದೋಷಕಾಲದಲ್ಲಿ ಶಿವನನ್ನು ಸಂದರ್ಶಿಸಿದ ಮಾತ್ರದಿಂದಲೇ ರಾಜನು ಇಂತಹ ಭಾಗ್ಯವನ್ನು ಪಡೆದನು. ಹೀಗಿರುವಾಗ ಪ್ರದೋಷಕಾಲದಲ್ಲಿ ಶಿವನನ್ನು ಅರ್ಚಿಸುವುದರಿಂದುಂಟಾಗುವ ಪುಣ್ಯಪರಂಪರೆಗಳನ್ನು ವರ್ಣಿಸಲು ಸಾಧ್ಯವೇ? ॥೬೬॥

ಈಶ್ವರಾರಾಧಕನಾದ ಇವನು ಈಶ್ವರಧ್ಯಾನದಲ್ಲಿಯೇ ತತ್ಪರನಾಗಿರುವುದರಿಂದ ಶ್ರೀಮನ್ನಾರಾಯಣನೇ ಮೊದಲಾದ ದೇವತೆಗಳಿಗೂ ಪೂಜ್ಯನಾಗಿರುವನು.

ಪುಣ್ಯೈರೇವ ಮಹಾಪ್ರದೋಷಸಮಯೇ ದೃಷ್ಟ್ವಾಪಿ ಲಿಂಗಂ ಮುಹುಃ
ನತ್ವಾ ಭಕ್ತಿಪುರಃಸರಂ ಜಲಲವಂ ದತ್ವಾ ಚ ಬಿಲ್ವೀದಲಂ ।
ಭುಕ್ತ್ವಾಹಾರಮಹೋಪಹಾರಮಸಕೃತ್ ಶ್ರುತ್ವಾ ಕಥಾಂ ಶಾಂಭವೀಂ
ಹಿತ್ವಾ ಭೋಗರತಿಂ ಪ್ರಯಾತಿ ಹಿ ರಿಪುಂ ಹತ್ವಾ ಶಿವಂ ಶಾಂಭವಃ ॥೬೮॥

ಇತ್ಯೇತದ್ವಚನಂ ಶ್ರುತ್ವಾ ರಾಜ್ಞೀ ವಿಸ್ಮಿತಮಾನಸಾ ।
ತಮೇವ ಪ್ರಣತಾ ಪ್ರಾಹ ರಾಜಾನಂ ಭಕ್ತಿಪೂರ್ವಕಂ ॥೬೯॥

ತವ ಪ್ರಭಾವೋ ವಿಜ್ಞಾತಃ ಸರ್ವೋಽಪಿ ನೃಪಸತ್ತಮ ।
ಉದಾರಾಸ್ತವ ದಾರಾಸ್ತೇ ತಿಷ್ಠಂತ್ಯತ್ರ ಶಿವಾಲಯೇ ॥೭೦॥

ತಾಸ್ತು ಸ್ತನಂಧಯಾನ್ ಬಾಲಾನ್ ಗೃಹೀತ್ವಾ ಕ್ಷುಧಿತಾ ಅಪಿ ।
ಅತ್ರೈವಾಗತ್ಯ ತಿಷ್ಠಂತಿ ಶಿವಪೂಜಾಪರಾಯಣಾಃ ॥೭೧॥

ಪ್ರದೋಷಕಾಲದಲ್ಲಿ ಈಶ್ವರನನ್ನು ಸಂದರ್ಶಿಸುವುದರಿಂದ ಯಾವನುತಾನೇ ಸಕಲ ಸುಖಗಳನ್ನೂ ಅನುಭವಿಸಲಾರನು? ॥೬೭॥

ಈಶ್ವರಭಕ್ತನಾದವನು ತನ್ನ ಪೂರ್ವಜನ್ಮದ ಸುಕೃತವಿಶೇಷದಿಂದ ಪ್ರದೋಷ ಕಾಲದಲ್ಲಿ ಈಶ್ವರಲಿಂಗವನ್ನು ಸಂದರ್ಶಿಸಿ, ಭಕ್ತಿಪೂರ್ವಕವಾಗಿ ನಮಸ್ಕರಿಸಿ, ತಾನು ಶುದ್ಧೋದಕದಿಂದ ಅಭಿಷೇಕಮಾಡಿಸಿ, ಬಿಲ್ವಪತ್ರೆಯಿಂದ ಪೂಜಿಸುವನು. ಬಳಿಕ ಶಿವನೈವೇದ್ಯವನ್ನು ಭುಂಜಿಸಿ, ಈಶ್ವರಕಥಾಮೃತವನ್ನು ಲಾಲಿಸಿ ಕಾಮಕ್ರೋಧ ಗಳನ್ನು ದೂರವಾಗಿರಿಸಿ, ವಿಷಯಸುಖಗಳಿಂದ ವಿಮುಖನಾಗಿ, ಅಂತ್ಯದಲ್ಲಿ ಶಿವಸಾ ಯುಜ್ಯವನ್ನು ಪಡೆಯುವನು. ॥೬೮॥

ಈ ವಚನವನ್ನು ಕೇಳಿ, ರಾಜಪತ್ನಿಯು ಆಶ್ಚರ್ಯಗೊಂಡವಳಾಗಿ ರಾಜನಿಗೆ ಭಕ್ತಿಯಿಂದ ನಮಸ್ಕರಿಸಿ ಹೀಗೆ ಹೇಳಿದಳು. ॥೬೯॥

"ರಾಜೇಂದ್ರನೇ, ನಿನ್ನ ಮಹಿಮೆಯನ್ನು ತಿಳಿದುಕೊಂಡೆನು. ಉದಾರರಾದ ನಿನ್ನ ಪತ್ನಿಯರು ಈಶ್ವರಮಂದಿರದಲ್ಲಿ ಇರುವರು. ॥೭೦॥

ಅವರು ಹಸಿವು ಬಾಯಾರಿಕೆಗಳಿಂದ ಪೀಡಿತರಾದರೂ, ಅದನ್ನು ಗಣಿಸದೇ ಚಿಕ್ಕ ಚಿಕ್ಕ ಶಿಶುಗಳನ್ನು ಎತ್ತಿಕೊಂಡು, ಈಶ್ವರಾರಾಧನೆಯಲ್ಲಿಯೇ ಮಗ್ನರಾಗಿ ಈ ಶಿವಾಲಯದಲ್ಲಿ ಬಂದಿರುವರು. ॥೭೧॥

ಅಮಾತ್ಯಾಸ್ತೇ ವನದ್ವಾಪಿ ತಿಷ್ಠಂತ್ಯಾಗತ್ಯ ಕೋಟಿಶಃ ।
ತುರಂಗಾ ಮತ್ತಮಾತಂಗಾಃ ಕೋಟಿಯೋಽಪಿ ಸಮಾಗತಾಃ ॥೭೨॥

ನಗರಂ ವೇಷ್ಟಿತಂ ಸರ್ವಮಸ್ಮಾಕಂ ತೈರತಃ ಪರಂ ।
ಶಾಧಿ ಶಾಧಿ ಪ್ರಪನ್ನತ್ವಾನ್ಮಾಂ ಮಹೀಪಾಲಸತ್ತಮ ॥೭೩॥

ಇತಿ ತದ್ವಚನಂ ಶ್ರುತ್ವಾ ಸ ರಾಜಾ ಬಹಿರಾಗತಃ ।
ದೂರಾತ್ಸೇನಾಂ ದದರ್ಶಾಪಿ ದೃಷ್ಟ್ವಾ ದಾರಾನ್ ಶಿವಾಲಯೇ ॥೭೪॥

ತತೋ ಬಾಲಾಃ ಸಮುತ್ಥಾಯ ಬಾಲಕೈಃ ಸಹ ಸತ್ವರಂ ।
ಪ್ರಣತಾಃ ಸ್ಮೇರವದನಾಃ ಸಾಚೀಕೃತ್ಯ ಮುಖಾನ್ಯಪಿ ॥೭೫॥

ತತಸ್ತೇ ಬಾಲಕಾಃ ಸರ್ವೇ ಭೂತಿರುದ್ರಾಕ್ಷಭೂಷಣಾಃ ।
ಜನನೀಕಟಿಭಾಗೇಭ್ಯಶ್ಚ್ಯುತಾಸ್ತಂ ಪ್ರತಿಪೇದಿರೇ ॥೭೬॥

ಅರಣ್ಯದ ಗಡಿಯಲ್ಲಿ (ಎಲ್ಲೆಯಲ್ಲಿ) ನಿನ್ನ ಮಂತ್ರಿಶ್ರೇಷ್ಠರು ಬಂದು ನಿಂತಿರುವರು. ಇದಲ್ಲದೆ ಅನೇಕ ಕುದುರೆಗಳೂ ಮತ್ತು ಆನೆಗಳೂ ಇಲ್ಲಿ ಬಂದು ನೆರೆದಿರುವುವು. ॥೭೨॥

ನೃಪೋತ್ತಮನೇ, ಅವರು ನಮ್ಮ ನಗರವನ್ನೇ ಸುತ್ತುವರಿದಿರುವರು. ಆದುದರಿಂದ ಶರಣಾಗತಳಾಗಿ ಬಂದಿರುವ ನನ್ನನ್ನು ಕಾಪಾಡು." ॥೭೩॥

ಪಟ್ಟಮಹಷಿಯ ಈ ಮಾತನ್ನು ಕೇಳಿ ರಾಜನು ವನದಿಂದ ಹೊರಗೆ ಬಂದು ಈಶ್ವರಮಂದಿರದಲ್ಲಿದ್ದ ತನ್ನ ಪತ್ನಿಯರನ್ನು ನೋಡಿ, ದೂರದಲ್ಲಿ ನಿಂತಿದ್ದ ತನ್ನ ಸೇನೆಯನ್ನೂ ಕಂಡನು. ॥೭೪॥

ಬಳಿಕ ಅವನ ಪ್ರಿಯತಮೆಯರು ಮೇಲೆಕ್ಕೆದ್ದು, ಹಸನ್ಮುಖಿಯರಾಗಿ, ಮುಖಗಳನ್ನು ವಕ್ರವಾಗಿ ಮಾಡಿ, ಬಾಲಕರನ್ನೆತ್ತಿಕೊಂಡು ನಮಸ್ಕರಿಸಿದರು. ॥೭೫॥

ತರುವಾಯ ವಿಭೂತಿ, ರುದ್ರಾಕ್ಷಮಾಲೆ, ಇವುಗಳಿಂದ ಅಲಂಕೃತರಾದ ಆ ಬಾಲಕರು ತಾಯಿಯರ ಸೊಂಟದಿಂದ ಕೆಳಕ್ಕೆ ಜಾರಿ ಇಳಿದು, ತಂದೆಯ ಬಳಿಗೆ ಹೋದರು. ॥೭೬॥

ಶಿವ ಶಂಭೋ ಮಹೇಶೇತಿ ವದತಸ್ತಾನ್ ವಿಲೋಕ್ಯ ಸಃ ।
ದೃಢಮಾಲಿಂಗ್ಯ ಸಸ್ನೇಹಂ ಪಸ್ಪರ್ಶ ಚ ಶತಾಧಿಕಾನ್ ॥೭೭॥

ತೇಽಪಿ ಬಾಲಾಃ ಶಿವಂ ದೃಷ್ಟ್ವಾ ರತ್ನೈಃ ಸಂಪೂಜ್ಯ ಶಂಕರಂ ।
ಪ್ರಣಮ್ಯ ದಂಡವದ್ಭೂಮೌ ಚಕ್ರುರ್ನಾಟ್ಯಂ ಶಿವಾಂಗಣೇ ॥೭೮॥

ತಾನ್ವಿಲೋಕ್ಯ ಮುದಂ ಪ್ರಾಪ ಸ ರಾಜಾ ತೇಽಪಿ ಬಾಲಕಾಃ ।
ಪುನಃ ಪ್ರವೃತ್ತಾಃ ಸ್ತನ್ಯಾರ್ಥಂ ಪುನರ್ನಾಟ್ಯಾಯ ತೇ ಪುನಃ ॥೭೯॥

ಬಾಲಕಾನಾಂ ಶಿವಾಚಾರಂ ಶಿವನಾಟ್ಯಮಹೋತ್ಸವಂ ।
ದೃಷ್ಟ್ವಾ ರಾಜಾ ಪ್ರಹೃಷ್ಟೋಽಭೂನ್ಮೇನೇ ಧನ್ಯೋಽಹಮಿತ್ಯಪಿ॥೮೦॥

ತತಃ ಪರಂ ತು ಸಾ ರಾಜ್ಞೀ ತಂ ಪ್ರಣಮ್ಯ ಮಹೀಪತಿಂ ।
ಕೃತಾಂಜಲಿಪುಟಾ ಭೂತ್ವಾ ಪ್ರಾಹ ನಮ್ರನನಾ ನೃಪಂ ॥೮೧॥

ರಾಜನು ಶಿವ, ಶಂಭೋ, ಮಹೇಶ, ಎಂದು ಹೇಳುತ್ತಿರುವ ಆ ನೂರಾರು ಮಂದಿ ಬಾಲಕರನ್ನು ಬಿಗಿದಪ್ಪಿ, ಅವರ ಮೈಯ್ಯನ್ನು ವಿಶ್ವಾಸದಿಂದ ತಡವರಿಸಿದನು. ॥೭೭॥

ಆ ಬಾಲಕರು ಈಶ್ವರನನ್ನು ನೋಡಿ, ರತ್ನಗಳಿಂದ ಪೂಜಿಸಿ ದಂಡಾಕಾರವಾಗಿ ನಮಸ್ಕರಿಸಿ, ಶಿವಾಲಯದ ಮುಂಭಾಗದಲ್ಲಿ ನರ್ತನವನ್ನಭಿನಯಿಸಿದರು. ॥೭೮॥

ಅವರನ್ನು ನೋಡಿ ರಾಜನು ಅತ್ಯಂತ ಸಂತೋಷಭರಿತನಾದನು. ಆ ಬಾಲಕರು ನರ್ತನವು ಮುಗಿದ ಬಳಿಕ ಸ್ತನ್ಯಪಾನಮಾಡಿ ಪುನಃ ನಾಟ್ಯವನ್ನಭಿನಯಿಸಲು ಉಪಕ್ರಮಿಸಿದರು. ॥೭೯॥

ಬಾಲಕರ, ಆ ಈಶ್ವರ ಪೂಜೆಯನ್ನೂ ಮತ್ತು ನರ್ತನವನ್ನೂ ನೋಡಿ ರಾಜನು ಸಂತೋಷಭರಿತನಾಗಿ ತಾನು ಕೃತಕೃತ್ಯನಾದೆನೆಂದು ಭಾವಿಸಿದನು. ॥೮೦॥

ಆದಾದ ಬಳಿಕ, ಆ ರಾಜಪತ್ನಿಯು ರಾಜನಿಗೆ ನಮಸ್ಕರಿಸಿ ಅಂಜಲಿಬದ್ಧಳಾಗಿ ಮುಖವನ್ನು ತಗ್ಗಿಸಿ ಹೀಗೆಂದಳು. ॥೮೧॥

ಪುರಾ ದುರ್ಧೀರಭೂದ್ರಾಜನ್ ಸಾ ಬುದ್ಧಿರ್ವಿಲಯಂ ಗತಾ ।
ಅತಃ ಪರಂ ನಿವೃತ್ತಿಶ್ಚ ಜಾತಾ ದೋಷಾವಲೋಕನಾತ್ ॥೮೨॥

ಯಾವನ್ನ ವಿಷಯೇ ದೋಷೋ ದೃಶ್ಯತೇ ಮೋದಸಂಗಮಾತ್ ।
ತಾವತ್ಪ್ರವೃತ್ತಿರ್ವಿಷಯೇ ತದಭಾವೇನ ಸಾ ಪಿ ಹಿ ॥೮೩॥

ನಿವೃತ್ತಿರ್ಮನಸಸ್ತಾವದ್ವಿಷಯೇಭ್ಯೋಽತಿದುರ್ಲಭಾ ।
ಮಂದಂ ಮಂದಂ ನಿವೃತ್ತಿಃ ಸ್ಯಾನ್ಮಹಾದೇವಾಜ್ಞಯಾ ಪರಂ ॥೮೪॥

ಇತಿ ತದ್ವಚನಂ ಶ್ರುತ್ವಾ ಸ ರಾಜಾ ತುಷ್ಟಮಾನಸಃ ।
ಪಶ್ಯನ್ ಸ ಬಾಲಕಾನೇವ ರಾಜ್ಞೀಂ ತಾಮಾಹ ತತ್ತ್ವತಃ ॥೮೫॥

"ರಾಜನೇ! ಈ ಹಿಂದೆ ವಿಷಯಸುಖವೇ ಉತ್ಕೃಷ್ಟವಾದುದೆಂಬ ಕುತ್ಸಿತ ಬುದ್ಧಿಯು ನನ್ನಲ್ಲಿ ಉಂಟಾಗಿದ್ದಿತು. ಆದರೆ, ಅದೀಗ ನಿನ್ನ ದರ್ಶನದಿಂದ ಮಾಯವಾಗಿರುತ್ತದೆ. ನಿನ್ನ ಅಮೋಘವಾದ ದರ್ಶನವು ಲಭಿಸಿದ ಬಳಿಕ, ವಿಷಯಗಳಲ್ಲಿ ದೋಷಗಳು ತೋರಿಬಂದುದರಿಂದ, ಈಗ ಆ ದೋಷ ನಿವೃತ್ತಿಯು ಉಂಟಾಗಿರುತ್ತದೆ. ॥೮೨॥

ವಿಷಯ ಸುಖದಲ್ಲಿ ಉತ್ಕಟವಾದ ಪ್ರೀತಿಯಿರುವುದರಿಂದ, ಅದರಲ್ಲಿ ದೋಷಗಳು ಕಂಡುಬರುವುದಿಲ್ಲ. ಆದುದರಿಂದಲೇ ವಿಷಯಗಳಲ್ಲಿ ಪ್ರವೃತ್ತಿಯು ಸಂಭವಿಸುವುದು. ಆದರೆ ವಿಷಯಗಳಲ್ಲಿ ದೋಷವು ತೋರಿಬಂದ ಬಳಿಕ ಅದರಲ್ಲಿ ಪ್ರವೃತ್ತಿಯೇ ಉಂಟಾಗುವುದಿಲ್ಲ. ॥೮೩॥

ಮನಸ್ಸಿಗೆ ವಿಷಯಗಳ ದೆಸೆಯಿಂದ ನಿವೃತ್ತಿಯುಂಟಾಗುವುದೆಂದರೆ ಅದು ದುರ್ಲಭವೇ ಸರಿ. ಆದರೆ ಈಶ್ವರನ ಅನುಗ್ರಹವೊಂದಿದ್ದರೆ ಮನಸ್ಸಿಗೆ ಮೆಲ್ಲಮೆಲ್ಲನೆ ವಿಷಯಗಳಿಂದ ನಿವೃತ್ತಿಯೊದಗುವುದು." ॥೮೪॥

ರಾಣಿಯ ಮಾತನ್ನು ಕೇಳಿ ಸಂತೋಷಗೊಂಡ ಆ ರಾಜನು, ಬಾಲಕರನ್ನೇ ನೋಡುತ್ತಾ ರಾಜಪತ್ನಿಯನ್ನು ಕುರಿತು ಮುಂದೆ ಹೇಳುವಂತೆ ತತ್ತ್ವಗರ್ಭಿತವಾದ ಕೆಲವು ಮಾತುಗಳನ್ನಾಡಿದನು. ॥೮೫॥

ಸೌಂದರ್ಯವಿಷಯಾಕ್ರಾಂತಾಃ ಸ್ತ್ರಿಯಸ್ತಾಸಾಂ ಧನಂ ಹಿ ತತ್ ।
ಸ್ತ್ರೀಣಾಂ ನಿವೃತ್ತಿರತ್ಯಂತದುರ್ಲಭೈವ ಸ್ವಭಾವತಃ ॥೮೬॥

ಬಹುಧಾ ವಿಷಯಾಪೇಕ್ಷಾ ನಾರೀಣಾಮುಪಜಾಯತೇ ।
ವಿಷಯೇಷು ತತಸ್ತೇಷು ತದಂತಃಕರಣಂ ಖಲು ॥೮೭॥

ಕಿಂ ಚ ಬಾಲಾಸಿ ಸುಭಗೇ ನಿವೃತ್ತಿಸಮಯೋ ನ ತೇ ।
ನಿವೃತ್ತಿರಪಿ ಕಾಲೇನ ಜಾತಾ ದೈವಾತ್ಪ್ರವರ್ಧತೇ ॥೮೮॥

ಸತಿ ಭರ್ತರಿ ನಾರೀಣಾಂ ವೈರಾಗ್ಯಮುಚಿತಂ ಚ ನ ।
ತತ್ಸೇವಯಾ ಪರಂ ಶ್ರೇಯಃ ಸಧರ್ಮಃ ಪರಮಃ ಖಲು ॥೮೯॥

ಇತಿ ತದ್ವಚನಂ ಶ್ರುತ್ವಾ ಸಾ ರಾಜ್ಞೀ ಖಿನ್ನಮಾನಸಾ ।
ಪ್ರಣತಾ ಪ್ರಾಹ ಭೂಪಾಲಮಶ್ರುಪೂರ್ಣವಿಲೋಚನಾ ॥೯೦॥

"ಲೋಕದಲ್ಲಿ ಸ್ತ್ರೀಯರು ಸೌಂದರ್ಯವೆಂಬ ವಿಶೇಷಗುಣದಿಂದ ಕೂಡಿರುವರು. ಅದೇ ಅವರ ಧನವಾಗಿರುವುದು. ಆದುದರಿಂದ ಸ್ವಾಭಾವಿಕವಾಗಿಯೇ ಸ್ತ್ರೀಯರಿಗೆ ವಿಷಯಗಳಿಂದ ನಿವೃತ್ತಿಯುಂಟಾಗುವುದಿಲ್ಲ. ||೮೬||

ಅವರಿಗೆ ನಾನಾಬಗೆಯ ವಿಷಯಾನುರಾಗಗಳು ಸಂಭವಿಸುವುವು. ಆದುದರಿಂದಲೇ, ಅವರ ಚಪಲ ಚಿತ್ತವು ವಿಷಯಗಳಲ್ಲಿಯೇ ಆಸಕ್ತವಾಗಿರುತ್ತದೆ. ||೮೭||

ಎಲೌ, ಸೌಭಾಗ್ಯವತಿಯೇ! ಇದಲ್ಲದೇ ನೀನು ಇನ್ನೂ ತರುಣಿಯಾಗಿರುವೆ. ನಿನಗೆ ವಿಷಯಗಳಿಂದ ನಿವೃತ್ತಿಯುಂಟಾಗುವ ಕಾಲವು ಈಗ ಸಂಭವಿಸಿರುವುದಿಲ್ಲ; ಆದುದರಿಂದ ಕಾಲಕ್ರಮದಿಂದ ನಿನಗೆ ವಿಷಯ ನಿವೃತ್ತಿಯುಂಟಾಗಿ, ಅದು ಈಶ್ವರಾನುಗ್ರಹದಿಂದ ವೈರಾಗ್ಯವನ್ನು ಹೊಂದುವುದು. ||೮೮||

ಪತಿಯು ಜೀವಿಸುತ್ತಿರುವಾಗ ಸ್ತ್ರೀಯರಿಗೆ ವೈರಾಗ್ಯವು ಯೋಗ್ಯವಲ್ಲ. ಅನ್ಯಥಾ ಕಾಲಹರಣ ಮಾಡಬಾರದು. ಪತಿಸೇವೆಯೇ ಅವರ ಶ್ರೇಷ್ಠವಾದ ಧರ್ಮವಾಗಿರುವುದು." ||೮೯||

ರಾಜನ ಈ ಮಾತನ್ನು ಕೇಳಿ ರಾಣಿಯು ದುಃಖಿತಳಾಗಿ, ಕಣ್ಣೀರನ್ನು ಸುರಿಸುತ್ತಾ ಅವನಿಗೆ ನಮಸ್ಕರಿಸಿ ಹೀಗೆಂದಳು. ||೯೦||

|| ರಾಜ್ಞ್ಯುವಾಚ ||

ಭರ್ತೃಸೇವಾ ಪರಂ ಧರ್ಮಃ ಸ್ತ್ರೀಣಾಮಿತಿ ವಚಃ ಪರಂ ।
ಸತ್ಯಮತ್ರ ನ ಸಂದೇಹಃ ಪತಿಃ ಸಂಸಾರಲೋಲುಪಃ ||೯೧||

ಶಿವನಾಮ ನ ವಿಜ್ಞಾತಂ ತೇನ ಭೂಪೇನ ಭೂಪತೇ ।
ನ ಶ್ರುತಾ ಶಿವವಾರ್ತಾಪಿ ಶ್ರೋತವ್ಯಮಿತಿ ಧೀರಪಿ ||೯೨||

ತ್ರಿಪುಂಡ್ರರೇಖಾಕಾಂತಿಶ್ಚ ನ ತದ್ಭಾಲೇ ನೃಪೋತ್ತಮ ।
ರುದ್ರಾಕ್ಷಮಾಲಾವಾರ್ತಾಪಿ ನ ಶ್ರುತಾ ತೇನ ಸರ್ವಥಾ ||೯೩||

ನ ಶ್ರುತಃ ಶಿವಲಿಂಗಾನಾಂ ಮಹಿಮಾ ಪೂಜನಸ್ಯ ತು ।
ಶಾಂಭವೈಃ ಸಹ ವಾರ್ತಾಪಿ ನ ಕೃತಾ ತೇನ ಭೂಪತೇ ||೯೪||

ಇದಂ ಪುರಾತನಂ ಸ್ಥಾನಂ ಶಿವಸ್ಯ ಪರಮಾತ್ಮನಃ ।
ನ ದೃಷ್ಟಮೇವ ನೃಪತೇ ಕದಾಪಿ ನಿಕಟಸ್ಥಿತಂ ||೯೫||

ಎಲೈ ನೃಪೋತ್ತಮನೇ! ಸ್ತ್ರೀಯರಿಗೆ ಪತಿಸೇವೆಯೇ ಶ್ರೇಷ್ಠವಾದ ಧರ್ಮವಾಗಿರುವುದೆಂಬ ನಿನ್ನ ಈ ವಚನವು ಸತ್ಯವಾದುದು. ಇದರಲ್ಲಿ ಯಾವ ಸಂಶಯವೂ ಇಲ್ಲ. ಆದರಂತೆ ನನ್ನ ಪತಿಯೂ ಸಂಸಾರದಲ್ಲಿಯೇ ಆಸಕ್ತನಾಗಿರುವನು. ||೯೧||

ರಾಜನೇ, ನನ್ನ ಪತಿಯಾದ ಆ ರಾಜನು, ಶಿವನಾಮದ ಅರ್ಥವನ್ನೇ ತಿಳಿದುಕೊಂಡಿರುವುದಿಲ್ಲ. ಇಷ್ಟೇಕೆ! ಅವನು ಈ ಲೋಕಕ್ಕೆ ಶಿವನೆಂಬ ದೇವನು ಇರುವನೆಂಬುದನ್ನೇ ಕೇಳಿಲ್ಲ. ಅದನ್ನು ಕೇಳಬೇಕೆಂಬ ಕುತೂಹಲವೂ ಅವನಲ್ಲಿ ತೋರುವುದಿಲ್ಲ. ||೯೨||

ಅವನು ಹಣೆಯಲ್ಲಿ ತ್ರಿಪುಂಡ್ರವನ್ನು ಧರಿಸುವುದನ್ನೇ ಅರಿಯನು. ರುದ್ರಾಕ್ಷಮಾಲೆಯನ್ನಂತೂ ಎಂದಿಗೂ ಕಂಡವನೇ ಅಲ್ಲ. ||೯೩||

ಶಿವಲಿಂಗಪೂಜೆಯ ಮಹಿಮೆಯನ್ನೇ ಅವನು ಅರಿತಿರುವುದಿಲ್ಲ. ಈಶ್ವರ ಭಕ್ತರೊಡನೆ ಸಂಭಾಷಣೆಯನ್ನು ಸಹ ಮಾಡಿಲ್ಲ. ||೯೪||

ಪರಶಿವನ ವಾಸಸ್ಥಾನವಾಗಿರುವ ಈ ಪ್ರದೇಶವು ಅತಿ ಪ್ರಾಚೀನವಾದುದು. ಈ ವನವು ನಮ್ಮ ವಾಸಸ್ಥಳಕ್ಕೆ ಅತ್ಯಂತ ಸಮೀಪದಲ್ಲಿದ್ದರೂ, ಇದನ್ನು ಆ ನನ್ನ ಪತಿಯು ನೋಡಿಯೇ ಇಲ್ಲ. ||೯೫||

ಮುದಾ ವನವಿಹಾರಾರ್ಥಮಾಗತ್ಯಾಪ್ಯತ್ರ ಸರ್ವಥಾ ।
ಇದಂ ನ ದೃಷ್ಟಂ ದೇವಸ್ಯ ಲಿಂಗಂ ಮಂಗಳದಾಯಕಂ ॥೯೬॥

ತರುಣೀಗಣಸಂಕೀರ್ಣಃ ಸರ್ವದಾ ಪುಣ್ಯವರ್ಜಿತಃ ।
ತರುಣೀವಾರ್ತಯಾ ಜನ್ಮ ಕೃತವಾನ್ ವ್ಯರ್ಥಮೇವ ಚ ॥೯೭॥

ಲಕ್ಷಶಃ ಸಂತಿ ವನಿತಾಸ್ತಸ್ಯ ತಾವನ್ಮದೋದ್ಧತಾಃ ।
ನೀತಂ ತಾಭಿರಹೋರಾತ್ರಂ ಸಾಕಂ ಭೂಪೇನ ಭೂಪತೇ ॥೯೮॥

ಮಮಾಪಿ ಬುದ್ಧಿರತ್ಯಂತಂ ದುಷ್ಟಾ ಪುರುಷಸಂಗಮೇ ।
ಮನಃ ಪುನಃ ಪುನಃ ಪ್ರೀತಂ ವಿರತಿರ್ನೋಪಜಾಯತೇ ॥೯೯॥

ತ್ವಯಾಪಿ ಸಹ ಸಂಯೋಗಃ ಕರ್ತವ್ಯ ಇತಿ ಧೀರಭೂತ್ ।
ತವೈವ ಧೈರ್ಯಾನ್ಮಾಭೂನ್ಮೇ ಸಂಗಃ ಪಾತಕಸಾಧನಂ ॥೧೦೦॥

ಅವನು ವನವಿಹಾರವನ್ನು ಉದ್ದೇಶಿಸಿಯಾದರೂ ಈ ಪ್ರದೇಶಕ್ಕೆ ಬಂದು ದೇವದೇವನಾದ ಈಶ್ವರನ ಈ ಲಿಂಗವನ್ನು ನೋಡಬಾರದೇ! ॥೯೬॥

ಇದುವರೆಗೂ ಯಾವ ಸತ್ಕರ್ಮಗಳನ್ನೂ ಆಚರಿಸದೆ, ಪತಿದೇವನು ನಿರಂತರವೂ ಯೌವನಭರಿತರಾದ ಸ್ತ್ರೀಯರ ನಡುವೆಯೇ ಇರುವನು. ಸ್ತ್ರೀ ಸುಖದಲ್ಲಿ ಲೋಲುಪನಾಗಿಯೇ ತನ್ನ ಜೀವಿತವನ್ನು ವೃಥಾ ಕಳೆಯುತ್ತಿರುವನು. ॥೯೭॥

ಆತನಿಗೆ ಯೌವನದಿಂದ ಹಿಗ್ಗಿ ಮೆರೆಯುವ ಅನೇಕ ರಮಣಿಯರು ಇರುವರು. ಅವನು ಹಗಲಿರಳು ಅವರೊಂದಿಗೆ ಸುಖಲೋಲುಪನಾಗಿ ಕಾಲವನ್ನು ಕಳೆಯುತ್ತಿರುವನು. ॥೯೮॥

ನನಗೂ ಸಹ, ಆ ಸಹವಾಸದಿಂದ ಪುರುಷಸಂಗವನ್ನು ಮಾಡಬೇಕೆಂಬ ದುರ್ಬುದ್ಧಿಯುಂಟಾಗಿರುವುದು. ನನ್ನ ಚಿತ್ತವು ಬಾರಿಬಾರಿಗೂ ಪುರುಷರನ್ನು ಪ್ರೀತಿಸುತ್ತಲೇ ಇರುವುದು. ಅದಕ್ಕೆ ಕ್ಷಣಕಾಲವಾದರೂ ವೈರಾಗ್ಯವುದ್ಭವಿಸುವಂತಿಲ್ಲ. ॥೯೯॥

ಎಲೈ ಭೂಪಾಲಕನೇ, ಇದಕ್ಕೆ ಮೊದಲು, ನನಗೆ ಪರಪುರುಷನಾದ ನಿನ್ನೊಂದಿಗೂ ಸಹ ಕ್ರೀಡಿಸಬೇಕೆಂಬ ದುರ್ಬುದ್ಧಿಯುಂಟಾಯಿತು. ಆದರೆ, ನಿನ್ನ ಅಮೋಘವಾದ ದರ್ಶನದಿಂದ, ಮನಸ್ಸಿನಲ್ಲಿ ಒಂದು ವಿಧವಾದ ಸ್ಥೈರ್ಯವು ಲಭಿಸಿ, ಪಾಪಕರವಾದ ಆ ಕಾರ್ಯದಲ್ಲಿ ಪ್ರವೃತ್ತಿಯುಂಟಾಗಲಿಲ್ಲ. ॥೧೦೦॥

ತತ್ತ್ವಬೋಧಃ ಕೃತಸ್ತೇನ ವಿರತಿರ್ಮಮ ಜಾಯತೇ ।
ಅಶಾಂಭವಪತಿಃ ಪ್ರಾಪ್ತೋ ಮಯಾ ದುರ್ಭಗಯಾ ಖಲು ॥೧೦೧॥

ಭರ್ತಾರಂ ಶಾಂಕರಂ ಪ್ರಾಪ್ಯ ಭವಂತಂ ಭಗವತ್ಪರಂ ।
ಏತಾಃ ಸುಖೇನ ತಿಷ್ಠಂತಿ ಭಾಗ್ಯಮೇತಾದೃಶಂ ಕುತಃ ॥೧೦೨॥

ಇಹಾಪಿ ಸುಖಮತ್ಯಂತಂ ಶಾಂಕರೇ ಸತಿ ಭರ್ತರಿ ।
ಪರಲೋಕಸುಖಂ ತಾವತ್ಸುಲಭಂ ತೇನ ಸಂಗಮೇ ॥೧೦೩॥

ಸುಖಂ ಸದಾ ಶಾಂಕರಭರ್ತೃಯೋಗಾತ್
ನಾರೀ ಸಮಾಪ್ನೋತಿ ತಪಃ ಫಲೇನ ।
ಭರ್ತಾರಮೀಶಾನಪರಂ ಪರತ್ರ
ಸುಖಾಯ ಯಾತ್ರಾಪಿ ನ ಸಂಶಯೋಽತ್ರ ॥೧೦೪॥

ತಪ್ತಂ ತಪಃ ಪೂರ್ವಮಘೋರಮಾಭಿಃ
ಭರ್ತಾರಮೀಶಾನಪರಂ ಮಹೇಶ ।

ನೀನು ಈಗ ನನಗೆ ತತ್ತ್ವವನ್ನು ಉಪದೇಶಿಸಿರುವೆ. ಅದರಿಂದ ಈಗ ನನಗೆ ವೈರಾಗ್ಯವುಂಟಾಗಿರುವುದು. ದುರ್ಭಾಗ್ಯಳಾದ ನನಗೆ, ಈಶ್ವರಭಕ್ತಿ ವಿರಹಿತನಾದ ಪತಿಯು ದೊರಕಿರುವನು. ॥೧೦೧॥

ಈ ಸ್ತ್ರೀಯರು, ಈಶ್ವರಭಕ್ತನಾದ ನಿನ್ನನ್ನು ಪತಿಯನ್ನಾಗಿ ಹೊಂದಿ ಸುಖದಿಂದಿರುವರು. ಆದರೆ ಹತಭಾಗ್ಯಳಾದ ನನಗೆ ಆ ಭಾಗ್ಯವೆಲ್ಲಿಯದು ? ॥೧೦೨॥

ಈಶ್ವರಭಕ್ತನಾದ ಪತಿಯು ದೊರಕಿದರೆ ಈ ಲೋಕದಲ್ಲಿಯೂ ಅಪಾರವಾದ ಸುಖವು ಲಭಿಸುವುದು. ಅವನ ಸಹವಾಸದಿಂದ ಪರಲೋಕಸುಖವೂ ಅನಾಯಾಸವಾಗಿ ದೊರಕುವುದು. ॥೧೦೩॥

ಸ್ತ್ರೀಯು ಪೂರ್ವಜನ್ಮದ ಸುಕೃತವಿಶೇಷದಿಂದ ಈಶ್ವರಭಕ್ತನಾದ ಪತಿಯನ್ನು ಪಡೆದು ಅವನಿಂದ ಸದಾ ಸುಖವನ್ನನುಭವಿಸುವಳು. ಈಶ್ವರಭಕ್ತನಾದ ಅವನ ಸಹವಾಸದಿಂದಲೇ ಪರಲೋಕದಲ್ಲಿಯೂ ಸುಖವನ್ನು ಹೊಂದುವಳು. ಇದು ನಿಶ್ಚಯ. ॥೧೦೪॥

ಈ ನಾರಿಯರು ಪೂರ್ವಜನ್ಮದಲ್ಲಿ "ಶಿವನೇ ನಮಗೆ ಈಶ್ವರಭಕ್ತನಾದ ಪತಿಯನ್ನು ದಯಪಾಲಿಸು" ಎಂದು ಈಶ್ವರನನ್ನು ಕುರಿತು ಕಠಿನವಾದ ತಪಸ್ಸನ್ನು

ದೇಹೀತಿ ದತ್ತಃ ಪುರುಷಃ ಶಿವೇನ
ತ್ವಮೇವ ಸೌಭಾಗ್ಯನಿಧಾನದಕ್ಷಃ ॥೧೦೫॥

ಮಯಾಪಿ ಭರ್ತಾ ದುರದೃಷ್ಟಯೋಗಾತ್
ಅಶಾಂಕರಾಗ್ರೇಸರ ಏವ ಲಬ್ಧಃ ।
ಅತಃ ಪರಂ ತಸ್ಯ ತು ಸೇವಯಾಪಿ
ಸದಾ ಪರಂ ದುಃಖಪರಂಪರಾ ಸ್ಯಾತ್ ॥೧೦೬॥

ಅಶಾಂಕರಂ ಪಶ್ಯತಿ ಯಃ ಪ್ರಮಾದಾತ್
ಸ ಯಾತಿ ತಾವನ್ನರಕಂ ಸುತಂ ವಾ ।
ತಾತಂ ತಥಾ ಭ್ರಾತರಮಾಶ್ರಿತಂ ವಾ
ಭರ್ತಾರಮಪ್ಯತ್ರ ನ ಸಂಶಯೋಽಸ್ತಿ ॥೧೦೭॥

ಭರ್ತಾ ತಾವದುಮಾಸಹಾಯಚರಣಾಂಭೋಜಾರ್ಚಕೋ ದುರ್ಲಭಃ
ತಸ್ಮಾದ್ದೇಹವಿಸರ್ಜನೇನ ಭಸಿತೇನೋದ್ಧೂಲ್ಯ ಲಿಂಗಾಲಯೇ ।
ಜಪ್ತ್ವಾ ಶಂಕರ ಶಂಕರೇತ್ಯಪಿ ಮುಹುರ್ಯಾಸ್ಯೇ ಪದಂ ಶಾಂಭವಂ
ಭೋಗೇಚ್ಛಾ ನ ಮಮಾಸ್ತಿ ಶಂಕರಪದಾಂಭೋಜೇ ಶಪಾಮಿ ಧ್ರುವಂ॥೧೦೮॥

ಆಚರಿಸಿರುವರು. ಈಶ್ವರನು ಅವರ ತಪಸ್ಸಿಗೆ ಮೆಚ್ಚಿ ಅವರಿಗೆ ಈ ಜನ್ಮದಲ್ಲಿ ಈಶ್ವರಭಕ್ತನೂ, ಸುಖಕರನೂ ಆದ ನಿನ್ನನ್ನು ಪತಿಯನ್ನಾಗಿ ದಯಪಾಲಿಸಿರುವನು. ||೧೦೫||

ನಾನಾದರೋ ನನ್ನ ದುರದೃಷ್ಟದಿಂದ ಈಶ್ವರದ್ವೇಷಿಗಳಲ್ಲಿ ಅಗ್ರಗಣ್ಯನಾದ ಪತಿಯನ್ನು ಪಡೆದಿರುವೆನು. ಇನ್ನು ಅವನನ್ನು ಸೇವಿಸಿದರೆ ನನಗೆ ಯಾವಾಗಲೂ ದುಃಖಪರಂಪರೆಗಳೇ ಸಂಭವಿಸುವುವು. ||೧೦೬||

ಈಶ್ವರನಲ್ಲಿ ಭಕ್ತಿಯಿಲ್ಲದ ಮಗ, ತಂದೆ, ಸಹೋದರ, ಪತಿ, ಇವರ ಸಂಸರ್ಗದಿಂದಲೂ, ದರ್ಶನಾದಿಗಳಿಂದಲೂ ಮಾನವನು ನರಕವನ್ನೈದುವನು. ಅಶಾಂಕರ ಸಹವಾಸವು ಅಷ್ಟು ಪಾಪಕರ. ಇದು ನಿಜ. ||೧೦೭||

ಸ್ತ್ರೀಯರಿಗೆ ಈಶ್ವರಭಕ್ತನಾದ ಪತಿಯು ದೊರಕುವುದು ದುರ್ಲಭ. ಆದುದರಿಂದ ಶಿವನ ಸನ್ನಿಧಿಯಲ್ಲಿ ಮೈಗೆ ಭಸ್ಮವನ್ನು ಲೇಪಿಸಿ, "ಶಂಕರ, ಶಂಕರ" ಎಂದು ಶಿವನಾಮವನ್ನು ಜಪಿಸಿ, ಇಲ್ಲಿಯೇ ನಶ್ವರವಾದ ಈ ದೇಹವನ್ನು ತ್ಯಜಿಸಿ

ಭರ್ತಾ ಮೇ ಶಿವ ಏವ ಮೇ ಶರಣಮಿತ್ಯಸ್ಮಾಸ್ತಿ ಕೋ ದುರ್ಲಭೋ
ನ ಸ್ತ್ರೀಣಾಂ ಪುರುಷಾಂತರಾನ್ವಯಮತಿಃ ಪಾಪಾಯ ಸಾ ಕೇವಲಂ ।
ತೇನಾಶಾಂಕರಭರ್ತೃಯೋಗವಿರತಿರ್ಧರ್ಮಾರ್ಥ ಇತ್ಯೇವ ಮೇ
ನ ಸ್ಯಾತ್ಸಾ ಯಮಯಾತನಾಪಿ ಸುತರಾಂ ಜನ್ಮಾನ್ವಯೋಽಪಿ ಧ್ರುವಂ॥೧೯॥

ಭೂಪಾಶಾಂಭವಭರ್ತೃಯೋಗವಿರತಿಃ ಪುಣ್ಯಾತ್ಪರಂ ಜಾಯತೇ
ಪುಣ್ಯಾನ್ಯಪ್ಯಮಿತಾನಿ ತಾವದಧುನಾ ತ್ವತ್ಪಾದಸಂದರ್ಶನಾತ್ ।
ಜಾತಾನ್ಯತ್ರ ನ ಸಂಶಯೋಽತ್ರ ಸುಕೃತಕ್ಷೇತ್ರೇ ಪವಿತ್ರೇಽಧುನಾ
ಗಾತ್ರೇ ಮೇ ವಿರತಿಸ್ತ್ರಿನೇತ್ರಕೃಪಯಾ ಸಾಕ್ಷೀ ಸ ಫಾಲಾನಲಃ ॥೧೧೦॥

ಉದ್ಧೂಲ್ಯಾಂಗಾನ್ಯತ್ರ ರುದ್ರಾಕ್ಷಮಾಲಾ
ಕಂಠೇ ಕರ್ಣೇ ಬಾಹುಯುಗ್ಮೇ ಲಲಾಟೇ ।

ಶಿವಲೋಕವನ್ನು ಪಡೆಯುವೆನು. ನನಗೆ ಶಂಕರನ ಅಡಿದಾವರೆಯನ್ನು ಸೇವಿಸುವುದರಲ್ಲಿಯೇ ಇಚ್ಛೆಯಿರುವುದಲ್ಲದೇ, ವಿಷಯಸುಖದಲ್ಲಿ ಎಂದಿಗೂ ಅಪೇಕ್ಷೆಯಿಲ್ಲ. ಶಿವಸನ್ನಿಧಿಯಲ್ಲಿ ಈ ಪ್ರತಿಜ್ಞೆಯನ್ನು ಕೈಗೊಳ್ಳುವೆನು. ||೧೦೮||

ಶಿವನೇ ನನ್ನ ಪತಿಯಾಗಿರುವನು. ಅವನೇ ನನ್ನನ್ನು ರಕ್ಷಿಸುವವನು. ಈ ರೀತಿಯಲ್ಲಿ ನಾನು ಆ ಶಿವನನ್ನೇ ಮರೆಹೊಗಲು ಅವನು ನನಗೆ ದುರ್ಲಭನೇ? ಸ್ತ್ರೀಯರಿಗೆ ಪರಪುರುಷರ ಸಂಗದಲ್ಲಿ ಅಭಿಲಾಷೆಯು ಉಚಿತವಲ್ಲ. ಅದು ಪಾಪಕರ. ಆದುದರಿಂದ ಈಶ್ವರನಿಂದಕನಾದ ಪತಿಯಲ್ಲಿ ವೈರಾಗ್ಯ ತಾಳುವುದು ನನ್ನ ಧರ್ಮವೇ ಅಲ್ಲವೆ! ಇದರಿಂದ ಪರಲೋಕದಲ್ಲಿ ಅನುಭವಿಸುವ ಯಮಯಾತನೆಯೂ, ಪುನರ್ಜನ್ಮವೂ ಸಂಭವಿಸಲಾರದು. ||೧೦೯||

ರಾಜನೇ ! ಈಶ್ವರಭಕ್ತನಲ್ಲದಿರುವ ಪತಿಯ ವಿಷಯದಲ್ಲಿ, ವೈರಾಗ್ಯವು ಪುಣ್ಯವಿಶೇಷದಿಂದಲೇ ಲಭಿಸುವುದು. ನನಗಾದರೋ ಈಗ, ನಿನ್ನ ಪಾದದರ್ಶನದ ಮಾತ್ರದಿಂದಲೇ ಅಪಾರವಾದ ಪುಣ್ಯವು ಲಭಿಸಿರುವುದು. ಇದರಲ್ಲಿ ಸಂಶಯವಿಲ್ಲ. ಈಶ್ವರನ ಅನುಗ್ರಹದಿಂದ ಪವಿತ್ರವಾದ ಈ ಪುಣ್ಯಕ್ಷೇತ್ರದಲ್ಲಿ ನನಗೆ, ನಶ್ವರವಾದ ಈ ದೇಹದಲ್ಲಿ ಜುಗುಪ್ಸೆಯುಂಟಾಗಿರುವುದು. ಈ ಮಾತಿನಲ್ಲಿ ಪರಶಿವನೇ ಸಾಕ್ಷಿ. ||೧೧೦||

ಈ ಪುಣ್ಯಕ್ಷೇತ್ರದಲ್ಲಿ, ಶರೀರದ ಆದ್ಯಂತವನ್ನೂ ಭಸ್ಮದಿಂದ ಲೇಪಿಸಿ, ಕೊರಳು ಕಿವಿಗಳು, ತೋಳುಗಳು, ಹಣೆ, ಮೂಗು ಮುಂತಾದ ಅವಯವಗಳಲ್ಲಿ ರುದ್ರಾಕ್ಷಿ

ನಾಸಾಯಾಮುಷ್ಯಸ್ತು ಕಿಂ ಮೌಕ್ತಿಕೇನ
ಸೀಮಂತೇ ಮಾ ಮಾಸ್ತು ಮೇ ರತ್ನಮಾಲಾ ॥೧೧೧॥

ಅಲಂ ಕನಕಕಂಕಣೈರಲಮಪಾರರತ್ನಸ್ಫುರತ್
ಸುವರ್ಣರಚಿತಾಂಗದೈರಲಮಮೂಲ್ಯಕಾಂಚ್ಯಾದಿಭಿಃ ।
ಅಲಂ ವಿವಿಧವೀಟಿಕಾರಸಕುಲಾನುರಾಗೈರಲಂ
ಹರಸ್ಮರಣಕಾರಣಪ್ರವಣಮಸ್ತು ಚಿತ್ತಂ ಮಮ ॥೧೧೨॥

ಅಲಂ ವಿವಿಧಮಂಡನಸ್ಫುರಣರಮ್ಯಹರ್ಮ್ಯಸ್ಫುರ
ನ್ಮರಂದರಸಲೋಲುಪಭ್ರಮರಕುಂದಶಯ್ಯಾಸನೈಃ ।
ಕುಶೇಷು ಶಯನಂ ವರಂ ಹರಪದಾಂಬುಜಾರಾಧನ
ಶ್ರಮಪ್ರಭವನಿದ್ರಯಾ ಪರಮಭದ್ರಯಾ ಮೇ ಗತಿಃ ॥೧೧೩॥

ಅಲಂ ರಂಡಾಗಾನೈರಲಮಖಿಲಚಂಡಾಲತರುಣೀ
ರಣತ್ಕಾಂಚೀರಂಗಸ್ಥಲವಿಪುಲನಾಟ್ಯಾಂಗಣಗಣೈಃ ।

ಮಾಲೆಯನ್ನೂ ಧರಿಸುವೆನು. ಮೂಗಿನಲ್ಲಿ, ಸೀಮಂತದಲ್ಲಿ (ಬೈತಲೆ) ಈ ಮುತ್ತನ್ನು ಧರಿಸುವುದರಿಂದೇನು ಫಲ? ಈ ರತ್ನಮಾಲಿಕೆಯಿಂದಲಾದರೂ ಯಾವ ಪುರುಷಾರ್ಥವಿರುವುದು? ಆದುದರಿಂದ ನಾನು ಈ ಆಭರಣಗಳನ್ನು ಎಂದೂ ಅಪೇಕ್ಷಿಸುವುದಿಲ್ಲ. ॥೧೧೧॥

ಈಗ ನನಗೆ, ಸುವರ್ಣಮಯವಾದ ಈ ಬಳೆಗಳೂ, ರತ್ನಖಚಿತವಾದ ಭುಜಕೀರ್ತಿಗಳೂ, ಮತ್ತು ಒಡ್ಯಾಣಗಳೂ (ಸೊಂಟಪಟ್ಟಿ) ಬೇಕಾಗಿರುವುದಿಲ್ಲ. ನಾನಾ ಬಗೆಯ ಸುಗಂಧ ದ್ರವ್ಯಗಳಿಂದ ಕೂಡಿರುವ ತಾಂಬೂಲದಲ್ಲಿ ಆಸಕ್ತಿಯಿರುವುದಿಲ್ಲ. ನನ್ನ ಈ ಚಿತ್ತವು ಅನವರತವೂ ಈಶ್ವರಧ್ಯಾನದಲ್ಲಿಯೇ ನಿರತವಾಗಿರಲಿ. ॥೧೧೨॥

ನಾನಾವಿಧವಾದ ಅಲಂಕಾರಗಳಿಂದ ಭೂಷಿತವಾದ ಪ್ರಾಸಾದಗಳಲ್ಲಿ, ಮೃದುವಾದ ಹಾಸಿಗೆಗಳು ಮತ್ತು ಆಸನಗಳೂ ನನಗೀಗ ಬೇಕಿಲ್ಲ. ಮಲ್ಲಿಗೆಯ ಹೂವಿನಿಂದ ಕಚ್ಚಿಸಲ್ಪಟ್ಟ ಆ ಹಾಸಿಗೆಗಿಂತಲೂ, ದರ್ಭಶಯನದ ಮೇಲೆ ಮಲಗುವುದೇ ಹಿತಕರವಾದುದು. ಈಶ್ವರನ ಅಡಿದಾವರೆಗಳ ಸೇವೆಯಿಂದುಂಟಾದ ಶ್ರಮದಿಂದ ಬರುವನಿದ್ದೆಯೇ ನನಗೆ ಸುಖಕರವಾಗಿದೆ. ॥೧೧೩॥

ರಂಡೆಯಂತಿರುವ ವೇಶ್ಯೆಯರ ಮಧುರವಾದ ಗಾನವನ್ನು ಕೇಳುವುದರಲ್ಲಿ ವಿರಕ್ತಿಯುಂಟಾಗಿರುವುದು. ರಂಗ ಸ್ಥಲವನ್ನು ಪ್ರತಿಧ್ವನಿಗೊಳಿಸುವ ರತ್ನ ಖಚಿತವಾದ

ಅಲಂ ಮಾರಾರಾವೈಃ ಸ್ಮರಹರಪದಾಂಭೋಜಯುಗಳಂ
ಮುಹುಃ ಸ್ಮೃತ್ವಾ ತ್ಯಕ್ಷ್ಯೇ ತನುಮಿಹಮಹಾದೇವಕೃಪಯಾ ॥೧೧೪॥

ಹಾರೋಪಹಾರಪರಿಕಲ್ಪಿತನೀರಧಾರಾ
ಮಾಹಾರಮೇತ್ಯ ಕುಹರೋದರಪೂರಣಾಯ ।
ವಿಶ್ವೇಶ್ವರಸ್ಮರಣಮೇವ ಕರೋಮಿ ಚಿತ್ತೇ
ಕೃತ್ವಾ ಶಿವಾಪತಿಪದಾಂಬುಜಮಾದರೇಣ ॥೧೧೫॥

ರತಿಪತಿಹಿತಭೂತಕ್ರೀಡಯಾ ವ್ರೀಡಯಾಲಂ
ಸ್ಮರಣಚರಣಘಾತೈಸ್ತತ್ಕರಾವೇಷ್ಟನೈಶ್ಚ ।
ಅಲಮಲಮನುವೇಲಂ ಕಾಲಕಾಲಾಬಲಾಯಾಃ
ಚರಣಕಮಲಶೋಭಾಮೇವ ನಿತ್ಯಂ ಸ್ಮರಾಮಿ ॥೧೧೬॥

ಗೌರೀಮನೋಹರಪದಾಂಬುಜಮಾದರೇಣ
ಸ್ಮೃತ್ವಾ ತರಂತಿ ಖಲು ಪಾತಕಪಾವನಾಬ್ಧೀನ್ ।
ತಸ್ಮಾದನನ್ಯಶರಣಾ ಶಿವಪಾದಪದ್ಮಂ
ಪದ್ಮಾಪತಿಪ್ರಿಯಮಹಂ ಶರಣಂ ವ್ರಜಾಮಿ ॥೧೧೭॥

ಮೇಖಲೆಗಳಿಂದ ಭೂಷಿತರಾದ ನರ್ತಕಿಯರ ನೃತ್ಯವು ನನಗೀಗ ಬೇಡವಾಗಿದೆ. ಕಾಮಪೂರಿತವಾದ ಸರಸಸಲ್ಲಾಪಗಳು ಈಗ ರುಚಿಸಲಾರವು. ಬಾರಿಬಾರಿಗೂ ಈಶ್ವರನ ಅಡಿದಾವರೆಗಳನ್ನು ಸ್ಮರಿಸಿ, ಅವನ ಅನುಗ್ರಹದಿಂದ ನಶ್ವರವಾದ ಈ ದೇಹವನ್ನು ಇಲ್ಲಿಯೇ ತ್ಯಜಿಸುವೆನು. ||೧೧೪||

ಈಶ್ವರನಿಗೆ ನಿವೇದಿಸಿದ ಪರಿಶುದ್ಧವಾದ ನೀರನ್ನೇ ಆಹಾರವನ್ನಾಗಿ ಸೇವಿಸಿ ಅದರಿಂದಲೇ ಈ ಕೆಟ್ಟ ಹೊಟ್ಟೆಯನ್ನು ತುಂಬಿಸಿ, ಈಶ್ವರನ ಅಡಿದಾವರೆಯನ್ನೇ ಚಿತ್ತದಲ್ಲಿ ಸ್ಥಾಪಿಸಿ ಎಡಬಿಡದೇ ಸ್ಮರಿಸುತ್ತಿರುವೆನು. ||೧೧೫||

ಮನ್ಮಥನನ್ನು ತೃಪ್ತಿಗೊಳಿಸುವ ರತಿಕ್ರೀಡೆಯು ಸಾಕು. ಪ್ರಿಯತಮನ ಕರತಾಡನಾಲಿಂಗನಾದಿಗಳೂ ಸಾಕು. ಭವಾನಿಯ ಅಡಿದಾವರೆಗಳ ಕಾಂತಿಯನ್ನೇ ಅನವರತವೂ ಸ್ಮರಿಸುವೆನು. ||೧೧೬||

ಭಾಗ್ಯವಂತರು, ಉಮಾರಮಣನಾದ ಶಿವನ ಅಡಿದಾವರೆಗಳನ್ನು ಭಕ್ತಿಯಿಂದ ಸ್ಮರಿಸಿ, ಅಪಾರವಾದ ಪಾಪರಾಶಿಗಳನ್ನು ಹೋಗಲಾಡಿಸಿಕೊಳ್ಳುವರು.

ನಾನ್ಯನ್ಮನೋಹರಮಘಾಪಹಮಸ್ತಿ ಲೋಕೇ
ಗೌರೀಮನೋಹರಪದಾಂಬುರುಹಂ ವಿಹಾಯ ।
ತತ್ಕೇವಲಂ ಶರಣಮಿತ್ಯಹಮಾದರೇಣ
ಸ್ಮೃತ್ವಾ ವಸಾಮಿ ವಿಪಿನೇ ಶಿವಮಂದಿರೇಷು ॥೧೧೮॥

ಸಂಸಾರಕೂಟಮಘದುಃಖಕುಲಾಕುಲತ್ವಾತ್
ತ್ಯಾಜ್ಯಂ ಮನಾಗಪಿ ನ ತೇನ ಸುಖಂ ಕದಾ ಹಿ ।
ಜನ್ಮವ್ಯಪಾಯಕರಣಂ ಪರಮಿಂದುಮೌಳಿ
ಪಾದಾರವಿಂದಭಜನಂ ಪ್ರವದಂತಿ ಧೀರಾಃ ॥೧೧೯॥

ನಾರೀ ಕದಾಪಿ ನ ಸುಖಾಯ ಯತಃ ಸ್ವತಂತ್ರಾ
ನಾನ್ಯಸ್ಯ ಸೇವನಪರಾ ಪರತಂತ್ರತಾಯಾಃ ।
ಸಾ ತಾವದೇಕಮಸುಖಂ ತದನಂತರಂ ಚ
ದುಃಖಾನ್ಯಘಾನ್ಯಪಿ ನ ಸಾ ಶಿವಭಕ್ತಿಯುಕ್ತಾ ॥೧೨೦॥

ಅದುದರಿಂದಲೇ ಇನ್ನು ಮೇಲೆ ನಿರ್ಗತಿಕಳಾದ ನಾನು ವಿಷ್ಣುವಿಗೂ ಪ್ರಿಯವಾದ ಈಶ್ವರನ ಪಾದಕಮಲವನ್ನೇ ಆಶ್ರಯಿಸುವೆನು. ॥೧೧೭॥

ಈ ಲೋಕದಲ್ಲಿ ಉಮಾಪತಿಯಾದ ಪರಮೇಶ್ವರನ ಅಡಿದಾವರೆಯೊಂದನ್ನು ಬಿಟ್ಟರೆ, ಪಾಪಗಳನ್ನು ಹೋಗಲಾಡಿಸುವ ಪರಿಶುದ್ಧವಾದ ಇನ್ನಾವ ವಸ್ತುವೂ ಕಾಣುವುದಿಲ್ಲ. ಆದುದರಿಂದ ಶಿವಪಾದಪದ್ಮವೇ ನನಗೆ ಆಶ್ರಯ. ಅದನ್ನೇ ಭಕ್ತಿಯಿಂದ ಸ್ಮರಿಸುತ್ತಾ ಅರಣ್ಯದಲ್ಲಿರುವ ಈ ಶಿವಮಂದಿರದಲ್ಲಿಯೇ ವಾಸಮಾಡುವೆನು. ॥೧೧೮॥

ಈ ಸಂಸಾರವು ಪಾಪಭೂಯಿಷ್ಠವಾದುದು. ಆದುದರಿಂದ ಅದನ್ನು ಪರಿತ್ಯಜಿಸುವುದೇ ಶ್ರೇಯಸ್ಕರ. ಸಂಸಾರದಿಂದ ಕ್ಷಣಕಾಲವಾದರೂ ಸುಖವು ಲಭಿಸಲಾರದು. ಚಂದ್ರಶೇಖರನ ಅಡಿದಾವರೆಗಳ ಸೇವೆಯಿಂದಲೇ ಜೀವನವನ್ನು ಕಳೆಯುವುದು ಶ್ರೇಯಸ್ಕರವಾದುದೆಂದು ಜ್ಞಾನಿಗಳು ಹೇಳುವರು. ॥೧೧೯॥

ಸ್ತ್ರೀಯರಿಗೆ ಎಂದೂ ಸುಖವಿಲ್ಲ. ಏಕೆಂದರೆ ಅವರು ಸದಾ ಪರತಂತ್ರರೇ. ಪರರ ಸೇವೆಯಿಂದಲೇ ಸ್ತ್ರೀಯರ ಕಾಲವು ಕಳೆಯುವುದು. ಸುಖಭಿನ್ನವಾಗಿ ಸುಖದಂತೆ ತೋರುವ ಸುಖಾಭಾಸವೇ ಸ್ತ್ರೀಯರಿಗೆ ದೊರೆಯುವುದು. ಅದರಿಂದ ಕೇವಲ

ಭರ್ತಾ ಶಾಂಭವಪುಂಗವೋ ಯದಿ ಭವೇತ್ತತ್ಸೇವಯಾ ಕೇವಲಂ
ಭೀತಿಃ ಕಾಲಕೃತಾ ನ ಸಾ ಶಿವಪದಾಂಭೋಜಾರ್ಚಕಾರಾಧನೇ ।
ಸಾ ತಾವನ್ನ ಕದಾಪಿ ತಾವದಸಕೃತ್ಸಂಭಾವಿತಾ ಸೋಽಪಿ ತಂ
ಕಾಲಃ ಸೇವಿತುಮಿಚ್ಛತೀತಿ ಸ ಮಹಾನ್ ಕಾಲಾಂತಕಾರಾಧಕಃ ॥೧೨೧॥

ಕಃ ಕಾಲಾಂತಕಪೂಜಕಃ ಕಲಿಮಲಪ್ರಧ್ವಂಸಕೋ ನಾಲಕೋ
ಪ್ಯಾಶಾಸ್ಯಾಧಿಕಪುಣ್ಯಕರ್ಮಜನಕೋ ನ ಸ್ಯಾತ್ತಪಸ್ಯಾಫಲೈಃ ।
ತಸ್ಯಾನುಸ್ಮರಣೇನ ಪಾಪವಿಲಯಸ್ತತ್ಪಾದುಕಾರಾಧನಾತ್
ಮೋಕ್ಷಶ್ರೀರಿತಿ ಕಾಲಕಾಲಮಹಿಮಾ ಸೋಽಯಂ ಕಿಲಾತ್ಯದ್ಭುತಃ ॥೧೨೨॥

ಅಹೋ ಮಹಾಪಾತಕರಾಶಿಕೋಟಿ
ತೂಲಾನಲಾ ಶಂಕರಲಿಂಗಪೂಜಾ ।

ದುಃಖವನ್ನಲ್ಲದೆ ಪಾಪರಾಶಿಯನ್ನೇ ಗಳಿಸಿಕೊಳ್ಳುವರು. ಅಷ್ಟಾದರೂ ಅವರಿಗೆ ಈಶ್ವರ ಭಕ್ತಿಯೊದಗಲಾರದು. ॥೧೨೦॥

ಪತಿಯು ಈಶ್ವರ ಭಕ್ತಾಗ್ರೇಸರನಾಗಿದ್ದರೆ, ಅವನ ಸೇವೆಯಿಂದ ಮೃತ್ಯು ಭಯವು ದೂರವಾಗುವುದು. ಈಶ್ವರಾರಾಧಕನನ್ನು ಸೇವಿಸುವವನಿಗೆ ಮೃತ್ಯು ಭಯದ ವಾರ್ತೆಯಾದರೂ ಇರುವುದೇ? ಇಲ್ಲ! ಎಂದಿಗೂ ಇಲ್ಲ! ಅವನನ್ನು ಯಮನು ಪೀಡಿಸಲಿಚ್ಛಿಸುವುದಿಲ್ಲ. ಆದುದರಿಂದ ಮೃತ್ಯುಂಜಯನಾದ ಈಶ್ವರನ ಅರ್ಚಕನು ಎಲ್ಲರಿಗೂ ಅತ್ಯಂತಪೂಜ್ಯನಾಗಿರುವನು. ॥೧೨೧॥

ಪೂರ್ವಜನ್ಮದ ಸುಕೃತ ವಿಶೇಷ ಮಹಿಮೆಯಿಂದ ಈಶ್ವರನನ್ನು ಪೂಜಿಸಿ, ರಾಗದ್ವೇಷಗಳನ್ನು ನಾಶಮಾಡಿ, ಯಾವನು ತಾನೇ ಪುಣ್ಯರಾಶಿಯನ್ನು ಗಳಿಸಲಾರನು? ಈಶ್ವರನ ಅನುಗ್ರಹವೊಂದಿದ್ದರೆ ಬಾಲಕನೂ ಸಹ ಪುಣ್ಯಶಾಲಿಯಾಗುವನು. ಈಶ್ವರನನ್ನು ಸ್ಮರಿಸುವುದರಿಂದ ಪಾಪರಾಶಿಗಳು ನಾಶಹೊಂದುವುವು. ಅವನ ಪಾದಸೇವೆಯಿಂದಲಾದರೋ, ಮೋಕ್ಷವೇ ಲಭಿಸುವುದು. ತಪಸ್ಸಿನ ಆಚರಣೆಯಿಂದ ಪ್ರಯೋಜನವೇನು? ಮೃತ್ಯುಂಜಯನಾದ ಪರಶಿವನ ಮಹಿಮಾತಿಶಯವು ಅದ್ಭುತವಾಗಿರುವುದಲ್ಲವೇ? ॥೧೨೨॥

ಶಿವಲಿಂಗಪೂಜೆಯ ಮಹಿಮೆಯನ್ನು ಏನೆಂದು ಹೇಳೋಣ? ಅಗ್ನಿಯು ಹತ್ತಿಯ (ಅರಳೆಯ) ರಾಶಿಯನ್ನು ಕ್ಷಣಕಾಲದಲ್ಲಿ ದಹಿಸಿ ನಾಮಾವಶೇಷವನ್ನಾಗಿ

ಸಾ ದುರ್ಲಭಾ ಭಾಗ್ಯವಶೇನ ಲೋಕೇ
ನ ಯಸ್ಯ ಯಾ ಸ್ಯಾತ್ಸುಲಭಾ ವಿಮುಕ್ತೌ ॥೧೨೩॥

ನಾರೀಣಾಂ ಖಲು ಗರ್ಭಧಾರಣಭಯಂ ಸಹ್ಯಂ ನ ಸರ್ವಾತ್ಮನಾ
ತದ್ದುಃಖಾಪನಯಾಯ ಕೇವಲಮುಮಾಕಾಂತಾರ್ಚನಂ ಸಾಧನಂ ।
ತೇನಾನಂದಮವಾಪ್ನುವಂತಿ ಸತತಂ ಭೂತಿಪ್ರಭಾಭೂಷಿತಾಃ ।
ಸಂತಃ ಸಂತತಮಂತಕಾಂತಕಪದಧ್ಯಾನಾಮೃತಾಸ್ವಾದನಾಃ ॥೧೨೪॥

ಆರಾಧ್ಯಂ ಜಗತೀತಲೇ ಶಿವಪದಾಂಭೋಜಂ ತದಭ್ಯರ್ಚನಾತ್
ಆನಂದಾಂಬುನಿಧೇಃ ಪ್ರವೃದ್ಧಿರಸಕೃತ್ಸಾ ಮುಕ್ತಿರಿತ್ಯಂತಕಃ ।
ತತ್ಪಾದಾಂಬುಜಪೂಜಕಾನ್ ಪ್ರಣಮತಿ ಪ್ರಸ್ತೌತಿ ಸೇಂದ್ರೋ ಮುಹುಃ
ಲಕ್ಷ್ಮೀಕಾಂತಯುತಶ್ಚತುರ್ಮುಖಯುತೋಽಪ್ಯತ್ಯಾದರಾದನ್ವಹಂ ॥೧೨೫॥

ಮಾಡುವಂತೆ ಶಿವಲಿಂಗ ಪೂಜೆಯು ಭಕ್ತನ ಅಪಾರವಾದ ಪಾಪರಾಶಿಯನ್ನು ಕ್ಷಣಮಾತ್ರದಲ್ಲಿ ನಾಶಮಾಡುವುದು. ಆದರೆ, ಶಿವಲಿಂಗವನ್ನು ಪೂಜಿಸುವ ಸುಯೋಗವು ಪುಣ್ಯ ವಿಶೇಷದಿಂದಲೇ ಲಭಿಸಬೇಕಲ್ಲದೆ, ಅನ್ಯಥಾ ಅದು ದುರ್ಲಭ. ಪುಣ್ಯ ವಿಶೇಷದ ಮಹಿಮೆಯಿಂದ ಶಿವಲಿಂಗಪೂಜೆಯ ಯೋಗವು ಲಭಿಸುತ್ತಿರಲು ಮುಕ್ತಿಯು ಅನಾಯಾಸವಾಗಿ ಲಭಿಸುವುದು. ॥೧೨೩॥

ಸ್ತ್ರೀಯರಿಗೆ ಗರ್ಭಧಾರಣೆಯಿಂದುಂಟಾಗುವ ದಾರುಣವಾದ ದುಃಖವು ಸಹಿಸಲಸಾಧ್ಯವಾಗಿರುವುದು. ಈಶ್ವರನ ಪೂಜೆಯೇ ಅಸಹ್ಯವಾದ ಆ ದುಃಖವನ್ನು ಹೋಗಲಾಡಿಸುವುದರಲ್ಲಿ ಸಾಧನವಾಗಿರುವುದು. ಈಶ್ವರಪೂಜೆಯಿಂದ ಅವರು ಪರಮಾನಂದವನ್ನು ಹೊಂದುವರು. ಈಶ್ವರನನ್ನು ಪೂಜಿಸಿ, ಸದಾ ಈಶ್ವರ ಪ್ರಿಯವಾದ ವಿಭೂತಿಯನ್ನು ಧರಿಸಿ, ಅವನ ಪಾದಧ್ಯಾನವೆಂಬ ಅಮೃತವನ್ನು ಪಾನಮಾಡುವುದರಲ್ಲಿ ತಲ್ಲೀನರಾಗುವರು. ॥೧೨೪॥

ಈ ಲೋಕದಲ್ಲಿ ಮನುಷ್ಯಜನ್ಮವನ್ನು ತಾಳಿ, ಈಶ್ವರನ ಅಡಿದಾವರೆಯನ್ನು ಅರ್ಚಿಸಬೇಕು. ಅದರಿಂದಲೇ ಮೋಕ್ಷವೆಂಬ ಆನಂದವು ಲಭಿಸುವುದು. ಅದನ್ನು ತಿಳಿದು ಈಶ್ವರನ ಪಾದಸೇವಕರನ್ನು ಯಮನೂ ಸಹ ನಮಸ್ಕರಿಸಿ ಸ್ತುತಿಸುವನು.

ಕಃ ಕಾಲಾಂತಕಲಿಂಗಪೂಜನರತೋ ನಾರಾಧಿತೋ ವಿಷ್ಣುನಾ
ಸೇಂದ್ರೇಣಾಪಿ ಚತುರ್ಮುಖೇನ ನಿಯಮೇನಾನ್ಯೇನ ವಾ ವಾಯುನಾ
ತತ್ಪಾದಸ್ಮರಣೇನ ಪಾಪನಿಲಯಃ ಸದ್ಯೋ ಭವತ್ಯನ್ಯಹಂ
ಕೋಽಯಂ ಶಾಂಭವಪುಂಗವಸ್ಯ ಮಹಿಮಾಲೋಕೋತ್ತರೋ ಮೋಚಕಃ
॥೧೨೬॥

ಅಹಮಿಹ ಪರಿಹಾಯ ಮೋಹಜಾಲಂ
ಶಿವಪದಪೂಜನಮೇವ ಸಾವಧಾನಂ ।
ಧನಮಿತಿಧನವಾಂಛಯೇತಿ ಮನ್ಯೇ
ಧನಮಿದಮಕ್ಷಯಮೇವ ಸರ್ವಥಾಪಿ ॥೧೨೭॥

ಲೋಕೇ ಕಃ ಕಮಲಾವಿಲಾಸನಿಲಯಂ ದೃಷ್ಟ್ವಾಪಿ ಮೋಹಾಶ್ರಿತಃ
ನ ಸ್ಯಾದೇವ ಪುನಃ ಪುನಃ ಸ ನಿಲಯಾಪೇಕ್ಷೈವ ದುಷ್ಟಾತ್ಮನಾಂ ।
ಕಸ್ಯಾಪಿ ಸ್ಮರವೈರಿಣಶ್ಚರಣಯೋಃ ಧ್ಯಾನಂ ಧನಂ ತತ್ಪರಂ
ಪುಣ್ಯಾನಾಂ ಫಲಮಿತ್ಯವೈಮಿ ತಪಸಾಂ ನಿಶ್ರೇಯಸಂ ತೇನ ಮೇ ॥೧೨೮॥

ಇದಲ್ಲದೇ, ಇಂದ್ರನೂ, ಬ್ರಹ್ಮ, ವಿಷ್ಣು ಮಹೇಶ್ವರರೂ ಸಹ ಈಶ್ವರಭಕ್ತನಾದ ಅವನನ್ನು ಪ್ರತಿದಿನವೂ ಭಕ್ತಿಯಿಂದ ಸ್ತುತಿಸಿ ನಮಸ್ಕರಿಸುವರು. ॥೧೨೫॥

ಈಶ್ವರಪೂಜೆಯಲ್ಲಿ ಆಸಕ್ತನಾದವನನ್ನು ವಿಷ್ಣು, ಇಂದ್ರ, ಬ್ರಹ್ಮ, ವಾಯು ಇವರೆಲ್ಲರೂ ಪ್ರತಿದಿನವೂ ಭಕ್ತಿಶ್ರದ್ಧೆಗಳಿಂದ ಪೂಜಿಸುವರು. ಈಶ್ವರಸೇವಕನ ಪಾದಸ್ಮರಣೆಯಿಂದ ಪಾಪಗಳು ಶೀಘ್ರವಾಗಿಯೇ ಕ್ಷಯಿಸುವುವು. ಈಶ್ವರಭಕ್ತಾಗ್ರೇಸರನ ಲೋಕೋತ್ತರವಾದ ಮಹಿಮೆಯನ್ನು ವರ್ಣಿಸಲು ಸಾಧ್ಯವೇ? ಅದು ಮೋಕ್ಷಕ್ಕೆ ಸಾಕ್ಷಾತ್ಕಾರಣವಾಗಿರುವುದು. ॥೧೨೬॥

ನಾನು ಈ ಶಿವಸನ್ನಿಧಿಯಲ್ಲಿ ನನ್ನ ಅಜ್ಞಾನವನ್ನು ತೊರೆದು, ಈಶ್ವರನ ಪಾದಸೇವೆಯೇ ನನ್ನ ಧನವೆಂದು ತಿಳಿಯುವೆನು. ಅವನ ಪಾದಸೇವೆಯೆಂಬ ಧನವನ್ನೇ ನಾನು ಅಪೇಕ್ಷಿಸುವೆನು. ಆ ಧನವೇ ಶಾಶ್ವತವಾದ ನಿಧಿಯಾಗಿರುವುದು. ಅದೇ ನನಗೆ ಶಾಶ್ವತವಾಗಿರಲಿ. ॥೧೨೭॥

ಲೋಕದಲ್ಲಿ ಧನಕನಕಾದಿ ವಸ್ತುಗಳು ಮಿಂಚಿನಂತೆ ಕ್ಷಣಿಕವಾದವುಗಳೆಂದು ತಿಳಿದೂ ಸಹ ಯಾವನು ಅವುಗಳಲ್ಲಿಯೇ ಆಸಕ್ತನಾಗಿರುವನೋ ಅವನೇ ಅಜ್ಞಾನಿಯು. ಧನಕನಕಾದಿವಸ್ತುಗಳು ಶಾಶ್ವತವಾಗಿರುವುವೆಂಬ ಬುದ್ಧಿಯು

ಯಃ ಕಶ್ಚಿದ್ಭಗವಾಂಸ್ತ್ರಿಲೋಚನಪದಾಂಭೋಜಾರ್ಚಕಃ ಸಾದರಂ
ಹಾರತ್ವಂ ಸಮವಾಪ್ಯ ಹಾರಸಹಿತಃ ದಾರೈರುದಾರೈಃ ಸಹ ।
ಸಂಸಾರಾನುರತೋಽಪಿ ತಸ್ಯ ನ ಭಯಂ ಕಾಲಾಂತಕಾರಾಧನೇ
ಭೀತಿಃ ಕಲ್ಪಲಯೇಽಪಿ ತಸ್ಯ ಬಹುಧಾ ಗೀರ್ವಾಣವಾಣೀ ಶ್ರುತಾ ॥೧೨೯॥

ಯಸ್ಯಾಸ್ತ್ಯಪರ್ಣಾರಮಣಾರ್ಚನಾಯಾಂ
ಭಕ್ತಿಃ ಸ ಮುಕ್ತೋ ಭವತೀತಿ ಮನ್ಯೇ ।
ಸ ಚಾನುರಕ್ತೋಽಪಿ ವಿರಕ್ತ ಏವ
ದಾರೇಷು ಹಾರೇಷು ವಿಹಾರಕಾಲೇ ॥೧೩೦॥

ಕಮಲಾನಿಲಪಲ್ಲವೇ ಕದಾಚಿತ್ಸಲಿಲಂ ತಾವದಲಗ್ನಮೇವ ವಹ್ನೌ ।
ಪತಿತಂ ಸಮುಪೈತಿ ನಾಶಮಂಭಃ ಶಿವಪೂಜಾವಿರತಸ್ತು ನಾಶಮೇತಿ ॥೧೩೧॥

ಅಜ್ಞಾನಿಗಳಿಗೇ ಬರುವುದಲ್ಲದೇ ಜ್ಞಾನಿಗಳಿಗೆ ಎಂದಿಗೂ ಉಂಟಾಗಲಾರದು. ಜ್ಞಾನಿಯಾದವನಿಗೆ ಈಶ್ವರಪಾದಸೇವೆಯೆಂಬ ಧನವೇ ಶಾಶ್ವತವಾದ ವಸ್ತುವು. ಆ ಧನವು ಪೂರ್ವಜನ್ಮದ ಪುಣ್ಯವಿಶೇಷದ ಫಲವಾಗಿರುವುದು. ಅದೇ ನನಗೆ ಶ್ರೇಯಸ್ಕರವು. ॥೧೨೮॥

ಭಾಗ್ಯಶಾಲಿಯಾದ ಯಾವ ಮನುಜನೇ ಆಗಲಿ, ಈಶ್ವರನ ಪರಮಭಕ್ತನಾಗಿ, ತನ್ನ ಪತ್ನೀಪುತ್ರರೊಡನೆ, ಶಿವಪಾದಸೇವೆಯಲ್ಲಿಯೇ ಆಸಕ್ತನಾಗಿದ್ದರೆ ಅವನು ಸಂಸಾರಿಯಾಗಿದ್ದರೂ ಅವನಿಗೆ ಮೃತ್ಯುಭಯವು ತಪ್ಪುವುದಿಲ್ಲ. ಕಲ್ಪಾಂತದಲ್ಲಿಯೂ ಅವನಿಗೆ ಯಾವ ವಿಧವಾದ ಭಯವೂ ಸಂಭವಿಸಲಾರದು. ಅಮರವಾಣಿಯು ಹೀಗೆಂದಿರುವುದು. ॥೧೨೯॥

ಯಾವನು ಪಾರ್ವತೀಪತಿಯಾದ ಈಶ್ವರನನ್ನು ಭಕ್ತಿಯಿಂದ ಪೂಜಿಸುವನೋ ಅವನು ಮೋಕ್ಷವನ್ನು ಹೊಂದುವನೆಂದು ಭಾವಿಸುತ್ತೇನೆ. ಈಶ್ವರಭಕ್ತನಾದ ಅವನು ತನ್ನ ಪತ್ನಿಯೊಂದಿಗೆ ವಿಹಾರಕಾಲದಲ್ಲಿ ಅನುರಕ್ತನಾದರೂ ವಿರಕ್ತನಂತೆಯೇ ಇರುವನು. ॥೧೩೦॥

ನೀರಿನ ಬಿಂದುವು ಪದ್ಮಪತ್ರದ ಮೇಲೆ ಬಿದ್ದರೆ ಅದು ಆ ಪತ್ರದಲ್ಲಿ ಅಂಟಿಕೊಳ್ಳುವುದಿಲ್ಲ. ಆದರೆ ಅದೇ ಜಲಬಿಂದುವು ಪದ್ಮಪತ್ರದಿಂದ ಜಾರಿ ಅಗ್ನಿಯೊಳಗೆ ಬಿದ್ದರೆ, ನಾಶವನ್ನು ಹೊಂದುವುದು. ಅದರಂತೆಯೇ, ಯಾವನು ಸಂಸಾರಿ

ಮಯಾಧುನಾ ತಾವದುಮಾಸಹಾಯ
ಪದಾರವಿಂದಸ್ಮರಣೇನ ಕಾಲಃ ।
ನೇಯಃ ಪ್ರಯಾಸೋಽಪಿ ನ ತಾವತಾ
ಮೇ ಪೀಯೂಷಪಾನೇ ಸತಿ ಕಃ ಶ್ರಮೋಽಪಿ ॥೧೩೨॥

ಇತಿ ಶ್ರೀಶಿವರಹಸ್ಯೇ ಹರಾಖ್ಯೇ ತೃತೀಯಾಂಶೇ ಉತ್ತರಾರ್ಧೇ
ಸೌಂದರ್ಯನಿಧಿರಾಜ್ಞೀ ಸಂವಾದನಂ ನಾಮ ಅಷ್ಟಾದಶೋಽಧ್ಯಾಯಃ

ಯಾಗಿದ್ದರೂ ಶಿವನನ್ನು ಪೂಜಿಸುವುದಿಲ್ಲವೋ ಅವನು ನಿಶ್ಚಯವಾಗಿಯೂ ಪತಿತನಾಗಿ ನಾಶಹೊಂದುವನು. ||೧೩೧||

ಆದುದರಿಂದ ಈಗ ನಾನು ಈಶ್ವರನ ಪಾದಸ್ಮರಣೆಯಿಂದಲೇ ಕಾಲವನ್ನು ಕಳೆಯುವೆನು. ಇದರಿಂದ ನನಗೆ ಯಾವ ಶ್ರಮವೂ ಉಂಟಾಗುವುದಿಲ್ಲ. ಅಮೃತಪಾನಮಾಡಿದರೆ ಆಯಾಸವುಂಟಾಗುವುದೇ ? ” ಎಂದು ರಾಜಪತ್ನಿಯು ಸೌಂದರ್ಯನಿಧಿಯ ಮುಂದೆ ಹೇಳುತ್ತಾ ವೈರಾಗ್ಯತಾಳಿದಳು. ||೧೩೨||

ಇಲ್ಲಿಗೆ ಶ್ರೀಶಿವರಹಸ್ಯದ ಮೂರನೆಯ ಅಂಶದ ಉತ್ತರಾರ್ಧದಲ್ಲಿ ಸೌಂದರ್ಯನಿಧಿ
ಮತ್ತು ರಾಜಪತ್ನಿ ಇವರ ಸಂವಾದದಿಂದ ಒಳಗೊಂಡ
ಹದಿನೆಂಟನೆಯ ಅಧ್ಯಾಯವು ಮುಗಿದುದು.

॥ ಶ್ರೀಃ ॥

ಅಥ ಶ್ರೀಶಿವರಹಸ್ಯೇ

ತೃತೀಯಾಂಶೇ

ಉತ್ತರಾರ್ಧೇ

ಏಕೋನವಿಂಶೋಽಧ್ಯಾಯಃ

॥ ಯಾಜ್ಞವಲ್ಕ್ಯ ಉವಾಚ ॥

ಇತಿ ತದ್ಗಿರಮಾಕರ್ಣ್ಯಾಪ್ಯಪರ್ಣಾರಮಣಾಶ್ರಿತಾಂ ।
ತೃಪ್ತಿಂ ನಾವಾಪ ಸ ಸುಧಾಂ ಪೀತ್ವಾ ಗ್ರಿಷ್ಮಾತುರೋ ಯಥಾ ॥೧॥

ಕಸ್ತೃಪ್ತಃ ಶಿವನಾಮಸಂಯುತಕಥಾಪೀಯೂಷಪಾನೈರ್ಮುಹುಃ
ತತ್ಪಾನಾತುರತೋ ಯುವಾತಿತರುಣೀಂ ರಂಭಾಮಿವೇಂದ್ರಃ ಶಿಶುಃ ।
ಸ್ತನ್ಯಂ ಮೇಘಮಿವಾಂಕುರಃ ಕುಲವಧೂಃ ಭರ್ತೃಪ್ರಿಯಂ ಶಾಂಭವಃ
ಶಾಂಗಂ ಲಿಂಗಮುಮಾಮಹೇಶ್ವರಮಿವ ಪ್ರಾಪ್ತಂ ಪುನರ್ವಾಂಛತಿ ॥೨॥

ಹತ್ತೊಂಬತ್ತನೆಯ ಅಧ್ಯಾಯ

ರಾಣಿಯು ಹೇಳಿದ ಶಿವಧರ್ಮವನ್ನು ದೀರ್ಘಕಾಲ ಪರ್ಯಂತವಾಗಿ ಕೇಳಿದರೂ, ರಾಜನು ಅದರಿಂದ ತೃಪ್ತಿಗೊಳ್ಳಲಿಲ್ಲ. ಗ್ರೀಷ್ಮರ್ತುವಿನಲ್ಲಿ ಸುಧೆಯನ್ನು ಪಾನಮಾಡಿದರೂ ಹೇಗೆ ತೃಪ್ತಿಯುಂಟಾಗುವುದಿಲ್ಲವೋ ಅದರಂತೆ ಅವನಿಗೂ ಶಿವಕಥಾಮೃತದಿಂದ ತೃಪ್ತಿಯುಂಟಾಗಲಿಲ್ಲ. ॥೧॥

ಈಶ್ವರ ಕಥಾಮೃತದ ಪಾನದಿಂದ ಯಾವನು ತೃಪ್ತನಾಗುವನು? ಯುವಕನು ಯುವತಿಯನ್ನೂ, ಇಂದ್ರನು ರಂಭೆಯನ್ನೂ, ಶಿಶುವು ಸ್ತನ್ಯವನ್ನೂ, ಬೀಜದ ಮೊಳಕೆಯು ಮೇಘವನ್ನೂ, ಕುಲಾಂಗನೆಯು ತನ್ನ ಪ್ರಿಯತಮನನ್ನೂ, ಪಾರ್ವತಿಯು ಪರಮೇಶ್ವರನನ್ನೂ ಪುನಃ ಪುನಃ ಪ್ರೀತಿಸುವಂತೆ ಈಶ್ವರಭಕ್ತನು ಈಶ್ವರಕಥಾಮೃತದ ಶ್ರವಣದಿಂದ ತೃಪ್ತನಾಗದೇ ಪುನಃ ಪುನಃ ಅದನ್ನೇ ಅಪೇಕ್ಷಿಸುವನು. ॥೨॥

ಧನ್ಯಾನಾಂ ಧನಮಿಂದುಶೇಖರಕಥಾಪೀಯೂಷರಾಶಿಃ ಪರಂ
ತತ್ಸೇವ್ಯಂ ಸತತಂ ತದೇವ ಹಿ ಸದಾ ಸಂರಕ್ಷಣೀಯಂ ಮುದಾ ।
ತತ್ಸ್ವೀಯಾಯ ಶಿವಾರ್ಚಕಾಯ ಸತತಂ ದೇಯಂ ಪ್ರದತ್ತಂ ಮುಹುಃ
ವೃದ್ಧಿಂ ಯಾತಿ ನ ನಾಶಮೇತ್ಯಪಿ ಕದಾಪ್ಯಕ್ಷಯ್ಯರೂಪಂ ಧನಂ ॥೩॥

ಕಿಂ ರಾಜ್ಯೈರಪಿ ರಾಜಭೋಗನಿಕರೈಃ ಮತ್ತೇಭಸಂಘೈಶ್ಚ ಕಿಂ
ಕಿಂ ವಾಜಿಪ್ರಭವೈರಪಾರವಿಭವೈಃ ಕಿಂ ವಾ ಗವಾಂ ಕೋಟಿಭಿಃ ।
ಸರ್ವಂ ನಶ್ವರಮಿತ್ಯತಃ ಶಿವಕಥಾಪೀಯೂಷಪಾನೈಃ ಪರಂ
ಮರ್ತ್ಯಸ್ತಾವದಮರ್ತ್ಯತಾಮುಪಗತೋ ನಿತ್ಯಂ ನತಃ ಸ್ಯಾತ್ಸುರೈಃ ॥೪॥

ಅಭಿನವಮಿದಮೌಷಧಂ ಜನಾನಾಂ
ಜನನವಿನಾಶಕಮೇಕಮೇವ ಲೋಕೇ ।
ಶಿವಕಥಮಪಿ ಗಿರಿಶಾಭಿಧಾನರೂಪಂ
ಶಿವ ಶಿವ ಸೃಷ್ಟಮಿದಂ ಮನೋಹರಂ ಮೇ ॥೫॥

ಶಿವಕಥಾಮೃತವೇ ಭಾಗ್ಯಶಾಲಿಗಳ ಧನ. ಶಿವಕಥಾಮೃತವೆಂಬ ಐಶ್ವರ್ಯ ವನ್ನು ಅತ್ಯಂತ ಪ್ರೀತಿಯಿಂದ ಸಂರಕ್ಷಿಸಿ ಸೇವಿಸಬೇಕು. ಅದನ್ನು ತಮ್ಮವರಾದ ಈಶ್ವರ ಭಕ್ತರಿಗೆ ದಾನಮಾಡಿದರೆ, ಅದು ಪ್ರತಿಕ್ಷಣದಲ್ಲಿಯೂ ಅಭಿವೃದ್ಧಿಯನ್ನು ಹೊಂದುವುದಲ್ಲದೇ, ಎಂದಿಗೂ ನಾಶವನ್ನು ಕಾಣುವುದಿಲ್ಲ. ಅದೊಂದು ಶಾಶ್ವತ ವಾದ ಐಶ್ವರ್ಯವಾಗಿದೆ. ॥೩॥

ಆನೆ, ಕುದುರೆ, ಮುಂತಾದ ಚತುರಂಗಬಲಗಳಿಂದ ಕೂಡಿರುವ ಸೇನೆಗಳಿಂದ ಯಾವಪ್ರಯೋಜನವಿರುವುದು ? ರಾಜ್ಯಗಳಿಂದಲಾದರೂ ಯಾವ ಪುರುಷಾರ್ಥವು ಲಭಿಸುವುದು ? ರಾಜಭೋಗಗಳಿಂದಲೂ ಸುಖವೇನಿರುವುದು ? ಈ ರಾಜಭೋಗ ಗಳೆಲ್ಲವೂ ಶಾಶ್ವತವಾಗಿರದೆ ಅನಿತ್ಯವಾಗಿರುವುವು. ಆದುದರಿಂದ ಮನುಷ್ಯನು ಶಾಶ್ವತ ವಾದ ಶಿವಕಥಾಮೃತವನ್ನು ಸೇವಿಸಬೇಕು. ಅದನ್ನು ಸೇವಿಸುವುದರಿಂದ ಅವನು ಅಮರನಾಗಿ ದೇವತೆಗಳಿಗೂ ವಂದ್ಯನಾಗುವನು. ॥೪॥

ಶಿವಕಥಾಮೃತವೆಂಬುದೊಂದೇ ಜನನಮರಣಗಳೆಂಬ ರೋಗಗಳಿಗೆ ದಿವ್ಯ ವಾದ ಔಷಧವಾಗಿರುವುದು. ಶಿವನೇ, ಜನನಮರಣಗಳೆಂಬ ರೋಗದಿಂದ ಪೀಡಿತ ರಾದ ನಮ್ಮನ್ನು ಉದ್ಧರಿಸಬೇಕೆಂದೇ, ಶಿವನಾಮವೆಂಬ ದಿವ್ಯವಾದ ಈ ಔಷಧ

ಶಿವ ಶಿವ ಶಿವ ಚಾತುರೀ ಕಿಮೇಷಾ
ಜನಜನನಾಮಯಭೋಗನಾಶನಾಯ ।
ಶಿವಪದರಚನಾನುಕೂಲರೂಪಾ
ಶಿವಪದಮೇತದಪೂರ್ವಮೌಷಧಂ ಹಿ ॥೬॥

ರೇ ರೇ ಜನಾಃ ಪಿಬತ ಶಂಕರನಾಮಧೇಯ
ಪೀಯೂಷರೂಪಮಿದಮೌಷಧಮಾದರೇಣ ।
ತೇನೈವ ಜನ್ಮಮರಣಾದಿಕರೋಗಭೋಗಃ
ಸಂಭಾವಿತೋಽಪಿ ನ ಭವಿಷ್ಯತಿ ಸರ್ವಥಾಪಿ ॥೭॥

ಅಹೋ ಜನಾಸ್ತಾವದತಃ ಪರಂ ನಃ
ಸರ್ವಾತ್ಮನಾ ಜನ್ಮಜರಾಮೃತಿರ್ವಾ ।
ನಾಸ್ತ್ಯೇವ ಸೃಷ್ಟಂ ಶಿವನಾಮರೂಪಂ
ಅಭೂತಪೂರ್ವಂ ಪರಮೌಷಧಂ ಹಿ ॥೮॥

ವನ್ನು ನೀನು ಸೃಷ್ಟಿಸಿರುವೆಯಲ್ಲವೇ ! ಅಪಾರವಾದ ನಿನ್ನ ಮಹಿಮೆಯನ್ನು ಏನೆಂದು ಹೇಳೋಣ. ॥೫॥

ಮಹಾದೇವನೇ, ಶಂಕರನೇ, ಮನುಷ್ಯರ ಜನನಮರಣಗಳೆಂಬ ಮಹಾವ್ಯಾಧಿಯನ್ನು ಹೋಗಲಾಡಿಸುವುದಕ್ಕೋಸ್ಕರ ನೀನು ಅಮೂಲ್ಯವಾದ ಶಿವನಾಮವೆಂಬ ಔಷಧಿಯನ್ನು ಸೃಷ್ಟಿಸಿರುವೆಯಲ್ಲವೆ? ನಿನ್ನ ಅದ್ಭುತವಾದ ಈ ಸೃಷ್ಟಿಕ್ರಮದ ಚಾತುರ್ಯವನ್ನು ಏನೆಂದು ಹೇಳಲಿ ! ॥೬॥

ಎಲೈ ಮನುಜರೇ, ಶಿವಕಥಾಮೃತವೆಂಬ ಔಷಧವನ್ನು ಸೇವಿಸಿರಿ. ದಿವ್ಯವಾದ ಆ ಔಷಧದಿಂದಲೇ ಜನನಮರಣಗಳೆಂಬ ರೋಗಗಳು ಸಂಭವಿಸಿದರೂ ಅವು ಶೀಘ್ರವಾಗಿಯೇ ದೂರವಾಗುವುವು. ಪುನಃ ಎಂದಿಗೂ ಈ ರೋಗಗಳು ಸಂಭವಿಸಲಾರವು. ॥೭॥

ಎಲೈ ಜನರೇ, ಶಿವನಾಮವೆಂಬ ಅದ್ಭುತವಾದ ಔಷಧವು ಇರುವುದರಿಂದ ನಮಗೆ ಇನ್ನೆಂದಿಗೂ ಜನನ, ಮರಣ, ವೃದ್ಧತ್ವವೆಂಬ ರೋಗಗಳು ಸಂಭವಿಸುವುದಿಲ್ಲ. ಇದೇನಾಶ್ಚರ್ಯ? ಶಿವನಾಮವು ಎಷ್ಟು ಮಹಿಮಾಪೂರ್ಣವಾದುದು ! ॥೮॥

ಶಿವ ಶಂಕರನಾಮರೂಪಮೇತತ್
ಗಿರಿಶೇನಾಪಿ ನ ಸೃಷ್ಟಮೌಷಧಂ ಚೇತ್ ।
ಜರಯಾ ಮರಣೇನ ಪೀಡಿತಾಃ ಸ್ಯುಃ
ಜನನೇನಾಪಿ ಜಗತ್ತ್ರಯಾಂತರಸ್ಥಾಃ ॥೯॥

ಜಂತುರ್ವಾಂಛತಿ ಜನ್ಮರೋಗವಿಲಯಂ ತತ್ಕಾರಣೇಚ್ಛಾ ಪರಂ
ಲೋಕೇ ಕಸ್ಯಚಿದೇವ ಭೂರಿತಪಸಾ ಪುಣ್ಯೈರಪಾರೈರಪಿ ।
ತತ್ತಾವದ್ಗಿರಿಶಾಭಿಧಾನಮಸಕೃತ್ಸಂಸೇವಿತಂ ಭಾಗ್ಯತಃ
ತಜ್ಜನ್ಮಾಪನಯಂ ಕರೋತಿ ಸಕೃದಸ್ಯಾವರ್ತನೇನಾಪಿ ಕಿಂ ॥೧೦॥

ಶಿವಾಭಿದಾನಾಭಿಧಮೌಷಧಂ ಚ
ಪೀತಂ ಸಕೃತ್ಸರ್ವರುಜಾಂ ವಿನಾಶಂ ।
ಕರೋತಿ ತತ್ತುಲ್ಯಮಿದಂ ವಿಚಿತ್ರಂ
ಏಕೇನ ಸರ್ವಾಮಯನಾಶ ಏವ ॥೧೧॥

ಈಶ್ವರನು, ಶಿವ! ಶಂಕರ! ಎಂಬ ಈ ನಾಮಗಳನ್ನೇ ಸೃಷ್ಟಿಸದೇ ಹೋಗಿದ್ದರೆ, ಆಗ ಲೋಕತ್ರಯದಲ್ಲಿರುವ ಜನರು ಜನ್ಮಜರಾಮರಣಗಳಿಂದ ತೊಂದರೆಗೆ ಸಿಲುಕುತ್ತಿದ್ದರು. ಆ ತೊಂದರೆಗಳನ್ನು ಪರಿಹರಿಸುವ ಮತ್ತೊಂದು ವಸ್ತುವೇ ಕಾಣುವುದಿಲ್ಲ. ॥೯॥

ಈ ಲೋಕದಲ್ಲಿ ಪ್ರಾಣಿಸಾಮಾನ್ಯವೂ ಪುನರ್ಜನ್ಮ ಪ್ರಾಪ್ತಿಯೆಂಬ ರೋಗವನ್ನು ನಾಶಪಡಿಸಬೇಕೆಂದು ಇಚ್ಛಿಸುತ್ತದೆ. ಆದರೆ ಸಾವಿರಾರು ಜನರಲ್ಲಿ ಯಾವನೋ ಒಬ್ಬನಿಗೆ, ಪೂರ್ವಜನ್ಮದ ಪುಣ್ಯಪ್ರಭಾವದಿಂದ ಜನ್ಮಾಂತರಗಳನ್ನೂ ಹೋಗಲಾಡಿಸುವ ಸಾಧನದಲ್ಲಿ ಇಚ್ಛೆಯುಂಟಾಗುವುದು. ದಿವ್ಯವಾದ ಆ ಶಿವನಾಮವನ್ನು ಒಂದೇ ಒಂದುಬಾರಿ ಉಚ್ಚರಿಸುವುದರಿಂದ ಪುನರ್ಜನ್ಮವೇ ಸಂಭವಿಸುವುದಿಲ್ಲ. ಶಿವನಾಮವು ಪುನರ್ಜನ್ಮವೆಂಬ ಮಹಾವ್ಯಾಧಿಯನ್ನು ಹೋಗಲಾಡಿಸುವುದರಲ್ಲಿ ದಿವ್ಯೌಷಧವಾಗಿರುವುದು. ॥೧೦॥

ಶಿವನಾಮವೆಂಬ ಔಷಧವನ್ನು ಒಂದೇ ಒಂದುಬಾರಿ ಸೇವಿಸಿದ ಮಾತ್ರದಿಂದಲೇ ಸಕಲ ವ್ಯಾಧಿಗಳೂ ನಾಶವನ್ನು ಪಡೆಯುವುವು. ಶಿವನಾಮವೆಂಬ ಒಂದೇ ಒಂದು

ಶ್ರುತಮಪಿ ಶಿವನಾಮಧೇಯರೂಪಂ
ಪರಮಮಿಹೌಷಧಮಾಮಯಪ್ರವಾಹಾನ್ ।
ಪರಿಹರತಿ ವಿಚಿತ್ರಮೇವ ಮೇತತ್
ಕಿಮಿತಿ ನ ಪೀತಮನಾಮಯಾಯ ಲೋಕೈಃ ॥೧೨॥

ಸಂಸಾರಾಮಯಭೇಷಜಃ ಶ್ರವಣಮಪ್ಯಾರೋಗ್ಯಹೇತುಃ ಪರಂ
ತತ್ತಾವದ್ಗಿರಿಶಾಭಿಧಾನಮಿತಿ ಮೇ ಜಿಹ್ವಾಂಗಣೇ ಸರ್ವದಾ ।
ನಿತ್ಯಂ ತ್ವಾದರಪೂರ್ವಕಂ ಶಿವಕಥಾಪೀಯೂಷಧಾರಾನ್ವಿತಂ
ತತ್ಕಿಂ ಮೇ ನ ಕರಿಷ್ಯತೀತಿ ಸಕಲಾಭೀಷ್ಟಪ್ರದಂ ಚೇನ್ಮಮ ॥೧೩॥

ಏಕೇನಾಪಿ ಸಕೃತ್ಪ್ರಸಂಗವಶತಃ ಪೀತಂ ತದೇವೌಷಧಂ
ಶರ್ವಾರ್ಣೀರಮಣಾಭಿಧಾನಮಮರಾನ್ ಕರ್ತುಂ ಪ್ರವೃತ್ತಂ ಶ್ರುತಂ ।
ತದ್ವಂಶಾನಖಿಲಾನಭೀಪ್ಸಿತತಮಾನ್ ಭೃತ್ಯಾನಪೀತ್ಯದ್ಭುತಂ
ಮನ್ಯೇ ಶಂಕರನಾಮರೂಪಮನಘಂ ದಿವ್ಯೌಷಧಂ ದುರ್ಲಭಂ ॥೧೪॥

ಔಷಧದಿಂದ ನಾನಾ ಬಗೆಯ ವ್ಯಾಧಿಗಳು ಕ್ಷಯಿಸುವುವು. ಈ ಔಷಧಿಯ ಮಹಿಮೆಯನ್ನು ಏನೆಂದು ಹೇಳೋಣ? ॥೧೧॥

ಈ ಲೋಕದಲ್ಲಿಶಿವನಾಮಧೇಯವು ಶ್ರವಣಮಾತ್ರದಿಂದಲೇ, ವಿವಿಧವಾದ ಮತ್ತು ದೀರ್ಘವಾದ ಮಹಾರೋಗಗಳನ್ನು ಹೋಗಲಾಡಿಸುವುದು. ಮತ್ತು ಅತ್ಯಾಶ್ಚರ್ಯವನ್ನುಂಟುಮಾಡುವುದು. ಹೀಗಿರುತ್ತಿರಲು ಸಕಲಜನರೂ ಅದನ್ನೇಕೆ ಪಾನಮಾಡಿ ಸುಖಿಗಳಾಗಬಾರದು? ॥೧೨॥

ಶಿವನಾಮವೆಂಬ ವಸ್ತುವು ಸಂಸಾರವೆಂಬ ಮಹಾವ್ಯಾಧಿಗೆ ದಿವ್ಯೌಷಧರೂಪವಾಗಿರುವುದು: ಶಿವನಾಮಶ್ರವಣವು ದೇಹಾರೋಗ್ಯವನ್ನುಂಟುಮಾಡುವುದು. ಅಲ್ಲದೆ ಸಕಲ ಇಷ್ಟಾರ್ಥಗಳನ್ನೂ ದಯಪಾಲಿಸುವುದು. ಆದುದರಿಂದ ಶಿವನಾಮದಿಂದ ಕೂಡಿರುವ ಶಿವಕಥಾಮೃತವನ್ನು ನಾನೇಕೆ, ಯಥೇಚ್ಛವಾಗಿ ಪಾನಮಾಡಬಾರದು? ॥೧೩॥

ದೇವತೆಗಳ ಮೂಲಪುರುಷನಾದ ಒಬ್ಬಾನೊಬ್ಬ ದೇವತೆಯು ಶಿವನಾಮವೆಂಬ ಅಮೂಲ್ಯವಾದ ಔಷಧವನ್ನು ಪಾನಮಾಡಿದುದರಿಂದ ಅವನ ವಂಶದಲ್ಲಿ

ನಿರಾಮಯೋಽಯಂ ಧನರಾಶಿಭಿಃ ಸ್ಯಾತ್
ಪುತ್ರೈಃ ಪ್ರಪೌತ್ರೈಃ ಕಮಲಾವಿಲಾಸೈಃ ।
ನ್ಯಾಪ್ತಶ್ರುತೇನಾಪಿ ಶಿವಾಭಿಧಾನ
ದಿವ್ಯೌಷಧೇನಾಪಿ ಮತಿಪ್ರಭಾ ಮೇ ॥೧೫॥

ಬಹುಧಾ ಬಹವೋಽಪಿ ಸೇವಿತಾಃ
ಸತತಂ ಪೂರ್ವಭವೇಷು ನಿರ್ಜರಾಃ ।
ಸುಖದತ್ವವಿಮೋಹತೋ ಮಯಾ
ಸಹ ತೈರ್ಜನ್ಮಜರಾಮೃತಿರ್ಮಮ ॥೧೬॥

ಅನುಭೂತಮನೇಕಧಾ ಪುರಾ
ಜನನಂ ತೈರ್ಮರಣಂ ಚ ದುಃಸಹಂ ।
ಇತಿ ತದ್ವಿರತಂ ಮನೋಽಧುನಾ
ಶಿವಪೂಜಾಪ್ರವಣಂ ಶಿವಪ್ರಿಯಂ ॥೧೭॥

ಹುಟ್ಟಿದ ಸೇವಕರಿಂದ ಮೊದಲುಗೊಂಡು ಸರ್ವರೂ ಅಮರರಾದರೆಂದು ನಾನು ಕೇಳಿರುವೆನು. ಆದರೆ ಶಿವನಾಮವೆಂಬ ದಿವ್ಯೌಷಧವು ಪಾಮರರಿಗೆ ದುರ್ಲಭವಾಗಿರುವುದು. ॥೧೪॥

ಮನುಷ್ಯನು ನೀರೋಗಿಯಾಗಿ, ಹಣಕಾಸುಗಳಿಂದಲೂ, ಪುತ್ರ ಪೌತ್ರಾದಿಗಳಿಂದಲೂ ಕೂಡಿರಬಹುದು. ಏನೇ ಇದ್ದರೂ ಯಾವುದರಿಂದಲೂ ಅವನ ಬುದ್ಧಿಯು ಶುದ್ಧವಾಗುವುದಿಲ್ಲ. ಚಿತ್ತಶುದ್ಧಿಯೊದಗುವುದು ಶಿವನಾಮಸ್ಮರಣೆಯಿಂದಲೇ. ॥೧೫॥

ಇಂದ್ರಾದಿದೇವತೆಗಳು ಸುಖವನ್ನುಂಟುಮಾಡುವರೆಂದು ಭ್ರಮಿಸಿ, ಅನೇಕ ದೇವತೆಗಳನ್ನು ಎಡಬಿಡದೆ ಪೂರ್ವಜನ್ಮಗಳಲ್ಲಿ ಆರಾಧಿಸಿದೆನು--ಆದರೆ, ಅವರಂತೆಯೇ ನನಗೂ ಜರಾಮರಣಗಳು ತಪ್ಪಲಿಲ್ಲ. ॥೧೬॥

ಈ ಹಿಂದೆ ಅನೇಕಬಾರಿ, ದೇವತೆಗಳೊಂದಿಗೆ ಅಸಹ್ಯವಾದ ಜರಾಮರಣಗಳನ್ನು ಅನುಭವಿಸಿದೆನು. ಇದನ್ನು ತಿಳಿದೇ, ಈಗ ನನ್ನ ಮನಸ್ಸು ಇತರ ದೇವತೆಗಳ ಪೂಜೆಯಿಂದ ಶಾಂತವಾಗಿ ಶಿವಪೂಜೆಯಲ್ಲಿಯೇ ಆಸಕ್ತವಾಗಿರುವುದು. ॥೧೭॥

ಅಶಿವಃ ಶಿವಮಿಚ್ಛತಾ ಮಯಾ
ಮುಹುರಾರಾಧಿತ ಏವ ಮೋಹತಃ ।
ನ ಹಿ ತೇನ ಶಿವಂ ಕದಾಪಿ ಶುಕ್ತ್ಯಾ
ರಜತಂ ತದ್ಭ್ರಮ ಏವ ಕೇವಲಂ ನಃ ॥೧೮॥

ಕಾಮಿನೀಕರವಿಭೂಷಣೋದ್ಯತಃ
ಶುಕ್ತಿಕಾಮುಪಗತೋ ಯಥಾ ತಥಾ ।
ದೇವತಾಂತರಸಮರ್ಚಕೋ ಜನಃ
ಸರ್ವಥಾ ನ ಶಿವಮೇತಿ ಮೂಢಧೀಃ ॥೧೯॥

ಉನ್ಮತ್ತೋನ್ನತಕುಂಭಿಕುಂಭದಲನಾನ್ಮುಕ್ತಾಫಲಂ ಪ್ರಾಪ್ಯತೇ
ತತ್ಕುಂಭೀನಸಕುಂಭಯೋಗದಳನಾನ್ನೀಲಾದಿಕಂ ಲಭ್ಯತೇ ।
ಖದ್ಯೋತಾಹನನೇನ ಕೇವಲಮಘಂ ಸಂಪ್ರಾಪ್ಯತೇ ಶಂಕುತಃ
ಶರ್ವಾನ್ಯಾಮರಪೂಜನೇನ ಪರಮಾನಂದಃ ಪರಂ ಪ್ರಾಪ್ಯತೇ ॥೨೦॥

ಪೂರ್ವಜನ್ಮದಲ್ಲಿ ಸುಖವನ್ನು ಪಡೆಯಬೇಕೆಂಬ ಇಚ್ಛೆಯಿಂದ, ಅಸುಖವನ್ನುಂಟುಮಾಡುವ ಇಂದ್ರಾದಿದೇವತೆಗಳನ್ನು ಅಜ್ಞಾನದಿಂದ ಆರಾಧಿಸಿದೆನು. ಆದರೆ ಅದರಿಂದ ಎಂದಿಗೂ ಸುಖವು ಲಭಿಸಲಾರದು. ಕಪ್ಪೆಯ ಚಿಪ್ಪನ್ನು ನೋಡಿ ಬೆಳ್ಳಿಯೆಂದು ತಿಳಿದುಕೊಂಡರೆ ಅದು ಬೆಳ್ಳಿಯಾಗುವುದೇ ? ಅದರಂತೆ ಅಸುಖಕರವಾದ ದೇವತಾಗಣವನ್ನು ಸುಖಕರವಾದುದೆಂದು ತಿಳಿದು ಆರಾಧಿಸಿದರೆ ಅದು ಎಂದಿಗಾದರೂ ಸುಖವನ್ನುಂಟುಮಾಡಬಲ್ಲದೇ ? ॥೧೮॥

ಹೆಂಡತಿಗೆ ಕೈಬಳೆ ಮಾಡಿಸಲು ಪ್ರಯತ್ನಪಡುವ ಮನುಷ್ಯನು ಮುತ್ತಿನ ಚಿಪ್ಪಿನ ಲಾಭದಿಂದ ತೃಪ್ತನಾಗಲಾರನು. ಅದರಂತೆ ಇತರ ದೇವತೆಗಳನ್ನು ಪೂಜಿಸಲುದ್ಯುಕ್ತನಾಗುವ ಪುರುಷನು ಎಂದಿಗೂ ಈಶ್ವರನನ್ನು ಧ್ಯಾನಿಸುವುದಿಲ್ಲ. ॥೧೯॥

ಮದಿಸಿರುವ ಆನೆಯ ಕುಂಭಸ್ಥಲವನ್ನು ಅಂಕುಶದಿಂದ ತಿವಿದು ಅದರಿಂದ ಮುತ್ತುಗಳನ್ನು ಸಂಪಾದಿಸಬಹುದು. ಸರ್ಪಶ್ರೇಷ್ಠನ ಹೆಡೆಯನ್ನು ಹೊಡೆದು ನಾಗಮಣಿಯನ್ನು ಹೊಂದಬಹುದು. ಆದರೆ ಮಿಂಚಿನ ಹುಳವನ್ನು ಕೊಂದರೆ ಕೇವಲ ಪಾಪವು ಸಂಘಟಿಸುವುದಲ್ಲದೇ ಮತ್ತಾವ ಪ್ರಯೋಜನವೂ ಲಭಿಸಲಾರದು.

ಶಿವ ಶಿವ ಶಿವನಾಮಧೇಯರತ್ನಂ
ಕಥಮಿದಮದ್ಭುತಮದ್ಯ ಸೃಷ್ಟಮಸ್ಮೈ ।
ಅನವರತಮಿಹಾಸ್ತು ಕಂಠಭಾಗೇ
ಕಥಮಪಿ ದೃಷ್ಟಿರಿಹಾಸ್ತಿ ದುರ್ಜನಾನಾಂ ॥೨೦॥

ಜಾತೋ ಜಾರಜಜಾರಿಣೀಜಠರತೋ ಯಸ್ತಸ್ಯ ನಾತಿಪ್ರಿಯಾಃ ।
ಶರ್ವಾಣೀರಮಣಾಭಿಧಾನಮಣಯಶ್ಚಿಂತಾಮಣಿಸ್ತೈರಭೂತ್ ।
ತೈರೇವಾಮರಭೂರುಹಾಃ ಸಮಭವನ್ಗಾ ನಿರ್ಜರಾಣಾಂ ಸುಧಾ
ಸ್ವರ್ಗಶ್ರೀರಪಿ ತೈರಭೂದಿತಿ ಮುಹುಸ್ತೇ ರಕ್ಷಣೀಯಾಃ ಪರಂ ॥೨೨॥

ಶಿವನಾಮಮಣಿಪ್ರಭಾವಜಾಲಂ
ಭುವನೇ ವೇದವಿದಾಂ ವರಃ ಪರೋ ಯಃ ।
ಸುರಸೇವಿತಕಾಶಿಕಾನಿವಾಸ
ಪ್ರಭಯಾ ವೇದ ಸ ಕೋಽಪಿ ಪುಣ್ಯರೂಪಃ ॥೨೩॥

ಅದರಂತೆ ಉಮಾರಮಣನಾದ ಶಿವನನ್ನು ಪೂಜಿಸುವುದನ್ನು ಬಿಟ್ಟು ದೇವತಾಂತರಗಳನ್ನು ಸೇವಿಸುವುದರಿಂದ ಪರಮಾನಂದವು ಎಂದಾದರೂ ಲಭಿಸೀತೆ? ॥೨೦॥

ನನ್ನನ್ನು ಉದ್ಧರಿಸುವುದಕ್ಕೋಸ್ಕರವೇ ಪರಮಕಾರುಣಿಕನಾದ ಪರಮೇಶ್ವರನು ಶಿವನಾಮಧೇಯವೆಂಬ ವಿಚಿತ್ರವಾದ ರತ್ನವನ್ನು ಸೃಷ್ಟಿಸಿರುವನು. ಅದು ನಿರಂತರವೂ ನನ್ನ ಕಂಠದಲ್ಲಿಯೇ ಇರಲಿ. ಆಗ ದುರ್ಜನರು ಯಾವ ದೃಷ್ಟಿಯಿಂದಲೂ ಈ ರತ್ನವನ್ನು ನೋಡಲಾರರು. ॥೨೧॥

ಜಾರಜ ಜಾರಿಣಿಯರಿಂದ ಜನಿಸಿದವನಿಗೆ ಶಿವನಾಮಗಳು ಎಂದಿಗೂ ಇಷ್ಟವಾಗವು. ಶಿವನಾಮಗಳೆಂಬ ರತ್ನಗಳಿಂದಲೇ ಚಿಂತಾಮಣಿಯೆಂಬ ಸ್ವರ್ಗಲೋಕದ ದಿವ್ಯರತ್ನವುಂಟಾಯಿತು. ಇದಲ್ಲದೇ ಕಲ್ಪವೃಕ್ಷ, ಕಾಮಧೇನು, ಅಮೃತ ಮತ್ತು ಇತರ ಸ್ವರ್ಗ ಸಂಪತ್ತುಗಳೂ, ಈ ಎಲ್ಲವೂ ಶಿವನಾಮ ರತ್ನದಿಂದಲೇ ಉಂಟಾದುವು. ಆದುದರಿಂದ ಶಿವನಾಮಧೇಯವೆಂಬ ರತ್ನಗಳನ್ನು ಪ್ರೀತಿಯಿಂದ ನಾವು ರಕ್ಷಿಸಬೇಕು. ॥೨೨॥

ಪುಣ್ಯಕ್ಷೇತ್ರವಾದ ಕಾಶಿಯಲ್ಲಿ ನೆಲಸಿರುವ ವಿಶ್ವೇಶ್ವರನ ಅನುಗ್ರಹದಿಂದ ವೇದಾರ್ಥಜ್ಞನಾದ ಯಾವ ಜ್ಞಾನಿಯು, ಅಮೂಲ್ಯವಾದ ಶಿವನಾಮವೆಂಬ ರತ್ನದ

ಸಂಸಾರಾಭಿರತಿಂ ವಿಹಾಯ ಸತತಂ ವೀರೇಶ್ವರಾರಾಧನೈಃ
ನೀತಂ ಯೇನ ವಯೋಽಪ್ಯಪೋಷಣಜಲಾಹಾರೈಃ ಪರಂ ತೇನ ಚೇತ್ ।
ನ ಜ್ಞಾತಃ ಶಿವನಾಮದಿವ್ಯಮಹಿಮಾ ಜ್ಞೇಯಃ ಸ ಕೇನಾಪಿ ವಾ
ತದ್ಜ್ಞಾನಾಯ ತಪಃ ಕೃತಂ ಖಲು ಮಹದ್ವೀರೇಶಲಿಂಗಾಲಯೇ ॥೨೪॥

ಶ್ರೀಕಾಲಭೈರವವಿಲೋಕನಪೂತಚಿತ್ತಃ
ವೀರೇಶ್ವರಾರ್ಚನರತೋ ಜಲಧಾರಯಾಪಿ ।
ಯಸ್ತೇನ ತಾವದಸಕೃದ್ಗಿರಿಶಾಭಿಧಾನ
ಮಾಹಾತ್ಮ್ಯಮಾದರವಶಾದ್ವಿದಿತಂ ವಿಚಿತ್ರಂ ॥೨೫॥

ಕಿಂ ಚಿತ್ರಂ ಶಿವಪಾದಪದ್ಮಭಜನಂ ಯಸ್ಯಾಭವಜ್ಜೀವನಂ
ತೇನಾಪಾರಶಿವಾಭಿಧಾನಮಹಿಮಾ ಪೀಯೂಷರಾಶಿಃ ಪರಃ ।
ಪೀತಸ್ತೇನ ಸ ಪೀನತಾಮುಪಗತಸ್ತಂ ವೇದ ವಿಶ್ವೇಶ್ವರಃ
ತೇನೇಯಂ ರಜನೀಕೃತಾ ಶಿವರತಾನಂದಾಬ್ಧಿಕಂದಾತ್ಮಿಕಾ ॥೨೬॥

ಮಹಿಮೆಯನ್ನು ತಿಳಿದುಕೊಳ್ಳುವನೋ, ಅವನೇ ಭಾಗ್ಯಶಾಲಿಗಳಲ್ಲಿ ಶ್ರೇಷ್ಠತಮನು. ॥೨೩॥

ಯಾವ ನರನು ಸಂಸಾರದಲ್ಲಿ ಆಸಕ್ತಿಯನ್ನು ತೊರೆದು, ಜಲವನ್ನೇ ಆಹಾರವನ್ನಾಗಿ ಸೇವಿಸುತ್ತಾ, ನಿರಂತರವೂ ಈಶ್ವರನನ್ನು ಆರಾಧಿಸುವನೋ, ಅವನಿಗೇ, ಶಿವನಾಮದ ಮಹಿಮೆಯು ಗೋಚರಿಸದಿದ್ದರೆ, ಅದು ಮತ್ತಾರಿಗೆ ತಿಳಿಯುವುದು ? ಅವನು ಶಿವನಾಮದ ಮಹಿಮೆಯನ್ನು ತಿಳಿದುಕೊಳ್ಳುವುದಕ್ಕೋಸ್ಕರವೇ ವೀರೇಶಾಲಯದಲ್ಲಿ ತಪಸ್ಸನ್ನು ಆಚರಿಸಿರುವನಲ್ಲವೇ? ॥೨೪॥

ಯಾವ ಮನುಜನು, ಕಾಲಭೈರವೇಶ್ವರನ ದರ್ಶನದಿಂದ ಪರಿಶುದ್ಧನಾಗಿ, ಜಲಧಾರೆಗಳಿಂದ ಈಶ್ವರನನ್ನು ಅರ್ಚಿಸುವನೋ, ಅವನು, ಒಂದು ಬಾರಿಯಾದರೂ, ಶಿವನಾಮದ ವಿಚಿತ್ರವಾದ ಮಹಿಮೆಯನ್ನು ವಿಶ್ವಾಸದಿಂದ ತಿಳಿದುಕೊಳ್ಳುವನು. ॥೨೫॥

ಯಾವನು, ಈಶ್ವರನ ಪಾದಸೇವೆಯಿಂದಲೇ ಜೀವಿಸುವನೋ ಅವನೇ ಶಿವನಾಮಾಮೃತವನ್ನು ಯಥೇಚ್ಛವಾಗಿ ಪಾನಮಾಡಿ ತೃಪ್ತಿಯನ್ನು ಹೊಂದಿದವನು. ಆ ಭಕ್ತನ ನಿರ್ಮಲವಾದ ಹೃದಯವನ್ನು ಈಶ್ವರನೇ, ತಿಳದುಕೊಳ್ಳುವನು. ಆ ಭಕ್ತ

ಶಿವಕಥಾಮೃತಮೇವ ನ ಜೀವನಂ
ಯದಿ ದಿನೇಽಪಿ ನಿಶಾಸ್ವಪಿ ತಜ್ಜನಿಃ
ವಿಷಮಿವ ಪ್ರಲಯಾಯ ಭವತ್ಯತಃ ।
ಶಿವಕಥಾಮೃತಮೇವ ಹಿ ಜೀವನಂ ॥೨೭॥

ಕತಿ ಕತಿ ನ ನರಾಕಾಃ ಸಂತಿ ಲೋಕೇಷು ಕಾಕಾಃ ।
ಕತಿ ಕತಿ ಪಿಕಶೋಕಾಃ ಶಂಕರದ್ವೇಷಿಣೋಽಪಿ
ಪರಿಹೃತನಿಜಧರ್ಮಾಸ್ತೇಷು ತಾವನ್ನ ಭಕ್ತಿಃ
ಶಿವಚರಣಸರೋಜೇ ತಾವತಾ ಮೇ ನ ಹಾನಿಃ ॥೨೮॥

ಶಿವಚರಣಸರೋಜರಾಜಹಂಸಃ
ಖಲು ಮಮ ಮಾನಸಮಿಾಶನಾಮಧೇಯಂ ।
ಬಿಸಮಿವ ಸುಧಯಾಭಿಷಿಕ್ತಮೇತತ್ ।
ಮುಹುರನುಧಾವತಿ ಧೀರಮಾದರೇಣ ॥೨೯॥

ನಿಂದಲೇ ಶಿವರಾತ್ರಿಯು ಜನರಿಗೆ ಆಹ್ಲಾದವನ್ನುಂಟುಮಾಡುವುದು. ಇದು ಆಶ್ಚರ್ಯ ವಲ್ಲವೆ? ॥೨೬॥

ಯಾವನು ಹಗಲಿರಳು ಶಿವಕಥಾಮೃತದಿಂದ ಜೀವಿಸುವುದಿಲ್ಲವೋ, ಅವನ ಜೀವನವೇ, ಅವನಿಗೆ ವಿಷವಾಗಿ ಪರಿಣಮಿಸಿ, ಅಂತ್ಯದಲ್ಲಿ ಅವನ ನಾಶಕ್ಕೆ ಕಾರಣ ವಾಗುವುದು. ಆದುದರಿಂದ ಮನುಷ್ಯನು ಶಿವಕಥಾಮೃತದಿಂದಲೇ ಜೀವಿಸಬೇಕು. ಇದರಿಂದ ಅವನಿಗೆ ಜನ್ಮಜರಾಮರಣಗಳು ಸಂಭವಿಸಲಾರವು. ॥೨೭॥

ಈ ಲೋಕದಲ್ಲಿ ಶಿವಭಕ್ತಿಹೀನರಾಗಿ ಕಾಗೆಗಳಂತೆ ವೃಥಾ ತಮ್ಮ ಜೀವಿಕೆ ಯನ್ನು ವ್ಯರ್ಥಗೊಳಿಸುವ ಎಷ್ಟು ಮಂದಿ ದುರ್ಜನರಿಲ್ಲ? ಕೋಗಿಲೆಗಳಂತೆ ಗಾನ ಮಾಡುತ್ತಾ ಶಿವನನ್ನು ತಮ್ಮ ಕಂಠದಿಂದ ದ್ವೇಷಿಸುವ ಶಿವದ್ವೇಷಿಗಳು ಅನೇಕರಿರು ವರು. ಆದರೆ ಸ್ವಧರ್ಮಬಾಹಿರರಾದ ಅವರಲ್ಲಿ ಈಶ್ವರಭಕ್ತಿಯ ಲೇಶವೂ ಇಲ್ಲ. ಇಷ್ಟರಿಂದಲೇ ಈಶ್ವರನ ಪಾದಸೇವೆಯಲ್ಲಿ ನಿರತನಾದ ನನಗೆ ಕೊರತೆಯೇನು? ॥೨೮॥

ಹಂಸವು ತಾವರೆಯ ದಂಟುಗಳನ್ನು ತಿನ್ನುವುದಕ್ಕೋಸ್ಕರ, ತಾವರೆಯ ಹೂವುಗಳಿದ್ದಲ್ಲಿಗೆ ಓಡಿಹೋಗುವಂತೆ ಶಿವಪಾದದಲ್ಲಿ ಆಸಕ್ತವಾದ ನನ್ನ ಚಿತ್ತವು,

ಅಮಂದಮಂದಾರತರುಷ್ವಪೇಕ್ಷಾ
ನ ದೇವಧೇನುಪ್ರವರೇ ಮಣೌ ವಾ ।
ಪರಂ ತು ಮೇ ಸಂತತಮಂತಕಾರಿ
ನಾಮಾಮೃತೇನೈವ ಕಿಲಾಮೃತಃ ಸ್ಯಾಂ ॥೩೦॥

ಪುರಾ ಗಂಧರ್ವನಗರೇ ವಿಶ್ವಾವಸುರಿತಿ ಶ್ರುತಃ ।
ಗಂಧರ್ವಸ್ತಸ್ಯ ವಿಶ್ವಾಸಃ ಸರ್ವದಾ ಶಿವಪೂಜನೇ ॥೩೧॥

ತೇನಾಹರ್ನಿಶಮೀಶಾನನಾಮಪೀಯೂಷ ಸೇವನಂ ।
ಕೃತಂ ತಸ್ಯ ನ ವಾರ್ತಾಸು ರತಿರ್ನಾರೀಷು ಸರ್ವಥಾ ॥೩೨॥

ಸ ಗೌರೀಲಿಂಗಮಭ್ಯರ್ಚ್ಯ ಹಿಮವತ್ಕಂಧರೇ ಪುರಾ ।
ನಂದಿಕೇಶ್ವರಮಾಲೋಕ್ಯ ವಿನಯೇನಾಹ ಶಾಂಭವಂ ॥೩೩॥

ಶಿವನಾಮವೆಂಬ ಅಮೃತವನ್ನು ಪಾನಮಾಡುವುದಕ್ಕೋಸ್ಕರ ಶಿವನ ಬಳಿಗೆ ಓಡುತ್ತಿರುವುದು. ॥೨೯॥

ಕಲ್ಪವೃಕ್ಷಗಳನ್ನಾಗಲಿ, ಸುರಧೇನುವನ್ನಾಗಲಿ, ಚಿಂತಾಮಣಿಯನ್ನಾಗಲಿ, ನಾನು ಅಪೇಕ್ಷಿಸುವುದಿಲ್ಲ. ಸದಾ ಈಶ್ವರನ ನಾಮಾಮೃತವನ್ನೇ ಪಾನಮಾಡಲು ಬಯಸುವೆನು. ಅದರಿಂದಲೇ ನಾನು ನಿಜವಾಗಿಯೂ ಅಮರನಾಗುವೆನು. ॥೩೦॥

ಹಿಂದೆ ಒಂದಾನೊಂದುಕಾಲದಲ್ಲಿ ಗಂಧರ್ವನಗರದಲ್ಲಿ ವಿಶ್ವಾವಸುವೆಂಬ ಹೆಸರಿನಿಂದ ಪ್ರಸಿದ್ಧನಾದ ಒಬ್ಬಾನೊಬ್ಬ ಗಂಧರ್ವನಿದ್ದನು. ಅವನು ಯಾವಾಗಲೂ ಈಶ್ವರಪೂಜೆಯಲ್ಲಿಯೇ ಆಸಕ್ತನಾಗಿರುತ್ತಿದ್ದನು. ॥೩೧॥

ಹಗಲೂ ರಾತ್ರಿಯೂ ಈಶ್ವರನಾಮಸ್ಮರಣೆಮಾಡುವುದೇ ಆತನ ಮುಖ್ಯ ಕರ್ತವ್ಯವಾಗಿತ್ತು. ಇತರ ವ್ಯವಹಾರದಲ್ಲಾಗಲಿ, ಸ್ತ್ರೀಸೌಖ್ಯದಲ್ಲಾಗಲಿ, ಆತನಿಗೆ ಅಪೇಕ್ಷೆಯಿರಲಿಲ್ಲ. ಅವನು ಒಂದಾನೊಂದು ದಿನ, ಹಿಮವತ್ಪರ್ವತದ ತಪ್ಪಲಿನಲ್ಲಿ ಪರಮೇಶ್ವರನನ್ನು ಪೂಜಿಸಿ, ಪರಮಶಾಂಭವನಾದ ನಂದಿಕೇಶ್ವರನನ್ನು ಕುರಿತು ವಿನಯದಿಂದ ಹೀಗೆಂದನು. ॥೩೨-೩೩॥

ಪ್ರಣತಃ ಪ್ರಾಂಜಲಿರ್ಭೂತ್ವಾ ಪುಷ್ಪೈರಭ್ಯರ್ಚ್ಯ ಸಾದರಂ ।
ಪಾದಸಂವಾಹನಂ ಕೃತ್ವಾ ತದ್ರಜಃ ಶಿರಸಾ ವಹನ್ ॥೩೪॥

॥ ವಿಶ್ವಾವಸುರುವಾಚ ॥

ನಂದಿಕೇಶ ಮಹಾಪ್ರಾಜ್ಞ ಪ್ರಜ್ಞಾನಘನಪೂಜಕ ।
ಈಶಾನಸಾಧನಂ ಕಿಂ ವಾ ಕಿಮಾನಂದಪ್ರವರ್ಧಕಂ ॥೩೫॥

ಕಿಂ ವಾ ಮುಕ್ತಿಪ್ರದಂ ಲೋಕೇ ಕಿಂ ಸರ್ವಾಮಯನಾಶಕಂ ।
ಸಕೃತ್ಸ್ಮೃತಂ ವಾ ಪೀತಂ ವಾ ಶ್ರುತಂ ವಾ ಸರ್ವಸಿದ್ಧಿದಂ ॥೩೬॥

॥ ನಂದಿಕೇಶ್ವರ ಉವಾಚ ॥

ವಿಜ್ಞಾನಂ ಶಿವಪೂಜನೇನ ಸ ಯತೋ ವಿಜ್ಞಾನದಃ ಶಂಕರಃ
ವಿಜ್ಞಾನಾತ್ಮಕ ಏವ ತೇನ ಪರಮಾನಂದೋಽಪಿ ಸಂವರ್ಧತೇ ।
ಮುಕ್ತಿಃ ಶಂಕರಪೂಜಯಾ ಭವತಿ ಸಾ ಸರ್ವಾಮಯಧ್ವಂಸನೇ
ಶಕ್ತಾ ಸಾ ಸಕಲಾರ್ಥದಾನನಿಪುಣಾ ಪುಣ್ಯೈಃ ಪರಂ ಜಾಯತೇ ॥೩೭॥

ಅವನು ಪುಷ್ಪಗಳಿಂದ ಶಿವಲಿಂಗವನ್ನರ್ಚಿಸಿ ಅಂಜಲಿಬದ್ಧನಾಗಿ ಈಶ್ವರನನ್ನು ವಂದಿಸಿ ಶಿವಪಾದಸೇವೆಯನ್ನು ಮಾಡಿ ಪಾದಧೂಳಿಯನ್ನು ತನ್ನ ಶಿರಸ್ಸಿನಲ್ಲಿ ಧರಿಸಿ ಹೀಗೆಂದನು. ॥೩೪॥

"ಜ್ಞಾನಿಯಾದ ನಂದಿಕೇಶ್ವರನೇ! ಶಿವನನ್ನು ಪೂಜಿಸುವ ಸಾಮಗ್ರಿಗಳು ಯಾವುವು? ಲೋಕದಲ್ಲಿ ನಿಜವಾದ ಆನಂದವನ್ನುಂಟುಮಾಡುವ ವಸ್ತುವು ಯಾವುದು? ಎಂಬುದನ್ನು ನನಗೆ ಹೇಳುವವನಾಗು. ॥೩೫॥

ಲೋಕದಲ್ಲಿ ಮೋಕ್ಷವನ್ನು ದಯಪಾಲಿಸುವ ಯಾವ ವಸ್ತುವು ಸಕಲ ರೋಗಗಳನ್ನೂ ನಾಶಮಾಡುವುದು? ಮತ್ತು ಯಾರ ಸ್ಮರಣಮಾತ್ರದಿಂದಾಗಲಿ ಸೇವನಮಾತ್ರದಿಂದಾಗಲಿ ಅಥವಾ ನಾಮಶ್ರವಣಮಾತ್ರದಿಂದಾಗಲಿ, ಸಕಲ ಸೌಭಾಗ್ಯಗಳನ್ನೂ ಸಂಪಾದಿಸಬಹುದು? ಅದನ್ನು ನನಗೆ ಹೇಳುವವನಾಗು." ॥೩೬॥

ವಿಶ್ವಾವಸುವು ಹೀಗೆಂದು ಕೇಳಲು, ನಂದಿಕೇಶ್ವರನು ಅವನನ್ನು ಕುರಿತು ಹೀಗೆಂದನು "ಎಲೈ ಗಂಧರ್ವನೇ, ಈಶ್ವರಪೂಜೆಯಿಂದಲೇ ಸುಜ್ಞಾನವು ಉದಯಿಸುವುದು. ಶಿವನೇ ವಿಜ್ಞಾನವನ್ನುಂಟುಮಾಡುವವನಾಗಿರುವನು. ಅವನು ವಿಜ್ಞಾನಸ್ವರೂಪನೇ ಆಗಿರುವನು. ಅವನ ಪೂಜೆಯಿಂದ ಆನಂದವೂ ಅಭಿವೃದ್ಧಿಯನ್ನು

ನಶ್ಯಂತ್ಯಾಮಯಕೋಟಯಃ ಖಲು ಮಹಾದೇವಾರ್ಚನಾತ್ಕೇವಲಂ
ತನ್ನಾಶಾಯ ತದೇವ ತಾವದಧುನಾ ಶಕ್ತಂ ತದೇವಾಮೃತಂ ।
ತತ್ತಾವನ್ಮಮ ಮೃತ್ಯುಜನ್ಮನಿ ಜರಾನಾಶಾಯ ಹಾರೋದ್ಯತಂ
ತತ್ತಾವತ್ಸುಕೃತಾತ್ಮನಾಂ ಹೃದಿ ಸದಾ ಭಾತ್ಯೇವ ಭಾನುಪ್ರಭಂ ॥೩೮॥

ಸದ್ಯಃ ಶಿವಾರಾಧನಭಾನುನೈವ
ಮೋಹಾಂಧಕಾರಪ್ರಲಯಃ ಪ್ರಜಾತಃ ।
ಸ ಜಾತು ನೋತ್ತಿಷ್ಠತಿ ಸರ್ವಥಾಪಿ
ನಷ್ಟಃ ಕಥಂ ವಾ ಪುನರುತ್ಥಿತಃ ಸ್ಯಾತ್ ॥೩೯॥

ಮೋಹಂ ನಾಶಯತೀತಿನಾದ್ಭುತಮಿದಂ ಸಂಸಾರರೋಗಕ್ಷಯಃ
ಶರ್ವಾರಾಧನತಸ್ತಥಾ ಸತಿ ಮುಹುಃ ಸಂಸಾರಬೀಜಕ್ಷಯಂ ।

ಹೊಂದುವುದು. ಶಿವನನ್ನು ಪೂಜಿಸುವುದರಿಂದ ಮೋಕ್ಷವು ಲಭಿಸುವುದು. ಆ ಮೋಕ್ಷವೇ ಸಕಲ ಸಾಂಸಾರಿಕ ರೋಗಗಳನ್ನೂ ನಾಶಮಾಡುವುದು. ಆದರೆ ಆ ಈಶ್ವರಭಕ್ತಿಯು ಪೂರ್ವಜನ್ಮದಲ್ಲಿ ಸಂಪಾದಿಸಿದ ಪುಣ್ಯವಿಶೇಷಗಳಿಂದಲೇ ಉಂಟಾಗುವುದಲ್ಲದೇ, ಅನ್ಯಥಾ ಉಂಟಾಗಲಾರದು. ॥೩೭॥

ಈಶ್ವರನ ಪೂಜೆಯಿಂದ, ನಾನಾವಿಧವಾದ ರೋಗಸಮುದಾಯಗಳು ದೂರವಾಗುವುವು. ಜರಾಮರಣಗಳೆಂಬ ಆ ಮಹಾರೋಗಗಳನ್ನು ನಾಶಪಡಿಸುವುದರಲ್ಲಿ, ಶಿವಪೂಜೆಯೆಂಬ ಅಮೃತವೇ ಸಮರ್ಥವಾಗಿರುವುದಲ್ಲದೆ, ಇನ್ನಿತರ ಯಾವ ಔಷಧಗಳೂ ಹೋಗಲಾಡಿಸಲಾರವು. ಶಿವಪೂಜೆಯಲ್ಲಿ ಆಸಕ್ತನಾದ ನನಗೆ, ಶಿವನಾಮವೆಂಬ ಅಮೃತವೇ, ಜನ್ಮಜರಾಮರಣಗಳನ್ನು ನಾಶಮಾಡುವುದು. ಆ ಶಿವನಾಮವೂ ಪುಣ್ಯಶಾಲಿಗಳ ಹೃದಯದಲ್ಲಿಯೇ ಸದಾ ನೆಲಸಿರುವುದು. ॥೩೮॥

ಶಿವಪೂಜೆಯೆಂಬ ಸೂರ್ಯನಿಂದ ಅಜ್ಞಾನವೆಂಬ ಅಂಧಕಾರವು ನಾಶಹೊಂದುವುದು. ಈ ರೀತಿಯಲ್ಲಿ ನಷ್ಟವಾದ ಆ ಅಜ್ಞಾನವು ಎಂದಿಗೂ ಪುನಃ ಉದಯಿಸುವುದೇ ಇಲ್ಲ. ॥೩೯॥

ಈಶ್ವರಪೂಜೆಗೆ, ಅಜ್ಞಾನಕಾರ್ಯವಾದ ಸಂಸಾರವನ್ನೇ ನಾಶಮಾಡುವ ಸಾಮರ್ಥ್ಯವಿರುವಾಗ ಆ ಸಂಸಾರಕ್ಕೆ ಕಾರಣವಾದ ಅಜ್ಞಾನವನ್ನು ನಾಶಮಾಡುವ

ತತ್ಕರ್ತುಂ ಕ್ಷಮುಮೇವ ಪರ್ವತಲಯೇ ಶಕ್ತಃ ಸ ಕಾಲಾನಲಃ
ಕಿಂ ತತ್ಪರ್ವತಶುಷ್ಕಪರ್ಣವಿಲಯೇ ಶಕ್ತೋ ನ ಸರ್ವಾತ್ಮನಾ ॥೪೦॥

ವಿಂಧ್ಯಾಕಾರಮಹಾಘಕೋಟಿವಿಲಯಃ ಸದ್ಯಃ ಶಿವಾರಾಧನಾತ್
ನೂನಂ ಜಾಯತ ಇತ್ಯಪಾರಮಹಿಮಾ ಕಾಲಾಂತಕಃ ಸಂಸ್ಮೃತಃ ।
ತಾವತ್ಪಾಪಕುಲಕ್ಷಯಾಯ ಸ ಪರಂ ಶಕ್ತಸ್ತತಃ ಕಿಂ ತಯಾ
ಶ್ರೀವಿಶ್ವೇಶ್ವರಪೂಜಯಾಪಿ ಫಲಮಿತ್ಯೇವಾಭಿಮಾನೋ ಮಮ ॥೪೧॥

ಯೇನಾನಾಮಯತಾಂ ಪ್ರಯಾತಿ ಮನುಜಸ್ತದ್ದುರ್ಲಭಂ ದೇಹಿನಾಂ
ಪುಣ್ಯಾಭಾವವಿನಿಶ್ಚಯೇನ ಸುಕೃತಾಂಭೋಧಿಪ್ರವೃದ್ಧ್ಯಾ ಪರಂ ।
ಲಿಂಗಾರಾಧನಧೀರ್ಭವತ್ಯಪಿ ಪುನಃ ಸಾ ವರ್ಧತೇ ಸರ್ವಥಾ
ತತ್ಪೂಜಾನಿರತಾತ್ಮನಾಂ ಸುಕೃತಿನಾಂ ಸರ್ವಾತ್ಮನಾ ಸರ್ವಥಾ ॥೪೨॥

ಸಾಮರ್ಥ್ಯವಿರುವುದಿಲ್ಲವೇ ? ಪ್ರಳಯದ ಕಿಚ್ಚಿನಂತೆ, ಭಯಂಕರನಾಗಿರುವ ಶಿವನು, ಸಂಸಾರವೆಂಬ ಪರ್ವತವನ್ನೇ ನಾಶಮಾಡುವ ಸಾಮರ್ಥ್ಯವನ್ನು ಹೊಂದಿರುವಾಗ ಪರ್ವತದಲ್ಲಿರುವ, ತರಗೆಲೆಗೆ ಸದೃಶವಾದ ಅಜ್ಞಾನವನ್ನು ನಾಶಮಾಡಲಾರನೇ ? ||೪೦||

ಈಶ್ವರನ ಸೇವೆಯಿಂದ, ವಿಂಧ್ಯಪರ್ವತದಂತೆ ಮಹತ್ತಾಗಿರುವ, ಅನೇಕ ಪಾಪಗಳು ಶೀಘ್ರವಾಗಿಯೇ ನಾಶ ಹೊಂದುವುವು. ಆದುದರಿಂದ ನಾನು ಮೃತ್ಯುಂಜಯನಾದ ಈಶ್ವರನನ್ನು ಸ್ಮರಿಸಿದೆನು. ಅವನೇ ಪಾಪರಾಶಿಗಳನ್ನು ಹೋಗಲಾಡಿಸುವುದರಲ್ಲಿ ಸಮರ್ಥನಾಗಿರಲು, ಅವನನ್ನು ಪೂಜಿಸುವುದರಿಂದ ಯಾವ ಪ್ರಯೋಜನವು ತಾನೆ ದೊರಕಲಾರದು ,ಎಂಬ ಗರ್ವವು ನನ್ನಲ್ಲಿ ಉದಯಿಸಿರುವುದು. ||೪೧||

ಯಾವ ದೇವನ ಅನುಗ್ರಹದಿಂದ ಮನುಷ್ಯನು ಸಂಸಾರವಿನಿರ್ಮುಕ್ತನಾಗುವನೋ ಆ ದೇವನ ಅನುಗ್ರಹವು ಪೂರ್ವಜನ್ಮಸುಕೃತವಿಶೇಷಗಳಿಂದಲೇ ಲಭಿಸುವುದಲ್ಲದೇ ಅನ್ಯಥಾ ದೊರೆಯಲಾರದು. ಪೂರ್ವಜನ್ಮದ ಪುಣ್ಯವಿಶೇಷದಿಂದಲೇ ಈಶ್ವರ ಲಿಂಗವನ್ನು ಪೂಜಿಸಬೇಕೆಂಬ ಬುದ್ಧಿಯು ಮನುಜರಿಗೆ ಉಂಟಾಗುವುದು. ಈ ರೀತಿಯಲ್ಲಿ ಶಿವಲಿಂಗಾರಾಧನಾಸಕ್ತರಾದ ಭಾಗ್ಯಶಾಲಿಗಳಿಗೆ ಪ್ರತಿನಿತ್ಯವೂ ಶಿವನನ್ನು ಆರಾಧಿಸಬೇಕೆಂಬ ಬುದ್ಧಿಯು ಅಭಿವೃದ್ಧಿಯನ್ನೈದುವುದು. ||೪೨||

ಶ್ರೀರುದ್ರೋ ಭಿಷಜಾಂ ಭಿಷಕ್ತಮ ಇತಿ ಖ್ಯಾತಃ ಶ್ರುತೋಽತಃ ಪ್ರಗೇ
ಸಂಸಾರಾಮಯನಾಶನಾಯ ಮಹಸಾ ಶಕ್ತಃ ಸ ಜನ್ಮಾದಿಕಂ ।
ದುಃಖಂ ನಾಶಯತಿ ಸ್ಮೃತೋಽಪಿ ಸುತರಾಂ ದೃಷ್ಟಃ ಸ ಕಷ್ಟಾಪಹಃ
ಕಸ್ತೇನಾಪಿ ಸಮಃ ಸುರೇಷು ಸ ಸುರಾರಾಧ್ಯಃ ಸುರಾಧೀಶ್ವರಃ ॥೪೩॥

ಸುರಾಧೀಶ್ವರಾಯ ಪ್ರಣಾಮಃ ಕೃತಶ್ಚೇತ್
ಮಹೇಶಾಯ ಸಂಸಾರದುಃಖಾಪಹಾರಃ ।
ಭವತ್ಯೇಷ ಸದ್ಯಃ ಕುತಸ್ತಾವದೇತತ್
ಪ್ರಭಾವೈರ್ಭವಕ್ಲೇಶಲೇಶಾವಕಾಶಃ ॥೪೪॥

ಪ್ರಣಾಮೋದ್ಯಮೇನಾಪಿ ಸಂಸಾರನಾಶೇ
ಪ್ರಣಾಮೇನ ದುಃಖಪ್ರಣಾಶಃ ಕಥಂ ನ ।
ಅತಃ ಶಂಕರಾಯ ಪ್ರಣಾಮೋ ವಿಧೇಯಃ
ಸ ವೇದೈಕಬೋಧ್ಯಃ ಸ ವಿಜ್ಞಾನರೂಪಃ ॥೪೫॥

ಸಂಸಾರವೆಂಬ ರೋಗವನ್ನು ನಾಶಮಾಡುವುದರಲ್ಲಿ ಈಶ್ವರನೇ ಶ್ರೇಷ್ಠತಮನಾದ ವೈದ್ಯನು. ಅವನ ಸ್ಮರಣಮಾತ್ರದಿಂದಲೇ ಜನನಮರಣರೂಪವಾದ ದುಃಖಗಳು ದೂರವಾಗುವಾಗ ಅವನ ದರ್ಶನದಿಂದ ಪುನರ್ಜನ್ಮವಿರುವುದೇ? ದೇವತೆಗಳಲ್ಲಿ ಅವನಿಗೆ ಸದೃಶರಾದವರೇ ಇಲ್ಲ. ಅವನು ದೇವತೆಗಳಿಗೂ ಪೂಜ್ಯನಾಗಿರುವನಲ್ಲವೆ? ॥೪೩॥

ದೇವೇಶನಾದ ಪರಮೇಶ್ವರನಿಗೆ ನಮಸ್ಕರಿಸಿದರೆ ಸಂಸಾರದುಃಖವು ಶೀಘ್ರವಾಗಿ ದೂರವಾಗುವುದು. ಈಶ್ವರನ ಅನುಗ್ರಹಸಂಪಾದನೆಯಿಂದ ಸಂಸಾರದುಃಖದ ಲೇಶವೂ ನಮ್ಮನ್ನು ಪೀಡಿಸಲಾರದು. ॥೪೪॥

ಈಶ್ವರನನ್ನು ನಮಸ್ಕರಿಸುವ ಪ್ರಯತ್ನಮಾತ್ರದಿಂದಲೇ ಸಂಸಾರದುಃಖವು ನಾಶಹೊಂದುತ್ತಿರಲು, ಅವನನ್ನು ನಮಸ್ಕರಿಸುವುದರಿಂದ ಸಂಸಾರದುಃಖವು ದೂರವಾಗುವುದಿಲ್ಲವೆಂದು ಹೇಳಲು ಸಾಧ್ಯವೇ? ಆದುದರಿಂದಲೇ ಈಶ್ವರನನ್ನು ನಮಸ್ಕರಿಸಬೇಕು. ಅವನು ವೇದಗಳಿಂದ ವೇದ್ಯನೂ, ಜ್ಞಾನಸ್ವರೂಪನೂ ಆಗಿರುವನು. ॥೪೫॥

ಸುರಾಸುರನರೋರಗಪ್ರವರಕಿನ್ನರಾರಾಧ್ಯತಾ
ಪ್ರಭಾಕರಮುಮಾಪತಿಂ ಪ್ರಣತಿಮಾಹುರತ್ಯಾಸ್ತಿಕಾಃ ।
ಇಯಂ ಪ್ರಮಿತಿರಂಬಿಕಾರಮಣಪಾದಪದ್ಮಾರ್ಚನೈಃ
ಭವಿಷ್ಯತಿ ನ ತೈರ್ವಿನಾ ಭವತಿ ಸರ್ವಥಾ ದುರ್ಲಭಾ ॥೪೬॥

ಯೇನೈವ ತತ್ಪ್ರಭಾಧಾರಾ ಶಂಕರಾಯ ಸಮರ್ಪಿತಾ ।
ತಸ್ಯೈವ ದುಃಖವಿಲಯಃ ಸರ್ವಥಾ ಭವತಿ ಧ್ರುವಂ ॥೪೭॥

ಇದಂ ದಿವ್ಯೌಷಧಂ ಮನ್ಯೇ ಸಂಸಾರಾಮಯನಾಶಕಂ ।
ಇದಂ ದಿವ್ಯೌಷಧಂ ಲೋಕೇ ದುರ್ಲಭಂ ದುಷ್ಟವರ್ತ್ಮನಾಂ ॥೪೮॥

ಪುರಾ ಕೈಲಾಸಶಿಖರೇ ಸುಖಾಸೀನಂ ಜಗತ್ಪ್ರಭುಂ ।
ಶಂಭುಂ ಪ್ರಣಮ್ಯ ಗಿರಿಜಾ ಪ್ರಾಹ ಭಕ್ತ್ಯಾ ಪ್ರಣಮ್ಯ ತಂ ॥೪೯॥

ಶಿವನನ್ನು ದೇವತೆಗಳು, ಅಸುರರು, ಮನುಷ್ಯರು, ನಾಗರು, ಕಿನ್ನರರು, ಇವರೆಲ್ಲರೂ ಪೂಜಿಸುವರು, ಎಂದು ತಿಳಿದು ಆವನನ್ನು ನಮಸ್ಕರಿಸಬೇಕು ಎಂದು ಆಸ್ತಿಕ ಶಿರೋಮಣಿಗಳು ಹೇಳುವರು. ಆದರೆ ಶಿವನು ಸಕಲರಿಗೂ ಪೂಜ್ಯನು ಎಂಬ ಭಾವನೆಯು ಅವನ ಅಡಿದಾವರೆಗಳ ಸೇವೆಯಿಂದಲೇ ಉಂಟಾಗಬೇಕಲ್ಲದೇ ಅನ್ಯಥಾ ಉದಯಿಸಲಾರದು. ॥೪೬॥

ಯಾವನು ತನ್ನ ಜ್ಞಾನವೆಂಬ ಜ್ಯೋತಿಯನ್ನು ಈಶ್ವರನಿಗೆ ಸಮರ್ಪಿಸುವನೋ ಅವನೇ ಸುಖಿಯಾಗುವನು. ಇದು ನಿಜ. ॥೪೭॥

ಈಶ್ವರಾರಾಧನೆಯೇ ಸಂಸಾರವೆಂಬ ಮಹಾವ್ಯಾಧಿಯನ್ನು ಹೋಗಲಾಡಿಸುವುದರಲ್ಲಿ ಸಮರ್ಥವಾದ ಔಷಧವು. ಲೋಕದಲ್ಲಿ ಈ ದಿವ್ಯೌಷಧವು ಈಶ್ವರವಿದ್ವೇಷಕರಿಗೆ ದುರ್ಲಭವಾದುದು. ॥೪೮॥

ಹಿಂದೆ ಒಂದಾನೊಂದು ಸಮಯದಲ್ಲಿ ಗಿರಿಜೆಯು ಕೈಲಾಸಪರ್ವತದ ಶಿಖರದಲ್ಲಿ ಸುಖವಾಗಿ ಕುಳಿತಿದ್ದ ಜಗನ್ನಾಥನಾದ ಈಶ್ವರನನ್ನು ಭಕ್ತಿಯಿಂದ ವಂದಿಸಿ ಹೀಗೆಂದಳು. ॥೪೯॥

|| ಗೌರ್ಯುವಾಚ ||

ಹರ ಸಂಸಾರಮಗ್ನಾನಾಂ ಪ್ರಾಣಿನಾಂ ದುಷ್ಟಚೇತಸಾಂ ।
ಸಂಸಾರಬಂಧಮುಕ್ತಿಃ ಸ್ಯಾತ್ಕಥಂ ವಾ ತದ್ವದಾಧುನಾ ॥೫೦॥

ಗರ್ಭವಾಸೇ ಮಹದ್ದುಃಖಂ ತಥೈವ ಜನನಕ್ಷಣೇ ।
ಜನನಾನಂತರಂ ದುಃಖಂ ಕ್ಷುತ್ಪಿಪಾಸಾದಿನಾ ಮುಹುಃ ॥೫೧॥

ಮೂತ್ರೇಣ ಚ ಪುರೀಷೇಣಾಪ್ಯಾಕುಲೈರನ್ವಹಂ ಮುಹುಃ ।
ಕಟುತಿಕ್ತಕಷಾಯಾಮ್ಲರಸೌಷಧನಿಷೇವಣಾತ್ ॥೫೨॥

ಉಷ್ಣೋದಕಪ್ರದಾನೇನ ಶರೀರಸ್ಯಾತಿವೇದನಾ ।
ಅಂಗಾರಶಕಟಾಸಾರತೇಜಸಾಪ್ಯತಿವೇದನಾ ॥೫೩॥

ಸ್ವಾಮಿಯೇ, ಸಂಸಾರದಲ್ಲಿಯೇ ಆಸಕ್ತರಾಗಿರುವ ಅಜ್ಞಾನಿಗಳಿಗೆ ಈ ಸಂಸಾರದಿಂದ ಬಿಡುಗಡೆಯಾಗುವ ಬಗೆ ಹೇಗೆ? ಅದನ್ನು ನನಗೆ ಹೇಳುವವನಾಗು. ||೫೦||

ಈ ಲೋಕದಲ್ಲಿ ಜನರು ಜನನವಾಗುವುದಕ್ಕಿಂತ ಮೊದಲು ಗರ್ಭವಾಸದಿಂದ ದಾರುಣವಾದ ವೇದನೆಯನ್ನನುಭವಿಸಿ ಜನನಕಾಲದಲ್ಲಿಯೂ ಅಸಹ್ಯವಾದ ದುಃಖವನ್ನನುಭವಿಸುವರು. ಬಳಿಕ ಬಾರಿಬಾರಿಗೂ ಹಸಿವು ಬಾಯಾರಿಕೆಗಳಿಂದ ಹಿಂಸೆಯನ್ನು ತಾಳುವರು. ||೫೧||

ಮೂತ್ರ ಪುರೀಷಗಳಿಂದ ತುಂಬಿರುವ ಈ ದೇಹವನ್ನು ಪಡೆದು, ಕಹಿ, ಕಾರ, ಒಗರು, ಹುಳಿ ಮುಂತಾದ ರಸಗಳಿಂದ ಕೂಡಿರುವ ಔಷಧವನ್ನು ಸೇವಿಸಿ ಅದರಿಂದ ದುಃಖವನ್ನನುಭವಿಸುವರು. ||೫೨||

ಬಾಲ್ಯದಲ್ಲಿ ಬಿಸಿ ಬಿಸಿಯಾದ ನೀರನ್ನು ಎರೆಯುವುದರಿಂದ ಶರೀರದಲ್ಲಿ ಅಸಹ್ಯವಾದ ವೇದನೆಯನ್ನು ಶಿಶುವು ಅನುಭವಿಸುವುದು. ಕೆಂಪಾಗಿ ಕಾದ ಕೆಂಡದಿಂದ ಕೂಡಿರುವ ಅಗ್ಗಿಷ್ಟಿಕೆಯ ಶಾಖದಿಂದ ಅನುಭವಿಸುವ ವೇದನೆಯನ್ನು ವರ್ಣಿಸಲು ಸಾಧ್ಯವಿಲ್ಲ. ||೫೩||

ಜ್ವರಾದಿವ್ಯಾಧಿಯೋಗೇನ ಪೀಡಾ ಖಲು ಶರೀರಿಣಾಂ ।
ಬಾಲ್ಯೇ ದುಃಖಂ ಬಹುತರಂ ಕೌಮಾರೇಽಪಿ ತಥಾ ಪ್ರಭೋ ॥೫೪॥

ಯೌವ್ವನೇ ವಿಷಯಾಲಾಭಾಲ್ಲಬ್ಧಸ್ಯಾಪಗಮಾದಪಿ ।
ದುಃಖಾನುಭವ ಏವೇತಿ ಜರಾಯಾಮಪಿ ತತ್ಸಮಂ ॥೫೫॥

ಕಿಂ ಚಾಧಿಕಂ ಜರಾಯಾಂ ತು ದುಃಖಂ ತತ್ಸಹ್ಯಮೇವ ನ ।
ಜರಾತುರಸ್ಯ ವಚನಂ ವಿಷೇಣ ಸಮಮುಚ್ಯತೇ ॥೫೬॥

ನ ಶೃಣೋತಿ ಜರಾಕ್ರಾಂತೋ ನ ಪಶ್ಯತಿ ವಿಶೇಷತಃ ।
ಜಾಯಾಪಿ ಜರಯಾ ಯುಕ್ತಂ ತರುಣೀ ತ್ಯಜತಿ ಧ್ರುವಂ ॥೫೭॥

ವಿಷಯಾನರ್ಜನೇ ದುಃಖಮುರ್ಜಿತಸ್ಯಾಪಿ ರಕ್ಷಣೇ ।
ರಕ್ಷಿತಸ್ಯ ವ್ಯಯೇ ದುಃಖಮೇವಂ ದುಃಖಕರಂ ಧನಂ ॥೫೮॥

ಓ ಸ್ವಾಮಿಯೇ, ಜನರು ಬಾಲ್ಯಕೌಮಾರಾವಸ್ಥೆಗಳಲ್ಲಿ ಜ್ವರವೇ ಮುಂತಾದ ಮಹಾರೋಗಗಳನ್ನು ಕಷ್ಟದಿಂದ ಅನುಭವಿಸುವರು. ॥೫೪॥

ಯೌವನ ಮತ್ತು ವಾರ್ಧಕ್ಯಾವಸ್ಥೆಗಳಲ್ಲಿ ವಿಷಯಸುಖಗಳು ಲಭಿಸದಿರುವುದರಿಂದಲೂ, ಲಭಿಸಿದ ವಿಷಯಗಳು ಕೈಬಿಟ್ಟುಹೋಗುವುದರಿಂದಲೂ ಅಸಹ್ಯವಾದ ದುಃಖವನ್ನೇ ಅನುಭವಿಸುವರು. ॥೫೫॥

ಬಾಲ್ಯ, ಕೌಮಾರ, ಯೌವ್ವನ ವಾರ್ಧಕ್ಯಗಳೆಂಬ ನಾಲ್ಕು ಅವಸ್ಥೆಗಳ ನಡುವೆ ವಾರ್ಧಕ್ಯಾವಸ್ಥೆಯಲ್ಲಿ ಸಂಭವಿಸುವ ದುಃಖವು ಸಹಿಸಲು ಅಸಾಧ್ಯವಾಗಿರುವುದು. ವಾರ್ಧಕ್ಯಾವಸ್ಥೆಯಿಂದ ನರಳುವ ವೃದ್ಧನ ಮಾತುಗಳು ವಿಷದಂತೆ ಜನರಿಗೆ ಅಹಿತಕರವಾದುದೆಂದು ತೋರುವುದು. ॥೫೬॥

ವೃದ್ಧನಿಗೆ ಕಿವಿಗಳು ಕೇಳಿಸುವುದಿಲ್ಲ. ದೃಷ್ಟಿಯು ಸೂಕ್ಷ್ಮವಾಗಿರುವುದಿಲ್ಲ. ವಾರ್ಧಕ್ಯಾವಸ್ಥೆಯನ್ನು ಅನುಭವಿಸುತ್ತಿರುವ ಅವನನ್ನು, ಕೈಹಿಡಿದ ಹೆಂಡತಿಯೂ ಸಹ ತಿರಸ್ಕರಿಸುವಳು. ॥೫೭॥

ಮೊಟ್ಟಮೊದಲು ಹಣವನ್ನು ಸಂಪಾದಿಸುವುದರಲ್ಲಿ ದುಃಖವನ್ನನುಭವಿಸುವನು. ಸಂಪಾದಿಸಿದ ಬಳಿಕ, ಅದನ್ನು ಕಾಪಾಡುವುದರಲ್ಲಿ ಪ್ರಯತ್ನಿಸುವನು. ತರುವಾಯ ಅದನ್ನು ವ್ಯಯಮಾಡುವಾಗ ದುಃಖಿಸುವನು. ಈ ರೀತಿಯಲ್ಲಿ ಹಣವು

ಕಲತ್ರಪುತ್ರಪೌತ್ರಾದ್ಯೈರ್ಧನಮಾಕಾಂಕ್ಷಿತಂ ಮುಹುಃ ।
ನ ಚ ತತ್ಪೋಷಣಾಕಾಂಕ್ಷಾ ಶುಶ್ರೂಷಾ ತಸ್ಯ ದೂರತಃ ॥೫೯॥

ಕಫಾದಿವ್ಯಾಧಿಸಂಕ್ರಾಂತೇ ಪುರೀಷೇ ಮ್ರಿಯತಾಮಯಂ ।
ಜೀವನ್ಮೃತೇನ ಕಿಂ ಕೃತ್ಯಂ ಮೃತೇನ ಸುತರಾಮಪಿ ॥೬೦॥

ತತೋ ಮರಣಮೇವ ಸ್ಯಾದಿತ್ಯಾಪ್ತೈರುಚ್ಯತೇ ಖಲು ।
ನ ರಮ್ಯಮನ್ನವಸನಂ ಭೂಷಣಂ ವಾ ನ ಜೀವತಾ ॥೬೧॥

ದತ್ತಮೇತೇನ ಮರಣೇ ಜೀವನೇಽಪಿ ಸಮಾ ಸ್ಥಿತಿಃ ।
ಯಾವತ್ತನ್ಮರಣಂ ತಾವತ್ತಿಷ್ಠಂತಿ ಪರಿವೃತ್ಯ ತಂ ॥೬೨॥

ಸರ್ವವಿಧಗಳಿಂದಲೂ ದುಃಖವನ್ನೇ ಉಂಟುಮಾಡುವುದಲ್ಲದೇ ಕ್ಷಣಕಾಲವೂ ಸುಖವನ್ನು ಕೊಡಲಾರದು. ॥೫೮॥

ಇವನು ಯುವಕನಾಗಿರುವಾಗ ಹೆಂಡತಿ, ಮಕ್ಕಳು, ಮೊಮ್ಮಕ್ಕಳು ಇವರೇ ಮೊದಲಾದ ಬಂಧುವರ್ಗದವರು ಇವನು ಸಂಪಾದಿಸಿದ ಹಣವನ್ನು ಅಪೇಕ್ಷಿಸುವರು. ಆದರೆ ಇವನು ವೃದ್ಧನಾದಾಗ ಅವನನ್ನು ಸುಖದಿಂದ ಕಾಪಾಡಬೇಕೆಂಬ ಬುದ್ಧಿಯು ಇವರಾರಿಗೂ ಉಂಟಾಗುವುದಿಲ್ಲ. ॥೫೯॥

"ಈ ವೃದ್ಧನು ಕಫ, ಮೂತ್ರ, ಪುರೀಷ ಮುಂತಾದ ಮಲಗಳಿಂದ ಕೂಡಿರುವ ಈ ಸ್ಥಳದಲ್ಲಿ ಮೃತನಾಗಲಿ. ಜೀವಿಸಿದ್ದರೂ ಮೃತನಂತೆ ಇರುವ ಇವನು ಬದುಕಿರುವುದರಿಂದ ನಮಗೆ ಯಾವ ಪ್ರಯೋಜನವು ದೊರಕುವುದು? ॥೬೦॥

ಇವನು ಈ ಹಿಂದೆ ನಮಗೆ ಅಮೂಲ್ಯವಾದ ವಸ್ತ್ರಾಭರಣಗಳನ್ನು ಕೊಡಲಿಲ್ಲ. ಆದುದರಿಂದ ಈತನು ಜೀವಿಸಿದರೇನು! ಮೃತನಾದರೇನು? ಜೀವಿಸಿರುವುದಕ್ಕಿಂತ ಮೃತನಾಗುವುದೇ ಲೇಸು?" ಹೀಗೆಂಬುದಾಗಿ ಅವನ ಬಂಧುಬಳಗದವರು ಯೋಚಿಸುವರು. ॥೬೧॥

ಇವನ ಪ್ರಾಣಗಳು ಈ ದೇಹವನ್ನು ಬಿಟ್ಟು ಹೋಗುವವರೆಗೆ ಬಂಧುಬಳಗದವರೆಲ್ಲರೂ ಇವನ ಸಮೀಪದಲ್ಲಿದ್ದು, ಮೃತನಾದ ಬಳಿಕ ಅಲ್ಲಿಂದ ತಮ್ಮ ತಮ್ಮ ಮನೆಯನ್ನು ಕುರಿತು ತೆರಳುವರು. ॥೬೨॥

ಪಶ್ಚಾತ್ತಸ್ಯಕಂ ಸ್ವಕಂ ಸ್ಥಾನಂ ಪ್ರಾಪ್ನುವಂತಿ ವಿಶೇಷತಃ ।
ತಸ್ಯೈವ ಶ್ಲೇಷ್ಮಣಾ ವೇಶ್ಮ ನಷ್ಟಂ ದುರ್ಗಂಧದೂಷಿತಂ ॥೬೩॥

ತತ್ಪುರೀಷೇಣ ತನ್ನಷ್ಟಂ ತನ್ಮೂತ್ರೈರಪಿ ಕೇವಲಂ ।
ತತ್ಕರ್ಣೇ ಕಟಿದೇಶೇ ವಾ ಕರಶಾಖಾಸ್ವಪಿ ಸ್ಥಿತಂ ॥೬೪॥

ಹರಂತಿ ಮಾಷಮಾತ್ರಂ ವಾ ಸುವರ್ಣಂ ಸದಯಾಃ ಖಲು ।
ಯದ್ದುಕೂಲಾದಿಕಂ ತಸ್ಯ ತದಪ್ಯಪಹರಂತಿ ತೇ ॥೬೫॥

ವಾಹನಂ ಶಯನೀಯಂ ಚ ಜಲಪಾತ್ರಾದಿಕಂ ತಥಾ ।
ಮೃತೋಽಯಂ ತ್ವರಯಾ ನೇಯಃ ಕಾರ್ಯಮಸ್ತೀತಿ ಸತ್ವರಂ ॥೬೬॥

ನಯಂತಿ ತಂ ಪಾತಯಂತಿ ಕಿಮನೇನೇತಿ ದುರ್ಜನಾಃ ।
ಜೀವತಾ ದುಃಖಮೇತೇನ ದತ್ತಂ ಭರ್ತ್ಸಿತಮಿತ್ಯಪಿ ॥೬೭॥

ವದಂತ್ಯಪಿ ಕಥಂ ಲೋಕೇ ಶಪಂತ್ಯಪಿ ಮುಹುರ್ಮುಹುಃ ।
ಪರಲೋಕಃ ಕಥಂ ತಸ್ಯ ಸ್ಯಾದಿತ್ಯಪಿ ವದಂತಿ ಚ ॥೬೮॥

ಅವನ ಮಲಮೂತ್ರಾದಿಗಳಿಂದಲೇ ಅವನ ಮನೆಯು ಅಶುಚಿಯಾಗಿ ಕೆಟ್ಟ ವಾಸನೆಯಿಂದ ಕೂಡಿರುವುದು. ॥೬೩॥

ಅವನು ಮೃತನಾದ ಬಳಿಕ, ಅವರ ಮೈಮೇಲಿರುವ ಒಡವೆಗಳನ್ನೆಲ್ಲಾ, ಬಂಧುವರ್ಗದವರು ಅಪಹರಿಸುವರು. ಮತ್ತು ಅವನು ಧರಿಸಿರುವ ಬಟ್ಟೆಗಳನ್ನೂ ಸಹ ಸಿಕ್ಕಿದವರು ತೆಗೆದುಕೊಳ್ಳುವರು. ॥೬೪-೬೫॥

ಇದಲ್ಲದೇ, ಅವನ ವಾಹನಗಳನ್ನೂ, ಹಾಸಿಗೆಯನ್ನೂ, ಜಲಪಾತ್ರೆಗಳನ್ನು ಸ್ವೀಕರಿಸುವರು. ಬಳಿಕ, "ಇವನು ಮೃತನಾದನು ಇವನನ್ನು ಜಾಗ್ರತೆಯಾಗಿ ಸ್ಮಶಾನಕ್ಕೆ ಕರೆದುಕೊಂಡು ಹೋಗೋಣ, ಇನ್ನು ತಡಮಾಡುವುದು ಉಚಿತವಲ್ಲ. ನಮಗೆ ಇತರ ಕಾರ್ಯಗಳು ಇರುವುವು"—ಎಂದು ಪರಸ್ಪರವಾಗಿ ಹೇಳಿಕೊಳ್ಳುತ್ತಾ, ಅವನ ಶರೀರವನ್ನು, ಹಾಸಿಗೆಯಿಂದ ಕೆಳಕ್ಕೆ ಇಳಿಸುವರು. ॥೬೬॥

ಇವನು ಜೀವಿಸಿರುವಾಗ ನಮಗೆ ಕಷ್ಟಪರಂಪರೆಗಳನ್ನು ಕೊಟ್ಟಿರುವನು. ನಮ್ಮನ್ನು ಬೆದರಿಸಿರುವನು. ಈ ಪಾಪಿಗೆ, ಎಂದಿಗಾದರೂ ಪರಲೋಕವು ದೊರಕು

ಪಾಪಾರ್ಜಿತಾನಿ ವಿತ್ತಾನಿ ಗೃಹ್ಣಾತಿ ಸ್ವಸ್ವಭಾಗತಃ ।
ಪರಂ ತು ತಸ್ಯ ಪಾಪಸ್ಯ ನಿಷ್ಕೃತಿರ್ನೈವ ಚಿಂತ್ಯತೇ ॥೬೯॥

ತದಂಗೇ ಭಸ್ಮಲೇಶೋಽಪಿ ಪುತ್ರೇಣಾಪಿ ನ ದೀಯತೇ ।
ಭಾರ್ಯಾ ಚೇತ್ತರುಣೀ ತಸ್ಯ ಭೋಗಾಭಾವವಿಚಿಂತನೈಃ ॥೭೦॥

ಅಪಹೃತ್ಯ ಧನಂ ಸರ್ವಂ ಕಾಲಂ ನಯತಿ ದುರ್ಮತಿಃ ।
ಬಾಲಕಶ್ಚೇನ್ಮೃತೋ ದೈವಾತ್ತಂ ಗೃಹೀತ್ವಾ ವಿಮೋಹಿತಃ ॥೭೧॥

ನಯಂತಿ ಕಾಲಂ ಮೋಹೇನ ಶಿರಸ್ತಾಡನರೋದನೈಃ ।
ವ್ಯಾಧಿಗ್ರಸ್ತೇ ಬಾಲಕೇ ತು ತನ್ಮೂತ್ರಮಲದೂಷಿತಾಃ ॥೭೨॥

ವುದೇ ? ಎಂದಿಗೂ ಇಲ್ಲ. ಹೀಗೆಂದು ಹೇಳುತ್ತಾ ಅವನನ್ನು ಬಾರಿಬಾರಿಗೂ ಶಪಿಸುವರು. ||೬೭-೬೮||

ಈರೀತಿಯಲ್ಲಿ ಮನುಷ್ಯನು, ತನ್ನ ಪಾಪಕೃತ್ಯಗಳಿಂದ ಸಂಪಾದಿಸಿದ ಹಣವನ್ನು ಇತರರು ಅನುಭವಿಸುವರು. ಆದರೆ ಅವನು ಮಾಡಿದ ಪಾಪಕೃತ್ಯಗಳಿಗೆ ತಕ್ಕ ಪ್ರತೀಕಾರಗಳನ್ನು ತಾವು ಕೈಗೊಳ್ಳಬೇಕೆಂಬ ಭಾವನೆಯು ಅವರಲ್ಲಿ ಉಂಟಾಗುವುದಿಲ್ಲ. ||೬೯||

ಮಗನು ವೃದ್ಧನಾದ ತಂದೆಯ ಹಣೆಯಲ್ಲಿ ಭಸ್ಮವನ್ನು ಸಹ ಲೇಪಿಸುವುದಿಲ್ಲ. ವೃದ್ಧನ ಹೆಂಡತಿಯು ತರುಣಿಯಾಗಿದ್ದರೆ, ಅವಳು, ಈ ವೃದ್ಧನಿಂದ ನನಗೆ ರತಿಸುಖವು ಲಭಿಸುವುದಿಲ್ಲ. ಇವನಿಂದ ಏನು ಪ್ರಯೋಜನ! ಎಂದು ಅವನನ್ನು ಶಪಿಸುವಳು. ||೭೦||

ಸಂಪಾದಿಸಿದ ಧನವನ್ನು ಯೌವ್ವನಾವಸ್ಥೆಯಲ್ಲಿ ವ್ಯಯಗೊಳಿಸಿ, ಒಂದೊಂದು ವೇಳೆ ವೃದ್ಧಾಪ್ಯದಲ್ಲಿ ದಾರಿದ್ರ್ಯದುಃಖದಿಂದ ಕಾಲವನ್ನು ಕಳೆಯುವನು. ಮಗನು, ದುರ್ಭಾಗ್ಯದಿಂದ ತೀರಿಹೋದರಂತೂ ಮಗನ ಆ ಮೃತದೇಹವನ್ನು ಹಿಡಿದುಕೊಂಡು ದುಃಖಿಸುವನು. ||೭೧||

ದೈವಾಧೀನದಿಂದ ಬಾಲಕನು ಮೃತನಾಗಲು; ತಲೆಯನ್ನು ಚಚ್ಚಿಕೊಂಡು ಅಳುತ್ತಾ ಕಾಲವನ್ನು ಕಳೆಯುವನು. ಮಗನು ರೋಗದಿಂದ ನರಳುತ್ತಿರುವಾಗ ಅವನ ಮಲಮೂತ್ರಗಳನ್ನು ಬಾಚುತ್ತಾ ವ್ಯಸನಪಡುವನು. ||೭೨||

ನ ಶಿವಾಚಾರವಾರ್ತಾಂ ವಾ ಕುರ್ವಂತ್ಯಶನಮೇವ ವಾ ।
ವೈದ್ಯಾಭಾಸಾಯ ಸರ್ವಸ್ವಂ ಪ್ರಯಚ್ಛಂತ್ಯತಿಮೋಹತಃ ॥೭೩॥

ಏತದ್ರೋಗಂ ವಾರಯೇತಿ ವಾರಂ ವಾರಂ ವಿಶೇಷತಃ ।
ಸ ಗೃಹೀತ್ವಾ ಧನಂ ಸರ್ವಂ ಔಷಧಾಭಾಸದಾನತಃ ॥೭೪॥

ಪ್ರಯಾತಿ ಪಶ್ಚಾನ್ಮರಣೇ ಧನಾರ್ಥಮಪಿ ದುಃಖಿತಾ ।
ಕೇಚಿನ್ಮೃತಂ ಸ್ಮೃತಂ ಸ್ಮೃತ್ವಾ ಪ್ರತ್ಯಹಂ ದಿನಯಾಪನಂ ॥೭೫॥

ಕೃತ್ವಾ ಪ್ರಯಾಂತಿ ಮರಣಂ ದುಃಖೇನೈವ ತತಃ ಪರಂ ।
ಏವಂ ಬಹುವಿಧಾಲೋಕಾಸ್ಸರ್ವೇ ಜನ್ಮಜರಾಭಯೈಃ ॥೭೬॥

ಮರಣೇನಾಪಿ ಸಂಪ್ರಾಪ್ಯ ದುಃಖಂ ದುಃಖಸಮಾಕುಲಾಃ ॥೭೭॥

ಆದರೂ, ಜನರು ಈಶ್ವರನನ್ನು ಆರಾಧಿಸುವುದಿಲ್ಲ. ರೋಗದಿಂದ ನರಳುತ್ತಿರುವ ಆ ಬಾಲಕನನ್ನು ನೋಡಲಾರದೇ, ಆಹಾರವನ್ನು ಸೇವಿಸಲಾರರು. ಅಜ್ಞಾನಿಗಳಾದ ಅವರು ಬಾಲಕನ ರೋಗವನ್ನು ಗುಣಪಡಿಸಬೇಕೆಂಬ ಇಚ್ಛೆಯಿಂದ ಕಪಟಿಗಳಾದ ವೈದ್ಯರಿಗೆ ತಮ್ಮ ಸಕಲೈಶ್ವರ್ಯವನ್ನೂ ಕೊಡುವರು. ॥೭೩॥

ವೈದ್ಯನಿಗೆ ತಮ್ಮ ಹಣವನ್ನು ಸಮರ್ಪಿಸಿ, "ವೈದ್ಯರೇ! ಈ ರೋಗವನ್ನು ಗುಣಪಡಿಸಿರಿ" ಎಂದು ಬಾರಿಬಾರಿಗೂ ಅವರನ್ನು ಮೊರೆಯಿಡುವರು. ವೈದ್ಯನು ಔಷಧವನ್ನು ಕೊಡುವ ವ್ಯಾಜದಿಂದ ಇವರ ಬಳಿ ಇರುವ ಸಕಲ ಧನವನ್ನೂ ಸೆಳೆಯುವನು. ॥೭೪॥

ಬಳಿಕ ಬಾಲಕನು ಮೃತನಾಗಲು, ತಾವು ಅವನಿಗೋಸ್ಕರ ವ್ಯಯಮಾಡಿರುವ ಹಣವನ್ನುದ್ದೇಶಿಸಿ ದುಃಖಿಸುವರು. ಪ್ರತಿದಿನವೂ ಮೃತನಾದ ಆ ಬಾಲಕನನ್ನು ಸ್ಮರಿಸುತ್ತಾ ಕಾಲವನ್ನು ಕಳೆಯುವರು. ತರುವಾಯ ತಾವೂ ಒಂದಾನೊಂದು ದಿನ ಪುತ್ರಶೋಕದಿಂದ ಮರಣವನ್ನು ಹೊಂದುವರು. ॥೭೫॥

ಈ ರೀತಿಯಲ್ಲಿ ಸಕಲಜನರೂ ಜನನಮರಣಗಳಿಂದ ದುಃಖಕ್ಕೆ ಗುರಿಯಾಗುವರು. ಮರಣವನ್ನು ಹೊಂದಿದ ಬಳಿಕ ದುಃಖಕರವಾದ ನರಕವನ್ನು ಪಡೆದು ಅಲ್ಲಿ ಅಸಹ್ಯವಾದ ದುಃಖವನ್ನನುಭವಿಸುವರು. ॥೭೬-೭೭॥

ಸಂಸಾರಾಮಯನಾಶಕಂ ವದ ಮಹಾದೇವಾಧುನಾ ಸಾದರಂ
ಕಿಂಚಿತ್ತ್ವಾವದಿಹೌಷಧಂ ಸ್ಮೃತಮಪಿ ಪ್ರಾಯೋ ರುಜಾಂ ನಾಶಕಂ ।
ಜನ್ಮಾದಿಕ್ಷಯಕಾರಣಂ ಕರುಣಯಾ ಕಾಲಾಂತಕಾಶು ಪ್ರಭೋ
ಶಂಭೋ ಯತ್ಸುಗಮಂ ತದೇವ ಬಹುಧಾ ನಿಶ್ಚಿತ್ಯ ನಿರ್ವಾಣದಂ ॥೭೮॥

ಮಂದಾಂತಃಕರಣಾಃ ಪ್ರಮಾಣವಿಷಯಾಃ ಜ್ಞಾನೈರ್ವಿಹೀನಾಃ ಪರಂ
ಭ್ರಾಂತಾ ಏವ ಚರಂತಿ ಸಂತತಮುಮಾಕಾಂತಾನಿತಾಂತಾಃ ಪರಂ ।
ತೇಷಾಂ ಕಾ ಗತಿರಿಂದುಶೇಖರಕೃಪಾಪೂರಸ್ಯ ತೇ ಸಾದರಂ
ತನ್ಮುಕ್ತಿಪ್ರದಮೇವ ವಾಕ್ಯಮಧುನಾ ಶ್ರೋಷ್ಯಾಮಿ ಶುಶ್ರೂಷಯಾ ॥೭೯॥

ಇತಿ ತದ್ವಚನಂ ಶ್ರುತ್ವಾ ಶಂಕರಃ ಕರುಣಾಕರಃ ।
ಸಾರಭೂತಾಂ ಗಿರಂ ಪ್ರಾಹ ಮಹಾಗೌರೀಂ ಮನೋಹರಾಂ ॥೮೦॥

ಶಂಭುವೇ, ಆದುದರಿಂದ ಸಂಸಾರವೆಂಬ ರೋಗವನ್ನು ನಾಶಮಾಡುವ ಔಷಧಿಯಾವುದು? ಅದನ್ನು ನನಗೆ ಹೇಳುವವನಾಗು. ಲೋಕದಲ್ಲಿ ಜ್ವರಾದಿವ್ಯಾಧಿಗಳಿಗೆ ನಾನಾವಿಧವಾದ ಔಷಧಗಳು ಇರುವುವು. ಆದರೆ ಅವುಗಳಲ್ಲಿ ಯಾವ ಔಷಧವೂ ಜನನಮರಣಗಳೆಂಬ ಮಹಾರೋಗವನ್ನು ಹೋಗಲಾಡಿಸುವ ಸಾಮರ್ಥ್ಯವನ್ನು ಹೊಂದಿಲ್ಲ. ಆದುದರಿಂದ ಜನನಮರಣಗಳೆಂಬ ರೋಗವನ್ನು ಹೋಗಲಾಡಿಸುವ ಔಷಧವು ಯಾವುದಿರುವುದೆಂಬುದನ್ನು ಆಲೋಚಿಸಿ ನನಗೆ ತಿಳಿಸಬೇಕು. ||೭೮||

ಉಮಾರಮಣನೇ, ಈ ಲೋಕದಲ್ಲಿ ಯುಕ್ತಾಯುಕ್ತವಿವೇಚನೆಯಿಲ್ಲದೇ, ಅಜ್ಞಾನದಿಂದ ಕೂಡಿರುವ ಜನರು ಪ್ರತ್ಯಕ್ಷಪ್ರಮಾಣ ಮಾತ್ರದಲ್ಲಿ ವಿಶ್ವಾಸವನ್ನಿಟ್ಟು, ಪ್ರತ್ಯಕ್ಷಗೋಚರವಾದ ಈ ಲೋಕವೇ ಸತ್ಯವೆಂದೂ, ಪರಲೋಕವೇ ಇರುವುದಿಲ್ಲವೆಂದೂ, ತಮಗಿಂತ ದೊಡ್ಡವನಾದ ಈಶ್ವರನೇ ಇಲ್ಲವೆಂತಲೂ ಭ್ರಾಂತರಾಗಿರುವರು. ಸ್ವಾಮಿಯೇ, ಅಜ್ಞಾನಿಗಳಾದ ಅವರ ಗತಿಯೇನು? ಮೋಕ್ಷವನ್ನು ಹೊಂದುವ ಬಗೆ ಹೇಗೆ? ಆದುದರಿಂದ ಅನಿತ್ಯವಾದ ಈ ಸಂಸಾರವನ್ನು ನಾಶಮಾಡಿ ಶಾಶ್ವತವಾದ ಮುಕ್ತಿಯನ್ನು ಸಾಧಿಸುವ ಸಾಧನವು ಯಾವುದಿರುವುದು? ಅದನ್ನು ಹೇಳು. ಆ ವಚನವನ್ನು ಆಸಕ್ತಿಯಿಂದ ಕೇಳುವೆನು." ||೭೯||

ಪ್ರೇಯಸಿಯಾದ ಗಿರಿಜೆಯ ಆ ಮಾತನ್ನು ಕೇಳಿ, ಪರಮ ಕಾರುಣಿಕನಾದ ಶಿವನು ದೇವಿಯನ್ನು ಕುರಿತು ಹೀಗೆಂದನು. ||೮೦||

|| ಶಂಕರ ಉವಾಚ ||

ಶೃಣು ಗೌರಿ ವರಾರೋಹೇ ಸುಧಾರೂಪಾಂ ಗಿರಂ ಮಮ ।
ವಿಚಾರ್ಯ ತಾವದಧುನಾ ಬಹುಧಾ ತದಿಹೋಚ್ಯತೇ ॥೮೧॥

ಔಷಧಾನಿ ವಿಚಿತ್ರಾಣಿ ಸಂತಿ ತದ್ಬೋಧನಂ ಪರಂ ।
ಸುಲಭಾನ್ಯಪಿ ತಾನ್ಯೇವ ದುರ್ಲಭಾನ್ಯಪಿ ಶೈಲಜೇ ॥೮೨॥

ಔಷಧಂ ಗುಪ್ತಮೇವಾಸ್ತಿ ಮಹಾರೋಗವಿನಾಶಕಂ ।
ತದ್ಗೋಪನಂ ಕೃತಂ ಯತ್ನಾತ್ಕಲೌ ತಾವದ್ವಿಶೇಷತಃ ॥೮೩॥

ಕಲೌ ಕಲುಷಚಿತ್ತಾನಾಂ ದಿವ್ಯೌಷಧವಿಚಾರಣಾ ।
ನ ಭವತ್ಯೇವ ಸಹಸಾ ಸಾ ಪುಣ್ಯಾನಾಂ ಫಲಂ ಯತಃ ॥೮೪॥

ಔಷಧೇಷ್ವಪಿ ವಿಶ್ವಾಸಸ್ತಾವದಾದೌ ಭವೇದ್ಯದಿ ।
ತತ್ಸೇವನೇನಾಮಯಸ್ಯ ವಿನಾಶೋಽಪಿ ಪ್ರಜಾಯತೇ ॥೮೫॥

ಎಲೌ ಗಿರಿಜೆಯೇ, ನನ್ನ ಈ ಅಮೃತವಾಣಿಯನ್ನು ಕೇಳು. ಮುಕ್ತಿಯನ್ನುಂಟುಮಾಡುವ ಸಾಧನವಾವುದೆಂಬುದನ್ನು ಅನೇಕ ಬಗೆಯಿಂದ ವಿಮರ್ಶಿಸಿರುವೆನು. ಅದನ್ನು ನಿನಗೆ ಈಗ ತಿಳಿಯಪಡಿಸುವೆನು. ||೮೧||

ಎಲೌ ಗೌರಿಯೇ, ಈ ಲೋಕದಲ್ಲಿ ಅನೇಕ ವಿಧವಾದ ಔಷಧಗಳಿರುವುವು. ಆದರೆ ಅವುಗಳನ್ನು ತಿಳಿಯಪಡಿಸುವುದೇ ಶ್ರಮಸಾಧ್ಯವಾದುದು. ಭಾಗ್ಯಶಾಲಿಯಾದವನಿಗೆ ಆ ಔಷಧಗಳು ಸುಲಭವಾಗಿರುವುವು. ಅದೇ ಔಷಧಗಳು ಭಾಗ್ಯಹೀನನಿಗೆ ದುರ್ಲಭ. ||೮೨||

ಸಂಸಾರವೆಂಬ ಮಹಾರೋಗವನ್ನು ಹೋಗಲಾಡಿಸುವ ಔಷಧವನ್ನು, ನಾನು ಗುಪ್ತವಾಗಿರಿಸಿರುವೆನು. ಮುಖ್ಯವಾಗಿ ಕಲಿಯುಗದಲ್ಲಿ, ಆ ಔಷಧವನ್ನು ಪ್ರಕಟಪಡಿಸಲು ಇಷ್ಟವಿಲ್ಲ. ||೮೩||

ಕಲಿಯುಗದಲ್ಲಿ, ರಾಗದ್ವೇಷಗಳಿಂದ ಕಲುಷಿತರಾದ ಜನರಿಗೆ, ಅಮೂಲ್ಯವಾದ ಈ ಔಷಧವನ್ನು ತಿಳಿದುಕೊಳ್ಳಬೇಕೆಂಬ ಕುತೂಹಲವೇ ಉಂಟಾಗುವುದಿಲ್ಲ. ಒಂದುವೇಳೆ ಅದು ಪುಣ್ಯಶಾಲಿಗಳಿಗೆ ಮಾತ್ರ ಉದಯಿಸುವುದಲ್ಲದೇ, ಪಾಪಿಗಳಿಗೆ ಎಂದಿಗೂ ಉಂಟಾಗಲಾರದು. ||೮೪||

ಮೊಟ್ಟಮೊದಲು ಔಷಧಗಳಲ್ಲಿ ದೃಢವಾದ ನಂಬಿಕೆಯುಂಟಾದರೆ ಆಗ, ಅದನ್ನು ಸೇವಿಸುವುದರಿಂದ ರೋಗವು ದೂರವಾಗುವುದು. ||೮೫||

ಸರ್ವೇಷಾಮಪಿ ದುಃಖಾನಾಂ ನಾಶೋ ದಿವ್ಯೌಷಧೇ ಶ್ರುತೇ ।
ಭವತ್ಯದ್ಭುತಮೇತಾವತ್ ಜ್ಞಾಯತೇ ನ ಕಲೌ ಜನೈಃ ॥೮೬॥

ಯಸ್ತು ರೋಗೋ ಮಹಾನ್ ಭೂಯಾದೌಷಧಂ ಮಹದೇವ ತತ್ ।
ದುರ್ಲಭಂ ಸುಲಭಂ ಚ ಸ್ಯಾತ್ಕೇವಲಂ ಮದನುಗ್ರಹಾತ್ ॥೮೭॥

ತಾದೃಶೇಽಪ್ಯೌಷಧೇ ತಾವನ್ನ ವಿಶ್ವಾಸೋ ಯಥಾ ತಥಾ ।
ಮೋಹಃ ಸಂಪಾದಿತೋ ಗೌರಿ ಸರ್ವಥಾಪಿ ದುರಾತ್ಮನಾಂ ॥೮೮॥

ಶಿವಾರ್ಚನವಿಹೀನಾನಾಮಶಿವಂ ಭವತಿ ಪ್ರಿಯೇ ।
ತಸ್ಯಾಶಿವಸ್ಯ ನಾಶಸ್ತು ದಿವ್ಯೌಷಧಮಪೇಕ್ಷ್ಯತೇ ॥೮೯॥

ಅಶಿವಾಚಾರನಿರತೈರೌಷಧಂ ತನ್ನ ಲಭ್ಯತೇ ।
ಅತಃ ಸ್ಯಾದಶಿವಂ ತೇಷಾಂ ಸರ್ವಥಾ ಪ್ರತಿಜನ್ಮನಿ ॥೯೦॥

ಅಮೂಲ್ಯವಾದ ಜ್ಞಾನವೆಂಬ ಔಷಧದ ಶ್ರವಣ ಮಾತ್ರದಿಂದಲೇ ಸಕಲ ರೋಗಗಳೂ ನಾಶಹೊಂದುವುವು. ಆದರೆ, ಈ ವಿಷಯವನ್ನು ಕಲಿಯುಗದಲ್ಲಿ, ಜನರು ತಿಳಿದುಕೊಂಡಿಲ್ಲ. ॥೮೬॥

ಯಾವ ರೋಗವು ಮಹತ್ತರವಾಗಿರುವುದೋ, ಆ ರೋಗಕ್ಕೆ ಅನುಗುಣವಾಗಿ ಔಷಧವೂ ದೊಡ್ಡದಾಗಿರಬೇಕು. ಅದು ನನ್ನ ಅನುಗ್ರಹವೊಂದಿದ್ದರೆ ಸುಲಭವಾಗುವುದು. ನನ್ನ ಅನುಗ್ರಹವಿಲ್ಲದಿದ್ದರೆ, ಆ ಜ್ಞಾನವು ದುರ್ಲಭವೆನಿಸುವುದು. ॥೮೭॥

ಆದರೆ ಕಲಿಯುಗದಲ್ಲಿ ಜನರು ಅಜ್ಞಾನದಿಂದ ಮಹತ್ತರವಾದ ಈ ಔಷಧದಲ್ಲಿ ನಂಬಿಕೆಯನ್ನಿಡದೆ ರೋಗಪೀಡಿತರಾಗಿರುವರು. ॥೮೮॥

ಎಲೌ ಪ್ರೇಯಸಿಯೇ, ನನ್ನನ್ನು ಆರಾಧಿಸದಿರುವವರು ದುಃಖವನ್ನು ಅನುಭವಿಸುವರು. ಈಶ್ವರಾರಾಧನೆಯೆಂಬ ದಿವ್ಯವಾದ ಔಷಧದಿಂದ ಅಮಂಗಳಕರವಾದ ದುಃಖವು ದೂರವಾಗುವುದು. ॥೮೯॥

ದುರಾಚಾರಗಳಲ್ಲಿ ಆಸಕ್ತರಾಗಿರುವ ಜನರಿಗೆ ಔಷಧವು ದೊರಕುವುದಿಲ್ಲ. ಆದುದರಿಂದಲೇ ಅವರಿಗೆ ಪ್ರತಿ ಜನ್ಮದಲ್ಲಿಯೂ ಪಾಪವು ಸಂಘಟಿಸುವುದು. ॥೯೦॥

ಅಶಿವಾರಾಧನಪರೈರಶಿವಂ ಪ್ರಾಪ್ಯತೇ ತತಃ ।
ಶಿವಂ ತೇಷಾಂ ಕಥಂ ಭಾವಿ ದುರ್ಜನಾನಾಂ ವದಾಧುನಾ ॥೯೦॥

ಸಂಸಾರರೋಗನಾಶಾಯ ಯದಸ್ತ್ಯೌಷಧಮುತ್ತಮಂ ।
ತತ್ರಾಶಿವಾರಾಧಕಾನಾಂ ವಿಶ್ವಾಸೋ ನೋಪಜಾಯತೇ ॥೯೧॥

ಅತಃ ಸರ್ವಾಮಯಚ್ಛೇದಃ ಸಕೃದೇವ ಕಥಂ ಶಿವೇ ।
ಕಿಂ ಚ ತೇನೈವ ಸರ್ವೇಷಾಂ ಮುಕ್ತಿಃ ಸ್ಯಾದೇಕದಾ ಖಲು ॥೯೨॥

ಯೇನ ಪಾಪಾನ್ಯಪಾರಾಣಿ ಕೃತಾನ್ಯೇವ ಪುನಃ ಪುನಃ ।
ತಸ್ಯ ತಾವನ್ನ ವಿಶ್ವಾಸಸ್ತಸ್ಮಿನ್ ದಿವ್ಯೌಷಧೇ ಶಿವೇ ॥೯೩॥

ದೇಯಂ ವಿಶ್ವಾಸಮುತ್ಪಾದ್ಯ ತದೌಷಧಮನುತ್ತಮಂ ।
ಇತಿ ತಾವನ್ನ ವಕ್ತವ್ಯಂ ಸ ಸ್ವತೋ ನೋಪಜಾಯತೇ ॥೯೪॥

ಈಶ್ವರನನ್ನು ಆರಾಧಿಸದೇ, ಇತರ ಕ್ಷುದ್ರದೇವತೆಗಳನ್ನು ಪೂಜಿಸುವ ಜನರಿಗೆ ಅಮಂಗಳವೇ ಸಂಭವಿಸುವುದು. ದುಷ್ಟರಾದ ಅವರಿಗೆ ಹೇಗೆ ತಾನೇ ಕಲ್ಯಾಣವುಂಟಾದೀತು? ಅದನ್ನು ಹೇಳು. ॥೯೦॥

ಕ್ಷುದ್ರದೇವತೆಗಳನ್ನಾರಾಧಿಸುವ ಅವರಿಗೆ ಸಂಸಾರಕ್ಲೇಶವೆಂಬ ರೋಗವನ್ನು ನಾಶಮಾಡುವ ದಿವ್ಯವಾದ ಔಷಧದಲ್ಲಿ ದೃಢವಾದ ನಂಬಿಕೆಯೇ ಇರುವುದಿಲ್ಲ. ॥೯೧॥

ಹೀಗಿರುತ್ತಿರಲು ಜನರ ಸಕಲ ರೋಗಗಳೂ ಏಕಕಾಲದಲ್ಲಿ (ಒಂದೇಸಲ) ಹೇಗೆ ನಾಶವಾಗುವುವು? ಆದರೆ, ಈ ಔಷಧದ ಸೇವೆಯಿಂದ ಸಕಲರಿಗೂ ಏಕಕಾಲದಲ್ಲಿ ಮುಕ್ತಿಯು ಸಂಭವಿಸುವುದಷ್ಟೇ? ॥೯೨॥

ಯಾವನು, ಪುನಃ ಪುನಃ ಪಾಪಕೃತ್ಯಗಳನ್ನೇ ಆಚರಿಸಿರುವನೋ, ಅವನಿಗೆ ಅಮೂಲ್ಯವಾದ ಈ ಔಷಧದಲ್ಲಿ ನಂಬಿಕೆಯು ಹುಟ್ಟುವುದಿಲ್ಲ. ॥೯೩॥

ಯಾರು ಈ ಔಷಧದಲ್ಲಿ ವಿಶ್ವಾಸವನ್ನಿಟ್ಟಿರುವುದಿಲ್ಲವೋ, ಅವರಲ್ಲಿ ವಿಶ್ವಾಸ ನ್ನಿಟ್ಟು ಈ ಔಷಧವನ್ನು ಉಪದೇಶಿಸಬಾರದು. ಏಕೆಂದರೆ ಮೊದಲು ವಿಶ್ವಾಸವು ಅವರಲ್ಲಿ ತಾನಾಗಿಯೇ ನೆಲಸಬೇಕು. ಆಗ ಈ ಔಷಧವನ್ನು ಅವರಿಗೆ ಉಪದೇಶಿಸು ವುದರಿಂದ ಫಲಿಸುವುದು. ಆದರೆ ಅವರಲ್ಲಿ ಸ್ವತಃ ವಿಶ್ವಾಸವುಂಟಾಗುವುದಿಲ್ಲ. ॥೯೪॥

ನ ಪಂಚಗವ್ಯೇನ ಪವಿತ್ರಗಾತ್ರಃ
ಶ್ವರಾಸಭೋವಾಪ್ಯಥ ಸೂಕರೋ ವಾ
ಯಥಾ ತಥಾ ವಾಶಿವಪೂಜಕೋಽಪಿ
ವಿಶ್ವಾಸಜನ್ಮಶ್ಚ್ರುತನೋವ ನಾದ್ಧಾ ॥೯೬॥

ನಿಂಬೇ ಕ್ಷೀರಫಲೋದಯೋ ಯದಿ ಭವೇದ್ವಿಷ್ಠಾಸು ರತ್ನೋದಯಃ
ತರ್ಹಿ ಸ್ಯಾದಶಿವಾರ್ಚಕಸ್ಯ ಗಿರಿಜೇ ದಿವ್ಯೌಷಧಾಸೇವನೇ ।
ವಿಶ್ವಾಸೋಽಪಿ ಭವಿಷ್ಯತೀತಿ ಬಹವೋ ಜಾನಂತಿ ಕಿಂ ಸೂಕರಾತ್ ।
ಜಾತೋ ಮತ್ತಗಜೋ ಭವಿಷ್ಯತಿ ಮಹಾನ್ ಪಂಚಾನನೋ ವಾ ಶಿವೇ॥೯೭।

ವಕ್ರಂ ಪುಚ್ಛಂ ಸಾರಮೇಯಸ್ಯ ತಾವತ್
ನೈವಾವಕ್ರಂ ಬಂಧನೇನಾಪಿ ಸೂನಂ ।
ತದ್ವನ್ನೈವಾಶಾಂಕರಾಚಾರಚಿತ್ತೇ
ವಿಶ್ವಾಸಃ ಸ್ಯಾಚ್ಛಂಕರಾಚಾರಮಾರ್ಗೇ ॥೯೮॥

ನಾಯಿ, ಕತ್ತೆ, ಆಡು, ಹಂದಿ, ಈ ಪ್ರಾಣಿಗಳು ಪಂಚಗವ್ಯದಿಂದ ಹೇಗೆ ಪವಿತ್ರವಾಗುವುದಿಲ್ಲವೋ, ಅದರಂತೆ, ಶಿವನನ್ನು ಆರಾಧಿಸದೇ ಇರುವವನು ಎಂದಿಗೂ ಪವಿತ್ರನೆಂದೆನಿಸಿಕೊಳ್ಳಲಾರನು. ಏಕೆಂದರೆ ಅವನಿಗೆ, ಈಶ್ವರನಲ್ಲಿ ವಿಶ್ವಾಸವೇ ಇರುವುದಿಲ್ಲ. ॥೯೬॥

ಬೇವಿನ ಮರದಲ್ಲಿ ಮಧುರವಾದ ಹಣ್ಣುಗಳು ಸಂಭವಿಸುವುವೇ ? ಅಮೇಧ್ಯ ಪದಾರ್ಥದಲ್ಲಿ, ರತ್ನಗಳು, ದೊರಕುವುವೇ ? ಅದರಂತೆ ಶಿವನನ್ನು ಆರಾಧಿಸದಿರುವವನಿಗೆ ದಿವ್ಯಜ್ಞಾನವೆಂಬ ಔಷಧದಲ್ಲಿ ನಂಬಿಕೆಯು ಹುಟ್ಟಲಾರದು, ಎಂದು ಜ್ಞಾನಿಗಳು ಹೇಳುವರು. ಲೋಕದಲ್ಲಿ, ಹಂದಿಯ ಹೊಟ್ಟೆಯಲ್ಲಿ ಆನೆಯಾಗಲಿ ಅಥವಾ ಸಿಂಹವಾಗಲಿ ಜನಿಸುವುದೇ ? ಅದೇರೀತಿ ನಾಸ್ತಿಕನ ಹೃದಯದಲ್ಲಿ ಸುಜ್ಞಾನವುದಯಿಸಲಾರದು. ॥೯೭॥

ಸ್ವಾಭಾವಿಕವಾಗಿ ವಕ್ರವಾಗಿರುವ ನಾಯಿಯ ಬಾಲವನ್ನು ಬಿದುರಿನ ಕಡ್ಡಿಗೆ ಸೇರಿಸಿ ಕಟ್ಟಿ ಋಜುವಾಗಿ ಮಾಡಿದರೂ ಸಹ, ಆ ಕಡ್ಡಿಯ ಸಂಬಂಧ ತಪ್ಪಿದೊಡನೆ ಪುನಃ ವಕ್ರವಾಗಿಯೇ ಆಗುವುದಲ್ಲದೇ ಎಂದಿಗೂ ನೇರವಾಗಿ ಆಗಲಾರದು. ಅದರಂತೆ

ಅಹೋ ದುಷ್ಟಂ ಕಷ್ಟಂ ನ ಭವತಿ ಶಿವಾಚಾರನಿರತೇ
ತನೂಚಾರಂ ಹಿತ್ವಾ ತ್ವಶಿವಭಜನೇ ಯಸ್ತು ನಿರತಃ ।
ಸ ಕುಂಭೀಪಾಕೇಷು ಸ್ವಜನಸಹಿತಸ್ತಿಷ್ಠತಿ ಸದಾ
ಜನಿಂ ಮೃತ್ಯುಂ ಪ್ರಾಪ್ಯಾನವರತಮೇವಾಗತನಯೇ ॥೯೯॥

ಅಶಾಂಕರಜನಾಶ್ರಿತಂ ನರಕಮಂದಿರಂ ಸರ್ವದಾ
ತದೇವ ಯಮಚಿಂತಿತಂ ನಿಲಯಮೀಶ್ವರದ್ರೋಹಿಣಾಂ ।
ಅಶೈವಜನಮಂದಿರಂ ನರಕಮಾಹುರತ್ಯಾಸ್ತಿಕಾಃ
ಕದಾಚಿದಪಿ ತೇ ಶಿವೇ ನರಕತೋ ನ ನಿರ್ಯಾಂತ್ಯಪಿ ॥೧೦೦॥

ಪುನಃ ಪುನರನೇಕಧಾ ಶುನಕತಾಮವಾಪ್ಯಾಮಯೇ ।
ಪ್ರಖಿನ್ನಹೃದಯಾಃ ಪರಂ ನರಕಮೇವ ಯಾಂತ್ಯನ್ವಹಂ ।
ಪುನಃ ಪುನರುಮಾಪತಿಸ್ಮರಣವರ್ಜಿತಾಃ ದುಃಖಿತಾಃ
ಸದಾಪಿ ಮನುಜಾಃ ಶಿವೇ ನರಕಸಂಯುತಾಃ ಪ್ರಾಯಶಃ ॥೧೦೧॥

ಈಶ್ವರದ್ವೇಷಕನ ಮನಸ್ಸಿನಲ್ಲಿ ಈಶ್ವರನನ್ನು ಆರಾಧಿಸಬೇಕೆಂಬ ಬುದ್ಧಿಯೂ ಎಂದಿಗೂ ಉದಯಿಸಲಾರದು. ||೯೮||

ಈಶ್ವರಪೂಜಕನು ಎಂದಿಗೂ ದುಃಖಿಯಾಗುವುದಿಲ್ಲ. ಯಾವನು ಈಶ್ವರಾರಾಧನೆಯನ್ನು ತೊರೆದು, ದುರ್ಮಾರ್ಗಗಳಲ್ಲಿ ಪ್ರವರ್ತಿಸುವನೋ, ಅವನು ಪುತ್ರಮಿತ್ರ ಕಲತ್ರರೊಂದಿಗೆ ಕುಂಭೀಪಾಕವೆಂಬ ಘೋರವಾದ ನರಕವನ್ನು ಹೊಂದಿ ಅಲ್ಲಿ ದಾರುಣವಾದ ದುಃಖವನ್ನನುಭವಿಸಿ, ಪುನಃ ಜನನಮರಣಗಳಿಂದ ಕೂಡಿರುವ ಸಂಸಾರವನ್ನು ಪಡೆಯುವನು. ||೯೯||

ಈಶ್ವರವಿದ್ವೇಷಕರಿಗೆ ಯಮನು ಘೋರವಾದ ನರಕವಾಸವನ್ನುಂಟು ಮಾಡುವನು. ಶಿವದೂಷಕರು ನೆಲಸಿರುವ ಮನೆಯು ನರಕಕ್ಕೆ ಸಮಾನವಾದುದೆಂದು ಆಸ್ತಿಕಶ್ರೇಷ್ಠರು ಹೇಳುವರು. ಎಲೌ ಗಿರಿಜೆಯೇ, ಈಶ್ವರನಿಂದಕರಿಗೆ ನರಕವಾಸವು ತಪ್ಪುವುದಿಲ್ಲ. ||೧೦೦||

ಈಶ್ವರ ದೂಷಕರು ಅನೇಕ ಬಾರಿ ನಾಯಿ, ಹಂದಿ, ಮುಂತಾದ ಹೀನವಾದ ಯೋನಿಗಳಲ್ಲಿ ಜನ್ಮವೆತ್ತಿ, ಅಸಹ್ಯವಾದ ದುಃಖವನ್ನನುಭವಿಸಿ, ಬಳಿಕ ನರಕಲೋಕವನ್ನು ಹೊಂದುವರು. ಎಲೌ ಗೌರಿಯೇ, ಈ ಲೋಕದಲ್ಲಿ ಪ್ರಾಯಶಃ ಮನುಷ್ಯರು

ಪ್ರಾಯಃ ಸ್ಯಾದಶಿವಾರ್ಚನೇನ ಗಿರಿಜೇ ಪಾಪಂ ತತಸ್ತತ್ಫಲಂ
ಕುಂಭೀಪಾಕನಿವೇಶನಂ ಪುನರಪಿ ಶ್ವಾಜನ್ಮ ಜನ್ಮಾಂತರೇ ।
ಭೂಯೋ ರಾಸಭತಾಮುಪೇತ್ಯ ಮಲಭುಕ್ ಸ್ಯಾತ್ಪೂಕರೋ ವೃಶ್ಚಿಕಃ
ಚಂಡಾಲೋಽಪಿ ತತಃ ಪ್ರಯಾತಿ ನರಕಃ ಪಶ್ಚಾತ್ಪುನಃ ಸೂಕರಃ ॥೧೦೨॥

ಅಶೈವಜನನೀ ಸದಾ ನರಕಮೇವ ಯಾತಿ ಧ್ರುವಂ
ಸುತೈಃ ಸಹ ಪುನಃ ಪುನರ್ನರಕಮೇವ ಸಂಪ್ರಾಪ್ಯ ಸಾ ।
ನ ಜಾತು ಸುಖಲೇಶಮಪ್ಯನುಭವತ್ಯತೋ ದುಃಸಹಾನ್
ಯಥಾ ಭವತಿ ಸರ್ವಥಾ ಶಿವಪರಾಙ್ಮುಖಾನಾಂ ಶಿವೇ ॥೧೦೩॥

ಧಿಗ್ಧಿಗ್ಧಿಗಶೈವಜನ್ಮ ಧಿಗಿದಂ ಧಿಕ್ಶಂಕರದ್ವೇಷಿಣಾಂ
ವಂಶಸ್ತತ್ಕುಲಜಾನನಾನಿ ಸತತಂ ವಿಷ್ಠಾಸು ಲಿಪ್ತಾನ್ಯಪಿ ।
ತಿಷ್ಠಂತ್ಯೇವ ಪುರೀಷಕುಂಡಕುಜಲವ್ಯಾಪ್ತೋರುಕೀಟಾಕುಲಾ
ನ್ಯಾಕಲ್ಪಂ ವ್ಯಥಯಾ ಗಿರೀಂದ್ರತನಯೇ ತೇಷಾಂ ಕಥಂ ನಿರ್ಗತಿಃ ॥೧೦೪॥

ಈಶ್ವರನನ್ನು ಸ್ಮರಿಸದೇ, ಅನೇಕವಿಧವಾದ ದುಃಖಗಳಿಗೆ ಈಡಾಗಿ ಅಂತ್ಯದಲ್ಲಿ ನರಕವನ್ನು ಸೇರುವರು. ||೧೦೧||

ಎಲೌ ಗೌರಿಯೇ, ಈಶ್ವರನನ್ನು ಆರಾಧಿಸದಿದ್ದರೆ ಪಾಪವು ಸಂಘಟಿಸುವುದು. ನರಕವಾಸವೇ ಆ ಪಾಪದ ಫಲವಾಗಿರುವುದು. ಈ ರೀತಿಯಲ್ಲಿ ನರಕವನ್ನು ಪಡೆದು ಅಲ್ಲಿ ದಾರುಣವಾದ ದುಃಖವನ್ನು ಅನುಭವಿಸಿ, ಬಳಿಕ ಕ್ರಮವಾಗಿ ಈ ಲೋಕದಲ್ಲಿ ನಾಯಿ, ಕತ್ತೆ, ಹಂದಿ, ಚೇಳು ಮುಂತಾದ ಹೀನಪ್ರಾಣಿಗಳ ಯೋನಿಯಲ್ಲಿ ಜನ್ಮವೆತ್ತಿ, ತರುವಾಯ ಚಂಡಾಲಜನ್ಮವನ್ನು ಪಡೆದು, ಅಂತ್ಯದಲ್ಲಿ ಪುನಃ ನರಕವನ್ನೇ ಪಡೆಯುವನು. ಮತ್ತೆ ಮಲಭಕ್ಷಕವಾದ ಹಂದಿಯ ಜನ್ಮವನ್ನು ತಾಳುವನು. ||೧೦೨||

ಈಶ್ವರ ನಿಂದಕನ ಜನನಿಯು ತನ್ನ ಪುತ್ರರೊಂದಿಗೆ ಪುನಃ ಪುನಃ ನರಕವಾಸವನ್ನೇ ಅನುಭವಿಸುವಳು. ಅವಳಿಗೆ ಎಂದಿಗೂ ಸುಖಲೇಶವೂ ದೊರಕದು. ಈಶ್ವರ ದ್ವೇಷಿಗಳ ಗತಿಯು ಈ ರೀತಿಯಲ್ಲಿರುವುದು. ||೧೦೩||

ಈಶ್ವರ ದ್ವೇಷಿಗಳ ಜನ್ಮಕ್ಕೆ ಧಿಕ್ಕಾರವಿರಲಿ. ಅವರ ವಂಶಕ್ಕೆ ಧಿಕ್ಕಾರವಿರಲಿ. ಶಿವನಾಮಗಳನ್ನು ಉಚ್ಚರಿಸದಿರುವ ಅವರ ಬಾಯಿಗಳು ಅಮೇಧ್ಯದಿಂದ

ಅಶೈವೋ ಮಹಾವಹ್ನಿಕುಲ್ಯಾಸು ಬದ್ಧಃ
ಮಹಾವಹ್ನಿಶಸ್ತ್ರಾಭಿಘಾತಾತ್ಪ್ರತಪ್ತಃ ।
ಪುನರ್ಭಿಂಡಿಪಾಲೈಃ ಪ್ರತಪ್ತಃ ಪ್ರತಪ್ತಃ
ಪುನರ್ವಹ್ನಿಕುಂಡೇಷು ತಿಷ್ಠತ್ಯವಶ್ಯಂ ॥೧೦೫॥

ಅಶೈವಂ ನಿರೀಕ್ಷ್ಯೈವ ತೇ ಕಾಲದೂತಾಃ
ಪ್ರಬಧ್ಯೈವ ಪಾಶೈರ್ಮಹಾವಹ್ನಿತಪ್ತೈಃ ।
ಜ್ವಲದ್ವಹ್ನಿದಂಡೈರ್ಮುಹುಸ್ತಾಡಯಂತಃ
ನಯಂತ್ಯೇವ ಕಾಲಾಂತಿಕಂ ನಿಷ್ಕಲಂಕಾಃ ॥೧೦೬॥

ದೃಷ್ಟ್ವೈವ ತಾದೃಶಂ ಕಾಲಸ್ತದಾಶಾಂಭವಮಿತ್ಯಪಿ ।
ಮತ್ವಾ ಕ್ರುದ್ಧೋ ಭವತ್ಯೇವ ಮುಂಚನ್ವಹ್ನಿಂ ಮುಹುರ್ಮುಹುಃ ॥೧೦೭॥

ತುಂಬಿರುವಂತೆಯೇ ಸರಿ. ಅವರು ಜನ್ಮಾಂತರದಲ್ಲಿ ಕ್ರಿಮಿಕೀಟಗಳ ಜನ್ಮವನ್ನು ತಾಳಿ, ಮಲಮೂತ್ರಗಳಿಂದ ದುರ್ಗಂಧಯುಕ್ತವಾದ ಪ್ರದೇಶಗಳಲ್ಲಿ ನೆಲಸಿ, ಕಲ್ಪಾಂತ್ಯದವರೆಗೂ ಅಸಹ್ಯವಾದ ದುಃಖವನ್ನು ಅನುಭವಿಸುವರು. ಹೀಗಿರುತ್ತಿರಲು ಅವರಿಗೆ ಸದ್ಗತಿಯುಂಟಾಗುವ ಬಗೆ ಹೇಗೆ? ॥೧೦೪॥

ಈಶ್ವರನಿಂದಕನು ಕುಂಭೀಪಾಕವೆಂಬ ನರಕವನ್ನು ಪಡೆದು ಅಲ್ಲಿ ಧಗಧಗಿಸುವ ಬೆಂಕಿಯಲ್ಲಿ ಸಿಕ್ಕಿಬಿದ್ದು, ದಾರುಣವಾದ ಯಾತನೆಯನ್ನನುಭವಿಸುವನು. ಬಳಿಕ, ಯಮದೂತರು, ಇವನಮೇಲೆ ಕೆಂಪಾಗಿ ಕಾದ ಕಬ್ಬಿಣದ ಸಲಾಕಿಗಳನ್ನು ಇರಿಸುವರು. ತರುವಾಯ ಅವನು ಅನವರತವೂ ಅಗ್ನಿಕುಂಡಗಳಲ್ಲಿಯೇ ಬೇಯುವನು. ॥೧೦೫॥

ಶಿವನಿಂದಕನನ್ನು ನೋಡಿದೊಡನೆಯೇ ಯಮದೂತರು, ಅವನನ್ನು, ಕೆಂಪಾಗಿ ಕಾದಿರುವ ಕಬ್ಬಿಣದ ದಂಡಗಳಿಂದ ಹೊಡೆಯುತ್ತಾ, ಯಮಾಲಯಕ್ಕೆ ಸೆಳೆದುಕೊಂಡು ಹೋಗುವರು. ॥೧೦೬॥

ದೂತರೊಂದಿಗೆ ತನ್ನ ಆಲಯಕ್ಕೆ ಬಂದಿರುವ ಅವನನ್ನು ನೋಡಿ, ಅವನು ಈಶ್ವರದ್ವೇಷಿಯಾಗಿರುವನೆಂದು ತಿಳಿದುಕೊಂಡು ಯಮನು ಕೋಪಗೊಂಡು, ಅಗ್ನಿಜ್ವಾಲೆಗಳನ್ನು ಹೊರಗೆಡುವುವೋ ಎಂಬಂತೆ ಕೆಂಪಗಿರುವ ತನ್ನ ಕಣ್ಣುಗಳನ್ನು ಅವನ ಕಡೆಗೆ ಹೊರಳಿಸುವನು. ॥೧೦೭॥

ರೇ ರೇ ದುರಾಚಾರ ಶಿವಾನ್ಯಪೂಜಾ
ಕಥಂ ಕೃತಾ ದುರ್ಭಗ ಇತ್ಯಪಾರೈಃ
ಕಶಾಗ್ರಘೂತ್ಕೈರದಯೇನ ಹತ್ವಾ ॥
ಪ್ರಪಾತಯತ್ಯೇವ ಮಹಾಗ್ನಿಕುಂಡೇ ॥೧೦೮॥

ಪ್ರತಪ್ತಮಾನೀಯ ತಮಗ್ನಿಕುಂಡಾತ್
ಅಶಾಂಕರಾರಾಧಕಹಸ್ತಮಗ್ನೌ ।
ನಿಕ್ಷಿಪ್ಯ ದಂಶೇನ ನಿಕೃತ್ಯ ಮಾಂಸಂ
ತದಾನನೇ ಪ್ರಕ್ಷಿಪತಿ ಪ್ರಕೋಪಾತ್ ॥೧೦೯॥

ರೇ ರೇ ದುರಾಚಾರ ಶಿವಾನ್ಯನಾಮ ಸ್ಮೃತಂ
ಕಥಂ ವಿಸ್ಮೃತಮೀಶನಾಮ ।
ಇತಿ ಪ್ರದಗ್ಧ್ವಾ ಹೃದಯಂ ತದೀಯಂ
ಪುನರ್ಮಹಾಗ್ನೌ ಕ್ಷಿಪತಿ ಪ್ರಕೋಪಾತ್ ॥೧೧೦॥

ಬಳಿಕ ಶಿವನಿಂದಕನಾದ ಅವನನ್ನು ಕುರಿತು "ಎಲೈ ದುಷ್ಟನೇ! ನೀನು, ಈಶ್ವರಪೂಜೆಯನ್ನು ಮಾಡದೆ, ಇತರ ದೇವತೆಗಳನ್ನು ಏಕೆ ಪೂಜಿಸಿದೆ?" ಎಂದು ಅವನನ್ನು ಹೆದರಿಸುತ್ತಾ, ಚಾಟಿಗಳಿಂದ ಚೆನ್ನಾಗಿ ಹೊಡೆದು, ಘೋರವಾದ ಅಗ್ನಿ ಕುಂಡದಲ್ಲಿ ಇರಿಸುವನು. ॥೧೦೮॥

ಅಗ್ನಿಕುಂಡದಲ್ಲಿ, ಬಿದ್ದು ಬೆಂದಿರುವ ಅವನ ಕೈಗಳನ್ನು ಹಿಡಿದು, ಪುನಃ ಅಗ್ನಿಯಲ್ಲಿ ಇರಿಸಿ, ಇದನ್ನು ಇಕ್ಕಳಗಳಿಂದ ಕತ್ತರಿಸಿ, ಅದರ ಮಾಂಸವನ್ನು, ಅವನ ಬಾಯಿಯಲ್ಲಿಯೇ ಹಾಕುವನು. ॥೧೦೯॥

ಎಲೈ ದುರಾತ್ಮನೇ! ನೀನು, ಶಿವನಾಮವನ್ನು ಬಿಟ್ಟು ಇತರರ ನಾಮ ಗಳನ್ನು ಏಕೆ ಸ್ಮರಿಸಿದೆ? ಶಿವನಾಮವನ್ನೇಕೆ ಮರೆತೆ? ಎಂದು ಗದ್ದರಿಸುತ್ತಾ, ಅವನ ಶರೀರವನ್ನು ಬೆಂಕಿಯಲ್ಲಿ ಸುಟ್ಟು, ಪುನಃ ಸಿಟ್ಟಿನಿಂದ ಅದನ್ನು ಅಗ್ನಿಯಲ್ಲಿಯೇ ಬಿಸುಟುವನು. ॥೧೧೦॥

ರೇ ರೇ ದುರಾಚಾರ ಶಿವೇತರಾಂಘ್ರಿ
ಪ್ರಣಾಮದುಷ್ಟಂ ಧಿಗಿದಂ ಶಿರಸ್ತೇ ।
ಇತ್ಯುಚ್ಚರನ್ನೇವ ಸ ವಹ್ನಿಶಸ್ತ್ರೈಃ
ಭಿನತ್ತಿ ತನ್ಮಸ್ತಕಮಸ್ಥಿಭಾಗಂ ॥೧೧೧॥

ಪಾದೌ ನ ಯಾತೌ ಶಿವಯಾತ್ರಯಾಪಿ
ಪಾಪಾರ್ಜನೋಪಾಯತಯಾಪಿ ದುಷ್ಟೌ ।
ಇತ್ಯುಚ್ಚರನ್ನೇವ ಭಿನತ್ತಿ ತಸ್ಯ
ಪಾದದ್ವಯಂ ಲೋಶತ ಏವ ವಹ್ನೌ ॥೧೧೨॥

ರೇ ರೇ ದುರಾಚಾರ ತವಾಸ್ಯಮಧ್ಯಂ
ಹಾರೋಪಹಾರೇಣ ನ ಪೂತಮೇವ ।
ಇತ್ಯುಚ್ಚರನ್ನೇವ ತದಾಸ್ಯಮಧ್ಯಂ
ವಿಷ್ಠಾಜಲೈಃ ಪೂರಯತಿ ಪ್ರಕೋಪಾತ್ ॥೧೧೩॥

ರೇ ರೇ ದುರಾಜಾರ ನ ಲೋಚನಾಭ್ಯಾಂ
ಲಿಂಗಂ ನ ದೃಷ್ಟಂ ಕಮಲಾರ್ಚಿತಂ ವಾ ।

ಎಲೈ ದುರ್ಭಾಗ್ಯನೇ! "ಈಶ್ವರನನ್ನು ಬಿಟ್ಟು, ಇತರ ದೇವತೆಗಳ ಪಾದಗಳಿಗೆ ನಮಸ್ಕರಿಸಿರುವ ನಿನ್ನ ಈ ತಲೆಯು ನಿಂದ್ಯವಾಗಿರುವುದು" ಹೀಗೆಂದು ಹೇಳುತ್ತಾ, ಯಮನು ಅಗ್ನಿಯಲ್ಲಿ ಕೆಂಪಾಗಿ ಕಾದ ಆಯುಧಗಳಿಂದ ಅವನ ಶಿರಸ್ಸನ್ನು ತುಂಡರಿಸುವನು. ॥೧೧೧॥

ಎಲೈ ನೀಚನೇ! ನಿನ್ನ ಈ ಕಾಲುಗಳು, ಶಿವಾಲಯಕ್ಕೆ ತೆರಳದೆ, ಕೆಟ್ಟ ದಾರಿಗಳಲ್ಲಿ ಹೋಗಿರುವುದರಿಂದ, ಇವು ದುಷ್ಟವಾಗಿರುವುವು, ಎಂದು ಹೇಳುತ್ತಾ, ಅವನ ಪಾದಗಳನ್ನು ಕತ್ತರಿಸಿ, ಬೆಂಕಿಯಲ್ಲಿ ಎಸೆಯುವನು. ॥೧೧೨॥

ಎಲೈ ದುರಾಚಾರಿಯೇ! ನಿನ್ನ ಬಾಯಿಯು, ಶಿವನೈವೇದ್ಯವನ್ನು ತಿನ್ನದಿರುವುದರಿಂದ ಅಪವಿತ್ರವಾಗಿರುವುದು ಎಂದು ಗದರಿಸುತ್ತಾ, ಅವನ ಬಾಯಲ್ಲಿ ಪುರೀಷದ ಜಲವನ್ನು ತುಂಬುವನು. ॥೧೧೩॥

ಎಲೈ ದುರಾತ್ಮನೇ! "ನೀನು ಈ ಕಣ್ಣುಗಳಿಂದ ಒಂದು ಬಾರಿಯಾದರೂ,

ಇತ್ಯುಚ್ಚರನ್ನಗ್ನಿಕಣೈಃ ಪ್ರದಗ್ಧಂ
ಕರೋತಿ ತನ್ನೇತ್ರಯುಗಂ ಪ್ರಕೋಪಾತ್ ॥೧೧೪॥

ರೇ ರೇ ಶಂಕರಶಂಕರಾರ್ಚನಕಥಾಪೀಯೂಷಧಾರಾ ಶ್ರುತಾ
ನ ಕ್ವಾಪೀತಿ ನಿಧಾಯ ಕರ್ಣಕುಹರೇ ತಪ್ತಾಯಸಾಂಭಃ ಪರಂ ।
ವಹ್ನೌ ಪಾತಯತಿ ಪ್ರಕೋಪದಹನಜ್ವಾಲಾಕುಲವ್ಯಾಕುಲಾನ್
ಕುರ್ವನ್ನೇವ ಯಮಃ ಪುನಃ ಪುನರಮೋ ಧಾವತ್ಯಶೈವಾನ್ ಪ್ರತಿ ॥೧೧೫॥

ಅಶೈವಕುಲಪಾವಕೋ ಜಯತಿ ಕಾಲ ಏವಾಂಬಿಕೇ
ಸ ತಾವದಶಿವಾರ್ಚಕಾನನವಿಲೋಕನೇನಾನಲೈಃ ।
ಪ್ರಪೂರಯತಿ ತನ್ಮುಖಂ ಮುಹುರಪಾರವಹ್ನಿಸ್ಫುರತ್
ಸ್ಫುಲಿಂಗನಿಕರಾಕರಜ್ವಲನಜಾಲಜಾಲೈರ್ಭೃಶಂ ॥೧೧೬॥

ಅಮೋಘಮಘಮಂತಕೋ ವದತಿ ಕಾಲಕಾಲೇತರ
ಪ್ರಣಾಮಭಜನಾದಿಕಂ ಸಕಲವೇದಧರ್ಮಪ್ರಭುಃ ।

ಪೂಜಿತವಾದ ಶಿವಲಿಂಗವನ್ನು ದರ್ಶನಮಾಡಲಿಲ್ಲ. ಹೀಗೆಂದು ಕೋಪದಿಂದ ಹೇಳುತ್ತಾ ಅವನ ಕಣ್ಣುಗಳನ್ನು, ಬೆಂಕಿಯ ಕಿಡಿಗಳಿಂದ ದಹಿಸುವನು. ॥೧೧೪॥

ಪಾಪಿಯೇ! ನಿನ್ನ ಈ ಕಿವಿಗಳು ಎಲ್ಲಿಯೂ ಶಿವಕಥಾಮೃತವನ್ನು ಕೇಳಿರುವುದಿಲ್ಲ. ಎಂದು ಗದರಿಸುತ್ತಾ, ಕೆಂಪಾಗಿ ಕಾದ ಕಬ್ಬಿಣದ ನೀರನ್ನು ಅವನ ಕಿವಿಗಳೊಳಕ್ಕೆ ಎರಚುವನು. ಹೀಗೆ ಯಮನು ತನ್ನ ಕೋಪಕ್ಕೆ ಹೆದರಿ ಓಡುವ ಪಾಪಿಗಳನ್ನು ಹಿಂಬಾಲಿಸಿ ಹಿಂಸಿಸುವನು. ಎಲೌ ಗಿರಿಜೆಯೇ! ಈರೀತಿಯಲ್ಲಿ ಯಮನು ಶಿವನಿಂದಕರನ್ನು ಹಿಂಸಿಸುವನು. ॥೧೧೫॥

ಯಮನು ಶಿವನಿಂದಕರ ವಂಶಕ್ಕೆ ಘೋರವಾದ ಅಗ್ನಿಯಂತೆ ಭಯಂಕರನಾಗಿರುವನು. ಅವನು ಶಿವದ್ವೇಷಿಗಳ ಮುಖಗಳನ್ನು ನೋಡಿದ ಮಾತ್ರದಿಂದಲೇ ಅತ್ಯಂತ ಕೋಪಗೊಂಡವನಾಗಿ ಭಯಂಕರವಾದ ಜ್ವಾಲೆಗಳನ್ನು ಹೊರಗೆಡಹುವ ಬೆಂಕಿಯನ್ನು ಅವರ ಮುಖದೊಳಕ್ಕೆ ತುಂಬುವನು. ॥೧೧೬॥

ಸಕಲ ವೇದಧರ್ಮಗಳನ್ನು ತಿಳಿದವನಾದ ಯಮನು ಶಿವನಿಗಿಂತಲೂ ಇತರರಾದ ದೇವತೆಗಳ ಆರಾಧನೆ, ನಮಸ್ಕಾರ ಮುಂತಾದುವುಗಳು ಮಹಾಪಾಪಕರ

ಅತಃ ಕಥಮುಮೇ ಸಕೃತ್ಸಕಲದುಃಖನಾಶೋದ್ಯಮಃ
ಶಿವೇತರಸುರಾರ್ಚಕಪ್ರಲಯಕಾಲಕಾಲಾನಲೇ ॥೧೧೭॥

ಕಃ ಕಾಲಾನಲದಾನಘೋರದಹನಜ್ವಾಲಾಕುಲವ್ಯಾಕುಲಃ
ನ ಸ್ಯಾದ್ಗೌರಿ ಶಿವೇತರಾರ್ಚನಪರೋ ಲಿಂಗಾರ್ಚನಾನಾದರಃ ।
ವ್ಯಕ್ತೋದ್ಧೂಲನಫಾಲಭಸ್ಮವಿಲಸದ್ರುದ್ರಾಕ್ಷಮಾಲಸ್ತತಃ
ಮತ್ಪೂಜಾನಿರತಃ ಪ್ರಯಾತಿ ಪರಮಂ ಮಾಮೇವಮಾನಂದದಂ ॥೧೧೮॥

ಇತಿ ಶ್ರೀಶಿವರಹಸ್ಯೇ ಹರಾಖ್ಯೇ ತೃತೀಯಾಂಶೇ ಉತ್ತರಾರ್ಧೇ
ಅಶೈವಯಮಯಾತನಾವರ್ಣನಂ ನಾಮ ಏಕೋನವಿಂಶೋಽಧ್ಯಾಯಃ

ಮಾಡುವುಗಳೆಂದು ಹೇಳುವನು. ಆದರೆ ಪ್ರಾಯಶಃ ಲೋಕದಲ್ಲಿ ಸಕಲ ಜನರೂ, ಶಿವನನ್ನು ಆರಾಧಿಸದೇ, ಇತರ ದೇವತೆಗಳನ್ನು ಆರಾಧಿಸುವುದರಲ್ಲಿಯೇ ಮಗ್ನರಾಗಿರುವರು. ಹೀಗಿರುವಾಗ ಜನನಮರಣ ರೂಪವಾದ ಈ ಸಂಸಾರವು ಅವರಿಗೆ ತಪ್ಪುವ ಬಗೆ ಹೇಗೆ? ॥೧೧೭॥

ಎಲೌ ಗಿರಿಜೆಯೇ! ಯಾವನು ತಾನೇ ಶಿವಲಿಂಗಾರ್ಚನೆಯನ್ನು ದೂರ ಮಾಡಿ ಇತರ ದೇವತೆಗಳನ್ನು ಆರಾಧಿಸಿ, ಮೃತ್ಯುವಿನ ಬಾಯಿಗೆ ತುತ್ತಾಗಿ ಘೋರವಾದ ಯಾತನೆಯನ್ನನುಭವಿದೇ ಇರುವನು? ಶಿವಚಿಹ್ನೆಗಳಾದ, ಭಸ್ಮಲೇಪನ, ಭಸ್ಮತ್ರಿಪುಂಡ್ರಧಾರಣೆ, ರುದ್ರಾಕ್ಷಮಾಲೆ ಮುಂತಾದುವುಗಳನ್ನು ಧರಿಸಿ, ಸದಾ ಶಿವಪೂಜೆಯಲ್ಲಿಯೇ ಆಸಕ್ತನಾಗಿರುವ ಮನುಜನು ನನ್ನ ಸಾನ್ನಿಧ್ಯವನ್ನು ಪಡೆದು ಮೋಕ್ಷಾನಂದವನ್ನು ಅನುಭವಿಸುವನು.'' ಎಂದು ಶಂಕರನು ದೇವಿಗೆ ಶಿವಪೂಜಾ ಮಹಿಮೆಯನ್ನು ವಿವರಿಸಿದನು. ॥೧೧೮॥

ಇಲ್ಲಿಗೆ ಶ್ರೀ ಶಿವರಹಸ್ಯದ ಮೂರನೆಯ ಅಂಶದ ಎರಡನೆಯ ಭಾಗದಲ್ಲಿ
“ ಶಿವನಿಂದಕನ ಯಮಯಾತನೆಯ ವರ್ಣನೆ ”ಯೆಂಬ ಹತ್ತೊಂಬತ್ತನೆಯ
ಅಧ್ಯಾಯವು ಮುಗಿದುದು.

॥ ಶ್ರೀಃ ॥

ಅಥ ಶ್ರೀಶಿವರಹಸ್ಯೇ

ತೃತೀಯಾಂಶೇ

ಉತ್ತರಾರ್ಧೇ

ವಿಂಶೋಽಧ್ಯಾಯಃ

॥ ನಂದಿಕೇಶ ಉವಾಚ ॥

ಇತ್ಯಾಕರ್ಣ್ಯ ಶಿವಾ ಶಿವೋಕ್ತವಚನಂ ನತ್ವಾ ಮುಹುಃ ಶಂಕರಂ
ಹೃಷ್ಟಾ ಸ್ಮೇರವರಾನನಾತಿವಿನತಾ ಸ್ತುತ್ವಾ ಮುಹುಃ ಸಾದರಂ ।
ಪ್ರಾಹಾನಂದವಚಃ ಪ್ರಪಂಚಚತುರಾ ಧೃತ್ವಾ ಕರೇ ಷಣ್ಮುಖಂ
ಡುಂಢೀಶಸ್ಯ ಚತುರ್ಮುಖಾದಿವಿನುತಂ ಸ್ತನ್ಯಂ ಪಿಬಂತಂ ಮುದಾ ॥೧॥

ಸ್ವಾಮಿನ್ ಶಂಕರ ಶಂ ಕುರು ಪ್ರತಿಭವೇ ಭಕ್ತಾಯ ಭಕ್ತಃ ಕಲೌ
ತಾವದ್ದುರ್ಲಭ ಏವ ಪುಣ್ಯಗಿರಿಭಿರ್ಭಕ್ತಿಪ್ರವೃದ್ಧಿರ್ಭವೇತ್ ।

ಇಪ್ಪತ್ತನೆಯ ಅಧ್ಯಾಯ

ಬಳಿಕ ನಂದಿಕೇಶ್ವರನು ವಿಶ್ವಾವಸುವನ್ನು ಕುರಿತು ಹೀಗೆಂದನು—"ಎಲೈ ವಿಶ್ವಾವಸುವೇ! ಶಿವನ ವಚನಗಳನ್ನು ಕೇಳಿ ಪಾರ್ವತಿಯು ಅತ್ಯಾನಂದಭರಿತಳಾಗಿ, ಶಂಕರನಿಗೆ ಭಕ್ತಿಯಿಂದ ನಮಸ್ಕರಿಸಿ, ಮಂದಹಾಸವನ್ನು ವ್ಯಕ್ತಪಡಿಸುತ್ತಾ ತನ್ನ ತೊಡೆಗಳ ಮೇಲೆ ಮಲಗಿ ಸ್ತನ್ಯಪಾನವನ್ನು ಮಾಡುತ್ತಿರುವ ಷಣ್ಮುಖನನ್ನು ಕೈಯಿಂದ ಹಿಡಿದೆತ್ತಿ, ಈಶ್ವರನನ್ನು ಕುರಿತು ಹೀಗೆ ಪ್ರಾರ್ಥಿಸಿದಳು. ॥೧॥

ಓ, ಸ್ವಾಮಿಯೇ! ನಿನ್ನ ಭಕ್ತನಿಗೆ ಪ್ರತಿಜನ್ಮದಲ್ಲಿಯೂ ಕಲ್ಯಾಣವನ್ನುಂಟು ಮಾಡುತ್ತಿರು. ಕಲಿಯುಗದಲ್ಲಿ ನಿಜವಾದ ಈಶ್ವರ ಭಕ್ತನೇ ದುರ್ಲಭನು. ಪುಣ್ಯ ರಾಶಿಗಳಿಂದಲೇ, ಅಂತಹ ಭಕ್ತಿಯು ಉಂಟಾಗುವುದಲ್ಲದೇ ಅನ್ಯಥಾ ಅದು ಲಭಿಸ

ಭಾಗ್ಯೇನೇತಿ ವಿಚಾರಿತಂ ಮುಹುರತೋ ಭಾಗ್ಯಸ್ವರೂಪಾಯ ತೇ
ಭಕ್ತಿರ್ಭಾವವರಾಯ ಭಾವವಿಷಯವ್ಯಾಪಾರಸಾರೈಃ ಪರಂ ॥೨॥

ಸ್ವಾಮಿನ್ ಮಯ್ಯನುರಾಗ ಏವ ಸತತಂ ತಸ್ಯ ಚ್ಯುತಿರ್ಮಾಸ್ತು ಮೇ
ಮಾಸ್ಮಿನ್ ರೋಗನಿವೃತ್ತ್ಯರ್ಥಮಿದಂ ಮಹೌಷಧಮಿತಿ ಖ್ಯಾತಂ ಕಿಮಸ್ತಿ ಪ್ರಭೋ ।
ತನ್ಮಹ್ಯಂ ವದ ಸಾದರಂ ಕರುಣಯಾ ತಚ್ಚಿತ್ರಮತ್ಯದ್ಭುತಂ
ನ ಜ್ಞಾತಂ ವಿಧಿನಾಪಿ ವೇದನಿಕರೈರಪ್ಯಂತತಃ ಸಂತತಂ ॥೩॥

ಯಸ್ಯೌಷಧಸ್ಯ ಶ್ರವಣಸ್ಮೃತೇರ್ವಾ
ಸರ್ವಾಮಯಧ್ವಂಸ ಇತಿ ಪ್ರಸಿದ್ಧಿಃ ।
ತದೌಷಧಂ ತಾವದುಮಾಸಹಾಯ
ಮಹ್ಯಂ ವದಾದ್ಯಾದರಸಾಧನೇನ ॥೪॥

ಶ್ರುತಾನಿ ಕುತ್ರಾಪಿ ಕಿಲೌಷಧಾನಿ
ನ ರೋಗನಾಶಾಯ ಭವಂತಿ ಶಂಭೋ ।

ಲಾರದು. ನಿನ್ನ ಅನುಗ್ರಹದಿಂದಲೇ, ಜನರಿಗೆ ಈಶ್ವರನಲ್ಲಿ, ಚಿತ್ತೈಕಾಗ್ರ್ಯವು ಉಂಟಾಗುವುದೆಂದು ತಿಳಿಯುವೆನು. ಭಾಗ್ಯರೂಪನಾದ ನಿನಗೆ ನಮಸ್ಕಾರ. ಈಶ್ವರ ಭಕ್ತಾಗ್ರೇಸರನಿಗೆ ಚಿತ್ತೈಕಾಗ್ರ್ಯವನ್ನು ದಯಪಾಲಿಸಿ ಅವನನ್ನು ಕಾಪಾಡು. ॥೨॥

ಪ್ರಭುವೇ! ನನ್ನಲ್ಲಿ ನಿನಗೆ ಏಕರೀತಿಯಾದ ಅನುರಾಗವಿರಲಿ. ಸಂಸಾರವೆಂಬ ರೋಗವನ್ನು ನಾಶಮಾಡುವ ದಿವ್ಯವಾದ ಔಷಧಿಯು ಇರುವುದಾದರೆ, ಅದನ್ನು ನನಗೆ ಹೇಳುವವನಾಗು. ಅದ್ಭುತವಾದ ಆ ಔಷಧವನ್ನು ವೇದಗಳೂ ಸಹ ತಿಳಿದುಕೊಂಡಿರುವುದಿಲ್ಲ. ಇಷ್ಟೇಕೆ! ಸೃಷ್ಟಿಕರ್ತನಾದ ಬ್ರಹ್ಮನೂ ಸಹ ಅದನ್ನು ಅರಿಯನು. ॥೩॥

ಯಾವ ದಿವ್ಯೌಷಧದ ಸ್ಮರಣಮಾತ್ರದಿಂದಲೇ, ಸಕಲ ರೋಗಗಳೂ ನಾಶಹೊಂದುವುವೆಂದು ಪ್ರಸಿದ್ಧಿಯಿರುವುದೋ ಅಂತಹ ಔಷಧವನ್ನು ಪ್ರೀತಿಯಿಂದ ನನಗೆ ಹೇಳುವವನಾಗು. ॥೪॥

ಮಹೇಶ್ವರನೇ! ನಾನು ಇದುವರೆಗೆ ಅನೇಕ ಔಷಧಗಳ ಹೆಸರನ್ನು ಕೇಳಿರುವೆನು. ಆದರೆ ಅವುಗಳಲ್ಲಿ ಒಂದು ಔಷಧವೂ, ಸಂಸಾರ ಕ್ಲೇಶವೆಂಬ ರೋಗವನ್ನು

ತದೇತದತ್ಯದ್ಭುತಮಿತ್ಯವೈಮಿ
ಪ್ರಲೋಭನಾರ್ಥಂ ನ ತದುಕ್ತಮೇವ ॥೫॥

ವೇದಾಸ್ತಾವದುಮಾಸಹಾಯ ವಚಸಾನ್ಯನ್ಯಾನಿ ಶಾಸ್ತ್ರಾಣ್ಯಪಿ
ವ್ಯಕ್ತಾನ್ಯೇವ ಸ ಚಿತ್ರಮತ್ರ ಭಗವನ್ ವಿದ್ಯಾಪತಿಸ್ತ್ವಂ ಯತಃ ।
ವಾಕ್ಯಂ ತೇ ಮಮ ವೇದ ಏವ ಸತತಂ ವಿಶ್ವಾಸ ಏವಾಸ್ತಿ ಮೇ
ಶಂಕಾಶೋಕವಿವರ್ಜಿತಾನಿ ವಚನಾನ್ಯಂತಾದ್ಯಶೂನ್ಯಾನ್ಯಪಿ ॥೬॥

ನಿತ್ಯಂ ತ್ವಾಂ ಖಲು ಕೇಚಿದಾಹುರಧುನಾ ವೇದೇಷು ತೇಷಾಂ ಕಥಂ
ನಿತ್ಯಂ ತ್ವಾಂ ಪರಮಾಣುತುಲ್ಯಮುಸಕೃಜ್ಜನ್ಮ ಶ್ರುತಂ ವೇದತಃ ।
ಛಂದಾಂಸೀತಿ ತಥಾ ಚ ನಿತ್ಯಮತಿರಪ್ಯಾಪ್ತೋಕ್ತಿವಾಕ್ಯಾತ್ವತೋ
ದೂರೇ ತಾವದತಃ ಪರಂ ಖಲು ಮತೋಽನಿತ್ಯಪ್ರವಾಹಾದರಾತ್ ॥೭॥

ನಾಶಮಾಡುವುದಲ್ಲ. ಆದುದರಿಂದ ಸಕಲರೋಗಗಳನ್ನೂ ನಾಶಪಡಿಸುವ ನಿನ್ನ ಔಷಧವು ಅತ್ಯದ್ಭುತವಾಗಿರುವುದೆಂದು ತಿಳಿಯುತ್ತೇನೆ. ಆದರೂ ನನ್ನನ್ನು ವಂಚಿಸುವುದಕ್ಕೋಸ್ಕರ, ನೀನು ಇದುವರೆಗೆ ನನಗೆ ಅದನ್ನು ಹೇಳಿರುವುದಿಲ್ಲವೆಂದು ಭಾವಿಸುವೆನು. ॥೫॥

ವೇದರಾಶಿಗಳು, ಸಕಲ ಶಾಸ್ತ್ರಗಳೂ, ನಿನ್ನ ಮುಖದಿಂದಲೇ ಹುಟ್ಟಿರುವುವು. ಆದುದರಿಂದಲೇ ಅವು ನಿನ್ನ ವಚನಗಳಾಗಿರುವುವೆಂಬುದರಲ್ಲಿ ಆಶ್ಚರ್ಯವಿಲ್ಲ. ಏಕೆಂದರೆ, ನೀನೇ, ಸಕಲ ವಿದ್ಯೆಗಳಿಗೆ ಪ್ರಭುವಾಗಿರುವೆಯಲ್ಲವೇ! ನಿನ್ನ, ಪ್ರತಿಯೊಂದು ವಾಕ್ಯವೂ, ವೇದವಾಕ್ಯವಾಗಿರುವುದೆಂದು ಭಾವಿಸುವೆನು. ನನಗೆ ಕಾಲತ್ರಯದಲ್ಲಿಯೂ, ನಿನ್ನ ವಚನಗಳಲ್ಲಿ ದೃಢವಾದ ನಂಬಿಕೆಯಿರುವುದು. ನಿನ್ನ ವಚನಗಳು ಅಮೋಘವಾಗಿರುವುವು. ॥೬॥

ಅನೇಕ ಶಾಖೆಗಳಿಂದ ಕೂಡಿಕೊಂಡು, ಭಿನ್ನಭಿನ್ನವಾಗಿರುವ ಋಗ್ವೇದಾದಿ ವೇದಗಳಲ್ಲಿ, ಕೆಲವು ವೇದವಾಕ್ಯಗಳೇ ನೀನು ನಿತ್ಯನಾಗಿರುವೆಯೆಂದು ಬೋಧಿಸುವುವು. ಇನ್ನು ಕೆಲವು ವೇದವಾಕ್ಯಗಳು, ನಿನಗೆ ಪರಮಾಣುವಿನಂತೆ ಸೂಕ್ಷ್ಮವಾದ ಉತ್ಪತ್ತಿಯು ಇರುವುದೆಂದು ಹೇಳುವುವು. ಆದರೆ, ನಿನ್ನ ಆ ಜನ್ಮವು ಔಪಾಧಿಕವಾದ ಜನ್ಮವಾಗಿರುವುದಲ್ಲದೇ, ನಿತ್ಯಶುದ್ಧಮುಕ್ತಸ್ವಭಾವನಾದ ನಿನಗೆ, ನಿನ್ನ ಪಾರಮಾರ್ಥಿಕವಾದ ಸ್ವರೂಪದಿಂದ ಜನ್ಮವು ಇರುವುದಿಲ್ಲವೆಂದು ಭಾವಿಸುವೆನು. ಏಕೆಂದರೆ,

ಪ್ರವಾಹನಿತ್ಯತ್ವಮವೇಕ್ಷ್ಯ ವೇದೇ
ನಿತ್ಯತ್ವಮುಕ್ತಂ ಶಿವ ತೇನ ತಸ್ಮಿನ್
ನಿತ್ಯತ್ವವಾರ್ತಾಪಿ ಭವಿಷ್ಯತೀತಿ
ಸೇಯಂ ತ್ವದುಕ್ತಿಷ್ವನುಭೂಯತೇ ಚ ॥೮॥

ಈಶಾನಃ ಸರ್ವವೇದಾನಾಮಿತಿ ವೇದೇನ ನಿಶ್ಚಿತಂ
ವಿದ್ಯಾದೀಶ್ವರತಾಂ ಶಂಭೋ ಮಿತಾ ತ್ವಯಿ ಮಹೇಶ್ವರ ॥೯॥

ಅತಸ್ತ್ವದುಕ್ತಂ ಸಕಲಂ ಪ್ರಮಾಣಂ
ಅಭ್ರಾಂತವಾಕ್ಯತ್ವವಿಶೇಷಣೇನ ।

ನಿನಗೆ ಉತ್ಪತ್ತಿಯು ಇರುವುದೆಂದು ಬೋಧಿಸುವ ವೇದವಾಕ್ಯಗಳ ಸಂಖ್ಯೆಗಿಂತ, ನೀನು ಉತ್ಪತ್ತಿರಹಿತನು, ನಿತ್ಯನು, ಎಂದು ಬೋಧಿಸುವ ವೇದವಾಕ್ಯಗಳ ಸಂಖ್ಯೆಯೇ ಅಧಿಕವಾಗಿರುವುದು. ಲೋಕಹಿತೈಷಿಯಾದ ನೀನೇ ವೇದಗಳನ್ನು ಸೃಷ್ಟಿಸಿರುವೆ. ಆದುದರಿಂದ ವೇದಗಳು ಆಪ್ತವಾಕ್ಯಗಳಾಗಿರುವುವು. ಆಪ್ತವಾಕ್ಯಗಳು ಪ್ರಾಮಾಣಿಕವಾದುವುಗಳೆಂದು ಲೋಕದಲ್ಲಿ ಪ್ರಸಿದ್ಧವಾಗಿರುವುದರಿಂದ, ಆಪ್ತವಾಕ್ಯರೂಪವಾದ ವೇದಗಳಿಂದ ನಿನ್ನ ನಿತ್ಯಸ್ವರೂಪವು ತಿಳಿದು ಬರುತ್ತಿರಲು, ನೀನು ಜನ್ಮರಹಿತನೂ ನಾಶರಹಿತನೂ ಆಗಿರುವೆಯೆಂದೇ ಭಾವಿಸುವೆನು. ॥೭॥

ಸಕಲ ವೇದರಾಶಿಗಳು, ನದಿಯಪ್ರವಾಹದಂತೆ ಏಕರೀತಿಯಲ್ಲಿ ಪ್ರತಿಕಲ್ಪದಲ್ಲಿಯೂ, ಅನುಸ್ಯೂತವಾಗಿ, ಅನುವರ್ತಿಸಿ ಬರುವುದರಿಂದ, ಶಾಶ್ವತವಾದ ಆ ವೇದಗಳನ್ನು ವ್ಯಕ್ತಪಡಿಸಿರುವ ನೀನು ನಿತ್ಯನಾಗಿರುವೆಯೆಂಬುದರಲ್ಲಿ ಸಂದೇಹವೇ ಇಲ್ಲ. ಆದುದರಿಂದ ನಿನ್ನ ವಾಕ್ಯಗಳು ಎಂದಿಗೂ ವ್ಯರ್ಥವಾಗಲಾರವು. ॥೮॥

"ಈಶಾನಃ ಸರ್ವವಿದ್ಯಾನಾಮೀಶ್ವರಃ ಸರ್ವಭೂತಾನಾಂ" ಎಂಬ ವೇದವಾಕ್ಯವು ನೀನು, ಸಕಲ ವಿದ್ಯೆಗಳಿಗೆ ಆಶ್ರಯನಾಗಿರುವೆಯೆಂದೂ ಸಕಲ ಪ್ರಾಣಿಗಳಿಗೆ ಅಧಿಪತಿಯಾಗಿರುವೆಯೆಂದೂ ಬೋಧಿಸುವುದು. ಆದುದರಿಂದ, ನೀನೇ ಜಗದೊಡೆಯನೂ ಸಕಲ ವಿದ್ಯಾಧಿಪತಿಯೂ ಆಗಿರುವೆಯೆಂದು ನಿಸ್ಸಂದೇಹವಾಗಿ ತಿಳಿಯುವೆನು. ॥೯॥

ಆದುದರಿಂದ ನಿನ್ನ ಸಕಲ ವಚನಗಳೂ ಪ್ರಾಮಾಣಿಕವಾಗಿವೆ. "ಯಃ ಸರ್ವಜ್ಞಃ ಸರ್ವವಿತ್" ಎಂಬ ವೇದವಾಕ್ಯವು ನೀನು ಸರ್ವಜ್ಞನಾಗಿರುವೆಯೆಂದು

ಜ್ಞಾತಂ ಪ್ರಮಾಣಂ ತದಿದಂ ಪ್ರಮಾಣಂ
ಶ್ರೇಷ್ಠಪ್ರಮಾಣೇಷು ವಿಚಿತ್ರಮೇವ ॥೧೦॥

ಅಲೌಕಿಕಾರ್ಥಾನವಬೋಧಕಾನಾಂ
ಪ್ರಾಮಾಣ್ಯಮಾತ್ರಂ ಕ್ವಚಿದಾನೃತಂ ಚ ।
ಅಲೌಕಿಕಾರ್ಥಾವಗಮೋ ವಿಧೇಃ ಸ್ಯಾತ್
ಸ ವೇದ ಏವೇತಿ ವಿಧೇರ್ಮತೋಽಪಿ ॥೧೧॥

ವಿಧಿರಪಿ ನ ವಿಧೀನಾಂ ವೇದ ತತ್ತ್ವಂ ವಿಧಿಜ್ಞಃ
ತ್ವಮಿತಿ ತವ ವಿಧೀನಾಮುನ್ನಯಜ್ಞಾನಮಸ್ತಿ ।
ವಿಧಿಜನನಸಮರ್ಥಸ್ತ್ವಂ ತತಸ್ತಂ ಪ್ರಮಾಣಂ
ವದತಿ ವಿಧಿವಿಶೇಷಜ್ಞಾನಬೋಧೇನ ಕೋಽಪಿ ॥೧೨॥

ಬೋಧಿಸುತ್ತದೆ. ನಿನ್ನ ವಚನಗಳಲ್ಲಿ ಪ್ರಾಮಾಣಿಕತೆಯೆಂಬುದು, ತದರ್ಥ ಬೋಧಕವಾದ ಪದಗಳ ಮೂಲಕವೇ ತಿಳಿದುಬರುವುದು. ನಿನ್ನ ವಾಕ್ಯಗಳು ಶ್ರೇಷ್ಠ ಪ್ರಮಾಣಗಳಿಗೆಲ್ಲಾ ಶ್ರೇಷ್ಠತಮವಾದುದು. ಅದೇನೂ ಆಶ್ಚರ್ಯವಲ್ಲ. ॥೧೦॥

ಯಜ್ಞಯಾಗಾದಿರೂಪವಾದ ಅಲೌಕಿಕಾರ್ಥವನ್ನು ಬೋಧಿಸುವ ಪ್ರಮಾಣ ವಚನಗಳು ಸರ್ವಥಾ ಪ್ರಾಮಾಣಿಕಗಳಾಗಿಯೇ ಇರುವುವು. ಏಕೆಂದರೆ "ಯಜೇತ ಸ್ವರ್ಗಕಾಮಃ" ಮುಂತಾದ ವಾಕ್ಯಗಳ ಅರ್ಥವನ್ನು ತಿಳಿದೊಡನೆಯೇ, ಪುರುಷನು ಕರ್ಮದಲ್ಲಿ ಪ್ರವರ್ತಿಸುವನು. ಆದುದರಿಂದ ಆ ವಾಕ್ಯದಲ್ಲಿ ಪ್ರಾಮಾಣ್ಯವು ಇದ್ದೇ ಇರುವುದೆಂದು ಹೇಳಲೇಬೇಕು. ಹಾಗಿಲ್ಲದಿದ್ದರೆ ವಿಧಿಯು ಅನೃತಾರ್ಥವನ್ನು ಬೋಧಿಸುವುದೆಂದು ಹೇಳಬೇಕಾಗುವುದು. ಆಗ ಪುರುಷನಿಗೆ ಕರ್ಮಾನುಷ್ಠಾನ ದಲ್ಲಿ ಪ್ರವೃತ್ತಿಯೇ ಉಂಟಾಗಲಾರದು. ಇದರಿಂದ, ಯಥಾರ್ಥವನ್ನು ಬೋಧಿಸುವ ವಿಧಿಯಿಂದ ಕೂಡಿರುವ ವೇದವಾಕ್ಯಗಳು ಪ್ರಾಮಾಣಿಕವಾದುವುಗಳೆಂದು ತಿಳಿದಿದ್ದೇನೆ. ॥೧೧॥

ಸೃಷ್ಟಿಕರ್ತನಾದ ಬ್ರಹ್ಮನೂ ಸಹ ವಿಧಿವಾಕ್ಯದ ಅರ್ಥವನ್ನು ತಿಳಿಯಲಾರದವನಾಗಿರುವನು. ಜಗನ್ನಾಥನಾಥನೂ ಸರ್ವಜ್ಞನೂ ಆದ ನೀನೇ, ವಿಧಿಯ ಪೂರ್ಣಾರ್ಥವನ್ನು ತಿಳಿದಿರುವವನು. ವಿಧಿ (ಬ್ರಹ್ಮ)ಯನ್ನು ಸೃಷ್ಟಿಸಿರುವವನೂ

ಅತೋ ಮಹಾದೇವವಚಃ ಪ್ರಮಾಣಂ
ತದೇವ ವೇದೋಽಪಿ ತದೇವ ಶಾಸ್ತ್ರಂ ।
ವಿಶ್ವಾಸಬೀಜಂ ಚ ತದೇವ ಶಂಭೋ
ನ ತತ್ರ ವಿಶ್ವಾಸವಿಪರ್ಯಯೋ ಮೇ ॥೧೩॥

ವಿದ್ಯಾನಾಮಧಿಪಂ ಸಮಸ್ತ ಜಗತಾಂ ಕರ್ತಾರಮಿತ್ಯಾದರಾತ್
ಭರ್ತಾರಂ ಸುಖಸಂಪದಾಮಪಿ ಸದಾ ದಾತಾರಮಾರಾತ್ಪರಂ ।
ಮತ್ವಾ ತ್ವಾಂ ಶರಣಂ ಗತಾಸ್ಮಿ ಭಗವನ್ ಭಾಲೇಕ್ಷಣಾಸುಕ್ಷಣಂ
ಪ್ರತ್ಯಕ್ಷೇಣ ಭವಂತಮೇವ ಶರಣಂ ಪ್ರಾಪ್ತಾಃ ಕೃತಾರ್ಥಾಃ ಪರಂ ॥೧೪॥

ಯತ್ಪಾದಾಂಬುಜಪೂಜಯಾ ಹರಿರಭೂದರ್ಚ್ಯೋ ಯದಂಘ್ರ್ಯರ್ಚನಾತ್।
ಅರ್ಚ್ಯಾಭೂತ್ಕಮಲಾ ವಿಧಿಪ್ರಭೃತಯೋಽಪ್ಯರ್ಚ್ಯಾ ಯದಂಘ್ರ್ಯರ್ಚನಾತ್
ತಂ ಕಾಮಾಂತಕಮಂತಕಾಂತಕಮುಮಾಕಾಂತಂ ಮುಹುಃ ಸಂತತಂ
ಸಂತಃ ಸ್ವಾಂತಸರೋಜರಾಜಚರಣಾಂಭೋಜಂ ಭಜಂತ್ಯಾದರಾತ್ ॥೧೫॥

ನೀನೇ. ಆದುದರಿಂದ ನೀನು ವಿಧಿಯಿಂದ ಕೂಡಿರುವ ವೇದಗಳ ಅರ್ಥವನ್ನು ಚೆನ್ನಾಗಿ ಅರಿತಿರುವೆ. ವಿಧ್ಯರ್ಥವನ್ನು ಅರಿತಿರುವ ಆಸ್ತಿಕ ಪುರುಷನು ವೇದವಾಕ್ಯಗಳ ಪ್ರಾಮಾಣ್ಯವನ್ನು ನಂಬಿ ನಿನ್ನನ್ನು ಆರಾಧಿಸುವನು. ॥೧೨॥

ಆದುದರಿಂದ, ಜಗತ್ಪ್ರಭುವಾದ ಈಶ್ವರನ ವಚನವು ಪ್ರಾಮಾಣಿಕವಾದುದು. ಈಶ್ವರನ ವಚನವೇ ವೇದರೂಪದಿಂದ ಇರುವುದು. ಅದರ ವಿವರಣೆಯೇ ಶಾಸ್ತ್ರವು. ಶಿವನೇ, ನಿನ್ನ ವಚನವು ದೃಢವಾದ ವಿಜ್ಞಾನವನ್ನುಂಟುಮಾಡುವುದರಿಂದ ಅದರಲ್ಲಿ ನನಗೆ ಎಂದಿಗೂ ಅವಿಶ್ವಾಸವು ಉಂಟಾಗಲಾರದು. ॥೧೩॥

ತ್ರಿನಯನನೇ! ನೀನು ಸಕಲ ವಿದ್ಯೆಗಳಿಗೆ ಅಧಿಪತಿಯೂ ಜಗತ್ಕಾರಣನೂ ಸುಖಸಂಪತ್ತುಗಳನ್ನು ಕೊಡುವವನೂ ಆಗಿರುವೆ. ಹೀಗೆಂದು ಭಾವಿಸಿ ನಿನ್ನನ್ನೇ ಮರೆಹೊಕ್ಕಿರುವೆನು. ಓ ಪ್ರಭುವೇ, ನಿನಗೆ ಶರಣಾಗತರಾಗುವವರು ಸುಲಭವಾಗಿ ಸದ್ಗತಿಯನ್ನು ಹೊಂದುವರಲ್ಲವೇ ? ನಿನ್ನ ಅನುಗ್ರಹವೀಕ್ಷಣೆಯಿಂದಲೇ ಸಮಸ್ತವೂ ಕೃತಾರ್ಥವೆನಿಸುವುದು. ॥೧೪॥

ನಿನ್ನ ಪಾದಪದ್ಮವನ್ನು ಆರಾಧಿಸಿ, ವಿಷ್ಣು, ಲಕ್ಷ್ಮಿ, ಬ್ರಹ್ಮ, ಮುಂತಾದ ದೇವತೆಗಳು, ಪೂಜ್ಯರೆಂದೆನಿಸಿಕೊಂಡಿರುವರು. ಆದುದರಿಂದಲೇ ಆಸ್ತಿಕರಾದ ಸತ್ಪು

ವಾಣೀಂ ತಾಂ ಗಿರಿರಾಜರಾಜತನಯಾವಕ್ತ್ರಾಂಬುಜಾನ್ನಿರ್ಗತಾಂ
ಪೀಯೂಷಾರ್ಣವಪೂರಪೂರಿತಮಹಾಕಲ್ಲೋಲಜಾಲೋಜ್ಜ್ವಲಾಂ ।
ಶ್ರುತ್ವಾ ಸ್ನೇಹಪುರಃಸರಂ ಗಿರಿಸುತಾಹಸ್ತಂ ಸ್ಪೃಶನ್ನಾದರಾತ್
ಸಸ್ಮೇರಾನನಕಾಂತಿಪೂರಕಲಿತಾಮಾಹಾಂಬಿಕಾಂ ಶಂಕರಃ ॥೧೬॥

॥ ಶ್ರೀ ಶಂಕರ ಉವಾಚ ॥

ಯದ್ಗೋಪನಾರ್ಹಂ ತದುಮೇ ಕದಾಪಿ
ನೂನಂ ನ ವಕ್ತವ್ಯಮಿತಿ ಸ್ಮರಾಮಿ ।
ಗೋಪ್ಯೇತ್ವಮುಪ್ಯಸ್ತಿ ವಿಶೇಷತಸ್ತು
ಸಂಗೋಪನೀಯೇಷು ನ ಸಂಶಯೋಽತ್ರ ॥೧೭॥

ಯದ್ಯತ್ತಾವದುಮೇ ಭವಿಷ್ಯತಿ ಮಯಾ ಸಂಗೋಪನೀಯಂ ಧನಂ
ತತ್ಸರ್ವಂ ವಿನಿವೇದನಾರ್ಹಮಿತಿ ತೇ ಬುದ್ಧಿಃ ಕಥಂ ಜಾಯತೇ ।
ನಾರೀಣಾಮಪಿ ಗೋಪನಾರ್ಹಮತಿರಪ್ಯಾಚ್ಛಾದನೀಯಾ ತತಃ
ಯದ್ವಸ್ತು ಪ್ರಕಟಂ ತದೇವ ಬಹುಧಾ ಸಂದರ್ಶನಾರ್ಹಂ ಪ್ರಿಯೇ ॥೧೮॥

ರುಷರು ಉಮಾರಮಣನೂ ಮೃತ್ಯುಂಜಯನೂ ಆದ ನಿನ್ನ ಪಾದಕಮಲವನ್ನು ತಮ್ಮ ಹೃದಯದಲ್ಲಿರಿಸಿ ಧ್ಯಾನಿಸುವರು. ॥೧೫॥

ಗಿರಿಜೆಯ ಕರ್ಣ ಮಧುರವಾದ ಆ ವಚನವನ್ನು ಕೇಳಿ, ಸಂತೋಷಭರಿತನಾದ ಪರಮೇಶ್ವರನು, ಪ್ರೇಯಸಿಯ ಕೋಮಲವಾದ ಹಸ್ತವನ್ನು ಪ್ರೀತಿಯಿಂದ ಸ್ಪರ್ಶಿಸುತ್ತಾ, ಹಸನ್ಮುಖಿಯಾದ ದೇವಿಯನ್ನು ಕುರಿತು ಹೀಗೆಂದನು. ॥೧೬॥

ಎಲೌ, ಗಿರಿಜೆಯೇ! ಯಾವ ವಿಷಯವು, ಗುಪ್ತವಾಗಿರಲು ಯೋಗ್ಯವಾದುದೋ, ಆ ವಿಷಯವನ್ನು ಪ್ರಕಟಪಡಿಸುವುದು ಉಚಿತವಲ್ಲ. ನೀನು ಕೇಳಿದ ಆ ವಿಷಯವು ಗೋಪ್ಯವಾದ ವಸ್ತುಗಳಲ್ಲೆಲ್ಲಾ ಅತ್ಯಂತ ಗೋಪ್ಯವಾಗಿರುವುದು. ಇದರಲ್ಲಿ ಸಂಶಯವಿಲ್ಲ. ಗುಟ್ಟಾದ ವಿಷಯಗಳನ್ನೂ ಗೋಪ್ಯದಲ್ಲಿಡುವುದು ಉಚಿತವಲ್ಲವೆ? ॥೧೭॥

ಎಲೌ, ಪ್ರಿಯತಮೆಯೇ! ಯಾವ ವಸ್ತುವು ಅತ್ಯಂತಗೋಪ್ಯವಾಗಿರಬೇಕೆಂದು ನಾನು ತಿಳಿದಿರುವೆನೋ ಆ ವಸ್ತುವನ್ನು ಪ್ರಕಟಪಡಿಸಬೇಕೆಂದು ನೀನು

ಸಂಗೋಪಿತಂ ವಸ್ತು ಖಲು ಪ್ರಸಿದ್ಧಂ
ಕರೋತಿ ನಾರೀ ಪರಮಾದರೇಣ ।
[1]ಪ್ರಚ್ಛಾಗ್ರವಿಷ್ಟಸ್ಯ ಗೃಹೇ ವಿಶೇಷಾತ್
ಪ್ರಲೋಭಿತಾ ಲೋಭರತಾ ಯತಃ ಸಾ ॥೧೯॥

ಸಾ ಗೌರೀ ಗರಳಾಕಾರಾಂ ಶ್ರುತ್ವಾ ಹಾರಗಿರಂ ಪರಾ ।
ಉವಾಚೋದ್ವಿಗ್ನಹೃದಯಾ ಲಗ್ನಾ ಭುಗ್ನಾಪಿ ತತ್ಪದೇ ॥೨೦॥

॥ ಗೌರ್ಯುವಾಚ ॥

ಅವಿಶ್ವಾಸಬೀಜಂ ಮಯಿ ಶ್ರೀಮಹೇಶ
ತ್ವಯಾ ಕ್ವಾಪಿ ದೃಷ್ಟಂ ನ ಸರ್ವಾತ್ಮನಾಪಿ ।
ಮಯಾ ಗೋಪನಾರ್ಹಂ ಪ್ರಸಿದ್ಧಂ ಕೃತಂ ಕಿಂ
ಮಹಾರ್ಹೇಷು ವಸ್ತುಷ್ವಪಾರೇಷು ಕೇಷು ॥೨೧॥

ಹೇಳುವೆಯಲ್ಲ! ಇದು ನಿನಗೆ ಉಚಿತವೆನಿಸುವುದೇ ? ಅತಿಗೋಪ್ಯವಾದ ಆ ವಸ್ತುವನ್ನು ಸ್ತ್ರೀಯರಿಗೆ ಎಂದಿಗೂ ತಿಳಿಯಗೊಡಬಾರದು. ಯಾವ ವಸ್ತುವು ಪ್ರಕಟಪಡಿಸಲು ಯೋಗ್ಯವಾಗಿರುವುದೋ, ಅದನ್ನೇ ಪ್ರಕಟಗೊಳಿಸುವುದು ಉಚಿತವಾಗಿರುವುದಲ್ಲವೇ ? ॥೧೮॥

ಮುಖ್ಯವಾಗಿ ಗುಪ್ತವಾಗಿರುವ ವಿಷಯವನ್ನು ಬಹಿರಂಗಪಡಿಸುವುದು ಸ್ತ್ರೀಯರ ಸ್ವಭಾವವಾಗಿರುವುದು. ಅಕ್ಕಪಕ್ಕದವರು ಬಂದು ಆಡುವ ಅವರ ಮಧುರವಾದ ಮಾತಿನಿಂದ, ಸ್ತ್ರೀಯರು ಮರುಳಾಗುವರು. ಆಗ ಅವರು ತನ್ನ ಸಖಿಯರ ಮಧುರವಾದ ಆ ಮಾತಿಗೆ ಮನಸೋತು ಗೋಪ್ಯವಾದ ವಿಷಯವನ್ನೂ ಬಹಿರಂಗಪಡಿಸುವರು. ಇದು ಅವರ ಸ್ವಭಾವ" ॥೧೯॥

ವಿಷದಂತೆ ಕ್ರೂರವಾದ ಶಿವನ ಆ ಮಾತನ್ನು ಕೇಳಿ, ಪಾರ್ವತಿಯು ದುಃಖಿತಳಾಗಿ ಅವನ ಪಾದಗಳನ್ನು ಹಿಡಿದು ನಮಸ್ಕರಿಸುತ್ತಾ, ॥೨೦॥

ಗೌರಿಯು ಪ್ರಿಯತಮನಾದ ಪರಶಿವನನ್ನು ಕುರಿತು ಹೀಗೆಂದಳು— "ಮಹೇಶ್ವರನೇ! ನಾನು ನಂಬಿಕೆಗೆ ಅರ್ಹಳಲ್ಲವೆಂಬುದು ಈ ಹಿಂದೆ ಎಂದಾದರೂ

---

1 ಪೃಷ್ಟ್ವಾ-ಅಗ್ರವಿಷ್ಟಸ್ಯ ಎಂಬ ಪಾಠಸಾಧುವು

ನಾರೀಸಾಮಾನ್ಯಬುದ್ಧ್ಯಾ ತವ ಯದಿ ನ ದಯಾ ಮಯ್ಯುಮಾಕಾಂತ ಸಾ ತೇ
ಕ್ವತ್ಯಾ ನಾರೀಮತಿರ್ವಾ ಕಥಮನಸುಮತಿರ್ಮಯ್ಯಪಿ ಜ್ಞಾನರೂಪಾಂ ।
ವೇದಾಸ್ತಾವದ್ವದಂತೀತ್ಯಪಿ ವಿವಿಧಜಗಜ್ಜಾಲನಿರ್ಮಾಣಹೇತುಂ
ಮಾಮಾಹುರ್ವೇದವಾದಾಃ ಕತಿಚನ ತಪಸಾ ಪೂತಚಿತ್ತಾಸ್ತು ಸಿದ್ಧಾಃ ॥೨೨॥

ಮಾಮಾರಾಧ್ಯಾಮಾದಿವಿದ್ಯಾಂ ವದಂತಃ
ಮುಕ್ತಾಸ್ತಾವತ್ತ್ವತ್ಪ್ರಸಾದೇನ ಶಂಭೋ ।
ತಸ್ಮಾದಾರ್ಯಾಂ ಮಾಂ ವಿದಿತ್ವಾಪಿ ಭಾಗ್ಯಂ
ಯದ್ಯದ್ರಮ್ಯಂ ತದ್ರಹಸ್ಯಂ ವದಾಶು ॥೨೩॥

ನಿನ್ನ ಅವಗಾಹನೆಗೆ ಬಂದಿರುವುದೇ? ಎಂದಾದರೂ ನಾನು ಗುಪ್ತವಾದ ಒಂದು ಅಮೂಲ್ಯವಸ್ತುವನ್ನು ಪ್ರಕಟಪಡಿಸಿರುವೆನೇ? ನೀನು ಅದನ್ನು ಅರಿಯಲಾರೆಯಾ? ||೨೧||

ಪ್ರಭುವೇ! ನನ್ನನ್ನು ಸಾಮಾನ್ಯಸ್ತ್ರೀ ವರ್ಗಕ್ಕೆ ಸೇರಿದವಳೆಂದು ತಿಳಿದು ನೀನು ಈಗ ನನ್ನಲ್ಲಿ ದಯದೋರದೆ ಇರುವವನಾದರೆ, ಅದು ನಿನಗೆ ಶೋಭಿಸಲಾರದು. ನಾನು ಓರ್ವ ಸಾಮಾನ್ಯಳಾದ ಸ್ತ್ರೀಯಾಗಿರುವೆನೆಂದು ನೀನು, ಯಾವ ವಿಧದಿಂದ ಹೇಳುವೆ? ವೇದಗಳು, ನನ್ನನ್ನು ಜ್ಞಾನಸ್ವರೂಪಿಣಿಯೆಂದೂ, ಆದಿಶಕ್ತಿಯೆಂದೂ, ಜಗತ್ಸೃಷ್ಟಿಗೆ ಕಾರಣಳೆಂದೂ ಸಾರಿಸಾರಿ ಹೇಳುತ್ತವೆ. ಇದಲ್ಲದೆ ದೀರ್ಘಕಾಲದ ವರೆಗೆ ತಪಸ್ಸನ್ನು ಆಚರಿಸಿ ಅದರಿಂದ ವಿಶುದ್ಧವಾದ ಜ್ಞಾನವನ್ನು ಸಂಪಾದಿಸಿದ ಜ್ಞಾನಿಗಳೂ ಸಹ ನನ್ನನ್ನು ಆದಿಶಕ್ತಿಯೆಂದು ತಿಳಿದಿರುವರು. ಹೀಗಿರುವಾಗ ನನ್ನಲ್ಲಿ ಸಾಮಾನ್ಯ ಸ್ತ್ರೀಯಾಗಿರುವಳೆಂಬ ಭಾವನೆಯನ್ನು ತಾಳುವುದು ಉಚಿತವೇ? ||೨೨||

ಅನೇಕ ಭಕ್ತರು, ನಿನ್ನ ಅನುಗ್ರಹದಿಂದ ಆದಿಶಕ್ತಿಸ್ವರೂಪಿಣಿಯಾದ ನನ್ನನ್ನು ಆರಾಧಿಸಿ, ಮೋಕ್ಷವನ್ನು ಹೊಂದಿರುವರು. ಆದುದರಿಂದ ಸರ್ವಮಂಗಳೆಯಾದ ನನ್ನನ್ನು ಆದಿಶಕ್ತಿಯನ್ನಾಗಿ ತಿಳಿದೂ ಪರಮರಹಸ್ಯವಾದ ಆ ವಿಷಯವನ್ನು ನನಗೆ ಉಪದೇಶಿಸುವುದಿಲ್ಲವೆ? ||೨೩||

ಯದ್ಯದ್ರಹಸ್ಯಂ ರಹಸಿ ಸ್ವಭಾವಾತ್
ತತ್ತತ್ಪ್ರಕಾಶಾರ್ಹಮುಮಾಸಹಾಯ ।
ಕಲತ್ರವರ್ಗಸ್ಯ ರಹಸ್ಯವಾರ್ತಾ
ತತಃ ಕಿಮನ್ಯದ್ವದ ಮೇ ರಹಸ್ಯಂ ॥೨೪॥

ಯದ್ಗೋಪನೀಯಂ ಚ ರಹಸ್ಯಮಾಸೀತ್
ತದೇವ ತಾವದ್ರಹಸಿ ಪ್ರಸಿದ್ಧಂ ।
ಭರ್ತುಃ ಕಲತ್ರಸ್ಯ ಚ ತತ್ಕಲತ್ರಂ
ರಹಸ್ಯಬೋಧೇನ ವಿನಾ ಕಥಂ ವಾ ॥೨೫॥

ದದಾತಿ ಗೃಹ್ಣಾತಿ ಚ ವಸ್ತು ರಮ್ಯಂ
ಸಂಗೋಪನೀಯಂ ಚ ರಹಸ್ಯಮಾಸೀತ್
ಪೃಚ್ಛತ್ಯಯಂ ಭೋಜಯತೇ ಚ ಭುಂಕ್ತೇ
ಮಿತ್ರತ್ವಮೇತೈಃ ಖಲು ನಿಶ್ಚಿತಂ ಚ ॥೨೬॥

ಆದುದರಿಂದ ಸಾಭಾವಿಕವಾದ ರಹಸ್ಯ ವಿಷಯಗಳನ್ನೆಲ್ಲಾ ನನ್ನಲ್ಲಿ ಪ್ರಕಟಪಡಿಸುವುದು, ಯೋಗ್ಯವಾಗಿಯೇ ಇರುವುದು. ತನ್ನ ಪ್ರಿಯತಮೆಯರೊಂದಿಗೆ ರಹಸ್ಯ ವಿಷಯವನ್ನು ಹೇಳುವುದು ಎಂದಿಗೂ ಅನುಚಿತವಾಗಲಾರದು. ಆದುದರಿಂದ ನಿನ್ನ ಅರ್ಧಾಂಗಿಯಾದ ನನಗೆ ಆದನ್ನು ತಿಳಿಯಪಡಿಸು. ॥೨೪॥

ಪತಿಪತ್ನಿಯರ ಪ್ರೇಮಪೂರಿತವಾದ ಗುಪ್ತಸಂಭಾಷಣೆಯು ಬಹಿರಂಗಪಡಿಸಲು ಆಯೋಗ್ಯವಾದುದು. ಆದರೂ ಅತಿಗೋಪ್ಯವಾದ ವಿಷಯವನ್ನು ಪತಿಪತ್ನಿಯರು ಮಾತ್ರ ಅರಿತಿರುವುದಿಲ್ಲವೇ ? ಆ ರಹಸ್ಯವನ್ನು ತನ್ನ ಪ್ರೇಯಸಿಯಲ್ಲಿ ಬಹಿರಂಗಪಡಿಸದಿರಲು ಸಾಧ್ಯವೇ ? ॥೨೫॥

ಲೋಕದಲ್ಲಿ ಮಿತ್ರನಾದವನು ತನ್ನ ಗೆಳೆಯನಿಗೆ ರಹಸ್ಯವಾದ ವಸ್ತುವನ್ನು ಕೊಡುವನು. ಮಿತ್ರನಾದವನಲ್ಲಿ ರಸಹ್ಯವಸ್ತುವಿದ್ದರೆ ಅದನ್ನು ಅವನಿಂದ ತೆಗೆದುಕೊಳ್ಳುವನು. ಯಾವ ಗಾಢವಾದ ವಿಷಯವನ್ನಾದರೂ ತನ್ನ ಗೆಳೆಯನೊಂದಿಗೆ ಯೋಚಿಸುವನು. ಗೆಳೆಯನು ಹಸಿವಿನಿಂದ ಪೀಡಿತನಾಗಿದ್ದರೆ ಅವನನ್ನು ಊಟಮಾಡಿಸುವನು. ತಾನೂ ಅವನೊಂದಿಗೆ ಊಟಮಾಡುವನು. ಇವು ಮಿತ್ರನ ಅಸಾಧಾರಣವಾದಲಕ್ಷಣಗಳು. ನಮ್ಮಿಬ್ಬರಲ್ಲಿ ಈ ಲಕ್ಷಣಗಳು ಸ್ಪಷ್ಟವಾಗಿರುವುದರಿಂದ ನಾವು ಪರ

ಮಯಿ ಚೇದಕೃಪಾ ತವಾಧುನಾ
ಮಮ ತಾವನ್ನಿರತಿರ್ಭವೇ ತ್ವಯಿ ।
ಅನಪಾಯರತಿರ್ಮಮಾಸ್ತ್ಯತಃ
ಕರುಣಾ ಮಯ್ಯನಪಾಯಿನೀ ತವಾಸ್ತು ॥೨೭॥

ತ್ವಯಾ ಕಥಂ ವಾ ನಿಧಯೋಽಪಿ ದತ್ತಾಃ
ಪ್ರಸಿದ್ಧರೂಪಾಶ್ಚ ನ ತೇ ಯತಸ್ತೇ ।
ಸಂಗೋಪನಾರ್ಹಾಃ ಖಲು ರತ್ನಜಾತಂ
ದತ್ತಂ ಪುರಾ ಮಹ್ಯಮಮೂಲ್ಯಮೇವ ॥೨೮॥

ಮಣೀನಾಂ ಚ ಪ್ರದತ್ತಾನಾಂ ಗಣನಾ ನ ಗಣಾಧಿಪ ।
ಅಮೂಲ್ಯಾನಿ ದುಕೂಲಾನಿ ದತ್ತಾನಿ ವಿವಿಧಾನಿ ಮೇ ॥೨೯॥

ಸ್ಪರ ಮಿತ್ರರಾಗಿರುವೆವು. ಆದುದರಿಂದ ನೀನು ನನಗೆ ಆ ರಹಸ್ಯವನ್ನು ತಿಳಿಸುವುದರಲ್ಲೇಕೆ ಸಂಕೋಚಪಡುವೆ? ॥೨೬॥

ನೀನು ಈಗ ನನ್ನಲ್ಲಿ ದಯೆದೋರುವುದಿಲ್ಲವಾದರೆ, ನನಗೆ ನಿನ್ನಲ್ಲಿ ಪ್ರೀತಿಯುಂಟಾಗಲಾರದು. ಆದರೆ ನನಗೆ ನಿನ್ನಲ್ಲಿ ನಿರತಿಶಯವಾದ ಪ್ರೀತಿಯಿರುವುದಾದುದರಿಂದ, ನೀನೂ ನನ್ನಲ್ಲಿ ಅಕೃತ್ರಿಮವಾದ ದಯೆದೋರಲೇಬೇಕು. ॥೨೭॥

ಈ ಹಿಂದೆ ನೀನು ನನಗೆ ಅಣಿಮಾದ್ಯಷ್ಟೈಶ್ವರ್ಯರೂಪವಾದ ನಿಧಿಗಳನ್ನು ಕೊಟ್ಟಿರುವೆ. ಆ ನಿಧಿಗಳು ಗೋಪ್ಯವಾದವುಗಳಲ್ಲವೇ? ಆದರೂ ನೀನು ನನ್ನಲ್ಲಿ ದಯೆದೋರಿ ಆ ನಿಧಿಗಳನ್ನು ನನಗೆ ಕೊಟ್ಟಿರುವೆ. ಇದಲ್ಲದೇ, ನನಗೆ ಅಮೂಲ್ಯವಾದ ರತ್ನಗಳನ್ನೂ ನೀನು ಅನುಗ್ರಹಿಸಿರುವೆ. ॥೨೮॥

ಸಕಲ ಗಣರಾಜನೇ, ಈ ಹಿಂದೆ ನೀನು ನನಗೆ ಕೊಟ್ಟಿರುವ ರತ್ನ, ವಜ್ರ ವೈಡೂರ್ಯವೇ ಮುಂತಾದ ಒಡವೆಗಳು ಅಸಂಖ್ಯಾಕವಾಗಿರುವುವು. ಮತ್ತು ಅಮೂಲ್ಯವಾದ ಅನೇಕ ಪಟ್ಟವಸ್ತ್ರಗಳನ್ನೂ ಕೊಟ್ಟಿರುವೆ. ॥೨೯॥

ಅಪಾರರತ್ನಾಭರಣಾನಿ ದತ್ತಾನ್ಯ
ದ್ಯೈವ ತೇಷಾಂ ತು ನ ಮೂಲ್ಯಮಸ್ತಿ ।
ಶಯ್ಯಾಪಿ ದತ್ತಾ ತವ ಚಂದ್ರಮೌಳೇ
ತ್ವಯಾ ಸದಾ ಮಹ್ಯಮನಾಮಯೇನ ॥೩೦॥

ಅಂಕಂ ದತ್ತಂ ನಿಷ್ಕಲಂಕಂ ತ್ವಯಾ ಮೇ
ಶಂಕಾತಂಕಾಶೂನ್ಯಮತ್ರ ಸ್ಥಿತಿರ್ಮೇ ।
ದೇಹಸ್ಯಾರ್ಧಂ ದತ್ತಮರ್ಧೇಂದುಮೌಳೇ
ದಾತಾ ಕೋ ವಾ ತ್ವತ್ಸಮೋ ಭೂತಲೇಽಪಿ ॥೩೧॥

ಕಲಂಕೀ ನ ಮೌಳೌ ಶಶಾಂಕೋ ಧೃತಃ ಕಿಂ
ಸದರ್ಪೋಽಪಿ ಸರ್ಪೇಶ್ವರಃ ಕಂಠಭಾಗೇ ।
ವಿಷಂ ಕಾಲಕೂಟಾಖ್ಯಮಪ್ಯಸ್ತಿ ಕಂಠೇ
ತತೋ ನೀಲಕಂಠತ್ವಬುದ್ಧಿಸ್ತ್ವಯೀಶ ॥೩೨॥

ಓ ಚಂದ್ರಶೇಖರನೇ! ನೀನು ನನಗೆ ದಯಪಾಲಿಸಿರುವ ರತ್ನಾಭರಣಗಳ ಬೆಲೆಯನ್ನು ನಿರ್ಧರಿಸುವುದೇ ಅಶಕ್ಯವಾಗಿರುವುದು. ಇದಲ್ಲದೇ ನಿತ್ಯತೃಪ್ತನಾದ ನೀನು ನಿನ್ನ ಶಯನಾರ್ಧವನ್ನೇ ನನಗೆ ಕೊಟ್ಟಿರುವೆ. ॥೩೦॥

ಕುಳಿತುಕೊಳ್ಳಲು ನಿನ್ನ ಶ್ರೇಷ್ಠವಾದ ತೊಡೆಯನ್ನೇ ನನಗೆ ದಯಪಾಲಿಸಿರುವೆ. ನಾನು ಅದರ ಮೇಲೆ ನಿರಾತಂಕವಾಗಿ ಕುಳಿತುಕೊಳ್ಳುವೆನು. ಇಷ್ಟೇಕೆ! ನೀನು ನಿನ್ನ ದೇಹದ ಅರ್ಧಭಾಗವನ್ನೇ ನನಗೋಸ್ಕರ ದಾನಮಾಡಿರುವೆ. ನಿನಗೆ ಸದೃಶನಾದ ತ್ಯಾಗಿಯು ಈ ಲೋಕದಲ್ಲಿ ಯಾವನಾದರೂ ಇರುವನೇ? ॥೩೧॥

ಸ್ವಾಮಿಯೇ! ಚಂದ್ರನು ಶಶವೆಂಬ ಲಾಂಛನವನ್ನು ಧರಿಸಿ, ಅದರಿಂದ ಶಶಧರನೆಂಬ ಕಳಂಕವನ್ನು ಹೊಂದಿದ್ದರೂ ಸಹ ಕರುಣಾಸಾಗರನಾದ ನೀನೇ ಆ ಚಂದ್ರನಿಗೆ ನಿನ್ನ ಶಿರಸ್ಸಿನಲ್ಲಿ ಆಶ್ರಯವನ್ನು ನೀಡಿಲ್ಲವೇ? ಇದಲ್ಲದೇ ಕಂಠದಲ್ಲಿ ಮದಿಸಿದ ಸರ್ಪವನ್ನು ದಯೆಯಿಂದ ಧರಿಸಿರುವೆ. ನಿನ್ನ ಕಂಠದಲ್ಲಿ ಕಾಲಕೂಟವೆಂಬ ಘೋರವಾದ ವಿಷವೂ ಇರುವುದು. ಅದರಿಂದಲೇ "ನೀಲಕಂಠ" ಎಂಬ ಅನ್ವರ್ಥಸಂಜ್ಞೆಯು ಬಂದಿರುವುದು. ಇಂತಹ ವಸ್ತುಗಳಿಗೆ ಆಶ್ರಯವಿತ್ತ ನಿನಗೆ ನಾನು ದಯಾಪಾತ್ರಳಲ್ಲವೇ? ॥೩೨॥

ಯದ್ಯಪ್ಯಸ್ಮಿ ಮಹಾಪರಾಧಸಹಿತಾ ಕಾ ತಾವತಾ ಮೇ ಭಯಂ
ತ್ವತ್ಪಾದಾಂಬುಜರೇಣುಭಿಃ ಸಹ ಮಯಾ ಸ್ಥೇಯಂ ಮಯಾ ತೇ ಪ್ರಭೋ।
ಶಂಭೋ ಮಯ್ಯನಪಾಯಿನೀ ತವ ದಯಾ ಸ್ಯಾತ್ತಾವತಾ ಕಾ ಕ್ಷತಿಃ
ಮೇಘೋಽಪ್ಯೂಷರಸಾಗರಾದಿಷು ಸಮಾಂ ವೃತ್ತಿಂ ಕರೋತ್ಯಂಭಸಾ ॥೩೩॥

ಅಸ್ತು ಪ್ರಸ್ತುತವಸ್ತುವರ್ಣನಮುಮಾಕಾಂತಾಧುನಾ ತದ್ಯದಿ
ಶ್ರೋತವ್ಯಂ ಪರಮೌಷಧಂ ಜನಿಜರಾಮೃತ್ಯ್ವಾಮಯಾಯಾಧುನಾ ।
ತರ್ಹಿ ಸ್ಯಾದಮೃತತ್ವಮೇವ ಭವಧೀರ್ನಾಶಂ ಪ್ರಯಾತ್ಯನ್ವಹಂ
ತತ್ಪಾನಾತ್ಪೃಥುಕೌ ಚ ಶೋಕರಹಿತೌ ಸ್ಯಾತಾಮುಮಾಕಾಂತ ಮೇ ॥೩೪॥

॥ ಶ್ರೀ ಶಂಕರ ಉವಾಚ ॥

ಶಿವಪದಮಿದಂ ಶಿವದಮಿತ್ಯವೈಮಿ ಪ್ರಿಯೇ
ಪ್ರಿಯಂ ಮಮ ಶಿವವ್ರತೇ ತ್ವಯಿ ಯಥಾನುರಾಗೋ ಮಮ ।

ಒಂದುವೇಳೆ ನಾನು ಅಪರಾಧಿನಿಯಾಗಿದ್ದರೂ ಸದಾ ನಿನ್ನ ಪಾದಕಮಲಗಳನ್ನೇ ಧ್ಯಾನಿಸುವ ನನಗೆ ಭಯವೆಲ್ಲಿಂದಬಂತು? ನನ್ನಲ್ಲಿ ನಿನಗೆ ಗಾಢವಾದ ದಯೆಯಿರುವುದು. ಆದರೆ ಅದು ಅಷ್ಟೊಂದು ಆಶ್ಚರ್ಯಕರವಾಗುವುದಿಲ್ಲ. ಅದು ಹೇಗೆಂದರೆ, ನಿಷ್ಪಕ್ಷಪಾತಿಯಾದ ಮೇಘವು ಗಿರಿ, ನದಿ, ಸಾಗರ, ಬಂಜರು ಭೂಮಿ ಎಂಬ ಭಾವನೆಯಿಲ್ಲದೇ, ಸಕಲ ಪ್ರದೇಶಗಳಲ್ಲಿಯೂ ಒಂದೇ ವಿಧವಾಗಿ ನೀರನ್ನು ಸುರಿಸುವುದು. ಅದರಂತೆ, ದೀನವತ್ಸಲನಾದ ನೀನೂ ಸಹ ನಿನ್ನ ಭಕ್ತರಲ್ಲಿ ದಯೆದೋರುವಂತೆ ನನ್ನಲ್ಲಿಯೂ ದಯೆದೋರಿರುವೆ. ಇದು ಆಶ್ಚರ್ಯವೇ? ॥೩೩॥

ಪ್ರಸಂಗವಶದಿಂದ ಬಂದಿರುವ ಈ ವರ್ಣನೆಯು ಸಾಕು. ಶಿವಕಥಾಮೃತವೆಂಬ ಅಮೂಲ್ಯವಾದ ಔಷಧವು ಜನ್ಮಜರಾಮರಣಗಳೆಂಬ ವ್ಯಾಧಿಯನ್ನು ನಾಶಮಾಡುವುದೇ ಆಗಿದ್ದರೆ ಅದನ್ನು ಅವಶ್ಯವಾಗಿ ಕೇಳಬೇಕು. ಅದರಿಂದಲೇ ಸಂಸಾರ ದುಃಖವು ನಾಶವನ್ನು ಪಡೆದು ಅಪಾರವಾದ ಮೋಕ್ಷಸುಖವು ಲಭಿಸುವುದು. ಆ ಶಿವಕಥಾಮೃತವನ್ನು ಪಾನಮಾಡುವುದರಿಂದ ಈ ಶಿಶುಗಳೂ (ಗಣೇಶ ಮತ್ತು ಕುಮಾರ) ಸಂಸಾರದುಃಖದಿಂದ ಬಿಡುಗಡೆಯನ್ನು ಪಡೆಯುವುವು." ॥೩೪॥

ಗಿರಿಜೆಯು ಈರೀತಿ ಪ್ರಾರ್ಥಿಸಲು, ಆಗ ಶಿವನು ಹೀಗೆಂದನು—"ಎಲೌ ಪ್ರೇಯಸಿಯೇ, ನನ್ನ ಈ ಸ್ಥಾನವು ಮಂಗಳಕರವಾದುದೆಂದು ತಿಳಿಯುವೆನು. ನನಗೆ

ಶಿವಪದಮಿದಮೌಷಧಂ ಭವಾನಿ
ತ್ರಿದಶವರೈರ್ಮುನಿಭಿಶ್ಚ ಸಿದ್ಧಸಂಘ್ಯೈಃ ॥೩೫॥

ಅನವರತಮುಪಾಸ್ಯಮಾಧಿಮಾತ್ರ
ವ್ಯಪನಯನಾಯ ವಿನಿರ್ಮಿತಂ ಮಯಾಪಿ ।
ಇದಂ ಶಿವಪದಂ ಶಿವೇ ಶಿವದಮಿತ್ಯವೈಮಿ ಪ್ರಿಯೇ
ಪ್ರಿಯಂ ಮಮ ಶಿವವ್ರತೇ ತ್ವಯಿ ಯಥಾನುರಾಗೋ ಮಮ ॥೩೬॥

ಅನುಕ್ಷಣಮುಮೇ ತಥಾ ಶಿವಪದೇಽಪಿ ಯದ್ಯತ್ಪರಂ
ತದೇವ ಪದಮಾತ್ಮನಃ ಪದಮಿತೋಽಪಿ ಕಿಂ ವಾ ಭವೇತ್ ॥೩೭॥
ಶಿವನಾಮಸುಧಾನಿಶೋ ಯಃ ಸ ತು ಮೃತ್ಯುಂ ಜಯತೀತ್ಯನಾಮಯಸ್ಯ
ಇದಮೇಕಮನಾಮಯತ್ವಹೇತುಸ್ತದಿದಂ ಮೇ ಪರಮಂ ರಹಸ್ಯಭೂತಂ
॥೩೮॥

ಈಶ್ವರಭಕ್ತೆಯಾದ ನಿನ್ನಲ್ಲಿರುವ ಪ್ರೀತಿಯು ಹೇಗೆ ಕಲ್ಯಾಣಕರವೋ, ಅದರಂತೆ ಶಿವಪಾದವೂ ಸಹ ಕಲ್ಯಾಣಪ್ರದವಾದುದು. ಎಲೌ ದೇವಿಯೇ! ದೇವತೆಗಳೂ, ಋಷಿಗಳೂ, ಸಿದ್ಧರೂ ಶಿವಪಾದವೆಂಬ ಈ ದಿವ್ಯೌಷಧವನ್ನು ಬಯಸುವರು. ॥೩೫॥

ಸಂಸಾರವೆಂಬ ರೋಗವನ್ನು ನಾಶಗೊಳಿಸುವುದಕ್ಕೋಸ್ಕರ ನಾನು ಶಿವಪದವೆಂಬ ಈ ದಿವ್ಯೌಷಧವನ್ನು ಸೃಷ್ಟಿಸಿರುವೆನು. ಶಿವಪಾರಾಯಣಳಾದ ನಿನ್ನಲ್ಲಿ ನನಗೆ ಅಖಂಡವಾದ ಪ್ರೀತಿಯು ಇರುವಂತೆ ಈ ಶಿವಪದದಲ್ಲಿಯೂ (ಶಿವಸ್ಥಾನದಲ್ಲಿ) ಪ್ರೀತಿಯಿರಲಿ. ॥೩೬॥

ಈಶ್ವರಪದವಿಯನ್ನು ಬಿಟ್ಟು ಇನ್ನಾವುದನ್ನೂ ನಾನು ಅತ್ಯಂತವಾಗಿ ಪ್ರೀತಿಸುವುದಿಲ್ಲ. ಶಿವನಾಮಾಮೃತವೆಂಬ ಆ ದಿವ್ಯೌಷಧವು ಜನನಮರಣಗಳೆಂಬ ಮಹಾವ್ಯಾಧಿಯನ್ನು ನಾಮಾವಶೇಷವನ್ನಾಗಿ ಮಾಡುವುದು. ಈ ಶಿವಸ್ಥಾನವೇ ಪರಬ್ರಹ್ಮಸ್ಥಾನ. ಇದಕ್ಕಿಂತ ದೊಡ್ಡದು ಮತ್ತೊಂದಿಲ್ಲ. ॥೩೭॥

ಶಿವನಾಮಾಮೃತವೆಂಬ ಆ ಔಷಧವೇ ಸುಖಸಾಧಕವಾದುದು. ಆದುದರಿಂದಲೇ ನಾನು ಅದನ್ನು ಗುಪ್ತವಾಗಿರಿಸಿರುವೆನು. ॥೩೮॥

ಪುರಾ ವಿಂಧ್ಯಗಿರಿಪ್ರಾಂತೇ ಕಶ್ಚಿದ್ಬ್ರಾಹ್ಮಣವೇಷಕಃ ।
ಚಚಾರ ದ್ವಿಜಗೇಹೇಷು ಶೂದ್ರ ಏವ ಸ್ವಭಾವತಃ ॥೩೯॥

ತೇನ ಪಾಪಾನ್ಯಪಾರಾಣಿ ಕೃತಾನಿ ಗಿರಿಕನ್ಯಕೇ ।
ತತ್ಪಾಪಗಣನಾಯಾಂ ತು ನಶಕ್ತಃ ಸ ಚತುರ್ಮುಖಃ ॥೪೦॥

ಪಾಪೇಷು ಕ್ರಿಯಮಾಣೇಷು ತೇನ ತದ್ಗಣನಾ ಪರಂ ।
ಅಶಕ್ಯಾ ಸರ್ವಥೇತ್ಯಾಹ ಚಿತ್ರಗುಪ್ತೋ ಯಮೋಽಪಿ ಸಃ ॥೪೧॥

ಸ ಮಾರ್ಗೇ ಬ್ರಾಹ್ಮಣಾನ್ ಹತ್ವಾ ವಂಚಯಿತ್ವಾ ಸ್ವವೇಷತಃ ।
ತದ್ಧನಂ ಸಮುಪಾದಾಯ ಸುರಾಪಾನರತೋಽಪ್ಯಭೂತ್ ॥೪೨॥

ಜನನೀಗಮನೇನಾಪಿ ತೇನ ನೀತಂ ವಯಃ ಖಲು ।
ತಸ್ಯಾಮುತ್ಪಾದಿತಾಃ ಪುತ್ರಾಸ್ತೇನ ಪಾಪಾತ್ಮನಾ ಶಿವೇ ॥೪೩॥

ಎಲೌ ದೇವಿಯೇ, ಹಿಂದೆ ಒಂದಾನೊಂದು ಕಾಲದಲ್ಲಿ ವಿಂಧ್ಯಪರ್ವತದ ತಪ್ಪಲಿನಲ್ಲಿ ಒಬ್ಬಾನೊಬ್ಬ ಶೂದ್ರನು ಬ್ರಾಹ್ಮಣವೇಷದಿಂದ ಬ್ರಾಹ್ಮಣಗೃಹದಲ್ಲಿಯೇ ಓಡಾಡುತ್ತಿದ್ದನು. ॥೩೯॥

ಅವನು ಆಚರಿಸಿದ ಪಾಪಕೃತ್ಯಗಳನ್ನು ಲೆಕ್ಕಿಸಲು, ಬ್ರಹ್ಮನಿಗೂ ಸಾಧ್ಯವಿರಲಿಲ್ಲ. ॥೪೦॥

ಅವನ ಪಾಪಕೃತ್ಯಗಳನ್ನು ಪರಿಗಣಿಸುವುದರಲ್ಲಿ ಯಮನೂ ಚಿತ್ರಗುಪ್ತನೂ ಸಹ ಅಸಮರ್ಥರಾಗಿದ್ದರು. ॥೪೧॥

ಬ್ರಾಹ್ಮಣವೇಷಧಾರಿಯಾದ ಅವನು ದಾರಿಯಲ್ಲಿ ಹೋಗಿಬರುವ ಬ್ರಾಹ್ಮಣರನ್ನು ಮೋಸದಿಂದ ಕೊಂದು, ಅವರ ಹಣವನ್ನು ಅಪಹರಿಸಿ, ಅದರಿಂದ ಮದ್ಯಪಾನ ಮಾಡುತ್ತಿದ್ದನು. ॥೪೨॥

ಆ ನೀಚನು ತನಗೆ ಜನ್ಮವನ್ನಿತ್ತ ಜನನಿಯೊಂದಿಗೆ ಸಂಭೋಗಸುಖವನ್ನು ಅನುಭವಿಸುತ್ತಿದ್ದನು. ದುಷ್ಟನಾದ ಅವನಿಂದ ಅವನ ಜನನಿಯಲ್ಲಿ ಅನೇಕ ಮಂದಿ ಪುತ್ರರು ಜನಿಸಿದರು. ॥೪೩॥

ಕನ್ಯಕಾಶ್ಚ ಸಮುತ್ಪನ್ನಾಸ್ತಸ್ಯಾಮೇವಾತಿಸುಂದರಾಃ ।
ತಾಸು ರೇಮೇ ಸುದುರ್ವೃತ್ತಸ್ತೇಭ್ಯೋ ಜಾತಾಶ್ಚ ಕನ್ಯಕಾಃ ॥೪೪॥

ಗೋಮಾಂಸಭಕ್ಷಣಾದೀನಿ ಕುರ್ವನ್ನೇವ ಸ್ಥಿತಃ ಸದಾ ।
ತಸ್ಯ ಭಕ್ಷ್ಯಮಭೂನ್ನಿತ್ಯಂ ಸರ್ವದಾ ಲಶುನಾದಿಕಂ ॥೪೫॥

ನ ಸ್ನಾನಂ ಪರ್ವಕಾಲೇಷು ಕೃತಂ ತೇನ ದುರಾತ್ಮನಾ ।
ಶಿವಕ್ಷೇತ್ರಾಟನಂ ತೇನ ನ ಕೃತಂ ಸರ್ವಥಾ ಖಲು ॥೪೬॥

ಶಿವಕ್ಷೇತ್ರಾಟನೋದ್ಯುಕ್ತೈರ್ನಕೃತಂ ಪರಿಭಾಷಣಂ ।
ನ ಶ್ರುತಂ ಶಿವನಾಮಾಪಿ ಕದಾಪಿ ದುರಿತಾಪಹಂ ॥೪೭॥

ನ ದೃಷ್ಟಃ ಶಿವಯೋಗೀ ವಾ ಶಿವಧ್ಯಾನಪರಾಯಣಃ ।
ಭಸ್ಮೋದ್ಧೂಲಿತಸರ್ವಾಂಗೋ ರುದ್ರಾಕ್ಷಾಭರಣಪ್ರಿಯಃ ॥೪೮॥

ಮತ್ತು ಅವನಿಂದ ಅವನ ಮಾತೆಯ ಉದರದಲ್ಲಿ ಅನೇಕ ಮಂದಿ ಸುಂದರಿಯರಾದ ಹೆಣ್ಣುಮಕ್ಕಳು ಜನಿಸಿದರು. ಆ ಪಾಪಿಯು ಆ ಯುವತಿಯರೊಂದಿಗೂ ಸಹ ಸುಖವನ್ನನುಭವಿಸುತ್ತಿದ್ದನಲ್ಲದೆ, ಅವರಲ್ಲಿ ಜನಿಸಿದ ಇತರ ಯುವತಿಯರೊಂದಿಗೂ ಕ್ರೀಡಿಸುತ್ತಿದ್ದನು. ॥೪೪॥

ಅವನು ಗೋಮಾಂಸ, ಬೆಳ್ಳುಳ್ಳಿ ಮುಂತಾದ ಶಾಸ್ತ್ರನಿಷಿದ್ಧವಾದ ವಸ್ತುಗಳನ್ನೇ ತಿಂದು ಜೀವಿಸುತ್ತಿದ್ದನು. ॥೪೫॥

ಅವನು ಪರ್ವಕಾಲಗಳಲ್ಲಿಯೂ ಸಹ ಸ್ನಾನವನ್ನಾಚರಿಸುತ್ತಿರಲಿಲ್ಲ. ಮತ್ತು ಶಿವಕ್ಷೇತ್ರಯಾತ್ರೆಯನ್ನಂತೂ ಎಂದಿಗೂ ಮಾಡಿದವನೇ ಅಲ್ಲ. ॥೪೬॥

ಅವನು ಶಿವಕ್ಷೇತ್ರಕ್ಕೆ ಹೋಗುತ್ತಿದ್ದ ಯಾತ್ರಿಕರೊಂದಿಗೆ ಸಂಭಾಷಣೆಯನ್ನು ಸಹ ಮಾಡಿದವನಲ್ಲ. ಶಿವನಾಮವನ್ನು ಎಂದೂ ಕೇಳಿದವನಲ್ಲ. ॥೪೭॥

ಸರ್ವಾಂಗಗಳಿಗೂ ಭಸ್ಮವನ್ನು ಲೇಪಿಸಿ ರುದ್ರಾಕ್ಷಿಗಳನ್ನು ಧರಿಸಿ, ಸದಾ ಈಶ್ವರಧ್ಯಾನದಲ್ಲಿಯೇ ಆಸಕ್ತನಾದ ಶಾಂಭವಮೂರ್ತಿಯನ್ನು ಎಂದೂ ಅವನು ನೋಡಲಿಲ್ಲ. ॥೪೮॥

ಶಿವಲಿಂಗಾರ್ಚಕಃ ಕ್ವಾಪಿ ದೃಷ್ಟಸ್ತೇನ ನ ಸರ್ವಥಾ ।
ನ ಬಿಲ್ವಾಯ ಜಲಂ ದತ್ತಂ ರಕ್ಷಣಂ ಚ ಕೃತಂ ಚ ನ ॥೪೯॥

ನ ಬಿಲ್ವತರುಮೂಲಾನಿ ತೇನ ದೃಷ್ಟಾನಿ ಸರ್ವಥಾ ।
ಶಾಂಭವದ್ರೋಹನಿರತಃ ಶಿವಮಾರ್ಗನಿರೋಧಕಃ ॥೫೦॥

ನ ಭಸ್ಮವಾತಸಂವೀತೋ ಭಸ್ಮಾನಂಕಿತ ಏವ ಸಃ ।
ನ ದೃಷ್ಟೋ ಭಸ್ಮದೇಶೋಽಪಿ ತೇನ ದುಷ್ಟಾತ್ಮನಾ ಶಿವೇ ॥೫೧॥

ರುದ್ರಾಕ್ಷಮಾಲಾನಿಲಬಾಲಲೀಲಾವಿಲಾಸಹೇತುಶ್ಚ ನ ಜಾತ ಏವ ।
ರುದ್ರಾಕ್ಷಶಬ್ದೋಽಪಿ ನ ತೇನ ತಾವತ್ಪ್ರೀತ್ಯಾ ಶ್ರುತಃ ಪಾಪವಿನಾಶದಕ್ಷಃ ॥೫೨॥

ಪಾಪಾನಿ ಸರ್ವಾಣಿ ಲಯಂ ಪ್ರಯಾಂತಿ
ರುದ್ರಾಕ್ಷಶಬ್ದಶ್ರವಣೇನ ಗೌರಿ ।
ಸ ತಾದೃಶೋ ನ ಶ್ರುತ ಏವ ಶಬ್ದಃ
ತೇನಾತಿಪಾಪವ್ರತತತ್ಪರೇಣ ॥೫೩॥

ಅವನು ಈಶ್ವರಲಿಂಗಪೂಜಕನನ್ನು ಎಲ್ಲಿಯೂ ನೋಡಿದವನಲ್ಲ. ಬಿಲ್ವ ವೃಕ್ಷಕ್ಕೆ ನೀರೆರೆದು ಕಾಪಾಡಲಿಲ್ಲ. ॥೪೯॥

ಬಿಲ್ವವೃಕ್ಷಗಳ ಮೂಲವನ್ನೇ ಅವನು ನೋಡಲಿಲ್ಲ. ಅವನು ಈಶ್ವರಭಕ್ತರನ್ನು ದ್ವೇಷಿಸುತ್ತಾ, ಈಶ್ವರ ಪೂಜೆಗೋಸ್ಕರ ದೇವಾಲಯಕ್ಕೆ ಹೋಗುತ್ತಿದ್ದವರನ್ನು ತಡೆಗಟ್ಟುತ್ತಿದ್ದನು. ॥೫೦॥

ವಿಭೂತಿಯಮೇಲೆ ಬೀಸಿಬಂದ ಗಾಳಿಯನ್ನು ಸಹ ಅವನು ಸೇವಿಸುತ್ತಿರಲಿಲ್ಲ. ವಿಭೂತಿಯನ್ನಂತೂ ಎಂದಿಗೂ ಧರಿಸಿದವನಲ್ಲ. ಆ ದುಷ್ಟನು ಭಸ್ಮದಿಂದ ಕೂಡಿರುವ ಪ್ರದೇಶವನ್ನೇ ನೋಡಿದವನಲ್ಲ. ॥೫೧॥

ಅವನು ರುದ್ರಾಕ್ಷಮಾಲಿಕೆಗಳ ಮೇಲೆ ಬೀಸಿಬಂದ ಪರಿಶುದ್ಧವಾದ ಬಾಲಮಾರುತವನ್ನು ಸಹ ಸೇವಿಸಲಿಲ್ಲ. ರುದ್ರಾಕ್ಷವೆಂಬ ಪಾಪನಾಶಕವಾದ ಶಬ್ದವನ್ನೂ ಕಿವಿಗಳಿಂದ ಕೇಳಲಿಲ್ಲ. ॥೫೨॥

ಎಲೌ ಗಿರಿಜೆಯೇ! ರುದ್ರಾಕ್ಷ ಶಬ್ದ ಶ್ರವಣಮಾತ್ರದಿಂದಲೇ ಸಕಲ ಪಾಪಗಳೂ ಕ್ಷಯಿಸುವುವು. ರುದ್ರಾಕ್ಷಿ ಶಬ್ದದ ಮಹಿಮೆಯೇ ಹಾಗಿರುವುದು. ಆದರೂ

ಪ್ರದೋಷಕಾಲೀನಶಿವಾರ್ಚನಂ ವಾ
ದೃಷ್ಟಂ ನ ತೇನಾಘವಿನಾಶನಾಯ ।
ಶಿವಾರ್ಚಕಸ್ಯಾಪಿ ಮುಖಂ ನ ದೃಷ್ಟಂ
ಪ್ರದೋಷಕಾಲೇಷು ರತಿಪ್ರಿಯೇಣ ॥೫೪॥

ವಾರಾಂಗನಾಂಗಾನಿ ವಿಲೋಕ್ಯ ಸಾಯಂ
ಪುನಃ ಪುನಸ್ತೇನ ವಿಲೋಕನೇನ ।
ವಿನೀತವಾಯುಃ ಪುರುಷಾಧಮೇನ
ತೇನೈವ ತಾವದ್ರಜನೀಮುಖೇಷು ॥೫೫॥

ಅಲ್ಪಾಯುರಸ್ಯನಲ್ಪಾನಿ ಕೃತ್ವಾ ಪಾಪಾನಿ ಭೂರಿಶಃ ।
ನಿತ್ಯಂ ಸ್ವೋದರಮಾತ್ರಸ್ಯ ಕರೋತಿ ಪರಿಪೂರಣಂ ॥೫೬॥

ತಸ್ಯಾಸೀದ್ವನಿತಾ ಕಾಪಿ ಬ್ರಾಹ್ಮಣೀ ಛಿನ್ನನಾಸಿಕಾ ।
ವ್ಯಭಿಚಾರೇಣ ವಿಚ್ಛಿನ್ನಾ ನಾಸಾ ತಸ್ಯಾಃ ಪರಂ ಶಿವೇ ॥೫೭॥

ಪಾಪಿಷ್ಠನಾದ ಆ ಬ್ರಾಹ್ಮಣನು ರುದ್ರಾಕ್ಷ ಶಬ್ದವನ್ನು ತನ್ನ ಕಿವಿಗಳಿಂದ ಕೇಳಿಯೇ ಇರಲಿಲ್ಲ. ॥೫೩॥

ಅವನು ಪ್ರದೋಷಕಾಲದ ಶಿವಪೂಜೆಯನ್ನು ಎಂದೂ ನೋಡಲಿಲ್ಲ. ಅಷ್ಟೇಕೆ! ಸ್ತ್ರೀಲೋಲುಪನಾದ ಅವನು ಈಶ್ವರಪೂಜಕನ ಮುಖವನ್ನೂ ಸಹ ನೋಡಿದವನಲ್ಲ. ॥೫೪॥

ಆ ನೀಚನು ಸಾಯಂಕಾಲದಲ್ಲಿ ವೇಶ್ಯೆಯರ ಮುಖವನ್ನು ಬಾರಿಬಾರಿಗೂ ನೋಡುತ್ತಾ, ಅವರೊಂದಿಗೆ ಸರಸಸಲ್ಲಾಪಗಳಿಂದ ಜೀವನವನ್ನು ವ್ಯರ್ಥಗೊಳಿಸುದ್ದನು. ॥೫೫॥

ಅವನು ಬಹುಕಾಲದವರೆಗೆ ಜೀವಿಸಿದ್ದರೂ, ಪ್ರತಿ ದಿನವೂ ಅನೇಕ ಪಾಪ ಕೃತ್ಯಗಳನ್ನು ಆಚರಿಸಿ ತನ್ನ ಹೊಟ್ಟೆಯನ್ನು ತುಂಬಿಕೊಳ್ಳುವನು. ॥೫೬॥

ಅವನಿಗೆ ಬ್ರಾಹ್ಮಣಜಾತಿಯ ಓರ್ವ ರಮಣಿಯಿದ್ದಳು. ಅವಳು ಸದಾ ವ್ಯಭಿಚಾರದಲ್ಲಿ ಆಸಕ್ತಳಾಗಿದ್ದಳು. ವ್ಯಭಿಚಾರವನ್ನು ಆಚರಿಸುವಾಗ ಅವಳ ಜಾರನು ಅವಳ ಮೂಗನ್ನು ಕತ್ತರಿಸಿದ್ದನು. ॥೫೭॥

ವ್ಯಭಿಚಾರೇಣ ಗಣನಾ ವ್ಯಾಕೀರ್ಣಾ ಜಾರಜಾನ್ವಿತಾ ।
ತಸ್ಯಾಮನುರತಃ ಸೋಽಪಿ ಕುತ್ಸಿತಃ ಸಾತಿ ಕುತ್ಸಿತಾ ॥೫೮॥

ತಥಾ ಸಂವಸತಸ್ತಸ್ಯ ಮೃತ್ಯುಕಾಲಃ ಸಮಾಗತಃ ।
ತದಾ ತದ್ವನಿತಾ ದೃಷ್ಟ್ವಾ ತಂ ರುರೋದ ತದೋಚ್ಚಕೈಃ ॥೫೯॥

ವ್ರಣವ್ರಾತಸಮಾಕ್ರಾಂತಾ ತನುರಾಲಿಂಗಿತಾ ತ್ವಯಾ ।
ತತಃ ಪರಂ ನ ಕೋಽಪ್ಯಸ್ತಿ ಜಾರಸ್ತುಲ್ಯಸ್ತ್ವಯಾಧುನಾ ॥೬೦॥

ವ್ರಣಗಂಧಂ ಸಮಾಘ್ರಾಯ ಜಾರೋ ಯಾತ್ಯತಿದೂರತಃ ।
ತ್ವಯಾ ತು ನ ಗತಂ ಕ್ವಾಪಿ ಜಾರಸ್ತುಲ್ಯಸ್ತ್ವಯಾ ನ ಮೇ ॥೬೧॥

ಜಾರರೊಂದಿಗೆ ರಮಿಸುತ್ತಿದ್ದ ಅವಳು ವ್ಯಭಿಚಾರ ದೋಷದಿಂದ ಕುಲಾಂಗನೆಯರ ಗೋಷ್ಠಿಯಲ್ಲಿ ಸೇರಲು ಅನರ್ಹಳಾಗಿದ್ದಳು. ಆ ಪಾಪವೃತ್ತಿಯಿಂದ ಅವಳಲ್ಲಿ ಘೋರವಾದ ವ್ಯಾಧಿಯುಂಟಾಗಿದ್ದಿತು. ವ್ಯಾಧಿತಳಾದ ಅವಳೊಂದಿಗೆ ರಮಿಸುತ್ತಿದ್ದ ಅವಳ ಪತಿಯೂ ಸಹ ಅಸಹ್ಯವಾದ ವ್ಯಾಧಿಯನ್ನು ಅನುಭವಿಸುತ್ತಿದ್ದನು. ॥೫೮॥

ಅವನು ಈ ರೀತಿಯಲ್ಲಿ ತನ್ನ ಜೀವನವನ್ನು ಕಳೆಯುತ್ತಿರಲು, ಒಂದಾನೊಂದು ದಿನ ಅವನಿಗೆ ಮರಣಕಾಲವು ಸಮೀಪಿಸಿತು. ಆಗ ಹೆಂಡತಿಯು ಅವನನ್ನು ನೋಡಿ ಗಟ್ಟಿಯಾಗಿ ಅಳುತ್ತಾ, ಪತಿಯನ್ನು ಕುರಿತು ಹೀಗೆಂದಳು. ॥೫೯॥

"ಓ ಪತಿದೇವನೆ! ನೀನು ಹುಣ್ಣಿನಿಂದ ನಾರುತ್ತಿರುವ ಈ ಶರೀರವನ್ನು ಆಲಿಂಗಿಸಿದೆ. ಆದುದರಿಂದ, ಈಗ ನಿನಗೆ ಸದೃಶನಾದ ಜಾರಪುರುಷನು ಇನ್ನೊಬ್ಬನಿರುವುದಿಲ್ಲ. ॥೬೦॥

ಜಾರನಾದ ಪುರುಷನು ಜಾರಿಣಿಯ ದುರ್ಗಂಧಯುಕ್ತವಾದ ಶರೀರದ ವಾಸನೆಯನ್ನು ದೂರದಿಂದಲೇ ತಿಳಿದು ಅವಳ ಸಮೀಪಕ್ಕೆ ಹೋಗಲಾರನು. ಆದರೆ ನೀನು ಸಾಮಾನ್ಯನಾದ ಜಾರಪುರುಷನಂತೆ ಬೇರೆ ಎಲ್ಲಿಗೂ ಹೋಗದೇ ರೋಗಿಷ್ಠೆಯಾದ ನನ್ನೊಂದಿಗೆ ರಮಿಸಿದೆ. ಆದುದರಿಂದ ನನಗೆ ನಿನಗಿಂತಲೂ ನಿಜವಾದ ಪತಿಯು ಇನ್ನೊಬ್ಬನಿರುವನೇ ? ॥೬೧॥

ಇತ್ಯಾದಿಭಿರ್ಬಹುವಿಧೈಃ ಪ್ರಲಾಪೈಃ ಸಾಪಿ ದುಃಖಿತಾ ।
ಮರಣಾವಸರಂ ಪ್ರಾಪ್ತಾ ತೇನೈವ ಪತಿನಾ ಸಹ ॥೬೨॥

ತದಾನೀಂ ಶಿವಾಚಾರಪೂತೋ ವಿಭೂತ್ಯಾ
ತ್ರಿಪುಂಡ್ರೇಣ ರುದ್ರಾಕ್ಷಮಾಲಾಸಮೇತಃ ।
ಚರನ್ನಾಹ ಕನ್ಯಾಂ ಸ್ವಕೀಯಾಂ ಸ ಮಾರ್ಗೇ
ಶಿವೇ ಪಶ್ಯ ಮಾರ್ಗಂ ಪ್ರಯಾಹೀತಿ ದೈವಾತ್ ॥೬೩॥

ಸ ಶಬ್ದಃ ಶ್ರುತಸ್ತೇನ ವಾತಾಭಿಘಾತಾತ್
ತಯಾಪಿ ಶ್ರುತಃ ಪಾಪತೂಲಾಗ್ನಿಭೂತಃ ।
ತದಾ ತೌ ವಿನೇತುಂ ಪ್ರಮತ್ತಾಃ ಪ್ರದತ್ತಾಃ
ಮಹಾಕಾಲದೂತಾಃ ಪರಂ ದಂಡಹಸ್ತಾಃ ॥೬೪॥

ತದಾ ತೇನ ದುರ್ಗಂಧವಾತೇನ ಸರ್ವೇ
ನಿವೃತ್ತಾಃ ಪರಂ ಮೃತ್ಯುದೂತಾಃ ಸಮಸ್ತಾಃ ।

ಅವಳು ಹೀಗೆಂದು ಪ್ರಲಾಪಿಸುತ್ತಾ, ಅತ್ಯಂತ ದುಃಖಗೊಂಡು ತಾನೂ ಸಹ ಪತಿಯೊಂದಿಗೆ ಮರಣವನ್ನು ಹೊಂದಿದಳು. ||೬೨||

ಅವನ ಮರಣಕಾಲದಲ್ಲಿ ಅದೃಷ್ಟವಶದಿಂದ, ಅವನ ಮನೆಯ ಮುಂಭಾಗ ದಲ್ಲಿದ್ದ ಮಾರ್ಗದಲ್ಲಿ ರುದ್ರಾಕ್ಷಮಾಲೆಯನ್ನೂ, ಭಸ್ಮ ತ್ರಿಪುಂಡ್ರವನ್ನೂ, ಧರಿಸಿದ ಒಬ್ಬಾನೊಬ್ಬ ಶಾಂಭವನು ತನ್ನ ಮಗಳೊಂದಿಗೆ ಶಿವಾಲಯಕ್ಕೆ ಹೋಗುತ್ತಿದ್ದನು. ಆಗ ಅವನು ತನ್ನ ಮಗಳನ್ನು ಕುರಿತು, ಮಗಳೇ! ಇಗೋ, ಇತ್ತ ನೋಡು ಇಲ್ಲಿಯೇ ಶಿವಾಲಯವು ಕಾಣಿಸುತ್ತಿರುವುದು. ಶೀಘ್ರವಾಗಿ ಹೋಗು! ಎಂದು ಹೇಳುತ್ತಾ ಮಾರ್ಗವನ್ನು ಅತಿಕ್ರಮಿಸುತ್ತಿದ್ದನು. ||೬೩||

ಈಶ್ವರಭಕ್ತನಾದ ಆ ಪಥಿಕನ ಮಾತಿನ ಧ್ವನಿಯು ಮರಣೋನ್ಮುಖರಾದ ಈ ದಂಪತಿಗಳಿಗೆ ಕೇಳಿಸಿತು. ಆ ಧ್ವನಿಯು ಪಾಪರಾಶಿಯೆಂಬ ಹತ್ತಿಗೆ ಬೆಂಕಿಯಂ ತಿದ್ದಿತು. ಆಗ ಭಯಂಕರರಾದ ಯಮದೂತರು ಅವರನ್ನು ಕರೆದೊಯ್ಯಲು ಬಂದರು. ||೬೪||

ಆ ಯಮದೂತರು, ಇವರ ದೇಹದಿಂದ ಬರುತ್ತಿದ್ದ ದುರ್ಗಂಧವನ್ನು ಸಹಿಸ ಲಾರದೇ ಅಲ್ಲಿಂದ ಹಿಂದಿರುಗಿದರು. ಬಳಿಕ ಅವರು ಹೀಗೆಂದು ಯೋಚಿಸಿದರು.

ತತಸ್ತೈರ್ವಿಚಾರಃ ಕೃತಸ್ತೌ ಕಥಂ ವಾ
ವಿನೇಯೌ ಯಮಾಯಾಪಿ ದಂಡಾವಘಾತೈಃ ॥೬೫॥

ದೂತತ್ವಮೇತದಪಕಾರಕಮೇವ ಜಾತಂ
ದುರ್ಗಂಧದುಷ್ಟತನುದೂರವಿಲೋಕನೇನ ।
ದುರ್ಗಂಧದುಃಖಮಪಿ ಸಹ್ಯಮಿದಂ ಕಥಂ ವಾ
ಪಾಪಿಷ್ಠದೇಹನಯನೇನ ಕುತಃ ಸುಖಂ ನಃ ॥೬೬॥

ಏತಾದೃಶಾಃ ಕತಿ ನ ಸಂತಿ ಮಹಾಘರೂಪಾಃ
ತೇಷಾಂ ಯಮಾಲಯನಿವೇಶನತೋಽಪಿ ಪಾಪಂ ।
ನಾಶಂ ನ ಯಾಸ್ಯತಿ ಮಹಾಘಲಯಾಯ ಕಾ ವಾ
ಸ್ಯಾದ್ಯಾತನಾಪಿ ಶಮನೇನ ನ ಸಾ ತು ಸೃಷ್ಟಾ ॥೬೭॥

ಯಮೋಽಪಿ ಕ್ರೋಧಾರ್ತಃ ಕ್ಷಿಪತಿ ಬಹುಧಾ ವಹ್ನಿನಿಲಯೇ
ಮಹಾಘೋರೇ ಸರ್ಪವ್ಯತಿಕರಮಹಾವೃಶ್ಚಿಕಕುಲೇ ।

ಪಾಪಿಷ್ಠರಾದ ಇವರಿಬ್ಬರನ್ನು ದಂಡಗಳಿಂದ ಹೊಡೆಯುತ್ತಾ ಯಮಾಲಯಕ್ಕೆ ಕರೆದುಕೊಂಡು ಹೋಗುವ ಬಗೆ ಹೇಗೆ? ॥೬೫॥

ದೂತ ವೃತ್ತಿಯನ್ನು ಅವಲಂಬಿಸಿದುದರಿಂದಲೇ ನಮಗೆ ಈ ಕಷ್ಟವು ಸಂಭವಿಸಿರುವುದು. ಇವರ ದುರ್ವಾಸನೆಯಿಂದ ಕೂಡಿರುವ ದೇಹಗಳನ್ನು ದೂರದಿಂದ ನೋಡಿ ನಮಗೆ ಜುಗುಪ್ಸೆಯುಂಟಾಗಿರುವುದು. ಈ ದುರ್ವಾಸನೆಯನ್ನು ಹೇಗೆ ಸಹಿಸುವುದು? ಈ ಪಾಪಿಗಳ ಶರೀರವನ್ನು ಯಮಾಲಯಕ್ಕೆ ತೆಗೆದುಕೊಂಡು ಹೋಗುವುದು ನಮಗೆ ಸುಖವಾಗುವುದೆ? ॥೬೬॥

ಇವರಂತೆಯೇ ಘೋರವಾದ ಪಾಪಕರ್ಮಗಳನ್ನು ಆಚರಿಸಿದವರು ಇನ್ನೆಷ್ಟು ಮಂದಿ ಇರುವರೋ! ಅವರನ್ನು ಯಮಲೋಕಕ್ಕೆ ಕರೆದುಕೊಂಡು ಹೋದರೂ ಸಹ, ಅವರ ಆ ಪಾಪ ಕರ್ಮಗಳು ಕ್ಷಯಿಸುವುವೇ? ಎಂದಿಗೂ ಇಲ್ಲ. ಯಮನು ಇವರಿಗೆ ಯಾವ ಬಗೆಯ ಶಿಕ್ಷೆಯನ್ನು ಸೃಷ್ಟಿಸಿರಬಹುದು? ॥೬೭॥

ಪಾಪಿಷ್ಠರಾದ ಇವರನ್ನು ಯಮನು, ಭಯಂಕರವಾದ ಅಗ್ನಿಕುಂಡದಲ್ಲಿ ಹಾಕುವನು. ಸರ್ಪ, ಚೇಳು ಮುಂತಾದ ವಿಷಜಂತುಗಳ ನಡುವೆ ಬಿಡುವನು. ಬಳಿಕ,

**ಪುನರ್ವಹ್ನಿಜ್ವಾಲಾಸ್ವಪಿ ನರಕಭೇದೇಷು ನಿರಯೇ
ಪುನಃ ಕುಂಭೀಪಾಕೇಽಪ್ಯಹಹ ನ ಚ ತೇನಾಪ್ಯಘಲಯಃ ॥೬೮॥**

**ಶಿವನಾಮಸುಧಾ ಕಥಂ ನ ಪೀತಾ
ಸುಲಭಾ ಸಾ ನ ದುರಕ್ಷರಾವೃತಾಪಿ ।
ನವನೀತನಿಭಾನ್ವಿತಾಕ್ಷರಂ ಸಾ
ದುರದೃಷ್ಟೇನ ಕದಾಪಿ ನೈವ ಪೀತಾ ॥೬೯॥**

**ಸೃಷ್ಟಂ ನಾಮ ಶಿವಸ್ವರೂಪದಮಿದಂ ಪಾಪಾಟವೀನಾಂ ದವಃ
ಪಾಪಾಂಭೋನಿಧಿಬಾಡವೋಽಪ್ಯಘಗಿರಿಪ್ರಧ್ವಂಸನಾಯಾಶನಿಃ ।
ಯೌ ವರ್ಣೌ ಶಿವ ಇತ್ಯಪಾರವಿಭವೌ ತೌ ಸಂಶ್ರುತೌ ವಾ ಸಕೃತ್ ।
ಸರ್ವಾಪತ್ಕುಲವಾರಣಾಯ ಪರಮಾನಂದಾಯ ಮುಕ್ತ್ಯೈ ಪರಂ ॥೭೦॥**

ಧಗಧಗಿಸುವ ಬೆಂಕಿಯಜ್ವಾಲೆಗಳಲ್ಲಿಯೂ, ಅಸಹ್ಯವಾದ ಯಾತನೆಯನ್ನು ಕೊಡುವನು. ಆದರೂ ಇವರ ಭಯಂಕರವಾದ ಪಾಪವು ನಾಶವನ್ನು ಹೊಂದಲಾರದು. ||೬೮||

ಈ ನೀಚನು ಸುಲಭವಾದ ಶಿವನಾಮವೆಂಬ ಸುಧೆಯನ್ನು ಪಾನಮಾಡಲಿಲ್ಲ. ಅಮೃತದಂತೆ ರುಚಿಕರವಾದ ಶಿವನಾಮವು ಕಠಿಣವಾದ ಅಕ್ಷರಗಳಿಂದ ಕೂಡಿಲ್ಲ. ಬೆಣ್ಣೆಯಂತೆ ಮೃದುವಾದ ಅಕ್ಷರಗಳಿಂದ ಮನೋಹರವಾಗಿರುವುದು. ಹೀಗಿದ್ದರೂ ಸಹ, ಆ ದುಷ್ಟನು, ಶಿವನಾಮಾಮೃತವನ್ನು ಎಂದೂ ಪಾನಮಾಡಲಿಲ್ಲ. ||೬೯||

ಭಯಂಕರವಾದ ಅರಣ್ಯವನ್ನು ಕಾಡುಕಿಚ್ಚು ನಾಶಮಾಡುವಂತೆಯೂ, ಸಮುದ್ರವನ್ನು ಬಡವಾಗ್ನಿಯು ಪಾನಮಾಡುವಂತೆಯೂ, ಸಿಡಿಲು, ಪರ್ವತವನ್ನು ಕೊರೆಯುವಂತೆಯೂ, ಶಿವನಾಮಾಮೃತವು ಘೋರವಾದ ಪಾಪಗಳನ್ನು ನಾಶಮಾಡುವುದು. ಕರುಣಾಮಯನಾದ ಈಶ್ವರನು ಪಾಪನಾಶಕ್ಕೋಸ್ಕರವೇ ಈ ಶಿವನಾಮವನ್ನು ಸೃಷ್ಟಿಸಿರುವನು. ಕೇವಲ ಎರಡು ಅಕ್ಷರಗಳಿಂದ ಕೂಡಿರುವ "ಶಿವ" ಎಂಬ ಪದವು ಸಕಲ ಪಾಪರಾಶಿಗಳನ್ನು ಕ್ಷಣಕಾಲದಲ್ಲಿ ನಾಶಮಾಡಿ, ಪರಮಾನಂದ ರೂಪವಾದ ಮೋಕ್ಷಸುಖವನ್ನು ದಯಪಾಲಿಸುವುದು. ||೭೦||

ಶಿವನಾಮಸುಧಾಪಾನೇ ಪ್ರೀತಿಃ ಸ್ಯಾತ್ಕಸ್ಯಚಿದ್ಭುವಿ ।
ಅಪಾರಪುಣ್ಯಪುಂಜಸ್ಯ ಸಾ ನಾನ್ಯಸ್ಯೇತಿ ನಿಶ್ಚಯಃ ॥೨೧॥

ಮನುಷ್ಯದೇಹಮಾಸಾದ್ಯಾಪ್ಯಾಸ್ವಾದ್ಯ ಮುಹುರಾದರಾತ್ ।
ಶಿವನಾಮಸುಧಾಂ ಧನ್ಯಃ ಪ್ರಯಾತಿ ಶಿವಮೇವ ಸಃ ॥೨೨॥

ಸ್ವಾಧೀನಾ ರಸನಾ ಶಿವಾಮೃತರಸಂ ಪಾತುಂ ಪ್ರವೃತ್ತಾ ಕಥಂ ।
ನಾಸೀದೇವ ದುರಾತ್ಮನಾಂ ಕಥಮಿದಂ ಭಾಗ್ಯಂ ಮಹಾಘಾನ್ವಯೇ ।
ಕೋ ವಾ ಜೀವತಿ ತತ್ಸುಧಾಶನಮಹೋರಾತ್ರಂ ಕ್ಷಣಂ ವಾಸಕೃತ್ ।
ಯಸ್ಯ ಸ್ಯಾದಘಕೋಟಿನಾಶಕತಯಾ ಖ್ಯಾತಂ ಸ ವಂದ್ಯಃ ಸುರೈಃ ॥೨೩॥

ಅಘಕೋಟಿವಿನಾಶನಾಯ ದಕ್ಷಂ
ಶಿವನಾಮಶ್ರುತಮೇಕಮೇವ ವೇದ್ಯೈಃ ।
ಅನುವಾರಮಿದಂ ಜನಾಃ ಕಥಂ ವಾ
ನ ವದಂತಿ ಸ್ಮೃತಿಮಾತ್ರತೋಽಪಿ ಮುಕ್ತೇಃ ॥೨೪॥

ಈ ಭೂಲೋಕದಲ್ಲಿ ಅಸಂಖ್ಯಾತ ಜನರಿರುವರು. ಅವರಲ್ಲಿ ಪುಣ್ಯಶಾಲಿಯಾದ ಎಲ್ಲಿಯೋ ಒಬ್ಬನಿಗೆ ಮಾತ್ರ ಶಿವನಾಮಾಮೃತವನ್ನು ಪಾನಮಾಡುವುದರಲ್ಲಿ ವಿಶ್ವಾಸವುಂಟಾಗುವುದು. ॥೨೧॥

ಪೂರ್ವಜನ್ಮದ ಸುಕೃತವಿಶೇಷದಿಂದ ಪುಣ್ಯಶಾಲಿಯು ಈ ಮನುಷ್ಯದೇಹವನ್ನು ಪಡೆದು, ಶಿವನಾಮಾಮೃತವನ್ನು ಪಾನಮಾಡಿ, ಅದರಿಂದ ಶಿವಸಾಯುಜ್ಯವನ್ನು ಹೊಂದುವನು. ॥೨೨॥

ದುಷ್ಟರ ನಾಲಿಗೆಯು ಅವರ ಅಧೀನದಲ್ಲಿದ್ದರೂ ಅದು ಶಿವನಾಮಾಮೃತವನ್ನು ಪಾನಮಾಡಲಿಚ್ಛಿಸುವುದಿಲ್ಲ. ಭಾಗ್ಯಶಾಲಿಯಾದ ಯಾವ ನರನು ಹಗಲಿರಳೂ ಶಿವನಾಮಾಮೃತವನ್ನು ಆಸ್ವಾದಿಸಿ ಆನಂದಿಸುವನೋ, ಅವನು ದೇವತೆಗಳಿಗೂ ವಂದ್ಯನಾಗುವನು. ॥೨೩॥

ಶಿವನಾಮವೊಂದೇ ಅಸಂಖ್ಯಾಕವಾದ ಪಾಪಗಳನ್ನು ನಾಶಮಾಡುವುದರಲ್ಲಿ ಸಮರ್ಥವಾದುದೆಂದು ವೇದಗಳು ಹೇಳುವುವು. ಆದರೂ ಜನರು ಕೇವಲಸ್ಮರಣೆ

ಮುಕ್ತಾಫಲಾಮಲಮಿದಂ ಶಿವನಾಮ ಲೋಕೇ
ಸೃಷ್ಟಂ ಶಿವೇನ ಸಕಲಾರ್ತಿವಿನಾಶನಾಯ ।
ತತ್ಕ್ವೋಽಪಿ ಪುಣ್ಯಪುರುಷಃ ಶ್ರವಣೇ ನಿಧಾಯ
ನೃತ್ಯತ್ಯುಮಾಪತಿಪದಾಂಬುಜದರ್ಶನಾಯ ॥೭೫॥

ನಾಮಾನಿ ಸಂತಿ ಬಹುಧಾ ಗಿರಿಶಸ್ಯ ತಾನಿ
ತುಲ್ಯಾನಿ ನೈವ ಶಿವವರ್ಣಯುಗೇನ ತತ್ರ ।
ಪ್ರೀತಿಃ ಶಿವಸ್ಯ ಶಿವರೂಪಮಿತಿ ಪ್ರಸಿದ್ಧಂ
ನಾಮಾನಿ ತದ್ರುಚಿಕರಂ ಖಲು ಶಂಕರಸ್ಯ ॥೭೬॥

ಶಿವಾ ವಾಣೀ ಲೋಕೇ ಶಿವಪದಸಮೇತಾ ಶಿವಪದಂ
ದದಾತ್ಯುಕ್ತಾ ತಾವತ್ಸ್ಮರಣಪಥಮಾಪ್ತಾಪಿ ಶಿವದಾ ।
ಅತೋ ಧನ್ಯಂ ನಿತ್ಯಂ ಶಿವ ಶಿವ ಶಿವೇತಿ ಪ್ರಜಪನ್ನೈಃ
ನಯಂತ್ಯಾಯುಃ ಪ್ರಾಯಃ ಶಿವಪದಸರೋಜಾರ್ಚನವಶಾತ್ ॥೭೭॥

ಯಿಂದಲೇ ಮೋಕ್ಷದಾಯಕವಾದ ಅದನ್ನು ಮನಸ್ಸಿನಿಂದಲೂ ಸ್ಮರಿಸುವುದಿಲ್ಲ. ॥೭೪॥

ಶಿವನು, ಮುತ್ತಿನಂತೆ ಪರಿಶುದ್ಧವಾದ ತನ್ನ ಶಿವನಾಮವನ್ನು ಸಕಲ ಪಾಪಗಳ ನಿವಾರಣೆಗೋಸ್ಕರ ಈ ಲೋಕದಲ್ಲಿ ಸೃಷ್ಟಿಸಿರುವನು. ಅಮೂಲ್ಯವಾದ ಆ ನಾಮವನ್ನು ಎಲ್ಲಿಯೋ ಒಬ್ಬ ಪುಣ್ಯಶಾಲಿಯು ತನ್ನ ಕಿವಿಗಳಿಂದ ಕೇಳಿ ಉಮಾರಮಣನಾದ ಶಿವನ ಅಡಿದಾವರೆಗಳನ್ನು ನೋಡಲು, ಆ ನಾಮಕೀರ್ತನೆಮಾಡುತ್ತಾ ನರ್ತಿಸುವನು. ॥೭೫॥

ಈಶ್ವರನಿಗೆ ಅನೇಕ ನಾಮಗಳಿರುವುವು. ಆದರೆ ಶಿ ಮತ್ತು ವ ಎಂಬ ಎರಡೇ ಎರಡು ಅಕ್ಷರಗಳಿಂದ ಕೂಡಿರುವ "ಶಿವ" ಎಂಬ ನಾಮಧೇಯವೇ ಅತ್ಯಂತ ಶ್ರೇಷ್ಠವಾದುದು. ಶಿವನಾಮದಲ್ಲಿಯೇ ಶಿವನಿಗೆ ಗಾಢವಾದ ಪ್ರೀತಿಯಿರುವುದು. ॥೭೬॥

ಶಿವಪದದಿಂದ ಕೂಡಿರುವ ವಚನವು ಮಂಗಳಕರವಾದುದು. ಶಿವನಾಮವು ಸ್ಮರಣಮಾತ್ರದಿಂದಲೇ, ಶಿವಸಾಯುಜ್ಯವನ್ನುಂಟುಮಾಡುವುದು. ಆದುದರಿಂದಲೇ ಪುಣ್ಯಶಾಲಿಗಳು, ಶಿವನಾಮವನ್ನು ಜಪಿಸುತ್ತಾ ಶಿವನ ಪಾದಪದ್ಮವನ್ನೂ ಅರ್ಚಿಸುತ್ತಾ ತಮ್ಮ ಜೀವಿಕೆಯನ್ನು ಕಳೆಯುವರು. ॥೭೭॥

ಯೋ ವಕ್ತುಂ ಯತತೇ ಶಿವಾಕ್ಷರಯುಗಂ ಸಾಯಂ ಪ್ರಗೇ ವಾ ಮುದಾ
ಮಧ್ಯಾಹ್ನೇಽಪಿ ಸಮರ್ಚಯಂತಿ ವಿಬುಧಾಃ ಸರ್ವೇ ಮುನೀಂದ್ರಾ ಅಪಿ ।
ತಸ್ಮಾದಪ್ಯಧಿಕೋ ನ ಕೋಽಪಿ ಭುವನೇಷ್ವಾಲೋಡಿತಂ ಭೂತಲಂ
ಬ್ರಹ್ಮಾಂಡಾನ್ಯಖಿಲಾನಿ ತಾವದಸಕೃನ್ನಾಲೋಡಿತಾನ್ಯೇವ ಕಿಂ ॥೭೮॥

ಜಂಬೂದ್ವೀಪೇ ಜನ್ಮ ಸಂಪ್ರಾಪ್ಯ ಕೋ ವಾ
ಜಾರಾದನ್ಯೋ ಜಾರಜಾದಪ್ಯಪಾಯಃ
ಶೈವಂ ವಕ್ತುಂ ನಾಮ ವೈ ಚಾದ್ಯ ತಸ್ಯ
ಪಾಪಿಷ್ಠಾನಾಂ ತತ್ರ ತಾವನ್ನ ಭಕ್ತಿಃ ॥೭೯॥

ಆಕಂಠಂ ಶಿವನಾಮಧೇಯಸುಸುಧಾಃ ಪೀತ್ವಾತಿಪೀನೋ ಮುದಾ
ಯೋ ವಾ ನೃತ್ಯತಿ ಶೈವಲಿಂಗನಿಲಯೇ ತತ್ಪಾದಪದ್ಮಂ ಸುರಾಃ ।
ದೃಷ್ಟ್ವೈವ ಪ್ರಣತಾಃ ಸ್ತುವಂತಿ ಬಹುಧಾ ತತ್ಪಾದುಕಾರಾಧನೇ
ರಾಧಾಮಾಧವಯೋರ್ವಿಧೇರಪಿ ಮನಸ್ತಾವತ್ಪ್ರವೃತ್ತಂ ಮುಹುಃ ॥೮೦॥

ಯಾವ ಮನುಜನು, ಪ್ರಾತಃಕಾಲ, ಮಧ್ಯಾಹ್ನ, ಸಾಯಂಕಾಲವೆಂಬ ಕಾಲ ತ್ರಯಗಳಲ್ಲಿ ಶಿವನಾಮವನ್ನು ಉಚ್ಚರಿಸುವನೋ, ಅವನು ಮುನಿಗಳಿಗೂ, ವಂದ್ಯನಾಗಿರುವನು. ಈ ಲೋಕತ್ರಯದಲ್ಲಿ ಅವನಿಗಿಂತಲೂ ಶ್ರೇಷ್ಠನಾದ ಇನ್ನೊಬ್ಬನಿರುವುದಿಲ್ಲ. ಯಮದೂತರಾದ ನಾವು, ಈ ಬ್ರಹ್ಮಾಂಡವನ್ನು ಅನೇಕ ಬಾರಿ ಸಂಚರಿಸಿರುವೆವು. ಆದರೆ ಈಶ್ವರ ಭಕ್ತನಿಗಿಂತ ಶೇಷ್ಠನಾದ ವ್ಯಕ್ತಿಯನ್ನು ನಾವೆಲ್ಲೂ ನೋಡಲಿಲ್ಲ. ॥೭೮॥

ಜಂಬೂ ದ್ವೀಪದಲ್ಲಿ ಜನ್ಮತಾಳಿ, ಜಾರಜನಾಗದೆ, ವ್ಯಭಿಚಾರಿಗಳ ಸಂಪರ್ಕವಿಲ್ಲದವನಿಗೆ ಶಿವನಾಮಗಳನ್ನುಚ್ಚರಿಸುವುದರಲ್ಲಿ ಶ್ರದ್ಧಾಸಕ್ತಿಗಳುಂಟಾಗುವುವು. ಅಷ್ಟಿದ್ದರೂ ಮಹಾಪಾಪಿಗಳಲ್ಲನೇಕರಿಗೆ ಶಿವನಾಮೋಚ್ಚಾರಣೆಯಲ್ಲಿಯೂ, ಶಿವಪಾದಾರಾಧನೆಯಲ್ಲಿಯೂ ಮನಸ್ಸು ಮೂಡಲಾರದು. ॥೭೯॥

ಯಾವ ಮನುಷ್ಯನು ಶಿವನಾಮಾಮೃತವನ್ನು ಆ ಕಂಠವಾಗಿ ಪಾನಮಾಡಿ ತೃಪ್ತಿಹೊಂದಿ, ಸಂತೋಷದಿಂದ, ಈಶ್ವರ ದೇವಾಲಯದಲ್ಲಿ ನೃತ್ಯವನ್ನಭಿನಯಿಸುವನೋ, ಆ ಮನುಜನನ್ನು ನೋಡಿದ ಮಾತ್ರದಿಂದಲೇ ದೇವತೆಗಳೂ ಸಹ ಅವನಿಗೆ ನಮಸ್ಕರಿಸಿ ಸ್ತುತಿಸುವರು. ಲಕ್ಷ್ಮೀ, ವಿಷ್ಣು, ಬ್ರಹ್ಮ, ಮುಂತಾದ ದೇವತೆಗಳೂ ಶಿವನ ಅಡಿದಾವರೆಯನ್ನು ಸೇವಿಸಲಿಚ್ಛಿಸುವರು. ॥೮೦॥

ತಜ್ಜನ್ಮೈವ ಮನೋಹರಂ ಚ ಸುಕರಂ ಚಾನಂದದಂ ಸರ್ವದಾ
ಯಸ್ಯ ಸ್ಯಾದ್ರಸನಾ ಶಿವಾಕ್ಷರಸುಧಾಪಾನಪ್ರವೃತ್ತಾ ಮುಹುಃ ।
ತನ್ಮಾತಾ ಸುಭಗಾ ಪಿತಾ ಚ ಸುಭಗಸ್ತಸ್ಯೈವ ತತ್ಪಾದುಕೇ
ಲೋಕಾನಾಮುಪಕಾರಕೇ ಸ್ಮೃತಿಪಥಂ ಪ್ರಾಪ್ತೇ ವಿಮುಕ್ತಿಪ್ರದೇ ॥೮೧॥

ಅಘಕೋಟಿಯುತೋಽಪಿ ದೈವಯೋಗಾ
ಚ್ಛಿವನಾಮಸ್ಮರಣೇನ ಪೂತ ಏವ ।
ಸ ಪುನಾತಿ ಜಗತ್ತ್ರಯಂ ಸಕೃದ್ವಾ
ಶ್ರುತ ಏವ ಸ್ಮೃತ ಏವ ವಾ ವಿಶೇಷಾತ್ ॥೮೨॥

ಶಿವನಾಮಸಮಾನಮಸ್ತಿ ಕಿಂ ವಾ
ಭುವನೇಷು ಪ್ರಥಿತೇಷು ಭೂತಲೇಷು ।
ಗಿರಿಸುಂದರಕಂದರೇಷು ಭೂಯೋಽಪ್ಯ
ಟನೇನಾಪಿ ನ ಲಭ್ಯತೇ ಸಮಾನಂ ॥೮೩॥

ಯಾವನ ನಾಲಿಗೆಯು ಶಿವನಾಮಾಮೃತವನ್ನು ಆಸ್ವಾದಿಸುವುದರಲ್ಲಿ ಆಸಕ್ತವಾಗಿರುವುದೋ ಅವನ ಜನ್ಮವೇ ಸಫಲವಾದುದು. ಅವನೇ ಸಕಲ ಸುಖಗಳನ್ನೂ ಅನುಭವಿಸುವನು. ಅವನ ತಂದೆತಾಯಿಗಳು ಭಾಗ್ಯಶಾಲಿಗಳು. ಅವನ ಪಾದಪದ್ಮಗಳನ್ನೂ ಸ್ಮರಿಸುವ ಮಾತ್ರದಿಂದಲೇ, ಅನಾಯಾಸವಾಗಿ ಮುಕ್ತಿಯು ಲಭಿಸುವುದು. ॥೮೧॥

ಮನುಷ್ಯನು, ಅಸಂಖ್ಯಾತವಾದ ಪಾಪಗಳಿಂದ ಕೂಡಿದ್ದರೂ ಅದೃಷ್ಟವಿಶೇಷದಿಂದ ಶಿವನಾಮವನ್ನು ಸ್ಮರಿಸಲು ಪಾಪವಿನಿರ್ಮುಕ್ತನಾಗುವನು. ಪಾಪಗಳಿಂದ ಬಿಡುಗಡೆ ಹೊಂದಿ ಪರಿಶುದ್ಧನಾದ ಅವನು ಲೋಕತ್ರಯಗಳನ್ನೂ ಪವಿತ್ರೀಕರಿಸುವನು. ಅವನ ಸ್ಮರಣ ಮಾತ್ರದಿಂದಲೇ ಸಕಲ ಪಾಪಗಳೂ ನಾಶವಾಗುವುವು. ॥೮೨॥

ಶಿವನಾಮಧೇಯಕ್ಕೆ ಸದೃಶವಾದ ಇನ್ನೊಂದು ವಸ್ತುವೇ ಭೂಲೋಕದಲ್ಲಾಗಲಿ, ಇನ್ನಿತರ ಸ್ವರ್ಗಾದಿಲೋಕಗಳಲ್ಲಾಗಲಿ, ಪರ್ವತದ ತಪ್ಪಲುಗಳಲ್ಲಾಗಲಿ ದೊರೆಯಲಾರದು. ಎಲ್ಲಿ ಸಂಚರಿಸಿದರೂ ಶಿವನಾಮಕ್ಕೆ ಸದೃಶವಾದ ವಸ್ತುವು ಲಭಿಸಲಾರದು. ॥೮೩॥

ರೇ ರೇ ಜನಾಃ ಕಿಮುತಿ ಜನ್ಮ ವೃಥೈವ ನೀತಂ
ಭಕ್ತ್ಯಾ ಶ್ರುತಂ ನ ಶಿವನಾಮ ಮುದಾ ಕದಾಪಿ ।
ಹಾ ಹಂತ ಹಂತ ಹತಜೀವನಮೇವ ಲೋಕೇ
ಲೋಕೋಪಕಾರಕಶಿವಾರ್ಚಕನಿಂದಕೋಽಪಿ ॥೮೪॥

ಧಿಗ್ಧಿಗ್ಧಿಗ್ರಸನಾಪಿ ತಸ್ಯ ಬಹುಧಾ ಶೈವಂ ನ ನಾಮಾದರಾತ್
ಉಕ್ತಂ ಮುಕ್ತಿಫಲಪ್ರದಂ ಮುಹುರಹೋ ಭಕ್ತ್ಯಾ ಯಯಾ ಜಿಹ್ವಯಾ ।
ಹಾ ಹಾ ತಸ್ಯ ನಿರರ್ಥಕಾ ಜನಿರಭೂತ್ಸಾ ನಾತಿಭಾರಾಯ ಕಿಂ
ಸಾ ತಾವದ್ರಸನಾ ನ ಕಿಂ ತು ಶುನಕೀಕರ್ಣಂ ವೃಥಾ ವೇಷ್ಟಿತಂ ॥೮೫॥

ಶಿವಾಭಿಧಾನಾಮೃತಪಾನಪೀನಾ
ನದೀನಮಾನಾನಭಿಮಾನಗಾನಾನ್ ।
ಪಶ್ಯತ್ಯವಶ್ಯಂ ಶಮನೋಽಪಿ ನತ್ವಾ
ನಾರಾಯಣಸ್ತಾನ್ಕಮಲಾಸನೋಽಪಿ ॥೮೬॥

ಎಲೈ ಮಾನವರೇ! ಒಂದು ಬಾರಿಯಾದರೂ, ಭಕ್ತಿಪೂರ್ವಕವಾಗಿ ಶಿವನಾಮವನ್ನು ಕೇಳದೇ, ನಿಮ್ಮ ಈ ಜನ್ಮವನ್ನೇಕೆ ವ್ಯರ್ಥಗೊಳಿಸಿದಿರಿ? ಅಯ್ಯೋ? ಲೋಕಹಿತೈಷಿಯಾದ ಶಿವಪೂಜಕನನ್ನು ನಿಂದಿಸುವವನು ಹತಭಾಗ್ಯನೇ ಅಲ್ಲವೆ? ಅಂತಹ ಕಾರ್ಯಗಳಿಗೆ ನಿಜವಾಗಿಯೂ ಮನಗೊಡಬೇಡಿ. ||೮೪||

ಯಾವನು ಭಕ್ತಿಪೂರ್ವಕವಾಗಿ ಶಿವನಾಮವನ್ನು ಉಚ್ಚರಿಸುವುದಿಲ್ಲವೋ ಅವನಿಗೆ ಧಿಕ್ಕಾರವಿರಲಿ. ಮೋಕ್ಷವನ್ನುಂಟುಮಾಡುವ ಆ ಶಿವನಾಮವನ್ನು ಉಚ್ಚರಿಸದಿರುವ ಅವನ ನಾಲಿಗೆಯು ವ್ಯರ್ಥವಾದುದು. ಶಿವನಾಮವನ್ನು ಉಚ್ಚರಿಸದಿರುವ ಅವನು ಭೂಭಾರಕ್ಕೋಸ್ಕರವೇ ಜನಿಸಿರುವನಲ್ಲದೇ, ಅವನಿಂದ ಯಾವ ಪ್ರಯೋಜನವೂ ತೋರುವುದಿಲ್ಲ. ಶಿವದ್ವೇಷಿಯಾದ ಅವನ ನಾಲಿಗೆಯು ನಾಯಿಯ ಕಿವಿಯಂತೆ ತುಚ್ಛವಾದುದು. ಅಪವಿತ್ರವಸ್ತುಗಳ ಸಂಸರ್ಗದಿಂದ ಜೀವಿಸುವುದು. ||೮೫||

ಶಿವನಾಮಾಮೃತದ ಪಾನದಿಂದ ತೃಪ್ತಿಯನ್ನು ಹೊಂದಿ ಸದಾ ಶಿವನ ಶ್ರೇಷ್ಠತೆಯನ್ನೇ ಗಾನಮಾಡುತ್ತಾ ಪುಣ್ಯಶಾಲಿಗಳೆಂದೆನಿಸಿಕೊಳ್ಳುವ ಈಶ್ವರಭಕ್ತಾಗ್ರೇಸರರನ್ನು ಯಮ, ವಿಷ್ಣು, ಬ್ರಹ್ಮ, ಇವರು ನಮಸ್ಕರಿಸಿ, ಸ್ತುತಿಸುವರು. ||೮೬||

ಶಿವಪದಂ ಪದಮಿಷ್ಟಿತಸಂಪದಾಂ
ಪರಮಿದಂ ಪರಮಾತ್ಮಸುಖಸ್ಯ ಚ ।
ಅಪದಮೇತದಹೋ ಸಕಲಾಪದಾಂ
ಪದಮನುತ್ತಮಮುಕ್ತಿಪದಂ ಪದಂ ॥೮೭॥

ಸುಧಾಧಾರಾಕಾರಾ ಶಿವಪದಸುರೂಪಾಪಿ ಭುವನೇ
ತಯಾ ಜನ್ಮಾಪಾಯೋ ನ ಭವತಿ ಜನಃ ಕಿಂ ಶಿವಪದೇ ।
ಶ್ರುತೇ ಜನ್ಮಾಪಾಯೋ ಭವತಿ ನ ಜರಾ ನಾಪಿ ಮರಣಂ
ಶ್ರುತೇ ಮುಕ್ತಿಸ್ತೇನೇತ್ಯಪಿ ವದತಿ ವೇದೋಽಪಿ ಸತತಂ ॥೮೮॥

ಸುಧಾರಾಶಿಃ ಕೋಽಯಂ ವಿಜಯತಿ ಶಿವಾಖ್ಯಾತ್ಮಕತಯಾ
ಮಹಾನಂದಾಕಾರಾನ್ ಜನಯತಿ ಸುಧಾಂಶೂನಗಣಿತಾನ್ ।
ಪುನಸ್ತೈರಪ್ಯನ್ಯೇಽಪ್ಯಮೃತಕಿರಣಾ ಏವ ಜನಿತಾಃ
ಸಮಾಹಾರಸ್ತೇಷಾಂ ಶಿವಚರಣಪಂಕೇರುಹಗತಃ ॥೮೯॥

ಶಿವನಾಮಧೇಯವು, ಸಕಲ ಇಷ್ಟಾರ್ಥಗಳನ್ನೂ ಮತ್ತು ಅಪಾರವಾದ ಆತ್ಮಸುಖವನ್ನೂ ದಯಪಾಲಿಸುವುದು. ಇದು ಸಕಲ ವಿಘ್ನಗಳನ್ನೂ ಹೋಗಲಾಡಿಸುವುದಲ್ಲದೇ, ಶಾಶ್ವತವಾದ ಮೋಕ್ಷ ಸುಖಕ್ಕೆ ಸಾಧನವಾಗಿರುವುದು. ಆಪತ್ತುಗಳನ್ನೂ ನಿವಾರಿಸತಕ್ಕದ್ದು. ॥೮೭॥

ಶಿವಪದದಿಂದ ರಂಜಿತವಾದ ಶಿವನಾಮಾಮೃತವನ್ನು ಪಾನಮಾಡುವುದರಿಂದ ಜನ್ಮ, ಜರಾ, ಮರಣಗಳೇ ಸಂಭವಿಸುವುದಿಲ್ಲ. ಅದರ ಶ್ರವಣಮಾತ್ರದಿಂದಲೇ ಮುಕ್ತಿಯು ಲಭಿಸುವುದೆಂದು ವೇದವು ಹೇಳುವುದು. ॥೮೮॥

ಅತ್ಯಂತ ರುಚಿಕರವಾದ ಅಮೃತದ ಪ್ರವಾಹವೇ ಶಿವನಾಮಧೇಯದ ರೂಪದಿಂದಿದ್ದು, ಪರಮಾನಂದವನ್ನುಂಟುಮಾಡುವ ಅಮೃತಕಿರಣಗಳನ್ನು ಹೊರಗೆಡಹುತ್ತಿರುವುದು. ಆ ಅಮೃತಕಿರಣಗಳಿಂದ ಪುನಃ ಅನೇಕ ಅಮೃತಕಿರಣಗಳು ಹುಟ್ಟುತ್ತಿರುವುವು. ಇದೇನಾಶ್ಚರ್ಯ! ಆ ಅಮೃತ ಕಿರಣಗಳೇ ಶಿವನ ಅಡಿದಾವರೆಗಳಲ್ಲಿ ಅಡಗಿರುವುವು. ॥೮೯॥

ನ ವಿಜ್ಞಾತಂ ಸಿದ್ಧೈಃ ಪರಮಮೃತರೂಪಂ ಶಿವಪದಂ
ನ ವಾ ದೇವೈಃ ಕೈರಪ್ಯಮರಮುನಿಸಂಘೈರಪಿ ಗಣೈಃ ।
ನ ವಾ ವೇದೈರ್ಜ್ಞಾತಂ ಶಿವಪದಮಿದಂ ವೇದ ಸ ಶಿವಃ
ಮಹಾನಂದಾಕಾರೋ ನಿರುಪಮನಿಜಜ್ಞಾನಮಹಿಮಾ ॥೯೦॥

ಇದಂ ತಾವದ್ಗುಪ್ತಂ ಶಿವಪದಮಿದಂ ತಾವದಮೃತಂ
ಪರಂ ನಾತಃ ಕಿಂಚಿಜ್ಜಗತಿ ಸಕಲಾಘಕ್ಷಯಕರಂ ।
ಅನೇನೈವಾನಂದೋ ಭವತಿ ಶಿವಪಾದಾಂಬುಜರಜಃ
ಪ್ರಸಾದಾತ್ಕೇಷಾಂಚಿದ್ಗಿರಿಶಚರಣಾಂಭೋಜಭಜನಾತ್ ॥೯೧॥

ನ ಜಾನೀಮಸ್ತತ್ವಂ ಶಿವಪದಮಹಿಮ್ನಃ ಪರಮಿದಂ
ಪರಾಂ ಮುಕ್ತಿಂ ದಾಸ್ಯತ್ಯನುಪದಮವಿಜ್ಞಾತವಿಭವಂ ।
ಸ್ಮೃತಂ ವಾ ಕೇನಾಪಿ ಶ್ರುತಮಪಿ ಕಿಮೇತಾದೃಶಮಿದಂ
ಪುರಾ ಸೃಷ್ಟಂ ದಿವ್ಯಂ ಜನಿಮರಣನಾಶಾರ್ಥಮನಿಶಂ ॥೯೨॥

ಸಿದ್ಧರು, ದೇವತೆಗಳು, ಪ್ರಮಥಗಣಗಳು, ವೇದಗಳು, ಇವರಾರೂ, ಶಿವಪದದ ಸ್ವರೂಪವನ್ನು ತಿಳಿದುಕೊಂಡಿಲ್ಲ. ಪವಿತ್ರವಾದ ಆ ಶಿವಪದವನ್ನು ಸರ್ವಜ್ಞನೂ ಅಖಂಡಾನಂದಾಕಾರನೂ ಆದ ಆ ಶಿವನೇ ತಿಳಿಯಲು ಸಮರ್ಥನಾಗಿರುವನಲ್ಲದೇ, ಇತರರು ಅದನ್ನು ತಿಳಿಯಲಾರರು. ॥೯೦॥

ಶಿವಪದವು ಅತ್ಯಂತ ರಹಸ್ಯವಾದ ವಸ್ತುಗಳಲ್ಲೊಂದಾಗಿದೆ. ಇದೇ ಅಮೃತವು. ಇದಕ್ಕಿಂತಲೂ ಪಾಪರಾಶಿಗಳನ್ನು ನಾಶಮಾಡುವ ಮತ್ತೊಂದು ವಸ್ತುವೇ ಇಲ್ಲ. ಶಿವಪದದಿಂದಲೇ ಪರಮಾನಂದವು ಲಭಿಸುವುದು. ಪುಣ್ಯ ಶಾಲಿಗಳಾದ ಕೆಲವರು ಶಿವನ ಅಡಿದಾವರೆಗಳನ್ನು ಪೂಜಿಸಿ, ಅದರ ಧೂಳಿಯ ಅನುಗ್ರಹದಿಂದ ಶಾಶ್ವತವಾದ ಮೋಕ್ಷಸುಖವನ್ನು ಹೊಂದಿರುವರು. ॥೯೧॥

ಶಿವನಾಮದ ಅಪಾರವಾದ ಮಹಿಮೆಯನ್ನು ಅಜ್ಞರಾದ ನಾವು ತಿಳಿಯಲಾರೆವು. ಶಿವನಾಮವು ಸ್ಮರಣದಿಂದಾಗಲಿ, ಶ್ರವಣ ಮಾತ್ರದಿಂದಾಗಲಿ ಮೋಕ್ಷವನ್ನು ದಯಪಾಲಿಸುವುದು. ಇಂತಹ ಶಿವನಾಮವನ್ನು ಜನರ ಜನನ ಮರಣಾದಿಗಳನ್ನು ನಾಶಮಾಡುವುದಕ್ಕೋಸ್ಕರವೇ ಸೃಷ್ಟಿಸಿರುವನು. ॥೯೨॥

ಅಹೋ ಕಲ್ಪಾಂತೇ ವಾ ನ ಭವತಿ ಕಥಂಚಿದ್ವಿರಮಣಂ
ಮಹಾಕುಂಭೀಪಾಕಪ್ರಭೃತಿಷು ಮಹಾಕ್ಲೇಶವಿರತಿಃ ।
ಅಕಸ್ಮಾದೇತಸ್ಮಾಜ್ಜನನಮರಣಾಪಾಯಜನಕೋ
ಮಹಾರೋಗಾಪಾಯೋ ಭವತಿ ಶಿವಶಬ್ದಸ್ಮರಣತಃ ॥೯೩॥

ಯದ್ಗೋಪನೀಯಂ ಬಹುಭಿಃ ಪ್ರಯತ್ನೈಃ
ತನ್ನಾಮರತ್ನಂ ತದಿದಂ ಶಿವಸ್ಯ ।
ಕಂಠೇ ಸದಾ ತಿಷ್ಠತಿ ಯಸ್ಯ ತಸ್ಯ
ಪದಾಂಬುಜಾರಾಧನತೋಽಪಿ ಮುಕ್ತಿಃ ॥೯೪॥

ನ ಜ್ಞಾಯತೇ ಶಂಕರನಾಮಶಕ್ತಿಃ
ತೇನಾಪಿ ತದ್ವಸ್ತುನಿಭಂ ನ ವಸ್ತು ।
ಇತಃ ಸಮಸ್ತಾಮಯನಾಶ ಏವ
ಸ್ಯಾದಿತ್ಯವಶ್ಯಂ ಭಜನೀಯಮಾರ್ಯೈಃ ॥೯೫॥

ಕಲ್ಪಾಂತವಾದರೂ ಮಾನವರಿಗೆ ಈ ಸಂಸಾರದಿಂದ ವಿರಾಮವು ಲಭಿಸುವುದಿಲ್ಲ. ಘೋರವಾದ ಕುಂಭೀಪಾಕನರಕದಿಂದ ವಿಶ್ರಾಂತಿಯು ಲಭಿಸುವುದಿಲ್ಲ. ಆದರೆ ಪೂರ್ವಜನ್ಮದ ಸುಕೃತ ವಿಶೇಷದಿಂದ ಶಿವನಾಮವನ್ನು ಸ್ಮರಿಸುವ ಸುಯೋಗವು ಲಭಿಸಿದರೆ ಮಾತ್ರ ಸಂಸಾರವೆಂಬ ಮಹಾವ್ಯಾಧಿಯು ಶೀಘ್ರವಾಗಿ ನಾಶವಾಗುವುದು. ॥೯೩॥

ಪ್ರಯತ್ನಪುರಃಸರವಾಗಿ ಗುಪ್ತವಾಗಿರಿಸಲು ಯೋಗ್ಯವಾದ ಶಿವನಾಮವೆಂಬ ರತ್ನವನ್ನು, ಯಾವನು ತನ್ನ ಕಂಠದಲ್ಲಿ ಧರಿಸುವನೋ, ಅಂತಹ ಶಾಂಭವನ ಅಡಿದಾವರೆಗಳ ಪೂಜೆಯಿಂದಲೇ ಮೋಕ್ಷವು ಲಭಿಸುವುದು. ॥೯೪॥

ಈಶ್ವರನಾಮದ ಮಹಿಮೆಯನ್ನು ಯಾವನೂ ಸುಲಭವಾಗಿ ತಿಳಿಯಲಾರನು. ಅದಕ್ಕೆ ಸದೃಶವಾದ ವಸ್ತುವೇ ಈ ಲೋಕದಲ್ಲಿ ಬೇರೊಂದಿಲ್ಲ. ಅದರಿಂದ ಸಕಲ ರೋಗಗಳೂ ನಾಶಹೊಂದುವುವು. ಅದರಿಂದಲೇ ಅವಶ್ಯವಾಗಿ ಶಿವಾರಾಧನೆ ಮಾಡಬೇಕು. ॥೯೫॥

ಸ ಏವ ತಾವತ್ಪರಮೋಽಸ್ತಿ ಕಶ್ಚಿತ್
ಸ ಏವ ತಾವದ್ಭುವಿ ಪಾವನಶ್ಚ ।
ಯಃ ಶಾಂಕರಂ ನಾಮ ಮುಹುರ್ಮನಸ್ಥಂ
ಕೃತ್ವಾ ಸ್ಮರತ್ಯನ್ವಹಮಾದರೇಣ ॥೯೬॥

ಶಿವಶಬ್ದಸಮಾನಶಬ್ದಮಸ್ಮಿನ್
ಭುವನೇ ವೇದಗಣೇಽಪಿ ನೈವ ವಿದ್ಮಃ ।
ಅಮುಮೇವ ಮಹೌಷಧಂ ವಿದಿತ್ವಾ
ಭುವಿ ಧನ್ಯಾಃ ಪ್ರಚರಂತಿ ರೋಗಹೀನಾಃ ॥೯೭॥

ಮನ್ಯೇ ರೋಗಕುಲಾಶನಿಂ ಶಿವಪದಂ ಧನ್ಯೈಕಮಾನ್ಯಂ ಸದಾ
ಧನ್ಯಾನಾಮಪಿ ಧನ್ಯತಾ ಶಿವಪದಾಂ ಧನ್ಯೇಷು ಧನ್ಯಂ ಪರಂ ।
ಮನ್ಯೇ ತಂ ಶಿವಶಬ್ದ ಏವ ಸತತಂ ಧನ್ಯಂ ಕರೋತಿ ಸ್ಮೃತಃ
ಸದ್ಯಃ ಪಾವಯತೀತಿ ತತ್ಪದಮಹೋ ದಿವ್ಯೌಷಧಂ ಸೌಖ್ಯದಂ ॥೯೮॥

ಯಾವನು ಅನವರತವೂ ಮನಸ್ಸಿನಲ್ಲಿ ಭಕ್ತಿಪೂರ್ವಕವಾಗಿ ಈಶ್ವರ ನಾಮವನ್ನೇ ಸ್ಮರಿಸುವನೋ, ಅವನೇ, ಈ ಲೋಕದಲ್ಲಿ ಅತ್ಯಂತ ಪವಿತ್ರನೂ ಆಸ್ತಿಕನೂ ಆಗಿರುವನು. ॥೯೬॥

ಶಿವನಾಮಕ್ಕೆ ಸದೃಶವಾದ ಶಬ್ದವು ಈ ಲೋಕದಲ್ಲಿಯೇ ಇಲ್ಲ. ಅದರಂತೆ ಪವಿತ್ರವಾದ ಶಬ್ದವು ವೇದಗಳ ಮೂಲಕವೂ ತಿಳಿದುಬರುವುದಿಲ್ಲ. ಈ ಲೋಕದಲ್ಲಿ ಜನರು ಈ ದಿವ್ಯೌಷಧವನ್ನು ತಿಳಿದು ಸಕಲ ರೋಗಗಳಿಂದಲೂ ಬಿಡುಗಡೆ ಹೊಂದುವರು. ॥೯೭॥

ಪುಣ್ಯಶಾಲಿಗಳ ಆದರಕ್ಕೆ ಪಾತ್ರವಾದ ಶಿವನಾಮವು ರೋಗರಾಶಿಗಳಿಗೆ ಸಿಡಿಲಿನಂತೆ ಭಯಂಕರವಾಗಿರುವುದು. ಪವಿತ್ರವಾದ ಆ ಶಿವನಾಮವನ್ನು ಉಚ್ಚರಿಸುವ ಪುಣ್ಯಶಾಲಿಗಳಾದ ಜನರ ಮಹಿಮೆಯು ವರ್ಣನಾತೀತವಾಗಿರುವುದು. ಶಿವಶಬ್ದವು ಪವಿತ್ರ ವಸ್ತುಗಳಲ್ಲೆಲ್ಲಾ ಅತ್ಯಂತ ಪವಿತ್ರವಾದುದು. ಅದು ಸ್ಮರಣಮಾತ್ರದಿಂದಲೇ ಶೀಘ್ರವಾಗಿ ಸಕಲ ಪಾಪರಾಶಿಗಳನ್ನೂ ಹೋಗಲಾಡಿಸುವುದೆಂದು ತಿಳಿಯುವೆನು. ಅದೇ ಸಂಸಾರವೆಂಬ ಮಹಾವ್ಯಾಧಿಗೆ ಪ್ರಬಲವಾದ ಔಷಧವಾಗಿರುವುದಲ್ಲದೇ, ಪರಮಸುಖವನ್ನುಂಟುಮಾಡುವುದು. ॥೯೮॥

ಕಿಮೌಷಧಾಭಾಸವಿಚಾರಣೇನ
ದಿವ್ಯೌಷಧೇ ಶಂಕರನಾಮರೂಪೇ ।
ತಿಷ್ಠತ್ಯಪಾರಾಮಯನಾಶಕೇಽಸ್ಮಿನ್
ನಾನ್ಯನ್ನವಾಂಛಾ ವಿಷಯೀಕರೋತಿ ॥೯೯॥

ಕರೋತಿ ಪಾಪಾನ್ಯಮಿತಾನಿ ಕಿಂ ತೈಃ
ಅಪಾರಸಂಸಾರಮಹಾಮಯೈರ್ವಾ ।
ಕಿಂ ತದ್ಯತಃ ಶಂಕರನಾಮರೂಪಂ
ದಿವ್ಯೌಷಧಂ ತಿಷ್ಠತಿ ಕಂಠಭಾಗೇ ॥೧೦೦॥

ಸಂಸಾರರೋಗಹರಣಾಯ ಶಿವಾಭಿಧಾನಂ
ದಿವ್ಯೌಷಧಂ ತನ್ಮುಹುರಾದರೇಣ
ಸಂಸೇವನೀಯಂ ಸಕಲಾಘಶಾಂತಿಃ
ತೇನೈವ ಸಂಸಾರಭಯಾಪಹಾರಃ ॥೧೦೧॥

ಸಂಸಾರ ಸಂಗವೆಂಬ ರೋಗವನ್ನು ನಾಶಮಾಡಲು ಅಸಮರ್ಥವಾದ ಇತರ ಔಷಧಗಳಿಂದ ಯಾವ ಪ್ರಯೋಜನವಿರುವುದು ? ಅಪಾರವಾದ, ಸಂಸಾರವೆಂಬ ರೋಗವನ್ನು ಕ್ಷಿಪ್ರದಲ್ಲಿಯೇ ನಾಶಮಾಡುವ ಸಾಮರ್ಥ್ಯವುಳ್ಳ ಶಿವನಾಮವೆಂಬ ದಿವ್ಯೌಷಧವು ಇರುತ್ತಿರಲು ಇತರ ಔಷಧಿಗಳ ಅಪೇಕ್ಷೆಯೇ ಉಂಟಾಗಲಾರದು. ||೯೯||

ಈ ದಿವ್ಯೌಷಧವನ್ನು ಯಾವನು ಸದಾ ಉಚ್ಚರಿಸುವನೋ ಅವನನ್ನು ಪಾಪಗಳು ಸ್ಪರ್ಶಿಸಲಾರವು. ಸಂಸಾರವೆಂಬ ಮಹಾವ್ಯಾಧಿಯು ಅವನನ್ನು ಬಾಧಿಸಲಾರದು. ||೧೦೦||

ಸಂಸಾರವೆಂಬ ರೋಗದಿಂದ ಬಿಡುಗಡೆಯನ್ನು ಹೊಂದಬೇಕಾದರೆ ಪರಮೌಷಧದಂತಿರುವ ಶಿವನಾಮವನ್ನು ಭಕ್ತಿ ಪೂರ್ವಕವಾಗಿ ಪಠಿಸಬೇಕು. ಅದರಿಂದ ಸಕಲಪಾಪಗಳೂ ಕ್ಷಯಿಸುವುವಲ್ಲದೇ, ಸಂಸಾರ ಭಯವೂ ಇರುವುದಿಲ್ಲ. ||೧೦೧||

ಸಂಸಾರರೋಗಮುಪಹರ್ತುಮಶಕ್ಯ ಏವ
ಯಃ ಕೋಽಪಿ ಶಂಕರಪದಸ್ಮರಣಾನುರಕ್ತಃ ।
ತಂ ತಾರಯತ್ಯನುಪದಂ ಪದಮೇತದೇವ
ತನ್ನಾನ್ಯದಿಚ್ಛತಿ ತದೀಯಭಯಾಪಹತ್ಯೈ ॥೧೦೨॥

ಅಹೋ ಕೇಽಪಿ ಸಂಸಾರರೋಗಾಪಹಾರ
ಪ್ರಯಾಸಪ್ರವೃತ್ತಾಃ ಪ್ರಮತ್ತಾಃ ಪರಂ ತೇ ।
ಅನಾಯಾಸಸಿದ್ಧೇಽಪಿ ವಿಶ್ವೇಶನಾಮ್ನಿ
ಪ್ರಕೃಷ್ಟಾಘನಾಶಾಯ ಕೇ ವಾ ಪ್ರವೃತ್ತಾಃ ॥೧೦೩॥

ಸಂಸಾರರೋಗವಿನಿವಾರಕಮೇಕಮೇವ
ದಿವ್ಯೌಷಧಂ ಶಿವಪದಾಭಿಧಮಾಮನಂತಿ ।
ತೇನೈವ ತಸ್ಯ ವಿಲಯೋ ಭವತೀತಿ ಸಿದ್ಧಂ
ಸಿದ್ಧಾಂತ ಏವ ಮಮ ತಾವದಸಂಶಯೋಽತ್ರ ॥೧೦೪॥

ಸಂಸಾರದ ವೇಗವನ್ನು ತಾಳಲು ಅಶಕ್ತನಾದವನು, ಶಿವನಾಮವನ್ನು ಸ್ಮರಿಸಿದರೆ, ಅದು ಕ್ಷಿಪ್ರದಲ್ಲಿಯೇ ಅವನ ಭವರೋಗವನ್ನು ನಾಶಮಾಡುವುದು. ಶಿವನಾಮವೆಂಬ ಆ ದಿವ್ಯೌಷಧವು ಸಂಸಾರರೋಗವನ್ನು ನಾಶಮಾಡುವುದರಲ್ಲಿ ಇನ್ನಾವ ವಸ್ತುವಿನ ಸಹಾಯವನ್ನೂ ಅಪೇಕ್ಷಿಸುವುದಿಲ್ಲ. ॥೧೦೨॥

ಯಾರು ಶಿವನಾಮವನ್ನು ಪಠಿಸದೇ ಸಂಸಾರ ರೋಗವನ್ನು ನಾಶಮಾಡುವುದಕ್ಕೆ ಪ್ರಯತ್ನಿಸುವರೋ, ಅವರೇ ಮೂರ್ಖರೆನಿಸಿಕೊಳ್ಳುವರು. ಶಿವನಾಮ ಮಾತ್ರವೇ ಅನಾಯಾಸವಾಗಿ ಸಂಸಾರ ರೋಗವನ್ನು ಹೋಗಲಾಡಿಸುವುದರಲ್ಲಿ ಸಮರ್ಥವಾಗಿರುವಾಗ, ಅದನ್ನು ತೊರೆದು ಯಾರಾದರೂ ಪ್ರಬಲವಾದ ಪಾಪರಾಶಿಯನ್ನು ನಾಶಮಾಡಲು ಪ್ರಯತ್ನಿಸುವರೇ ? ॥೧೦೩॥

ಶಿವನಾಮವೊಂದೇ ಸಂಸಾರ ರೋಗವನ್ನು ನಾಶಪಡಿಸುವುದರಲ್ಲಿ ಸಮರ್ಥವಾದ ದಿವ್ಯೌಷಧವಾಗಿರುವುದೆಂದು ಜ್ಞಾನಿಗಳು ಹೇಳುವರು. ಅದರಿಂದಲೇ ಸಂಸಾರ ಕ್ಲೇಶವು ನಾಶವಾಗುವುದೆಂದು ನಾನು ನಿಶ್ಚಯಿಸಿರುವೆನು. ॥೧೦೪॥

ಏವಂ ಮುಹುರ್ಮುಹುರುಮೇ ತ್ವರಯಾ ವದಂತಃ
ದೂತಾಃ ಪ್ರಪದ್ಯ ಯಮಮಾಹುರತಿಪ್ರಸನ್ನಂ ।
ಶಂಭೋ ಮಹೇಶ ಗಿರಿಶೇತಿ ಮುದಾ ವದಂತಃ
ಭೀತಾಃ ಶನೈಃ ಶಿವಪದಶ್ರವಣೋತ್ಸುಕಂ ತಂ ॥೧೦೫॥

॥ ಯಮದೂತಾ ಊಚುಃ ॥

ಸ್ವಾಮಿನ್ ಕಶ್ಚನ ಪಾಪಸಂಘಮಲಿನೋ ಭೂಲೋಕಶೋಕಪ್ರದಃ
ದುರ್ಗಂಧೇನ ಸಮಾವೃತೋಽಪಿ ಬಹುಭಿಃ ಪೂಯವ್ರಣೈಃ ಸಂಕುಲಃ ।
ಜಾರಿಣ್ಯಾ ಸಹಿತೋ ಮೃತಸ್ತಮಧುನಾಸ್ಯಾನೇತುಮಿಚ್ಛಾ ನ ವಃ
ದುರ್ಗಂಧೈರ್ಗಮನಂ ಚ ತತ್ರ ಬಹುಧಾ ತಾವನ್ನ ಶಕ್ಯಂ ಪ್ರಭೋ ॥೧೦೬॥

ಸಂಸಾರಾಮಯಸಾಗರಕ್ಷಯಕರಂ ತೇನಾದರಾನ್ನ ಶ್ರುತಂ
ನ ಧ್ಯಾತಂ ಚ ನ ಕೀರ್ತಿತಂ ಶ್ರುತಮಪಿ ಪ್ರಾಯಃ ಪ್ರಮತ್ತೋಽಪಿ ಸಃ ।

ಎಲೌ ಗಿರಿಜೆಯೇ! ಆ ಯಮದೂತರು ಪರಸ್ಪರವಾಗಿ ಹೀಗೆಂದು ಮಾತನಾಡುತ್ತಾ ಯಮಲೋಕವನ್ನು ಸೇರಿದರು. ಬಳಿಕ ಶಂಭೋ, ಮಹೇಶ, ಗಿರೀಶ ಎಂದು ಈಶ್ವರನ ನಾಮಗಳನ್ನುಚ್ಚರಿಸುತ್ತಾ, ಅವುಗಳನ್ನು ಕೇಳುವುದರಲ್ಲಿ ಉತ್ಸಾಹಭರಿತನಾದ ಯಮನನ್ನು ಕುರಿತು ಹೀಗೆಂದರು. ॥೧೦೫॥

ಓ ಪ್ರಭುವೇ! ಭೂಲೋಕದಲ್ಲಿ ಒಬ್ಬಾನೊಬ್ಬ ಮನುಜನು ಘೋರವಾದ ಅನೇಕ ಪಾಪಕೃತ್ಯಗಳನ್ನು ಆಚರಿಸಿ, ಆ ಲೋಕದ ಜನರಿಗೆ ಪರಿತಾಪವನ್ನುಂಟುಮಾಡಿರುವನು. ಅವನು ದುರ್ಗಂಧವನ್ನುಂಟುಮಾಡುವ ಅನೇಕ ವ್ರಣಗಳಿಂದ ಕೂಡಿ, ವ್ಯಭಿಚಾರಿಣಿಯಾದ ತನ್ನ ರಮಣಿಯೊಂದಿಗೆ ಮರಣವನ್ನು ಹೊಂದಿರುವನು. ಅವನನ್ನು ಇಲ್ಲಿಗೆ ಕರೆತರುವ ಇಚ್ಛೆಯು ನಮಗಿರುವುದಿಲ್ಲ. ಏಕೆಂದರೆ ನಾವು ಅವನಿಂದುಂಟಾದ ಅಸಹ್ಯವಾದ ದುರ್ಗಂಧವನ್ನು ಸಹಿಸಲಾರದೆ, ಅವನ ಸಮೀಪಕ್ಕೆ ಹೋಗಲು ಅಸಮರ್ಥರಾಗಿರುವೆವು. ॥೧೦೬॥

ಅವನು ಸಂಸಾರವೆಂಬ ರೋಗವನ್ನು ನಾಶಮಾಡುವ ಶಿವನಾಮವನ್ನು ಕೇಳಿರುವುದಿಲ್ಲ. ಶಿವನಾಮಧ್ಯಾನವನ್ನಾಗಲಿ ಅಥವಾ ಕೀರ್ತನೆಯನ್ನಾಗಲಿ ಮಾಡಿರುವುದಿಲ್ಲ. ಪಾಪಿಷ್ಠನಾದ ಅವನು ಅಹಂಕಾರದಿಂದ ಮೆರೆಯುತ್ತಿದ್ದನು. ಅವನು ವಿಭೂತಿ

ಪಾಪಾತ್ಮೋಽ ಭಸಿತಾನುಪಾನಸಹಿತಂ ಪೀತಂ ನ ದಿವ್ಯೌಷಧಂ ।
ನ ಧ್ಯಾತೋಽಪಿ ಭಿಷಕ್ತಮಃ ಸುಭಿಷಜಾಂ ಮಧ್ಯೇ ನ ರುದ್ರಾಕ್ಷಭಾಕ್ ॥೧೦೭॥

ಅಪಾರಘೋರಸಂಸಾರರೋಗಸಾಗರತಾರಕಂ ।
ಮಹೇಶ್ವರಾಭಿಧಾನಾಖ್ಯಮೌಷಧಂ ಭಸಿತಾನ್ವಿತಂ ॥೧೦೮॥

ಶ್ರುತಮಪಿ ಶಿವನಾಮರೂಪಮೇತತ್
ಭಸಿತಯುತಂ ಪರಮೌಷಧಂ ಸ್ಮೃತಂ ವಾ ।
ಸಕೃದಪಿ ಹರತೀತಿ ರೋಗಜಾಲಂ
ಪ್ರಲಯಮುಪೈತಿ ಮಹಾಮಯಪ್ರವಾಹಾನ್ ॥೧೦೯॥

ಮಹಾಮಯಾನಾಂ ಯದುಮಾಸಹಾಯ
ಪಾದಾರವಿಂದಸ್ಮರಣೌಷಧೇನ ।
ಆತ್ಯಂತಿಕೋ ನಾಶ ಇತಿ ಪ್ರತೀತಿಃ
ವೇದಾಂತವಾಕ್ಯೈಃ ಖಲು ಜಾಯತೇಽಪಿ ॥೧೧೦॥

ಧಾರಣೆಯೆಂಬ ಅನುಪಾನದೊಂದಿಗೆ ಶಿವನಾಮವೆಂಬ ದಿವ್ಯೌಷಧವನ್ನು ಪಾನಮಾಡಲಿಲ್ಲ. ವೈದ್ಯರಲ್ಲಿ ಶ್ರೇಷ್ಠನಾದ ಈಶ್ವರನನ್ನು ಧ್ಯಾನಿಸಲಿಲ್ಲ. ಒಮ್ಮೆಯಾದರೂ ರುದ್ರಾಕ್ಷಮಾಲೆಯನ್ನು ಧರಿಸಿದವನಲ್ಲ. ॥೧೦೭॥

ಪಾಪಿಯಾದ ಅವನು ವಿಭೂತಿಯನ್ನು ಧರಿಸಿ, ಸಂಸಾರವೆಂಬ ಭಯಂಕರವಾದ ರೋಗವನ್ನು ನಾಶಪಡಿಸುವ, ಶಿವನಾಮವೆಂಬ ದಿವ್ಯೌಷಧವನ್ನು ಒಂದು ಬಾರಿಯಾದರೂ ಸೇವಿಸಿರುವುದಿಲ್ಲ. ॥೧೦೮॥

ಭಸ್ಮಧಾರಣೆಯನ್ನು ಮಾಡಿ, ಶಿವನಾಮವೆಂಬ ಪರಮೌಷಧವನ್ನು ಒಂದೇ ಒಂದು ಬಾರಿ ಸ್ಮರಿಸಿದರೂ, ಅದು ಸಕಲ ರೋಗರಾಶಿಗಳನ್ನೂ ನಾಶಪಡಿಸುವುದು. ॥೧೦೯॥

ಉಮಾರಮಣನಾದ ಶಿವನ ಅಡಿದಾವರೆಗಳ ಸ್ಮರಣೆಯೆಂಬ ದಿವ್ಯೌಷಧದಿಂದಲೇ ಪ್ರಬಲವಾದ ವ್ಯಾಧಿಗಳು ನಾಮಾವಶೇಷವಾಗುವುವೆಂದು, ವೇದಾಂತವಾಕ್ಯಗಳು ಸಾರುವುವು. ॥೧೧೦॥

ಸಂಸಾರಾಮಯನಾಶನೋದ್ಯತಮತಿಃ ಕೋ ವಾ ಶಿವಾರಾಧನಂ
ತ್ಯಕ್ತ್ವಾ ತಿಷ್ಠತಿ ತನ್ಮಹೌಷಧಮಿತಿ ಜ್ಞಾತಂ ಮುಹುಃ ಶಾಂಭವೈಃ ।
ತಸ್ಮಾತ್ತತ್ಸತತಂ ವಿಭೂತಿರಸಕೃದ್ರುದ್ರಾಕ್ಷಭೂಷೈರ್ಮುದಾ
ಕರ್ತವ್ಯಂ ತದಪಾರದುಃಖವಿಲಯಂ ಕರ್ತುಂ ಸಮರ್ಥಂ ಖಲು ॥೧೧೧॥

ಅಮರೈರಪಿ ಸಂಸಾರರೋಗಸಾಗರಪೀಡಿತೈಃ ।
ಶಿವನಾಮೌಷಧಂ ಪೀತ್ವಾ ತೇನ ಮುಕ್ತಾಶ್ಚ ತೇ ತಥಾ ॥೧೧೨॥

ಕಃ ಸಂಸಾರಮಹಾರೋಗಸಾಗರಾನಪಹಾರಕಃ ।
ಶಿವನಾಮೌಷಧಂ ಪ್ರಾಪ್ಯ ಸಕೃದ್ವಾ ಭಕ್ತಿಪೂರ್ವಕಂ ॥೧೧೩॥

ಸಕೃದಪಿ ಶಿವನಾಮರೂಪಮೇಕಂ
ಭಸಿತಯುತಂ ಪರಮೌಷಧಂ ಸ್ಮೃತಂ ವಾ ।
ಶ್ರುತಮಪಿ ಹರತಿ ಪ್ರವಾಹಭೂತಾಂ
ರುಜಮಘಮೂಲಮಘಾನಿ ಕೋಟಿಶೋಽಪಿ ॥೧೧೪॥

ಸಂಸಾರದುಃಖವೆಂಬ ಈ ಮಹಾರೋಗವನ್ನು ನಾಶಪಡಿಸುವ ಇಚ್ಛೆಯುಳ್ಳ ಯಾವ ಮನುಷ್ಯನು ತಾನೇ ಶಿವಪೂಜೆಯನ್ನು ತೊರೆಯುವನು! ಈಶ್ವರಾರಾಧನೆಯೇ ಸಂಸಾರವೆಂಬ ರೋಗಕ್ಕೆ ಪ್ರಬಲವಾದ ಔಷಧವಾಗಿರುವುದೆಂದು ಈಶ್ವರ ಭಕ್ತರು ತಿಳಿದಿರುವರು. ಆದುದರಿಂದ, ಶಿವನಿಗೆ ಪ್ರಿಯವಾದ ರುದ್ರಾಕ್ಷ, ವಿಭೂತಿ ಮುಂತಾದ ಚಿಹ್ನೆಗಳನ್ನು ಧರಿಸಿ, ಅವನನ್ನು ಪೂಜಿಸಬೇಕು. ಈಶ್ವರಾರ್ಚನೆಯೇ ಸಕಲ ದುಃಖಗಳನ್ನೂ ಹೋಗಲಾಡಿಸುವುದರಲ್ಲಿ ಸಮರ್ಥವಾಗಿರುವುದು. ॥೧೧೧॥

ದೇವತೆಗಳೂ ಸಹ ಸಂಸಾರವೆಂಬ ಮಹಾರೋಗದಿಂದ ಪೀಡಿತರಾಗಿ ಶಿವನಾಮವೆಂಬ ಔಷಧವನ್ನು ಪಾನಮಾಡಿ ಬಳಿಕ ಸಂಸಾರದಿಂದ ಬಿಡುಗಡೆಯನ್ನು ಹೊಂದಿದರು. ॥೧೧೨॥

ಶಿವನಾಮವೆಂಬ ದಿವ್ಯವಾದ ಔಷಧವನ್ನು ಸೇವಿಸಿ, ಯಾವನು ತಾನೇ ಸಂಸಾರ ರೋಗದಿಂದ ಬಿಡುಗಡೆಯನ್ನು ಹೊಂದಲಾರನು? ॥೧೧೩॥

ಭಸ್ಮಧಾರಣೆಯನ್ನು ಮಾಡಿ ಒಂದು ಬಾರಿಯಾದರೂ ಶಿವನಾಮವೆಂಬ ದಿವ್ಯೌಷಧವನ್ನು ಸ್ಮರಿಸಿದರೂ ಅದು ಸಂಸಾರ ರೋಗವನ್ನು ನಾಶಮಾಡುವುದು.

ಇತಿ ತದ್ವಚಸಂ ಶ್ರುತ್ವಾ ಯಮಃ ಸಂತುಷ್ಟಮಾನಸಃ ।
ಚಿತ್ರಗುಪ್ತಂ ವಿಲೋಕ್ಯಾಹ ಸ ತು ಕೀದೃಶ ಇತ್ಯಪಿ ॥೧೧೫॥

॥ ಚಿತ್ರಗುಪ್ತ ಉವಾಚ ॥

ಯದ್ಯದುಕ್ತಂ ಕಾಲದೂತೈಃ ತತ್ಸರ್ವಮವಿಶಂಕಿತಂ ।
ನಿಷ್ಕೃತಿಸ್ತತ್ಕೃತಾಘಾನಾಂ ಕದಾಪಿ ನ ಭವಿಷ್ಯತಿ ॥೧೧೬॥

ಯಾವಂತಿ ಪಾಪಾನಿ ಕೃತಾನಿ ತೇನ
ತೇಷಾಂ ನ ಸಂಖ್ಯಾಕರಣಂ ಚ ಶಕ್ಯಂ ।
ಸ್ಯಾತ್ಸೈಕತಾನಾಂ ಗಣನಾಪಿ ಶಕ್ಯಾ
ಭೂಪಾಂಸುಸಂಖ್ಯಾಪಿ ಮನ್ಯೈವ ಶಕ್ಯಾ ॥೧೧೭॥

ನ ತಸ್ಯ ಭಾಲೇ ಭಸಿತಂ ಕದಾಪಿ
ರುದ್ರಾಕ್ಷಮಾಲಾ ನ ಗಳೇ ಕರೇ ವಾ ।
ಕರ್ಣಪ್ರದೇಶೋಽಪಿ ತಯಾ ಚ ಕಾಲ
ಸ ಪಾಪಮೂರ್ತಿಃ ಪರಿಭಾವನೀಯಃ ॥೧೧೮॥

ಅಥವಾ ಒಂದು ಬಾರಿ ಅದ್ಭುತವಾದ ಮಹಿಮೆಯುಳ್ಳ ಆ ಶಿವನಾಮವು ಶ್ರವಣ ಮಾತ್ರದಿಂದಲೇ ಪಾಪಕ್ಕೆ ಕಾರಣವಾದ ಸಂಸಾರವನ್ನು ನಾಶಮಾಡುವುದು. ||೧೧೪||

ದೂತರ ಆ ಮಾತನ್ನು ಕೇಳಿ ಯಮನು ಸಂತೋಷಭರಿತನಾಗಿ ಚಿತ್ರಗುಪ್ತನನ್ನು ನೋಡಿ ಆ ಮನುಷ್ಯನ ವಿಷಯವನ್ನು ಕುರಿತು ಪ್ರಶ್ನೆಮಾಡಿದನು. ||೧೧೫||

ಚಿತ್ರಗುಪ್ತನು ಅವನನ್ನು ಕುರಿತು ಹೀಗೆಂದನು. " ಓ ಕೃತಾಂತನೇ ! ಈ ದೂತರು ಹೇಳಿದ ವಿಷಯಗಳೆಲ್ಲವೂ ನಿಜ. ಪಾಪಿಯಾದ ಇವನು ಮಾಡಿದ ಪಾಪ ಕೃತ್ಯಗಳಿಗೆ ತಕ್ಕ ಪ್ರಾಯಶ್ಚಿತ್ತವೇ ಇರಲಾರದು. ||೧೧೬||

ನದಿಯ ದಡದಲ್ಲಿರುವ ಮರಳಕಣಗಳನ್ನು ಎಣಿಸಿ ಅದರ ಸಂಖ್ಯೆಯನ್ನು ಹೇಳಬಹುದು. ಭೂಮಿಯ ಮೇಲಿರುವ ಪರಮಾಣುಗಳನ್ನು ಲೆಕ್ಕಿಸಿ ಅವುಗಳ ಸಂಖ್ಯೆಯನ್ನಾದರೂ ಗಣಿಸಬಹುದು. ಆದರೆ ಈ ಮನುಷ್ಯನು ಆಚರಿಸಿದ ಪಾಪ ಕೃತ್ಯಗಳನ್ನು ಎಣಿಸಲು ಅಸಾಧ್ಯವಾಗಿರುವುದು. ||೧೧೭||

ಇವನು ಹಣೆಯಲ್ಲಿ ಎಂದೂ ಭಸ್ಮವನ್ನು ಇಡಲಿಲ್ಲ. ಕುತ್ತಿಗೆಯಲ್ಲಿಯೂ

ನ ಭಾವವಾರ್ತಾಪಿ ಕದಾಪಿ ತೇನ
ಕೃತಾ ಕೃತಾಂತಾಂತಕನಾಮವಾರ್ತಾ ।
ಕೃತಾನ್ಯನಂತಾನ್ಯಪಿ ಪಾತಕಾನಿ
ವಿಭೂತಿಮಾತ್ರಸ್ಮರಣೇನ ತಾನಿ ॥೧೧೯॥

ನಶ್ಯಂತಿ ತಸ್ಯಾಃ ಸ್ಮರಣೇನ ತೇನ
ಸ್ಮೃತಂ ಕದಾಪಿ ಸ್ಮರವೈರಿಣಃ ಸಾ ।
ನ ಬ್ರಹ್ಮಹತ್ಯಾದಿಕಪಾಪರಾಶೇಃ
ಭೀತಿಃ ಕದಾಪಿ ಪ್ರಲಯೇಽಪಿ ಕಾಲ ॥೧೨೦॥

ಯದಿ ಸ್ಮರಾರಿಸ್ಮರಣಂ ಕದಾಪಿ
ತತ್ತೇನ ತಾವನ್ನ ಕೃತಂ ಕ್ಷಣಂ ವಾ ।
ಶ್ರೀಕಾಲಕಾಲಸ್ಮರಣಾಗ್ನಿಲೇಶಾತ್
ಕ್ಷಣೇನ ಪಾಪಾಮಿತತೂಲರಾಶಿಃ ॥೧೨೧॥

ಮತ್ತು ಕಿವಿಗಳಲ್ಲಿಯೂ ರುದ್ರಾಕ್ಷಮಾಲೆಗಳನ್ನು ಧರಿಸಿದವನಲ್ಲ. ಆದುದರಿಂದಲೇ ಪಾಪಸ್ವರೂಪನಾದ ಇವನು ಅತ್ಯಂತ ನಿಂದ್ಯನಾಗಿರುವನು. ॥೧೧೮॥

ಇವನು ಒಂದು ದಿವಸವೂ ಶಾಂಭವರೊಂದಿಗೆ ಮಾತನಾಡಿದವನಲ್ಲ. ಮೃತ್ಯುಂಜಯನಾದ ಶಿವನ ನಾಮಗಳನ್ನು ಒಂದು ಬಾರಿಯಾದರೂ ಉಚ್ಚರಿಸಲಿಲ್ಲ. ಶಿವನಿಗೆ ಪ್ರಿಯವಾದ ವಿಭೂತಿಯನ್ನು ಸ್ಮರಿಸುವ ಮಾತ್ರದಿಂದಲೇ ಅದು ಸಕಲ ಪಾಪಗಳನ್ನೂ ಹೋಗಲಾಡಿಸುವುದು. ಹೀಗಿರುವಾಗ ಇವನು ವಿಭೂತಿಯನ್ನು ಒಮ್ಮೆಯಾದರೂ ಸ್ಮರಿಸದೇ, ಅಸಂಖ್ಯಾಕವಾದ ಪಾಪಕೃತ್ಯಗಳನ್ನು ಆಚರಿಸಿರುವನು. ॥೧೧೯॥

ವಿಭೂತಿಯನ್ನು ಸ್ಮರಿಸುವುದರಿಂದ ಸಕಲ ಪಾಪಗಳು ಕ್ಷಯಿಸುವುವು. ಆದರೆ ಪಾಪಿಯಾದ ಇವನು ಕಾಮವೈರಿಯಾದ ಶಿವನಿಗೆ, ಪ್ರಿಯವಾದ ಆ ವಿಭೂತಿಯನ್ನು ಯಾವ ಕಾಲದಲ್ಲಿಯೂ ಸ್ಮರಿಸಲಿಲ್ಲ. ಇವನು ಬ್ರಹ್ಮಹತ್ಯಾದಿಗಳಿಂದ ಉಂಟಾಗುವ ಪಾಪರಾಶಿಗಳಿಗೆ ಎಂದೂ ಹೆದರುತ್ತಿರಲಿಲ್ಲ. ॥೧೨೦॥

ಕ್ಷಣಕಾಲವಾದರೂ ಈಶ್ವರನನ್ನು ಸ್ಮರಿಸಲಿಲ್ಲ. ಮೃತ್ಯುಂಜಯನಾದ ಶಿವನನ್ನು ಒಂದು ಬಾರಿಯಾದರೂ ಸ್ಮರಿಸಿದ್ದರೆ, ಅವನು ಆಚರಿಸಿದ ಅಪಾರವಾದ

ವಿನಶ್ಯತೀತಿ ಸ್ಮೃತಿರಪ್ಯಸಾರಾ
ಪಾಪಾಪಹಾರಪ್ರವಣಾ ಶ್ರುತಾ ಸಾ ।
ಪಾಪಾನ್ಯಸಾರಾಣಿ ಲಯಂ ಪ್ರಯಾಂತಿ
ಮಹೇಶ್ವರಾರಾಧನಚಿಂತನೇನ ॥೧೨೨॥

ತತ್ತಾವತ್ಯದ್ಭುತಪಾಪಯೋಗಾತ್ ।
ನ ಜಾಯತೇ ಕಸ್ಯಚಿದಪ್ಯಭಾಗ್ಯಾತ್ ॥೧೨೩॥

ಕಃ ಶಕ್ನೋತಿ ಭುವಿ ಕರ್ತುಮಘಕುಲಂ ತಾವತ್ಪ್ರಯಾಸೇನ ವಾ
ಯಾವನ್ನಾಶಮುಪೈತಿ ಶಂಕರಪದಧ್ಯಾನೇನ ವಾ ತತ್ಸ್ಮೃತೇಃ ।
ತತ್ತಾವತ್ಸುಲಭಂ ತಥಾಪಿ ನ ಕರೋತ್ಯಾಲಸ್ಯಪಾಪಾದಿನಾ
ತೇನೈವ ಪ್ರವಿಶಂತಿ ಘೋರನಿರಯಂ ಸಂಸಾರರಾಶಿಂ ತತಃ ॥೧೨೪॥

ಇತ್ಯಾಕರ್ಣ್ಯ ವಚೋಽಯ ಯವನೋಽಪಿ ಬಹುಧಾ ವೇದಾಂತವಾರ್ತಾಪ್ರಿಯಃ
ಸಂತುಷ್ಟಸ್ತಮುವಾಚ ಭಾಗ್ಯನಿಲಯಸ್ತ್ವಂ ಪಾವನೋಽಸೀತ್ಯಪಿ ।

ಪಾಪಗಳು ಬೆಂಕಿಯಿಂದ ಹತ್ತಿಯರಾಶಿಯು ದಗ್ಧವಾಗುವಂತೆ ಕ್ಷಣಕಾಲದಲ್ಲಿ ನಾಮಾವಶೇಷವಾಗುತ್ತಿದ್ದುವು. ॥೧೨೧॥

ಈಶ್ವರಸ್ಮರಣೆಯಿಂದಲೇ ಸಕಲ ಪಾಪಗಳೂ ನಾಶಹೊಂದುತ್ತಿರಲು ಅವನ ನಾಮವನ್ನು ಕೇಳುವುದರಿಂದ, ಅವನ ಪಾದಗಳನ್ನು ಪೂಜಿಸುವುದರಿಂದ, ಪಾಪಗಳು ನಾಶವಾಗಲಾರವೇ ? ಈಶ್ವರ ಪೂಜೆಯನ್ನು ಮನಸ್ಸಿನಿಂದ ಸ್ಮರಿಸುವುದರಿಂದಲೇ, ಅಪಾರವಾದ ದುರಿತಗಳೂ ಮಾಯವಾಗುವುವು. ॥೧೨೨॥

ಆದರೆ ಪೂರ್ವಜನ್ಮದಲ್ಲಿ ಆಚರಿಸಿದ ಪಾಪಕರ್ಮಗಳ ದೆಸೆಯಿಂದ ಶಿವನನ್ನು ಸ್ಮರಿಸುವ ಸುಯೋಗವು ದುರ್ಲಭವಾಗುವುದು. ಅದು ಪುಣ್ಯಶಾಲಿಗೆ ಮಾತ್ರ ಸಂಭವಿಸುವುದಲ್ಲದೇ, ಇತರರಿಗೆ ದೊರಕಲಾರದು. ॥೧೨೩॥

ಈ ಭೂಲೋಕದಲ್ಲಿ ಈಶ್ವರನ ಪಾದಸೇವೆ ಮತ್ತು ಸ್ಮರಣೆ ಮುಂತಾದುವು ಗಳನ್ನು ಮಾಡದೇ ಯಾವನು ತಾನೇ ಪಾಪರಾಶಿಗಳನ್ನು ಕಳೆದುಕೊಳ್ಳಲು ಸಮರ್ಥನಾಗಿರುವನು ? ಈಶ್ವರನ ಪಾದಸೇವೆಯು ಸುಲಭವಾಗಿರುವುದು. ಆದರೆ

ಏತಾವಾನ್ ಶಿವಪೂಜನಾದಿಮಹಿಮಾ ಜ್ಞಾತಸ್ತ್ವಯಾ ತಾವತಾ
ಧನ್ಯೋ ಧನ್ಯತಮೋಽಸಿ ಮಾನ್ಯ ಇತಿ ಮೇ ಮಾನ್ಯಾತಿಮಾನ್ಯೋಽಪ್ಯಸಿ
॥೧೨೫॥

ಪಾಪಾಪಾರಮಹಾಂಬುರಾಶಿತರಣೋಪಾಯಃ ಶಿವಾಖ್ಯಾ ಸ್ಮೃತಿಃ
ತದ್ದಿವ್ಯೌಷಧಮಿತ್ಯವೈಮಿ ಬಹುಧಾ ಸಂಸಾರರೋಗಕ್ಷಯೇ ।
ಸಾ ತಾವತ್ಸುಕೃತಾಂಬುರಾಶಿತರಣೋಪಾಯಃ ಸುಖಾಂಭೋನಿಧಿಂ
ಸಾ ಕರ್ತುಂ ಧನಮೇವ ಸಾಧನಮಪಿ ಪ್ರಾಜ್ಞಸ್ಯ ಪುಣ್ಯಾತ್ಮನಃ ॥೧೨೬॥

ಅದ್ಯಾಯಂ ಶಿವದಿವ್ಯನಾಮಮಹಿಮಾ ತಾವಚ್ಛ್ರುತೋ ಮುಕ್ತಿದಃ
ಬ್ರಹ್ಮಾನಂದದ ಏವ ತೇನ ಭಗವಾನ್ ಫಾಲೇಕ್ಷಣಸ್ತುಷ್ಯತು ।

ಮನುಷ್ಯನು ಪೂರ್ವಜನ್ಮದ ಪಾಪವಿಶೇಷದಿಂದಲೂ ಮತ್ತು ಆಲಸ್ಯದ ದೆಸೆಯಿಂದಲೂ ಶಿವನನ್ನು ಸ್ಮರಿಸದೇ, ಅಂತ್ಯದಲ್ಲಿ ಘೋರವಾದ ನರಕವನ್ನು ಪಡೆದು, ಅಲ್ಲಿ ದಾರುಣವಾದ ಯಾತನೆಯನ್ನನುಭವಿಸಿ ಬಳಿಕ ಜನ್ಮತಾಳಿ ಸಂಸಾರಿಯಾಗುವನು." ||೧೨೪||

ಚಿತ್ರಗುಪ್ತನ ಆ ಮಾತನ್ನು ಕೇಳಿ ಶಿವಕಥಾಶ್ರವಣದಲ್ಲಿ ಆದರವುಳ್ಳ ಯಮನು ಸಂತೋಷಗೊಂಡವನಾಗಿ ಚಿತ್ರಗುಪ್ತನನ್ನು ಕುರಿತು ಹೀಗೆಂದನು. "ಎಲೈ ಚಿತ್ರಗುಪ್ತನೇ! ನೀನೇ ಪರಮಪಾವನನು. ಈಶ್ವರಪೂಜೆಯ ಮಹಿಮೆಯನ್ನು ಚೆನ್ನಾಗಿ ಅರಿತಿರುವ ನೀನು ಭಾಗ್ಯಶಾಲಿಗಳಲ್ಲೆಲ್ಲಾ ಶ್ರೇಷ್ಠತಮನಾಗಿರುವೆ. ಮತ್ತು ಇಂತಹ ಪರಿಶುದ್ಧನಾದ ನೀನು ನನಗೆ ಅತ್ಯಂತ ಪೂಜ್ಯನು. ||೧೨೫||

ಈಶ್ವರನ ನಾಮಸ್ಮರಣೆಯು ಅಪಾರವಾದ ಪಾಪರಾಶಿಗಳನ್ನು ಹೋಗಲಾಡಿಸುವುದರಲ್ಲಿ ಪ್ರಬಲವಾದ ಸಾಧನ. ಅದು ಸಂಸಾರವೆಂಬ ಮಹಾವ್ಯಾಧಿಯನ್ನು ನಾಶಮಾಡುವುದರಲ್ಲಿ ದಿವ್ಯೌಷಧವಾಗಿರುವುದು. ಈಶ್ವರಸ್ಮರಣೆಯಿಂದ ಉಂಟಾಗುವ ಪುಣ್ಯರಾಶಿಯು ನಿರತಿಶಯವಾದ ಆತ್ಮಾನಂದವನ್ನುಂಟುಮಾಡುವುದರಲ್ಲಿ ಮುಖ್ಯ ಕಾರಣವಾಗಿರುವುದು. ಭಾಗ್ಯಶಾಲಿಯಾದ ಜ್ಞಾನಿಗೆ ಅದೇ ಉತ್ಕೃಷ್ಟವಾದ ಧನ. ||೧೨೬||

ಮೋಕ್ಷಸುಖವನ್ನು ದಯಪಾಲಿಸಿ, ಅದರಿಂದ ಪರಮಾನಂದವನ್ನುಂಟುಮಾಡುವ ಶಿವನಾಮದ ಮಹಿಮಾತಿಶಯವನ್ನು ಈ ದಿವಸ ನಾನು ಕೇಳಿರುವೆನು. ಇದರಿಂದ ಭಗವಂತನಾದ ಈಶ್ವರನು ಸುಪ್ರೀತನಾಗಲಿ'' ಎಂದು ಯಮನು

ಇತ್ಯುಕ್ತ್ವಾ ಪುನರಪ್ಯುವಾಚ ಸ ಮುದಾ ತಂ ಚಿತ್ರಗುಪ್ತಂ ಶಿವೇ
ಕಿಂ ತತ್ಪಾಪವಿನಾಶಕಂ ಕಿಮಪಿ ಕಿಂ ತಸ್ಯಾಸ್ತಿ ಕಿಂ ನೇತ್ಯಪಿ ॥೧೨೭॥

॥ ಚಿತ್ರಗುಪ್ತ ಉವಾಚ ॥

ಸ ಯತ್ರೈವ ಮೃತಸ್ತಸ್ಮಾದ್ದೂರೇ ಶಂಕರಮಂದಿರಂ ।
ಬಾಲಬಿಲ್ವತರುವ್ಯಾಪ್ತಂ ತಿಷ್ಠತ್ಯೇಕಂ ಮನೋಹರಂ ॥೧೨೮॥

ತದೇವ ಮಂದಿರಂ ತಾವತ್ಸರೋವರವಿರಾಜಿತಂ ।
ಮಂದಾರತರುಸಂಕೀರ್ಣಂ ವೃಂದಾರಕವರಾರ್ಚಿತಂ ॥೧೨೯॥

ಅಪಾರಹಾರಸಂಕೀರ್ಣಂ ಹಾರದಾರವಿರಾಜಿತಂ ।
ಭೂತಿರಾಜಿಸಮಾಕೀರ್ಣಂ ರುದ್ರಾಕ್ಷೌಘಸಮಾಶ್ರಿತಂ ॥೧೩೦॥

ಹೇಳುತ್ತಾ ಪುನಃ ಚಿತ್ರಗುಪ್ತನನ್ನು ಕುರಿತು, ಪ್ರೀತಿಯಿಂದ ಹೀಗೆಂದನು. "ಎಲೈ ಚಿತ್ರಗುಪ್ತನೇ! ಭೂಲೋಕದಲ್ಲಿ ಅನೇಕ ಪಾಪಕರ್ಮಗಳನ್ನಾಚರಿಸಿ ಮೃತನಾದ ಈ ಬ್ರಾಹ್ಮಣನ ಪಾಪಗಳನ್ನು ಹೋಗಲಾಡಿಸುವ ಸಾಧನವು ಯಾವುದಾದರೂ ಇರುವುದೇ ? ಅಥವಾ ಅಂತಹ ಸಾಧನವೇ ಇಲ್ಲವೊ! ಎಂಬುದನ್ನೂ ತಿಳಿಯಪಡಿಸು" ಎನಲು, ॥೧೨೭॥

ಆಗ ಚಿತ್ರಗುಪ್ತನು ಹೀಗೆಂದನು. "ಓ ಕೃತಾಂತನೇ! ಈ ಬ್ರಾಹ್ಮಣನು ಯಾವ ಸ್ಥಳದಲ್ಲಿ ಮೃತನಾದನೋ, ಆ ಪ್ರದೇಶಕ್ಕೆ ಸ್ವಲ್ಪ ದೂರದಲ್ಲಿ ಚಿಕ್ಕಚಿಕ್ಕ ಬಿಲ್ವವೃಕ್ಷಗಳಿಂದ ಶೋಭಿಸುತ್ತಿರುವ ಸುಂದರವಾದ ಒಂದಾನೊಂದು ಈಶ್ವರ ದೇವಾಲಯವಿರುವುದು. ॥೧೨೮॥

ಆ ಶಿವಮಂದಿರವು ಪರಿಶುದ್ಧವಾದ ಸರೋವರಗಳಿಂದಲೂ ಮತ್ತು ಮಂದಾರ ವೃಕ್ಷಗಳಿಂದಲೂ ಶೋಭಿಸುತ್ತಿರುವುದು. ಪ್ರತಿದಿನವೂ ಶಿವನನ್ನು ಪೂಜಿಸಲು ದೇವತೆಗಳು ಸಹ ಅಲ್ಲಿಗೆ ಬರುವರು. ॥೧೨೯॥

ಅಲ್ಲಿ ಅನೇಕ ಈಶ್ವರ ಭಕ್ತರು ತಮ್ಮ ಪತ್ನಿಯರೊಂದಿಗೆ ನಿರಂತರವೂ ಈಶ್ವರನನ್ನು ಸೇವಿಸುತ್ತಿರುವರು. ಅದರ ಒಳಗಡೆಯಲ್ಲಿ ಎಲ್ಲಿ ನೋಡಿದರೂ ರುದ್ರಾಕ್ಷ ಸಮೂಹವೂ ಮತ್ತು ವಿಭೂತಿಯ ರಾಶಿಯೂ ಕಾಣಿಸುವುವು. ॥೧೩೦॥

ತತ್ರ ಗಂತುಂ ಸಮುದ್ಯುಕ್ತಃ ಕೃತ್ವಾ ಗೌರೀಸಮರ್ಚನಂ ।
ದೂರಾತ್ಸ್ವಕನ್ಯಯಾ ಯುಕ್ತಃ ಶಿವನಾಮ ಸ್ಮರನ್ಮುಹುಃ ॥೧೩೧॥

ತಾಂ ಕನ್ಯಾಮಲಸಾಂ ದೃಷ್ಟ್ವಾ ತ್ವರಯಾ ಬಾಲಲೀಲಯಾ ।
ಗಂತುಮಪ್ಯುದ್ಯತಾಮಂಬ ಶಿವೇ ಯಾಹೀತಿ ಸಾದರಂ ॥೧೩೨॥

ಸ ಶಬ್ದಸ್ತತ್ರ ವಾತೇನ ಸರ್ವಪಾಪವಿನಾಶಕಃ ।
ವೀಚೀನ್ಯಾಯೇನ ತತ್ಕರ್ಣಂ ಪ್ರಾಪ ಪಶ್ಚಾನ್ಮೃತೋಽಪಿ ಸಃ ॥೧೩೩॥

ಸ ಶಬ್ದಸ್ತ್ರಿಕ್ಷಣಸ್ಥಾಯೀ ಸ ತಾವನ್ನೈವ ತಿಷ್ಠತಿ ।
ಯದ್ಯಪ್ಯಥಾಪಿ ಶಬ್ದಾನ್ಯಃ ತಜ್ಜಾತೀಯೋ ಭವಿಷ್ಯತಿ ॥೧೩೪॥

ಹೀಗಿರುತ್ತಿರಲು ಒಂದಾನೊಂದು ದಿನ, ಒಬ್ಬ ಬ್ರಾಹ್ಮಣನು ಆ ಶಿವಮಂದಿರಕ್ಕೆ ಹೋಗಬೇಕೆಂಬ ಕುತೂಹಲದಿಂದ, ಶಿವನನ್ನು ಮನಸ್ಸಿನಲ್ಲಿ ಸ್ಮರಿಸುತ್ತಾ, ದೇವಾಲಯದ ಸಮೀಪದಲ್ಲಿರುವ ಮಾರ್ಗದಲ್ಲಿ ತನ್ನ ಕನ್ಯೆಯೊಂದಿಗೆ ಶಿವಮಂದಿರದ ಕಡೆಗೆ ಹೋಗುತ್ತಿದ್ದನು. ||೧೩೧||

ಆ ಬ್ರಾಹ್ಮಣ ಕನ್ಯೆಯು ಉದಾಸೀನದಿಂದ ಮೆಲ್ಲನೆ ಮಾರ್ಗವನ್ನು ಅತಿಕ್ರಮಿಸುತ್ತಿರಲು, ತಂದೆಯು ಅವಳನ್ನು ಕುರಿತು ವಿಶ್ವಾಸದಿಂದ “ವತ್ಸೇ! ಇಗೋ! ಇಲ್ಲಿಗೆ ಸ್ವಲ್ಪ ದೂರದಲ್ಲಿಯೇ ಶಿವಮಂದಿರವು ಕಾಣುತ್ತಿರುವುದು. ಶೀಘ್ರವಾಗಿ ಅಲ್ಲಿಗೆ ಹೋಗೋಣ! ಬಾ” ಎಂದು ಹೇಳಿದನು. ||೧೩೨||

ಆಗ ಅವನ ಮಾತುಗಳಿಂದುಂಟಾದ ಶಬ್ದವು, ಸಮುದ್ರದ ಅಲೆಗಳಂತೆ ಒಂದರಿಂದೊಂದು ಹುಟ್ಟುತ್ತಾ, ಮರಣೋನ್ಮುಖನಾಗಿ ಗೃಹದಲ್ಲಿ ಮಲಗಿದ್ದ ಈ ಬ್ರಾಹ್ಮಣನ ಕಿವಿಗಳಿಗೆ ಕೇಳಿಸಿತು. ಬಳಿಕ ಇವನು ಮೃತನಾದನು. ||೧೩೩||

ಹುಟ್ಟಿದ ಕ್ಷಣದಿಂದ ಮೊದಲುಗೊಂಡು ಮೂರುಕ್ಷಣಗಳ ಪರ್ಯಂತ ವ್ಯಕ್ತವಾಗಿ ಬಳಿಕ, ನಾಶವನ್ನು ಹೊಂದುವುದು ಶಬ್ದದ ಸ್ವಭಾವವಾಗಿದ್ದರೂ ಅದು ನಾಶವಾಗುವಾಗ, ತನ್ನಂತೆಯೇ ಇರುವ ಇನ್ನೊಂದು ಶಬ್ದವನ್ನುಂಟುಮಾಡಿ ನಾಶವಾಗುವುದು. ||೧೩೪||

ತಸ್ಮಾದಪಿ ಪುನಃ ಕಶ್ಚಿತ್ತಸ್ಮಾದಪಿ ತಥಾ ಭವೇತ್ ।
ತಜ್ಜಾತೀಯತ್ವಮೇತೇಷಾಂ ವಿಚ್ಯುತಂ ನ ಚ ಸರ್ವಥಾ ॥೧೩೫॥

ಇತಿ ತದ್ವಚನಂ ಶ್ರುತ್ವಾ ತ್ವರಯಾ ಸ ಯಮಃ ಶಿವೇ ।
ಉತ್ಥಾಯ ಗಂತುಮುದ್ಯುಕ್ತಃ ಸ ಯತ್ರಾಸ್ತಿ ಮೃತೋ ನರಃ ॥೧೩೬॥

ಸ ಗಚ್ಛನ್ ವರುಣೇನಾಪಿ ಸಹ ತದ್ದೇಶಮಂಡಲಂ
ಜಲೈಃ ಸಂಪೂರಯಾಮಾಸ ತದ್ದುರ್ಗಂಧವಿನಾಶಕೈಃ ॥೧೩೭॥

ತತಸ್ತತ್ರ ಗತಃ ಕಾಲಃ ತಂ ಪ್ರಣಮ್ಯ ಪುನಃ ಪುನಃ ।
ಪೂಜಯಿತ್ವಾ ಬಿಲ್ವಪತ್ರೈಃ ನನರ್ತ ಚ ಸುರೈಃ ಸಹ ॥೧೩೮॥

ತತೋ ವಿಮಾನೇ ಸಂಸ್ಥಾಪ್ಯ ತಂ ತಯಾ ಸಹಿತಂ ಶಿವೇ ।
ತದಾನೀಮಾಗತೋ ಬ್ರಹ್ಮಾ ತದ್ದ್ರಷ್ಟುಂ ವಿಷ್ಣುನಾ ಸಹ ॥೧೩೯॥

ಒಂದು ಶಬ್ದದಿಂದ ಇನ್ನೊಂದು ಶಬ್ದ, ಆ ಶಬ್ದದಿಂದ ಮತ್ತೊಂದು ಶಬ್ದ, ಈ ರೀತಿಯಲ್ಲಿ ಒಂದಾದಕೂಡಲೇ ಮತ್ತೊಂದು ಸಜಾತೀಯವಾದ ಶಬ್ದವು ಬಹು ಕಾಲದವರೆಗೆ ಹುಟ್ಟುತ್ತಲೇ ಇರುವುದು. ಇದೇ ಶಬ್ದೋತ್ಪತ್ತಿಯ ಕ್ರಮ. ||೧೩೫||

ಎಲೌ ಗಿರಿಜೆಯೇ! ಚಿತ್ರಗುಪ್ತನ ಆ ಮಾತನ್ನು ಕೇಳಿ ಯಮನು ಮೇಲಕ್ಕೆದ್ದು, ಮೃತನಾದ ಆ ಬ್ರಾಹ್ಮಣನು ಇರುವ ಸ್ಥಳವನ್ನು ಕುರಿತು ಹೊರಡಲು ಉದ್ಯುಕ್ತನಾದನು. ||೧೩೬||

ಅವನು ವರುಣನಿಂದೊಡಗೂಡಿ, ಆ ಪ್ರದೇಶಕ್ಕೆ ಹೋಗಬೇಕೆಂದು ನಿಶ್ಚಯಿಸಿ, ವರುಣನ ಸಹಾಯದಿಂದ, ಬ್ರಾಹ್ಮಣನ ಮೃತಕಳೇಬರದಿಂದ ದುರ್ಗಂಧ ಯುಕ್ತವಾದ ಆ ಸ್ಥಳವನ್ನು ನೀರಿನ ಪ್ರವಾಹದಿಂದ ಹೋಗಲಾಡಿಸಿದನು. ||೧೩೭||

ಬಳಿಕ ಯಮನು ಆ ಬ್ರಾಹ್ಮಣ ಶವವಿದ್ದಲ್ಲಿಗೆ ಹೋಗಿ ಬಾರಿಬಾರಿಗೂ ನಮಸ್ಕರಿಸಿ, ಬಿಲ್ವಪತ್ರೆಗಳಿಂದ ಪೂಜಿಸಿ, ದೇವತೆಗಳೊಂದಿಗೆ ನಾಟ್ಯವನ್ನಭಿನಯಿಸಿದನು. ||೧೩೮||

ತರುವಾಯ ಆ ಮೃತ ಕಳೇಬರವನ್ನು ಅವನ ಪತ್ನಿಯೊಂದಿಗೆ ವಿಮಾನದಲ್ಲಿರಿಸಿದನು. ಆಗ ಅದನ್ನು ನೋಡಲು, ಬ್ರಹ್ಮನು ವಿಷ್ಣುವಿನೊಂದಿಗೆ ಅಲ್ಲಿಗೆ ಬಂದನು. ||೧೩೯||

ತದಾನೀಮೇವ ತೈರ್ದೃಷ್ಟಾಃ ಕೋಟಿಶೋಽಪಿ ಮಹೋರಗಾಃ ।
ಸಂದಗ್ಧಪುಚ್ಛಭಾಗಾಸ್ತೇ ದಗ್ಧಾಸ್ಯರಸನಾ ಅಪಿ ॥೧೪೦॥

ತಾನ್ ದೃಷ್ಟ್ವಾ ವಿಸ್ಮಯಾವಿಷ್ಟಾಸ್ತೇ ಸರ್ವೇಽಪಿ ಸುರಾಃ ಶಿವೇ ।
ತದಾನೀಮಾಗತೋ ಬ್ರಹ್ಮಾ ತದ್ದ್ರಷ್ಟುಂ ವಿಷ್ಣುನಾ ಸಹ ॥೧೪೧॥

ತತಃ ಪ್ರಣಮ್ಯ ತಂ ವಿಷ್ಣುಂ ಯಮಃ ಪ್ರಾಹ ವಿಚಕ್ಷಣಃ ।
ಕಿಮೇತದದ್ಭುತಂ ವಿಷ್ಣೋ ವದೇತಿ ಪ್ರೀತಿಪೂರ್ವಕಂ ॥೧೪೨॥

॥ ವಿಷ್ಣುರುವಾಚ ॥

ಶಿವಾಖ್ಯಾ ಶ್ರುತಾ ತೇನ ತತ್ಪಾಪರಾಶಿಃ ।
ಮಹಾಸರ್ಪರೂಪೇಣ ದಗ್ಧಃ ಪ್ರಯಾತಿ
ಅತಃ ಪುಣ್ಯವಾನೇವ ಸೋಽಯಂ ಮಹಾತ್ಮಾ
ಮಯಾ ಪೂಜ್ಯ ಏವ ತ್ವಯಾಪ್ಯತ್ರ ಕಾಲ ॥೧೪೩॥

ಆಗ ಅಲ್ಲಿದ್ದ ದೇವತೆಗಳು ಭಯಂಕರವಾದ ಅನೇಕ ಸರ್ಪಗಳನ್ನು ನೋಡಿದರು. ಆ ಹಾವುಗಳ ಬಾಲ, ಮುಖ, ನಾಲಿಗೆ, ಇವುಗಳು ದಹಿಸಿ ಹೋಗಿದ್ದವು. ॥೧೪೦॥

ಆ ಉರಗಗಳನ್ನು ನೋಡಿ ಸಕಲ ದೇವತೆಗಳೂ ಆಶ್ಚರ್ಯಚಕಿತರಾದರು. ಆಗ ಅದನ್ನು ನೋಡಲು ಬ್ರಹ್ಮನು ವಿಷ್ಣುವಿನಿಂದೊಡಗೂಡಿ ಅಲ್ಲಿಗೆ ಬಂದನು. ॥೧೪೧॥

ಬಳಿಕ ಪ್ರಾಜ್ಞನಾದ ಯಮನು ವಿಷ್ಣುವಿಗೆ ನಮಸ್ಕರಿಸಿ "ಓ ವಿಷ್ಣುವೇ! ಇದೇನು ಆಶ್ಚರ್ಯ" ಇದನ್ನು ನನಗೆ ಹೇಳುವವನಾಗು ಎಂದು ಪ್ರಾರ್ಥಿಸಿದನು. ॥೧೪೨॥

ಯಮನು ಕೇಳಲು ವಿಷ್ಣುವು "ಎಲೈ ಯಮನೇ! ಈ ಬ್ರಾಹ್ಮಣನು ಮರಣಕಾಲದಲ್ಲಿ ಶಿವನಾಮವನ್ನು ಕೇಳಿರುವನು. ಆದರಿಂದ, ಅವನ ಪಾಪರಾಶಿಯೆಲ್ಲವೂ ಭಸ್ಮವಾಗಿ ಈ ಭಯಂಕರವಾದ ಸರ್ಪರೂಪವನ್ನು ತಾಳಿ ಹೋಗುತ್ತಿರುವುದು. ಆದುದರಿಂದ ಈತನು ನಿಜವಾಗಿಯೂ ಭಾಗ್ಯಶಾಲಿಯಾಗಿರುವನು. ಇವನು ಈಗ ನಮ್ಮಿಬ್ಬರಿಗೂ ಪೂಜ್ಯನು. ॥೧೪೩॥

ಅನೇನಾಂತಕಾಲೇ ಶ್ರುತಂ ನಾಮ ಶೈವಂ
ತದೇವಾಘಕೋಟಿಪ್ರಣಾಶಾಯ ಶಕ್ತಂ ।
ನ ತತ್ಕೃತ್ಯಮೇತಾವದೇವೇತಿ ಮನ್ಯೇ
ಶಿವಾಗ್ರೇಽಪಿ ನೃತ್ಯಂ ಕರಿಷ್ಯತ್ಯಯಂ ಹಿ ॥೧೪೪॥

ಅಯಂ ಪುಣ್ಯವಾನಸ್ಯ ಪುಣ್ಯಸ್ಯ ಸಾಂತಃ
ಯತೋ ನಾಮ ದಿವ್ಯಂ ಶ್ರುತಂ ಶಾಂಭವಂ ಹಿ ।
ಕಥಂ ವಾ ನ ಧನ್ಯೋಽಪಿ ಪೂಜ್ಯಶ್ಚ ದೇವೈಃ
ಮಹದ್ಭಾಗ್ಯಮೇತಸ್ಯ ಸೌಭಾಗ್ಯಮೇವಂ ॥೧೪೫॥

ಪುಣ್ಯಾನಿ ಸಂತಿ ವಿವಿಧಾನಿ ತಥಾಪಿ ಕಿಂ ತೈಃ
ಅಂತೇ ಕೃತಾಂತ ಜನಿದುಃಖಕರಾಣಿ ತಾನಿ ।
ಪುಣ್ಯೇ ಪ್ರಣಾಶಮುಪಯಾತಿ ಪುನಶ್ಚ ಗರ್ಭೇ
ವಾಸೋ ಭವತ್ಯಪಿ ಪುನರ್ಮರಣಂ ಜನಿಶ್ಚ ॥೧೪೬॥

ಇವನು ಮರಣಕಾಲದಲ್ಲಿ ಶಿವನಾಮಧೇಯವನ್ನು ಕೇಳಿರುವನು. ಆ ಶಿವನಾಮವೇ ಅನೇಕ ಪಾಪಗಳನ್ನು ನಾಶಮಾಡುವುದರಲ್ಲಿ ಸಮರ್ಥವಾಗಿರುವುದು. ಶಿವನಾಮದ ಪ್ರಭಾವವು ಇಷ್ಟೇ ಆಗಿರದೇ, ಪರಮಪಾವನನಾದ ಈತನು ಶಿವಲೋಕವನ್ನು ಪಡೆದು ಶಿವನ ಮುಂಭಾಗದಲ್ಲಿ ನರ್ತಿಸುವನು. ॥೧೪೪॥

ಇವನು ಅತ್ಯಂತ ಪುಣ್ಯಶಾಲಿಯಾಗಿರುವನು. ಇವನು ದಿವ್ಯವಾದ ಶಿವನಾಮವನ್ನು ಕೇಳಿರುವುದರಿಂದ ಇವನ ಭಾಗ್ಯವಿಶೇಷಕ್ಕೆ ಮಿತಿಯೇ ಇಲ್ಲ. ಹೀಗಿರುತ್ತಿರಲು ಇವನು ಕೃತಕೃತ್ಯನಲ್ಲವೇ? ದೇವತೆಗಳಿಗೂ ಇವನು ಪೂಜ್ಯನಾಗಿರುವನಲ್ಲದೇ ಇವನ ಭಾಗ್ಯವು ವರ್ಣಿಸಲಶಕ್ಯವಾಗಿರುವುದು. ॥೧೪೫॥

ಎಲೈ ಯಮಧರ್ಮರಾಜನೇ! ಲೋಕದಲ್ಲಿ ನಾನಾವಿಧವಾದ ಅನೇಕ ಪುಣ್ಯಕರ್ಮಗಳಿರುವುವು. ಆದರೆ ಅವು ಅಂತ್ಯದಲ್ಲಿ ದುಃಖವನ್ನುಂಟುಮಾಡುವುವು. ಏಕೆಂದರೆ, ಈ ಜನ್ಮದಲ್ಲಿ ಆಚರಿಸಿದ ಪುಣ್ಯಕರ್ಮಗಳು ಭೋಗದಿಂದ ಕ್ಷಯಿಸಲು, ಪುನಃ ಪ್ರಾಣಿಗರ್ಭದಲ್ಲಿ ವಾಸಮಾಡಿ ಅಲ್ಲಿಂದ ಜನಿಸಿ ಕೆಲವು ಕಾಲವಾದ ಬಳಿಕ ಮರಣವನ್ನು ಹೊಂದುವನು. ॥೧೪೬॥

ಏವಂ ಶಂಕರನಾಮರೂಪಮನಘಂ ದಿವ್ಯಾಸ್ತ್ರಮತ್ಯದ್ಭುತಂ
ತದ್ಯೇನ ಶ್ರುತಮಂತತಃ ಸ್ಮೃತಮಪಿ ಧ್ಯಾತಂ ಚ ದೈವಾತ್ಸ ತು ।
ತೇನೈವಾಶು ವಿನಾಶಯತ್ಯಘಕುಲಾಕಾರಾನ್ರಿಪೂನ್ ಕೋಟಿಶಃ
ಸಂಸಾರಾಮಯಲಕ್ಷಣಂ ರಿಪುಮಪಿ ಸ್ವಚ್ಛಂದವೃತ್ತಿಂ ಸ್ವತಃ ॥೧೪೭॥

ಧ್ಯಾತಂ ಪುಣ್ಯಮಹಾಂಬುಧಿಂ ಜನಯತಿ ಜ್ಞಾತಂ ಸ್ಮೃತಂ ವಾ ಶ್ರುತಂ
ನಾಮೇದಂ ಯಮ ಶಾಂಭವಂ ಮಹದಿದಂ ಶಸ್ತ್ರಂ ರಿಪೂಣಾಂ ಕ್ಷಯೇ ।
ಸಂಸಾರಾಮಯರೂಪಶತ್ರುವಿಲಯೋಪಾಯಃ ಪರಂ ತತ್ಪದಂ
ಮುಕ್ತಿಂ ದಾತುಮಪಿ ಪ್ರವೃತ್ತಮಸಕೃದ್ಯದ್ವಾ ಸಕೃದ್ವಾ ಸ್ಮೃತಂ ॥೧೪೮॥

ದತ್ತಂ ಶಂಕರನಾಮರೂಪಮಮೃತಂ ಸೇವ್ಯಂ ಸುರೈಃ ಸರ್ವದಾ
ಪುಣ್ಯೈಃ ಪುಣ್ಯಸಮಾಶ್ರಯೈರ್ಮುನಿವರೈಃ ಸಿದ್ಧೈಃ ಫಣೀಂದ್ರಾದಿಭಿಃ ।
ಗಂಧರ್ವೈರಪಿ ಕಿನ್ನರೈರಪಿ ನರೈಃ ಸಂಸಾರಭೂರಿ ವ್ಯಥಾ
ವ್ಯರ್ಥಾಯಾಸಕದರ್ಥನಾಯ ಬಹುಧಾ ತತ್ತುಲ್ಯಮನ್ಯತ್ತು ನ ॥೧೪೯॥

ಈ ಪ್ರಕಾರವಾಗಿ ಪವಿತ್ರವಾದ ಶಿವನಾಮಧೇಯವು, ಅಪಾರವಾದ ಮಹಿಮೆಯುಳ್ಳ ದಿವ್ಯಾಸ್ತ್ರದಂತಿರುವುದು. ಅದರ ಶ್ರವಣ, ಸ್ಮರಣ, ಧ್ಯಾನಗಳಿಂದ ಸಕಲ ಪಾಪಗಳೂ ಶೀಘ್ರವಾಗಿ ಕ್ಷಯಿಸುವುವಲ್ಲದೇ, ಅದು ಸಂಸಾರ ರೋಗವೆಂಬ ಪ್ರಬಲವಾದ ಶತ್ರುವನ್ನು ನಾಶಗೊಳಿಸಿ ಜನರ ಸ್ವೇಚ್ಛಾಚಾರವನ್ನು ಹೋಗಲಾಡಿಸುವುದು. ||೧೪೭||

ಎಲೈ ಯಮನೇ! ಶಿವನ ನಾಮದ ದಿವ್ಯವಾದ ಮಹಿಮೆಯನ್ನರಿತು ಅದರ ಶ್ರವಣ, ಮನನ, ನಿದಿಧ್ಯಾಸನಗಳಿಂದ ಭಯಂಕರವಾದ ಪಾಪಗಳು ನಾಶಹೊಂದುವುವು. ಪಾಪಗಳೆಂಬ ಶತ್ರುವನ್ನು ನಾಶಪಡಿಸುವುದರಲ್ಲಿ ಶಿವನಾಮವು ಹರಿತವಾದ ಶಸ್ತ್ರದಂತಿರುವುದು. ಅದು ಸಂಸಾರವೆಂಬ ಮಹಾವ್ಯಾಧಿಯನ್ನು ಹೋಗಲಾಡಿಸುವುದರಲ್ಲಿ ಉತ್ಕೃಷ್ಟವಾದ ಸಾಧನವಾಗಿರುವುದು. ಅನೇಕ ಬಾರಿಯಾಗಲಿ ಅಥವಾ ಒಂದೇ ಒಂದು ಬಾರಿಯಾಗಲಿ ಅದನ್ನು ಸ್ಮರಿಸುವುದರಿಂದ ಅದು ಮೋಕ್ಷಸುಖವನ್ನು ದಯಪಾಲಿಸುವುದು. ||೧೪೮||

ಕರುಣಾಮಯನಾದ ಶಿವನು ಸಂಸಾರಸಾಗರದಲ್ಲಿ ಮುಳುಗಿರುವ ಪ್ರಾಣಿಗಳನ್ನು ಉದ್ಧರಿಸುವುದಕ್ಕೋಸ್ಕರ ದಿವ್ಯವಾದ ಶಿವನಾಮಾಮೃತವನ್ನು ಜಗತ್ತಿನಲ್ಲಿ

ಮುಕ್ತಿಶ್ಚೇತ್ಸಮುಪೇಕ್ಷಿತಾ ಶಿವಪದಧ್ಯಾನೇ ರತಾಃ ಸಂತತಂ ।
ಸಂತಃ ಸಂತು ಸಹಸ್ರಶೋಽಪಿ ನಿಗಮಪ್ರೋಕ್ತಾಶ್ಚ ಧರ್ಮಾಃ ಪರಂ
ಕಿಂ ತೈರ್ಮುಕ್ತಿರವಾಪ್ಯತೇ ಯದಿ ಭವೇತ್ ಸ್ವರ್ಗಃ ಪರಂ ತೈರ್ಭವೇತ್
ಅಂತೇ ಜನ್ಮ ಜರಾ ಚ ಮೃತ್ಯುರಪಿ ತೈರ್ಮುಕ್ತಿಃ ಕಥಂ ವಾ ಭವೇತ್ ॥೧೫೦॥

ಜ್ಯೋತಿಷ್ಟೋಮೇನೇತಿ ವಾಕ್ಯೇನ ತಾವ
ತ್ಸ್ವರ್ಗಕಾಮೋ ತತ್ಫಲಂ ಸ್ವರ್ಗ ಏವ ।
ಜ್ಯೋತಿಷ್ಟೋಮಃ ಸಾಧನಂ ಚೇತಿ ತಜ್ಞೈಃ
ವಿಜ್ಞಾನಂ ಚೇತ್ತತ್ರ ಮುಕ್ತೇಃ ಕಥಾ ಕಾ ॥೧೫೧॥

ಸೃಷ್ಟಿಸಿರುವನು. ಆ ಶಿವನಾಮವು ದೇವತೆಗಳು, ಮುನಿಗಳು, ಸಿದ್ಧರು, ಉರಗರು, ಗಂಧರ್ವರು, ಕಿನ್ನರರು ಮತ್ತು ಮನುಷ್ಯರು ಇವರೆಲ್ಲರಿಗೂ ಪೂಜ್ಯವಾಗಿರುವುದು. ಸಂಸಾರಿಗಳಾಗಿ ನಾನಾವಿಧವಾದ ಕಷ್ಟಗಳನ್ನನುಭವಿಸುತ್ತಿರುವ ಜನರ ಹಿಂಸೆಯನ್ನು ಹೋಗಲಾಡಿಸುವುದರಲ್ಲಿ ಶಿವನಾಮಕ್ಕೆ ಸದೃಶವಾದ ಇನ್ನೊಂದು ಸಾಧನವೇ ಇಲ್ಲ. ||೧೪೯||

ಸಜ್ಜನರಾದವರು ಮುಕ್ತಿಯನ್ನು ಬಯಸುವುದೇ ಆದರೆ, ಅವರು ಶಿವನಾಮ ಧ್ಯಾನದಲ್ಲಿ ಆಸಕ್ತರಾಗಿರಬೇಕು. ಅದಲ್ಲದೆ, ವೇದೋಕ್ತವಾದ ಯಜ್ಞಯಾಗಾದಿ ಕರ್ಮಗಳಿಂದ ಮೋಕ್ಷವು ಲಭಿಸುವುದೇ? ಅವುಗಳ ಆಚರಣೆಯಿಂದ ಸ್ವರ್ಗವು ಲಭಿಸಿ, ಕರ್ಮಕ್ಷಯವಾದ ಬಳಿಕ ಪುನಃ ಈ ಲೋಕದಲ್ಲಿ ಜನ್ಮಜರಾಮರಣಗಳು ಉಂಟಾಗುವುವು. ಹೀಗಿರುತ್ತಿರಲು ಆ ಕರ್ಮಗಳಿಂದ ಮೋಕ್ಷವು ಲಭಿಸುವ ಬಗೆ ಹೇಗೆ? ||೧೫೦||

ಕರ್ಮಠನಾದವನು, "ಜ್ಯೋತಿಷ್ಟೋಮೇನ ಸ್ವರ್ಗಕಾಮೋ ಯಜೇತ" ಎಂಬ ಈ ವೇದವಾಕ್ಯವನ್ನು ಕೇಳಿ, ಸ್ವರ್ಗಫಲವನ್ನು ಉದ್ದೇಶಿಸಿ ಕರ್ಮಗಳನ್ನು ಆಚರಿಸುವನು. ಅದರಿಂದ ಸ್ವರ್ಗಪ್ರಾಪ್ತಿರೂಪವಾದ ಫಲವು ಲಭಿಸುವುದು. ಕರ್ಮನಿಪುಣರಾದ ಅವರು ಜ್ಯೋತಿಷ್ಟೋಮಾದಿಕರ್ಮಗಳೇ, ಮುಕ್ತಿಸಾಧನವೆಂದು ತಿಳಿದರೆ, ಅವರಿಗೆ ಮುಕ್ತಿಯು ಲಭಿಸುವ ಬಗೆ ಹೇಗೆ? ||೧೫೧||

ಏತಾದೃಶಾನಿ ವಾಕ್ಯಾನಿ ಸಂತಿ ತಾವದ್ಬಹೂನ್ಯಪಿ ।
ತಾದೃಶೈರ್ಮುಕ್ತಿವಾರ್ತಾಪಿ ಸರ್ವಥಾ ನ ಕೃತಾ ಖಲು ॥೧೫೨॥

ನ ಜ್ಞಾತೋಽಪಿ ಶಿವಾಭಿಧಾನಮಹಿಮಾ ವೇದೈರ್ಮುನೀಂದ್ರೈರ್ಮಯಾ
ಸಿದ್ಧೈರ್ವಾ ಪರಮಿಂದುಖಂಡಶಿರಸಾ ಜ್ಞಾತಃ ಸ ತಾವದ್ಯಮು ।
ತಸ್ಮಿನ್ ದೇವಶಿಖಾಮಣೇರತಿಕೃಪಾ ಕಿಂ ತೇನ ತಪ್ತಂ ತಪಃ
ತನ್ನಾಮಾಮೃತವೇದರತ್ನಮಿತಿ ತಚ್ಛ್ರೇಷ್ಠಂ ಚ ವೇದೇಷ್ವಪಿ ॥೧೫೩॥

ವೇದಾಸ್ತೇಽಪಿ ಶಿವಾಭಿಧಾನಸಹಿತಾಃ ಪೂತಾಃ ಪರಂ ಪಾವನಂ
ನತ್ವಾ ತಂ ಪ್ರವದಂತಿ ತೇಽಪಿ ಬಹುಧಾ ತನ್ನಾಮಸಂಕೀರ್ತನಂ ।
ಕುರ್ವಂತಿ ಪ್ರಣಮಂತಿ ವೇದಶಿರಸಾಂ ರತ್ನಂ ತದೇವೇತ್ಯಪಿ
ವ್ಯಾಹೃತ್ಯಾನ್ಯಹಮಾದರೇಣ ಬಹುಧಾ ತತ್ಪ್ರಸ್ತುವಂತ್ಯದ್ಭುತಂ ॥೧೫೪॥

ಪೂರ್ವೋಕ್ತವಾದ ವೇದವಾಕ್ಯದಂತೆ, ಫಲವನ್ನುದ್ದೇಶಿಸಿ ಕರ್ಮಗಳನ್ನು ಬೋಧಿಸುವ ಅನೇಕ ವೇದವಾಕ್ಯಗಳಿರುವುವು. ಆದರೆ ಅವುಗಳಲ್ಲಿ ಯಾವ ವಾಕ್ಯವೂ ಮೋಕ್ಷದ ಸ್ವರೂಪವನ್ನು ಬೋಧಿಸಿರುವುದಿಲ್ಲ. ಮೋಕ್ಷಪ್ರಾಪ್ತಿರೂಪವಾದ ಫಲವನ್ನೂ ವಿವರಿಸುವುದಿಲ್ಲ. ॥೧೫೨॥

ಎಲೈ ಕೃತಾಂತನೇ, ಶಿವನಾಮದ ಮಹಿಮೆಯನ್ನು ದೇವತೆಗಳೂ ವೇದಗಳೂ, ಮುನಿಶ್ರೇಷ್ಠರೂ, ನಾನೂ, ಸಿದ್ಧರೂ, ಇವರಾರೂ ಪೂರ್ಣವಾಗಿ ತಿಳಿದುಕೊಂಡಿಲ್ಲ. ಶಿವನಾಮಮಹಿಮೆಯನ್ನರಿತವನು ಶಂಕರನೊಬ್ಬನೇ. ಆದರೂ ಈ ಬ್ರಾಹ್ಮಣನು ಶಿವನ ಕೃಪೆಗೆ ಪಾತ್ರನಾದನು. ಅವನು ಪೂರ್ವಜನ್ಮದಲ್ಲಿ ಯಾವ ಘೋರವಾದ ತಪಸ್ಸನ್ನು ಆಚರಿಸಿದ್ದನೋ ಅದನ್ನು ನಾವು ಅರಿಯೆವು. ಆ ಅಮೃತ ದಂತೆ ಹಿತಕರವಾದ ಶಿವನಾಮವನ್ನು ತಿಳಿಯಪಡಿಸುವ ವೇದವಾಕ್ಯವೇ ಸಕಲ ವೇದಗಳಲ್ಲಿಯೂ ಶ್ರೇಷ್ಠವಾಗಿರುವುದು. ॥೧೫೩॥

ಶಿವನಾಮಸಹಿತವಾದ ವೇದವಾಕ್ಯಗಳು ಪರಮಪಾವನವಾದ ಶಿವಸ್ವರೂಪ ವನ್ನು ಹೇಳುವುವು. ಅವನ ನಾಮವನ್ನು ಉಚ್ಚರಿಸುವುವು. ಶಿವನೇ ಉಪನಿಷತ್ತು ಗಳಿಗೆ ರತ್ನದಂತೆ ಶ್ರೇಷ್ಠನಾಗಿರುವನೆಂದು ತಿಳಿದು ಅವನನ್ನು ನಮಸ್ಕರಿಸುವುವು. ಅಲ್ಲದೇ ಆ ವೇದೋಪನಿಷದ್ವಾಕ್ಯಗಳು ನಾನಾವಿಧದಿಂದ ಶಿವನನ್ನು ಸ್ತುತಿಸುವುವು. ॥೧೫೪॥

ಸುಲಭಂ ಶಿವನಾಮಕೀರ್ತನಂ
ತಪಸಾ ತಾವದಿದಂ ವಿಶೇಷತಃ ।
ಅತಿ ದುರ್ಲಭಮೇವ ದುಷ್ಕೃತೇ
ಸತಿ ತಾವನ್ಮಹತಾಮಪಿ ಧ್ರುವಂ ॥೧೫೫॥

ಅರ್ಭಕೇ ಯನ್ಮಧು ತದ್ವಿಹಾಯ ಸುವಿಪಿನಂ ಯಾಂತ್ಯೇವ ಕಂ ಕ್ರೀಡಯಾ
ಭಿಲ್ಲಾಸ್ತದ್ವದಘೌಘನಾಶಕನಮುನಾಮಾಕಾಂತಾಭಿಧಾನಾಮೃತಂ ।
ತ್ಯಕ್ತ್ವಾ ಯಾಂತಿ ವನಾನಿ ತಾವದಧುನಾ ಕರ್ತುಂ ತಪಃ ಸಂತತಂ
ವ್ಯರ್ಥಾಯಾಸಫಲಾಯ ಗಾಢತಿಮಿರೇ ಮೂಢಾಃ ಪತಂತ್ಯೇವ ಹಿ ॥೧೫೬॥

ಯನ್ನಾಮಸ್ಮರಣಾದಘೌಘವಿಲಯಃ ಸರ್ವಾಪದಾಂ ನಾಶನಂ
ಸಂಸಾರಾಮಯನಾಶನಂ ಚ ಸುಲಭಂ ತತ್ರ ಶ್ರಮಃ ಕೋಽಪಿ ನ ।
ತನ್ನಾಮಾಮೃತಪಾನಮೇವ ಸತತಂ ಕರ್ತವ್ಯಮಿತ್ಯಾದರಃ
ಲೋಕೇ ಪುಣ್ಯವತಾಂ ಪರಂ ಭವತಿ ಚೇದನ್ಯಸ್ಯ ನಾತ್ರಾದರಃ ॥೧೫೭॥

ಸುಕೃತವಿಶೇಷವೊಂದಿದ್ದರೆ, ಶಿವನಾಮವನ್ನುಚ್ಚರಿಸುವ ಸುಯೋಗವು ಅನಾಯಾಸವಾಗಿ ಲಭಿಸುವುದು. ಪೂರ್ವಜನ್ಮದಲ್ಲಿ ಸಂಚಿತವಾದ ಪಾಪಶೇಷವು ಪ್ರಬಲವಾಗಿರುವುದಾದರೆ, ಮಹಾತ್ಮರಿಗೂ ಶಿವನಾಮಕೀರ್ತನವು ದುರ್ಲಭವೆನಿಸುವುದು. ॥೧೫೫॥

ಏನೂ ಅರಿಯದ ಮಗುವು ರುಚಿಕರವಾದ ಜೇನುತುಪ್ಪವನ್ನು ಹೊಂದಲು ಯತ್ನಿಸದೆ, ನೀರನ್ನು ಬಡಿದು ಆಟವಾಡಲು ಉತ್ಸಾಹಪಡುವುದು. ಹಾಗೆಯೇ ಬೇಡರಾದವರು ಪಾಪನಾಶಕವಾದ ಶಿವನಾಮಾಮೃತವನ್ನು ಪಾನಮಾಡಲಿಚ್ಛಿಸದೆ, ಕಾಡಿನಲ್ಲಿ ಪಾಪಸಂಘಟನೆಯಾಗುವ ದುಷ್ಕೃತ್ಯಕ್ಕೆ ತೊಲಗುವರು. ಅದರಂತೆಯೇ ಮಂದಮತಿಗಳಾದವರು ಸುಲಭವಾಗಿ ಮೋಕ್ಷವನ್ನುಂಟುಮಾಡುವ ಶಿವನಾಮವನ್ನುಚ್ಚರಿಸುವುದನ್ನು ಬಿಟ್ಟು, ಘೋರತರವಾದ ತಪಸ್ಸುಗಳನ್ನಾಚರಿಸಲು ವನಾಂತರಕ್ಕೆ ತೆರಳುವರು. ॥೧೫೬॥

ಶಿವನಾಮಸ್ಮರಣೆಯಿಂದ ಸಕಲಪಾಪರಾಶಿಗಳೂ ಕ್ಷಯಿಸುವುವು. ಸಕಲ ತೊಂದರೆಗಳೂ ದೂರವಾಗುವುವು. ಸಂಸಾರವೆಂಬ ಮಹಾವ್ಯಾಧಿಯು ಶೀಘ್ರವಾಗಿ ನಾಶವನ್ನು ಹೊಂದುವುದು. ಶಿವನಾಮಾಮೃತದ ಸ್ಮರಣೆಯು ಅನಾಯಾಸವಾಗಿ

ಶಿವಸ್ಮರಣಲಾಲಸಂ ಯದಿ ಭವೇತ್ತದಾ ಮಾನಸಂ
ಪುನರ್ನ ಜನಿಸಾಧ್ವಸಂ ಮರಣಸಾಧ್ವಸಂ ವಾ ಯಮ ।
ತತಸ್ತದಮೃತಾಮೃತಂ ಮೃತಜನಸ್ಯ ಸಂಜೀವನಂ
ಜರಾಮರಣಜನ್ಮನಾಮಪಿ ವಿನಾಶಕಂ ಸಾಧನಂ ॥೧೫೮॥

ಇತ್ಯುಕ್ತಂ ತದ್ವಚಃ ಶ್ರುತ್ವಾ ಯಮಃ ಸಂತುಷ್ಟಮಾನಸಃ ।
ತಮೇವ ಪೂಜಯಾಮಾಸ ವಿಷ್ಣುನಾ ಬ್ರಹ್ಮಣಾ ಸಹ ॥೧೫೯॥
ತಮುವಾಚ ತತೋ ವಿಷ್ಣುಃ ಪ್ರಣಮ್ಯ ಶಿರಸಾ ಮುಹುಃ ।
ಅರ್ಚಯಿತ್ವಾ ಬಿಲ್ವಪತ್ರೈಃ ಮಂದಾರಕುಸುಮೈರಪಿ ॥೧೬೦॥

॥ ವಿಷ್ಣುರುವಾಚ ॥

ಶಿವಾಭಿಧಾನಂ ಮರಣಕ್ಷಣೇ ಶ್ರುತಂ
ತ್ವಯಾ ಶಿವಾನುಗ್ರಹಪಾತ್ರಭೂತಂ ।
ಮನ್ಯೇ ಭವಂತಂ ಭಗವಂತಮೇವ
ತ್ವಯಾ ನ ತುಲ್ಯೋ ಭುವನತ್ರಯೇಽಪಿ ॥೧೬೧॥

ಲಭಿಸುವುದು. ಆದರೆ, ಸದಾ ಶಿವನಾಮಾಮೃತವನ್ನೇ ಪಾನಮಾಡಬೇಕೆಂಬ ಬುದ್ಧಿಯು ಪುಣ್ಯಶಾಲಿಗಳಿಗೇ ಉದಯಿಸುವುದಲ್ಲದೇ ಇತರರಿಗೆ ಅದರಲ್ಲಿ ಎಂದಿಗೂ ಆದರವು ಉಂಟಾಗಲಾರದು. ॥೧೫೭॥

ಎಲೈ ಯಮನೇ, ಚಿತ್ತವು ಶಿವಸ್ಮರಣೆಯಲ್ಲಿಯೇ ಆಸಕ್ತವಾದುದಾದರೆ ಪುನಃ ಜನನ ಮರಣಗಳ ಭಯವೇ ಇರುವುದಿಲ್ಲ. ಆದುದರಿಂದ, ಶಿವನಾಮಸ್ಮರಣೆಯು ಅತಿಶ್ರೇಷ್ಠವಾದ ವಸ್ತುವು. ಅದು ಮೃತನಾದ ಮನುಜನನ್ನೂ ಸಹ ಅಮರನನ್ನಾಗಿ ಮಾಡುವುದು. ಜನ್ಮಜರಾಮರಣಗಳಿಂದ ಕೂಡಿರುವ ಈ ಸಂಸಾರವನ್ನು ಹೋಗಲಾಡಿಸುವುದರಲ್ಲಿ ಅದೊಂದೇ ಉತ್ಕೃಷ್ಟವಾದ ಸಾಧನ." ॥೧೫೮॥

ಚಿತ್ರಗುಪ್ತನ ಈ ಮಾತನ್ನು ಕೇಳಿ ಯಮನು ಸಂತೋಷಭರಿತನಾಗಿ ಬ್ರಹ್ಮ, ವಿಷ್ಣು ಇವರೊಂದಿಗೆ ಆತನನ್ನು ಪೂಜಿಸಿದನು. ॥೧೫೯॥

ಬಳಿಕ ವಿಷ್ಣುವು ಆ ಬ್ರಾಹ್ಮಣನಿಗೆ ನಮಸ್ಕರಿಸಿ, ಮಂದಾರಪುಷ್ಪಗಳಿಂದಲೂ ಬಿಲ್ವಪತ್ರೆಗಳಿಂದಲೂ ಪೂಜಿಸಿ ಅವನನ್ನು ಕುರಿತು ಹೀಗೆಂದನು. ॥೧೬೦॥

"ಅಯ್ಯಾ, ನೀನು ಮರಣಕಾಲದಲ್ಲಿ ಈಶ್ವರಾನುಗ್ರಹಕ್ಕೆ ಪಾತ್ರನಾಗಲು

ಸ್ವಚ್ಛಂದವೃತ್ತ್ಯಾ ಸ್ಥಿತಮೇವ ಪೂರ್ವಂ
ತಪಃ ಕೃತಂ ನೋಗ್ರಮಘಾಪನುತ್ತ್ಯೈ ।
ಶಿವಾಭಿಧಾನಶ್ರವಣೇನ ಸದ್ಯೋ
ಮುಕ್ತೋಽಸಿ ಸಂಸಾರಮಹಾಂಬುರಾಶೇಃ ॥೧೬೨॥

ಕುರ್ವಂತಿ ಕೇಚಿದ್ಗಿರಿಕಂದರೇಷು
ದಾರಾನ್ವಿಹಾಯಾಪಿ ತಥಾ ಕುಮಾರಾನ್ ।
ನ ತೈರಿದಂ ಪ್ರಾಪ್ಯಮನಂತರಾಯಂ
ಶಿವಾಭಿಧಾನಂ ಮರಣಕ್ಷಣೇಷು ॥೧೬೩॥

ಅಹೋ ಕೃತಾರ್ಥೋಽಸಿ ಶಿವಾಭಿಧಾನಂ
ಶ್ರುತಂ ಯತೋ ಮೋಕ್ಷವಿಧಾನದಕ್ಷಂ ।
ಸಾಕ್ಷಾದ್ವಿರೂಪಾಕ್ಷಕೃಪಾಶಯೇಷು
ಫಾಲಾಕ್ಷರೂಪೋಽಪಿ ಭವಿಷ್ಯಸಿ ತ್ವಂ ॥೧೬೪॥

ಶಿವನಾಮವನ್ನು ಕೇಳಿರುವೆ. ಅದರಿಂದ ನಿನ್ನನ್ನೇ ಈಶ್ವರನೆಂದು ಭಾವಿಸುವೆನು. ನಿನಗೆ ಸದೃಶರಾದವರು ಮೂರುಲೋಕಗಳಲ್ಲಿ ಯಾರೂ ಇರುವುದಿಲ್ಲ. ॥೧೬೧॥

ನೀನು ಮೊಟ್ಟಮೊದಲು ಸ್ವೇಚ್ಛಾಚಾರಿಯಾಗಿದ್ದೆ. ಭಯಂಕರವಾದ ಪಾಪಗಳನ್ನು ಹೋಗಲಾಡಿಸುವಂತಹ ಯಾವ ತಪಸ್ಸನ್ನೂ ಆಚರಿಸಲಿಲ್ಲ. ಈಗ ಶಿವನಾಮಶ್ರವಣಮಾತ್ರದಿಂದಲೇ ಸಂಸಾರಸಾಗರದಿಂದ ಬಿಡುಗಡೆಯನ್ನು ಹೊಂದಿರುವೆ. ॥೧೬೨॥

ಕೆಲವರು ಪತ್ನೀಪುತ್ರರನ್ನು ತೊರೆದು, ಪರ್ವತದ ತಪ್ಪಲುಗಳನ್ನಾಶ್ರಯಿಸಿ ಘೋರವಾದ ತಪಸ್ಸನ್ನು ಆಚರಿಸುವರು. ಆದರೂ ಅವರಿಗೆ ಮರಣಕಾಲದಲ್ಲಿ ಪವಿತ್ರವಾದ ಶಿವನಾಮವನ್ನು ಸ್ಮರಿಸುವ ಸುಯೋಗವಿರುವುದಿಲ್ಲ. ॥೧೬೩॥

ಈಶ್ವರನ ಕೃಪೆಗೆ ಪಾತ್ರವಾದ ವಸ್ತುಗಳಲ್ಲಿ ಶ್ರೇಷ್ಠತಮವಾದ ಮತ್ತು ಮೋಕ್ಷವನ್ನು ದಯಪಾಲಿಸುವ ಸಾಮರ್ಥ್ಯವುಳ್ಳ ಶಿವನಾಮವನ್ನು ನೀನು ಕೇಳಿರುವೆ. ಆದುದರಿಂದ ನಿಜವಾಗಿ ನೀನು ಶಿವಸ್ವರೂಪನೇ ಆಗಿರುವೆ. ಇದು ಆಶ್ಚರ್ಯವೇನೂ ಅಲ್ಲ. ॥೧೬೪॥

ಅನಾಯಾಸೇನೇದಂ ಖಲು ಫಲಮುಮಾಕಾಂತಕೃಪಯಾ
ತ್ವಯಾ ಪ್ರಾಪ್ತಂ ನೂನಂ ಮರಣಸಮಯೇ ಶಾಂಭವಮಿದಂ ।
ಶ್ರುತಂ ನಾಮಾನಂತಾಮಯವಿಲಯಹೇತುಃ ಶಿವಕೃಪಾ
ಕಥಂ ವಾ ತ್ವಯ್ಯಾಸೀದಮಿತಸುಕೃತಾನಾಂ ಫಲಮಿದಂ ॥೧೬೫॥

ಮನುಷ್ಯಾಣಾಂ ತಾವನ್ಮರಣಸಮಯೇ ರೋದನರವೈಃ
ಪರಂ ಕಾಲೋ ಯಾತಿ ಪ್ರಣಯಸಹಿತಾನಾಮಪಿ ದಯಾ ।
ಮಹಾದೇವಾಖ್ಯಾಯಾಃ ಸಕೃದಪಿ ನವೋಚ್ಚಾರಣಮತಿಃ
ವೃಥಾ ಹಾ ಹಾ ಹಾ ಹೇತ್ಯಪಿ ಸಮಯನಾಶೋದ್ಯತಧಿಯಃ ॥೧೬೬॥

ಮರಣಾವಸರೇಷು ಕಂಠಭಾಗೇ
ಕಫಪಿತ್ತಪ್ರಭವೇ ಭವೋದ್ಭವಸ್ಯ ।
ಸ್ಮರಣಂ ಶಿವನಾಮಕೀರ್ತನಂ ವಾ
ನ ಭವತ್ಯೇವ ಕದಾಪಿ ಪಾಪಯೋಗಾತ್ ॥೧೬೭॥

ನೀನು ಈಶ್ವರಾನುಗ್ರಹದಿಂದ ಅನಾಯಾಸವಾಗಿ ಶಿವನಾಮ ಶ್ರವಣರೂಪವಾದ ಈ ಫಲವನ್ನು ಹೊಂದಿರುವೆ. ಅದು ಅಪಾರವಾದ ಸಂಸಾರವೆಂಬ ರೋಗವನ್ನು ನಾಶಪಡಿಸುವುದರಲ್ಲಿ ಸಾಧನವಾಗಿರುವುದು. ನೀನು ಶಿವನ ಕೃಪೆಗೆ ಪಾತ್ರನಾದ ಬಗೆ ಹೇಗೆ? ಇದು ನಿನ್ನ ಪೂರ್ವಜನ್ಮದ ಸುಕೃತವಿಶೇಷದ ಫಲವಲ್ಲವೇ? ||೧೬೫||

ಮನುಷ್ಯರಿಗೆ ಮರಣಕಾಲದಲ್ಲಿ ಪ್ರೀತಿಪಾತ್ರರಾದವರ ರೋದನದ ಆರ್ತಸ್ವರಗಳಿಂದ ಕಾಲವು ಕಳೆದು ಹೋಗುವುದು. ಅವರು ಒಂದು ಬಾರಿಯಾದರೂ ಶಿವನಾಮವನ್ನು ಸ್ಮರಿಸದೇ, ಹಾ ಹಾ ಎಂಬ ಆರ್ತಧ್ವನಿಯನ್ನು ಮಾಡುತ್ತಲೂ, ಆದಕ್ಕಾಗಿ ಶ್ರಮಿಸುತ್ತಲೂ ಕಾಲಕಳೆಯುವರು. ||೧೬೬||

ಮರಣಕಾಲದಲ್ಲಿ ಅವರ ಕಂಠವು ಕಫ ಮತ್ತು ಪಿತ್ತರಸಗಳಿಂದ ಕೂಡಿ, ಅವರು ಶಿವನಾಮವನ್ನು ಸ್ಮರಿಸುವುದಕ್ಕೂ ಅಥವಾ ಉಚ್ಚರಿಸುವುದಕ್ಕೂ ಅಸಮರ್ಥರಾಗುವರು. ||೧೬೭||

ದಾರಾನ್ ಕುಮಾರಾನಪಿ ವೀಕ್ಷ್ಯ ತಾವತ್
ಮುಮೂರ್ಷುರಪ್ಯಾದರತೋಽಶ್ರುಪೂರ್ಣಃ ।
ರುದತ್ಯಯಂ ನ ಸ್ಮರತಿ ಸ್ಮರಾರಿಂ
ನ ಶಾಂಭವಂ ನಾಮ ಶೃಣೋತಿ ದುಷ್ಟಃ ॥೧೬೮॥

ಅಂತಕಾಲಸಮಯೇ ಮಹೇಶ್ವರಾ
ರಾಧನೇ ಭಸಿತಭೂಷಣೇಽಪಿ ವಾ ।
ಜಾಯತೇ ನ ಸಹಸಾ ಮತಿಸ್ತತಃ
ಯಾಂತಿ ಘೋರನರಕಾಲಯಂ ಜನಾಃ ॥೧೬೯॥

ಅಂತಕಾಲವಿಷಯೇ ಸದಾಶಿವ
ಧ್ಯಾನಮಾತ್ರಮಪಿ ಮುಕ್ತಿಸಾಧನಂ ।
ತತ್ಕಥಂಚಿದಪಿ ಜಾಯತೇ ನೃಣಾಂ
ಶಂಕರೋ ಯದಿ ಪುರಾ ಸಮರ್ಚಿತಃ ॥೧೭೦॥

ಅಂತಕಾಲವಿಷಯೇ ಶಿವಸ್ಮೃತಿಃ
ಭಸ್ಮಧಾರಣಮಘೌಘನಾಶನಂ ।
ಜಾಯತೇ ಖಲು ಕಥಂಚಿದುಚ್ಚಕೈಃ
ನಾಮ ಶಾಂಕರಮತಿಶ್ರುತಂ ಭವೇತ್ ॥೧೭೧॥

ಮರಣೋನ್ಮುಖನಾದ ಅವನು, ತನ್ನ ಪತ್ನೀ ಪುತ್ರರನ್ನು ಅತ್ಯಾದರದಿಂದ ನೋಡುತ್ತಾ, ಕಣ್ಣೀರನ್ನು ಸುರಿಸುವನು. ಆದರೆ ಶಿವನಾಮವನ್ನು ಒಮ್ಮೆಯಾದರೂ ಕೇಳಲಾರನು ಅಥವಾ ಸ್ಮರಿಸಲಾರನು. ಶಾಂಭವನನ್ನು ನೋಡಲಾರನು. ॥೧೬೮॥

ಜನರಿಗೆ ಮರಣಸಮಯದಲ್ಲಿ ಈಶ್ವರಾರಾಧನೆಯಲ್ಲಾಗಲಿ, ಅಥವಾ ಭಸ್ಮಧಾರಣೆಯಲ್ಲಾಗಲಿ, ಆದರವುಂಟಾಗುವುದಿಲ್ಲ. ಆದುದರಿಂದಲೇ ಅವರು ಭಯಂಕರವಾದ ನರಕವನ್ನು ಪಡೆಯುವರು. ॥೧೬೯॥

ಮರಣಕಾಲದಲ್ಲಿ ಶಿವನಾಮವನ್ನು ಧ್ಯಾನಮಾಡುವ ಮಾತ್ರದಿಂದಲೇ ಮುಕ್ತಿಯು ಲಭಿಸುವುದು. ಆದರೆ ಪೂರ್ವಜನ್ಮದಲ್ಲಿ ಶಂಕರನನ್ನು ಆರಾಧಿಸಿದ್ದರೆ ಆ ಕಾಲದಲ್ಲಿ ಶಿವಧ್ಯಾನ ಮಾಡುವ ಬುದ್ಧಿಯುದಯಿಸಲಾರದು. ॥೧೭೦॥

ಮರಣಸಮಯದಲ್ಲಿ ಶಿವಸ್ಮರಣೆ, ವಿಭೂತಿಧಾರಣೆ ಇವು ಸಕಲ ಪಾಪಗಳನ್ನು

ಭಸ್ಮೋದ್ಧೂಳಿತವಿಗ್ರಹೋಽತಿವಿಪುಲಾಂ ರುದ್ರಾಕ್ಷಮಾಲಾಂ ವಹನ್
ಕಂಠೇ ಕರ್ಣಯುಗೇಽಪಿ ಶಂಕರಪದಾನ್ಯಪ್ಯುಚ್ಚರನ್ನಾದರಾತ್ ।
ದೃಷ್ಟ್ವಾ ಲಿಂಗಮನುತ್ತಮಂ ಮುಹುರಪಿ ಸ್ಪೃಷ್ಟ್ವಾ ಚ ಬಿಲ್ವೀದಳೈಃ
ಸಂಪೂಜ್ಯಾಶು ಸಮರ್ಪಣಂ ಚ ಕುರುತೇ ಶಂಗಾಯ ಶಾಂಗೋ ಜನಃ
॥೧೬೨॥

ಶಂಭೋ ಭರ್ಗ ಭವೇಂದುಶೇಖರಮಹಾದೇವೇತಿ ಯಃ ಸಂವದನ್
ರುದ್ರಾಕ್ಷಾಮಲಭೂತಿಭೂಷಿತತನುಃ ಕೃತ್ವಾ ಚ ಲಿಂಗಾರ್ಚನಂ ।
ಶಂಗಾಯಾಶುಸಮರ್ಪಣಂ ಚ ಕುರುತೇ ಶಾಂಗಃ ಸ ಶಂಭುರ್ಭವೇತ್
ತತ್ಪಾದಾಂಬುಜರೇಣುಭಿರ್ಮಮ ಶಿರಃ ಪೂತಂ ಭವತ್ವನ್ವಹಂ ॥೧೬೩॥

ಮಹಾಪ್ರಯಾಣೇಷು ಮಹೇಶನಾಮ
ಶ್ರುತಂ ಸ್ಮೃತಂ ವಾ ಯದಿ ಪುಣ್ಯಯೋಗಾತ್ ।
ತದಾ ಸ ಮುಕ್ತೋ ಭವತೀತಿ ಮನ್ಯೇ
ನಾನ್ಯಸ್ಯ ಮುಕ್ತಿಃ ಪ್ರಲಯೇಽಪಿ ಸತ್ಯಂ ॥೧೬೪॥

ನಾಶಮಾಡುವುವು. ಆದರೆ ಭಾಗ್ಯವಿಶೇಷದಿಂದಲೇ ಶಿವನಾಮೋಚ್ಚಾರಣೆಯ ಯೋಗವು ಲಭಿಸುವುದಲ್ಲದೇ ಅನ್ಯಥಾ ಲಭಿಸಲಾರದು. ||೧೬೧||

ಈಶ್ವರಭಕ್ತಾಗ್ರೇಸರನು, ದೇಹವನ್ನು ಭಸ್ಮದಿಂದ ಲೇಪಿಸಿ, ದೀರ್ಘವಾದ ರುದ್ರಾಕ್ಷಮಾಲೆಯನ್ನು ಕಂಠದಲ್ಲಿಯೂ ಮತ್ತು ಕಿವಿಗಳಲ್ಲಿಯೂ ಧರಿಸಿ, ಸದಾ ಶಿವನಾಮಗಳನ್ನೇ ಉಚ್ಚರಿಸುತ್ತಾ, ಶಿವಲಿಂಗವನ್ನು ಸಂದರ್ಶಿಸಿ ಬಾರಿಬಾರಿಗೂ ಸ್ಪರ್ಶಿಸಿ, ಅದನ್ನು ಬಿಲ್ವಪತ್ರೆಗಳಿಂದ ಪೂಜಿಸಿ, ಅಂತ್ಯದಲ್ಲಿ ಶಿವಸನ್ನಿಧಿಯಲ್ಲಿಯೇ ತನ್ನ ಪ್ರಾಣಗಳನ್ನು ಅರ್ಪಿಸುವನು. ||೧೬೨||

ಯಾವ ಭಕ್ತನು, ಶಂಭೋ, ಭರ್ಗ, ಭವ, ಚಂದ್ರಶೇಖರ, ಮಹಾದೇವ ಎಂದು ಶಿವನಾಮಗಳನ್ನುಚ್ಚರಿಸುತ್ತಾ, ರುದ್ರಾಕ್ಷಮಾಲೆಗಳನ್ನು ಧರಿಸಿ, ಭಸ್ಮವನ್ನು ಲೇಪಿಸಿಕೊಂಡು, ಈಶ್ವರಲಿಂಗವನ್ನರ್ಚಿಸಿ, ಬಳಿಕ ಈಶ್ವರ ಸನ್ನಿಧಿಯಲ್ಲಿಯೇ ತನ್ನ ಪ್ರಾಣಗಳನ್ನರ್ಪಿಸುವನೋ, ಅಂತಹವನು ಸಾಕ್ಷಾತ್ಪರಶಿವನೇ ಆಗುವನು. ಅವನ ಅಡಿದಾವರೆಗಳ ರೇಣುಗಳಿಂದ ನನ್ನ ತಲೆಯು ಪವಿತ್ರವಾಗಲಿ. ||೧೬೩||

ಯಾವನು ಮರಣಕಾಲದಲ್ಲಿ ಶಿವನಾಮವನ್ನು ಕೇಳುವನೋ ಅಥವಾ ಸ್ಮರಿಸುವನೋ ಅವನೇ ಮೋಕ್ಷವನ್ನು ಹೊಂದುವನಲ್ಲದೇ ಇತರರು, ಕಲ್ಪಾಂತ್ಯವಾದರೂ ಮೋಕ್ಷವನ್ನು ಹೊಂದಲಾರರು. ಇದು ನಿಜ. ||೧೬೪||

ಶಪಾಮಿ ಶಿವಪಾದಯೋಃ ಶಿವಪದಸ್ಮೃತೇಃ ಕೇವಲಂ
ವಿಮುಕ್ತಿರಿತಿ ಸಾ ಸ್ಮೃತಿರ್ಭಸಿತಭೂಷಣಾನಾಂ ಪರಂ ।
ಭವಿಷ್ಯತಿ ಭವಾನ್ಯಯೋ ನ ಭವತೀತಿ ಮನ್ಯೇ ಪುನಃ
ಪುನಃ ಪುನರಯಂ ಭುಜದ್ವಯಮಿದಂ ಸಮುದ್ಧೃತ್ಯ ತು ॥೧೭೫॥

ಏತಸ್ಮಿನ್ನಂತರೇ ದೇವಿ ಮದೀಯಾ ಅಪಿ ಕಿಂಕರಾಃ ।
ವಿಮಾನರತ್ನಮಾರುಹ್ಯ ತಮಾನೇತುಂ ಗತಾಃ ಪರೇ ॥೧೭೬॥

ತದಾ ತಾನಾಗತಾನ್ ದೃಷ್ಟ್ವಾ ವಿಷ್ಣುಬ್ರಹ್ಮಾದಯಃ ಸುರಾಃ
ಕೃತಾಂಜಲಿಪುಟಾಃ ಸರ್ವೇ ಪ್ರಣತಾಶ್ಚ ಪುನಃ ಪುನಃ ॥೧೭೭॥

ತತಃ ಪರಂ ತಾನ್ ಮುದಿತಾನ್ನಿಲೋಕ್ಯ
ದೂತಾನ್ ಮದೀಯಾನ್ ಗಿರಿಜೇ ಸುರಾಸ್ತೇ ।
ಊಚುಃ ಕ್ವ ವಾ ಗಮ್ಯತ ಇತ್ಯುಪಾಂಶು
ಕಂಪಾಯಮಾನಾಃ ಶಿರಸಾ ಪ್ರಣಮ್ಯ ॥೧೭೮॥

ಭಸ್ಮವನ್ನು ಧರಿಸಿ, ಸದಾ ಶಿವನಾಮಸ್ಮರಣೆಯನ್ನು ಮಾಡುವುದರಿಂದಲೇ ಮೋಕ್ಷವು ಲಭಿಸುವುದೆಂದು ಸಾರಿಸಾರಿ ಹೇಳುವೆನು. ಭಸ್ಮಧಾರಿಗಳಾದ ಈಶ್ವರ ಭಕ್ತರಿಗೆ ಶಿವನಾಮಸ್ಮರಣೆಯಿಂದಲೇ ಮುಕ್ತಿಯು ಲಭಿಸುವುದಲ್ಲದೇ, ಇತರರಿಗೆ ಎಂದಿಗೂ ಲಭಿಸಲಾರದೆಂದು ದೃಢವಾಗಿ ಧೈರ್ಯದಿಂದ ಪ್ರತಿಜ್ಞಾಪೂರ್ವಕವಾಗಿ ಹೇಳುವೆನು. ॥೧೭೫॥

ಎಲೌ ದೇವಿಯೇ, ಇಷ್ಟರೊಳಗೆ ನನ್ನ ಸೇವಕರು ವಿಮಾನವನ್ನೇರಿ ಆ ಬ್ರಾಹ್ಮಣನನ್ನು ನನ್ನ ಸನ್ನಿಧಿಗೆ ಕರೆದುಕೊಂಡು ಬರಲು ಹೋದರು. ॥೧೭೬॥

ಆಗ ಅವನನ್ನು ಕರೆದೊಯ್ಯಲು ಅಲ್ಲಿಗೆ ಬಂದ ಸೇವಕರನ್ನು ಬ್ರಹ್ಮನೇ ಮೊದಲಾದ ದೇವತೆಗಳು ಅಂಜಲಿಬದ್ಧರಾಗಿ ವಂದಿಸಿದರು. ॥೧೭೭॥

ಬಳಿಕ ಆನಂದಭರಿತರಾದ ನನ್ನ ಆ ದೂತರನ್ನು ನೋಡಿ, ದೇವತೆಗಳು ಅವರಿಗೆ ನಮಸ್ಕರಿಸಿ ತಲೆಯನ್ನಲ್ಲಾಡಿಸುತ್ತಾ, “ನೀವು ಎಲ್ಲಿಗೆ ಹೋಗುವಿರಿ?” ಎಂದು ಕೇಳಲು, ॥೧೭೮॥

॥ ದೂತಾ ಊಚುಃ ॥

ಅನೇನ ಮರಣಕ್ಷಣೇ ಶಿವಪದಂ ಶ್ರುತಂ ದೈವತಃ
ಪ್ರಭೂತಬಹುಪುಣ್ಯವಾನಯಮಭೂಚ್ಛಿವಾನುಗ್ರಹಾತ್ ।
ಶಿವಾಂತಿಕಮಯಂ ಸುರಾಃ ಸಪದಿ ನೇಯ ಏವಾದರಾತ್
ವಿಮಾನವರಮಾಶ್ರಿತಃ ಸುರಗಣಾಭಿಸೇವ್ಯೋ ಮುದಾ ॥೧೭೯॥

ಅಪಾರಕಲ್ಪೇಷ್ವಪಿ ಯೇನ ತಪ್ತಂ
ತಪೋಽತಿಘೋರಂ ಬಹುವಹ್ನಿಮಧ್ಯೇ ।
ತಸ್ಯಾಪಿ ತಾವನ್ನ ಮಹಾಪ್ರಯಾಣೇ
ಶಿವಾಭಿಧಾನಶ್ರವಣಾವಕಾಶಃ ॥೧೮೦॥

ಅಹೋ ಕೃತಾರ್ಥಾಃ ಕತಿಚಿನ್ಮಹೇಶ
ಪ್ರಸಾದಪಾತ್ರತ್ವಮುಪೇತ್ಯ ಧನ್ಯಾಃ ।
ಕೈಲಾಸವಾಸಂ ಸಮವಾಪ್ನುವಂತಿ
ಪೂಜ್ಯಾಃ ಸುರಾಣಾಮಪಿ ಸರ್ವಥಾಪಿ ॥೧೮೧॥

ದೂತರು ಹೀಗೆಂದರು—ಎಲೈ ದೇವತೆಗಳಿರಾ, ಈ ಬ್ರಾಹ್ಮಣನು ಪುಣ್ಯ ವಿಶೇಷದಿಂದ ಮರಣಕಾಲದಲ್ಲಿ ಶಿವನಾಮವನ್ನು ಕೇಳಿರುವನು. ಆದುದರಿಂದ ಇವನು ಶಿವಾನುಗ್ರಹದ ದೆಸೆಯಿಂದ ಅತ್ಯಂತ ಪುಣ್ಯಶಾಲಿಯಾಗಿರುವನು. ಪೂಜ್ಯನಾದ ಇವನನ್ನು ಈ ವಿಮಾನದಲ್ಲಿ ಕುಳ್ಳಿರಿಸಿ ಶಿವನ ಬಳಿಗೆ ಕರೆದುಕೊಂಡು ಹೋಗಲು ಬಂದಿರುವೆವು. ॥೧೭೯॥

ಜನ್ಮಾಂತರದಲ್ಲಿ ಅನೇಕಕಲ್ಪಗಳವರೆಗೆ ಅಗ್ನಿಮಧ್ಯೆ ತಪಸ್ಸನ್ನು ಆಚರಿಸಿ, ಪುಣ್ಯಗಳಿಸಿದ ಮಹಾಪುರುಷರಿಗೂ ಮರಣಕಾಲದಲ್ಲಿ ಶಿವನಾಮವನ್ನು ಕೇಳುವ ಸುಯೋಗವು ಲಭಿಸಲಾರದು. ॥೧೮೦॥

ಪುಣ್ಯಶಾಲಿಗಳಾದ ಕೆಲವರು ಮಾತ್ರ ಮರಣಕಾಲದಲ್ಲಿ ಶಿವನಾಮವನ್ನು ಸ್ಮರಿಸಿ, ಕೃತಕೃತ್ಯರಾಗಿ ಕೈಲಾಸಲೋಕವನ್ನು ಕುರಿತು ತೆರಳುವರು. ಅವರು ಸರ್ವವಿಧಗಳಿಂದಲೂ, ದೇವತೆಗಳಿಗೂ ಪೂಜ್ಯರಾಗಿರುವರು. ॥೧೮೧॥

ಧನಂ ಪರಮಿದಂ ಸುರಾಃ ಶಿವಪದಂ ಪದಂ ಸಂಪದಾಂ
ವಿಪತ್ಕುಲವಿನಾಶಕಂ ಸಕಲಪಾಪಸಂಹಾರಕಂ ।
ಸ್ಮೃತಂ ಸಪದಿ ಪಾತಕಂ ಹರತಿ ಸಂಸ್ಮೃತಂ ವಾ ಮುದಾ
ದದಾತಿ ಶಿವಸನ್ನಿಧಿಂ ನಿಧಿಮಪಿ ಪ್ರದತ್ವಾ ಮುಹುಃ ॥೧೮೨॥

ಅಪಾರಜನಸಾಮಯಂ ಹರತಿ ಮೃತ್ಯುವಾರ್ತಾದಿಕಂ
ಶ್ರುತಂ ಶಿವಪದಂ ಮುದಾ ಶಿವಪದಾಂಬುಜಾನುಗ್ರಹಾತ್ ।
ಇತಃ ಕಿಮಧಿಕಂ ಧನಂ ನವನಿಧಿಪ್ರದಾನೇ ಕ್ಷಮಂ
ವಿಮೋಕ್ಷದಮತಿಪ್ರಿಯಂ ಶಿವಪದಾರ್ಚಕಾನಾಂ ಸುರಾಃ ॥೧೮೩॥

ಅತಃ ಪರಮಿಹಾಧುನಾ ಖಲು ತಥಾ ವಿಲಂಬಸ್ತತೋ
ವಿನೇಯ ಇತಿ ನಿಶ್ಚಯೇ ಸತಿ ಕಥಾನುವಾದೈರಲಂ ।
ಭವದ್ಭಿರಪಿ ಪೂಜಿತೋ ಭವತಿ ಸೋಽಯಮತ್ಯಾದರಾತ್
ಇತಿ ಪ್ರಿಯತಮೋ ತದಾ ಸುರಗಣೈಃ ಸಮಾರಾಧಿತಃ ॥೧೮೪॥

ಎಲೈ ದೇವತೆಗಳೇ, ಶಿವನಾಮವೇ ಶಾಶ್ವತವಾದ ಧನ. ಇದೇ ಐಶ್ವರ್ಯಗಳ ನಿವಾಸಸ್ಥಳವು. ಅದು ಸಕಲ ಕಷ್ಟಗಳನ್ನೂ ಹೋಗಲಾಡಿಸುವುದಲ್ಲದೆ ಪಾಪಗಳನ್ನು ನಿರ್ಮೂಲಗೊಳಿಸುವುದು. ಶಿವನಾಮವನ್ನು ಭಕ್ತಿಪೂರ್ವಕವಾಗಿ ಸ್ಮರಿಸಿದರೆ ಅದು ಶೀಘ್ರದಲ್ಲಿ ಮೋಕ್ಷವನ್ನು ದಯಪಾಲಿಸುವುದು. ॥೧೮೨॥

ಶಿವನ ಅಡಿದಾವರೆಗಳ ಅನುಗ್ರಹದಿಂದ ಶಿವನಾಮವನ್ನು ಕೇಳಿದರೆ, ಅದು ಭಯಂಕರವಾದ ಸಂಸಾರದುಃಖವೆಂಬ ಮಹಾವ್ಯಾಧಿಯನ್ನು ನಾಶಗೊಳಿಸುವುದಲ್ಲದೇ ಶಿವನಾಮವನ್ನು ಸ್ಮರಿಸುವವನಿಗೆ ಮರಣವಾರ್ತೆಯೇ ಒದಗದಂತೆ ಮಾಡುವುದು. ಶಿವನಾಮಕ್ಕಿಂತಲೂ ಶ್ರೇಷ್ಠವಾದ ಧನವು ಮತ್ತೊಂದಿರುವುದೇ? ಆದರೆ ಅದು ಶಿವಪಾದಸೇವಕರಾದ ಭಕ್ತರಿಗೆ ಮಾತ್ರ ಹಿತಕರವೂ ಮೋಕ್ಷಪ್ರದವೂ ಆಗಿರುವುದು. ॥೧೮೩॥

ಆದುದರಿಂದ ಇನ್ನು ಮುಂದೆ ಒಂದು ಕ್ಷಣಕಾಲವಾದರೂ ತಡಮಾಡದೇ ಇವನನ್ನು ಶಿವಸನ್ನಿಧಿಗೆ ಕೊಂಡೊಯ್ಯುವೆವು. ಇವನನ್ನು ಶಿವನ ಬಳಿಗೆ ಕರೆದುಕೊಂಡು ಹೋಗಬೇಕೆಂದು ನಾವು ನಿಶ್ಚಯಿಸಿರುವಾಗ ಇನ್ನು ವಿಲಂಬಮಾಡುವುದುಚಿತವಲ್ಲ. ಮತ್ತು ವ್ಯರ್ಥವಾದ ಮಾತುಗಳಿಂದ ಕಾಲಕಳೆಯುವುದೂ ಸರಿಯಲ್ಲ.

ತತಃ ಪರಂ ಪುಷ್ಪಕರತ್ನಸಂಸ್ಥಂ
ತಮಾನಯಾಮಾಸುರಿಹಾದರೇಣ ।
ಸ ಮುಕ್ತ ಏವಾತ್ರ ಶಿವಾಭಿಧಾನ
ಮಾಹಾತ್ಮ್ಯಮೇತಚ್ಛ್ರುತಮದ್ಯ ಗೌರಿ ॥೧೮೫॥

ಶಿವನಾಮಸುಧಾಶನೇನ ಧನ್ಯಾಃ
ಕತಿ ಚಿತ್ತೇ ಗಿರಿಜೇ ಮಮಾಪಿ ಮಾನ್ಯಾಃ ।
ಇದಮಾದರತೋಽತಿಗೋಪನೀಯಂ
ಮಣಿರೇವಾಯಮಹೋ ಮಹಾನ್ ಸ ಶೈವಃ ॥೧೮೬॥

ಇತಿ ಶಂಕರವಾಗ್ವಿಹಾರಲೋಲಾ
ಕಮಲಾಪೂಜಿತಪಾದಪದ್ಮಮಾಲಾ ।
ಶಿವನಾಮಸುಧಾಪ್ರವಾಹಲೀಲಾ
ಮಹಿಲಾ ಕಾಪಿ ಶಿವಸ್ಯ ಸಾ ಸುಶೀಲಾ ॥೧೮೭॥

ಎಲೈ ದೇವತೆಗಳೇ, ಈತನು ನಿಮಗೂ ಪೂಜ್ಯನಾಗಿರುವನಾದುದರಿಂದ ಬೇಗ ಇವನನ್ನು ಪೂಜಿಸಿರಿ" ಎಂಬ ಶಿವದೂತರ ಮಾತನ್ನು ಕೇಳಿ ದೇವತೆಗಳು ಆ ಮಾನವನನ್ನು ವಿಧಿವತ್ತಾಗಿ ಪೂಜಿಸಿದರು. ॥೧೮೪॥

ಎಲೌ ಗಿರಿಜೆಯೇ! ಅನಂತರ ಯಮದೂತರು, ಆ ಮನುಜನನ್ನು ಪುಷ್ಪಕವಿಮಾನದಲ್ಲಿ ಕುಳ್ಳಿರಿಸಿಕೊಂಡು ಶಿವನ ಬಳಿಗೆ ಕರೆತಂದರು. ಈ ರೀತಿ ಶಿವನಾಮ ಶ್ರವಣ ಮಾತ್ರದಿಂದಲೇ ಆತನು ಮೋಕ್ಷವನ್ನು ಪಡೆದನು. ಶಿವನಾಮದ ಮಹಿಮೆಯು ಈ ರೀತಿಯಲ್ಲಿರುವುದು. ನೀನು ಅದನ್ನೀಗ ತಿಳಿದೆಯಲ್ಲವೇ. ॥೧೮೫॥

ಎಲೌ ಗಿರಿಜೆಯೇ! ಶಿವನಾಮವೆಂಬ ಅಮೃತ ಪಾನಮಾಡಿರುವ ಮನುಜರು ನನಗೂ ಪೂಜ್ಯರು. ಈ ರಹಸ್ಯವನ್ನು ಅತ್ಯಂತ ಆದರದಿಂದ ಗೋಪ್ಯವಾಗಿಟ್ಟಿರಬೇಕು. ಸದಾ ಶಿವನಾಮಶ್ರವಣದಲ್ಲಿಯೇ ತತ್ಪರನಾದ ಈಶ್ವರಭಕ್ತನು ಸಕಲ ಜನರಿಗೂ ರತ್ನಪ್ರಾಯನೇ ಸರಿ. ॥೧೮೬॥

ಬಳಿಕ ನಂದಿಕೇಶ್ವರನು ಗಂಧರ್ವರಾಜನನ್ನು ಕುರಿತು ಹೀಗೆಂದನು. "ಎಲೈ ಗಂಧರ್ವರಾಜನೇ! ಹೀಗೆ ಸುದ್ಗುಣಸಂಪನ್ನಳೂ, ಲಕ್ಷ್ಮಿಯಿಂದ ಪೂಜಿತಳೂ,

ತಸ್ಮಾದನ್ಯಂ ಮುಕ್ತಿಬೀಜಂ ನ ವಿದ್ಯಾ
ಲೋಕೇ ಮುಕ್ತಿಃ ಶಂಕರಾನುಗ್ರಹೇಣ ।
ತಸ್ಮಾದೇಕಃ ಶಂಕರಃ ಶಂಕರೋ ಮೇ
ಸೇವ್ಯಃ ಸೇವ್ಯಃ ಸರ್ವದಾ ಸರ್ವದಾಪಿ ॥೧೮೮॥

ಇತಿ ತದ್ವಚನಂ ಶ್ರುತ್ವಾ ವಿಶ್ವಾವಸುರತಿಪ್ರಿಯಂ ।
ತುಷ್ಟಾವ ನಂದಿಕೇಶಂ ತಂ ಶಿವಭಕ್ತವರಂ ಮುದಾ ॥೧೮೯॥

ಧನ್ಯೋಽಸಿ ಮಾನ್ಯೋಽಸಿ ಗುಣಾಗ್ರಗಣ್ಯ
ವಿಶ್ವೇಶ್ವರಾರಾಧನತತ್ಪರೋಽಸಿ ।
ತ್ವತ್ಪಾದಪದ್ಮಾರ್ಚನತೋಽಪಿ ಮುಕ್ತಿಃ
ಸಂಭಾವಿತಾ ಸ್ಯಾದ್ಗಿರಿಶಪ್ರಸಾದಾತ್ ॥೧೯೦॥

ಶಿವನ ಪ್ರೇಯಸಿಯೂ ಆದ ಪಾರ್ವತಿಯು ತನ್ನ ಪ್ರಿಯತಮನೊಂದಿಗೆ ವಿನೋದಕರವಾದ ಸಂಭಾಷಣೆಯಲ್ಲಿ ನಿರತಳಾಗಿದ್ದಳು. ॥೧೮೭॥

ಆದುದರಿಂದ, ಮೋಕ್ಷಪ್ರಾಪ್ತಿಗೆ ಶಿವನಾಮಸ್ಮರಣೆಗಿಂತಲೂ, ಬೇರೆ ಸಾಧನವೇ ಇಲ್ಲ. ಲೋಕದಲ್ಲಿ ಪರಮಪುರುಷಾರ್ಥವಾದ ಮೋಕ್ಷವು ಈಶ್ವರಾನುಗ್ರಹದಿಂದಲೇ ಲಭಿಸುವುದು. ಆದುದರಿಂದ, ನಾನು ಶಿವನನ್ನೊಬ್ಬನನ್ನೇ ಅನವರತವೂ ಸೇವಿಸುವೆನು. ॥೧೮೮॥

ನಂದಿಕೇಶ್ವರನ ಈ ಮಾತನ್ನು ಕೇಳಿ, ಗಂಧರ್ವರಾಜನಾದ ವಿಶ್ವಾವಸುವು ಈಶ್ವರಭಕ್ತಾಗ್ರೇಸರನಾದ ನಂದಿಕೇಶ್ವರನನ್ನು ಪ್ರೀತಿಯಿಂದ ಪೂಜಿಸಿ, ಹೀಗೆ ಸ್ತುತಿಸಿದನು. ॥೧೮೯॥

ನಂದಿಕೇಶ್ವರನೇ! ನೀನು ಪುಣ್ಯಶಾಲಿಯೂ ಪೂಜ್ಯನೂ ಸದ್ಗುಣಸಂಪನ್ನನೂ ಈಶ್ವರಾರಾಧನೆಯಲ್ಲಿ ಆಸಕ್ತನೂ ಆಗಿರುವೆ. ಈಶ್ವರನ ಅನುಗ್ರಹವೊಂದಿದ್ದರೆ ನಿನ್ನ ಅಡಿದಾವರೆಗಳ ಸೇವೆಯಿಂದಲೂ ಮುಕ್ತಿಯು ಲಭಿಸುವುದೆಂದರೆ ಅದು ಅತಿಶಯೋಕ್ತಿಯಾಗಲಾರದು. ॥೧೯೦॥

ಶಂಕರಾಂಘ್ರಿಕಮಲಾರ್ಚನಾದಪಿ
ಪ್ರೀತ ಏವ ಭಗವಾನುಮಾಪತಿಃ ।
ಶಾಂಕರೇಷು ಖಲು ತಸ್ಯ ಸರ್ವಥಾ
ಪ್ರೀತಿರೇವ ಗಿರಿಶಃ ಸ ಶಾಂಭವಃ ॥೧೯೧॥

ಸಮರ್ಚಿತಃ ಸ್ಯಾದ್ಯದಿ ಶಾಂಭವಸ್ತದಾ
ಸಾಕ್ಷಾನ್ಮಹೇಶೋಽಪಿ ಸಮರ್ಚಿತಃ ಸ್ಯಾತ್ ।
ಈಶಾಭಿಮಾನಃ ಖಲು ಶಾಂಭವೇಷು
ತೇ ದುರ್ಲಭಾಃ ಕಿಂ ಶಿವಯೋಗಿನೋ ನ ॥೧೯೨॥

ಧನ್ಯಾಸ್ತೇ ಶಿವಯೋಗಿನಃ ಶಿವಪದಾಂಭೋಜಾರ್ಚನಾರಾಧನ
ಧ್ಯಾನಾನಂದರಸಪ್ರಸಾಧನರಸಾಃ ಸಂಸಾರವಾರ್ತಾರಸಾಃ ।
ತೇಷಾಂ ಪೂಜನಮೇವ ತಾವದಧುನಾ ಸಂಸಾರದುಃಖಾಪಹಂ
ತತ್ಸಂಗಃ ಖಲು ಶಂಗಮಂಗಲಕಥಾಪೀಯೂಷಧಾರಾರ್ಣವಃ॥೧೯೩॥

ಈಶ್ವರನ ಪಾದಪದ್ಮಗಳ ಸೇವೆಯಿಂದ ಉಮಾರಮಣನಾದ ಶಿವನು ಸುಪ್ರೀತನಾಗುವನು. ಶಿವನಿಗೆ ತನ್ನ ಭಕ್ತರಲ್ಲಿ ನಿರತಿಶಯವಾದ ಪ್ರೇಮವಿರುವುದರಿಂದ ಈಶ್ವರಭಕ್ತನಾದವನು ಶಿವಸ್ವರೂಪನೇ ಸರಿ. ಅವನ ಅರ್ಚನೆಯಿಂದ ಶಂಕರನೂ ತೃಪ್ತನಾಗುವನು. ॥೧೯೧॥

ಈಶ್ವರನಿಗೆ ತನ್ನ ಭಕ್ತರಲ್ಲಿ ಅತಿಶಯವಾದ ಪ್ರೇಮವಿರುವುದರಿಂದ, ಈಶ್ವರ ಪ್ರೇಮಕ್ಕೆ ಪಾತ್ರನಾದ ಭಕ್ತನನ್ನು ಆರಾಧಿಸಿದರೆ, ಈಶ್ವರನನ್ನೇ ಅರ್ಚಿಸಿದಂತಾಗುವುದು. ಆದರೆ ಅಂತಹ ಶಾಂಭವರ ದರ್ಶನವೇ ದುರ್ಲಭವಲ್ಲವೇ ? ॥೧೯೨॥

ಸಂಸಾರದಲ್ಲಿ ವಿರಕ್ತರಾಗಿ ಅನವರತವೂ ಶಿವನ ಪಾದಸೇವೆಯನ್ನೇ ಮಾಡುತ್ತಾ, ಅವನ ಧ್ಯಾನದಿಂದುಂಟಾದ ಆನಂದ ರಸವನ್ನು ಆಸ್ವಾದಿಸುತ್ತಿರುವ ಈಶ್ವರಭಕ್ತರೇ ಪುಣ್ಯಶಾಲಿಗಳು. ಅಂತಹ ಶಾಂಭವರ ಆರಾಧನೆಯೇ ಸಂಸಾರವೆಂಬ ದುಃಖವನ್ನು ನಾಶಮಾಡುವುದರಲ್ಲಿ ಸಮರ್ಥವಾಗುವುದು. ಅವರ ಸಹವಾಸದಿಂದಲೇ ಶಿವಕಥಾಮೃತದ ಸವಿಯು ಲಭಿಸುವುದು. ॥೧೯೩॥

ಅಹೋ ವಿಚಿತ್ರಂ ಖಲು ಶಾಂಭವಾನಾಂ
ಚರಿತ್ರಮುಪ್ಯದ್ಭುತಮುಪ್ಯಚಿತ್ರಂ ।
ಚಿತ್ರಂ ಕಿಮತ್ರಾಸ್ತಿ ಪವಿತ್ರವಾರ್ತಾಂ
ಕರೋತಿ ತಾವತ್ಪರಮಂ ಪವಿತ್ರಂ ॥೧೯೪॥

ಕಃ ಶಾಂಕರಾರ್ಚನಪರೋ ನ ಸುರೋ ನರೋ ವಾ
ಸರ್ವೇ ಸುರಾ ಅಪಿ ತದಂಘ್ರಿಸಮರ್ಚನೇನ ।
ಧನ್ಯಾ ಭವಂತಿ ಬಹವೋ ಭುವಿ ಶಾಂಭವಾಃ ಕಿಂ
ವೀರೇಶ್ವರಾರ್ಚನಪರಃ ಖಲು ಕೋಽಪಿ ಶೈವಃ ॥೧೯೫॥

ವೀರೇಶ್ವರಾನುಗ್ರಹಪಾತ್ರಮೇಕಃ
ಸ ಬಾಲ್ಯಮಾರಭ್ಯ ಶಿವಾರ್ಚಕಃ ಸನ್ ।
ವಯಃ ಶಿವಾರಾಧನಸಾಧನೇಷು
ಪರಂ ಚಕಾರಾಮರಹಾರವೀರಃ ॥೧೯೬॥

ಪರಶಿವ ಸ್ವರೂಪರಾದ ಶಾಂಭವರ ಪವಿತ್ರವಾದ ಚರಿತ್ರೆಯು ಎಷ್ಟು ಅದ್ಭುತವಾದುದು ? ಪರಮಪವಿತ್ರವಾದ ಆ ಚರಿತ್ರೆಯು ಅಪೂರ್ವವಾದ ಶಿವನ ವಿಷಯಗಳಿಂದಲೇ ಒಳಗೊಂಡಿರುವುದೆಂಬುದರಲ್ಲಿ ಆಶ್ಚರ್ಯವೇನಿರುವುದು ? ॥೧೯೪॥

ದೇವತೆಗಳಾಗಲಿ, ಮನುಷ್ಯರೇ ಆಗಲಿ ಈಶ್ವರಭಕ್ತರ ಚರಣಸೇವೆಯಿಂದ ಪುಣ್ಯಶಾಲಿಗಳಾಗುವರು. ಅವರೆಲ್ಲರೂ ಈಶ್ವರಭಕ್ತಾಗ್ರೇಸರರಾಗುವರು. ಆದರೆ ಅನೇಕ ಜನರ ಮಧ್ಯದಲ್ಲಿ ಯಾವನೋ ಒಬ್ಬ ಮನುಜನು ಈಶ್ವರಾರಾಧನೆಯಲ್ಲಿ ನಿರತನಾಗುವನು. ॥೧೯೫॥

ವಿಶಾಲವಾದ ಈ ಪ್ರಪಂಚದಲ್ಲಿ, ಪುಣ್ಯಶಾಲಿಯಾದ ಎಲ್ಲೋ ಒಬ್ಬನು ಬಾಲ್ಯದಿಂದ ಮೊದಲುಗೊಂಡು ಶಿವಾರಾಧನದಲ್ಲಿಯೇ ಆಸಕ್ತನಾಗಿ, ನಿರಂತರವೂ ಶಿವಪೂಜೆಗೆ ಉಪಯುಕ್ತವಾದ ಸಾಧನಗಳನ್ನು ಸಂಗ್ರಹಿಸುವುದರಲ್ಲಿ ತನ್ನ ಜೀವಿತವನ್ನು ಕಳೆದು, ಅಂತ್ಯದಲ್ಲಿ ಈಶ್ವರ ಭಕ್ತಾಗ್ರೇಸರನೆಂದೆನಿಸಿಕೊಳ್ಳುವನು. ॥೧೯೬॥

ಭವಾನಿಹೈಕೋ ಭಗವತ್ಪ್ರಸಾದಾ
ದಭ್ಯಾಗತೋ ಮತ್ಸುಕೃತೈರಪಾರೈಃ ।
ತ್ವಯಾ ತು ತಾವದ್ಗಿರಿಶಾರ್ಚನಾಯ
ಸಮಾಗತಃ ಪಾವಯಿತುಂ ಗೃಹಂ ಮೇ ॥೧೯೭॥

ಅಸ್ಮಾಕಂ ಗೃಹಮೇಧಿತಾಪಿ ಬಹುಧಾ ತ್ವತ್ಪಾದಸಂಕ್ಷಾಲನಾತ್
ತತ್ಪ್ರಕ್ಷಾಲನಜಾತಪುಣ್ಯಸಲಿಲಾಸೇಕೋಽನುಪಾನಾದಿನಾ ।
ತ್ವತ್ಪಾದಾಂಬುಜರೇಣುಭಿಃ ಪರಮಿದಂ ಸದ್ಮಾಪಿ ಮೇ ಪಾವನಂ
ಮದ್ವಂಶೋಽಪ್ಯತಿಪಾವನಃ ಖಲು ಮಹಾನ್ ತ್ವಂ ಶಾಂಭವೋ ದುರ್ಲಭಃ ॥೧೯೮॥

ಮನಾಗಪಿ ತಥಾ ಪುರಾ ಶಿವಕಥಾಸುಧಾಸಾಗರಃ
ಶ್ರುತಃ ಶ್ರವಣಪಾವನಃ ಶ್ರವಣಪಾತ್ರಪೀತೋ ಮುಹುಃ ।
ಅತಃ ಪರಮಹಂ ಮುದಾ ಗಿರಿಶಪಾದಪದ್ಮಾರ್ಚನಂ
ಕರೋಮಿ ಕರುಣಾನಿಧೇ ಶಿವಪದಾಂಬುಜಾರಾಧಕ ॥೨೦೦॥

ಎಲೈ, ವಿಶ್ವಾವಸುವೇ! ನೀನೊಬ್ಬನೇ, ಈಶ್ವರ ಪ್ರೇರಣೆಯಿಂದಲೇ ಇಲ್ಲಿಗೆ ಬಂದಿರುವೆ. ನೀನು ನನ್ನ ಭಾಗ್ಯವಿಶೇಷಗಳ ದೆಸೆಯಿಂದ, ಈಶ್ವರನನ್ನು ಅರ್ಚಿಸುವುದಕ್ಕೋಸ್ಕರ, ನನ್ನ ಮನೆಯನ್ನು ಪವಿತ್ರಗೊಳಿಸಲು, ಇಲ್ಲಿಗೆ ಬಂದಿರುವೆ! ॥೧೯೭॥

ಅಭ್ಯಾಗತನಾಗಿ ಬಂದಿರುವ ನಿನ್ನ ಪಾದ ಕಮಲಗಳನ್ನು, ತೊಳೆಯುವುದರಿಂದ, ನನ್ನ ಗೃಹಸ್ಥಾಶ್ರಮವು ಇಂದಿಗೆ ಸಾರ್ಥಕವಾಯಿತು. ನಿನ್ನ ಪಾದ ಪ್ರಕ್ಷಾಲನದಿಂದ ಉಂಟಾದ ಪವಿತ್ರವಾದ ಉದಕವನ್ನು ಪಾನಮಾಡುವುದರಿಂದ ನಿನ್ನ ಪಾಪಗಳೆಲ್ಲವೂ ನಶಿಸುವುವು. ನಿನ್ನ ಪಾದಕಮಲ ಧೂಳಿಯಿಂದ ನನ್ನ ಈ ಗೃಹವು ಪವಿತ್ರವಾಗಿರುವುದಲ್ಲದೇ, ನನ್ನ ವಂಶವೇ ಉದ್ಧಾರವಾಯಿತು. ಮಹಾತ್ಮನಾದ ಶಾಂಭವಶ್ರೇಷ್ಠನ ದರ್ಶವು ದುರ್ಲಭವಲ್ಲವೇ. ॥೧೯೮॥

ಈ ಹಿಂದೆ ಅನೇಕವೇಳೆ ನಾನು, ಶಿವಕಥಾಮೃತವನ್ನು ಪಾನಮಾಡಿರುವೆನು. ಇನ್ನು ಮುಂದೆಯೂ, ಪ್ರೀತಿಯಿಂದ ನಾನು ಶಿವನ ಪಾದ ಕಮಲಗಳನ್ನು ಆರಾಧಿಸುವೆನು. ॥೧೯೯-೨೦೦॥

ಶ್ರೋತ್ರಂ ಪವಿತ್ರಂ ಸಮಜಾತಮದ್ಯ
ಗಾತ್ರಂ ಮಮೈತತ್ಸುತರಾಂ ಪವಿತ್ರಂ ।
ತ್ವದುಕ್ತವಿಶ್ವೇಶಕಥಾಸುಧಾಬ್ಧಿ
ತರಂಗಮಾಲಾಕಲಿತೋಽಹಮೇವ ॥೨೦೧॥

ಜನ್ಮಾನ್ಯತೀತಾನಿ ಬಹೂನಿ ತೇಷು
ಮಹೇಶ್ವರಾಪಾರಕಥಾಸುಧಾಬ್ಧಿಃ ।
ನಾಕರ್ಣಿತೋ ನಾಪ್ಯನುಸಂಹಿತೋ ವಾ
ನಾವರ್ತಿತೋ ವಾಪ್ಯಮೃತತ್ವಸಿದ್ಧ್ಯೈ ॥೨೦೨॥

ಕಿಂ ತೈರ್ಜನ್ಮಭಿರಪ್ಯಸಾರತರುಣೀಸಂಸಾರವಾರ್ತಾರಸ
ವ್ಯಾಪಾರೈರಪರಾಧಕೋಟಿಸಹಿತೈರ್ಯಚ್ಛಂಕರೋ ನಾರ್ಚಿತಃ ।
ನ ಧ್ಯಾತೋಽಪಿ ನ ಚ ಶ್ರುತೋಽಪಿ ನಯನೈರ್ದೃಷ್ಟೋಽಪಿ ಕಷ್ಟಾರ್ಣವಾತ್
ಉದ್ಧರ್ತುಂ ಸ ಸಮರ್ಥ ಇತ್ಯನುದಿನಂ ನಾರಾಧಿತೋ ವೈಭವೈಃ ॥೨೦೩॥

ಈ ದಿವಸ, ನನ್ನ ಈ ಕಿವಿಗಳು, ಪವಿತ್ರವಾದವು. ದೇಹವು ಪವಿತ್ರವಾಯಿತು. ನೀನು ಹೇಳಿದ ಈಶ್ವರ ಕಥಾಮೃತದ ಸಾಗರದಲ್ಲಿ ನಾನು ಮುಳುಗಿರುವೆನು. ॥೨೦೧॥

ಇದುವರೆಗೆ ಅನೇಕ ಜನ್ಮಗಳು ಕಳೆದುಹೋದುವು. ಆದರೆ ಈ ಹಿಂದೆ ಯಾವ ಜನ್ಮದಲ್ಲಿಯೂ, ಶಿವಕಥಾಮೃತವನ್ನು ಪಾನಮಾಡಿರಲಿಲ್ಲ. ಅದನ್ನು ಸ್ಮರಿಸಲಿಲ್ಲ; ಅಥವಾ ಪುನಃ ಪುನಃ ಉಚ್ಚರಿಸಲಿಲ್ಲ. ॥೨೦೨॥

ವ್ಯರ್ಥವಾಗಿ ಕಳೆದುಹೋದ ಆ ಜನ್ಮಗಳಿಂದ ಯಾವ ಪ್ರಯೋಜನವುತಾನೇ ಲಭಿಸುವುದು? ಸ್ತ್ರೀಲೋಲುಪನಾಗಿ, ಸ್ತ್ರೀಯರ ಮೋಹಪಾಶಕ್ಕೆ ಸಿಲುಕಿ, ಅವರೊಂದಿಗೆ ಸರಸಸಲ್ಲಾಪಗಳಿಂದ ಕಾಲವನ್ನು ಕಳೆದೆನು. ಅನೇಕ ಘೋರವಾದ ಪಾಪಕರ್ಮಗಳನ್ನೆಸಗಿದೆನು. ಸರ್ವಜ್ಞನು ಈಶ್ವರನು. ಸಂಸಾರಸಾಗರದಿಂದ ಉದ್ಧರಿಸುವ ಸಾಮರ್ಥ್ಯವುಳ್ಳವನಾಗಿರುವನೆಂದು ತಿಳಿದು ಅವನನ್ನು ಅರ್ಚಿಸಲಿಲ್ಲ. ಅಥವಾ ಧ್ಯಾನಿಸಲಿಲ್ಲ. ಈ ರೀತಿಯಲ್ಲಿ ನನಗೆ ಅನೇಕ ಜನ್ಮಗಳು ಕಳೆದವು. ॥೨೦೩॥

ಬ್ರಹ್ಮಾದ್ಯೈರಪಿ ಯತ್ಪದಾಂಬುಜರಜಃ ಪೂಜಾರ್ಥಮತ್ಯದ್ಭುತಂ
ತಪ್ತಂ ಘೋರತರಸ್ತಪೋಽಪಿ ಬಹುಧಾ ಧರ್ಮಾಃ ಕೃತಾಃ ಕೋಟಿಶಃ ।
ತತ್ಪಾದಸ್ಮರಣಂ ಕದಾಪಿ ನ ಕೃತಂ ದಾರೈಃ ಪರಂ ವಂಚಿತಃ
ಭೋಗೈರಪ್ಯಮಿತೈರತಃ ಪರಮಹಂ ಪೂತಸ್ತ್ವದಾಲೋಕನಾತ್ ॥೨೦೪॥

ಅದ್ಯಾಗತ್ಯ ಮಹೇಶ್ವರಾಮೃತಕಥಾಪೀಯೂಷಧಾರಾ ಪರಾ
ದತ್ತಾ ಸಾ ತ್ವದನುಗ್ರಹೇಣ ಸತತಂ ಸಂರಕ್ಷಣೀಯಾ ಮಯಾ ।
ಸೇಯಂ ಕಂಠಮಣಿರ್ಮಮಾಸ್ತು ಕಥಿತೈರ್ಯೈರ್ಯೈಃ ಶ್ರುತಾ ಸಾ ಕಥಾ
ತೇ ಸರ್ವೇಽಪಿ ಶಿವಾಭಿಧಾನಸುಧಯಾ ಮುಕ್ತಾಃ ಸಮಂತಾದಪಿ ॥೨೦೫॥

ಇತಿ ಶ್ರೀಶಿವರಹಸ್ಯೇ ಹರಾಖ್ಯೇ ತೃತೀಯಾಂಶೇ ಉತ್ತರಾರ್ಧೇ, ಶಿವನಾಮ ಮಹಿಮಾನುವರ್ಣನೇ, ಮಹಾಪಾತಕಿಮರಣಕಾಲೇ, ಶಿವನಾಮ ಶ್ರವಣತಃ ಕೈಲಾಸಪ್ರಾಪ್ತಕಥಾವರ್ಣನಂ ನಾಮ ವಿಂಶೋಽಧ್ಯಾಯಃ

ಬ್ರಹ್ಮಾದಿದೇವತೆಗಳೂ ಸಹ ಈಶ್ವರನ ಅಡಿದಾವರೆಗಳನ್ನು ಪೂಜಿಸುವ ಸುಯೋಗವನ್ನು ಸಂಪಾದಿಸುವುದಕ್ಕೋಸ್ಕರ ದೀರ್ಘಕಾಲದ ವರೆಗೆ ಘೋರವಾದ ತಪಸ್ಸನ್ನಾಚರಿಸಿದರು. ಅಸಂಖ್ಯಾಕವಾದ ವೈದಿಕಕರ್ಮಗಳನ್ನು ನಡೆಸಿದರು. ಆದರೆ ಅದೃಷ್ಟಹೀನನಾದ ನಾನು ಪೂರ್ವಜನ್ಮದಲ್ಲಿ ಸ್ತ್ರೀಯರ ಹಾವಭಾವಗಳಿಗೆ ಮನ ಸೋತು, ಅವರೊಂದಿಗೆ ವಿವಿಧ ಶೃಂಗಾರಚೇಷ್ಟೆಗಳನ್ನಭಿನಯಿಸುತ್ತಾ, ಕಾಲವನ್ನು ಕಳೆದೆನು. ಈ ದಿನ ನಿನ್ನ ದರ್ಶನದಿಂದ ನಾನು ಪವಿತ್ರನಾಗಿರುವೆನು. ॥೨೦೪॥

ಎಲೈ ವಿಶ್ವಾವಸುವೇ, ಈ ದಿವಸ ನೀನು ನನ್ನ ಗೃಹಕ್ಕೆ ಬಂದು, ನನಗೆ ಶಿವಕಥಾಮೃತವನ್ನು ದಾನಮಾಡಿರುವೆ. ನಿನ್ನ ಅನುಗ್ರಹದಿಂದ ಪಡೆದ ಅಮೂಲ್ಯವಾದ ಈ ವಸ್ತುವನ್ನು ಜಾಗರೂಕತೆಯಿಂದ ರಕ್ಷಿಸುವುದು ನನ್ನ ಕರ್ತವ್ಯವಾಗಿರುವುದು. ಯಾರು ಶಿವಕಥಾಮೃತವನ್ನು ನಿರಂತರವೂ ಕೇಳುವರೋ ಅವರು ನಿಜವಾಗಿಯೂ ಮೋಕ್ಷವನ್ನು ಹೊಂದುವರು" ಎಂದು ವಿಶ್ವಾವಸುವು ನಂದೀಶ್ವರನನ್ನು ಬಹುವಾಗಿ ಸ್ತುತಿಸಿದನು. ॥೨೦೫॥

ಇಲ್ಲಿಗೆ ಶ್ರೀಶಿವರಹಸ್ಯದ ಮೂರನೆಯ ಅಂಶದ ಉತ್ತರಾರ್ಧದಲ್ಲಿ ಪಾಪಿಯು ಮರಣ ಕಾಲದಲ್ಲಿ ಶಿವನಾಮವನ್ನು ಕೇಳಿ ಅದರಿಂದ ಮೋಕ್ಷವನ್ನು ಹೊಂದಿದನೆಂಬ ಕಥೆಯ ವರ್ಣನೆಯಲ್ಲಿ ಇಪ್ಪತ್ತನೆಯ ಅಧ್ಯಾಯವು ಕೊನೆಗೊಂಡಿತು.

॥ ಶ್ರೀಃ ॥

ಅಥ ಶ್ರೀಶಿವರಹಸ್ಯೇ

ತೃತೀಯಾಂಶೇ

ಉತ್ತರಾರ್ಧೇ

ಏಕವಿಂಶೋಽಧ್ಯಾಯಃ

॥ ಯಾಜ್ಞವಲ್ಕ್ಯ ಉವಾಚ ॥

ಇತಿ ತದ್ವಚನಂ ಶ್ರುತ್ವಾ ರಾಜ್ಞೀ ಸಂತುಷ್ಟಮಾನಸಾ ।
ರಾಜಾನಮಾಹ ವಿನತಾ ಪ್ರಣಮ್ಯ ಚ ಪುನಃ ಪುನಃ ॥೧॥

ರಾಜನ್ಗುರುರ್ಮಮ ಭವಾನಿಹ ತತ್ತ್ವಬೋಧಃ
ತ್ವತ್ತೋ ಮಮಾಭವದತಃ ಪರಮಾದರೇಣ ।
ಮಯ್ಯದ್ಯ ತಾವದಧುನೈವ ದಯಾ ವಿಧೇಯಾ
ವಿದ್ಯಾಪಿ ಮೋಕ್ಷವರದಾ ಪರಮಾತ್ರ ದೇಯಾ ॥೨॥

ಇಪ್ಪತ್ತೊಂದನೆಯ ಅಧ್ಯಾಯ

ಹೀಗೆ ಹೇಳಿದ ಶೈವರಾಜಪುತ್ರನ ಮಾತನ್ನು ಕೇಳಿ ನಾರೀ ರತ್ನಳೆಂಬ ಹೆಸರಿನ ಆ ರಾಣಿಯು ಸಂತೋಷಗೊಂಡು, ನಮ್ರಳಾಗಿ ಬಾರಿಬಾರಿಗೂ ಅವನಿಗೆ ನಮಿಸಿದಳು. ಮತ್ತು ರಾಜನೊಡನೆ ಹೀಗೆಂದಳು. ॥೧॥

ಎಲೈ ದೊರೆಯೇ! ನನಗೆ ಗುರುವು ನೀನೇ. ನಿನ್ನಿಂದಲೇ ತತ್ವದ ತಿಳಿವು ನನಗಾಯಿತು. ಬಹು ಆದರದಿಂದ ನನ್ನಲ್ಲಿ ಕರುಣೆಯಿಡು. ಮೋಕ್ಷವನ್ನು ನೀಡುವ ವಿದ್ಯೆಯನ್ನೂ ನನಗುಪದೇಶಿಸು. ॥೨॥

ಇತಿ ತದ್ವಚನಂ ಶ್ರುತ್ವಾ ರಾಜಾಪಿ ಪ್ರೀತಮಾನಸಃ ।
ಸಾಚೀಕೃತ್ಯ ಮುಖಂ ಪ್ರಾಹ ಸಾಚೀಕೃತಮುಖಾಂಬುಜಂ ॥೩॥

॥ ರಾಜೋವಾಚ ॥

ತ್ವರಯಾತ್ರ ನ ತೇ ಕೃತ್ಯಂ ಮನಃ ಪರಿಣತಂ ನ ತೇ ।
ಕಾಲಾಂತರೇ ಭಾವಿ ಭಾವಿ ಶಿವಯೋಗಿಸಮಾಗಮೇ ॥೪॥

ಅಧುನಾ ಮಂದಿರೇ ತಾವದ್ಗಂತವ್ಯಂ ಸತ್ವರಂ ತ್ವಯಾ ।
ಅವಿಲಂಬೇನ ಭರ್ತಾಪಿ ಕುಪಿತಸ್ಸ್ಯಾತ್ತ್ವನ್ಯಥಾ ॥೫॥

ಯಾದೃಶಸ್ತಾದೃಶೋವಾಸ್ತು ಭರ್ತಾ ನಾರೀಭಿರಾದರಾತ್ ।
ಯತೋನುಸರಣೀಯೋಽತಃ ನ ತತ್ತ್ಯಾಗಸ್ತವೋಚಿತಃ ॥೬॥

ಯಾವಜ್ಜೀವತಿ ಭರ್ತಾಪಿ ತಾವತ್ಸೇವ್ಯಃ ಸ ಸಾದರಂ ।
ಮೃತೇ ತಸ್ಮಿನ್ ತೇನ ಸಾಕಂ ಮರಣಂ ತು ತವೋಚಿತಂ ॥೭॥

ತೇನಾನುಗಮನೇನೈವ ತವ ಸ್ವರ್ಗೋ ಭವಿಷ್ಯತಿ ।
ತಸ್ಯಾಪೀತಿ ತ್ವಯಾ ತಾವತ್ ಕಾರ್ಯಂ ತತ್ಸೇವನಂ ಮುದಾ ॥೮॥

ಹೀಗೆಂದ ಮಾತನ್ನು ಕೇಳಿ ರಾಜನು ಸಂತಸಗೊಂಡು ಕಮಲವನ್ನು ತಿರಸ್ಕರಿಸಿರುವಂತಿರುವ ತನ್ನ ಮುಖವನ್ನು ತಿರುಗಿಸಿ ಹೀಗೆ ಮಾತನಾಡಿದನು. ॥೩॥

"ಆತುರದಿಂದ ನಿನ್ನ ಕೆಲಸವಾಗಲಾರದು. ಕಾಲಾಂತರದಲ್ಲಿ ಉಂಟಾಗುವ ಶಿವಯೋಗಿಯ ಸಹವಾಸದಿಂದ ಆತುರಗೊಂಡ ನಿನ್ನ ಮನಸ್ಸು ಪರಿಪಕ್ವವನ್ನು ಹೊಂದುವುದು. ಇನ್ನೂ ನಿನ್ನ ಮನಸ್ಸು ತತ್ತ್ವೋಪದೇಶಕ್ಕೆ ಯೋಗ್ಯವಾಗಿಲ್ಲ. ॥೪॥

ಈಗ ನೀನು ಜಾಗ್ರತೆ ಮನೆಗೆ ಹೋಗು. ತಡಮಾಡಿದರೆ ನಿನ್ನ ಗಂಡನು ಕೋಪಗೊಳ್ಳಬಹುದು. ಪತಿಯು ಎಂತಹ ಸ್ವಭಾವದವನೇ ಆಗಲಿ, ಸ್ತ್ರೀಯರು ಆತನನ್ನು ಅನುಸರಿಸಲೇ ಬೇಕು. ಆ ಪತಿಯನ್ನು ಪರಿತ್ಯಜಿಸುವುದು ನಿನಗೆ ತರವಲ್ಲ. ॥೫-೬॥

ಪತಿಯು ಬದುಕಿರುವತನಕ ಪತ್ನಿಯು ಆತನನ್ನು ಸೇವಿಸಬೇಕು. ಮೃತನಾದ ಮೇಲೆ ಆ ಗಂಡನ ಕೂಡ ಸತಿಯು ಆದರದಿಂದ ಸಹಗಮನವನ್ನು ಮಾಡಬೇಕು. ಇದು ನಿನಗೆ ಯೋಗ್ಯವಾಗಿದೆ. ಆ ಗಂಡನನ್ನು ಅನುಸರಿಸುವುದರಿಂದಲೇ

ಅಯಂ ತು ಕುಲನಾರೀಣಾಂ ಧರ್ಮೋ ಧರ್ಮವಿಪರ್ಯಯಃ ।
ನ ಕರ್ತವ್ಯೋ ನ ಕರ್ತವ್ಯೋ ಯತಸ್ತತ್ಪಾಪಸಾಧನಂ ॥೯॥

ಇತಿ ತದ್ವಚನಂ ಶ್ರುತ್ವಾ ರಾಜ್ಞೀ ದುಃಖಸಮಾಕುಲಾ ।
ಅಶ್ರುಸಂಕೀರ್ಣನಯನಾ ತಮುವಾಚ ನತಾನನಾ ॥೧೦॥

॥ ರಾಜ್ಞ್ಯುವಾಚ ॥

ಯೋಽಯಮುಕ್ತಸ್ತ್ವಯಾ ಧರ್ಮಃ ಕೇವಲಂ ಪುಣ್ಯಭರ್ತರಿ ।
ಮೃತೇನ ಗಮನಂ ತತ್ತು ಪತಿತೇನ ನ ಸರ್ವಥಾ ॥೧೧॥

ಮದ್ಯಪಾನಾದಿಭಿಃ ಪಾಪೈಃ ಭರ್ತಾ ಚೇತ್ಪತಿತೋ ಮೃತಃ ।
ತೇನಾನುಗಮನಂ ಕಾರ್ಯಂ ಇತಿ ಶಾಸ್ತ್ರಂ ನ ದೃಶ್ಯತೇ ॥೧೨॥

ನಿನಗೆ ಸ್ವರ್ಗಲೋಕವು ಲಭಿಸುವುದು. ಇದರಿಂದ ಗಂಡನಾದ ಆತನಿಗೂ ಸ್ವರ್ಗವು ಸಿಗುತ್ತದೆ. ಆದುದರಿಂದ ನೀನು ಸಂತೋಷದಿಂದ ಪತಿಸೇವೆ ಮಾಡಬೇಕು. ||೭-೮||

ಇದು ಕುಲಸ್ತ್ರೀಯರಿಗೆ ವಿಹಿತವಾದ ಧರ್ಮ. ಈ ಧರ್ಮವನ್ನು ಬದಲಾಯಿಸಬಾರದು. ಖಂಡಿತ ಈ ಧರ್ಮಾಚರಣೆಯನ್ನು ತಪ್ಪಬಾರದು. ಏಕೆಂದರೆ ಧರ್ಮ ಭ್ರಷ್ಟತೆಯು ಪಾಪಗಳಿಸಲು ಸಾಧನವಾಗುವುದು" ಎಂದು ರಾಜನು ಹೇಳಿದನು. ||೯||

ಈ ಮಾತನ್ನು ಕೇಳಿದ ರಾಣಿಗೆ ತುಂಬಾ ವ್ಯಸನವುಂಟಾಯಿತು. ಕಣ್ಣುಗಳಲ್ಲಿ ನೀರು ತುಂಬಿತು. ಬಳಿಕ ತಲೆಬಾಗಿಸಿಕೊಂಡು ರಾಜನನ್ನು ಕುರಿತು ಹೀಗೆ ಮಾತನಾಡಿದಳು. ||೧೦||

ಈಗ ನೀನು ಹೇಳಿದ ಧರ್ಮವು ಕೇವಲ ಪುಣ್ಯಮಾಡಿದ ಪತಿಯ ವಿಷಯದಲ್ಲಿ ಅನ್ವಯಿಸುತ್ತದೆ. ಪತಿತನಾದ ಪತಿಯೊಡನೆ ಸಹಗಮನವು ಮಾತ್ರ ಸರಿಹೋಗಲಾರದು. ||೧೧||

ಮದ್ಯಪಾನವೇ ಮೊದಲಾದ ಪಾಪಕಾರ್ಯಾಚರಣೆಯಿಂದ ಪಾಪಿಯಾಗಿರುವ ಗಂಡನು ಮೃತನಾದರೆ ಆತನೊಡನೆ ಸಹಗಮನಮಾಡಬೇಕೆಂದು ಯಾವ ಶಾಸ್ತ್ರದಲ್ಲಿಯೂ ತಿಳಿಯಬರುವುದಿಲ್ಲ. ||೧೨||

ಉದ್ಧೂಲನತ್ರಿಪುಂಡ್ರಂ ಚ ದ್ವಿಜೈಃ ಕಾರ್ಯಮಹರ್ನಿಶಂ ।
ತತ್ತ್ಯಾಗೇ ಪತಿತೋ ಭೂಯಾದಿತಿ ವೇದಃ ಶ್ರುತಃ ಖಲು ॥೧೩॥

ಲಿಂಗಾರ್ಚನಪರಿತ್ಯಾಗಾತ್ಪತಿತೋ ಭವತೀತ್ಯಪಿ ।
ವೇದೇಶ್ರುತಂ ತತಸ್ತೇನ ಸಹಾನುಗಮನಂ ಕಥಂ ॥೧೪॥

ಮಹಾಪಾತಕರಾಶೀನಾಮಭ್ಯಾಸಾತ್ಪತಿತೋ ಯಥಾ ।
ತಥಾ ಶಿವಾರ್ಚನತ್ಯಾಗಾತ್ಪತಿತೋಽಪಿ ಭವೇನ್ನರಃ ॥೧೫॥

ಪತಿತೇನಾನ್ವಯಸ್ತಾವತ್ಪಾತಿತ್ಯಾಯ ಭವಿಷ್ಯತಿ ।
ಮಮ ಪಾತಿತ್ಯಸಂಪತ್ತಿಃ ಸರ್ವಥಾಪ್ಯನಪೇಕ್ಷಿತಾ ॥೧೬॥

ಪತಿತಂ ಪತಿಮುತ್ಸೃಜ್ಯ ವ್ಯಭಿಚಾರಂ ವಿಹಾಯ ಚ ।
ಸ್ಥಾತವ್ಯಮಿಹ ನಾರೀಣಾಂ ಧರ್ಮೋಽಯಂ ಪರಮೋ ಮತಃ ॥೧೭॥

ದ್ವಿಜರೆನಿಸಿದವರು ಪ್ರತಿದಿನವೂ ವಿಭೂತಿಯನ್ನು ಹಚ್ಚಿಕೊಳ್ಳುವುದು, ಭಸ್ಮತ್ರಿಪುಂಡ್ರ ಧರಿಸುವುದು ಇವುಗಳನ್ನು ಆಚರಿಸಬೇಕು. ಇವುಗಳನ್ನು ಬಿಟ್ಟವನು ಪತಿತನಾಗುತ್ತಾನೆ ಎಂಬ ವೇದದ ಹೇಳಿಕೆಯನ್ನು ಕೇಳಿದೇವೆಯಷ್ಟೇ! ॥೧೩॥

ಶಿವಲಿಂಗಾರ್ಚನೆಯನ್ನು ಬಿಟ್ಟವನು ಪತಿತನಾಗುವನು ಎಂದು ವೇದದಲ್ಲಿ ಶ್ರುತವಾಗಿದೆ. ಆದುದರಿಂದ ಪತಿತನಾದ ಪತಿಯೊಡನೆ ಸಹಗಮನಮಾಡುವುದು ಹೇಗೆತಾನೆ ಸಾಧ್ಯ? ॥೧೪॥

ಗುರುತಲ್ಪಗಮನಾದಿ ಮಹಾಪಾಪಗಳನ್ನು ಮಾಡುವವನು ಪತಿತನಾಗುವಂತೆ ಶಿವಾರ್ಚನೆಯನ್ನು ಬಿಟ್ಟಿರತಕ್ಕವನೂ ಪತಿತನಾಗುತ್ತಾನೆ. ॥೧೫॥

ಪತಿತನಾದೊಡನೆ ಸಹಕರಿಸುವುದೂ ಸಹ ಪಾತಿತ್ಯಸಂಪಾದನೆಗೆ ಕಾರಣ. ನನಗಾದರೋ ಪಾತಿತ್ಯವನ್ನು ಸಂಪಾದಿಸಬೇಕೆಂಬ ಇಚ್ಛೆ ಸರ್ವಥಾ ಇಲ್ಲ. ॥೧೬॥

ಪಾಪಿಯಾದ ಗಂಡನನ್ನು ಬಿಟ್ಟು, ತಾನು ವ್ಯಭಿಚಾರಮಾಡದೇ ಜೀವಿಸುವುದು ನಾರಿಯರಿಗೆ ಉತ್ತಮವಾದ ಧರ್ಮವಾಗಿರುತ್ತದೆ. ॥೧೭॥

ಕಿಂ ಚ ತದ್ವಾರ್ತಯಾ ಕಿಂ ವಾ ಫಲಂ ತದನ್ಯತೋಪಮಂ ।
ಚಿಂತನೀಯಾ ಮತಿಸ್ತಾವತ್ ಮಮ ಸರ್ವಾತ್ಮನಾ ಖಲು ॥೧೮॥

ಇಷ್ಟಸಾಧನತಾಜ್ಞಾನಂ ಸಾಮಾನ್ಯೇನ ಪ್ರವರ್ತಕಂ ।
ಅನಿಷ್ಟಸಾಧನಜ್ಞಾನಾದ್ಬಾಲಕೋಽಪಿ ನಿವರ್ತತೇ ॥೧೯॥

ಬಾಲೋಽಗ್ನಿಮೇಕದಾ ಸ್ಪೃಷ್ಟ್ವಾ ಪುನಃ ಸ್ಪೃಷ್ಟುಂ ನ ವಾಂಛತಿ ।
ತತೋಽಪ್ಯಹಂ ಕಥಂ ಮೂಢಾ ತನ್ಮೂಢತ್ವಂ ಚ ನಿರ್ಗತಂ ॥೨೦॥

ಕಿಂ ಚಾನುಗಮನೇ ತೇನ ಜನ್ಮ ತಾವತ್ ವೃಥಾ ಭವೇತ್ ।
ಭರ್ತುಶ್ಚ ಮೃತಕಲ್ಪತ್ವಸೇವಯಾಪಿ ನ ಮೇ ಫಲಂ ॥೨೧॥

ಮತ್ತು ಆ ಪತಿತನೊಡನೆ ಸಹಗಮನಮಾಡುವ ಸಮಾಚಾರವನ್ನು ಎತ್ತುವುದೇ ತಪ್ಪು. ಅದರಿಂದ ಉಂಟಾಗುವ ಪ್ರಯೋಜನವೆಲ್ಲಾ ಅನ್ಯತವೇ ಸರಿ. ನಿಜವಾಗಿಯೂ ಅದರ ಯೋಚನೆಯಿಂದ ನಮ್ಮ ಬುದ್ಧಿಯು ದುಃಖಕ್ಕೀಡಾಗುವುದು. ॥೧೮॥

ಸಾಮಾನ್ಯವಾಗಿ ಇದು ನನ್ನ ಪ್ರಯೋಜನವನ್ನು ಸಾಧಿಸಬಲ್ಲದು ಎಂಬ ತಿಳಿವು (ಇಷ್ಟಸಾಧನತಾಜ್ಞಾನಂ) ಕಾರ್ಯದಲ್ಲಿ ನಮ್ಮನ್ನು ಪ್ರೇರಿಸುತ್ತದೆ. ಇದು ನನಗೆ ಬೇಡವೆಂದು ಜ್ಞಾನ ಬಂದಾಗ ಹುಡುಗನಾದರೂ ಕೆಲಸದಲ್ಲಿ ತೊಡಗಲಾರನು. ॥೧೯॥

ಚಿಕ್ಕಬಾಲಕನು ಒಮ್ಮೆ ಬೆಂಕಿಯನ್ನು ಮುಟ್ಟಿ ಕೈಸುಟ್ಟುಕೊಳ್ಳುವನು. ಆತನು ಇನ್ನೊಮ್ಮೆ ಆ ಬೆಂಕಿಯನ್ನು ಮುಟ್ಟಹೋಗುವುದಿಲ್ಲ. ಹಾಗೆಯೇ ನಾನೂ ಕೂಡ ಆ ಪತಿತನೊಡನೆ ಸಹ ಗಮನ ಮಾಡಬೇಕೆಂಬ ದಡ್ಡತನವನ್ನು ಬಿಟ್ಟಿರುವೆನು. ॥೨೦॥

ಮತ್ತು ಆತನೊಡನೆ ಸಹಕರಿಸುವುದರಿಂದ ನನ್ನ ಜನ್ಮವೂ ನಿರರ್ಥಕವಾಗುವುದು. ಅಲ್ಲದೇ ಮೃತನಿಗೆ ಸಮನಾದ ಆ ಪತಿಯ ಸೇವೆಯಿಂದ ಏನೂ ಫಲ ದೊರೆಯಲಾರದು. ॥೨೧॥

ಮೃತಕಲ್ಪ ಇತಿ ಜ್ಞೇಯಃ ಪತಿತಸ್ತು ಪತಿಸ್ತತಃ ।
ನ ತೇನ ರೋಚತೇ ಸಂಗಃ ಕುತ್ಸಿತತ್ವೇನ ನಿಶ್ಚಯೇ ॥೨೨॥

ಮಯಾ ಜನ್ಮ ಸಮಾಸಾದ್ಯ ಶಿವೋ ನಾರಾಧಿತಃ ಖಲು ।
ತದಾರಾಧನಹೀನಾನಾಂ ಜನ್ಮ ತಾವನ್ನಿರರ್ಥಕಂ ॥೨೩॥

ಲಿಂಗಂ ಕರಸರೋಜೇನ ನ ಸ್ಪೃಷ್ಟಮಪಿ ಸಾದರಂ ।
ನ ಚಂದನೇನಾನುಲಿಪ್ತಂ ಕಸ್ತೂರೀಸಹಿತೇನ ತತ್ ॥೨೪॥

ನವಬಿಲ್ವದಳೈರೀಶೋ ಲಿಂಗರೂಪೋ ನ ಪೂಜಿತಃ ।
ಪಂಚಾಮೃತಪ್ರವಾಹೈರ್ವಾ ಲಿಂಗಂ ನಾಭ್ಯರ್ಚಿತಂ ಖಲು ॥೨೫॥

ಕ್ಷೀರಸಂಪೂರ್ಣಕಲಶೋ ನೋದ್ಧೃತೋಪಿ ಬಲಾನ್ಮಯಾ ।
ಶಿವಲಿಂಗಾಭಿಷೇಕಾಯ ತೇನಾಭೂನ್ನರಕಶ್ರಮಃ ॥೨೬॥

ಆದುದರಿಂದ ಪಾಪಿಷ್ಠನಾದ ಗಂಡನನ್ನು ಸತ್ತವನಿಗೆ ಸಮಾನನೆಂದು ತಿಳಿಯಬೇಕು. ಈಗ ಪತಿಯು ಕೀಳುತರದವನು ಎಂದು ನಿಶ್ಚಯವಿರುವುದರಿಂದ ಅವನೊಡನೆ ಸಹವಾಸವು ನನಗೆ ರುಚಿಸುವುದಿಲ್ಲ. ||೨೨||

ನಾನು ಈ ಜನ್ಮ ತಾಳಿ ಎಂದೂ ಶಿವನನ್ನು ಪೂಜಿಸಿದವಳಲ್ಲ. ಆ ಶಿವಪೂಜೆ ಮಾಡದವರ ಜನ್ಮವು ವ್ಯರ್ಥವಾದುದಲ್ಲವೇ? ||೨೩||

ತಾವರೆಗೆ ಸಮವಾದ ನನ್ನ ಹಸ್ತದಿಂದ ನಾನು ಆ ಶಿವಲಿಂಗವನ್ನು ಸ್ಪರ್ಶ ಮಾಡಲಿಲ್ಲ. ಅಥವಾ ಕಸ್ತೂರಿಯನ್ನು ಸೇರಿಸಿರುವ ಚಂದನದಿಂದ ಲೇಪನವನ್ನೂ ಮಾಡಿದವಳಲ್ಲ. ||೨೪||

ಹೊಸ ಬಿಲ್ವದಳಗಳಿಂದ ಲಿಂಗರೂಪಿಯಾದ ಶಿವನನ್ನು ಪೂಜಿಸಿದವಳು ನಾನಲ್ಲ. ಅಥವಾ ಪಂಚಾಮೃತಾಭಿಷೇಕವನ್ನು ಶಿವಲಿಂಗಕ್ಕೆ ನಾನು ಮಾಡಿಸಲಿಲ್ಲ. ||೨೫||

ನಾನು ಉದಕಪೂರ್ಣವಾದ ಕಲಶವನ್ನು ಶಿವನ ಅಭಿಷೇಕಕ್ಕಾಗಿ ಹೊತ್ತು ತಂದವಳಲ್ಲ. ಅಲ್ಲದೇ ರುಚಿರುಚಿಯಾದ ಪಕ್ವಾನ್ನಗಳನ್ನು ಶಿವನಿಗೆ ನೈವೇದ್ಯ ಮಾಡಿಸಿದವಳು ನಾನಲ್ಲ. ಅಂತೂ ನರಕಪ್ರಾಪ್ತಿಗೆ ತಕ್ಕಷ್ಟು ಕೆಲಸವನ್ನು ನಾನು ಮಾಡಿರುವೆನು. ||೨೬-೨೭||

ಪಕ್ವಾನ್ನಾನಿ ಪವಿತ್ರಾಣಿ ಮಧುರಾಣಿ ಕೃತಾನಿ ನೋ ।
ನಾರ್ಪಿತಾನಿ ಕರಾಭ್ಯಾಂ ತಾನ್ಯುಮಾಕಾಂತಾಯ ಸಾದರಂ ॥೨೭॥

ಕರಪದ್ಮಾಭಿನಯನೈಃ ನ ನಾಟ್ಯಂ ಚ ಕೃತಂ ಮಯಾ ।
ಶಿವಾಲಯೇ ಮಾರ್ಜನಂ ಚ ಕರೇಣ ನ ಕೃತಂ ಖಲು ॥೨೮॥

ವೀಣಾಮಾದಾಯ ವಿಪುಲಾಂ ವಿಮಲಾಂ ಗಿರಿಶಾಲಯೇ ।
ನ ಗಾನಂ ಚ ಕೃತಂ ಸಮ್ಯಕ್ ಗತಂ ಜನ್ಮ ನಿರರ್ಥಕಂ ॥೨೯॥

ನ ಧ್ಯಾತಂ ಮನಸಾ ಮಹೇಶ್ವರಪದಾಂಭೋಜಂ ಮುಹುರ್ಮಾನಸ
ವ್ಯಾಪಾರೈರಪಿ ಸುಂದರೈರ್ವಿರಚಿತಾ ಪೂಜಾ ನ ಶರ್ವಾಯ ಸಾ ।
ಸರ್ವಾಪದ್ವಿನಿವಾರಣಾಯ ಸಕಲಾಭೀಷ್ಟಾರ್ಥಸಿದ್ಧ್ಯೈ ಸದಾ
ಕಿಂ ಕರ್ತವ್ಯಮತಃ ಪರಂ ಜನಿಜರಾರೋಗವ್ಯಪಾಯಃ ಕಥಂ ॥೩೦॥

ಸರೋಜದಳಸನ್ನಿಭಂ ನಯನಯುಗ್ಮಮೇತತ್ ವೃಥಾ
ಬಹು ಪ್ರಸವಪೂಜಿತಂ ನ ಶಿವಲಿಂಗಮುದ್ವೀಕ್ಷಿತಂ ।

ಶಿವ ದೇವಸ್ಥಾನದಲ್ಲಿ ನರ್ತನವನ್ನು ನಾನು ಮಾಡಲಿಲ್ಲ. ಅಲ್ಲದೇ ಆ ಶಿವ ದೇವಾಲಯದಲ್ಲಿ ಕಸಗುಡಿಸುವ ಕೆಲಸವನ್ನೂ ನನ್ನ ಕೈ ನಡೆಸಿಲ್ಲ. ||೨೮||

ದೊಡ್ಡ ವೀಣೆಯನ್ನು ತೆಗೆದುಕೊಂಡು ಬಾರಿಸುತ್ತಾ ನಾನು ಶಿವಾಲಯದಲ್ಲಿ ಚೆನ್ನಾಗಿ ಶಿವನಾಮಗಳನ್ನು ಬಾರಿಸಿ ಹಾಡಲಿಲ್ಲ. ಹಾಗೆಯೇ, ಸುಮ್ಮನೆ ನಿರರ್ಥಕ ವಾಗಿ ಈ ಜನ್ಮ ಕಳೆದೆನು. ||೨೯||

ನಾನು ಒಂದು ಬಾರಿಯಾದರೂ ಶ್ರೀ ಶಿವನ ಪದಕಮಲವನ್ನು ಧ್ಯಾನಿಸ ಲಿಲ್ಲ. ಮತ್ತು ಮನೋಹರವಾದ ಮಾನಸ ಪೂಜೆಯನ್ನು ಸಹಾ ಆ ಶಿವನಿಗಾಗಿ ಮಾಡಿದವಳಲ್ಲ. ಆ ಶಿವ ಪೂಜೆಯೂ ಎಲ್ಲಾ ಕಷ್ಟಗಳನ್ನು ನಿವಾರಣೆ ಮಾಡಬಲ್ಲದು. ಮತ್ತು ಸಮಸ್ತ ನಮ್ಮ ಬಯಕೆಗಳನ್ನೆಲ್ಲಾ ಪೂರ್ತಿಗೊಳಿಸುವ ಶಕ್ತಿ ಅದಕ್ಕಿರುತ್ತದೆ. ಅಂದ ಬಳಿಕ ನಾನು ಮುಂದೇನು ಮಾಡಲಿ ? ನನಗೆ ಜನ್ಮ, ಮುಪ್ಪು, ರೋಗ ಇವುಗಳಿಂದ ಬಿಡುಗಡೆ ಹೇಗಾದೀತು ? ||೩೦||

ಈ ನನ್ನ ಕಮಲದಂತಿರುವ ಕಣ್ಣು ನಿರರ್ಥಕ. ಅನೇಕ ಪುಷ್ಪಗಳಿಂದ ಪೂಜೆ ಮಾಡಿದ ಶಿವಲಿಂಗ ದರ್ಶನವನ್ನು ಇದು ಮಾಡಲಿಲ್ಲ. ಅಥವಾ ಶಿವನ ರಥೋತ್ಸವ

ರಥೋಽಪಿ ನ ನಿರೀಕ್ಷಿತಃ ಶಿವಮಹೋತ್ಸವಃ ಶಾಂಭವಃ
ವಿಭೂತಿಕೃತಭೂಷಣೋ ನಯನಗೋಚರೋ ನಾದರಾತ್ ॥೩೧॥

ಹಾರೋಪಹಾರರಸಸಾರವಿವೇಕಹೇತು
ರ್ಜಿಹ್ವಾಪಿ ನೇತಿ ನ ತಯಾ ಶಿವನಾಮವಾದಃ ।
ಸಾ ತಾವದದ್ಯ ವಿಷತಾಮುಪಯಾತಿ ನೂನಂ
ಕೃತ್ಯಂ ತಯಾ ನ ಸಹಸೇತ್ಯಪಿ ಭಾರಹೇತುಃ ॥೩೨॥

ಕರ್ಣಾಭ್ಯಾಂ ನ ಸದಾ ಶಿವಾರ್ಚನಕಥಾಪೀಯೂಷಪಾನಂ ಕೃತಂ
ಮೂರ್ಧ್ನಾ ನ ಪ್ರಣತೋಽಪಿ ಶೈಲತನಯಾಕಾಂತೋ ಮುಹುಃ ಸಾದರಂ ।
ಯತ್ರಾಸೀದ್ಗಿರಿಶಾರ್ಚನಾಯ ತದಭೂತ್ಸರ್ವಂ ವೃಥಾ ಸರ್ವಥಾ
ಹಾ ಹಂತಾಂತಕವಾರ್ತಯಾಪಿ ಸತತಂ ಚಿಂತಾಪರಂ ಜಾಯತೇ ॥೩೩॥

ಅಪಾರರತ್ನೈರಪಿ ಹಾರಮಂದಿರಂ
ಕೃತಂ ನ ಸೌವರ್ಣಮಯಾಭಿಮಂಡಿತಂ ।

ವನ್ನಾದರೂ ಇದು ದರ್ಶನಮಾಡಲಿಲ್ಲ. ಸಂಪೂರ್ಣವಾಗಿ ವಿಭೂತಿ ಭೂಷಿತನಾದ ಶಾಂಭವನನ್ನು ಒಂದುಸಾರಿಯೂ ನೋಡಲಿಲ್ಲ. ॥೩೧॥

ಶಿವಾರ್ಪಣೆ ಮಾಡಿದ ಪ್ರಸಾದದ ಸವಿಯನ್ನೂ, ಮನೋಹರವಾದ ರಸಗಳನ್ನೂ ಸವಿಯಬಲ್ಲ ಈ ನನ್ನ ನಾಲಿಗೆ ಶಿವನಾಮವನ್ನು ಕೀರ್ತಿಸಲಿಲ್ಲ. ಆ ಜಿಹ್ವೆಯು ಈಗ ವಿಷಮ ಸ್ಥಿತಿಯನ್ನು ಹೊಂದಿರುವುದಲ್ಲದೇ ಅದು ಮಾಡತಕ್ಕ ಕೆಲಸವೆಲ್ಲಾ ಕೇವಲ ದುಃಖಭಾರಕ್ಕೆ ಕಾರಣವಾಯಿತು. ಅದರಿಂದ ಯಾವ ಪ್ರಯೋಜನವೂ ಆಗಲಿಲ್ಲ. ॥೩೨॥

ನಾನು ಕಿವಿಗಳಿಂದ ಶಿವಾರ್ಚನೆಗೆ ಕಾರಣವಾದ ಕಥಾಮೃತವನ್ನು ಪಾನಮಾಡಿಲ್ಲ ಮತ್ತು ಬಾರಿ ಬಾರಿಗೂ ಶಿವನಿಗೆ ತಲೆ ಬಾಗಲಿಲ್ಲ. ಎಲ್ಲೆಲ್ಲಿ ಶಿವಪೂಜೆಯಾಯಿತೋ ಅವೆಲ್ಲಾ ವ್ಯರ್ಥವೆಂದು ತಿಳಿದೆನು. ಆದರೀಗ ಅಯ್ಯೋ! ಯಮನ ಭೀತಿಯಿಂದ ಮನಸ್ಸು ಯಾವಾಗಲೂ ಚಿಂತೆಯಿಂದ ಕೂಡಿದೆ. ॥೩೩॥

ನಾನು ಅನೇಕ ರತ್ನಗಳನ್ನು ಜೋಡಿಸಿ ಶಿವನಿಗೊಂದು ವಿಹಾರ ಮಂದಿರವನ್ನು ಕಟ್ಟಿಸಲಿಲ್ಲ. ಅಲ್ಲದೇ ಅಂತಹ ಕ್ರೀಡಾ ಭವನವನ್ನು ಚಿನ್ನದೊಡವೆಗಳಿಂದ

ಸರತ್ನಕೋಶೋಽಪಿ ವೃಥೈವ ಜಾತಃ
ಸುವರ್ಣಕೋಶೋಽಪ್ಯಮಿತೋ ವೃಥೈವ ॥೩೪॥

ಏವಮುಕ್ತ್ವಾ ಸ್ಥಿತಾ ರಾಜ್ಞೀ ತದಾನೀಮಾಗತೋ ನೃಪಃ ।
ತಸ್ಯಾಸ್ತು ಭರ್ತಾ ಸಸುತೋ ಮುಮೂರ್ಷುರ್ವ್ರಣಪೀಡಿತಃ ॥೩೫॥

ತದಾ ಸ ಭೂಪಸ್ತಂ ದೃಷ್ಟ್ವಾ ದೂರೇಣ ವ್ರಣಪೀಡಿತಂ ।
ದುಷ್ಟೈಃ ಸ್ವಭೃತ್ಯೈರಾನೀತಮಾಕ್ರಮ್ಯ ನಗರಂ ಪರಂ ॥೩೬॥

ತದ್ಭೃತ್ಯೈಸ್ತಾಡಿತಃ ಶೂರೋ ಬದ್ಧಃ ಪಾಶೈಃ ಸಭೂಪತಿಃ ।
ಕೋಲಾಹಲಸಮಾಕ್ರಾಂತಾ ಭರ್ತ್ಸಿತೋಽಪಿ ಮುಹುರ್ಮುಹುಃ ॥೩೭॥

ತತಃ ಸ ರಾಜಾ ಬಹಿರಾಗತೋಽಪಿ
ಕಿಮೇವಮಾಸೀದಿತಿ ವಿಸ್ಮಿತಃ ಸನ್ ।
ಪಶ್ಚಾದಮಾತ್ಯೈಃ ಪ್ರಣತೋಽತಿಭಕ್ತ್ಯಾ
ಶೂರೈಃ ಕುಮಾರೈರತಿದೂರತೋಽಸೌ ॥೩೮॥

ಅಲಂಕರಿಸಲಿಲ್ಲ. ನನ್ನಲ್ಲಿರುವ ರತ್ನ ಮತ್ತು ಸುವರ್ಣಗಳ ಭಂಡಾರಗಳು ವ್ಯರ್ಥವಾಗಿ ಹೋದವು'' ಎಂದು ರಾಣಿಯು ಬಹುವಾಗಿ ದುಃಖಿಸಿದಳು. ॥೩೪॥

ಹಾಗೆ ಆ ರಾಣಿಯು ಹೇಳುತ್ತಿರುವಾಗಲೇ ಆಕೆಯ ಪತಿಯಾದ ರಾಜನು ಮಗನೊಂದಿಗೆ ಅಲ್ಲಿಗೆ ಬಂದನು. ಅವನು ಬಹಳ ಹುಣ್ಣುಗಳಿಂದ ಪೀಡಿತನಾಗಿದ್ದನು. ಮತ್ತು ಸಾಯುವ ಪರಿಸ್ಥಿತಿಯಲ್ಲಿದ್ದನು. ॥೩೫॥

ಆಗ ರಾಜಪುತ್ರನು ವ್ರಣಪೀಡಿತನಾದ ಆತನನ್ನು ಕಂಡನು. ಅವನನ್ನು ದುಷ್ಟರಾದ ಆತನ ಸೇವಕರೇ ಪಟ್ಟಣಕ್ಕೆ ಎಳೆದು ಕರೆತರುತ್ತಿದ್ದರು. ॥೩೬॥

ಆ ರಾಜನು ಆ ಸೇವಕರಿಂದ ಬಂಧಿಸಲ್ಪಟ್ಟಿದ್ದನು. ಮತ್ತು ಸೇವಕರು ಆತನನ್ನು ಹೊಡೆಯುತ್ತಿದ್ದರು. ಬಹಳವಾಗಿ ಕೂಗಾಡುತ್ತಾ ಆ ಆಳುಗಳು ರಾಜನನ್ನು ಬಾರಿಬಾರಿಗೂ ಹೆದರಿಸುತ್ತಿದ್ದರು. ॥೩೭॥

ಬಳಿಕ ಶೈವರಾಜನು ಹೊರಗೆ ಬಂದುನೋಡಿ ಇದೇನೆಂದು ಆಶ್ಚರ್ಯಗೊಂಡವನಾದನು. ಒಡನೆಯೇ ಮಂತ್ರಿಗಳು ಭಕ್ತಿಯಿಂದ ರಾಜನಿಗೆ ನಮಸ್ಕರಿಸಿದರು. ಹಾಗೆಯೇ ಶೂರರಾದ ರಾಜಕುಮಾರರೂ ನಮಿಸಿದರು. ॥೩೮॥

ಪೃಷ್ಟಾಸ್ತೇ ಮಂತ್ರಿಣಸ್ತೇನ ಕೋಽಸಾವಿತಿ ತಮೂಚಿರೇ ।
ಭಿಲ್ಲಪತ್ತನರಾಜಾಯಮಶಾಂಭವವರೋ ನೃಪ ॥೩೯॥

ಅಯಂ ದುರಾತ್ಮಾ ದುರ್ಬುದ್ಧಿರ್ಭಿಲ್ಲರಾಜಾ ವಿಶೇಷತಃ ।
ಪುರಂ ಗೃಹೀತಮಸ್ಮಾಭಿರೇತಸ್ಯಾದ್ಯ ದುರಾತ್ಮನಃ ॥೪೦॥

ಅಸ್ಮದೀಯೈಃ ಕಥಂ ತಸ್ಯ ನಗರಸ್ಯ ಚ ರಕ್ಷಣಂ ।
ಸುವರ್ಣಕೋಶಸಂವೀತಂ ರತ್ನಕೋಶಸಮನ್ವಿತಂ ॥೪೧॥

ಅಯಂ ತು ಸರ್ವದಾ ಸ್ವಾಮಿನ್ ಶಿವಯಾತ್ರಾವಿರೋಧಕಃ ।
ಶಿವಯಾತ್ರಾರತದ್ರವ್ಯಮನೇನಾಪಹೃತಂ ಮುಹುಃ ॥೪೨॥

ಸರ್ವದಾ ತರುಣೀಸಕ್ತಿಃ ಶಿವಪೂಜಾವಿವರ್ಜಿತಃ ।
ತ್ವಯಿ ಶಾಸತಿ ಭೂಲೋಕೇ ಕಿಮಯಂ ಸ್ಥಾತುಮರ್ಹಸಿ ॥೪೩॥

ಇವನಾರೆಂದು ಆ ರಾಜನು ಮಂತ್ರಿಗಳನ್ನು ಕೇಳಿದನು. ಅದಕ್ಕೆ ಈತನು ಭಿಲ್ಲಪಟ್ಟಣದ ರಾಜನೆಂದೂ, ದುಷ್ಟನಾದ ಅಶೈವನೆಂದೂ ಆ ಮಂತ್ರಿಗಳು ಹೀಗೆ ಉತ್ತರವಿತ್ತರು. ॥೩೯॥

ಈತನು ಭಿಲ್ಲರಿಗೆ ರಾಜನು. ಕೆಟ್ಟಸ್ವಭಾವದವನು. ಆದುದರಿಂದಲೇ ದುಷ್ಟನಾದ ಈ ಭಿಲ್ಲಭೂಪತಿಯ ಪಟ್ಟಣವನ್ನು ನಾವು ಮುತ್ತಿದೆವು. ॥೪೦॥

ಈತನ ಪಟ್ಟಣವು ಎಲ್ಲೆಡೆಯಲ್ಲಿಯೂ ನಮ್ಮವರಿಂದಲೇ ಸುರಕ್ಷಿತವಾಗಿತ್ತಲ್ಲದೇ, ಅಲ್ಲಿ ಬಂಗಾರ ಮತ್ತು ರತ್ನಗಳ ಭಂಡಾರಗಳು ತುಂಬಿದ್ದುವು. ॥೪೧॥

ಈ ನೃಪನು ಯಾವಾಗಲೂ ಶಿವಕ್ಷೇತ್ರಯಾತ್ರೆಯನ್ನು ವಿರೋಧಿಸುತ್ತಿದ್ದನು. ಮತ್ತು ಈತನು ಶಿವಕ್ಷೇತ್ರಗಳಿಗೆ ಯಾತ್ರೆಹೋಗುವವರ ಹಣಗಳನ್ನು ಅನೇಕ ಬಾರಿ ಅಪಹರಿಸಿದ್ದನು. ॥೪೨॥

ಇವನು ಯಾವಾಗಲೂ ಶಿವಪೂಜೆಯನ್ನು ತ್ಯಜಿಸಿ ಯುವತಿಯರೊಂದಿಗೆ ವಿಹರಿಸುತ್ತಿದ್ದನು. ಎಲೈ! ರಾಜನೇ, ನೀನು ಧರ್ಮದಿಂದ ರಾಜ್ಯವಾಳುವಾಗ ಇಂತಹ ಸ್ಥಿತಿಯಲ್ಲಿ ಈತನು ಹೀಗೆ ಇರುವುದು ಯುಕ್ತವೇ? ॥೪೩॥

ನ ಭೂಲೋಕರಿಪುಃ ಕೋಽಪಿ ತವ ಭೂಪಾಲಸತ್ತಮ ।
ಉಪೇಕ್ಷಿತೋಽಯಂ ತುಚ್ಛತ್ವಾದ್ರಕ್ಷಣೀಯೋ ನ ಸರ್ವಥಾ ॥೪೪॥

ಕಿಂ ಚ ಭೂಮಂಡಲೇ ರಾಜನ್ ಶಿವಾಚಾರವಿವರ್ಜಿತಃ ।
ಅಯಮೇಕಃ ಸ ನಗರಃ ನಗರೇ ನ ಶಿವಾಲಯಃ ॥೪೫॥

ಪಶ್ಯ ಪಶ್ಯ ಮನೋಜ್ಞಾನಿ ಸುವರ್ಣಾಭರಣಾನ್ಯಪಿ ।
ಏಕೋಽಪಿ ತೇಷು ರುದ್ರಾಕ್ಷೋ ನಾಸ್ತಿ ಭೂಪಾಲ ಪಾವನಃ ॥೪೭॥

ರುದ್ರಾಕ್ಷಹೀನಾಭರಣಾನಿ ಯಾನಿ ತಾನಿ ಸ್ವಭಾವೇನ ನ ಮಂಡನಾಯ ।
ಕಿಂ ಮಂಡನೈರ್ಮಂಗಳಸೂತ್ರಹೀನೈಃ ಪ್ರಚಂಡರಂಡಾಭರಣೈರ್ವಿಚಿತ್ರೈಃ ॥೪೮॥

ಇತಿ ತದ್ವಚನಂ ಶ್ರುತ್ವಾ ಸ್ಮೃತ್ವಾ ಶಂಕರಮಾದರಾತ್ ।
ಪುನರ್ವಿವೇಶ ತ್ವರಯಾ ತದೇವ ಶಿವಮಂದಿರಂ ॥೪೯॥

ದೊರೆಯೇ! ನಿನಗೆ ಭೂಲೋಕದಲ್ಲಿ ಯಾರೊಬ್ಬ ಶತ್ರುವೂ ಇರುವುದಿಲ್ಲ. ಈತನು ಕೀಳುದರ್ಜೆಯವನಾದುದರಿಂದ ಉಪೇಕ್ಷಿಸಲು ಯೋಗ್ಯನೇ ಹೊರತು ರಕ್ಷಣೆಗೆ ಖಂಡಿತ ಯೋಗ್ಯನಾಗಲಾರನು. ॥೪೪॥

ಮತ್ತು ಈತನು ಈ ಲೋಕದಲ್ಲಿ ಶಿವಪೂಜೆ ಮಾಡದೆ ಜೀವಿಸುತ್ತಾನೆ. ಹಾಗೆ ಪಟ್ಟಣದಲ್ಲಿ ವಾಸಿಸುತ್ತಿರುವವನು ಈತನೊಬ್ಬನೇ. ಈತನ ಪಟ್ಟಣದಲ್ಲಿ ಶಿವದೇವಾಲಯವಿಲ್ಲ. ॥೪೫॥

ಶಿವದೇವಸ್ಥಾನವಿಲ್ಲದಿರುವ ನಗರಕ್ಕೆ ಧಿಕ್ಕಾರವಿರಲಿ. ಏಕೆಂದರೆ ಅವರಿಗೆ ಶಿವನಲ್ಲಿ ವಿಶ್ವಾಸವಿಲ್ಲ. ॥೪೬॥

ಎಲೈ ರಾಜನೇ, ರಮಣೀಯವಾದ ಈ ಬಂಗಾರದ ಒಡವೆಗಳನ್ನು ನೋಡು. ಇವುಗಳೊಳಗೆ ಪವಿತ್ರವಾದ ರುದ್ರಾಕ್ಷಿಯು ಒಂದೂ ಕೂಡ ಕಂಡುಬರುವುದಿಲ್ಲ.॥೪೭॥

ರುದ್ರಾಕ್ಷಿಗಳನ್ನು ಸೇರಿಸದಿರುವ ಒಡವೆಗಳು ಅಲಂಕಾರ ಮಾಡಿಕೊಳ್ಳಲು ಯೋಗ್ಯವಲ್ಲ. ವಿಚಿತ್ರಗಳಾದ ದಿವ್ಯಾಭರಣಗಳನ್ನು ವಿಧವೆಯು ಧರಿಸಿದ್ದರೂ ಮಂಗಳಸೂತ್ರ ಸಂಬಂಧವಿಲ್ಲದ ಆ ಒಡವೆಗಳಿಂದ ಏನು ಪ್ರಯೋಜನ?" ॥೪೮॥

ಹೀಗೆಂದ ಮಂತ್ರಿಗಳ ಮಾತನ್ನು ಕೇಳಿ ರಾಜನು ಆದರದಿಂದ ಶಿವನನ್ನು ಸ್ಮರಿಸಿಕೊಂಡು ಬಳಿಕ ಜಾಗ್ರತೆಯಾಗಿ ಆ ಶಿವದೇವಾಲಯದೊಳಕ್ಕೆ ಪ್ರಯಾಣ ಮಾಡಿದನು. ॥೪೯॥

ತತ್ರ ದೃಷ್ಟ್ವಾ ಮಹಾದೇವಂ ಲಿಂಗರೂಪಮನುತ್ತಮಂ ।
ಪ್ರಣಮ್ಯ ಬಹುಧಾ ಸ್ತುತ್ವಾ ಶಿವಧ್ಯಾನರತೋಽ ನೃಪಃ ॥೫೦॥

ತತಃ ಸ ಭಿಲ್ಲರಾಜಾ ತು ತಾಡಿತೋಽಪಿ ಮೃತಸ್ತತಃ ।
ಸಾ ವಾರ್ತಾ ತೇನ ರಾಜ್ಞಾಪಿ ಶ್ರುತಾ ತದ್ಭಾರ್ಯಯಾಪಿ ಸಾ ॥೫೧॥

ತತಃ ಪರಂ ಚ ಸಾ ರಾಜ್ಞೀ ಪ್ರಣತಾ ತಂ ನರೋತ್ತಮಂ ।
ಪಾಹಿ ಪಾಹೀತಿ ಪಾಹೀತಿ ಖಿನ್ನಾನನವಿಲೋಚನಾ ॥೫೨॥

ತತಸ್ತಾಮಾಹ ರಾಜಾಪಿ ಖೇದಂ ಮಾ ಕುರು ಮಾ ಕುರು ।
ತವಾಭಿಲಷಿತಂ ಭಾವಿ ಮಯಾ ಗಮ್ಯತ ಇತ್ಯಪಿ ॥೫೩॥

ಮಾಸಾನಂತರಮತ್ರೈವ ಪುನರಾಗಮ್ಯತೇ ಮಯಾ ।
ತಾವದ್ವಸಾತ್ರ ನಿಯಮೈರಗತ್ವಾ ಶಂಕರಾಲಯಂ ॥೫೪॥

ಅಲ್ಲಿ ಲಿಂಗಸ್ವರೂಪಿಯಾದ ಶಂಕರನನ್ನು ದರ್ಶನಮಾಡಿದನು. ಆಮೇಲೆ ಆತನನ್ನು ಬಹಳವಾಗಿ ಸ್ತೋತ್ರಮಾಡಿದನು. ಮತ್ತು ನಮಸ್ಕರಿಸುತ್ತಾ ಶಿವನ ಧ್ಯಾನದಲ್ಲಿಯೇ ನಿರತನಾದನು. ॥೫೦॥

ಬಳಿಕ ಆ ಭಿಲ್ಲರಾಜನು ಸೇವಕರಿಂದ ಹೊಡೆಯಲ್ಪಟ್ಟು ಅಲ್ಲಿಯೇ ಮೃತನಾದನು. ಹೀಗೆಂಬ ವರ್ತಮಾನವನ್ನು ಶೈವರಾಜಪುತ್ರನೂ ರಾಣಿಯೂ ಕೇಳಿದರು. ॥೫೧॥

ಆಮೇಲೆ ಆ ಪಟ್ಟದರಸಿಯು ಆ ನರಶ್ರೇಷ್ಠನಿಗೆ ತಲೆಬಾಗಿದವಳಾಗಿ ತನ್ನನ್ನು ಕಾಪಾಡೆಂದು ಕಂದಿನ ಮುಖ ಮತ್ತು ಕಣ್ಣುಗಳುಳ್ಳವಳಾಗಿ ಅಂಗಲಾಚಿದಳು.॥೫೨॥

ಅನಂತರ ಭೂಪತಿಯಾದ ಆತನು “ ನೀನು ದುಃಖಪಡಬೇಡ, ನಿನ್ನಿಷ್ಟವನ್ನೆಲ್ಲಾ ನಾನು ನೆರವೇರಿಸಿಕೊಡುವೆನು. ॥೫೩॥

ನಾನು ಒಂದು ತಿಂಗಳ ಅನಂತರ ತಿರುಗಿ ಬರುತ್ತೇನೆ. ಅಲ್ಲಿಯುವರೆಗೆ ನೀನು ಸದಾಚಾರಗಳನ್ನು ಪಾಲಿಸಿಕೊಂಡು ಇಲ್ಲಿಯೇ ಇರು. ಈ ಶಿವಾಲಯುವನ್ನು ಬಿಟ್ಟು ಬೇರೆ ಹೋಗಬೇಡ ” ಎಂದನು. ॥೫೪॥

ಇತಿ ತದ್ವಚನಂ ಶ್ರುತ್ವಾ ತಮುಪ್ಯುಕ್ತ್ವಾ ತಥಾಸ್ತ್ವಿತಿ ।
ಉವಾಸೋದ್ಯಾನಭೂದೇಶೇ ರಾಜಾ ಸ್ವನಗರಂ ಯಯೌ ॥೫೫॥

ಪುತ್ರಪೌತ್ರಾದಿಸಂಯುಕ್ತೋ ದಾರೈರಪಿ ಸಮಾವೃತಃ ।
ನಿಜಂ ನಗರಮಾಸಾದ್ಯ ಶಿವಾರ್ಚನರತೋऽಭವತ್ ॥೫೬॥

ತತಃ ಕಾಲೇನ ಸಾ ರಾಜ್ಞೀ ಸೂತಕಾಂತೇ ಶಿವಾರ್ಚನಂ ।
ಕೃತ್ವಾ ಸ್ಥಿತಾ ನಿರಾಹಾರಾ ಭಸ್ಮಭೂಷಿತವಿಗ್ರಹಾ ॥೫೭॥

ತಸ್ಯಾಃ ಸಪತ್ನ್ಯಸ್ತಾಃ ಸರ್ವಾಸ್ತದಾ ಭರ್ತೃವಿಯೋಗತಃ ।
ದುಃಖಿತಾಃ ಸಸುತಾ ಏವ ಸ್ಥಿತಾಸ್ತತ್ರ ವನಾದ್ಬಹಿಃ ॥೫೮॥

ತತಃ ಶಿವರತಾಂ ದೃಷ್ಟ್ವಾ ತಾಂ ಸಪತ್ನ್ಯಃ ಸುತಾ ಅಪಿ ।
ತದೇವ ವ್ರತಮಾಶ್ರಿತ್ಯ ಸ್ಥಿತಾ ಏವ ತದಾಜ್ಞಯಾ ॥೫೯॥

ಹೀಗೆಂದ ರಾಜನ ಮಾತನ್ನು ಕೇಳಿದ ಆ ರಾಣಿಯು ಹಾಗೆಯೇ ಆಗಲೆಂದು ಹೇಳಿ ಆ ಉದ್ಯಾನ ಪ್ರದೇಶದಲ್ಲಿಯೇ ವಾಸಿಸಿದಳು. ರಾಜನೂ ಸಹ ಅಲ್ಲಿಂದ ತನ್ನ ಪಟ್ಟಣಕ್ಕೆ ತೆರಳಿದನು. ॥೫೫॥

ಬಳಿಕ ಆ ದೊರೆಯು ಮಕ್ಕಳು, ಮೊಮ್ಮೊಕ್ಕಳಿಂದ ಕೂಡಿ ತನ್ನ ಹೆಂಡಿರೊಂದಿಗೆ ತನ್ನ ಪಟ್ಟಣಕ್ಕೆ ಬಿಜಯ ಮಾಡಿದನು. ಅಲ್ಲಿಯೂ ಯಾವಾಗಲೂ ಶಿವ ಪೂಜೆಯಲ್ಲಿಯೇ ಆಸಕ್ತನಾಗಿದ್ದನು. ॥೫೬॥

ಆಮೇಲೆ ಕೆಲವುಕಾಲ ಪರ್ಯಂತ ಆ ರಾಣಿಯು ತನ್ನ ಸೂತಕವನ್ನೂ ಕಳೆದುಕೊಂಡು, ಉಪವಾಸವಿದ್ದು ಭಸ್ಮ ಭೂಷಿತಳಾಗಿ ಶಿವಾರ್ಚನೆಯನ್ನು ಮಾಡಿ ಕೊಂಡಿದ್ದಳು. ॥೫೭॥

ಆಕೆಯ ಸವತಿಯರೆಲ್ಲರೂ ಮಕ್ಕಳೊಂದಿಗೆ ಗಂಡನಗಲಿದ ದುಃಖದಿಂದ ಕೂಡಿ ಆ ಉಪವನದ ಹೊರಭಾಗದಲ್ಲಿಯೇ ಇದ್ದರು. ॥೫೮॥

ಅವರು ಒಂದುಸಲ ಪೂಜೆಯಲ್ಲಿ ಆಸಕ್ತಳಾದ ಆ ರಾಣಿಯನ್ನು ನೋಡಿದರು. ಮತ್ತು ಸವತಿಯರೆಲ್ಲರೂ ಅವಳ ಅಪ್ಪಣೆಯನ್ನನುಸರಿಸಿ ಶೈವವ್ರತವನ್ನು ತಮ್ಮ ಮಕ್ಕಳೊಡಗೂಡಿ ಕೈಗೊಂಡರು. ॥೫೯॥

ತ್ರಿಪುಂಡ್ರರುದ್ರಾಕ್ಷಧರಾಃ ಸರ್ವಾಸ್ತಾಃ ಶಿವಪೂಜನೇ ।
ಉದ್ಯತಾ ಏವ ಸತತಂ ಭಸ್ಮೋದ್ಧೂಲಿತವಿಗ್ರಹಾಃ ॥೬೦॥

ತತಃ ಪರಂ ಸ ರಾಜಾಪಿ ಸತ್ಯವ್ರತಪರಾಯಣಃ ।
ತದುದ್ಯಾನವನಂ ಪ್ರಾಪ ವೃತಃ ಪರಿಜನೈರ್ಮಿತೈಃ ॥೬೧॥

ತತ್ರಾಗತ್ಯ ಸರಸ್ತೀರೇ ಸ್ನಾತ್ವಾ ಭೂತಿವಿಭೂಷಣಃ ।
ಚಕಾರ ಪೂಜನಂ ಶಂಭೋರ್ಬಿಲ್ವಪತ್ರಾದಿಭಿರ್ಮುದಾ ॥೬೨॥

ತತೋ ದದರ್ಶ ತಾಂ ರಾಜ್ಞೀಂ ಭೂತಿರುದ್ರಾಕ್ಷಭೂಷಣಾಂ ।
ಶನೈಃ ಶಿವ ಶಿವೇತ್ಯುಕ್ತ್ವಾ ಸ್ಥಿತಾಮತಿಕೃಶಾಮಪಿ ॥೬೩॥

ತತಃ ಪರಂ ಸಪತ್ನ್ಯಶ್ಚ ತಸ್ಯಾಸ್ತಾವತ್ಸಮಾಗತಾಃ ।
ಪುತ್ರಾಶ್ಚ ತಾಸಾಂ ರುದ್ರಾಕ್ಷೈಃ ಭಸ್ಮನಾ ಚ ವಿಭೂಷಿತಾಃ ॥೬೪॥

ಆ ಎಲ್ಲಾ ಸವತಿಯರೂ ತ್ರಿಪುಂಡ್ರ ಮತ್ತು ರುದ್ರಾಕ್ಷಗಳನ್ನು ಧರಿಸಿದರು. ಎಲ್ಲರೂ ಕೂಡ ಭಸ್ಮವನ್ನು ಲೇಪಿಸಿಕೊಂಡು ಶಿವಪೂಜೆಯಲ್ಲಿ ನಿರತರಾದರು. ॥೬೦॥

ಒಂದು ದಿನ ಸತ್ಯವ್ರತಿಯಾದ ಆ ದೊರೆಯು ಒಂದುಸಾರಿ ಮಿತಪರಿವಾರದೊಂದಿಗೆ ಮತ್ತೆ ಆ ಉದ್ಯಾನವನವನ್ನು ಹೊಂದಿದನು. ॥೬೧॥

ಅಲ್ಲಿಗೆ ಬಂದು ಒಂದು ಸರೋವರದ ತೀರದಲ್ಲಿ ಇಳಿದನು. ಮತ್ತು ಸರೋವರದಲ್ಲಿ ಸ್ನಾನಮಾಡಿ, ವಿಭೂತಿಯನ್ನು ಧರಿಸಿ, ಬಿಲ್ವಪತ್ರೆ ಮೊದಲಾದವುಗಳಿಂದ ಶಿವಪೂಜೆಯನ್ನು ನೆರವೇರಿಸಿದನು. ॥೬೨॥

ಅನಂತರ ಆ ಅರಸನು ವಿಭೂತಿ, ರುದ್ರಾಕ್ಷಿ ಇವುಗಳನ್ನು ಧರಿಸಿ, ಶಿವ ಶಿವ ಎಂದು ಮೆಲ್ಲಮೆಲ್ಲನೆ ಶಿವನನ್ನು ಧ್ಯಾನಮಾಡುತ್ತಾ ಕೃಶಳಾಗಿರುವ ಆ ಅರಸಿಯನ್ನು ಕಂಡನು. ॥೬೩॥

ಆಮೇಲೆ ಆ ಅರಸಿಯ ಸವತಿಯರೂ, ಅವರ ಮಕ್ಕಳೂ ಅಲ್ಲಿಗೆ ಬಂದರು. ಅವರೆಲ್ಲಾ ಭಸ್ಮ, ರುದ್ರಾಕ್ಷಿ ಇವುಗಳಿಂದ ಅಲಂಕೃತರಾಗಿದ್ದರು. ॥೬೪॥

ಶಿವ ಶಂಕರ ವಿಶ್ವೇಶ ಪಾಹಿ ಪಾಹೀತ್ಯನುಕ್ಷಣಂ ।
ವದಂತ ಏವ ತದ್ದಾರಾಃ ತತ್ಪುತ್ರಾಶ್ಚ ಸಮಾಗತಾಃ ॥೬೫॥

ತಾನ್ ದೃಷ್ಟ್ವಾ ಸೋಽಪಿ ಭೂಪಾಲೋ ವಿಸ್ಮಿತಃ ಶಿವತತ್ಪರಾನ್ ।
ತೇ ಸರ್ವೇ ಪ್ರಣತಾಸ್ತಸ್ಮೈ ಪಾಹಿ ಪಾಹೀತಿ ಸತ್ವರಂ ॥೬೬॥

ಸಾಪಿ ರಾಜ್ಞೀ ನಿರಾಹಾರಾ ಕೃಶಾ ತಂ ಪ್ರಣತಾ ನೃಪಂ ।
ತಾಮಾಹ ರಾಜಾ ವಿನತಾಂ ಕ್ವ ಪ್ರೀತಿರಿತಿ ಸಾದರಂ ॥೬೭॥

॥ ರಾಜ್ಞೀ ಉವಾಚ ॥

ಪ್ರೀತಿರ್ಮಹಾದೇವಪದಾರವಿಂದ
ಧ್ಯಾನಾರ್ಚನಾದೌ ನೃಪ ಸರ್ವಥಾ ಮೇ ।
ಅತಃ ಪರಂ ಕಿಂ ಮಮ ಕಾರ್ಯಮಸ್ತಿ
ಕೃತ್ಯಂ ವಿಶೇಷೇಣ ಕೃತಂ ವಿಶೇಷಾತ್ ॥೬೮॥

ಆ ತಾಯಿಮಕ್ಕಳೆಲ್ಲರೂ ಶಿವ! ಓ ಶಂಕರ! ನಮ್ಮನ್ನು ಕಾಪಾಡು ಎಂದು ಹೇಳುತ್ತಾ ಅಲ್ಲಿಗೆ ಬಂದರು. ಆ ರಾಜನು ಅವರನ್ನು ನೋಡಿ ಎಲ್ಲರೂ ಶಿವಧ್ಯಾನಾ ಸಕ್ತರಾದುದನ್ನು ತಿಳಿದು ಆಶ್ಚರ್ಯಪಟ್ಟನು. ಅಲ್ಲದೇ ಆ ಎಲ್ಲರೂ ಈ ರಾಜನಿಗೆ ನಮಸ್ಕಾರಮಾಡಿದರು. ಮತ್ತು ತಮ್ಮೆಲ್ಲರನ್ನೂ ಕಾಪಾಡುವಂತೆ ಕೇಳಿಕೊಂಡರು. ||೬೫-೬೬||

ಆ ರಾಣಿಯೂ ಕೂಡ ವಿನೀತಳಾಗಿ ಕೃಶಳಾಗಿದ್ದಳು. ಅವಳೂ ನನ್ನನ್ನು ಕಾಪಾಡೆಂದು ಅಂಗಲಾಚಿಕೊಂಡಳು. ರಾಜನೂ ಸಹ ನಮ್ರನಾಗಿ "ಈಗ ನಿನ್ನ ಪ್ರೀತಿಯು ಯಾರಲ್ಲಿದೆ?" ಎಂದು ಪ್ರಶ್ನಿಸಿದನು. ||೬೭||

ರಾಜನೇ, ಸರ್ವಥಾ ನನಗೆ ಈಶ್ವರನ ಪಾದಕಮಲಗಳ ಪೂಜೆ ಮತ್ತು ಧ್ಯಾನ ಇವುಗಳಲ್ಲಿಯೇ ಪ್ರೀತಿಯಿರುತ್ತದೆ. ವಿಶೇಷವಾಗಿ ನಾನು ಮಾಡಬೇಕಾದ ಕಾರ್ಯಗಳನ್ನು ನೆರವೇರಿಸಿರುತ್ತೇನೆ. ಇನ್ನು ಮುಂದೆ ನಾನು ಮಾಡಬೇಕಾದುದು ಯಾವುದೂ ಇಲ್ಲ, ಎಂದು ಅರಸಿಯು ನುಡಿದಳು. ||೬೮||

|| ರಾಜೋವಾಚ ||

ತ್ವಂ ತಾವದಂತಃಪುರವಾಸಯೋಗ್ಯಾ
ಸ್ಥಿತಿರ್ವನೇ ತೇ ವನಿತಾಸಿ ಯಸ್ಮಾತ್ ।
ಆಯಾಹಿ ನಿತ್ಯಂ ಶಿವಪೂಜನಾಯ
ಪುರಂ ಪ್ರಯಾಹಿ ತ್ವರಯಾ ಕಿಮತ್ರ ||೬೯||

|| ರಾಜ್ಞೀ ಉವಾಚ ||

ಕದಾ ರೇವಾತೀರೇ ರುರುನಿಕರಬಾಲಾತಿರುಚಿರೇ
ಚಿರಂ ತುಂಗಂ ಲಿಂಗಂ ನವರುಚಿರದೂರ್ವಾಂಕುರಜಲೈಃ ।
ಸಮಾರಾಧ್ಯ ಧ್ಯಾತ್ವಾ ಸಿತಭಸಿತಪೂತಾ ಶಿವ ಶಿವ
ಮಹೇಶೇತಿ ತ್ಯಕ್ಷ್ಯೇ ತನುಮಿತಿ ಮಮ ಪ್ರೀತಿರನಿಶಂ ||೭೦||

ಅತಃ ಪರಮುಮಾಪತಿಸ್ಮರಣಮೇವ ಮೇ ಜೀವನಂ
ವಿಭೂತಿಪರಿವೇಷ್ಟಿತಾ ತನುರಿಯಂ ತ್ರಿಪುಂಡ್ರಾಂಕಿತಾ ।

ರಾಜ್ಞಿಯೇ, ನೀನು ಯುವತಿಯಾಗಿರುವೆ. ನಿನಗೆ ಅಂತಃಪುರದಲ್ಲಿ ವಾಸವು ಅರ್ಹವಾದುದು. ನೀನು ಈ ಕಾಡಿನಲ್ಲಿ ಉಳಿಯಬಾರದು. ಏಳು. ಶಿವಪೂಜೆಯನ್ನು ಪಟ್ಟಣದಲ್ಲಿ ನೆರವೇರಿಸುವೆಯಂತೆ. ಇಲ್ಲಿರುವುದು ಬೇಡ. ಪಟ್ಟಣಕ್ಕೆ ಹೋಗೋಣ ಎಂದು ರಾಜನುಸುರಿದನು. ||೬೯||

ಆಗ ರಾಣಿಯು ಹೀಗೆಂದಳು "ಅಯ್ಯಾ! ರಾಜನೇ! ಯಾವಾಗ ನಾನು ಚಿಕ್ಕ ಚಿಕ್ಕ ಜಿಂಕೆಮರಿಗಳಿಂದ ಕಂಗೊಳಿಸುವ ರೇವಾನದೀತೀರವನ್ನು ಹೊಂದಿಯೇನು? ಅಲ್ಲದೆ ಅಲ್ಲಿ ಭಸ್ಮಭೂಷಿತಳಾಗಿ ಹೊಸದಾದ ದೂರ್ವೆ ಮತ್ತು ಶುದ್ಧೋದಕ ಇವುಗಳನ್ನು ಎಂದು ತರುವೆನು. ಅವುಗಳಿಂದ ನಾನು ಎಷ್ಟು ಹೊತ್ತಿಗೆ ಶಿವಲಿಂಗವನ್ನು ಅರ್ಚಿಸಿ, ಶಿವ! ಶಂಕರ! ಮಹೇಶ! ಎಂದು ಆತನನ್ನು ಸ್ಮರಿಸುತ್ತಾ ಈ ದೇಹವನ್ನು ನೀಗುವೆನು. ಎಂದು ಈ ವಿಷಯದಲ್ಲಿ ನನಗೆ ತುಂಬಾ ಆಸೆಯಾಗಿರುವುದು. ||೭೦||

ಇನ್ನು ಮುಂದೆ ಉಮಾಪತಿಯಾದ ಶಂಕರನ ಸ್ಮರಣೆಯಿಂದಲೇ ನನ್ನ ಜೀವನವನ್ನು ಸಾಗಿಸುವೆನು. ಈ ನನ್ನ ದೇಹವು ವಿಭೂತಿ ಮತ್ತು ತ್ರಿಪುಂಡ್ರ

ಮಹೇಶ್ವರ ಸಮರ್ಚನಸ್ಮರಣಸಾಧನೇ ಮನ್ಮನಃ
ಶಿವಾರ್ಪಣಮಿದಂ ಕೃತಂ ನೃಪ ಶಯಾಮಿ ಶಂಭೋಃ ಪದೇ ॥೭೦॥

ಸುಧಾಕರಶಿಲಾತಲೇ ಕುಮುದಗಂಧಮಂದಾನಿಲೇ
ಪ್ರಫುಲ್ಲಕಮಲಾಮಲೇ ತುಹಿನಮಂಡಲೇ ಶೀತಲೇ ।
ಪ್ರಚಂಡಕರಜಾನಲಜ್ವಲಿತಸೂರಕಾಂತೇಽಪಿ ವಾ
ನ ಮೇ ಮತಿರುಮಾಪತಿಸ್ಮೃತಿಸುಧಾರಸಾಸ್ವಾದನೇ ॥೭೨॥

ಪ್ರಾಸಾದೇ ತುಹಿನಾಂಶುಕಾಂತವಿಶದೇ ಮಂದಾರಕುಂದಚ್ಛದ
ಸ್ವಚ್ಛಂದೇ ಕ್ಷುರಗೋಕ್ಷುರವ್ಯತಿಕರಕ್ಷಾರೋಷರೇ ವಾ ಸ್ಥಿತಿಃ ।
ಅಸ್ತು ನ್ಯಸ್ತಸಮಸ್ತವಸ್ತುವಿಷಯಾಪೇಕ್ಷಸ್ಯ ಕಿಂ ತಾವತಾ
ಚೇತಃ ಸಂತತಮಂತಕಾಂತಕಮುಮಾಕಾಂತಂ ಸದಾ ಚಿಂತಯೇ ॥೭೩॥

ಗಳನ್ನು ಧರಿಸಿಯೇ ಇರಲಿ. ಈಶ್ವರನ ಸ್ಮರಣೆ ಮತ್ತು ಪೂಜೆ ಇವುಗಳಲ್ಲಿ ನನ್ನ ಮನಸ್ಸು ನಾಟಲಿ. ನನ್ನ ಈ ದೇಹವು ಶಿವನಿಗೆ ಅರ್ಪಿತವಾಗಲಿ. ನಾನು ಶಿವನ ಪಾದಗಳ ಮೇಲೆಯೇ ಮಲಗುವೆನು. ॥೭೦॥

ಚಂದ್ರಕಾಂತಶಿಲೆಗಳಲ್ಲಿ ವಾಸಮಾಡುವುದಕ್ಕೂ, ಅಥವಾ ಕನ್ನೈದಿಲೆ ಹೂಗಳ ಪರಿಮಳವನ್ನು ಹೊತ್ತ ಮಂದ ತಂಗಾಳಿಯನ್ನು ಸೇವಿಸಬೇಕೆಂದಾಗಲೀ, ನಾನು ಬಯಸಲಾರೆ. ಚನ್ನಾಗಿ ಅರಳಿದ ಕಮಲದಂತೆ ಬೆಳ್ಳಗಿರುವ ಹಿಮಪ್ರದೇಶದಲ್ಲಿ ನಾನಿರಲು ಇಚ್ಛೆಪಡಲಾರೆ. ಮತ್ತು ಸೂರ್ಯನ ಕಿರಣಗಳ ಸೋಂಕಿನಿಂದ ಕಂಗೊಳಿಸುವ ಸೂರ್ಯಕಾಂತಶಿಲೆಗಳಿರುವ ಪ್ರದೇಶವೂ ನನಗೆ ಬೇಡ. ಮತ್ತೆ ಉಮಾಕಾಂತನಾದ ಶಿವನ ನಾಮವೆಂಬ ಅಮೃತವನ್ನು ಕುಡಿಯಬೇಕೆಂದು ನನ್ನ ಮನಸ್ಸು ಬಯಸುತ್ತಿದೆ. ॥೭೨॥

ಚಂದ್ರಕಾಂತಶಿಲೆಯಂತೆ, ಮತ್ತು ಮಂದಾರ, ಗೋರಂಟಿಹೂ ಇವುಗಳ ಗೊಂಚಲಿನಂತೆ, ಬೆಳ್ಳಗಿರುವ ದೊಡ್ಡ ಉಪ್ಪರಿಗೆ ಮನೆಯಲ್ಲಾಗಲಿ, ಕತ್ತಿಯಂತೆ ಹರಿತವಾದ ಮುಳ್ಳುಗಳಿಂದ ತುಂಬಿದ ಮರಳು ಭೂಮಿಯಲ್ಲಾಗಲಿ ವಾಸಮಾಡುವೆನು. ಅಥವಾ ಎಲ್ಲಾವಿಧವಾದ ವಿಷಯಸುಖಗಳನ್ನಾದರೂ ಅನುಭವಿಸಲು ಇಚ್ಛೆಪಡುವೆನು. ಆದರೆ ಅಷ್ಟರಿಂದ ಯಾವ ಫಲವೂ ದೊರೆಯದು. ನನ್ನ ಈ ಮನಸ್ಸು

ಕಿಮಸ್ಮಿನ್ ಸಂಸಾರೇ ಸ್ಮರಹರವಿಹಾರಾಕರಪುರ
ಪ್ರಕಾರವ್ಯಾಹಾರಪ್ರವರಪರಹಾರಾನುಸರಣಂ ।
ಖಲಃ ಕಾಲೋ ನೇಯಃ ಕಥಮಪಿ ಕಿಲಾಯಂ ನ ಕಮಲಾ
ವಿಲಾಸಾನಾಮಾಶಾಂ ಹರ ಹರ ದಯಾಸಾಗರ ಹರ ॥೭೪॥

ನಿರ್ಬಂಧೋಽಪಿ ಗತೋ ಗತಃ ಪತಿರತಃ ಸಂಸಾರವಾರ್ತಾ
ಗತಾ ನಾತಃ ಕೋಽಪಿ ಗತಾಗತಾರ್ತಿವಿಗತಃ ಶ್ರಾಂತಿರ್ಗತಾ ತಾವತಾ ।
ಚಿತ್ತಂ ಮತ್ತಕೃತಾಂತದೂತವಚನವ್ಯಾಪಾರದೂತಂ ಯಥಾ
ನ ಸ್ಯಾದೇವ ತಥಾ ವಿಧೇಯಮಧುನಾ ವಿಶ್ವೇಶ್ವರಧ್ಯಾನತಃ ॥೭೫॥

ದೈನಂದಿನಪ್ರಳಯಕಾಲಭಯಂ ಗತಂ ನೋ
ಸೋಮಾವತಂಸಚರಣಸ್ಮರಣಾದರೇಣ ।
ಏತಾವತಾಸ್ಮಿ ಕೃತಕೃತ್ಯತಮಾ ಕಿಮಸ್ತಿ
ಕೃತ್ಯಂ ಚ ತಾವದಧುನಾ ನ ಚ ಜೀವನಸ್ಯ ॥೭೬॥

ಯಾವಾಗಲೂ ಯಮನಿಗೂ ಯಮನಾದ ಶಿವನನ್ನು ಭಜಿಸುತ್ತಿರಲಿ ಎಂಬುದೇ ನನ್ನ ಮುಖ್ಯ ಧ್ಯೇಯ. ॥೭೩॥

ಈ ಜಗತ್ತೆಲ್ಲಾ ಶಿವನ ಲೀಲಾಸ್ವರೂಪಗಳಾದ ಪಟ್ಟಣ, ಕೋಟೆ, ಕೊತ್ತಳ, ಭಾಷೆ, ಮೊದಲಾದವುಗಳಿಂದ ತುಂಬಿದೆ. ಅಷ್ಟೇ ಹೊರತು ಮತ್ತಾವ ಅಪೂರ್ವ ವಸ್ತುವೂ ಈ ಸಂಸಾರದಲ್ಲಿಲ್ಲ. ಆದರೂ ಕಷ್ಟದಿಂದ ದುಷ್ಟಕಾಲವನ್ನು ಕಳೆಯ ಬೇಕು. ಶಂಭುವೇ! ಹರನೇ! ಕ್ಷಣಿಕಗಳಾದ ಈ ಐಶ್ವರ್ಯದ ವಿಷಯದಲ್ಲಿ ಆಸೆ ಯನ್ನು ಹುಟ್ಟಿಸಬೇಡ. ನೀನು ಕರುಣಾಳುವು. ಐಶ್ವರ್ಯದಿಂದ ಮನುಷ್ಯನು ಕೆಡು ವನು. ॥೭೪॥

ನನಗೆ ಈಗ ಪತಿಯ ನಿರ್ಬಂಧವೇ ತಪ್ಪಿಹೋಗಿದೆ. ಸಂಸಾರವಾರ್ತೆಯು ದೂರವಾಗಿದೆ. ಅಲ್ಲಿಂದಿಲ್ಲಿಗೆ ಓಡಾಡುವ ಹುಮ್ಮಸ್ಸು ಕಮ್ಮಿಯಾಗಿದೆ. ಆಯಾಸವು ಪರಿಹಾರವಾಗಿದೆ. ಆದರೆ ಇನ್ನುಮುಂದೆ ನನ್ನ ಮನಸ್ಸು ಯಾವಾಗಲೂ ಯಮ ದೂತರಿಗೆ ಹೆದರದಂತಹ ಧೈರ್ಯವನ್ನು ಶ್ರೀಪರಮೇಶ್ವರನ ಧ್ಯಾನದಿಂದ ಸಂಪಾದಿಸ ಬೇಕಾಗಿದೆ. ॥೭೫॥

ದೇವ! ಪ್ರತಿದಿನವೂ ಸಂಭವಿಸುವ ಪ್ರಳಯದ ಭಯವು (ಸಂಸಾರಕ್ಲೇಶವು)

ಪ್ರಯಾತು ಸಶಿವಂ ಮನಃ ಶಿವಪದಾಂಬುಜಾರಾಧನಂ
ಕರೋತು ಮಮ ದುರ್ದಶಾಮಪಿ ನಿವೇದ್ಯ ಸದ್ಯಃ ಪುನಃ ।
ಪುನರ್ನ ಜನಿಜಾಂ ರುಜಂ ಹರಸಿ ಕಿಂ ಹರಾರಾಧಿತೋ
ಹರಃ ಪರತರಂ ಸುಖಂ ವಿತರತೀತಿ ತತ್ತ್ವಂ ವದ ॥೭೭॥

ರೇ ! ರೇ ! ಮನಃ ಶಿವಪದಾಬ್ಜರಸಪ್ರಸಾರಂ
ಸಂಸಾರಭಾರಪರಿಹಾರಕರಂ ಪರಂ ತ್ವಂ
ದೃಷ್ಟ್ವಾಪಿ ತಾವದಧುನಾ ಪುನರೇಹಿ ಮೋಹಂ
ಹಿತ್ವಾ ಮುಹುರ್ಮುಹುರುಪೇಹಿ ಹರಾಂಘ್ರಿಪದ್ಮಂ ॥೭೮॥

ರೇ ! ರೇ ! ಮನಃ ಪಶ್ಯ ಶಿವಾಂಘ್ರಿಪದ್ಮಂ
ತಚ್ಚೇದ್ವಿಹಾರಸ್ಥಲಮುತ್ತಮಂ ತೇ ।
ತತ್ರೈವ ತಾವದ್ವಸ ವಾಸುದೇವ
ನೇತ್ರಾಂಬುಜಂ ತಿಷ್ಠತಿ ತೇನ ಸಾಕಂ ॥೭೯॥

ಈಗ ಚಂದ್ರಶೇಖರನ ಪಾದಸ್ಮರಣೆಯಿಂದ ದೂರವಾಯಿತು. ಇಷ್ಟರಿಂದಲೇ ನಾನು ಧನ್ಯಳಾದೆನು. ಈಗ ನನ್ನ ಜೀವನದಲ್ಲಿ ಇದಕ್ಕಿಂತ ಬೇರೆ ಕೃತ್ಯವಿಲ್ಲ. ॥೭೬॥

ನನ್ನ ಈ ಮನಸ್ಸು ಶಿವನಲ್ಲಿ ತನ್ನ ದುರವಸ್ಥೆಯನ್ನು ವಿಜ್ಞಾಪಿಸಿಕೊಳ್ಳಲಿ. ಆಮೇಲೆ ಆ ಶಿವನ ಪಾದಪೂಜೆಮಾಡಿ ಮಂಗಳವನ್ನು ಹೊಂದಲಿ. ಎಲೈ! ಮನಸ್ಸೇ! ಹಾಗೆ ನೀನು ಶಿವಪೂಜಾಸಕ್ತನಾದರೆ ಪುನರ್ಜನ್ಮದಿಂದ ಉಂಟಾಗುವ ಪೀಡೆಯನ್ನು ನೀನು ಪರಿಹರಿಸಿಕೊಳ್ಳುವೆ. ಆಗ ಶಿವನೇ ಪರಮಸುಖಕ್ಕೆ ಕಾರಣನೆಂದೂ, ಆತನೇ ಮುಕ್ತಿಯನ್ನು ಕೊಡುವನೆಂಬ ತತ್ತ್ವವನ್ನು ಎಲ್ಲೆಡೆಯಲ್ಲಿಯೂ ಸಾರು. ॥೭೭॥

ಎಲೈ! ಮನಸ್ಸೇ! ಶಿವನ ಪಾದಕಮಲದ ಮಕರಂದವು ಸಂಸಾರದ ಕಷ್ಟಗಳನ್ನು ನಾಶಮಾಡಬಲ್ಲದು. ಅದು ಅಷ್ಟು ಶ್ರೇಷ್ಠವೂ ಆಗಿದೆ. ನೀನು ಅಜ್ಞಾನವನ್ನು ಬಿಟ್ಟು ಪುನಃ ಆ ಶಂಕರನ ಪಾದಕಮಲವನ್ನು ಈಗಲಾದರೂ ಭಜಿಸು.॥೭೮॥

ಎಲೈ! ಅಲ್ಪಮನಸ್ಸೇ! ಶಿವನ ಪಾದದರ್ಶನವನ್ನು ಒಮ್ಮೆ ಮಾಡು. ಅದು ನಿನಗೆ ಕ್ರೀಡಿಸಲು ಅನುಕೂಲವಾದರೆ ಅಲ್ಲಿಯೇ ನೆಲಸು. ಅಲ್ಲಿಯೇ ವಿಷ್ಣುವಿನ ನೇತ್ರಕಮಲವು ವಾಸವಾಗಿದೆ ಎಂಬುದನ್ನು ನೀನು ಕಾಣುವೆ (ವಿಷ್ಣುವಿನ ನೇತ್ರಕಮಲದಿಂದ ಈಶ್ವರಪಾದವು ಪೂಜಿತವಾಗಿದೆ ಎಂಬುದು ತಾತ್ಪರ್ಯ). ॥೭೯॥

ನಾರಾಯಣೇನಾಪಿ ಶಿವಾಂಘ್ರಿಪದ್ಮೇ
ಸಮರ್ಪಿತಂ ನೇತ್ರಮತೋ ಮಯಾಪಿ ।
ಸಮರ್ಪಿತಂ ಚಿತ್ತಮತಃ ಪ್ರಯಾಹಿ
ತದೇವ ಗೌರೀರಮಣಾಂಘ್ರಿಪದ್ಮಂ ॥೮೦॥

ದೈವಾತ್ ಸ್ಥಿತಿಃ ಶಂಕರಪಾದಪದ್ಮೇ
ಸದಾ ಮನಸ್ತೇ ಯದಿ ತಾವತಾ ಮೇ ।
ಸಂಸಾರಘೋರಾಮಿತದುರ್ದಶಾಪಿ
ನಿವೇದನೀಯಾ ಸಮಯೇ ಸತೀತಿ ॥೮೧॥

ಅಹೋ! ನರಕಭಾಜನಂ ಕಥಮಹಂ ಭವಾಮಿ ತ್ವಯಿ
ಪ್ರಿಯೇ ಮನಸಿ ಸಂಸ್ಥಿತೇ ಸ್ಮರಹರಾಂಘ್ರಿಪಂಕೇರುಹೇ ।
ತ್ವಯಾ ಸಹ ಸಮಾಗಮೋ ಮಮ ಕಿಲಾಪಹಾರಶ್ರಮೋ
ನ ಕಿಂ ತು ಶುಭಸಂಪದಾಮುಪಗಮೋ ಭವತ್ಯನ್ವಹಂ ॥೮೨॥

ಶ್ರೀವಿಷ್ಣುವೂ ಕೂಡ ತನ್ನ ನೇತ್ರವನ್ನು ಈಶನ ಪಾದಕಮಲದಮೇಲಿಟ್ಟಿರುವನು. ಆದರಿಂದಲೇ ನಾನು ಶಂಕರನ ಚರಣಾರವಿಂದದಲ್ಲಿಯೇ ನನ್ನ ಮನಸ್ಸನ್ನು ಇಡುವೆನು. ಎಲೈ ಮನಸ್ಸೇ! ಆ ಗೌರೀಪತಿಯಾದ ಶಂಕರನ ಪಾದವನ್ನು ಆಶ್ರಯಿಸು. ||೮೦||

ಅದೃಷ್ಟವಿಶೇಷದಿಂದ ಆ ಶಂಕರನ ಪಾದದಲ್ಲಿ ನನ್ನ ಮನಸ್ಸು ನಟ್ಟಿರುವುದು. ಎಲೈ ಮನಸ್ಸೇ! ಇಷ್ಟರಿಂದ ಏನೂ ಆಗಲಾರದು. ನೀನು ಕಾಲ ಸಿಕ್ಕಿದಾಗ ಆ ಶಂಕರನಿಗೆ ನನ್ನ ಈ ಸಂಸಾರದ ದುಃಸ್ಥಿತಿಯನ್ನು ವಿಜ್ಞಾಪಿಸು. ||೮೧||

ನನ್ನ ಚಿತ್ತವು ಶ್ರೀಶಂಕರನ ಪಾದಕಮಲದಲ್ಲಿ ಅತಿಯಾದ ಪ್ರೀತಿಯನ್ನು ಇಟ್ಟಿದೆ. ಅಂದಮೇಲೆ ಇನ್ನು ನಿನಗೆ ನರಕದ ಅನುಭವ ಎಲ್ಲಿಯದು? ರಾಜಪುತ್ರನೇ, ನಿನ್ನೊಡನೆ ಕೂಡಿದರೆ ನಾನು ಎಲ್ಲಾ ಸಾಂಸಾರಿಕ ಶ್ರಮಗಳನ್ನೂ ಅನುಭವಿಸಬೇಕಾಗುವುದು. ಅದು ತಪ್ಪಿ ಈಗ ನನಗೆ ಪ್ರತಿನಿತ್ಯವೂ ಕಲ್ಯಾಣಪರಂಪರೆಯು ದೊರೆಯುತ್ತಿರುವುದು. ||೮೨||

ಮನಃ ಸತ್ಯಾಂ ವಾಣೀಂ ಶೃಣು ಶೃಣು ಪರಂ ಪ್ರಾಣವಿಗಮೇ
ಮಹೋದಾರಂ ಧೀರಂ ಹರಮನುಸರಾಪಾರಕರುಣಂ ।
ಮುಹುರ್ಮಂದಂ ಮಂದಂ ವದ ಹರ ಹರಾಪಾರಕರುಣಾ
ರಸಾಸಾರಾಸಿಕ್ತಂ ಕುರು ಕುರು ಮುಹುಃ ಸತ್ವರಮಿತಿ ॥೮೩॥

ಮರಣಾವಸರೇ ನ ಕೋಽಪಿ ತಾವತ್ಪರಿಹರ್ತಾ ಮರಣಂ ಕ್ಷಣವ್ಯಥಾನಾಂ ।
ಇತಿ ಸಂತತಮಂತಕಾಂತಕಂ ಪರಮಂತಃಕರಣಾಶ್ರಯಾದರಾತ್ ॥೮೪॥

ಮರಣೇ ಹಿತಕೃನ್ನಕೋಽಪಿ ತೇ ಕೃತಪುಣ್ಯಸ್ಯ ಹರಾರ್ಚನಂ ಪರಂ ।
ಹಿತಕಾರಕಮಿತ್ಯತಃ ಪರಂ ಹರಮೇವಾನುಸರಾದರಾದ್ವರಂ ॥೮೫॥

ಕುಮಾರೈರುದಾರೈರ್ನ ದಾರೈಶ್ಚ ಕೃತ್ಯಂ
ಮಮ ಪ್ರಾಣನಿರ್ಯಾಣಕಾಲೇಽನುವೇಲಂ ।
ಮಹಾಕಾಲಕಾಲ ಸ್ಮರಾರೇ ಹರೇತಿ
ಸ್ಮರಾಪಾರಗರ್ವಾಪಹಾರಂ ವದಾಶು ॥೮೬॥

ಎಲೈ ಚಿತ್ತವೇ, ನೀನು ಬಾರಿಬಾರಿಗೂ ನಿಜವಾದ ನನ್ನ ಮಾತನ್ನು ಕೇಳು. ಪ್ರಾಣಹೋಗುವಕಾಲದಲ್ಲಿ ದಯಾಮಯನೂ ಉದಾರನೂ ಆದ ಹರನನ್ನು ಸ್ಮರಣೆ ಮಾಡು. ಮತ್ತು ಪುನಃಪುನಃ ಕರುಣಾರಸಪೂರ್ಣನಾದ ಶಿವನನ್ನು ಭಜಿಸು. ॥೮೩॥

ಮನಸ್ಸೇ! ಸಾವು ಸಮೀಪಿಸಿ ಬಂದಕಾಲದಲ್ಲಿ ಅದನ್ನು ಹೋಗಲಾಡಿಸತಕ್ಕವನು ಜಗತ್ತಿನಲ್ಲಿ ಯಾವನೂ ಇಲ್ಲ. ಕ್ಷಣಿಕವಾದ ವ್ಯಥೆಗಳಿಂದ ಬಿಡಿಸಲು ಯಾರಿಗೂ ಸಾಧ್ಯವಿಲ್ಲ. ಆದುದರಿಂದ ಯಾವಾಗಲೂ ಅಂತಕಾಂತಕನೂ ದಯಾಳುವೂ ಶ್ರೇಷ್ಠನೂ ಆದ ಶಿವನನ್ನು ಆದರದಿಂದ ಆಶ್ರಯಿಸು. ॥೮೪॥

ಎಲೈ ಮನವೇ, ಮರಣಕಾಲದಲ್ಲಿ ನಿನಗೆ ಒಳ್ಳೆಯದನ್ನು ಮಾಡತಕ್ಕವನು ಒಬ್ಬನೂ ಇಲ್ಲ. ಪುಣ್ಯಕರ್ಮಗಳನ್ನು ಮಾಡಿದವನಿಗೆ ಮಾತ್ರ ಶಿವಭಜನೆಯು ಮುಕ್ತಿದಾಯಕವಾಗುವುದು. ಇದಕ್ಕಿಂತಲೂ ಹಿತವನ್ನು ಮಾಡತಕ್ಕದ್ದು ಬೇರೆ ಇಲ್ಲ. ಆದುದರಿಂದ ಶಿವನನ್ನು ಯಾವಾಗಲೂ ಪ್ರೀತಿಯಿಂದ ಅನುಸರಿಸು. ॥೮೫॥

ಪ್ರಾಣ ಪ್ರಯಾಣದ ವೇಳೆಯಲ್ಲಿ ಶ್ರೇಷ್ಠರಾದ ಹೆಂಡಿರು ಮಕ್ಕಳು ಇವರಿಂದ ಏನೂ ಪ್ರಯೋಜನವಾಗಲಾರದು. ಆದಕ್ಕಾಗಿ ಯಾವಾಗಲೂ ಮಹಾಕಾಲ!

ದಯಾಸಾಗರಾಪಾರಪಾಪಾಪಹಾರ
ಸ್ಮರಾರೇ ಮದೀಯಾಃಪರಾಧಾನ್ ಕ್ಷಮಸ್ವ ।
ತಯಾ ಚ ತದ್ದುರ್ದಶಯಾವಿಮುಕ್ತಂ
ಕುರು ತ್ವರಾ ತಾವದಹೋ ವಿಧೇಯಾ ॥೮೭॥

ಪ್ರಯಚ್ಛಾಚ್ಛ ಮೋಕ್ಷಂ ಮಹೋಕ್ಷಧ್ವಜಾಶು
ಪ್ರಪಶ್ಯ ಪ್ರಪಶ್ಯೇತಿ ಶಂಭುಂ ವದಾಶು ।
ಅಹೋ ಹೇತುಮೇತೇ ಪ್ರವೃತ್ತಾಃ ಪ್ರಮತ್ತಾಃ
ಕೃತಾಂತಸ್ಯ ದೂತಾಃ ಕೃತಾಂತೋಽಪಿ ಯಾತಿ ॥೮೮॥

ಸಮಾನೇತುಮೇವೋದ್ಧತೋ ನಂದಿಕೇಶೋ
ಪ್ರಪಶ್ಯೇತಿ ಪಾಹೀತಿ ತಾವದ್ವದಾಶು ।
ನ ಕೋಽಪ್ಯಸ್ತಿ ಪಾತಾ ತ್ವದನ್ಯೋ ನ ದಾತಾ
ಮಮಾತ್ರಾಪವರ್ಗಸ್ಯ ಸ್ವರ್ಗಾದಿಹೇತೋಃ ॥೮೯॥

ಕಾಲ ! ಹರ ! ಮನ್ಮಥ ನಾಶಕ, ಎಂದು ಮುಂತಾಗಿ ಶಿವಧ್ಯಾನವನ್ನು ಜಾಗ್ರತೆ ಮಾಡುತ್ತಿರು. ॥೮೬॥

ದೇವ ! ದಯಾಸಮುದ್ರ ! ಸಕಲ ಪಾಪಗಳನ್ನೂ ನಾಶಮಾಡತಕ್ಕ ನೀನು ನನ್ನ ಅಪರಾಧಗಳನ್ನು ಮನ್ನಿಸು. ಜಾಗ್ರತೆಯಲ್ಲಿ ನೀನು ಕಷ್ಟಾವಸ್ಥೆಯಿಂದ ನನ್ನನ್ನು ಬಿಡಿಸು. ತ್ವರೆಮಾಡು ದೇವ ! ॥೮೭॥

ದೇವ ! ಸ್ಥಿರವಾದ ಮೋಕ್ಷವನ್ನು ನನಗೆ ನೀಡು. ವೃಷಭಧ್ವಜನೇ ! ನನ್ನನ್ನು ನೋಡಬಾರದೇ ? ಎಂದು ನೀನು ಜಾಗ್ರತೆ ಅರಿಕೆ ಮಾಡಿಕೋ. ಏಕೆಂದರೆ ಪಾಪಮಾಡಿದವರನ್ನು ಶಿಕ್ಷಿಸಲು ಈ ಮದಿಸಿರತಕ್ಕ ಯಮನೂ, ಆತನ ದೂತರೂ ಸಿದ್ಧರಾಗುತ್ತಾರೆ. ಆಹಾ ! ಇದೆಂತಹ ! ಆಶ್ಚರ್ಯ. ॥೮೮॥

ಮದಿಸಿರುವವರನ್ನು ನಾಶಮಾಡತಕ್ಕವನೇ ! ನಂದಿವಾಹನನೇ ! ನನ್ನನ್ನು ನೋಡು. ದೀನಳಾದ ನನ್ನನ್ನು ಕಾಪಾಡು. ಎಂದು ಬೇಗ ಹೇಳು. ನನ್ನ ಮುಕ್ತಿಗೆ ಅಥವಾ ಸ್ವರ್ಗ ಪ್ರಾಪ್ತಿಗೆ ಕಾರಣನು ನಿನ್ನನ್ನು ಬಿಟ್ಟರೆ ಬೇರೊಬ್ಬನು ಸಿಗಲಾರನು. ನೀನೇ ರಕ್ಷಕನೂ, ದಾನಿಯೂ, ಆಗಿರುತ್ತೀಯೆ. ॥೮೯॥

ದಯಾವೇಕ್ಷಣೇನಾಶು ಪಶ್ಯ ಪ್ರಪಶ್ಯಾ
ದ್ಯಮಾಂ ಮೋಚಯಾದ್ಯಾಂತಕ ತ್ವಂ ।
ಮಹಾಕಾಲದೂತಪ್ರಚಂಡಾಟ್ಟಹಾಸ್ಯೈಃ
ಪರಂ ನಾಸವೋ ಯಾಂತಿ ಕಿಂ ತಾತಮತ್ತಃ ॥೯೦॥

ಅತಸ್ತೇನ ದೂರೇತರಾ ಯಾಂತಿ ಶಾಂತಾಃ
ತ್ವಯ್ಯಾಽನುಗ್ರಹೇ ತಾವದುಗ್ರಂ ಪ್ರಯಾಂತಿ ।
ಅಕಸ್ಮಾನ್ನಯಂತ್ಯೇವ ತೇ ತಾತ ಯಾವತ್
ನ ತಾವತ್ಪ್ರಪಶ್ಯಾದರಾದಿಂದುಮೌಳೇ ॥೯೧॥

ತ್ವದಾಲೋಕನೇನೈವ ತೇ ಯಾಂತಿ ದೂರಂ
ಮಮ ಪ್ರಾಣವಾಯುಪ್ರಯಾಣೇ ಪ್ರಸಕ್ತೇ ।
ಅಖರ್ವಗರ್ವಾಮಿತ ದರ್ಪಸರ್ಪ
ಮೂರ್ಖೇಷು ದೂತಾಃ ಖಲು ಪಾತಯಂತಿ ॥೯೨॥

ತಥಾ ಚ ತ್ವದ್ದರ್ಶನಯಾ ವಿಮುಕ್ತಂ
ಕುರು ತ್ವರಾ ತಾವದಹೋ ವಿಧೇಯಾ ।

ದೇವ! ಕೃಪಾದೃಷ್ಟಿಯಿಂದ ನನ್ನನ್ನು ನೋಡು. ಹಾಗೆಯೇ ನನ್ನನ್ನು ಬಂಧನದಿಂದ ಬಿಡಿಸು. ತಂದೆಯೇ, ನಿನ್ನ ಅನುಗ್ರಹವಿರುವುದರಿಂದ ಯಮ ದೂತರು ಭಯಂಕರವಾದ ಅಟ್ಟಹಾಸದಿಂದ ನನ್ನ ಪ್ರಾಣಗಳನ್ನು ಎಂದಿಗೂ ಒಯ್ಯಲಾರರು. ॥೯೦॥

ನಿನ್ನ ಅನುಗ್ರಹವಿದ್ದರೆ ಆ ಯಮದೂತರು ಶಾಂತಸ್ವಭಾವವುಳ್ಳವರಾಗಿ ಸಮೀಪಕ್ಕೆ ಬರುವರು. ಅವರು ಭಯಂಕರ ಸ್ವಭಾವದವರಾಗಿ ನಮ್ಮನ್ನು ಒಯ್ಯು ವುದರೊಳಗೆ ಚಂದ್ರಶೇಖರ! ನಮ್ಮನ್ನು ಒಂದು ಸಾರಿ ನೋಡು. ॥೯೧॥

ನನಗೆ ಸಾವು ಸಮೀಪಿಸಿದಾಗ ನೀನು ಅನುಗ್ರಹಿಸಿದರೆ ಆಗಲೇ ಆ ಯಮ ದೂತರು ದೂರ ಓಡಿ ಹೋಗುವರು. ಹೆಚ್ಚು ಗರ್ವದಿಂದ ಕೊಬ್ಬಿದ ಹಾವಿನಂತೆ ದುಷ್ಟರಾದ ಪಾಪಿಗಳಲ್ಲಿ ಆ ಯಮ ಭಟರು ಬೀಳುವರು. ॥೯೨॥

ದೇವ! ಜಾಗ್ರತೆ ನನಗೆ ದರ್ಶನವಿತ್ತು ನನ್ನನ್ನುದ್ಧರಿಸು. ಆದರಿಂದ ಆ

ತದುತ್ಪನ್ನದುಃಖಾಪಹಾರಸ್ತದಾ ಸ್ಯಾತ್
ಮಮೇಶಾನ ಪಾಹಿ ಪ್ರಪನ್ನಂ ಪ್ರಸನ್ನಃ ॥೯೩॥

ಪ್ರಪನ್ನಾರ್ತಿಸಂಸಾರಹೇತುಸ್ತ್ವಮೇಕಃ
ತ್ವದನ್ಯೋ ನ ಕೋಽಪ್ಯಸ್ತಿ ಲೋಕತ್ರಯೇಽಪಿ ॥೯೪॥

ಅಶ್ಮಾಮಾತುಚ್ಛಪುಚ್ಛವ್ಯತಿಕರವಿಲಸದ್ವೃಶ್ಚಿಕವ್ಯಾಪ್ತಮಾರ್ಗೇ
ತೇ ದೂತಾಃ ಪಾತಯಿತ್ವಾ ಪದಯುಗಲಮಹಾಪಾಶಬದ್ಧಾನ್ ನಯಂತಿ ।
ಭೋ ! ತಾವತ್ಪಾತಯಂತಿ ಪ್ರತಪನಧಮಿತಭ್ರಾಷ್ಟ್ರಮಧ್ಯೇ ಪ್ರಮಧ್ಯೇ
ವಧ್ಯಂ ಮತ್ವಾ ವಿದಿತ್ವಾ ಕ್ಷಣಮಪಿ ಕರುಣಾಂ ಪಾಹಿ ಶಂಭೋ ವಿಲೋಕ್ಯ
॥೯೫॥

ಕಾಲಸ್ತಿಷ್ಠತು ದೂರತೋ ಯಮಭಟಾಸ್ತಾವನ್ನದಂತ್ಯನ್ವಹಂ
ಯಾವನ್ನೀಯತ ಏವ ತಾವದಸಕೃತ್ ಸಂತಪ್ತಶೈಲಾಹತಾನ್ ।
ಕುರ್ವಂತ್ಯೇವ ತತೋ ವಿಲೋಕ್ಯ ದಯಯಾ ದೃಷ್ಟ್ವಾ ತಥಾ ಕೇವಲಂ
ತೇ ದೂತಾಃ ಪ್ರಪಲಾಯ್ಯ ಯಾಂತು ಕೃಪಯಾ ಶಂಭೋ ತವೈವಾಧುನಾ
॥೯೬॥

ಸಂಸಾರ ಕ್ಲೇಶವು ಪರಿಹಾರವಾದೀತು. ಮಹೇಶ್ವರ! ನೀನು ಪ್ರಸನ್ನನಾಗಿ ಶರಣು ಹೊಂದಿದ ನನ್ನನ್ನು ಪಾಲಿಸು. ||೯೩||

ಶರಣಾಗತರ ಬಾಧೆಯನ್ನು ನಾಶಮಾಡುವವನೂ, ಜಗತ್ತಿಗೆ ಕಾರಣನೂ ಆದವನು ಈ ಮೂರು ಲೋಕದಲ್ಲಿ ನೀನೊಬ್ಬನೇ ಆಗಿರುತ್ತಿಯೇ. ನಿನ್ನನ್ನು ಹೊರತು ಬೇರೆ ಯಾವನೂ ಇಲ್ಲ. ||೯೪||

ಶಂಕರನೇ! ಆ ಯಮದೂತರು ಪಾಪಿಗಳನ್ನು ಕಪ್ಪಾಗಿ ಮತ್ತು ಮೊನೆಯಾಗಿರುವ ಬಾಲಗಳುಳ್ಳ ಚೇಳು ತುಂಬಿದ ದಾರಿಯಲ್ಲಿ ಎಳೆದೊಯ್ಯುತ್ತಾರೆ. ಮತ್ತು ಅವರ ಕಾಲುಗಳೆರಡನ್ನೂ ಕಟ್ಟಿ ಎಳೆಯುವರು. ಹಾಗೆಯೇ ಎಳೆದೊಯ್ದು ಚನ್ನಾಗಿ ಕಾದ ಹಂಚಿನ ಮಧ್ಯೆ ಕೆಡಹುತ್ತಾರೆ. ಈತನು ವಧ್ಯನೆಂದು ತಿಳಿದು ಚಿತ್ರವಿಚಿತ್ರವಾಗಿ ಹಿಂಸಿಸುವರು. ಆದುದರಿಂದ ಕೃಪೆಯಿಂದ ಒಮ್ಮೆ ನೋಡಿ ಹಾಗೆಯೇ ನಮ್ಮನ್ನು ಸಲಹು. ಆ ಹಿಂಸೆಯು ನಮಗೆ ತಪ್ಪುವದು. ||೯೫||

ಆ ಯಮನು ದೂರದಲ್ಲಿಯೇ ಇರಲಿ. ಯಮದೂತರು ಬಂದು ಚನ್ನಾಗಿ ಕಾಯಿಸಿದ ಸಲಾಕಿಯಿಂದ ಅನೇಕ ಬಾರಿ ಹೊಡೆದು ಆರ್ಭಟಿಸುವುದರೊಳಗೆಯೇ

ಸಂತಪ್ತಾಮಿತಲೋಹಕಂಟಕಯುತೈರ್ಮಾರ್ಗೈರ್ನಯಂತ್ಯಾಶು ತೇ
ತೇಷಾಂ ತಾತ ನಿವಾರಕೋಪಿ ನರಕಾದುತ್ತಾರಕೋ ವಾಮಿತಃ
ತಂ ತಾವದ್ಯಮಶಾಸಕೋಪಿ ಕೃಪಯಾ ಪಶ್ಯೇತಿ ಚಾಕ್ರೋಶನೈಃ
ತಂ ಕಾಲಂ ಕಲಯಾನುವೇಲಮುದಯಂ ತಂ ಕಾಲಕಾಲಂ ವದ ॥೯೭॥

ವದ ವದ ವದ ಯೇ ತ್ವಾ ಪಾಹಿ ಪಾಹೀತಿ ಮತ್ವಾ
ಶಿವ ಶಿವ ಶಿವ ಏವಂ ಕಾಲದಂಡಂ ವಿದಿತ್ವಾ ।
ಭಯಮಪಿ ಬಹು ಹಿತ್ವಾ ಸಾವದತ್ವಾಶು ನತ್ವಾ
ಶಿವ ಶಿವ ಶಿವ ರಾಜನ್ ಚಿಂತಯಿತ್ವಾ ಮಹೇಶಂ ॥೯೮॥

ನ ಕೋಪಿ ಖಲು ರಕ್ಷಕಸ್ತ್ವಯಿ ಸತೀದೃಶೀ ದುರ್ದಶಾ
ಕಥಂ ಮಮ ಮಹಾಪ್ರಭೋ ಭವ ಭವಾಭಯಂ ದೇಹಿ ಮೇ ।
ಅನಾಗಸಮಿವಾದರಾದನುವಿಲೋಕಯಾದ್ಯಾಧುನಾ
ಕೃತಾಗಸಮಪಿ ಪ್ರಭುಃ ಪ್ರಣತಮಾಶು ದೃಷ್ಟ್ವಾವತಿ ॥೯೯॥

ನೀನು ನಮ್ಮನ್ನು ನೋಡಬಾರದೇ? ದೇವ! ನಿನ್ನ ಅವಲೋಕನದಿಂದ ಮತ್ತು ಕೃಪಾಬಲದಿಂದ ಆ ಯಮಭಟರು ಓಡುತ್ತಾ ಹೋಗಲಿ. ಅಂತಹ ನಿನ್ನ ಕೃಪೆ ನನಗಿರಲಿ. ॥೯೬॥

ಎಲೈ ಚಿತ್ತವೇ! ಆ ಯಮದೂರು ಚನ್ನಾಗಿ ಕಾಯಿಸಿದ ಸಲಾಕಿಗಳನ್ನು ಹರಡಿರುವ ದಾರಿಗಳಲ್ಲಿ ನನ್ನನ್ನು ಎಳೆದುಕೊಂಡು ಹೋಗುವರು. ಅಲ್ಲಿ ಅವರನ್ನು ತಡೆಯತಕ್ಕವನು ಬೇರೆ ಯಾವನೂ ಇಲ್ಲ. ಆದುದರಿಂದ ಆ ಯಮನನ್ನು ಶಿಕ್ಷಿಸ ತಕ್ಕ ಶಿವನೇ! ನಮ್ಮನ್ನು ನೋಡು ಎಂದು ಆಕ್ರೋಶನ ಮಾಡು. ಮತ್ತು ಯಾವಾಗಲೂ ಕಾಲಕಾಲನನ್ನು ಭಜಿಸುತ್ತಿರು. ॥೯೭॥

ಕಾಲದಂಡವು ತಪ್ಪದೆಂದು ತಿಳಿದು ಶಿವ ಶಿವ ಎಂದು ಭಜಿಸುತ್ತಾ ಯಾವಾಗಲೂ ಕಾಪಾಡೆಂದು ಪ್ರಾರ್ಥಿಸು. ಶಂಭುವನ್ನು ಧ್ಯಾನಮಾಡಿ ಶಿವ ಶಿವ ಎಂದು ಭಜಿಸಿ ನಮಸ್ಕರಿಸು. ಎಲೈ ರಾಜನೇ! ಭಯಪಡಬೇಡ. ಶಿವನನ್ನು ನಂಬು. ॥೯೮॥

ರಾಜನೇ! ನಿನಗೆ ಈ ತೆರನಾದ ದುರ್ಬುದ್ಧಿಯು ಪ್ರಾಪ್ತವಾಗಿರುವುದರಿಂದ ನಿನ್ನನ್ನು ರಕ್ಷಿಸುವವನು ಒಬ್ಬನೂ ಇಲ್ಲ. ಮಹೇಶನೇ! ನನಗೆ ಅಭಯವನ್ನು ನೀಡು. ನಾನು ತಪ್ಪುಮಾಡಿದವಳಾದರೂ ನನ್ನನ್ನು ನಿರಪರಾಧಿನಿಯಂತೆ ನೋಡು.

ಮನಃ ಸತತಮಂಬಿಕಾರಮಣಪಾದಪಂಕೇರುಹಂ
ಮಹಾರ್ಹಮತಿದುಃಸಹಾಮಿತಮಹಾಪದಾಂ ನಾಶಕಂ ।
ಭಜಾನಘ ಮುಹುರ್ಮುಹುರ್ಹರ ಮಹೇಶ್ವರೇತ್ಯಾದರಾತ್
ವದಾಮದ ಮದೇನ ಕಿಂ ಮದನದುರ್ದಶಾವರ್ಧಕಂ ॥೧೦೦॥

ಅಪಾರಕರುಣಾರಸಂ ಗಿರಿಕುಮಾರಿಕಾಲಿಂಗನಂ
ಪ್ರಕಲ್ಪಿತಮಹೋರಸಂ ಸ್ಮರವಿಹಾರಹಾರಾಲಸಂ ।
ಶಿವಾನುಸರಣಾರ್ಹಣಪ್ರವಣವೀಕ್ಷಣೇ ಲಾಲಸಂ
ಪ್ರಯಾತು ಮಮ ಮಾನಸಂ ವಿಧುಕಲಾವತಂಸಂ ಮುಹುಃ ॥೧೦೧॥

ಸದರ್ಪೇ ಸರ್ಪೇ ವಾ ಗುಣಮಣಿಗಣೇ ವಾ ವಿಶರಣೇ
ವ್ರಜೇ ವಾ ಭ್ರೂಣೇ ವಾ ಕುಮುದಸದನೇ ವಾ ಸಪವನೇ ।
ವನೇ ವಾ ಕ್ಷೀರೇ ವಾ ಗರಳಗರಳೇ ವಾತಿಸರಳೇ
ಕಥಂ ಚಿತ್ತಂ ಮತ್ತಂ ವದ ಮದನಸಂಹಾರಕ ವಿಭೋ ॥೧೦೨॥

ನಮಸ್ಕರಿಸುತ್ತಿರುವ ನನ್ನನ್ನು ಪರಶಿವನು ನಿಜವಾಗಿಯೂ ಉದ್ಧರಿಸುವನು. ॥೯೯॥

ಮನಸ್ಸೇ! ಅಂಬಿಕಾ ಪತಿಯ ಪಾದಕಮಲವನ್ನು ಆದರದಿಂದ ಭಜಿಸು. ಅದು ಮಹತ್ತರವಾದದ್ದು ಮತ್ತು ಆಪತ್ತನ್ನು ಹೋಗಲಾಡಿಸುವುದು. ಅಲ್ಲದೆ ದುಃಸಹವಾದ ಆಪನ್ನಿವಾರಕವೂ ಆಗಿದೆ. ಬಾರಿಬಾರಿಗೂ ನಾವು ಮಹೇಶ್ವರ ಎಂದು ಭಜಿಸೋಣ. ಮನ್ಮಥ ವಿಕಾರಕ್ಕೆ ಈಡಾದ ಕೇವಲ ಅಹಂಕಾರದಿಂದ ಪ್ರಯೋಜನ ವಿಲ್ಲ. ॥೧೦೦॥

ನನ್ನ ಬುದ್ಧಿಯು ಶಿವನನ್ನು ಅನುಸರಿಸಲಿ. ಆತನು ದಯಾರಸದಿಂದ ಕೂಡಿರುವ ಗೌರೀಪತಿಯು. ಅಲ್ಲದೇ ಮನ್ಮಥ ವಿಹಾರದಲ್ಲಿ ನಿಪುಣನು. ಅವನು ವೃಷಭಾರೂಢನೂ ಅಹುದು. ಚಂದ್ರಕಲೆಯನ್ನು ಧರಿಸಿದಾತನು ಅವನೇ. ಆದುದ ರಿಂದ ಆ ಶಿವನ ಸಂದರ್ಶನ, ಪೂಜೆ ಇವುಗಳಲ್ಲಿ ನನ್ನ ಮನಸ್ಸು ಸದಾ ಆಸೆಯನ್ನು ಹೊಂದಲಿ. ॥೧೦೧॥

ನನ್ನ ಈ ಮನವು ಗರ್ವದಿಂದ ಕೂಡಿದ ಹಾವನ್ನು ಆಶ್ರಯಿಸಲಿ. ಅಥವಾ ಒಳ್ಳೇ ಗುಣಗಳುಳ್ಳ ದೀನನನ್ನಾಗಲೀ ಬಯಸಲಿ. ಗೋಕುಲದಲ್ಲಿ ಓಡಾಡಲಿ.

ಅಮಿತ್ರೇ ಮಿತ್ರೇ ವಾ ಮದನಕದನೇ ವಾ ಕುಕದನೇ
ಕುವೃಕ್ಷೇ ದ್ರಾಕ್ಷೇ ವಾ ಕುದಲಕರತಾಲವಕದಲೇ ।
ಸುಪರ್ಣೇ ಪರ್ಣೇ ವಾ ವಿಷದಯುಸರೇ ವಾ ಕುವಸನಂ
ಕಥಂ ಚಿತ್ತಂ ಮತ್ತಂ ವದ ಮದನಸಂಹಾರಕ ವಿಭೋ ॥೧೦೩॥

ಅರಮ್ಯೇ ರಮ್ಯೇ ವಾ ಮುನಿವರಕುಲೇ ವಾ ನಿಜಕುಲೇಃ
ಪ್ಯಕಾಲೇ ಕಾಲೇ ವಾ ಮರಣಸಮಯೇ ವಾ ಸುಸಮಯೇ ।
ವಿಷೇ ವಾ ಪೀಯೂಷೇ ಪ್ರದರಕರದೇ ವಾಪಿ ಬದರೇ
ಕಥಂ ಚಿತ್ತಂ ಮತ್ತಂ ವದ ಮದನ ಸಂಹಾರಕ ವಿಭೋ ॥೧೦೪॥

ಗರ್ಭದಲ್ಲಿ ವಿಹರಿಸಲಿ ಒಳ್ಳೆ ಗಾಳಿತುಂಬಿದ ಕನ್ನೈದಿಲೆಯನ್ನು ಇಚ್ಛಿಸಲಿ. ಕಾಡು ಪ್ರದೇಶದಲ್ಲಿ ವಾಸವನ್ನಪೇಕ್ಷಿಸಲಿ. ಒಂದುವೇಳೆ ಹಾಲನ್ನಾಗಲಿ ವಿಷವನ್ನಾದರೂ ಪಾನಮಾಡಲಿ. ಆದರೆ ಹೇ ದೇವ! ಅತಿಸರಳ ಹೃದಯನಾದ ನಿನ್ನನ್ನು ಮಾತ್ರ ಮರೆಯದಿರಲಿ. ॥೧೦೨॥

ಹಗೆ ಅಥವಾ ಗೆಳೆಯನಲ್ಲಿರಲು ಈ ನನ್ನ ಚಿತ್ತವು ಪ್ರವರ್ತಿಸಲಿ. ರತಿಕ್ರೀಡೆಯಲ್ಲಾಗಲೀ, ಕೆಟ್ಟ ಜಗಳದಲ್ಲಿಯಾಗಲೀ, ಇದಕ್ಕೆ ರುಚಿ ಇರಬಹುದು. ಒಳ್ಳೆ ದ್ರಾಕ್ಷಿಯಲ್ಲಾಗಲಿ ಅಥವಾ ಕೆಟ್ಟ ಮರದಲ್ಲಿಯಾಗಲಿ ಇದಕ್ಕೆ ಅಭಿನಿವೇಶ ಹುಟ್ಟಬಹುದು. ಹುಳುಕು ಎಲೆಗಳಾದ ತಾಳೆಯ ಮರವನ್ನು ಆಶ್ರಯಿಸಲು ಈ ನನ್ನ ಮನಸ್ಸು ಹಿಂಜರಿಯಲಾರದು. ಅಥವಾ ಒಳ್ಳೆ ಎಲೆಗಳಿರುವ ವೃಕ್ಷವು ಇದಕ್ಕೆ ಇಷ್ಟವಾಗಬಹುದು. ಹೇ! ಮದನಾಂತಕ! ಮದಿಸಿದ ನನ್ನ ಮನಸ್ಸು ಏನನ್ನು ತಾನೇ ಮಾಡಲಾರದು? ಕೊಳಕು ಬಟ್ಟೆಯನ್ನಾದರೂ ಇದು ಧರಿಸಬಹುದು. ಏನೇ ಆದರೂ ನಿನ್ನನ್ನು ಮಾತ್ರ ಮರೆಯದಿರಲಿ. ॥೧೦೩॥

ಸೊಗಸಿಲ್ಲದ ಅಥವಾ ಮನೋಹರವಾದ ಸ್ಥಳವನ್ನು ಈ ಮನಸ್ಸು ಬಯಸಬಹುದು. ಮುನಿಶ್ರೇಷ್ಠರ ಪಂಗಡದಲ್ಲಿ ಅಥವಾ ತನ್ನ ವಂಶೀಯರೊಡನೆ ಕೂಡಿ ವಾಸಿಸಬೇಕೆಂದು ಇದಕ್ಕೆ ಆಸೆ ಆಗಬಹುದು. ಅಸಮಯದಲ್ಲಿಯಾಗಲೀ, ಸಕಾಲದಲ್ಲಿಯಾಗಲೀ ಇದಕ್ಕೆ ಇಚ್ಛೆ ಹುಟ್ಟಬಹುದು. ಅಥವಾ ಸುಖಕ್ಕಾಲ ದುಃಖಕಾಲಗಳು ಇದಕ್ಕೆ ಬೇಕಾಗಬಹುದು. ಈ ನನ್ನ ಹೃದಯವು ವಿಷ ಅಥವಾ ಅಮೃತ ಇವುಗಳಲ್ಲಿಯೋ ಕದರ ಫಲ (ಬದರೀಹಣ್ಣು) ಇವುಗಳಲ್ಲಿಯಾಗಲೀ ತನ್ನ ಬಯಕೆ

ಧರಾಧರಪ್ರವರಸುಂದರಮಂಬರಾಂತಂ
ನೃತ್ಯಂ ಮಯೂರಗಿರಿಕಂದರಕಂದಲಾನಿ
ವಿದ್ಯುಲ್ಲತಾದೃತದಿಗಂತಮಪಿ ಪ್ರಪಶ್ಯಂ
ಭೈವೋ ಯುವಾಪಿ ಪಥಿಕೋಽಪಿ ನ ಮೋಹಮೇತಿ ॥೧೦೫॥

ಚೇತಶ್ಚಿಂತಯ ಚಿಂತಯಾಂತಕಭಯಗ್ರಸ್ತಾಸ್ತು ನಾಮಾಸಕೃತ್
ಸ್ವಸ್ತಿ ಸ್ವಸ್ತಿಮತಿಸ್ತವಮುಹುರ್ವ್ಯಸ್ತೇಷು ವಸ್ತುಷ್ವಪಿ ।
ಕಾಲೋಽಸೌ ಯದಿ ಕಾಲಕಾಲಕಲನಾತ್ ತರ್ಹಿ ಸ್ವಕಾಲೇಽಪ್ಯಯಂ
ಕಾಲತ್ವಂ ನಿಜಹಾತಿ ಹಂತ ಸತತಂ ತಂ ಕಾಲಕಾಲಂ ಭಜ ॥೧೦೬॥

ಸ್ಮರಹರಂ ಹರಂ ತ್ರಿಪುರವೈರಿಣೋಽನುಕ್ಷಣಂ
ಪರಂ ಚರಣಪಂಕಜಂ ಜನಿಜರಾಮೃತಿವ್ಯತ್ಯಯಂ ।

ಯನ್ನು ಪೂರೈಸಿಕೊಳ್ಳಲಿ. ದೇವ! ಮದನಾಂತಕ! ಮದೋನ್ಮತ್ತವಾದ ಚಿತ್ತವು ಏನನ್ನು ತಾನೆ ಅಪೇಕ್ಷಿಸುವುದಿಲ್ಲ? ನೀನೇ ಹೇಳು. ॥೧೦೪॥

ಶ್ರೇಷ್ಠವಾದ ಮೋಡಗಳಿಂದ ಆಕಾಶವು ತುಂಬಿರುವುದು. ಮತ್ತು ಪರ್ವತದ ಗುಹೆಯ ಬಾಗಿಲುಗಳಲ್ಲಿ ನವಿಲುಗಳು ಕೇಕೇ ಹಾಕುತ್ತಾ ಕುಣಿದಾಡುವುವು. ಎಲ್ಲಾ ದಿಕ್ಕು ವಿದಿಕ್ಕುಗಳಲ್ಲೂ ಮಿಂಚಿನ ಬಳ್ಳಿಗಳು ಕಂಗೊಳಿಸುತ್ತಿವೆ. ಹಾಗೆ ಮನ್ಮಥ ವಿಕಾರಕ್ಕೆ ಕಾರಣವಾದ ಅನೇಕ ಸನ್ನಿವೇಶಗಳನ್ನು ಶೈವನು ಕಂಡರೂ, ಆತನು ತರುಣನಾಗಿದ್ದರೂ, ಮತ್ತು ವಿರಹಿಯಾಗಿದ್ದರೂ ಅವನಲ್ಲಿ ಮನೋವಿಕಾರವು ಉಂಟಾಗುವುದಿಲ್ಲ. ॥೧೦೫॥

ಎಲೈ ಮನಸ್ಸೇ! ನೀನು ಕಾಲಕಾಲನನ್ನು ಭಜಿಸು. ಯಮನ ಭಯವು ಒಂದು ಕಡೆ ಇರಲಿ. ಸಮವಾದ ಅಥವಾ ವಿಷಮವಾದ ಪರಿಸ್ಥಿತಿಯಲ್ಲಿ ಕೂಡ

ನಿನಗೆ ಮಂಗಳವೊದಗುವುದು. ಈ ಕಾಲನೆನಿಸಿದ ಯಮನು ಶ್ರೀಶಂಕರನ ಭಜನೆಯಿಂದಲೇ ಶಾಂತನಾಗಿ ಹೋಗುವನಾದರೆ ಬಹಳ ಸಂತೋಷ. ನಿಜವಾಗಿ ಆಗ ಯಮನು ಯಮನಂತಿರುವುದಿಲ್ಲ. ಮಹಾಕಾಲನಾದ ಈಶ್ವರನನ್ನು ಎಡಬಿಡದೇ ಭಜಿಸುತ್ತಿರು. ॥೧೦೬॥

ತ್ರಿಪುರರನ್ನು ನಾಶಮಾಡಿದ ಆ ಶಿವನ ಪಾದಾರವಿಂದವನ್ನು ಸ್ಮರಣೆಮಾಡು. ಆ ಪಾದವನ್ನು ಗೌರಿಯು ಕೋಮಲವಾದ ಕಮಲದಂತೆ ಕಾಂತಿಯುಳ್ಳ ತನ್ನ

ಕರೋತಿ ನ ಸಕೃತ್ ಸ್ಮೃತಂ ಕಿಮುತ ಏವ ಗೌರೀಕರ
ಪ್ರವಾಲಕಮಲಾಮಲಚ್ಛವಿಸಮರ್ಚಿತಂ ಸಾದರಂ ॥೧೦೭॥

ಕಿಮಸ್ಮಾಕಂ ಲೋಕೇ ಶರಣಮಗಜಾಭ್ಯರ್ಚಿತಪದಂ
ಮಹಾದೇವಂ ಹಿತ್ವಾ ಶರಣಮಮರಾಣಾಮಪಿ ಸದಾ ।
ತಮೇವಾಹುಸ್ತಾವತ್ ಶರಣಮಸುರಾಣಾಮಪಿ ನೃಣಾಂ
ತಥಾ ಗಂಧರ್ವಾಣಾಮಿತಿ ವಿದಿತಮೇವಾನವರತಂ ॥೧೦೮॥

ಅನನ್ಯಸ್ತೇ ಮಾರ್ಗೇ ಯಮಭಟಗಣಾಕೀರ್ಣತರುಣ
ಜ್ವರಜ್ವಾಲಾಕಾರಾಚಿರತರವರೋರಃಸರಯುತೇ ।
ಅಪಾರೇ ಸಂಚಾರಃ ಕಥಮಿತಿ ಕಥಂ ಚಿತ್ ಸ್ಮರಹರಂ
ಸ್ಮರಾಪಸ್ಮಾರಾಣಾಮನುಸರಣಮುತ್ಸೃಜ್ಯ ಚ ಮನಃ ॥೧೦೯॥

ಸಹಾಯೋ ನಾಸ್ಮಾಕಂ ಯಮಸದನಮಾರ್ಗೇತಿಕಠಿನೇ
ಮಹಾವ್ಯಾಧಿವ್ಯಾಧವ್ಯಥಿತಜನಜಾತವ್ಯತಿಕರೇ ।

ಹಸ್ತಗಳಿಂದ ಮುಟ್ಟಿ ಪೂಜಿಸುತ್ತಾಳೆ. ಅಂತಹ ಚರಣವನ್ನು ಒಂದುಬಾರಿಯಾದರೂ ಕೀರ್ತನಮಾಡಿದರೆ, ಅದು ನಮ್ಮ ಜನ್ಮ, ವಾರ್ಧಕ, ಸಾವು ಇವುಗಳನ್ನುಪರಿಹರಿಸದಿರದು. ||೧೦೭||

ಈ ಲೋಕದಲ್ಲಿ ಗೌರಿಯು ಪೂಜೆಗೈಯ್ದ ಶಿವನ ಚರಣವನ್ನು ಬಿಟ್ಟರೆ ಮತ್ತಾವುದು ನಮಗೆ ದಿಕ್ಕು? ದೇವತೆಗಳಿಗೂ ಕೂಡ ಶಿವನನ್ನು ಬಿಟ್ಟರೆ ಬೇರೆ ರಕ್ಷಕರಿಲ್ಲ. ರಾಕ್ಷಸರು, ಮನುಷ್ಯರು, ಗಂಧರ್ವರು ಇವರೆಲ್ಲರಿಗೂ ಕೂಡ ರಕ್ಷಕನೆಂದರೆ ಶಿವನೇ ಸರಿ ಎಂದು ಯಾವಾಗಲೂ ಎಲ್ಲರೂ ಹೇಳುತ್ತಾರೆ. ||೧೦೮||

ಎಲೈ ಚಿತ್ತವೇ! ನೀನು ಹೋಗತಕ್ಕ ದಾರಿಯು ಯಮಭಟರಿಂದ ಆವೃತವಾಗಿದೆ. ಅಲ್ಲಿ ಉರಿಯುತ್ತಿರುವ ಮರಗಳು ತುಂಬಾ ತುಂಬಿವೆ. ಅಂತಹ ದುರ್ಗಮವಾದ ಪ್ರದೇಶದಲ್ಲಿ ಹೇಗೆ ಸಂಚರಿಸಲಿ ಎಂದು ಯೋಚಿಸಬೇಡ. ನೀನು ಆ ಸ್ಮರಹರನಾದ ಶಿವನನ್ನು ಧ್ಯಾನಿಸು. ಅವೆಲ್ಲಾ ನಿನಗೆ ಸುಗಮವಾಗುವುವು. ಅದರಿಂದ ಅಪಸ್ಮಾರಾದಿ ಮೃತ್ಯುಗಳೂ ಸಹ ದೂರವಾಗುತ್ತವೆ. ||೧೦೯||

ಆ ಯಮನ ಮನೆಗೆ ಹೋಗುವ ದಾರಿಯು ಬಹು ಕಠೋರವಾದುದು. ಆ ದಾರಿಯುದ್ದಕ್ಕೂ ಅನೇಕ ದೊಡ್ಡ ದೊಡ್ಡ ರೋಗಗಳಿಂದ ನರಳುತ್ತಿರುವ ಜನರು

ಮಹಾಜ್ವಾಲಾಕೀರ್ಣೇ ಜಲಮಪಿ ನ ತತ್ರಾಸ್ತಿ ವಿಮಲಂ
ಕಿಮಸ್ಮಾಕಂ ತಸ್ಮಿನ್ ಭವತಿ ಭಗವನ್ ಫಾಲನಯನೇ ॥೧೧೦॥

ಉಮಾಸಹಾಯೋ ನ ಸಹಾಯಭೂತೋ
ಯಸ್ಯೈವ ತಸ್ಯಾಪಿ ಕುತಃ ಸುಖಂ ಸ್ಯಾತ್ ।
ಅತಃ ಸುಖಾಯಾಯಮುಮಾಸಹಾಯೋ
ಸಹಾಯಭೂತಃ ಪಥಿ ಚಿಂತನೀಯಃ ॥೧೧೧॥

ನ ಮಿತ್ರವಾರ್ತಾಪಿ ನ ಪುತ್ರವಾರ್ತಾ
ಕಲತ್ರವಾರ್ತಾಪಿ ನ ಯತ್ರ ತತ್ರ ।
ಗಂತವ್ಯಮೇವೇತಿ ಸಹಾಯಭೂತಂ
ಉಮಾಸಹಾಯಂ ಪರಿಕಲ್ಪಯಾಮಃ ॥೧೧೨॥

ಶ್ರುತಃ ಸ ಗೌರೀರಮಣೋಪಿ ಮಾರ್ಗೇ
ದುರ್ಗೇಽನುಯಾತೀತಿ ಮುಹುಃ ಸ್ಮರಾಮಿ ।
ಸ್ಮರಾರಿಮೇವ ತ್ರಿಪುರಾರಿನಾಮ
ಸ್ಮರಂತಿ ಸಂತಸ್ತುವನೇ ವಸಂತಃ ॥೧೧೩॥

ತಂಡ ತಂಡವಾಗಿ ಹೋಗುತ್ತಾರೆ. ಮೊದಲಿನ ಬಂಧುಗಳೇ ಮೊದಲಾದ ನಾವು ನಿನ್ನ ಸಹಾಯಕ್ಕಾಗಿ ಯಾರೂ ಸಿಗಲಾರೆವು. ದಾರಿಯು ಬೆಂಕಿಯ ಉರಿಯಿಂದ ಕೂಡಿರುತ್ತದೆ. ಕುಡಿಯೋಣವೆಂದರೆ ಸ್ವಲ್ಪ ನೀರೂ ಅಲ್ಲಿ ಸಿಕ್ಕುವುದಿಲ್ಲ. ಆದರೆ ಫಾಲನಯನನಾದ ಶಂಕರನ ಅನುಗ್ರಹ ಒಂದಿದ್ದರೆ ಅದೆಲ್ಲಾ ನಮಗೆ ಅನುಕೂಲ ಪ್ರದವಾಗುವುದು. ॥೧೧೦॥

ಉಮಾಪತಿಯಾದ ಶಿವನ ಸಹಾಯವಿಲ್ಲದವನಿಗೆ ಸುಖವು ಹೇಗೆ ತಾನೇ ಲಭಿಸುವುದು? ಆದುದರಿಂದ ಸುಖವನ್ನು ಹೊಂದುವುದಕ್ಕಾಗಿ ಉಮಾಸಹಾಯನಾದ ಶಂಕರನನ್ನು ಅಂತಹ ದಾರಿಯಲ್ಲಿ ಧ್ಯಾನಿಸಬೇಕು. ॥೧೧೧॥

ಮುಂದೆ ನಾವು ಸ್ನೇಹಿತ, ಹೆಂಡತಿ, ಮಕ್ಕಳು, ಇವರ ಸುಳಿವೇ ಇಲ್ಲದ ದುರ್ಗಮವಾದ ನರಕದ ದಾರಿಯಲ್ಲಿ ನಡೆಯತಕ್ಕದ್ದಿದೆ ಎಂದು ಯೋಚಿಸಿ ಅದನ್ನು ಸುಖವಾಗಿ ದಾಟಿಸಲು ಸಹಾಯಕನಾದ ಶಿವನನ್ನು ಭಜನೆ ಮಾಡೋಣ. ॥೧೧೨॥

ನಮ್ಮ ಕಷ್ಟಗಳನ್ನು ಅಥವಾ ಪ್ರಾರ್ಥನೆಯನ್ನು ಕೇಳಿದ ಶಿವನು ದುರ್ಗಮವಾದ ಆ ಯಮಮಾರ್ಗದಲ್ಲಿ ಸಹಾಯಕನಾಗುತ್ತಾನೆ ಎಂದು ತಿಳಿದು ನಾನು

ಅದ್ಯಾಪಿ ನಾಶಾಂ ವಿಜಹಾತಿ ದೇಹೇ
ಕಥಂ ಮಹಾಭೂತಲಯೇಽಪಿ ಕಾಲೇ ।
ನ ಕಾಲಕಾಲಸ್ಮರಣಪ್ರವೀಣಂ
ಕಿಮೇತದಂತಃಕರಣಂ ಕ್ಷಣಂ ವಾ ॥೧೧೪॥

ಯಃ ಕಾಲಕಾಲಂ ಕಲಯತ್ಯಕಾಲೇ
ಕಾಲೇಽಪಿ ವಾ ಕಾಲಭಯಂ ವಿಹಾಯ ।
ಸ ಕಾಲಕಾಲಂ ಸಮುಪೇತ್ಯ ಕಿಂ ಮೇ
ಕಾಲಃ ಕರಿಷ್ಯತ್ಯಪಿ ಸಾನುಭೂತಂ ॥೧೧೫॥

ಅಹೋ! ಮಾಯಾಜಾಲಂ ಪರಿಹರ ಮಹಾದೇವ ಶರಣಂ
ಪ್ರಪನ್ನೋಽಹಂ ಭಕ್ತ್ಯಾ ಹರಚರಣಪಂಕೇರುಹಮತಃ ।
ಕ್ವ ವಾಯಂ ವ್ಯಾಮೋಹಃ ಕ್ವ ಚ ಶಿವ ಪದಾಂಭೋಜಭಜನಂ
ಮಹಾಪತ್ಕಾಲೇ ವಾ ಕಥಮಪಿ ನ ದುಃಖಂ ಶಿವ ಮತೇ ॥೧೧೬॥

ಆತನನ್ನು ಸ್ಮರಿಸುತ್ತೇನೆ. ಕಾಡಿನಲ್ಲಿರುವ ಮುನಿಗಳೂ ಕೂಡ ಯಾವಾಗಲೂ ತ್ರಿಪುರನಾಶಕನಾದ ಪರಮೇಶ್ವರನನ್ನೇ ಭಜಿಸುತ್ತಾರೆ. ॥೧೧೩॥

ಈಗಲೂ ಕೂಡ ಈ ಶರೀರವು ಆಸೆಯನ್ನು ತೊರೆಯುವುದಿಲ್ಲ. ಮಹಾ ಪ್ರಳಯಕಾಲದಲ್ಲಿಯಾದರೂ ಇದಕ್ಕೆ ಆಸೆ ಹೋಗದು. ಈ ಮನಸ್ಸಾದರೋ ಒಂದು ಗಳಿಗೆಯಾದರೂ ಶಿವನಸ್ಮರಣೆಮಾಡಲು ಸಮರ್ಥವಾಗದಿದ್ದರೆ ಅದರಿಂದ ಯಾವ ಪ್ರಯೋಜನವೂ ದೊರೆಯುವುದಿಲ್ಲ. ॥೧೧೪॥

ಯಾವನು ಅವೇಳೆಯಲ್ಲಿಯಾಗಲೀ ಅಥವಾ ಸುಸಮಯದಲ್ಲಿಯೇ ಆಗಲೀ ಪರಶಿವನನ್ನು ಧ್ಯಾನಿಸುವನೋ, ಅವನಿಗೆ ಯಮನಿಂದ ಭಯವಿಲ್ಲ. ಅವನು ಕಾಲಕಾಲನಾದ ಶಂಕರನನ್ನು ಹೊಂದುವನು. ಆಗ ಯಮನೇನು ಮಾಡಿಯಾನು ? ॥೧೧೫॥

ಮಹೇಶ್ವರನೇ, ನಿನ್ನನ್ನು ನಾನು ಮರೆಹೊಕ್ಕಿರುವೆನು. ಮಾಯೆಯ ಬಲೆಯಿಂದ ನನ್ನನ್ನು ಬಿಡಿಸು. ಭಕ್ತಿಯಿಂದ ನಿನ್ನ ಪಾದಕಮಲವನ್ನು ಭಜಿಸುವೆನು. ಆಹಾ ! ಈ ಅಜ್ಞಾನಮಯವಾದ ಮೋಹವೆಲ್ಲಿ? ಪರಮಾತ್ಮನ ಕಮಲದಂತಿರುವ ಚರಣಗಳ ಭಜನೆಯೆಲ್ಲಿ? ಅತ್ಯಂತ ಕಷ್ಟತರವಾದ ಆಪತ್ಕಾಲದಲ್ಲಿಯಾ

ಪ್ರಿಯಚ್ಛಾಂತಿಸ್ವಚ್ಛಾಂ ಶಿವ ಶಿವಪದೇಚ್ಛಾಮುಸುಲಭಾ
ಮುತುಚ್ಛಾಮುಚ್ಛಾಯೇ ಜನಪದವಿಹೀನೇ ಸದಹನೇ ।
ನ ಗಂತುಂ ಶಕ್ತಿರ್ಮೇ ಯಮಸದನದಾವಧ್ವನಿವರೈಃ
ಕುಮಾರೈರ್ದಾರೈರ್ವಾ ನ ಕೃತಮಹಹಾ ಮೇಽನುಸರಣಂ ॥೧೧೭॥

ವೃಥಾ ಜಾತಮೇತತ್ಕಥಂ ವಾ ಮನೋ ಮೇ
ವನೇ ವಾ ವನೇ ವಾ ವನ್ಯೈರ್ವಾ ನಿತಾಂತಂ ।
ಉಮಾಕಾಂತಲಿಂಗಂ ನ ಸಿಕ್ತಂ ನ ದತ್ತಂ
ಪ್ರಸೂನಂ ಜಲಂ ವಾ ನವಂ ಬಿಲ್ವಪತ್ರಂ ॥೧೧೮॥

ತ್ರಪಾಮಾತ್ರಹೀನಂ ಮನಃ ಕಿಂ ಮಮೇದಂ
ಸ್ಮರಾರಾತಿಚಿಂತಾವಿಹೀನಂ ಕ್ಷಣಂ ವಾ
ಶರಣ್ಯಾಂತರಂ ನೇತಿ ನಿಶ್ಚಿತ್ಯ ಪಶ್ಚಾತ್
ಮಹಾಕಾಲದೂತಾದ್ಭುತಾಟ್ಟಾಟ್ಟಹಾಸಂ ॥೧೧೯॥

ದರೂ ನನ್ನ ದುಃಖಗಳನ್ನು ಆ ಶಿವಭಜನೆಯು ಹೋಗಲಾಡಿಸುವುದು. ಆಹಾ! ಆಶ್ಚರ್ಯ. ॥೧೧೬॥

ಶಿವನೇ, ನಿನ್ನ ಪಾದಭಜನೆಯಲ್ಲಿ ನನಗೆ ಇಚ್ಛೆಯನ್ನುಂಟುಮಾಡು. ಅದು ಸುಲಭಸಾಧ್ಯವಲ್ಲ. ಅದು ಪವಿತ್ರವಾಗಿಯೂ ಪುಣ್ಯಪ್ರದವಾಗಿಯೂ ಇರುವ ಕೆಲಸ. ನೆರಳಿನ ಸೋಂಕೂ ಇಲ್ಲದ ಮತ್ತು ನಿರ್ಜನಪ್ರದೇಶವಾದ, ಜ್ವಾಲಾಮಯ ವಾದ ಯಮಮಾರ್ಗದಲ್ಲಿ ಹೆಂಡತಿ, ಮಕ್ಕಳು, ಇವರಾರೂ ಸಹಾಯಕರಾಗುವುದಿಲ್ಲ. ಅಯ್ಯೋ, ನಾನು ಶಂಕರನನ್ನು ಸ್ಮರಿಸಲಿಲ್ಲವಲ್ಲಾ! ॥೧೧೭॥

ನನ್ನ ಈ ಜೀವನವು ವ್ಯರ್ಥವಾಯಿತು. ವನದಲ್ಲಿಯಾಗಲೀ ಜಲದಲ್ಲಿಯಾಗಲೀ ಉದ್ಯಾನವನದಲ್ಲಿಯಾಗಲೀ ಇರುವ ಶಿವಲಿಂಗಕ್ಕೆ ಅಭಿಷೇಕಮಾಡಲಿಲ್ಲ. ಅಥವಾ ಹೂವಿನಿಂದ ಪೂಜಿಸಲಿಲ್ಲ. ಹೊಸ ಬಿಲ್ವದಳವನ್ನಾದರೂ ಅರ್ಪಿಸಲಿಲ್ಲ. ಅಯ್ಯೋ, ಎಂತಹ ಮಾರ್ಗವನ್ನವಲಂಬಿಸಿದೆ? ॥೧೧೮॥

ಈ ಮನಸ್ಸಿಗೆ ಸ್ವಲ್ಪವೂ ನಾಚಿಕೆಯೇ ಇಲ್ಲ. ಶಂಕರನನ್ನು ಬಿಟ್ಟರೆ ನನಗೆ ಬೇರೆ ರಕ್ಷಕರಿಲ್ಲವೆಂದು ನಿಶ್ಚೈಸಿ ಒಂದು ಕ್ಷಣಕಾಲವಾದರೂ, ಆ ಯಮದೂತರ ಅಟ್ಟಹಾಸವನ್ನು ತುಳಿಯುವ ಸ್ಮರಹರನನ್ನು ಧ್ಯಾನಮಾಡಲಿಲ್ಲ. ॥೧೧೯॥

ಮನಃ ಪತತು ಪಾವಕೇ ಯದಿ ಪುನಃ ಪುನಃ ಸಂತತಂ
ಸ್ಮರತ್ಯಪಿ ನ ಭಕ್ತಿತಃ ಸ್ಮರಹರಾಂಘ್ರಿಪಂಕೇರುಹಂ ।
ಮಹಾಪದಿ ಕದಾಪಿ ವಾ ಸ್ಮೃತಮಮುಮಾಸಹಾಯಸ್ಫುರತ್
ಮನೋಹರಪದಾಂಬುಜಂ ರಹಸಿ ರಂಹಸಾ ಸಾದರಂ ॥೧೨೦॥

ಪರದಾರಮನೋಹರೋದರವ್ಯಭಿಚಾರಾದರಮೇವ ಕಾತರಂ ।
ಅನುವಾರಮತಃ ಪರಂ ಕಥಂ ಜ್ವಲನಾಯಾಪ್ಯವದಾನಮಿಾದೃಶಂ ॥೧೨೧॥

ಲೋಕೇ ನ ಕೋಪಿ ಕುತುಕೀ ಪರಲೋಕಶೋಕ
ನಿರ್ವಾಪಣಾಯ ಯತತೇ ಸತತಂ ಸದಾರಃ ।
ಭೂಭಾರ ಏವ ಸಧರಾಧರವದ್ವಿಹಾರೋ
ಹಾರೇಣ ಸಾಕಮಸಕೃತ್ಸಕೃದಿಂದುಮೌಳೇ ॥೧೨೨॥

ನ ಹಾರ್ಯೈರ್ದಾರ್ಯೈರ್ವಾ ರುಚಿಕರಕುಮಾರ್ಯೈರಪಿ ಧನ್ಯೈಃ
ಫಲಂ ಯಾಮ್ಯೇ ಮಾರ್ಗೇ ಶಿವಭಜನಮೇಕಂ ಶರಣದಂ

ಬಾರಿಬಾರಿಗೂ ಭಕ್ತಿಯಿಂದ ಪರಮೇಶ್ವರನ ಪಾದಗಳನ್ನು ಧ್ಯಾನಿಸಬೇಕು. ಅತಿ ಕಷ್ಟಕಾಲದಲ್ಲಿಯಾದರೂ ಪರಶಿವನ ಮನೋಹರವಾದ ಚರಣಕಮಲಗಳನ್ನು ಚಿಂತಿಸಬೇಕು. ಹಾಗಿಲ್ಲದ ಈ ಮನಸ್ಸು ಬೆಂಕಿಯಲ್ಲಾದರೂ ಬೀಳಲಿ. ॥೧೨೦॥

ಪ್ರತಿದಿನವೂ ಇನ್ನೊಬ್ಬರ ಭಾರ್ಯೆಯರನ್ನು ಅಭಿಲಷಿಸಿ, ವ್ಯಭಿಚಾರವನ್ನೇ ಈ ಕೆಟ್ಟ ಮನಸ್ಸು ಆದರಿಸುವುದಾದರೆ, ಅದು ನಿಶ್ಚಯವಾಗಿ ಅಗ್ನಿಪಾತಕ್ಕೆ ಯೋಗ್ಯವಾಗುತ್ತದೆ. ॥೧೨೧॥

ಚಂದ್ರಶೇಖರನೇ, ಈ ಲೋಕದಲ್ಲಿ, ಪರಲೋಕದಲ್ಲಿ, ಉಂಟಾಗುವ ದುಃಖವನ್ನು ಹೋಗಲಾಡಿಸಿಕೊಳ್ಳುವ ಕೌತುಕವು ಯಾವನಿಗೂ ಹುಟ್ಟುವುದಿಲ್ಲ. ಅಥವಾ ಆಸೆಯು ಹುಟ್ಟಿದರೆ ಅವನು ಭಾರ್ಯೆಯೊಂದಿಗೆ ಅದಕ್ಕಾಗಿ ಯಾವಾಗಲೂ ಪ್ರಯತ್ನ ಪಡುವುದಿಲ್ಲ. ಆದುದರಿಂದ ಮನುಷ್ಯನು ಪರ್ವತಗಳಂತೆ ಭೂಭಾರಕನಾಗಿ ಉಳಿಯುತ್ತಾನೆ. ಅನೇಕ ಸಾರಿ ಆ ಮನುಷ್ಯನು ಸ್ರಕ್‌ಚಂದನವನಿತೆಯರೊಂದಿಗೆ ವಿಷಯ ಭೋಗದಲ್ಲಿಯೇ ಕಾಲವನ್ನು ಹೇಗೋ ದೂಡುವನು. ॥೧೨೨॥

ದಿವ್ಯವಾದ ವಿಷಯಭೋಗಗಳು, ಮನಃಪ್ರಿಯರಾದ ಹೆಂಡಿರು, ಮುದ್ದು ಮಕ್ಕಳು, ಇವರಾರೂ ಯಮಮಾರ್ಗದಲ್ಲಿ ಸಾಗುವಾಗ ನಮ್ಮ ರಕ್ಷಣೆ ಮಾಡಲಾ

ಅತಃ ಕೃತ್ಯಂ ತಾವತ್ತವ ಭವತು ಚೇತಶ್ಚಿರಮಿದಂ
ಶಿವಧ್ಯಾನಂ ತೇನ ಸ್ಮರಹರ ಪದಾವಾಪ್ತಿರಘುನಾ ॥೧೨೩॥

ಅಸಕೃನ್ಮದುದೀರಿತಂ ತ್ವಯಾ ನ ಕೃತಂ ತೇನ ಕೃಪಾ ತ್ರಪಾಪಿ ವಾ ।
ತದಿದಂ ದುರದೃಷ್ಟಮೇವ ತೇ ನ ಚ ದೃಷ್ಟಂ ಗಿರಿಶಾಂಘ್ರಿಪಂಕಜಂ ॥೧೨೪॥

ರೇ ! ರೇ ! ಮನಶ್ಚಿರಮುಮಾರಮಣೇ ಸಹಾಯೇ
ನ ಕ್ವಾಪಿ ಭೀತಿರತ ಏವ ತಮೇವ ಭಕ್ತ್ಯಾ ।
ಭೂಯಃ ಸ್ಮರ ಸ್ಮರಹರಂ ರುಚಿರೇಂದುಖಂಡ
ರೇಖಾವತಂಸಮುಮಯಾ ಸಹ ಸೋಪಹಾಸಂ ॥೧೨೫॥

ಕೋ ವಾ ಕಾಲಃ ಕಾಲದೂತಾಶ್ಚ ಕೇ ವಾ
ತೈಃ ಕಿಂ ಕೃತ್ಯಂ ಕಾಲಕಾಲಾನುವೇಲಂ ।
ಧ್ಯಾತಃ ಸದ್ಯೋ ಘೋರಸಂಸಾರಬಂಧಾತ್
ಮುಕ್ತಿಂ ತಾವತ್ ಕರ್ತುಮೇವಾತಿಶಕ್ತಃ ॥೧೨೬॥

ರರು. ಆಗ ಶಿವನಾಮಕೀರ್ತನೆಯು ಮಾತ್ರ ನಮ್ಮನ್ನು ಸಲಹುವುದು. ಆದುದರಿಂದ ಎಲೆ ಮನಸ್ಸೇ, ಬಹುಕಾಲ ಶಿವಧ್ಯಾನಮಾಡುವುದೇ ನಿನ್ನ ಕೆಲಸ. ಅದರಿಂದ ಶಿವನ ಪಾದಾಂಬುಜಪ್ರಾಪ್ತಿಯಾಗುವುದು. ॥೧೨೩॥

ಮನಸ್ಸೇ, ನಾನು ಅನೇಕಬಾರಿ ನಿನಗೆ ಉಪದೇಶಮಾಡಿದರೂ ನೀನು ಕೇಳಲಿಲ್ಲ. ಮತ್ತು ಅದರಿಂದ ದಯೆಯಾಗಲಿ ನಾಚಿಕೆಯಾಗಲಿ ನಿನಗೆ ಹುಟ್ಟಲಿಲ್ಲ. ಆ ಶಿವನ ಪಾದಕಮಲದ ದರ್ಶನವನ್ನೂ ನೀನು ಮಾಡಲಿಲ್ಲ. ಇದೆಲ್ಲಾ ನಿನ್ನ ದುರದೃಷ್ಟವೇ ಸರಿ. ॥೧೨೪॥

ಎಲೈ ದುಷ್ಟಹೃದಯವೇ, ಉಮಾಸಹಾಯಕನಾದ ಶಿವನನ್ನು ನಂಬಿದರೆ ನಿನಗೆ ಯಾವ ವಿಧವಾದ ಭೀತಿಯೂ ಒದಗುವುದಿಲ್ಲ. ಆದುದರಿಂದ ನೀನು ಮನೋಹರವಾದ ಚಂದ್ರಕಲೆಯನ್ನು ಧರಿಸಿರುವವನೂ, ಪಾರ್ವತಿಯೊಡನೆ ಸರಸ ಸಲ್ಲಾಪವನ್ನು ಮಾಡುತ್ತಿರುವವನೂ ಆದ ಪರಶಿವನನ್ನು ಭಕ್ತಿಯಿಂದ ಭಜನೆ ಮಾಡು. ॥೧೨೫॥

ಯಮನಾಗಲಿ ಅಥವಾ ಆತನ ದೂತರಾಗಲಿ ಎಷ್ಟರವರು ? ಶ್ರೀಶಂಕರನ ಅನುಗ್ರಹವಾದ ನಂತರ ಅವರೇನು ಮಾಡಿಯಾರು ? ಶಿವನನ್ನು ಧ್ಯಾನಮಾಡಿದ

ಅತಃ ಪರಮುಮಾಪತಿಸ್ಮರಣಕಾರಣವ್ಯತ್ಯಯೋ
ಪರಂ ಪ್ರಳಯ ಏವ ನಃ ಪ್ರಳಯಕಾಲಕಾಲಾನಲಃ ।
ಅಸಹ್ಯತಮ ಏವ ಹಿ ವ್ಯಸನಮೇತದತ್ಯುತ್ಕಟಂ
ಕದಾಪಿ ವಿಕಟೋಪತಿಸ್ಮರಣಪುಣ್ಯಹೀನಾತ್ಮನಾಂ ॥೧೨೭॥

ರೇ ! ರೇ ! ವಿಚಾರಯ ವಿಚಾರಯ ಚಾರುಶೀಲಂ
ಪದ್ಮಸ್ಫುರತ್ಕರತಲಾಮಲಶೂಲಮೂಲಂ ।
ಶ್ರೀಶೂಲಪಾಣಿಚರಣಸ್ಮರಣಾನುಕೂಲಂ
ಶ್ರೀಕಾಲಕಾಲಮಮಲಂ ಕಲಯಾನುವೇಲಂ ॥೧೨೮॥

ಕಾಲಾಂತಕಂ ಕೋಽಪಿ ಕೃತಾಂತಭೀತಃ
ಪ್ರಯಾತಿ ಪುಣ್ಯೈಃ ಸಿತಭೂತಿಪೂತಃ ।
ಸ ಚಾನುಭೂತಃ ಸತತಂ ಪ್ರಭೂತಃ
ಕರೋತಿ ಪಾಪಪ್ರಳಯಂ ವಿಭೀತಃ ॥೧೨೯॥

ಮನುಷ್ಯನು ಭಯಂಕರವಾದ ಈ ಸಂಸಾರಬಂಧನದಿಂದ ಮುಕ್ತನಾಗುತ್ತಾನೆ. ಅನಂತರ ಆ ಯಮಾದಿಗಳು ಏನುಮಾಡಲೂ ಸಮರ್ಥರಾಗುವುದಿಲ್ಲ. ॥೧೨೬॥

ಆದುದರಿಂದ ಶ್ರೀ ಗೌರೀಪತಿಯ ಸ್ಮರಣೆಯನ್ನು ಬಿಡಬಾರದು. ಅದನ್ನು ಬಿಟ್ಟರೆ ನಮಗೆ ಖಂಡಿತವಾಗಿಯೂ ಪರಶಿವನು ಪ್ರಳಯಕಾಲ ಸ್ವರೂಪನೆನಿಸುವನು. ಆಗ ನಮಗೆ ಸಂಸಾರದ ತಾಪತ್ರಯವು ಅನಿವಾರ್ಯವೂ ಸಹಿಸಲಸಾಧ್ಯವೂಆಗುವುದು. ಉಮಾರಮಣನ ಧ್ಯಾನರಹಿತರಾದವರಿಗಂತೂ ಯಾವಾಗಲೂ ಮಂಗಳವು ಲಭಿಸಲಾರದು. ॥೧೨೭॥

ದುಷ್ಟವಾದ ಎಲೈ ಮನಸ್ಸೇ! ಚನ್ನಾಗಿ ವಿಚಾರಮಾಡು. ಇನ್ನೊಮ್ಮೆ ಯೋಚಿಸು. ಕಮಲದಂತಿರುವ ಹಸ್ತವುಳ್ಳವನೂ, ಶೂಲವನ್ನು ಧರಿಸಿರುವನೂ ಆದ ಶೂಲಪಾಣಿ ಶಿವನನ್ನು ಯಾವಾಗಲೂ ಭಜಿಸು. ಅವನು ನಿರ್ಮಲನೂ ಯಮನನ್ನು ಶಿಕ್ಷಿಸಲು ಸಮರ್ಥನೂ ಆಗಿರುವನು. ॥೧೨೮॥

ಯಮನಿಂದ ಹೆದರಿದ ಯಾವನಾದರೊಬ್ಬನು ವಿಭೂತಿಯನ್ನು ಧರಿಸಿ ಶಿವನನ್ನು ಭಜಿಸಿದರೆ, ಆಗ ಆತನು ನಿರ್ಭಯನಾಗಿ ಅನೇಕ ಪಾಪಗಳನ್ನು ಎದುರಿಸಿ ನಾಶಮಾಡುವನು. ॥೧೨೯॥

ಅಂತಕಾಂತಕಪದಾಭಿವಂದನೈಃ
ಮಂದಧೀರಪಿ ಸನಂದನಾದಿಭಿಃ ।
ವಂದನೀಯತಮ ಏವ ಜಾಯತೇ
ಜಾತು ಜನ್ಮ ವಿಜಯಾಯ ತೇ ಪುನಃ ॥೧೩೦॥

ಜಾರಃ ಪರಂ ಜಾರಜವೃತ್ತಜಾತೋ
ನ ಜಾತು ಜಾನಾತಿ ಜನೋ ವಿನಾಶಂ ।
ಯತೋ ನ ತಸ್ಯೇಂದುಕಲಾವತಂಸ
ಪಾದಾರವಿಂದೌ ನಮನಪ್ರವೃತ್ತಿಃ ॥೧೩೧॥

ಸದ್ವೃತ್ತಃ ಖಲು ಕೋಽಪಿ ಪುಣ್ಯವಿಭವೈರ್ಭಾವೋ ಭವತ್ಯುತ್ಸವೈಃ
ಉತ್ಸಾಹಾತ್ಮಕಮಂತಕಾಂತಕಮುಮಾಕಾಂತಾಂಘ್ರಿಪಂಕೇರುಹಂ।
ಧ್ಯಾತ್ವಾ ತಚ್ಚರಣಾಬ್ಜರೇಣುಗಣನಾಂ ಕುರ್ವನ್ ಪರಂ ಕ್ರೀಡತಿ
ಕ್ರೀಡೇಯಂ ಪರಮುಕ್ತಿರಿತ್ಯವಗತಾಂ ಸಂಸಾರಶಾಂತ್ಯಾ ಪುರಂ ॥೧೩೨॥

ಅಂತಕ ಶತ್ರುವಾದ ಶಿವನ ಚರಣಾರವಿಂದವನ್ನು ನಮಸ್ಕರಿದವನು ಕೇವಲ ದಡ್ಡನಾದರೂ, ಆತನಿಗೆ ಸನಕ, ಸನಂದನ, ಮೊದಲಾದ ಯೋಗಿಗಳು ನಮಸ್ಕರಿಸುವರು. ಆತನು ಜನನಮರಣದ ದುಃಖವನ್ನು ಗೆದ್ದು ಸ್ಥಿರಮುಕ್ತಿಯನ್ನು ಹೊಂದುವನು. ॥೧೩೦॥

ಜಾರನಾದವನಾದರೋ ವ್ಯಭಿಚಾರ ವೃತ್ತಿಯಿಂದ ಹುಟ್ಟಿದವನು. ಲೋಕದಲ್ಲಿ ಜನರು ತನ್ನ ನಾಶವನ್ನು ತಾವು ಮೊದಲು ತಿಳಿಯಲಾರರು. ಏಕೆಂದರೆ ಆ ಜನಕ್ಕೆ ಶ್ರೀ ಚಂದ್ರಶೇಖರನ ಪಾದಕಮಲಗಳಿಗೆ ವಂದಿಸುವುದರಲ್ಲಿ ಬುದ್ಧಿಯೇ ಬಾರದು. ॥೧೩೧॥

ಸತ್ಸ್ವಭಾವವುಳ್ಳ ಮನುಷ್ಯನು ಪುಣ್ಯವಿಶೇಷಗಳಿಂದ ಜನ್ಮವನ್ನು ಹೊಂದುವನು. ಅಂತಹವನು ಅಂತಕಾಂತಕನಾದ ಪಾರ್ವತೀವಲ್ಲಭನ ಪಾದಯುಗ್ಮವನ್ನು ಧ್ಯಾನಿಸುತ್ತಾನೆ. ಅಲ್ಲದೇ ಆ ಶಿವನ ಪಾದಧೂಳಿಯನ್ನು ಲೆಕ್ಕಮಾಡುತ್ತಾ ಕ್ರೀಡಿಸುತ್ತಾನೆ. ಆ ಕ್ರೀಡೆಯೇ ಪರಮ ಮುಕ್ತಿ ಎಂದು ತಿಳಿ. ಅದು ಸಂಸಾರ ಬಂಧವನ್ನು ನಾಶಮಾಡುತ್ತದೆ. ॥೧೩೨॥

ಕಂ ಸಂಸಾರದವಾಪಹಾರಚತುರೋ ವೀರೋಽಪಿ ವಿರೇಶ್ವರಾತ್
ಅನ್ಯೋ ಮಾನ್ಯತಮೋಽಪಿ ತೇನ ಸ ಭವೇತ್ ವೀರೇಶ್ವರಾರಾಧಕಃ ।
ಸಾಮಾನ್ಯಃ ಕಥಮಿಂದುಶೇಖರಪದಧ್ಯಾನಾಮೃತಾಸ್ವಾದನ
ಧ್ಯಾನೋತ್ಸೇಕನಮೋದಮಾನಹೃದಯೋ ದಾರೇಷಣಾನಿರ್ದಯಃ ॥೧೩೩॥

ಹರ ಹರ ಹರ ಕಾಲಕಾಲಚಿತ್ತಂ
ಧನಮದಮತ್ತಮಿದಂ ಭವತ್ಪದಾಜ್ಞಂ ।
ಅನವರತಮಹಾವ್ರತಾದಿದೂನಂ
ಚಿರತರಶಂಕರಲಿಂಗಸಂಗತಿಜ್ಞಂ ॥೧೩೪॥

ಪುರಾ ಪುರಾರಾತಿಕಥಾವಿಚಾರೈ
ರ್ವಯೋ ನ ನೀತಂ ನ ಚ ಭೂತಿಪೂತಂ ।
ಅತಃ ಪರಂ ವಾ ಭಜ ಸಾವಧಾನಂ
ಕಾಲಾಂತಕಂ ಭೂತಿವಿಭೂಷಣೇನ ॥೧೩೫॥

ಯಾವನು ಸಂಸಾರವೆಂಬ ಕಾಡುಗಿಚ್ಚನ್ನು ಪರಿಹರಿಸಲು ಸಮರ್ಥನಾಗುವನೋ, ಅವನು ವೀರೇಶನ ಪೂಜಕನಾಗಿಯೇ ಇರುವನು. ಸಾಮಾನ್ಯ ಮನುಷ್ಯನು ಚಂದ್ರಶೇಖರನನ್ನು ಧ್ಯಾನಿಸಿ, ಆತನ ಪಾದಾಮೃತವನ್ನು ಪಾನಮಾಡಿದರೂ ಆ ಧ್ಯಾನದಿಂದ ಮತ್ತನಾಗಿ, ಸಂಸಾರದಲ್ಲಿ ಅಭಿಮಾನತ್ಯಾಗಮಾಡಿ ನಿರ್ದಯನಾಗಿ ಕಾಣುವನು. ಆದರೆ ಅದು ಸುಲಭವಾಗಿ ಆಗಲಾರದು. ||೧೩೩||

ಎಲೈ ಹರನೇ, ಕಾಲಮಥನನೇ, ಈ ಚಿತ್ತವು ಸಂಪತ್ತಿನಿಂದ ಮದಿಸಿದೆ. ಮತ್ತು ನಿನ್ನ ಅಡಿದಾವರೆಗಳನ್ನು ಮರೆತಿದೆ. ಆದುದರಿಂದ ಈ ಚಿತ್ತವು ಯಾವಾಗಲೂ ನಿನ್ನ ಮಹಾವ್ರತಗಳನ್ನು ಆಚರಿಸಿ ಬಳಲುವಂತೆಯೂ ಮತ್ತು ಯಾವಾಗಲೂ ಶಿವಲಿಂಗಸ್ವರೂಪವನ್ನು ತಿಳಿಯುವಂತೆಯೂ ಅನುಗ್ರಹಿಸು. ||೧೩೪||

ಮನಸ್ಸೇ, ನಾನು ಹಿಂದೆ ತ್ರಿಪುರಮಥನನಾದ ಶಿವನ ವೃತ್ತಾಂತ, ಚರಿತ್ರೆ, ಇವುಗಳ ಪಠನ, ಶ್ರವಣಗಳಿಂದ ವಯಸ್ಸನ್ನು ಕಳೆಯಲಿಲ್ಲ. ಮತ್ತು ವಿಭೂತಿಯನ್ನು ಲೇಪಿಸಿಕೊಂಡು ಪವಿತ್ರನಾದ ಆತನನ್ನು ಭಜಿಸಲಿಲ್ಲ. ಆದುದರಿಂದ ಈಗಲಾದರೂ ಭಸ್ಮಭೂಷಿತನಾಗಿ ಕಾಲಶತ್ರುವಾದ ಮಹಾದೇವನನ್ನು ಭಜಿಸು. ||೧೩೫||

ಶರದ್ರಾಕಾಲೋಕನ್ಯತಿಕರಸುಧಾರಶ್ಮಿಸದೃಶಂ
ಪ್ರಕಾಶಂ ತಿಗ್ಮಾಂಶುಸ್ಫುರದುರುಸುಧಾರಶ್ಮಿಸದೃಶಂ
ಮಹೇಶಂ ವೀರೇಶಂ ಭಜ ಭಜ ಭಜಾಪಾರಕರುಣಾ ।
ರಸಾಸಾರಾಸಾರಪ್ರಸರಪರಿಸಂತರ್ಪಿತದೃಶಂ ॥೧೩೬॥

ಕಿಂ ತೇ ಸಂತತಮಂತಕಾಂತಕದಯಾಸಾರಪ್ರಸಾರೈರಯಂ
ಧನ್ಯತ್ವಂ ಸಮುಪೈತಿ ಪೂತವಿತತಸ್ವಾಂತೇ ಭವಂತಂ ಸ್ಮರನ್ ।
ಅಶ್ರಾಂತಾಮಿತಭೂತಿಭೀತಿರಹಿತೋ ನಿರ್ಧೂತಪಾಪಪ್ರಪಾ
ವ್ಯಾಪಾರೋಽಪಿ ಪರಾಪಕಾರರಹಿತೋ ಶಾಂತೋ ನಿತಾಂತಂ ಸದಾ ॥೧೩೭॥

ಸಂಸಾರೇ ನ ಸುಖಂ ಕೃತಾತಿಸುಕೃತಾಂಭೋಧಿಃ ಪ್ರವೃದ್ಧಃ ಪುನಃ
ನಾಶಂ ಯಾತಿ ಸುಖಾಂಬುರಾಶಿಜನನಾದ್ಯಾಗಾದಿಧರ್ಮಾರ್ಜಿತಃ ।
ತಸ್ಮಾತ್ತತ್ಪರಿಹೃತ್ಯ ಸಂತತಮುಮಾಕಾಂತಂ ಸ್ಮರಾತ್ಯಾದರಾತ್
ತೇನಾಂತೇ ತವ ನಾಂತಕಾದಪಿ ಭಯಂ ಸಂಸಾರರೋಗಾದಪಿ ॥೧೩೮॥

ಶರತ್ಕಾಲದ ಪೂರ್ಣಿಮೆಯ ಚಂದ್ರನ ಹಾಗೆ ಪ್ರಕಾಶಮಾನನಾಗಿ, ಸೂರ್ಯ ಚಂದ್ರರೆಂಬ ನೇತ್ರಗಳಿಂದ ಕಂಗೊಳಿಸುವ ಮಹೇಶ್ವರನನ್ನು ಸೇವಿಸಬೇಕು. ಆತನು ವೀರೇಶನೆಂದು ಹೇಳಿಸಿಕೊಳ್ಳುವನಲ್ಲದೆ ಅಪಾರಕರುಣೆಯಿಂದ ಭಕ್ತರನ್ನು ಅನುಗ್ರಹಿಸಿ ಸಂತೋಷಗೊಳಿಸುವನು. ಅಂತಹವನ್ನು ನೀನು ಭಜನೆಮಾಡು. ॥೧೩೬॥

ದೇವ, ಪರಿಶುದ್ಧವಾದ ಮನಸ್ಸಿನಿಂದ ನಾನು ನಿಮ್ಮನ್ನು ಸ್ಮರಣೆಮಾಡಿದರೆ, ಅಂತಕನಾಶಕನಾದ ನಿನ್ನ ಅಪಾರಕರುಣಾರಸದ ಪ್ರಸಾರದಿಂದ ಶುದ್ಧನಾಗುವೆನಲ್ಲದೇ ನನ್ನ ಜನ್ಮವು ಧನ್ಯವಾಗುವುದು. ಆದರಿಂದ ಯಾವಾಗಲೂ ಕಡಿಮೆಯಾಗದ ಐಶ್ವರ್ಯವು ನನಗೆ ಲಭಿಸುವುದು. ಮತ್ತು ಭೀತಿರಹಿತನಾಗಿ ಎಲ್ಲಾ ವಿಧವಾದ ಪಾಪಗಳಿಂದಲೂ ಬಿಡುಗಡೆಹೊಂದುವೆನು. ನನ್ನಿಂದ ಇನ್ನೊಬ್ಬರಿಗೆ ಉಪಕಾರ ಮಾಡಲು ಸಾಧ್ಯವಾಗದಿದ್ದರೂ, ಅಪಕಾರವನ್ನು ನಾನು ಬಯಸಲಾರೆನು. ಅದರಿಂದ ಯಾವಾಗಲೂ ಶಾಂತಮನಸ್ಕನಾಗಿ ಆನಂದವನ್ನನುಭವಿಸುವೆನು. ॥೧೩೭॥

ಈ ಸಂಸಾರದಲ್ಲಿ ಸುಖವಿಲ್ಲ. ಮಾನವನು ಮಾಡಿದ ಪುಣ್ಯಕರ್ಮಗಳ ಪರಿಪಾಕದಿಂದ ವೃದ್ಧಿಹೊಂದುತ್ತಾನೆ. ಅನಂತರ ಆ ಪುಣ್ಯವು ನಾಶವಾದ ಮೇಲೆ ಆ ಸುಖವೂ ನಷ್ಟವಾಗುವುದು. ಬಳಿಕ ಜನ್ಮವು ಲಭಿಸುತ್ತದೆ. ಆಮೇಲೆ ಯಾಗಾದಿಕರ್ಮಗಳಲ್ಲಿ

ಉಮಾಕಾಂತಧ್ಯಾನೈರ್ನ ಗತಮಿದಮಾಯುಃ ಪ್ರಿಯತಮ
ಪ್ರಯಾಸೋ ಯೋ ವೃತ್ತಃ ಸುರತನಿಗಮೋಪಾಯನಿಯತಃ ।
ಸ ಏವ ವ್ಯತ್ಯಸ್ತಃ ಪುನರಪಿ ಸಮಾರಾಜಿರಶರ
ಪ್ರಸಾರವ್ಯಾಪಾರಪ್ರಕರಕರವೀರಪ್ರಕರತಃ ॥೧೩೯॥

ಅಹೋ ದುಷ್ಟಃ ಕಷ್ಟಂ ಪತತಿ ಪತತೋ ಮೋಹಬಡಿಶೈಃ
ವಿಷಾಕಾರಾಪಾರವ್ಯಸನವಿಷಯೋಪಾಯನಿಯತೈಃ ।
ಅತಿಭ್ರಾಂತಃ ಸ್ವಾಂತೇ ತುಹಿನಕರಕಾಂತೇಽತಿನಿರತೇ
ಪ್ಯುಮಾಕಾಂತಂ ಶಾಂತೋ ನ ಭಜತಿ ಭುಜಂಗಾಂಗದಮಹೋ ॥೧೪೦॥

ವಿದ್ಯಾಂಭೋಧಿಸಮುರ್ಜನೇನ ಭುವನೇ ಸಭ್ಯತ್ವಲಾಭೇನ ವಾ
ರಾಜ್ಯಸ್ಯಾಪಿ ಸಮುರ್ಜನೈರ್ನವನಿಧಿಂ ಪ್ರಾಪ್ಯಾಪಿ ಕಲ್ಪಾಯುಷಾ ।

ಆಸಕ್ತನಾಗುತ್ತಾನೆ ಮನಸ್ಸೇ, ಆದುದರಿಂದ ದುಃಖ ಸಂಪಾದಕವಾದ ಸಂಸಾರವನ್ನು ಬಿಟ್ಟು ನೀನು ಚಂದ್ರಶೇಖರನನ್ನು ಭಕ್ತಿಯಿಂದ ಭಜಿಸು. ಅದರಿಂದ ಕೊನೆಗೆ ಸುಖವುಂಟಾಗುವುದಲ್ಲದೆ ಸಂಸಾರ ಕಷ್ಟವು ಎಂದಿಗೂ ಆಗಲಾರದು. ||೧೩೮||

ನಾನು ಶ್ರೀ ಸದಾಶಿವನ ಭಜನೆಯನ್ನು ಮಾಡುತ್ತಾ ಆಯುಸ್ಸನ್ನು ಕಳೆಯಲಿಲ್ಲ. ಅಲ್ಲದೆ ವಿವಿಧ ಸುರತಶಾಸ್ತ್ರದ ನಿಯಮಗಳನ್ನು ಪಾಲಿಸುತ್ತಾ ಪ್ರಿಯತಮನ ವ್ಯವಹಾರವನ್ನು ಬೆಳೆಸುತ್ತಾ ಕಾಲಕಳೆದನು. ಅಂತಹ ಈನನ್ನ ಮನೋಭಾವವು ಪುನಃ ಮನ್ಮಥ ವ್ಯಾಪಾರಕ್ಕೆ ಬೀಳದೆ ಅಲ್ಲಿಂದ ಮುಕ್ತವಾಗಿ ಶ್ರೀ ಸಾಂಬಮೂರ್ತಿಯ ಸ್ಮರಣೆಯಲ್ಲಿ ಪುನಃ ನಿರತವಾಗಲಿ. ||೧೩೯||

ವಿಷದ್ರವ್ಯವನ್ನು ಸೇವಿಸಿ ಹೊಂದಿದ ದುಃಖದಂತೆ ಬಹು ಕ್ಲೇಶಕರಗಳಾದ ವಿಷಯ ಭೋಗವೆಂಬ ಬಲೆಯಲ್ಲಿ ಸಿಕ್ಕಿ ಈ ಸಂಸಾರಿಯೆಂಬವನು ಅವುಗಳಲ್ಲಿ ಬೀಳುವನು. ಬಳಿಕ ಅಪಾರ ಕಷ್ಟವನ್ನು ಅನುಭವಿಸುತ್ತಾನೆ. ಆಹಾ! ಮನುಷ್ಯನು ಮೋಹದಿಂದ ಭ್ರಾಂತನಾಗಿ ಚಂದ್ರಶೇಖರನಾದ ಮತ್ತು ನಾಗಭೂಷಣನೆನಿಸಿದ ಶಂಕರನನ್ನು ಭಜಿಸುವುದಿಲ್ಲ. ಆದುದರಿಂದಲೇ ಅವನು ದುಃಖವನ್ನು ಹೊಂದುವನು. ಅಯ್ಯೋ, ಇದು ತುಂಬಾ ಆಶ್ಚರ್ಯ. ||೧೪೦||

ಮನುಷ್ಯನು ಅಪಾರವಿದ್ಯೆಯನ್ನು ಸಂಪಾದಿಸಲಿ, ಅಥವಾ ಲೋಕದಲ್ಲಿ ಸಭ್ಯನೆಂದು ಕರೆಯಿಸಿಕೊಳ್ಳಲಿ. ಇಲ್ಲವೇ ರಾಜ್ಯಭಾರವನ್ನು ಹೊಂದಿ, ನವನಿಧಿ

ವೀರೋದಾರಕುಮಾರದಾರನಿಕರೈಃ ಕಿಂ ಸಾದರೈರಪ್ಯುಮಾ
ಕಾಂತಾರಾಧನಸಾಧನಂ ಯದಿ ಮನೋ ನ ಸ್ಯಾತ್ತದಾ ತದ್ವೃಥಾ ॥೧೪೧॥

ನತ್ವಾ ಕಾಲವಿಲಾಸಸಾಧನಧನಾಪಾಯುನ್ಯಯಂ ವಾಽಽಯುಷೋ
ಭಾಗ್ಯಸ್ಯಾಪಿ ಲಯಂ ಮುಹುರ್ಮುಹುರುಮಾಕಾಂತಂ ಭಜತ್ಯಂತತಃ ।
ಸಂತಂ ಸ್ವಾಂತಮನಂತಮಾನಸಮಿತಿ ಜ್ಞಾತ್ವಾ ಪುನಸ್ತನ್ಮುಹುಃ
ದತ್ವಾ ಜ್ಞಾನಜಲಾಂಬುಜೈರನುದಿನಂ ತಂ ಪೂಜಯಂತ್ಯಾದರಾತ್ ॥೧೪೨॥

ಧ್ಯಾತ್ವಾ ಸ್ವಾಂತನಿವಿಷ್ಟಮಂತಕರಿಪುಂ ತದ್ಧ್ಯಾನಧಾರಾಮೃತಂ
ಪೀತ್ವಾ ಪೀನಮನೋವಿಲಾಸಪಿಶುನೈರಾನಂದಬಾಷ್ಪೈರ್ಭೃಶಂ ।
ಸಿಕ್ತಾಃ ಕೇವಲಮಂತಕಾಂತಕ ಮಹಾದೇವೇತಿ ನಾಮಾಮೃತೈ
ರಾನಂದಾಮೃತರಾಶಿಪೂರಣಕರಾಸ್ತಿಷ್ಠಂತು ಹಾರಾಶ್ಚಿರಂ ॥೧೪೩॥

ಗಳನ್ನು ಸಂಪಾದಿಸಲಿ. ಕಲ್ಪಾಂತ್ಯದವರೆಗೂ ವೀರರೂ, ಕೀರ್ತಿಶಾಲಿಗಳೂ ಆದ ಪುತ್ರಕಳತ್ರರಿಂದ ಕೂಡಿ ಸುಖದಿಂದ ಬದುಕಲಿ. ಆದರೆ ಶ್ರೀಶಂಕರನನ್ನು ಪೂಜಿಸುವ ಮನಸ್ಸಿಲ್ಲದಿದ್ದರೆ (ಶಿವನಲ್ಲಿ ಭಕ್ತಿಯಿಲ್ಲದಿದ್ದರೆ) ಇವೆಲ್ಲಾ ನಿಷ್ಪ್ರಯೋಜನಗಳು. ||೧೪೧||

ಸಜ್ಜನರು ತಮ್ಮ ಜೀವಿತಕಾಲದ ಸುಖಸಾಧನೆಗಳೂ, ಧನಾದಿಗಳೂ, ಆಯುಸ್ಸು ಕೂಡ ನಶ್ವರವೆಂದು ಬಾರಿ ಬಾರಿಗೂ ಭಾವಿಸಿ, ಅವುಗಳಿಂದ ಮುಕ್ತಿ ಹೊಂದುವುದಕ್ಕಾಗಿ ಉಮಾಮಹೇಶ್ವರನನ್ನು ನಮಸ್ಕರಿಸುವರು. ತಮ್ಮ ಮನಸ್ಸಿನಲ್ಲಿ ಆ ಶಿವನ ಸ್ವರೂಪವನ್ನು ಕಲ್ಪಿಸಿಕೊಂಡು ಸುಜ್ಞಾನವೆಂಬ ತಾವರೆಹೂಗಳಿಂದ ಪುನಃ ಪುನಃ ಆತನನ್ನು ಪೂಜಿಸುವರು. ಮಾನಸಿಕಧ್ಯಾನದಿಂದ ಶಿವಸಾಕ್ಷಾತ್ಕಾರ ವನ್ನು ಬಯಸುವರು. ||೧೪೨||

ತಮ್ಮ ಹೃದಯಾಧಿಷ್ಠಿತನಾದ ಮಹಾದೇವನನ್ನು ಚಿಂತಿಸುವ ಈಶ್ವರನ ಭಕ್ತರು ಬಹುಕಾಲ ಜೀವಿಸಲಿ. ಅವರು ಶಿವನನ್ನು ಧ್ಯಾನಮಾಡುತ್ತ, ಆ ಧ್ಯಾನಾ ಮೃತಪಾನದಿಂದ ತೃಪ್ತರಾಗುತ್ತಾರೆ. ಅನಂತರ ಸಂತೋಷಚಿತ್ತರಾಗಿ, ಉಕ್ಕಿಬರುವ ಆನಂದ ಬಾಷ್ಪಗಳಿಂದ ತಮ್ಮ ದೇಹವನ್ನು ನೆನೆಸುವರು. ಉಮಾಕಾಂತ, ಮಹಾದೇವ ಎಂದು ಶಿವನಾಮಕೀರ್ತನಮಾಡುತ್ತಾ ಸಂತೋಷವುಳ್ಳವರಾಗುವರು. ಹಾಗೆ ಅವರು ಬಹುಕಾಲ ಬದುಕಲಿ. ||೧೪೩||

ಅಸ್ಮಾಭಿಸ್ಸಕೃದಿಂದುಮೌಳಿಚರಣಧ್ಯಾನಪ್ರವೀಣೈರಯಂ
ಸಂಸಾರೋ ವಿಷಸಾಗರಃ ಪರಿಹೃತೋ ನಾಸ್ಮಾನ್ ಸಮಾಯಾತ್ಯಯಂ ।
ಹಾರಾಪಾರವಿಹಾರನಕ್ರವಿವಿಧವ್ಯಾಪಾರಸಾರಾದರೋ
ಹಾರೋದಾರಕಥಾಸುಧಾನಿಧಿವಿಧಿವ್ಯಾಪಾರಧೀಮಾನ್ ಪರಂ ॥೧೪೪॥

ವಾರಂ ವಾರಮುದಾರಹಾರಚರಣಧ್ಯಾನಾಮೃತಾಸ್ವಾದನೇ
ಸಂಸಾರೋರುದವಾನಲಾಕುಲಜನವ್ಯಾಪಾರದೂರಾದರಾಃ ।
ಹಾರಾಸ್ವಾನದತೋ ಮುಹುರ್ಮುಹುರಹಂ ಹಾರ್ಯೈಃ ಪರಂ ಸಾದರೋ
ದಾರಾನಾದರ ಏವ ಹಾರಕಥಯಾ ಕಾಲವ್ಯಪಾಯೋದ್ಯತಃ ॥೧೪೫॥

ಕುತ್ರಾನಂಗಮತಂಗಭಂಗಗಹನೇ ಲಿಂಗಾನಿ ತುಂಗಾನಿ ಮೇ
ಗಂಗಾತುಂಗತರಂಗಸಂಗಲಲಿತಾನ್ಯಾಲಿಂಗನಾರ್ಹಾಣ್ಯಪಿ ।
ಕುತ್ರ ಶ್ರೀಫಲಪಲ್ಲವಾಃ ಸಕಮಲಾಃ ಕಾಲಾಂತಕಾರಾಧನ
ಧ್ಯಾನಾರಾಧನಸಾಧನಾನಿ ಸತತಂ ತಾನಿ ಪ್ರಿಯಾಣ್ಯದ್ಯ ಮೇ ॥೧೪೬॥

ಒಂದುಬಾರಿಯಾದರೂ ಶ್ರೀಚಂದ್ರಶೇಖರನ ಧ್ಯಾನದಲ್ಲಿ ನಿರತರಾದರೆ, ನಾವು ಸ್ರಕ್, ಚಂದನ, ವನಿತಾದಿ ವಿಹಾರಗಳೆಂಬ ಮೊಸಳೆಗಳಿಂದ ತುಂಬಿದ, ವಿಷವೆಂಬ ಜಲಪೂರಿತವಾದ, ಸಂಸಾರವೆಂಬ ಈ ಸಮುದ್ರವನ್ನು ತೊರೆದು ಬಿಡುವೆವು. ಪುನಃ ನಮಗೆ ಆ ಸಂಸಾರದ ಸಂಬಂಧವು ಉಂಟಾಗಲಾರದು. ಪಂಡಿತನಾದ ವಿವೇಕಿಯು ಶ್ರೀಶಂಕರನ ಕಥಾಮೃತಪಾನವ್ಯಾಪಾರನಿರತನಾಗಿರುತ್ತಾನೆ. ಯಾವಾಗಲೂ ಆತನ ನಾಮಕೀರ್ತನೆಯಲ್ಲಿ ಕಾಲಕಳೆಯುತ್ತಾನೆ. ॥೧೪೪॥

ಶ್ರೀಮಹಾದೇವನ ಭಕ್ತರು ಪುನಃ ಪುನಃ ಶ್ರೀಶಿವನ ಪಾದಕಮಲಗಳನ್ನು ಧ್ಯಾನಮಾಡುತ್ತಾ, ಆತನ ನಾಮಾಮೃತದಿಂದ ತೃಪ್ತರಾಗುತ್ತಾರೆ. ನಾನಾದರೊ ಕಾಡುಕಿಚ್ಚಿಗೆ ಸಮವಾದ ಈ ಸಂಸಾರದಲ್ಲಿ ತೊಳಲುತ್ತಿರುವ ಜನರಂತೆ, ಪುನಃ ಪುನಃ ಶ್ರೀಚಂದ್ರಶೇಖರನ ಚರಿತ್ರೆಯನ್ನು ಕೀರ್ತನೆಮಾಡುತ್ತಾ ದಾರಾಭಿಲಾಷೆಯನ್ನು ತೊರೆದು ಆಯುಷ್ಯವನ್ನು ಕಳೆಯಬೇಕೆಂದು ಯೋಚಿಸುತ್ತೇನೆ. ॥೧೪೫॥

ಮನ್ಮಥನೆಂಬ ಆನೆಯನ್ನು ಬಿಗಿದು ತಡೆದಿರುವ ಶರೀರವುಳ್ಳ ನನಗೆ ಭಾಗೀರಥಿಯ ಉನ್ನತವಾದ ಅಲೆಗಳ ಸ್ಪರ್ಶದಂತೆ, ಆಲಿಂಗನಸುಖವನ್ನು ಕೊಡುವ ಉನ್ನತಗಳಾದ ಶಿವಲಿಂಗಗಳನ್ನು ಸ್ಪರ್ಶಿಸಬೇಕೆಂದು ಆಸೆಯಾಗುತ್ತದೆ. ಆ ತರಹದ

ಸಂತ್ಯನ್ಯೇ ತರವೋಽಪಿ ಬಿಲ್ವತರವೋ ಯಸ್ಮಿನ್ವನೇ ಪಾವನೇ
ತಸ್ಮಿನ್ ಪಾವನಪಾವನೇಽಪಿ ರುಚಿರೇ ರೇವಾಂಬುತೀರೇ ವರೇ ।
ತನ್ನೀರೈರಭಿಷಿಚ್ಯ ಲಿಂಗಮತುಲಂ ಬಿಲ್ವೀದಳೈರಂಕುರೈಃ
ದೂರ್ವಾಣಾಮಪಿ ಶಂಕರೇsತಿಕಲಯೇ ಕಾಲಂ ನ ಕಾಲಸ್ತದಾ ॥೧೪೭॥

ಯದಾ ಭೂತಿಃ ಫಾಲೇ ವಿಮಲತರರುದ್ರಾಕ್ಷವಲಯಃ
ಕರೇ ಲಿಂಗಂ ತುಂಗಂ ವಿಮಲಜಲಬಿಲ್ವೀದಳಯುತಂ ।
ಪುರಃ ಶಂಭೋ ಭರ್ಗ ತ್ರಿಪುರಹರ ಪಾಹೀತ್ಯಪಿ ವಚಃ
ತದಾ ಕಾಲಾದ್ಭೀತಿಃ ನ ಭವತಿ ಶುಭಂ ಭಾವಿ ಸತತಂ ॥೧೪೮॥

ಇತಿ ಶ್ರೀಶಿವರಹಸ್ಯೇ ಹರಾಖ್ಯೇ ತೃತೀಯಾಂಶೇ ಉತ್ತರಾರ್ಧೇ
ಭಿಲ್ಲರಾಜ್ಞೀವಿರಾಗೋಕ್ತಿವರ್ಣನಂ ನಾಮ
ಏಕವಿಂಶೋಽಧ್ಯಾಯಃ

ಶಿವಲಿಂಗದ ದರ್ಶನವೆಲ್ಲಿ ನನಗೆ ಲಭಿಸೀತು? ಮತ್ತು ಶಿವಪೂಜೆಗೆ ಅನುಕೂಲಗಳಾದ ಒಳ್ಳೇ ಬಿಲ್ವ ಚಿಗುರುಗಳು, ಕಮಲದ ಹೂಗಳು, ಹಣ್ಣು ಇವೇ ಮೊದಲಾದ ಸಾಮಗ್ರಿಗಳಲ್ಲಿ ಪ್ರೀತಿ ನನಗೆ ಎಂದು ಉಂಟಾದೀತು? ||೧೪೬||

ಶ್ರೇಷ್ಠವಾದ ಬಿಲ್ವವೃಕ್ಷಗಳೂ, ಇತರ ಮರಗಳೂ ಹೇರಳವಾಗಿ ಬೆಳೆದಿರುವ ಪವಿತ್ರವಾದ ರೇವಾನದಿಯ ತೀರಪ್ರದೇಶವಿರುವುದು. ಅದು ಪವಿತ್ರ ಕ್ಷೇತ್ರಗಳಲ್ಲೆಲ್ಲಾ ಶುದ್ಧವಾದುದಾಗಿದೆ. ಅದರ ತೀರವನದಲ್ಲಿ ಕಂಗೊಳಿಸುತ್ತಿರುವ ಕಮಲಪೂಜಿತವಾದ ಶಿವಲಿಂಗವನ್ನು ರೇವಾನದಿಯ ಶುದ್ಧೋದಕಗಳಿಂದ ಅಭಿಷೇಕಮಾಡಿ, ಒಳ್ಳೆ ಚಿಗುರುಬಿಲ್ವಗಳನ್ನು ಪೂಜೆಮಾಡುತ್ತಾ, ಆ ಶಂಕರನಿಗೆ ದೂರ್ವಾಂಕುರವನ್ನು ಅರ್ಪಿಸುತ್ತಾ, ಕಾಲಕಳೆಯಬೇಕೆಂದು ನನಗೆ ಆಸೆಯುಂಟಾಗುತ್ತಿದೆ. ||೧೪೭||

ಮನುಷ್ಯನು ಶಿವನಲ್ಲಿ ಭಕ್ತಿಯಿಟ್ಟು ಹಣೆಯಲ್ಲಿ ವಿಭೂತಿಯನ್ನೂ, ಶ್ರೇಷ್ಠವಾದ ರುದ್ರಾಕ್ಷಿಯ ಹಾರವನ್ನು ಕೊರಳಿನಲ್ಲಿಯೂ ಧರಿಸಬೇಕು. ಬಳಿಕ ಹಸ್ತದಲ್ಲಿ ಬಿಲ್ವದಳಗಳಿಂದ ಶೋಭಿಸುವ ಶ್ರೇಷ್ಠವಾದ ಶಿವಲಿಂಗವನ್ನು ಧರಿಸಿ, ಶಿವನೇ ಶಂಕರನೇ ತ್ರಿಪುರನಾಶಕನೇ! ನಮ್ಮನ್ನು ಕಾಪಾಡು ಎಂದು ಎಲ್ಲಿಯವರೆಗೆ ಧ್ಯಾನಿಸುವನೋ ಅಲ್ಲಿಯತನಕ ಅವನಿಗೆ ಯಮನಿಂದ ಭಯವಿಲ್ಲ. ಮುಂದೆ ಆತನಿಗೆ ಸುಖವಾಗು

ವುದು" ಎಂದು ನಾರೀರತ್ನನಾಮಕಳಾದ ಆ ರಾಜ್ಞಿಯು ರಾಜಪುತ್ರನೆದುರಿಗೆ ವೈರಾಗ್ಯಪೂರಿತವಾದ ಮಾತುಗಳನ್ನಾಡಿದಳು. ||೧೪೮||

ಇಲ್ಲಿಗೆ ಶ್ರೀ ಶಿವರಹಸ್ಯದ "ಹರ"ನೆಂಬ ಮೂರನೆಯ ಅಂಶದಲ್ಲಿ ಉತ್ತರಾರ್ಧದಲ್ಲಿ
ಬೇಡರ ರಾಜನಿಗೂ ವಿರಕ್ತರಾಜಪುತ್ರನಿಗೂ ನಡೆದ ಮಾತುಕಥೆಯ
ವರ್ಣನೆಯಲ್ಲಿ ಭಿಲ್ಲರಾಣಿಯ ವೈರಾಗ್ಯವಚನವನ್ನು ತಿಳಿಸುವ
ಇಪ್ಪತ್ತೊಂದನೆಯ ಅಧ್ಯಾಯವು ಮುಗಿದುದು.

॥ ಶ್ರೀಃ ॥

ಅಥ ಶ್ರೀಶಿವರಹಸ್ಯೇ

ತೃತೀಯಾಂಶೇ

ಉತ್ತರಾರ್ಧೇ

ದ್ವಾವಿಂಶೋಽಧ್ಯಾಯಃ

॥ ಯಾಜ್ಞವಲ್ಕ್ಯ ಉವಾಚ ॥

ಇತಿ ತದ್ವಚನಂ ಶ್ರುತ್ವಾ ಸ ರಾಜಾ ಸತ್ಯಭಾಷಣಃ ।
ತಾಂ ರಾಜ್ಞೀಂ ವಿನತಾಮಾಹ ಶಿವವ್ರತಪರಾಯಣಃ ॥೧॥

ತ್ವಂ ಶಂಕರಾನುಗ್ರಹಪಾತ್ರಮೇವ
ಚಿತ್ತಂ ಪವಿತ್ರಂ ತವ ಯೇನ ಜಾತಂ ।
ಪವಿತ್ರಮೂರ್ತಿಃ ಸತತಂ ತ್ರಿಣೇತ್ರಃ
ಸ್ಮೃತಃ ಸಕೃದ್ವಾ ಸ್ಮರಣೇನ ಮುಕ್ತಿಃ ॥೨॥

ಇಪ್ಪತ್ತೆರಡನೆಯ ಅಧ್ಯಾಯ

ಯಾಜ್ಞವಲ್ಕ್ಯಮಹರ್ಷಿಯು ಆ ನಾರೀರತ್ನಳ ವಿಚಾರವನ್ನೇ ಪ್ರಸ್ತಾಪಿಸುತ್ತಾ ಹೀಗೆಂದನು. ಸತ್ಯಭಾಷಿಯಾದ ಮತ್ತು ಶಿವವ್ರತಾಸಕ್ತನಾದ ಆ ಶೈವರಾಜನು ರಾಣಿಯ ಮಾತನ್ನು ಕೇಳಿ, ವಿನಯದಿಂದ ನಮಸ್ಕಾರಮಾಡಿ ನಿಂತಿದ್ದ ರಾಣಿಯೊಡನೆ ಇಂತೆಂದನು. ॥೧॥

" ನೀನು ಶಿವನ ಅನುಗ್ರಹಕ್ಕೆ ಪಾತ್ರಳಾಗಿಯೇ ಇರುವೆ. ಆದರಿಂದ ನಿನ್ನ ಮನಸ್ಸು ಪರಿಶುದ್ಧವಾಗಿರುವುದು. ಮುಕ್ಕಣ್ಣನಾದ ಶಿವನು ಯಾವಾಗಲೂ ಪರಿಶುದ್ಧನು. ಒಂದಾವೃತ್ತಿ ಅವನನ್ನು ಸ್ಮರಿಸಿದರೆ ಸಾಕು. ಅದರಿಂದಲೇ ಮುಕ್ತಿಯುಂಟಾಗುವುದು. ॥೨॥

ಜಿಹ್ವಾ ಪವಿತ್ರಾ ತವ ಪುಣ್ಯಮೂರ್ತೇ
ರಾಖ್ಯಾಮಹೇಶಸ್ಯ ಯಯಾ ಪ್ರವೃತ್ತಾ ।
ಗಂಗಾ ಯಥಾ ತುಂಗತರಂಗಭಾಗಾ
ಹಿಮಾಚಲಾಸಾರದರೀಗುಹಾಭ್ಯಃ ॥೩॥

ಪಾನಾವಗಾಹನವಿಲೋಕನಲೋಲಚಿತ್ತಾ
ನ್ಗಂಗಾ ಪುನಾತಿ ಶಿವನಾಮ ಸಕೃಚ್ಛ್ರುತಂ ಚೇತ್ ।
ಹಂತ್ಯೇವ ಪಾತಕಕುಲಾನ್ಯಪಿತಾನಿ ಪಶ್ಚಾ
ನ್ಮುಕ್ತಿಂ ಪ್ರಯಚ್ಛತಿ ವಿಲಕ್ಷಣಮೇವ ನಾಮ ॥೪॥

ಏವಂ ಮನಸ್ತೇ ಖಲು ಪೂತಮಾಸೀ
ದುಮಾಸಹಾಯಸ್ಮರಣೇನ ಧನ್ಯಾ ।
ಜಿಹ್ವಾ ತವೇತಿ ಸ್ಮರವೈರಿನಾಮ
ಸ್ಮರ ಸ್ಮರಾಪಾರಸುಖಾಯ ಸದ್ಯಃ ॥೫॥

ಪುಣ್ಯಕರವಾದ ಶರೀರವುಳ್ಳ ನಿನ್ನ ನಾಲಗೆಯೂ ಪವಿತ್ರವಾದುದು. ಏಕೆಂದರೆ ವಿಶೇಷವಾದ ಮತ್ತು ಎತ್ತರವಾದ ಅಲೆಗಳಿಂದ ಕೂಡಿದ ಗಂಗೆಯು ಹಿಮವತ್ಪರ್ವತದ ಅನೇಕ ಪೊದರುಗಳಿಂದಲೂ, ಗುಹೆಗಳಿಂದಲೂ, ಹರಿದುಬರುವಂತೆ ಮಹೇಶ್ವರನ ನಾಮಗಳು ಆ ನಾಲಗೆಯಿಂದ ಬರುತ್ತಿರುವುವು. ॥೩॥

ಗಂಗೆಯು ದರ್ಶನ, ಸ್ನಾನಪಾನಗಳಿಂದ ಚಂಚಲಚಿತ್ತರನ್ನು ಶುದ್ಧಿಮಾಡುವುದು. ಅದೇ ರೀತಿ ಶಿವನಾಮವು ಒಂದಾವೃತ್ತಿ ಉಚ್ಚರಿತವಾದರೂ, ಅನೇಕ ಪಾಪಗಳ ಸಮೂಹವನ್ನು ನಾಶಮಾಡಿ ಮುಕ್ತಿಯನ್ನು ಕೊಡುವುದು. ಆದುದರಿಂದ ಶಿವನಾಮವು ವಿಲಕ್ಷಣವಾದ ಶಕ್ತಿಯುಳ್ಳದು. ॥೪॥

ಈ ರೀತಿಯಲ್ಲಿ ನಿನ್ನ ಮನಸ್ಸು ಪರಿಶುದ್ಧವಾಯಿತಲ್ಲದೇ, ಉಮಾಪತಿಯ ಸ್ಮರಣೆಯಿಂದಲೂ ನೀನು ಕೃತಾರ್ಥಳಾದೆ. ಈ ನಾಲಿಗೆಯು ನಿನ್ನದೆಂದು ತಿಳಿದು, ಮನ್ಮಥನ ಶತ್ರುವಾದ ಶಿವನನಾಮವನ್ನು ಈಗ ಮನ್ಮಥಸುಖಾನುಭವಕ್ಕಾಗಿ ಸ್ಮರಿಸು. ॥೫॥

ಸಂಸಾರರೋಗವಿನಿವಾರಕಮೇತದೇವ
ಮಾರಾರಿನಾಮ ತದಿದಂ ಸಕಲಾರ್ಥಹೇತುಃ ।
ಶ್ರುತಂ ಸ್ಮೃತಂ ವಾ ಹರತೀಹ ಮೋಹಂ
ನಯತ್ಯುಮಾಕಾಂತಪದಾರವಿಂದಂ ॥೬॥

ತ್ವಯಾ ಪುರಾ ಶಂಕರಪಾದಪದ್ಮಂ
ಸಮ್ಯಕ್ಸಮಾರಾಧಿತಮೇವ ತೇನ ।
ಭಕ್ತಿಃ ಪ್ರಭೂತಾ ಕಿಲ ಫಾಲನೇತ್ರೇ
ತಯೈವ ಮುಕ್ತಿಃ ಬಹುಧಾ ಭವಿತ್ರೀ ॥೭॥

ಹಂತ್ಯೇನಾಂಸಿ ನಿಹಂತಿ ಚಿಂತಕಭಯಂ ಹಂತ್ಯಾಪದೋ ವೈರಿಣೋ
ಹಂತ್ಯಾರ್ತಿಂ ಚ ತಥಾಪಿ ಕೀರ್ತಿವಿಕೃತಿರ್ಜ್ಯೈನ್ಯಾಜ್ಞತಾ ದುರ್ಧಿಯಃ ।
ಶೋಭಾಸ್ರಾಭವವೈಭವಾಭಯಶುಭಾರಂಭೈಕಭೂರ್ಭೋ ಪ್ರಭೋ
ಶಂಭೋ ಪಾಹಿ ಶಿವೇತಿ ವಾಗಪಿ ಪರಾಂ ಮುಕ್ತಿಂ ಪ್ರಯಚ್ಛತ್ಯಪಿ ॥೮॥

ಈ ಮನ್ಮಥಶತ್ರುವಾದ ಶಿವನನಾಮವೇ ಜನನಮರಣರೂಪವಾದ ಸಂಸಾರವೆಂಬ ರೋಗವನ್ನು ನಾಶಮಾಡಿ ಸಕಲವಾದ ಇಷ್ಟಾರ್ಥಗಳಿಗೂ ಕಾರಣವಾಗುವುದು. ಆ ನಾಮುಗಳನ್ನು ಕೇಳಿದರೂ, ಸ್ಮರಿಸಿದರೂ, ಅವು ಅಜ್ಞಾನವನ್ನು ನಾಶಮಾಡಿ ಭಕ್ತನನ್ನು ಉಮಾಪತಿಯ ಪಾದಕಮಲದಲ್ಲಿ ಸೇರಿಸುವುದು. ॥೬॥

ನೀನು ಹಿಂದಿನ ಜನ್ಮದಲ್ಲಿ ಶಿವನ ಪಾದಕಮಲವನ್ನು ಚೆನ್ನಾಗಿ ಪೂಜಿಸಿರುವೆ. ಆ ಕಾರಣದಿಂದಲೇ ಈಗ ಶಿವನಲ್ಲಿ ಭಕ್ತಿಯು ಹೆಚ್ಚಾಗಿರುವುದು. ಆದರಿಂದಲೇ ಮೋಕ್ಷವೂ ನಿನಗೆ ಲಭಿಸುವುದು. ॥೭॥

ಶಿವನೇ ರಕ್ಷಿಸು, ಎಂಬ ಒಂದು ಮಾತು ಸಕಲ ಪಾಪಗಳನ್ನೂ, ಯಮನ ಭಯವನ್ನೂ, ಕಷ್ಟಪರಂಪರೆಗಳನ್ನೂ, ಶತ್ರುಗಳನ್ನೂ, ರೋಗಾದಿಬಾಧೆಗಳನ್ನೂ ಅಪಕೀರ್ತಿಯನ್ನೂ, ಬಡತನವನ್ನೂ, ಅಜ್ಞಾನವನ್ನೂ, ದುರ್ಬುದ್ಧಿಯನ್ನೂ ನಾಶಮಾಡುವುದು. ಕಾಂತಿಯನ್ನೂ, ಪ್ರಭುತ್ವಶಕ್ತಿಯನ್ನೂ, ಸಂಪತ್ತನ್ನೂ, ಧೈರ್ಯವನ್ನೂ, ಶುಭಕಾರ್ಯ ಪ್ರವೃತ್ತಿಯನ್ನೂ ವೃದ್ಧಿಪಡಿಸಿ, ಶ್ರೇಷ್ಠವಾದ ಮುಕ್ತಿಯನ್ನು ಒದಗಿಸುವುದು. ॥೮॥

ಕದಾಪಿ ಯದಿ ನ ಶ್ರುತಾ ಶಿವಶಿವೇತಿ ವಾಣೀ ತದಾ
ಕಥಂ ಭವತಿ ಜೀವನಂ ಮರಣಕಾಲನೇವೇದೃಶಂ ।
ಜ್ವಲತ್ವನಲಮಧ್ಯಗಂ ಭವತು ಭಸ್ಮಸಾದಪ್ಯತಃ
ಶಿವಸ್ಮರಣಸಾಧನಂ ಭವತಿ ಜೀವನಂ ಜೀವನಂ ॥೯॥

ತೃಪ್ತಿಂ ನ ಯಾತಿ ಮಮ ಚಿತ್ತಮುಮಾಸಹಾಯ
ನಾಮಾಮೃತಂ ಮುಹುರಪೇಕ್ಷಿತಮಾಶು ಪೀತ್ವಾ ।
ಧನ್ಯೋಽಸ್ಮಿ ತೇನ ಕೃತಕೃತ್ಯತನೋಽಸ್ಮಿ ಯಸ್ಮಾ
ದ್ಧನ್ಯಃ ಶಿವಸ್ಮರಣತತ್ಪರ ಏವ ಮರ್ತ್ಯಃ ॥೧೦॥

ದುರ್ಲಭಂ ಖಲು ಮಹೇಶ್ವರಲಿಂಗಂ
ದುರ್ಲಭಂ ಖಲು ಮಹೇಶ್ವರನಾಮ ।
ದುರ್ಲಭಂ ಖಲು ಮಹೇಶ್ವರಭಕ್ತೋ
ದುರ್ಲಭಂ ಖಲು ಶಿವಾಮೃತಪಾನಂ ॥೧೧॥

ಅದ್ಯ ಧನ್ಯಮಭವದ್ದಿನಂ ದಿನಂ
ಸರ್ವದಾಪಿ ಖಲು ನೇದೃಶಂ ಯತಃ ।

ಮನುಷ್ಯನಿಗೆ ಶಿವ, ಶಿವ, ಎಂಬ ಮಾತು ಶ್ರವಣವಾಗದಿದ್ದರೆ ಆ ಸ್ಥಿತಿಯು ಮರಣಕಾಲವೆಂಬರ್ಥವನ್ನೇ ಸೂಚಿಸುವುದು. ಬೆಂಕಿಯ ನಡುವೆ ಉರಿಯುತ್ತಿದ್ದರೂ, ಬೂದಿಯರೂಪವಾದರೂ, ಶಿವಸ್ಮರಣೆಯು ಬದುಕಿಸುವುದಕ್ಕೆ ಸಾಧನವಾಗಿ ನೀರಿನರೂಪವಾಗಿ ಶಾಂತಿಯನ್ನುಂಟುಮಾಡತಕ್ಕ ಆಶ್ಚರ್ಯವಸ್ತುವಾಗುವುದು. ॥೯॥

ನನ್ನ ಮನಸ್ಸು ಉಮಾಪತಿಯ ನಾಮವೆಂಬ ಅಮೃತವನ್ನು ಪುನಃ ಪುನಃ ಕುಡಿದರೂ ತೃಪ್ತಿಹೊಂದುವುದಿಲ್ಲ. ಆ ಕಾರಣದಿಂದ ನಾನು ಧನ್ಯನೂ ಕೃತಾರ್ಥನೂ ಆಗಿರುವೆನು. ಕಾರಣವೇನೆಂದರೆ ಶಿವಸ್ಮರಣೆಯನ್ನು ಮಾಡುವುದರಲ್ಲಿ ಆಸಕ್ತನಾದ ಮನುಷ್ಯನೇ ಭಾಗ್ಯವಂತನೆನಿಸುವನು. ॥೧೦॥

ಶಿವಲಿಂಗಪೂಜೆ, ನಾಮೋಚ್ಚಾರಣೆ, ಶಿವನ ಭಕ್ತರ ಸಹವಾಸ, ಶಿವನ ಕಥಾಮೃತಪಾನ ಇವುಗಳು ಸುಲಭವಾಗಿ ದೊರೆಯತಕ್ಕವುಗಳಲ್ಲ. ॥೧೧॥

ಈ ದಿನವು ಕೃತಾರ್ಥವೆನಿಸಿತು. ಯಾವಾಗಲೂ ಇಂತಹ ದಿನಗಳಿರುವುದಿಲ್ಲ.

ಶಂಗಮಂಗಳಕಥಾನುವರ್ತನಂ
ಗೀತಮೇವ ಕಿಯದಾಯುರಾದರಾತ್ ॥೧೨॥

ವಯಃ ಖಲು ಶಿವಾರ್ಚನಶ್ರವಣಸಾಧನಂ ಪಾವನಂ
ತದೇವ ಧನಮಿತ್ಯಪಿ ಪ್ರವದತಿ ಪ್ರಮಾಣಂ ಮಮ ।
ಅನುಕ್ಷಣಮಿದಂ ಪ್ರಿಯಂ ಗಿರಿಶನಾಮಧೇಯಂ ಲಯಂ
ನಭಶ್ರವಣಲಕ್ಷಣಂ ಶುಭದಮೇವ ಮನ್ಯೇ ಪುನಃ ॥೧೩॥

ಪುರಾ ಪುಣ್ಯಂ ಕಿಂ ವಾ ಕೃತಮಖಿಲಪಾಪಕ್ಷಯಕರಂ
ನ ಜಾನೇ ಜಾನೇ ಕಿಂ ಗಿರಿಶಚರಣಾಂಭೋಜಭಜನಂ ।
ಯದಿ ಜ್ಞಾತಂ ಸದ್ಯೋ ನ ಭವತಿ ಕಥಂ ವಾ ಜನಿಭಯಂ
ಪ್ರಣಾಶೋಪ್ಯಾಶಾಯಾಃ ಕಥಮಪಿ ನ ನಾಶೋ ವಿಧಿವಶಾತ್ ॥೧೪॥

ಶಿವನ ಮಂಗಳಕರವಾದ ಕಥೆಯನ್ನು ಕೇಳುತ್ತ, ಪ್ರೀತಿಯಿಂದ ಕಳೆದ ದಿನವೇ ನಮ್ಮ ಆಯುಸ್ಸಿನಲ್ಲಿ ಲೆಕ್ಕಕ್ಕೆ ಬರತಕ್ಕುದು. ॥೧೨॥

ಶಿವನ ಪೂಜೆಯ ವಿಷಯವನ್ನು ಕಿವಿಯಲ್ಲಿ ಕೇಳುವ ನಮ್ಮ ಆಯುಸ್ಸಿನ ಕಾಲವೇ ಪರಿಶುದ್ಧವಾದುದು. ಅದೇ ಧನವೆಂದೂ ಶಾಸ್ತ್ರಪ್ರಮಾಣವು ನನಗೆ ತಿಳಿಸುವುದು. ಪ್ರತಿಕ್ಷಣದಲ್ಲಿಯೂ ಶಿವನ ನಾಮಗಳಿಗೆ ಆಶ್ರಯವಾದ ಶಬ್ದವನ್ನು ಕೇಳುವುದಕ್ಕೆ ಸಾಧನವಾದ, ಆಕಾಶತತ್ವವೇ, ಪ್ರಿಯವಾದುದಾಗಿಯೂ ಮಂಗಳಕರವಾದುದಾಗಿಯೂ ಇರುವುದೆಂದು ಭಾವಿಸುವೆನು. ॥೧೩॥

ಹಿಂದಿನ ಜನ್ಮಗಳಲ್ಲಿ ಸಮಸ್ತ ಪಾಪಗಳನ್ನು ನಾಶಮಾಡತಕ್ಕ ಕಾರ್ಯಗಳೇನನ್ನು ಮಾಡಿರುವೆನೋ ತಿಳಿಯದು. ಶಿವನ ಪಾದಕಮಲಗಳ ಪೂಜಾ ವಿಚಾರವನ್ನು ತಿಳಿದಿರುವುದರಿಂದ, ಇದಕ್ಕೆ ಪೂರ್ವ ಪುಣ್ಯವೇ ಕಾರಣವೆಂದು ಭಾವಿಸುವೆನು. ಶಿವಪೂಜೆಯನ್ನು ತಿಳಿದ ಮಾತ್ರಕ್ಕೆ ಮುಂದೆ ಮತ್ತೊಂದು ಜನ್ಮವು ಉಂಟಾಗುವುದೆಂಬ ಭಯವೇ ಇರುವುದಿಲ್ಲ. ದೈವಯೋಗದಿಂದ ಈ ಜನ್ಮದಲ್ಲಿ ನಮ್ಮ ಮನಸ್ಸಿನಲ್ಲಿ ಉಂಟಾಗುವ ಇತರ ಆಶೆಗಳ ನಾಶವೂ ಉಂಟಾಗುವುದು. ॥೧೪॥

ಅಹೋ ಜನ್ಮರೋಗಾದಿರೋಗವ್ಯಪಾಯಃ
ಪುರಾ ನಾನುಭೂತೋಽನುಭೂತೋಽಯಮದ್ಯ ।
ಯತಃ ಶಂಕರಾಖ್ಯಾಮೃತಂ ಪೀತಮಾಸೀ
ದ್ದಿನಂ ದುರ್ಲಭಂ ಸರ್ವಥಾ ದುರ್ಲಭಂ ಹಿ ॥೧೫॥

ಶಾಂಗಾಂಗಲಿಂಗೇನ ಕದಾಚಿದೇವ
ಭವತ್ಯುಮಾಕಾಂತಕಥಾಪ್ರಸಂಗಃ ।
ತೇನ ಪ್ರಸಂಗೇನ ಸುಖಾಭಿಷಂಗಃ
ಶಾಂಗಾಭಿಷಂಗೋಽಪಿ ಸ ಮಂಗಳಾಯ ॥೧೬॥

ಯತ್ಕಲ್ಯಾಣಪರಂಪರಾಕರಣತಾಪ್ರಾಪ್ತಂ ಯದಾ ಸತ್ಕುಲ
ಪ್ರಧ್ವಂಸಾಶನಿತಾ ಚ ಪಾತಕಕುಲಾಪಾರಾಟವೀವಹ್ನಿತಾಂ ।
ತನ್ನಾಮಸ್ಮರವೈರಿಣಃ ಶಿವಜನಸ್ವರ್ಗಾಪವರ್ಗಪ್ರದಂ
ಪ್ರಾಪ್ತಂ ಕರ್ಣಪಥಂ ಕಥಂಚಿದಧುನಾ ಪುಣ್ಯೈರಗಣ್ಯೈಃ ಕೃತೈಃ ॥೧೭॥

ನಾನು ಹಿಂದೆ ಜನನಮರಣವೆಂಬ ರೋಗನಾಶದ ಸುಖವನ್ನು ಅನುಭವಿಸಲಿಲ್ಲ. ಶಿವನ ಕಥಾಮೃತವನ್ನು ಪಾನಮಾಡಿದುದರಿಂದ ಈಗ ಆ ರೋಗನಾಶರೂಪವಾದ ಸುಖವನ್ನು ಅನುಭವಿಸಿದೆನು. ಈ ಫಲವು ಸಾಮಾನ್ಯರಾದ ಜನರಿಗೆ ಸರ್ವ ಪ್ರಕಾರದಿಂದಲೂ ದೊರೆಯತಕ್ಕುದಲ್ಲ. ||೧೫||

ಶಿವಸಂಬಂಧವಾದ ಭಸ್ಮತ್ರಿಪುಂಡ್ರಾದಿ ಚಿಹ್ನೆಯನ್ನು ಧರಿಸುವುದರಿಂದ ಒಂದಾನೊಂದು ಕಾಲದಲ್ಲಿ ಭಕ್ತಿಯೂ, ಶಿವಕಥಾಶ್ರವಣಾಭಿಲಾಷೆಯೂ ಉಂಟಾಗುವುದು. ಆ ಕಥಾಪ್ರಸಂಗದಿಂದ ಸುಖವು ಲಭಿಸುವುದು. ಆದುದರಿಂದ ಶಿವಚಿಹ್ನೆಯನ್ನು ಧರಿಸುವುದು, ಸಕಲ ಮಂಗಳಪ್ರಾಪ್ತಿಗೂ ಮೂಲಕಾರಣವೆನಿಸುವುದು.||೧೬||

ಮನ್ಮಥನ ಶತ್ರುವಾದ ಪರಮೇಶ್ವರನ ನಾಮವು ಕಲ್ಯಾಣ ಪರಂಪರೆಗೆ ಕಾರಣವಾದುದು. ವಿಪತ್ತುಗಳ ಸಮೂಹವನ್ನು ನಾಶಮಾಡುವ ಸಿಡಿಲಿನಂತೆ ಪಾಪಗಳೆಂಬ ಕಾಡಿಗೆ ಬೆಂಕಿಯಂತೆ ಇದ್ದು, ತನ್ನ ಭಕ್ತರಿಗೆ ಸ್ವರ್ಗ ಮೋಕ್ಷಗಳನ್ನು ಕೊಡತಕ್ಕುದು. ಇಂತಹ ನಾಮವು ಹಿಂದೆ ಮಾಡಿದ ಅನೇಕ ಪುಣ್ಯಕಾರ್ಯಗಳ ಫಲವಾಗಿ ನನ್ನ ಕಿವಿಗೆ ಹೇಗೋ ಈಗ ಕೇಳಿಸುತ್ತಿರುವುದು. ||೧೭||

ಶಿವನಾಮಸುಧಾಪ್ರವಾಹಪೂತ
ನ್ಮತಿಕರಪಾತ್ರಮಿದಂ ಪವಿತ್ರಮೇಕಂ ।
ಅಮಿತಾದ್ಭುತಪುಣ್ಯಪುಂಜಭೂತಂ
ಮಮ ಖಲು ಚಿತ್ತಮಿದಂ ಪ್ರಭೂತಪುಣ್ಯಂ ॥೧೮॥

ಅಜ್ಞಾತಂ ಗಿರಿಜಾಭಿಧಾನಸುಧಯಾ ತುಲ್ಯಂ ಪದಾರ್ಥಾಂತರಂ
ಯತ್ಸದ್ಯಃ ಶ್ರುತಮೇವ ಹಂತಿ ಬಹುಧಾ ಪಾಪಾನ್ಯಪಾರಾಣ್ಯಪಿ ।
ಸಂಪತ್ಪ್ರಾನವಿಧಾನದಕ್ಷಮಧುನಾ ಸ್ವರ್ಗಾಪವರ್ಗಪ್ರದಂ
ತತ್ತುಲ್ಯಂ ಜಗತೀತಲೇ ಖಲು ಮಿತಂ ಲೋಕಾಂತರೇ ವಾ ಧ್ರುವಂ ॥೧೯॥

ತತ್ತುಲ್ಯಾ ನಿಧಯೋಽಪಿ ನೈವ ನವ ತೇ ಶಂಖಾದಯಃ ಕೇವಲಂ
ತಿಷ್ಠಂತ್ಯೇವ ನ ಭೋಗಸಾಧನತಯಾ ಜ್ಞಾತಾಸ್ತತಸ್ತೈಃ ಸಹ ।
ತುಲ್ಯಂ ನಾಮ ನ ಶಾಂಭವಂ ಶಿವಪದಂ ತಾವಚ್ಛ್ರುತಂ ಮುಕ್ತಿದಂ
ಸರ್ವಾಪದ್ವಿನಿವಾರಕಂ ಚ ಸುತರಾಂ ತದ್ಭಾಗ್ಯಭೋಗಪ್ರದಂ ॥೨೦॥

ಶಿವನಾಮವೆಂಬ ಅಮೃತಮಯ ನದಿಯ ಪ್ರವಾಹಕ್ಕೆ ನನ್ನ ಮನಸ್ಸು ಪಾತ್ರವಾಗಿರುವುದು. ಆದುದರಿಂದ ಈ ನನ್ನ ಮನಸ್ಸು ಅಳತೆ ಮಾಡುವುದಕ್ಕಾಗದ ಮತ್ತು ಆಶ್ಚರ್ಯಕರವಾದ ಪುಣ್ಯದ ರಾಶಿಯಂತಾಗಿರುವುದು. ॥೧೮॥

ಶಿವನಾಮಾಮೃತಕ್ಕೆ ಸಮಾನವಾದ ಮತ್ತೊಂದು ಪದಾರ್ಥವಿಲ್ಲ. ಆ ಶಿವನಾಮವನ್ನು ಕೇಳಿದ ಕ್ಷಣದಲ್ಲಿಯೇ ಅದು ಅನೇಕ ಪಾಪಗಳನ್ನು ನಾಶಮಾಡುವುದು. ಆ ನಾಮಗಳು ಜನರಿಗೆ ಸಂಪತ್ತನ್ನೂ ಸ್ವರ್ಗಲೋಕಗಳನ್ನೂ ಕೊಡಲು ಶಕ್ತವಾದುವುಗಳು. ಅದಕ್ಕೆ ಸಮಾನವಾದುದು ಈ ಲೋಕದಲ್ಲಿಯಾಗಲೀ ಪರಲೋಕದಲ್ಲಿಯಾಗಲಿ ಇರುವುದಿಲ್ಲ. ॥೧೯॥

ಶಿವನಾಮಕ್ಕೆ ಸಮಾನವಾದ ನಿಧಿಗಳೂ ಇಲ್ಲ. ಶಂಖ ಮುಂತಾದ ನವನಿಧಿಗಳು ಸುಖಸಾಧನಗಳಾಗಿರದೆ ಹೆಸರು ಮಾತ್ರಕ್ಕೆ ನಿಧಿಗಳೆನಿಸಿಕೊಂಡಿವೆ. ಕೇಳಿದ ಮಾತ್ರದಿಂದಲೇ ಸಮಸ್ತ ಕಷ್ಟಗಳನ್ನೂ ಪರಿಹರಿಸಿ, ಭಾಗ್ಯವನ್ನೂ, ಸುಖವನ್ನೂ ಉಂಟುಮಾಡಿ, ಮೋಕ್ಷವನ್ನು ಕೊಡುವ ಶಿವನಾಮಕ್ಕೆ ಅವು ಎಂದಿಗೂ ಸಮಾನವಾದವುಗಳಲ್ಲ. ॥೨೦॥

ಯಃ ಕಶ್ಚಿದ್ಭುವಿ ವಾತುಲೋತಿಕಲುಷವ್ಯಾಪಾರಧೀರ್ವ್ಯಾಕುಲೋ
ಯತ್ಕಿಂಚಿದ್ವದತು ಪ್ರಧಾವತು ಮುಹುರ್ಮತ್ತಾಭಿಶಸ್ತಾನ್ವಿತಃ ।
ಕಿಂ ತೇನಾಹಮುಮಾಸಹಾಯಚರಣಧ್ಯಾನಾಭಿಧಾನಶ್ರುತೇ
ರ್ಮುಕ್ತಿಃ ಸ್ಯಾದಿತಿ ಬಾಹುಮೂರ್ಧ್ವಮಸಕೃತ್ಕೃತ್ವಾ ವದಾಮಿ ಸ್ಫುಟಂ॥೨೧॥

ಇತ್ಯಾಕರ್ಣ್ಯ ವಚಃ ಸುಧಾಮಯಮಿದಂ ರಾಜ್ಞೀ ಪ್ರಹೃಷ್ಟಾ ಮುಹು
ಸ್ತಂ ನತ್ವಾ ಶಿವವಿದ್ಯಯಾದ್ಯ ಪರಯಾ ಪೂತಾಂ ಪರಂ ಮಾಂ ಕುರು ।
ಇತ್ಯೇತದ್ವಚನಂ ಮುಹುಃ ಶ್ರುತಿಪುಟವ್ಯಾಪ್ತಂ ಚ ಕೃತ್ವಾ ಸಕೃ
ತ್ತಾಮಾಹಾದ್ಯ ತ ಏವ ತೇ ಭವತು ಸಾ ವಿದ್ಯಾ ಗುರೋಃ ಶಾಂಭವಾತ್॥೨೨॥

ಇತ್ಯಾಕರ್ಣ್ಯ ವಚಸ್ತಸ್ಯ ಶಿವವಿದ್ಯಾವಿಲಂಬತಃ ।
ಮೂರ್ಛಿತಾ ಭೂತಲೇ ಸದ್ಯಃ ಪಪಾತಾತಿಕೃಶಾ ನೃಪ ॥೨೩॥

ಭೂಮಿಯಲ್ಲಿ ಯಾವನಾದರೊಬ್ಬನು ವಿಶೇಷವಾದ ಮಾತನಾಡತಕ್ಕವನಾಗಲಿ, ಶಾಸ್ತ್ರ ಚರ್ಚೆಮಾಡಲಿ, ಕೆಟ್ಟಕೆಲಸಗಳನ್ನೂ ಮಾಡುತ್ತಿರಲಿ, ಪಾಂಡಿತ್ಯ ಮಹಿಮೆಯನ್ನೂ ಪ್ರಕಾಶಪಡಿಸಲಿ, ಓಡಿಹೋಗಿಲಿ, ಮದವುಳ್ಳವನಾಗಲಿ ಇವುಗಳಿಂದೇನು ? ಅಂಥವನು ಉಮಾಪತಿಯ ಪಾದಗಳನ್ನು ಧ್ಯಾನಮಾಡುತ್ತಿರುವವನು ಉಚ್ಚರಿಸುವ ನಾಮಗಳನ್ನೂ ಕೇಳಿದರೆ ಸಾಕು, ಮುಕ್ತಿಯನ್ನು ಹೊಂದುವನೆಂದು ಅನೇಕಾವೃತ್ತಿ ತೋಳನ್ನೆತ್ತಿ ಸ್ಪಷ್ಟವಾಗಿ ಪ್ರಮಾಣ ಮಾಡುವೆನು.” ॥೨೧॥

ಅಮೃತ ಸ್ವರೂಪವಾದ ಈ ಮಾತುಗಳನ್ನು ರಾಣಿಯು ಕೇಳಿ, ಸಂತೋಷಿಸುತ್ತ ಅನೇಕ ಬಾರಿ ಆ ರಾಜನಿಗೆ ನಮಸ್ಕಾರಮಾಡಿ, ಶಿವಪರಾವಿದ್ಯೆಯಿಂದ ನನ್ನನ್ನು ಪರಮ ಪವಿತ್ರಳನ್ನಾಗಿ ಮಾಡಬೇಕೆಂದು ಹೇಳಿದ ಮಾತನ್ನು ಕೇಳಿ, ರಾಜನು ಅವಳನ್ನು ಕುರಿತು, ಈ ದಿನ ನಿನಗೆ ಶಿವವಿದ್ಯೆಯು ಶಿವಗುರುವಿನಿಂದ ಉಪದೇಶವಾಗಲಿ, ಅದರಿಂದ ನೀನು ಜೀವನ್ಮುಕ್ತಳಾಗುವೆ ಎಂದನು. ॥೨೨॥

ಶೈವರಾಜಪುತ್ರನ ಆ ಮಾತನ್ನು ಕೇಳಿ ಶಿವವಿದ್ಯಾ ಪ್ರಾಪ್ತಿಯು ಸಾವಕಾಶವಾದುದರಿಂದ ರಾಣಿಯು ಮೂರ್ಛೆಯನ್ನು ಹೊಂದಿ ಭೂಮಿಯ ಮೇಲೆ ಬಿದ್ದಳು. ॥೨೩॥

ತತಃ ಸ ಭೂಪತಿರ್ದೃಷ್ಟ್ವಾ ಮೂರ್ಛಿತಾಂ ಕರುಣಾನಿಧಿಃ ।
ಅಶ್ರುವ್ಯಾಕುಲನೇತ್ರಾಂತೋ ನಿತಾಂತಂ ತಾಂತ ಏವ ಸಃ ॥೨೪॥

ತಾಂ ದೃಷ್ಟ್ವಾ ಪತಿತಾಂ ಪ್ರಾಹ ರಾಜಾ ಹಾಹಾವೃಥಾ ಗತಾ ।
ಸೇಯಂ ನ ಪೂತಾ ಕಲ್ಯಾಣೀ ಮುಕ್ತ್ಯೈ ಶಾಂಭವವಿದ್ಯಯಾ ॥೨೫॥

ಅಪ್ರಾಪ್ಯ ಶಾಂಭವೀಂ ವಿದ್ಯಾಂ ತನುತ್ಯಾಗಂ ಕರೋತಿ ಯಃ ।
ಸ ಮುಕ್ತೋ ನ ಭವತ್ಯೇವ ಶಿವಭಕ್ತೋಽಪಿ ವಸ್ತುತಃ ॥೨೬॥

ಶಿವವಿದ್ಯಾಗ್ನಿನಾ ದಗ್ಧೇ ಮಹಾಪಾತಕಪರ್ವತೇ ।
ಪಶ್ಚಾದ್ಭವತಿ ಮುಕ್ತಿಶ್ಚ ಶಿವಲೋಕಾನುಲೋಕನೇ ॥೨೭॥

ಶಿವಾಚಾರೋಽಪಿ ಸಹಸಾ ನ ವಿನಾ ಶಿವವಿದ್ಯಯಾ ।
ತದಧೀನಂ ತದಾಚಾರಂ ವಿದುಃ ಶಾಂಭವಪುಂಗವಾಃ ॥೨೮॥

ಮೂರ್ಛೆ ಹೊಂದಿದ ರಾಣಿಯನ್ನು ದಯಾನಿಧಿಯಾದ ರಾಜನು ನೋಡಿ ಕಣ್ಣಿನಲ್ಲಿ ನೀರು ಸುರಿಸುತ್ತ, ಬಹಳವಾಗಿ ವ್ಯಸನಹೊಂದಿದನು. ॥೨೪॥

ಭೂಮಿಯ ಮೇಲೆ ಬಿದ್ದ ರಾಣಿಯನ್ನು ನೋಡಿದ ರಾಜನು, ಹಾ ಹಾ, ಈ ಮಂಗಳೆಯು ಶಿವಪಂಚಾಕ್ಷರೀ ವಿದ್ಯೆಯಿಂದ ಮೋಕ್ಷವನ್ನು ಪಡೆಯದೆ, ಶುದ್ಧಳಾಗದೆ ವ್ಯರ್ಥವಾಗಿ ಪ್ರಾಣತ್ಯಾಗ ಮಾಡಿದಳಲ್ಲಾ ಎಂದನು. ॥೨೫॥

ಶಿವಪ್ರೀತಿಕರವಾದ ಆಚಾರಗಳಲ್ಲಿ ನಿರತನಾಗಿದ್ದರೂ, ಶಿವವಿದ್ಯೆಯಾದ ಪಂಚಾಕ್ಷರಮಂತ್ರೋಪದೇಶವನ್ನು ಪಡೆಯದೆ ಮರಣಹೊಂದಿದರೆ ಅವನಿಗೆ ಮುಕ್ತಿ ಬರುವುದಿಲ್ಲ. ಶಿವವಿದ್ಯಾಮಂತ್ರವೆಂಬ ಅಗ್ನಿಯಿಂದ ಮಹಾಪಾಪವೆಂಬ ಪರ್ವತವು ಸುಟ್ಟುಹೋದಮೇಲೆ, ಶಿವಲೋಕಪ್ರಾಪ್ತಿಯ ಮೂಲಕವಾಗಿ ಮೋಕ್ಷವುಂಟಾಗುವುದು. ಶಿವಧ್ಯಾನ ಮೂಲಕವಾಗಿಯೇ ಸದಾಚಾರಕ್ಕೆ ಪ್ರಾಶಸ್ತ್ಯಬರುವುದೆಂದು, ಶಿವಭಕ್ತಶ್ರೇಷ್ಠರು ಶಿವಾಚಾರವನ್ನು ಶಿವಮಂತ್ರಾಧೀನವೆಂದು ಹೇಳುವರು. ॥೨೬-೨೭-೨೮॥ (ಶೈವರ ಐದುವಿಧದ ಆಚಾರಗಳಲ್ಲಿ ಶಿವಾಚಾರವೆಂಬುದೂ ಒಂದು)

ಅಭಿವ್ಯಕ್ತಾ ಯದಿ ಭವೇತ್ಸಾ ವಿದ್ಯಾ ಶಾಂಭವೋತ್ತಮಾತ್ ।
ತದಾಚಾರರತಾದೇವ ತದಾಚಾರಸ್ತದಾಭವೇತ್ ॥೨೯॥

ದೀಕ್ಷಿತಾಚಾರನಿಯಮೋ ಯತೋ ನಾದೀಕ್ಷಿತಸ್ಯ ಸಃ ।
ಅತೋ ದೀಕ್ಷಾನುಯೋಗೇನ ದೀಕ್ಷಿತಾಚಾರಸಂಗಮಃ ॥೩೦॥

ಪುರಾ ಕಶ್ಚಿದಭೂದ್ರಾಜಾ ಗಂಗಾತೀರೇ ಮನೋಹರೇ ।
ತುಂಗಲಿಂಗಸಮಾಕ್ರಾಂತೇ ಚಿತ್ರಕೇತುರಿತಿಶ್ರುತಃ ॥೩೧॥

ಸ ಶಾಂಭವೋ ಮಹಾನ್ ರಾಜಾ ಸರ್ವಭೂಚಕ್ರಪಾಲಕಃ ।
ಅಪಾರಧನವಾಂಸ್ತಸ್ಯ ಮತ್ತಮಾತಂಗಕೋಟಯಃ ॥೩೨॥

ತಸ್ಯೋತ್ತುಂಗಾಸ್ತುರಂಗಾಶ್ಚ ರತ್ನಾನಿ ವಿವಿಧಾನಿ ಚ ।
ಗೋಕುಲಾನ್ಯಪ್ಯಪಾರಾಣಿ ವಾಮಿನಾನಾಮಪಿ ಕೋಟಯಃ ॥೩೩॥

ರುದ್ರಾಕ್ಷಕಂಠಾಸ್ತೇ ಸರ್ವೇ ಸದಾ ಭಸ್ಮವಿಭೂಷಿತಾಃ ।
ತತ್ಪೋಷಕಾಶ್ಚ ತೇ ಸರ್ವೇ ಭೂತಿರುದ್ರಾಕ್ಷಭೂಷಣಾಃ ॥೩೪॥

ಶಿವಮಂತ್ರಜಪಾಚರಣೆಯಲ್ಲಿ ಆಸಕ್ತನಾದ ಶಾಂಭವಶ್ರೇಷ್ಠನಿಂದ ಮಂತ್ರೋಪದೇಶವಾದರೆ, ಶಿಷ್ಯನಿಗೆ ಆ ಗುರುವಿನ ಅನುಗ್ರಹವೂ ಸನ್ಮಂಗಳವೂ ಲಭಿಸುವುದು. ಶಿವದೀಕ್ಷೆಯನ್ನು ಪಡೆದವನ ಆಚಾರ ನಿಯಮಾದಿಗಳು ದೀಕ್ಷೆಯನ್ನು ಪಡೆಯದವನಿಗೆ ಬರುವುದಿಲ್ಲ. ಆದುದರಿಂದ ದೀಕ್ಷೆಯನ್ನು ಪಡೆದವನಿಂದಲೇ ಶಿವದೀಕ್ಷೆಯನ್ನು ಪಡೆದುಕೊಳ್ಳಬೇಕು. ||೨೯-೩೦||

ಇದಕ್ಕೆ ನಿದರ್ಶನವಾಗಿ ಹಿಂದಿನ ಕಾಲದಲ್ಲಿ, ಅನೇಕ ಶಿವಲಿಂಗಗಳಿಂದ ಕೂಡಿದ ಗಂಗಾನದಿಯ ಮನೋಹರವಾದ ಒಂದು ದಡದಲ್ಲಿ ವಿಸ್ತಾರವಾದ ಭೂಭಾಗಕ್ಕೆ ರಾಜನಾದ ಚಿತ್ರಕೇತುವೆಂಬ ಶಿವಭಕ್ತನಾದ ದೊರೆಯಿದ್ದನು. ಅವನು ಅತ್ಯಂತ ಧನವಂತನಾಗಿ, ಅನೇಕ ಆನೆ ಕುದುರೆಗಳನ್ನೂ, ಬಗೆ ಬಗೆಯ ರತ್ನಗಳನ್ನೂ, ವಿಶೇಷವಾದ ಗೋವುಗಳ ಸಮೂಹವನ್ನೂ ಹೊಂದಿದ್ದನು. ಅವನಲ್ಲಿದ್ದ ಪ್ರಾಣಿಗಳೆಲ್ಲಕ್ಕೂ, ಅವುಗಳನ್ನು ಪೋಷಿಸುವವರಿಗೂ, ಕತ್ತಿಗೆ ರುದ್ರಾಕ್ಷಿಯನ್ನು ಕಟ್ಟಿಸಿ ಭಸ್ಮವನ್ನು ಯಾವಾಗಲೂ ಧರಿಸಿರುವಂತೆ ಆಜ್ಞೆಮಾಡಿದ್ದನು. ||೩೧-೩೨-೩೩-೩೪||

ತುಂಗಂ ತುರಂಗಮಾರುಹ್ಯ ಭೂತಿರುದ್ರಾಕ್ಷಭೂಷಿತಂ ।
ಸ ರಾಜಾ ವಿಪಿನಂ ಯಾತಿ ವಿಹಾರಾಯ ಕದಾಚನ ॥೩೫॥

ನ ತೇನ ನಿಹತೋ ಜಂತುರ್ವನೇಪ್ಯಾಖೇಟಕೇ ಸತಿ ।
ರುರೂನ್ ಗೃಹ್ಣಾತಿ ತರಸಾ ತುರಗಾಧಿಷ್ಠಿತೋ ನೃಪಃ ॥೩೬॥

ತಂ ಗೃಹೀತ್ವಾ ರುರುಂ ತಸ್ಯ ಕಂಠೇ ರುದ್ರಾಕ್ಷಮಾಲಿಕಾಂ ।
ಭೂತಿಂ ದತ್ವಾ ತ್ಯಜತ್ಯುಚ್ಚೈರುಚ್ಚರಂಚ್ಛಿವನಾಮ ಸಃ ॥೩೭॥

ವ್ಯಾಘ್ರಾದೀನಾಂ ಚ ಕಂಠೇಷು ದತ್ವಾ ರುದ್ರಾಕ್ಷಮಾಲಿಕಾಂ ।
ದತ್ವಾ ಭೂತಿಂ ತ್ಯಜತ್ಯೇವ ಶಿವನಾಮ ಸಮುಚ್ಚರನ್ ॥೩೮॥

ತಸ್ಮಿನ್ರಾಷ್ಟ್ರೇ ವನೇ ಕ್ವಾಪಿ ನಾರುದ್ರಾಕ್ಷೋ ಮೃಗೋ ನೃಪ ।
ನಾಲಿಂಗಂ ಬಿಲ್ವಮೂಲಂ ಚ ನಾಲಿಂಗಂ ಚ ನದೀತಟಂ ॥೩೯॥

ಆ ರಾಜನು ವಿಭೂತಿರುದ್ರಾಕ್ಷಿಗಳಿಂದ ಅಲಂಕರಿಸಿದ ಎತ್ತರವಾದ ಕುದುರೆಯನ್ನೇರಿ, ಒಂದಾನೊಂದು ಕಾಲದಲ್ಲಿ ವನವಿಹಾರಕ್ಕೆ ಹೋಗುವನು. ಅವರು ಬೇಟೆಗೆ ಹೋದರೂ, ಒಂದು ಪ್ರಾಣಿಯನ್ನೂ ಕೊಲ್ಲುತ್ತಿರಲಿಲ್ಲ. ಕುದುರೆಯ ಮೇಲೆಯೇ ಕುರಿತು ವೇಗವಾಗಿ ಹೋಗುತ್ತ ಜಿಂಕೆಗಳನ್ನು ಹಿಡಿದು ಅದರ ಕೊರಳಿಗೆ ರುದ್ರಾಕ್ಷಿಯಮಾಲೆಯನ್ನು ಹಾಕಿ, ಮೈಗೆ ವಿಭೂತಿಯನ್ನು ಬಳಿದು, ಗಟ್ಟಿಯಾಗಿ ಶಿವನಾಮವನ್ನು ಉಚ್ಚರಿಸಿ ಬಿಟ್ಟುಬಿಡುತ್ತಿದ್ದನು. ॥೩೫-೩೬-೩೭॥

ಹುಲಿಯೇ ಮುಂತಾದ ಕ್ರೂರ ಮೃಗಗಳ ಕುತ್ತಿಗೆಗೂ ರುದ್ರಾಕ್ಷಿಯ ಸರವನ್ನು ಹಾಕಿ, ವಿಭೂತಿಯನ್ನು ಬಳಿದು ಶಿವನಾಮವನ್ನುಚ್ಚರಿಸಿ ಓಡಿಸಿಬಿಡುತ್ತಿದ್ದನು. ಹೀಗಾಗಿ, ॥೩೮॥

ಅವನ ರಾಜ್ಯದ ಕಾಡಿನಲ್ಲಿ ಎಲ್ಲಿಯೂ ರುದ್ರಾಕ್ಷಿಯನ್ನು ಧರಿಸದ ಮೃಗಗಳಿರಲಿಲ್ಲ. ಬಿಲ್ವ ಪತ್ರೆಯ ಗಿಡದ ಬುಡದಲ್ಲಿಯೂ, ನದಿಯ ದಡದಲ್ಲಿಯೂ ಲಿಂಗವಿಲ್ಲದಿರುತ್ತಿರಲಿಲ್ಲ. ಮೃಗಗಳೂ ಕೂಡ ಬಗ್ಗಿರುವ ಗಿಡದ ಕೊಂಬೆಯಲ್ಲಿರುವ ಎಲೆಗಳನ್ನೂ ಹುಲ್ಲನ್ನೂ ಬಾಯಿಯಲ್ಲಿ ಕಚ್ಚಿ ತಂದು ಶಿವಲಿಂಗಕ್ಕೆ ಪೂಜಿಸುತ್ತಿದ್ದುವು. ॥೩೯-೪೦॥

ಆನಮ್ರತರುಶಾಖಾಯಾಂ ಪತ್ರಾಣ್ಯಾಸ್ಯೈರ್ಮೃಗಾ ಅಪಿ ।
ಆನೀಯ ಲಿಂಗೇ ದತ್ವೈವ ಪ್ರಯಚ್ಛಂತಿ ತೃಣಾನ್ಯಪಿ ॥೪೦॥

ಅರಣ್ಯತರುವೃಕ್ಷೇಭ್ಯಃ ಫಲಾನ್ಯಾನೀಯ ಸಾದರಂ ।
ಬಿಲ್ವಮೂಲೇ ಪ್ರಯಚ್ಛಂತಿ ಶಿವಲಿಂಗಾರ್ಥಮಿತ್ಯಪಿ ॥೪೧॥

ತೃಣಂ ಶಿವಾರ್ಪಣಂ ಕೃತ್ವಾ ಜಲಂ ಚ ನವಮಾದರಾತ್ ।
ಸ್ವಯಂ ಗೃಹ್ಣಾತಿ ಯತ್ನೇನ ಶಿವಸ್ಮರಣಪೂರ್ವಕಂ ॥೪೨॥

ಯೇ ಮಯೂರಾದಯಸ್ತಸ್ಮಿನ್ನರಣ್ಯೇ ತೇ ವಿಭೂಷಿತಾಃ ।
ರುದ್ರಾಕ್ಷೈರ್ಭಸ್ಮನಾಪ್ಯೇವಂ ನಾರುದ್ರಾಕ್ಷೋ ವಿಲೋಕ್ಯತೇ ॥೪೩॥

ದವಭಸ್ಮನಿ ಸರ್ವೇಽಪಿ ಕೃತ್ವಾಂಗಪರಿವರ್ತನಂ ।
ಶಿವಂ ಸ್ಮರಂತಃ ಪಶ್ಯಂತಿ ಶಿವಲಿಂಗಾನಿ ತೇ ನೃಪ ॥೪೪॥

ತುರಂಗಮತ್ತಮಾತಂಗಭಕ್ಷ್ಯಂ ಭೂತಿಕಣಾಶ್ರಿತಂ ।
ನ ಭೂತಿರಹಿತಾನ್ನಾನಿ ಭಕ್ಷಣಾರ್ಹಾಣಿ ಭೂಪತೇ ॥೪೫॥

ಭೂತಿಯುಕ್ತಂ ಯದೇವಾನ್ನಂ ತತ್ಕೃತ್ವಾ ಶಂಕರಾರ್ಪಣಂ ।
ಅಶ್ವಾದಿಭ್ಯಃ ಪ್ರಯಚ್ಛಂತಿ ಗಜಾಶ್ವಾದಿಕರಕ್ಷಕಾಃ ॥೪೬॥

ಮೃಗಗಳು ಕಾಡಿನ ಗಿಡ ಮರಗಳಿಂದ ಹಣ್ಣುಗಳನ್ನು ತಂದು ಪ್ರೀತಿಯಿಂದ ಬಿಲ್ವವೃಕ್ಷದ ಬುಡದಲ್ಲಿರುವ ಲಿಂಗಕ್ಕೆ ನಿವೇದನವಾಗಿ ಕೊಡುವುವು. ಹುಲ್ಲನ್ನೂ ನೀರನ್ನೂ ಶಿವಲಿಂಗಕ್ಕೆ ಅರ್ಪಿಸಿ ತಾವು ಶಿವಸ್ಮರಣೆಯನ್ನು ಮಾಡುತ್ತ ಉಪಯೋಗಿಸುವುವು. ॥೪೧-೪೨॥

ಆ ಕಾಡಿನಲ್ಲಿ ನವಿಲು ಮುಂತಾದ ಹಕ್ಕಿಗಳೂ, ವಿಭೂತಿ ರುದ್ರಾಕ್ಷಿಗಳನ್ನು ಧರಿಸಿದ್ದುವು. ಅವುಗಳೆಲ್ಲವೂ ಕಾಡುಕಿಚ್ಚಿನಿಂದುಂಟಾದ ಬೂದಿಯಲ್ಲಿ ಹೊರಳಿ ಶಿವನನ್ನು ಧ್ಯಾನಿಸುತ್ತ ಶಿವಲಿಂಗ ದರ್ಶನವನ್ನು ಮಾಡುತ್ತಿದ್ದುವು. ॥೪೩-೪೪॥

ಆನೆ ಕುದುರೆಗಳಿಗೆ ಹಾಕುವ ಹುಲ್ಲೂ ವಿಭೂತಿಯ ಕಣಗಳಿಂದ ಕೂಡಿದ್ದುವು. ಅಲ್ಲಿಯ ಜನರು ವಿಭೂತಿಯ ಸಂಬಂಧವಿಲ್ಲದ ಅನ್ನವನ್ನೇ ತಿನ್ನುತ್ತಿರಲಿಲ್ಲ. ವಿಭೂತಿಯ ಸಂಬಂಧವುಳ್ಳ ಆಹಾರವನ್ನು ಶಿವನಿಗೆ ಸಮರ್ಪಿಸಿ, ಆನೆ ಕುದುರೆಗಳ ರಕ್ಷಕರು ಸಹ ಅವುಗಳಿಗೆ ಆಹಾರವಾಗಿ ಕೊಡುತ್ತಿದ್ದರು. ॥೪೫-೪೬॥

ತಸ್ಮಿನ್ರಾಷ್ಟ್ರೇ ಜನಃ ಕ್ವಾಪಿ ನ ಶಿವಾನರ್ಚಕೋ ನೃಪ ।
ಶಿವಾಲಯಾಶ್ಚ ಸರ್ವತ್ರ ಭಸ್ಮರಾಶಿವಿರಾಜಿತಾಃ ॥೪೭॥

ರುದ್ರಾಕ್ಷಮಾಲಾಸಂವೀತಾ ಲಿಂಗಸಂಮರ್ದಭಾಸ್ವರಾಃ ।
ಪ್ರತಿಸದ್ಮನಿ ಲಿಂಗಾನಿ ತುಂಗಾನಿ ವಿಮಲಾನ್ಯಪಿ ॥೪೮॥

ನಾರ್ಮದಾನಿ ವಿಚಿತ್ರಾಣಿ ಬಿಲ್ವವೃಕ್ಷಾಃ ಸಪಲ್ಲವಾಃ ।
ಶಿವಾರ್ಚಕಸಮಾಕೀರ್ಣಾಸ್ತದ್ದೇಶಾವಾಸಭೂಮಯಃ ॥೪೯॥

ಶಿವಶಂಕರವಿಶ್ವೇಶಮಹಾದೇವೇತಿವಾದಿನಃ ।
ಶಿವಾಚಾರರತಾ ಏವ ಸರ್ವೇ ತದ್ದೇಶವಾಸಿನಃ ॥೫೦॥

ಸರ್ವೇ ಶಿವಕಥಾಮೇವ ಶೃಣ್ವಂತಿ ವಿವಿಧೋತ್ಸವೈಃ ।
ಬಾಲಕಾಶ್ಚ ವಿಶೇಷೇಣ ಶಿವನಾಮಾಮೃತೋತ್ಸುಕಾಃ ॥೫೧॥

ಯೋಷಿತಾಮಪಿ ಸರ್ವಾಸಾಂ ಭಸ್ಮರುದ್ರಾಕ್ಷಭೂಷಣಂ ।
ರುದ್ರಾಕ್ಷರಹಿತಂ ತಾಸಾಂ ಕಂಠಸೂತ್ರಂ ನ ಸರ್ವಥಾ ॥೫೨॥

ಆ ರಾಜನ ರಾಜ್ಯದಲ್ಲಿ ಶಿವಪೂಜೆಯನ್ನು ಮಾಡದ ಮನುಜನೇ ಇರಲಿಲ್ಲ. ಎಲ್ಲೆಲ್ಲಿಯೂ ಶಿವಾಲಯಗಳು ಭಸ್ಮರಾಶಿಯಿಂದ ಕೂಡಿದ್ದುವು. ಪ್ರತಿಯೊಂದು ಮನೆಯಲ್ಲಿಯೂ ನಿರ್ಮಲವಾದ ಮತ್ತು ಎತ್ತರವಾದ ಶಿವಲಿಂಗಗಳಿರುತ್ತಿದ್ದುವು. ಪ್ರತಿಯೊಬ್ಬರೂ ರುದ್ರಾಕ್ಷ ಮಾಲೆಯನ್ನು ಧರಿಸಿ ಪ್ರಕಾಶಿಸುತ್ತಿದ್ದರು. ೪೭-೪೮||

ಆ ದೇಶದ ಭೂ ಪ್ರದೇಶಗಳು ನರ್ಮದಾಲಿಂಗಗಳಿಂದಲೂ, ಚಿಗುರಿದ ಬಿಲ್ವ ಪತ್ರೆಯ ಮರಗಳಿಂದಲೂ, ಶಿವಪೂಜೆಯನ್ನು ಮಾಡುವ ಜನರಿಂದಲೂ ತುಂಬಿದ್ದಿತು. ಆ ದೇಶವಾಸಿಗಳೆಲ್ಲರೂ ಶಿವಾಚಾರದಿಂದ ಕೂಡಿದವರಾಗಿ ಶಿವ, ಶಂಕರ, ವಿಶ್ವೇಶ್ವರ, ಮಹಾದೇವ ಎಂದು ಶಿವನಾಮಗಳನ್ನು ಹೇಳುತ್ತಿದ್ದರು. ||೪೯-೫೦||

ಆ ದೇಶದ ಜನರೆಲ್ಲರೂ ಬಗೆ ಬಗೆಯ ಶಿವೋತ್ಸವಗಳನ್ನು ಮಾಡಿ, ಶಿವಕಥೆಯನ್ನೇ ಕೇಳುವರು. ಹುಡುಗರು ವಿಶೇಷವಾದ ಉತ್ಸಾಹದಿಂದ ಶಿವನಾಮಾಮೃತದಲ್ಲಿ ಆಸಕ್ತರಾಗಿದ್ದರು. ಸಮಸ್ತ ಸ್ತ್ರೀಯರೂ ಭಸ್ಮರುದ್ರಾಕ್ಷಿಗಳನ್ನಲಂಕರಿಸಿಕೊಳ್ಳುತ್ತಿದ್ದರು. ಅವರಿಗೆ ರುದ್ರಾಕ್ಷಿಯಿಲ್ಲದ ಕಂಠಸೂತ್ರವಿರುತ್ತಿರಲಿಲ್ಲ. ಗೌರೀಪತಿ

ಮಂಗಳಾಪತಿರೂಪಸ್ಯ ರುದ್ರಾಕ್ಷಸ್ಯ ವಿಶೇಷತಃ ।
ನಿತ್ಯಂ ಮಂಗಳಸೂತ್ರೇಷು ಧಾರಣಂ ಮಂಗಳಾನ್ವಯಾತ್ ॥೫೩॥

ಅಮಂಗಳತ್ವಾನಿ ನಿರಾಕರೋತಿ
ರುದ್ರಾಕ್ಷವನ್ಮಂಗಳಸೂತ್ರಮೇತತ್ ।
ವಿಭೂತಿಯುಕ್ತಂ ಚ ವಿಭೂತಿದಂ ಸ್ಯಾ
ದತಃ ಪರಂ ಮಂಗಳಸೂತ್ರಮುಕ್ತಂ ॥೫೪॥

ಧಿಗ್ಧಿಗ್ಫಾಲಂ ಭಸ್ಮಹೀನಂ ವಿಹೀನಂ
ಧಿಗ್ಧಿಗ್ಗಾತ್ರಂ ಭಸ್ಮರುದ್ರಾಕ್ಷಹೀನಂ ।
ಧಿಗ್ಧಿಕ್ಚಿತ್ತಂ ಶಂಕರಧ್ಯಾನಶೂನ್ಯಂ
ಧಿಗ್ಧಿಗ್ಗೇಹಂ ಲಿಂಗಸಂಬಂಧಶೂನ್ಯಂ ॥೫೫॥

ಶಿವಶಬ್ದವಿಹೀನವಾಗ್ವಿಲಾಸೋ
ಧಿಗವಶ್ಯಂ ಧಿಗವಶ್ಯಮೇವ ಧಿಗ್ಧಿಕ್ ।
ಸ ಯತಃ ಪರಮಾಯುಷಕ್ಷಯೋ
ವಿನಿಯುಕ್ತಃ ಶಿವಶಬ್ದವರ್ಜಿತಃ ॥೫೬॥

ಸ್ವರೂಪವಾದ ರುದ್ರಾಕ್ಷಿಯು ಯಾವಾಗಲೂ ಮಂಗಳ ಸ್ವರೂಪವಾದುದೆಂದು ಅದನ್ನು ಮಂಗಳ ಸೂತ್ರದಲ್ಲಿ ಧರಿಸುತ್ತಿದ್ದರು. ||೫೧-೫೨-೫೩||

ರುದ್ರಾಕ್ಷಿಯಿಂದ ಕೂಡಿದ ಮಂಗಳ ಸೂತ್ರವು ಅಮಂಗಳವನ್ನು ಸಂಪೂರ್ಣವಾಗಿ ನಾಶಮಾಡುವುದು. ವಿಭೂತಿಯಿಂದ ಕೂಡಿದರೆ ಅದು ಸಂಪತ್ತನ್ನು ಕೊಡುವುದು. ಆದುದರಿಂದಲೇ ಅದಕ್ಕೆ ಮಂಗಳಸೂತ್ರವೆಂದು ಹೆಸರುಬಂದಿರುವುದು.||೫೪||

ಭಸ್ಮವನ್ನು ಧರಿಸದ ಅಮಂಗಳಕರವಾದ ಹಣೆಯನ್ನೂ, ಭಸ್ಮ ರುದ್ರಾಕ್ಷಿಯನ್ನು ಧರಿಸದ ಶರೀರವನ್ನೂ, ಶಿವನನ್ನು ಧ್ಯಾನಿಸದ ಮನಸ್ಸನ್ನೂ, ಲಿಂಗ ಸಂಬಂಧವಿಲ್ಲದ ಮನೆಯನ್ನೂ ನಿಂದಿಸಬೇಕು. ||೫೫||

ಶಿವನ ನಾಮಸಂಬಂಧವಿಲ್ಲದ ಮಾತುಗಳು ಮನುಷ್ಯನ ಆಯುಸ್ಸನ್ನು ನಾಶಮಾಡುವುವು. ಆದುದರಿಂದಲೇ ಶಿವನಾಮ ಸಂಬಂಧವಿಲ್ಲದ ಮಾತುಗಳನ್ನು ನಿಂದಿಸಬೇಕು. ||೫೬||

ಶ್ಲೋಕೇ ಯಸ್ಮಿನ್ನಾಮ ನಾಸ್ತ್ಯೇವ ಶಾರ್ವಂ
ಸೋಽಪಿ ಶ್ಲೋಕಃ ಕಿಂತು ಶೋಕಃ ಪರಂ ಸಃ ।
ಸರ್ವಂ ಶೋಕಂ ಹಂತಿ ಪಾಪಾನಿ ಶಾರ್ವಂ
ಯಸ್ಮಿನ್ ಶ್ಲೋಕೇ ನಾಮ ಸದ್ಯೋ ವಿಮುಕ್ತ್ಯೈ ॥೫೭॥

ಸಾ ವಾಣೀ ಖಲು ಪುಣ್ಯದಾನನಿಪುಣಾ ಯಾ ಶಂಭುನಾಮಾನ್ವಿತಾ
ಶಂಭೋ ಶಂಕರ ಚಂದ್ರಶೇಖರ ಮಹಾದೇವೇತಿ ಸಂವಾದಿನಃ ।
ಸರ್ವೇ ತತ್ಪುರವಾಸಿನೋಽಪಿ ಸುತರಾಂ ತದ್ದೇಶಸಂವಾಸಿನ
ಸ್ತನ್ನಾಮ ಧ್ವನಿಪೂರಿತಂ ಜಗದಭೂತ್ಸರ್ವಂ ಸದಾ ಭೂಪತೇ ॥೫೮॥

ತಂ ಭೂಪಾಲಮಣಿಂ ವದಂತಿ ಮುನಯಸ್ತೇ ಶಂಕರಾರಾಧಕಂ
ತಂ ದೃಷ್ಟ್ವಾ ಪ್ರಣಮಂತಿ ಸೋಽಯಮಮರಃ ಕೋಽಪೀತಿ ಪುಣ್ಯಾಂಬುಧಿಂ ।
ಕೇಚಿತ್ತಂ ಪ್ರವದಂತಿ ಶಂಕರರತಂ ದೃಷ್ಟ್ವಾ ಪ್ರಹೃಷ್ಟಾಃ ಪರಂ
ದೃಷ್ಟಃ ಕಷ್ಟವಿನಾಶಕೋಽಪಿ ಸತತಂ ಶಿಷ್ಟೋ ಗರಿಷ್ಠೋಽಪಿ ಸಃ ॥೫೯॥

ಯಾವ ಶ್ಲೋಕದಲ್ಲಿ ಶಿವನ ನಾಮವಿರುವುದಿಲ್ಲವೋ, ಅದು ಶ್ಲೋಕವಲ್ಲ. ಶೋಕವೆನಿಸುವುದು. ಯಾವ ಶ್ಲೋಕದಲ್ಲಿ ಶಿವನಾಮವಿರುವುದೋ ಅದು ಸಮಸ್ತ ದುಃಖಗಳನ್ನೂ ಪಾಪಗಳನ್ನೂ ನಾಶಮಾಡಿ ಶಾಶ್ವತವಾದ ಮುಕ್ತಿಯನ್ನು ಕೊಡುವುದು. ॥೫೭॥

ಶಿವನ ನಾಮದಿಂದ ಕೂಡಿದ ಮಾತೇ ಪುಣ್ಯರಾಶಿಯನ್ನು ಕೊಡತಕ್ಕುದು. ಆ ರಾಜನ ಪಟ್ಟಣದಲ್ಲಿರುವವರೆಲ್ಲರೂ ಶಂಭೋ, ಶಂಕರ, ಚಂದ್ರಶೇಖರ, ಮಹಾದೇವ ಇತ್ಯಾದಿಯಾದ ಶಿವನ ನಾಮಗಳನ್ನೇ ಹೇಳುತ್ತ ಮಾತನಾಡುತ್ತಿದ್ದುದರಿಂದ ಆ ರಾಜನ ರಾಜ್ಯವೆಲ್ಲವೂ ಶಿವನಾಮ ಧ್ವನಿಯಿಂದಲೇ ತುಂಬಿದ್ದಿತು. ॥೫೮॥

ಋಷಿಗಳು ಶಿವನ ಪೂಜೆಯನ್ನು ಮಾಡುವ ಆ ರಾಜಶ್ರೇಷ್ಠನನ್ನು ನೋಡಿ, ಪುಣ್ಯ ಸ್ವರೂಪನಾದ ಇವನು ಯಾವನೋ ಒಬ್ಬ ದೇವನಿರಬೇಕೆಂದು ಹೇಳುವರು. ಕೆಲವರು ಅವನಿಗೆ ನಮಸ್ಕಾರ ಮಾಡುವರು. ಕೆಲವರು ಅವನನ್ನು ನೋಡಿ ಅತ್ಯಂತ ಸಂತೋಷದಿಂದ ಧರ್ಮಕಾರ್ಯಾಸಕ್ತನೂ, ಪ್ರಾಣಿಗಳ ಕಷ್ಟವನ್ನು ನಾಶಮಾಡತಕ್ಕವನೂ, ಶಿವನಲ್ಲಿ ಅತ್ಯಂತಾಸಕ್ತನಾದ ಭಕ್ತನೂ ಆಗಿರುವನೆಂದು ಹೇಳುವರು. ॥೫೯॥

ತದ್ವೇಶ್ಮನ್ಯಮರಾಂಗನಾಃ ಪ್ರತಿದಿನಂ ಗತ್ವಾ ತದೀಯಾಂಗನಾಃ
ಸರ್ವಾರಾಧನತತ್ಪರಾಃ ಸಿತಲಸದ್ಭೂತಿತ್ರಿಪುಂಡ್ರಾಂಕಿತಾಃ ।
ರುದ್ರಾಕ್ಷಾಭರಣಾಃ ಸಮೀಕ್ಷ್ಯ ವಿನತಾಸ್ತತ್ಪಾದಪದ್ಮಾನ್ಯಮೀ
ಧನ್ಯಾ ಇತ್ಯಪಿ ತಾಭಿರೀಶ್ವರಕಥಾಃ ಶೃಣ್ವಂತಿ ನೃತ್ಯಂತಿ ಚ ॥೬೦॥

ಶಂಭೋ ಭರ್ಗ ಭವೇತಿ ಗಾಯನಮಪಿ ಶ್ರುತ್ವೈವ ತಾಭ್ಯೋ ಮುಹು
ಸ್ತದ್ಗಾನಾಭ್ಯಸನೇನ ಸಾದರಮುಮಾಕಾಂತಾರ್ಚನಾಲೋಕನೈಃ ।
ನೀತ್ವಾ ಕಾಲಮುಮಾಪತಿಂ ಹೃದಿ ಮುಹುರ್ಧ್ಯಾತ್ವಾ ಪ್ರಯಾಂತ್ಯನ್ವಹಂ
ಗತ್ವಾ ತಾಃ ಪುನರಾದರೇಣ ಗಮನೋದ್ಯುಕ್ತಾಃ ಸುರಪ್ರೇಷಿತಾಃ ॥೬೧॥

ತಸ್ಮಿಂಛಾಸತಿ ಭೂಪಾಲೇ ಭೂಲೋಕೇ ಸುರಸಂಶ್ರಿತೇ ।
ಅಶಾಂಭವಕಥಾ ವಾರ್ತಾ ನ ವೃತ್ತಾ ಸರ್ವಥಾ ನೃಪ ॥೬೨॥

ಪ್ರತಿದಿನವೂ ದೇವಸ್ತ್ರೀಯರು ಆ ರಾಜನ ಮನೆಗೆ ಹೋಗಿ, ಆ ರಾಜಪತ್ನಿಯರೆಲ್ಲರೂ ವಿಭೂತಿಯ ತ್ರಿಪುಂಡ್ರವನ್ನೂ, ರುದ್ರಾಕ್ಷಿಯ ಆಭರಣಗಳನ್ನೂ ಧರಿಸಿರುವುದನ್ನು ನೋಡಿ ಅವರಿಗೆ ನಮಸ್ಕಾರಮಾಡಿ ಅವರು ಹೇಳುವ ಶಿವನ ಕಥೆಯನ್ನು ಕೇಳಿ ನರ್ತನ ಮಾಡುತ್ತಾ ಆನಂದ ತುಂದಿಲರಾಗುವರು. ॥೬೦॥

ಆ ದೇವಸ್ತ್ರೀಯರು, ಶಂಭೋ, ಭರ್ಗ, ಭವ, ಎಂಬುದಾಗಿ ಗಾನ ಮಾಡುತ್ತಿರುವ ರಾಜಪತ್ನಿಯರ ಗಾನವನ್ನು ಕೇಳಿ, ತಾವೂ ಅದನ್ನು ಅಭ್ಯಾಸಮಾಡುತ್ತ, ಪ್ರೀತಿಯಿಂದ ಶಿವಪೂಜೆಯನ್ನು ನೋಡುತ್ತ ಕಾಲವನ್ನು ಕಳೆದು, ತಮ್ಮ ಮನಸ್ಸಿನಲ್ಲಿ ಶಿವನನ್ನು ಧ್ಯಾನಿಸುತ್ತ ಸ್ವರ್ಗಕ್ಕೆ ಹೋಗುವರು. ಮತ್ತೆ ದೇವತೆಗಳು ಅವರನ್ನು ಕಳುಹಿಸಲು ಅಲ್ಲಿಗೆ ಬರುವರು. ಹೀಗೆ ಪ್ರತಿದಿನವೂ ದೇವಸ್ತ್ರೀಯರು ರಾಜನ ಮನೆಗೆ ಬಂದು ಹೋಗುತ್ತಿರುವರು. ॥೬೧॥

ಎಲೈ ರಾಜನೇ, ಆ ಚಿತ್ರಕೇತುವು, ರಾಜನಾಗಿ ರಾಜ್ಯವಾಳುತ್ತಿರುವಾಗ, ದೇವತೆಗಳೆಲ್ಲರೂ ಭೂಲೋಕವನ್ನೇ ಆಶ್ರಯಿಸಿದರು. ಆಗ ಭೂಲೋಕದಲ್ಲಿ ಶಿವನ ಕಥೆಯನ್ನು ಬಿಟ್ಟು ಮತ್ತೊಂದು ಕಥೆಯು ಆ ದೇಶದಲ್ಲಿ ಪ್ರಚಾರದಲ್ಲಿರಲಿಲ್ಲ. ॥೬೨॥

ದುರ್ಭಿಕ್ಷಾದಿಭಯಂ ನ ತಸ್ಯ ನಗರೇ ದೇಶೇಽಪಿ ವಾ ಸರ್ವದಾ
ಸರ್ವಂ ಭೂತಲಮುಜ್ಜ್ವಲಾಖಿಲಫಲಂ ಪುಷ್ಪೈಃ ಫಲೈಶ್ಚಾನ್ವಿತಾಃ ।
ತದ್ದೇಶೇತರತಸ್ಸದಾ ಸ್ವಸಮಯಾಪೇಕ್ಷಾ ನ ತೇಷಾಂ ಕದಾ
ಖ್ಯಾತಿರ್ನೈರ್ವ ಜನಸ್ಯ ಕೀರ್ತಿಸಹಿತಃ ಸರ್ವೋಽಪಿ ಶೈವೋ ಜನಃ ॥೬೩॥

ಯದಾ ಯದಾ ವೃಷ್ಟಿರಪೇಕ್ಷಿತಾ ತದಾ
ವೃಷ್ಟಿರ್ಭವತ್ಯೇವ ವಿಲಕ್ಷಣಾ ಸಾ ।
ನಾತ್ಯಾತಪೋ ನಾತಿಹಿಮಂ ಚ ತಸ್ಮಿ
ನ್ರಾಜ್ಯೇ ನೃಪೇ ಶಾಂಭವಪುಂಗವೇಸ್ಮಿನ್ ॥೬೪॥

ಗವಾಂ ತೃಣಾಂಬೂತನಮೇವ ತಸ್ಮಿ
ನ್ರಾಷ್ಟ್ರೇ ಶಿವಾಚಾರರತೇಽಪಿ ಭೂಪೇ ।
ಸದಾ ಬಹುಕ್ಷೀರದುಘಾಶ್ಚ ಗಾವೋ
ವತ್ಸಾಃ ಪ್ರವೃದ್ಧಾಃ ಪಯಸಾ ಪರಂ ತೇ ॥೬೫॥

ಆ ರಾಜನ ಪಟ್ಟಣದಲ್ಲಿ, ಯಾವಾಗಲೂ ದುರ್ಭಿಕ್ಷಾದಿಗಳ ಭಯವಿರಲಿಲ್ಲ. ಭೂಮಿಯೆಲ್ಲವೂ ಸಂಪೂರ್ಣವಾಗಿ ಫಲಪುಷ್ಪ ಸಮೃದ್ಧಿಯಿಂದ ಕೂಡಿದ್ದಿತು. ಅವನ ದೇಶದ ಮರಗಳಲ್ಲಿ ಹಣ್ಣುಗಳಿರಬೇಕಾದರೆ ಕಾಲ ನಿಯಮವೇ ಇರಲಿಲ್ಲ. ಹಣ್ಣುಗಳಿಲ್ಲದ ಕಾಲವೇ ಇರಲಿಲ್ಲ. ಜನರೆಲ್ಲರೂ ಶಿವಭಕ್ತಿಯುಕ್ತರಾಗಿ ಯಶಸ್ವಿಗಳಾಗಿದ್ದರು. ॥೬೩॥

ಪರಶಿವಭಕ್ತಶ್ರೇಷ್ಠನಾದ ರಾಜನು, ಆ ರಾಜ್ಯದಲ್ಲಿ ದೊರೆಯಾಗಿರಲು ಜನರು ಅಪೇಕ್ಷಿಸಿದಾಗ ಮಳೆಯಾಗುತ್ತಿತ್ತು. ಹಿಮವಾಗಲಿ ಬಿಸಿಲಾಗಲಿ ಆ ದೇಶದಲ್ಲಿ ಎಂದೂ ಅತಿ ಹೆಚ್ಚಾಗುತ್ತಿರಲಿಲ್ಲ. ॥೬೪॥

ಶಿವಾಚಾರದಲ್ಲಾಸಕ್ತನಾದ ಆ ರಾಜನ ರಾಜ್ಯದಲ್ಲಿ ಹಸುಗಳಿಗೆ ಹುಲ್ಲು, ನೀರು, ಸಮೃದ್ಧಿಯಾಗಿದ್ದಿತು. ಗೋವುಗಳು ಹೆಚ್ಚಾಗಿ ಹಾಲು ಕರೆಯುತ್ತಿದ್ದುವು. ಕರುಗಳು ಹಾಲಿನಿಂದಲೇ ಬೆಳೆಯುತ್ತಿದ್ದುವು. ॥೬೫॥

ಗವಾಂ ನಿರೋಧೋಽಪಿ ವನೇ ನ ತಾಸಾಂ
ನ ವ್ಯಾಘ್ರಜಾ ಭೀತಿರಘಾತುಕಾಸ್ತೇ ।
ವ್ಯಾಘ್ರಾದಯಃ ಶಾಂಭವಪುಂಗವೇನ
ಸಂರಕ್ಷಿತಾ ಭೂರಿತಿ ಸರ್ವದಾಪಿ ॥೬೬॥

ಗಾವಶ್ಚರಂತಿ ನವಘಾಸಚರಾರ್ಥಮೇವ
ರಮ್ಯೇ ವನೇ ವನವನಾರ್ಥಮಪಿ ಪ್ರವೃತ್ತಾಃ ।
ದೃಷ್ಟ್ವೈವ ಬಿಲ್ವತರುಮೂಲಗತಾನಿ ಲಿಂಗಾ
ನ್ಯಾಲಿಂಗ್ಯ ಲಿಂಗಜಲಮೇವ ಪಿಬಂತಿ ಧನ್ಯಾಃ ॥೬೭॥

ಕ್ಷೀರಪ್ರಸ್ರವಣೇನ ಬಿಲ್ವನಿಲಯಂ ಲಿಂಗಂ ಸಮಭ್ಯರ್ಚ್ಯ ಗಾಃ
ಸ್ಥಿತ್ವಾ ಶಂಕರಶಂಕರೇತಿ ಚ ಮುಹುರ್ವತ್ಸೋತ್ಸನಾಕಾರಣಂ ।
ಶ್ರುತ್ವಾ ಗೌರಿ ಶಿವೇಶಿವೇತಿ ಚ ವಚಃ ಶ್ರುತ್ವಾ ಪ್ರಯಾಂತ್ಯಾದರಾ
ದ್ಗೋಪಾಲೈರಭಿನಂದಿತಾಃ ಪ್ರತಿದಿನಂ ಪುಷ್ಟಾಸ್ತೃಣಗ್ರಾಸತಃ ॥೬೮॥

ಅವನ ರಾಜ್ಯದಲ್ಲಿ ಗೋವುಗಳನ್ನು ಕಟ್ಟಿಹಾಕುತ್ತಿರಲಿಲ್ಲ. ಕಾಡಿನಲ್ಲಿಯೂ ಹುಲಿ ಮುಂತಾದ ದುಷ್ಟಪ್ರಾಣಿಗಳ ಭಯವು ಅವುಗಳಿಗಿರಲಿಲ್ಲ. ಶಿವಭಕ್ತಶ್ರೇಷ್ಠನಾದ ರಾಜನು ಆ ರೀತಿ ದುಷ್ಟಪ್ರಾಣಿಗಳನ್ನು ಸಾಕಿ ಸಾಧುಗಳನ್ನಾಗಿ ಮಾಡಿದ್ದನು. ॥೬೬॥

ಹಸುಗಳು ಹೊಸದಾಗಿ ಬೆಳೆದ ಹುಲ್ಲನ್ನು ಮೇಯುವುದಕ್ಕಾಗಿಯೇ, ವನದಿಂದ ವನಕ್ಕೆ ಹೋಗುತ್ತಿದ್ದುವು. ಅವು ಬಿಲ್ವಪತ್ರೆಯ ಗಿಡದ ಬುಡದಲ್ಲಿರುವ ಲಿಂಗವನ್ನು ಕಂಡು, ಆ ಲಿಂಗಕ್ಕೆ ಜನರು ಅಭಿಷೇಕಮಾಡಿದ ನೀರನ್ನೇ ಕುಡಿಯುವುವು. ಅವೇ ಕೃತಾರ್ಥವಾದವುಗಳಲ್ಲವೆ! ॥೬೭॥

ಗೋವುಗಳು ಹಾಲನ್ನು ಸುರಿಸಿ ಬಿಲ್ವವೃಕ್ಷದ ಬುಡದಲ್ಲಿರುವ ಶಿವಲಿಂಗವನ್ನು ಪೂಜಿಸಿ, ಶಿವಧ್ಯಾನಮಾಡುತ್ತಾ ನಿಂತಿದ್ದು, ಕರುಗಳು ಕೂಗಿದ ಧ್ವನಿಯನ್ನೂ, ಗೋಪಾಲರು ಗೌರಿ, ಶಿವೇ, ಶಿವೇ ಎಂದು ಕೂಗಿದ ಕರೆಯನ್ನೂ ಕೇಳಿ ಪ್ರೀತಿಯಿಂದ ಹುಲ್ಲನ್ನು ಮೇದು ಪುಷ್ಟಿಯಾಗಿ ಪ್ರತಿದಿನವೂ ಮನೆಗೆ ಬರುತ್ತಿದ್ದುವು. ॥೬೮॥

ಪುಂವ್ಯಕ್ತಿಷ್ವಖಿಲೇಷು ಶಂಕರ ಮಹಾದೇವೇತಿ ನಾಮಾದರಾ
ಸ್ತ್ರೀವ್ಯಕ್ತಿಷ್ವಖಿಲಾಸು ಗೌರಿಗಿರಿಜೇ ಕಾಳೀತಿ ನಾಮಾದರಾಃ ।
ತದ್ದೇಶೇ ಶಿವನಾಮಚಿಹ್ನಿತಮಭೂತ್ಸರ್ವಂ ಸದಾ ಭೂಪತಿ
ರ್ಯಸ್ಮಾಚ್ಛಾಂಭವ ಏವ ತೇನ ಸುಕೃತಾಂಭೋಧಿಃ ಪ್ರವೃದ್ಧೋ ಮುಹುಃ ॥೬೯॥

ಚರಂತ್ಯರಣ್ಯೇಷು ವನೇಷು ನಿರ್ಭಯಾ
ಶ್ಚೋರಾದಯಸ್ತತ್ರ ನ ಸಂಶ್ರುತಾಶ್ಚ ।
ವ್ಯಾಘ್ರಾದಯೋ ಘಾತುಕಜಂತವೋಽಪಿ
ವ್ಯಕ್ತಂ ಮುನೀನಾಂ ಸಮುಪಾಶ್ರಿತಾಸ್ತೇ ॥೭೦॥

ತಸ್ಮಿಂಛಾಸತಿ ಭೂಪಾಲೇ ಭೂಲೋಕೇ ಮರಣಾನ್ಯಪಿ ।
ಭವಂತಿ ಸ್ವೇಚ್ಛಯಾ ತತ್ರ ನ ಮೃತ್ಯುಗಮನಂ ಖಲು ॥೭೧॥

ಮರಣಾನಂತರಂ ಭೂಪ ಸರ್ವೇ ತದ್ದೇಶವಾಸಿನಃ ।
ಪುಷ್ಪಕಾಣಿ ಸಮಾರುಹ್ಯ ಪ್ರಯಾಂತಿ ಶಿವಮಂದಿರಂ ॥೭೨॥

ಆ ದೇಶದಲ್ಲಿ ಪುರುಷರಿಗೆಲ್ಲ ಶಂಕರ, ಮಹಾದೇವ ಇತ್ಯಾದಿಯಾಗಿಯೂ ಸ್ತ್ರೀಯರಿಗೆಲ್ಲ ಗೌರಿ, ಗಿರಿಜೆ, ಕಾಳಿ ಇತ್ಯಾದಿಯಾಗಿಯೂ ಹೆಸರುಗಳು ಕೇಳಿಬರುತ್ತಿದ್ದುವು. ಸಮಸ್ತ ಪದಾರ್ಥಗಳಿಗೂ ಶಿವನ ಒಂದೊಂದು ಹೆಸರನ್ನೇ ಗುರುತಾಗಿಡುತ್ತಿದ್ದರು. ಹೀಗೆ ಶಿವಭಕ್ತನಾದ ಆ ರಾಜನು ಪುಣ್ಯಸಮುದ್ರದಂತೆ ಅಭಿವೃದ್ಧಿಯಾಗುತ್ತಿದ್ದನು. ॥೬೯॥

ಜನರು ವನದಲ್ಲಾಗಲಿ, ಕಾಡಿನಲ್ಲಾಗಲಿ ಭಯವಿಲ್ಲದೆ ತಿರುಗುತ್ತಿದ್ದರು. ಆ ದೇಶದಲ್ಲಿ ಕಳ್ಳರು ಮುಂತಾದ ದುಷ್ಟಜನರೇ ಇರಲಿಲ್ಲ. ಹುಲಿ ಮುಂತಾದ ಕ್ರೂರಮೃಗಗಳೂ ಋಷಿಗಳಂತೆ ಜೀವಿಸುತ್ತಿದ್ದುವು. ॥೭೦॥

ಆ ರಾಜನು ರಾಜ್ಯವಾಳುತ್ತಿರುವಾಗ ಭೂಲೋಕದಲ್ಲಿ ಜನರಿಗೆ ಅಕಾಲ ಮೃತ್ಯುವಿನಿಂದ ಮರಣವುಂಟಾಗುತ್ತಿರಲಿಲ್ಲ. ಅವರಿಗಿಷ್ಟಬಂದಾಗ ಮರಣಹೊಂದುತ್ತಿದ್ದರು. ಆ ದೇಶದಲ್ಲಿರುವವರೆಲ್ಲರೂ ಮರಣಹೊಂದಿದ ಮೇಲೆ ಪುಷ್ಪಕವಿಮಾನವನ್ನೇರಿ ಶಿವಲೋಕಕ್ಕೆ ಹೋಗುತ್ತಿದ್ದರು. ॥೭೧-೭೨॥

ಸಶರೀರಾಃ ಪ್ರಯಾಂತ್ಯನ್ಯೇ ತ್ಯಕ್ತ್ವಾ ಕೇಚಿತ್ತನುಂ ಮುದಾ ।
ಶರೀರಾಂತರಮಾರುಹ್ಯ ಭೂತಿರುದ್ರಾಕ್ಷಭೂಷಿತಂ ॥೭೩॥

ರುದ್ರಾಕ್ಷಭೂತಿಸಮಲಂಕೃತದಿವ್ಯದೇಹಾಃ
ಶಂಭೋ ಮಹೇಶ ಶಿವ ಇತ್ಯಭಿಲಾಪನೇನ ।
ಆರುಹ್ಯ ಪುಷ್ಪಕವರಂ ಗಿರಿಶಂ ಪ್ರಯಾಂತಿ
ತೂರ್ಯಾಣಿ ತಾವದಭಿತೋಪ್ಯನುಭೂಯ ತೋಷಾತ್ ॥೭೪॥

ಕೈಲಾಸಮಾರ್ಗಗಮನೇ ಶಿವಪೂಜನಸ್ಯ
ಕಾಲೇ ಸ್ವಭಾವನಿಯಮೇನ ಶಿವಾರ್ಚನಾನಿ ।
ಮಂದಾರಮೂಲನಿಲಯೇಷು ಮನೋಹರೇಷು
ಕುರ್ವಂತಿ ಪುಷ್ಪನವಬಿಲ್ವದಳಾದಿಭಿಸ್ತೇ ॥೭೫॥

ಸರ್ವೇ ಕಲ್ಪತರುಪ್ರಭೂತಕುಸುಮೈಃ ಪಕ್ವೈಃ ಫಲೈರ್ನಿರ್ಮಲೈಃ
ಶುದ್ಧೈರ್ದೇವನದೀಜಲೈರಪಿ ಮುಹುರ್ಲಿಂಗಾರ್ಚನಂ ಸಾದರಂ ।
ಕೃತ್ವಾ ಸ್ವಾದು ಶಿವೋಪಹಾರಮಸಕೃದ್ಭುಕ್ತ್ವಾ ಸ್ಮರಂತಃ ಶಿವಂ
ದೃಷ್ಟ್ವಾ ನೃತ್ಯಮಪಿ ಪ್ರಯಾಂತಿ ಶಿವ ಮಾಂ ಪಾಹೀತಿ ಸಂವಾದಿನಃ ॥೭೬॥

ಶಿವಲೋಕಕ್ಕೆ ಹೋಗುವಾಗ ಕೆಲವರು ಶರೀರಸಹಿತವಾಗಿಯೂ ಮತ್ತೆ ಕೆಲವರು ಈ ಶರೀರವನ್ನು ಸಂತೋಷದಿಂದ ಇಲ್ಲಿಯೇ ಬಿಟ್ಟು ವಿಭೂತಿರುದ್ರಾಕ್ಷಿಗಳಿಂದ ಅಲಂಕೃತವಾದ ಮತ್ತೊಂದು ಶರೀರವನ್ನು ಹೊಂದಿಯೂ ಹೋಗುತ್ತಿದ್ದರು. ॥೭೩॥

ಶಿವಭಕ್ತರಾಗಿದ್ದ ಜನರು ವಿಭೂತಿರುದ್ರಾಕ್ಷಿಗಳನ್ನಲಂಕರಿಸಿದ ದಿವ್ಯದೇಹವುಳ್ಳವರಾಗಿ, ಶಿವನಾಮಗಳನ್ನು ಹೇಳುತ್ತ ಉತ್ತಮವಾದ ಪುಷ್ಪಕವಿಮಾನವನ್ನೇರಿ ಸುತ್ತಲೂ ವಾದ್ಯಗಳ ಧ್ವನಿಯಾಗುತ್ತಿರಲು ಶಿವನ ಸಮೀಪಕ್ಕೆ ಹೋಗುವರು. ॥೭೪॥

ಅವರು ಕೈಲಾಸಕ್ಕೆ ಹೋಗುವ ಮಾರ್ಗದಲ್ಲಿಯೇ ಶಿವಪೂಜೆಯ ಕಾಲವು ಪ್ರಾಪ್ತವಾದರೆ, ಸ್ವಾಭಾವಿಕವಾದ ನಿಯಮದಿಂದ ಮನೋಹರವಾದ ಮಂದಾರವೆಂಬ ಕಲ್ಪವೃಕ್ಷದ ಬುಡದಲ್ಲಿ ಹೂಗಳಿಂದಲೂ, ಹೊಸದಾದ ಬಿಲ್ವಪತ್ರೆಯ ದಳಗಳಿಂದಲೂ ಶಿವಪೂಜೆಯನ್ನು ನಡೆಸುವರು. ॥೭೫॥

ಶಿವಲೋಕಕ್ಕೆ ಹೋಗುವ ಮಾರ್ಗದಲ್ಲಿ ಎಲ್ಲರೂ ಕಲ್ಪವೃಕ್ಷದ ಹೂಗಳಿಂದಲೂ ಹಣ್ಣುಗಳಿಂದಲೂ ಪರಿಶುದ್ಧವಾದ ದೇವಲೋಕದ ನದಿಯ ನೀರಿನಿಂದಲೂ, ಪ್ರೀತಿ

ಕೈಲಾಸಮಾರ್ಗಗಮನೇ ಪಥಿ ಪುಷ್ಪಶಯ್ಯಾ
ಕಲ್ಪದ್ರುಮಾಮಲತಲೇಷು ಸುಧಾಪ್ರವಾಹಃ ।
ಪಕ್ವಾನಿ ತಾನ್ಯಪಿ ಫಲಾನಿ ಮನೋಹರಾಣಿ
ಪುಷ್ಪಾಣಿ ನೀರಲಲಿತಾನಿ ಶಿವೋತ್ಸವಾನಾಂ ॥೭೭॥

ಪುಷ್ಪಾಸಾರಾಶ್ಚಾರುಕೈಲಾಸಮಾರ್ಗೇ
ವೀಣಾನಾದಾಃ ಶಂಕರಾರಾಧಕಾಶ್ಚ ।
ಮಧ್ಯೇ ಮಧ್ಯೇ ರತ್ನನೀರಾಜನಾನಿ
ಹರ್ಮ್ಯಂ ರಮ್ಯಂ ಪುಷ್ಪಶಯ್ಯಾಸಮೇತಂ ॥೭೮॥

ಚಾಮೀಕರಾತಿರುಚಿರೋನ್ನತಚಾಮರೌಘೈ
ಸ್ತೇವೀಜಿತಾಃ ಪಥಿ ಗಣಾಧಿಪಮಂದಿರೇಷು ।
ಮುಕ್ತಾಕಲಾಪರುಚಿರೇಷು ಮನೋಹರೇಷು
ವಿಶ್ರಮ್ಯ ಯಾಂತಿ ಶಿವಮಂದಿರಮೀಶಭಕ್ತಾಃ ॥೭೯॥

ಯಿಂದ ಲಿಂಗಪೂಜೆಯನ್ನು ಮಾಡಿ, ಶಿವನಿಗೆ ನಿವೇದನಮಾಡಿದುದನ್ನು ತಾವು ಭುಜಿಸಿ, ಶಿವನನ್ನು ಧ್ಯಾನಿಸುತ್ತ, ನರ್ತನವನ್ನು ನೋಡುತ್ತ, ಶಿವನೇ, ನನ್ನನ್ನು ರಕ್ಷಿಸು ಎಂದು ಹೇಳುತ್ತ ಹೋಗುತ್ತಿರುವರು. ॥೭೬॥

ಕೈಲಾಸಕ್ಕೆ ಹೋಗುವ ಮಾರ್ಗದಲ್ಲಿ ಈ ಭಕ್ತರಿಗೆ ಶಿವಪೂಜಾರೂಪವಾದ ಉತ್ಸವಗಳಿಗೆ ಅನುಕೂಲವಾದ ಕಲ್ಪವೃಕ್ಷಗಳ ನಿರ್ಮಲವಾದ ನೆರಳಿನಲ್ಲಿ, ಹೂವಿನ ಹಾಸಿಗೆಯೂ, ಅಮೃತದ ಪ್ರವಾಹವೂ, ಮನೋಹರವಾದ ಮಾಗಿದ ಹಣ್ಣುಗಳೂ, ಹೂಗಳೂ, ತಿಳಿಯಾದ ನೀರೂ ಸಿದ್ಧವಾಗಿರುವುವು. ॥೭೭॥

ಮನೋಹರವಾದ ಕೈಲಾಸಪರ್ವತದ ಮಾರ್ಗದಲ್ಲಿ ಭಕ್ತರಮೇಲೆ ಹೂವಿನ ಮಳೆಯು ಸುರಿಯುತ್ತಿದ್ದಿತು. ವೀಣೆಯ ಧ್ವನಿಯು ಕೇಳಿಬರುತ್ತಿದ್ದಿತು. ಶಿವಪೂಜೆಯನ್ನು ಮಾಡುವವರ ಸಹವಾಸವೂ, ರತ್ನದಾರತಿಗಳೂ, ಹೂವಿನ ಹಾಸಿಗೆಯಿಂದ ಕೂಡಿದ ಸುಂದರವಾದ ಉಪ್ಪರಿಗೆಯೂ ಅಲ್ಲಲ್ಲಿ ದೊರೆಯುತ್ತಿದ್ದುವು. ॥೭೮॥

ಈಶ್ವರನ ಭಕ್ತರು ಕೈಲಾಸಕ್ಕೆ ಹೋಗುವ ದಾರಿಯಲ್ಲಿ, ಗಣಾಧಿಪರ ಮುತ್ತಿನ ಅಲಂಕಾರದ ಮತ್ತು ಕಾಂತಿಯುಕ್ತವಾದ ಮನೆಗಳಲ್ಲಿ, ಚಿನ್ನದ ಹಿಡಿ

ನಾರಾಯಣಾದಿಸುರಬೃಂದಗಣಪ್ರಣಾಮಾನ್
ದೃಷ್ಟ್ವಾ ಕರಾಭಿನಯನೇನ ಪರಂ ಗೃಹೀತ್ವಾ
ತೈಃ ಸಂಸ್ತುತಾಶ್ಚ ಮುಹುರುನ್ನತಕಂಧರಾಸ್ತಾನ್
ದೃಷ್ಟ್ವಾ ಪ್ರಯಾಂತಿ ಶಿವಮಂದಿರಮೀಶಭಕ್ತಾಃ ॥೮೦॥

ಧನ್ಯಾಃ ಪ್ರಯಾಂತಿ ಶಿವಮಂದಿರಮಂಬುಜಾಕ್ಷಿ
ಪದ್ಮೇ ವಿಲೋಕಯ ವಿಲೋಕಯ ತಾನಪೀತಿ ।
ನಾರಾಯಣಸ್ಯ ವಚನೇಷ್ವಪಿ ಸಾದರಾಸ್ತೇ
ಶ್ರುತ್ವಾ ಪ್ರಯಾಂತಿ ಶಿವಮಂದಿರಮೀಶಭಕ್ತಾಃ ॥೮೧॥

ರುದ್ರಾಕ್ಷಭೂಷಣವಿಭೂಷಿತದಿವ್ಯದೇಹಾ
ಸ್ತೇ ಯಾಂತಿ ಶಂಕರಪದಂ ಕಮಲೇ ಪ್ರಪಶ್ಯ ।
ಪಶ್ಯೇತಿ ವಿಷ್ಣುವಚನೇಷ್ವಪಿ ಸಾದರಾಸ್ತೇ
ಶ್ರುತ್ವಾ ಪ್ರಯಾಂತಿ ಶಿವಮಂದಿರಮೀಶಭಕ್ತಾಃ ॥೮೨॥

ಯನ್ನು ಹಾಕಿದ ಚಾಮರಗಳಿಂದ ಬೀಸುವ ಅವರ ಉಪಚಾರಗಳಿಂದ ವಿಶ್ರಾಂತಿಯನ್ನು ಪಡೆದು, ಶಿವನ ಮನೆಗೆ ಹೋಗುವರು. ॥೭೯॥

ಈಶ್ವರನ ಭಕ್ತರು ಕೈಲಾಸದ ಶಿವಾಲಯಕ್ಕೆ ಹೋಗುವಾಗ ನಾರಾಯಣನೇ ಮೊದಲಾದ ದೇವತೆಗಳು ಮಾಡುವ ನಮಸ್ಕಾರಗಳನ್ನು ಕಂಡು, ಪ್ರತಿ ನಮಸ್ಕಾರಗಳಿಂದ ಅವುಗಳನ್ನು ಸ್ವೀಕರಿಸಿ, ಅವರ ಸ್ತೋತ್ರವನ್ನು ಕೇಳಿ, ಪುನಃ ಅವರು ಕುತ್ತಿಗೆಯನ್ನೆತ್ತಿ ನೋಡುತ್ತಿರುವಾಗಲೇ ಮುಂದಕ್ಕೆ ಹೋಗುತ್ತಿರುವರು. ॥೮೦॥

ಕಮಲಾಕ್ಷಿಯಾದ ಲಕ್ಷ್ಮಿಯೇ, ಪುಣ್ಯವಂತರಾದ ಈಶ್ವರನ ಭಕ್ತರು ಕೃತಾರ್ಥರಾಗಿ ಶಿವನ ಮನೆಗೆ ಹೋಗುವುದನ್ನು ನೋಡು, ಎಂದು ನಾರಾಯಣನು ಹೇಳುತ್ತಿರಲು, ಅವನ ಮಾತನ್ನು ಕೇಳುತ್ತಲೇ ಆ ಈಶ್ವರನ ಭಕ್ತರು ಶಿವನ ಮನೆಗೆ ಹೋಗುವರು. ॥೮೧॥

ಶಿವಭಕ್ತರು ರುದ್ರಾಕ್ಷಿಯ ಆಭರಣಗಳನ್ನು ಧರಿಸಿದ ದೇವಶರೀರದೊಡನೆ ಶಿವಮಂದಿರಕ್ಕೆ ಹೋಗುವುದನ್ನು, ಲಕ್ಷ್ಮಿಯೇ, ನೋಡು ಎಂದು ವಿಷ್ಣುವು ಹೇಳುವ ಮಾತನ್ನು ಕೇಳುತ್ತ ಸಂತೋಷದಿಂದ ಶಿವಭಕ್ತರು ಹೋಗುತ್ತಿರುವರು. ॥೮೨॥

ಭಸ್ಮತ್ರಿಪುಂಡ್ರರಚನಾರ್ಜಿತಪುಣ್ಯವಂತ
ಸ್ತೇ ಯಾಂತಿ ಶಂಕರಪದಂ ಕಮಲೇ ಪ್ರಪಶ್ಯ ।
ಪಶ್ಯೇತಿ ವಿಷ್ಣುವಚನೇಷ್ವಪಿ ಸಾದರಾಸ್ತೇ
ಶ್ರುತ್ವಾ ಪ್ರಯಾಂತಿ ಶಿವಮಂದಿರಮೀಶಭಕ್ತಾಃ ॥೮೩॥

ಲಿಂಗಾರ್ಚನಾರ್ಜಿತಮನೋಹರಪುಣ್ಯಪೂರ್ಣಾ
ಸ್ತೇ ಯಾಂತಿ ಶಂಕರಪದಂ ಕಮಲೇ ಪ್ರಪಶ್ಯ ।
ಪಶ್ಯೇತಿ ವಿಷ್ಣುವಚನೇಷ್ವಪಿ ಸಾದರಾಸ್ತೇ
ಶ್ರುತ್ವಾಪ್ರಯಾಂತಿ ಶಿವಮಂದಿರಮೀಶಭಕ್ತಾಃ ॥೮೪॥

ಪಂಚಾಕ್ಷರಶ್ರವಣಕೀರ್ತನಪೂತಚಿತ್ತಾ
ಸ್ತೇ ಯಾಂತಿ ಶಂಕರಪದಂ ಕಮಲೇ ಪ್ರಪಶ್ಯ ।
ಪಶ್ಯೇತಿ ವಿಷ್ಣುವಚನೇಷ್ವಪಿ ಸಾದರಾಸ್ತೇ
ಶ್ರುತ್ವಾ ಪ್ರಯಾಂತಿ ಶಿವಮಂದಿರಮೀಶಭಕ್ತಾಃ ॥೮೫॥

ರುದ್ರಾಭಿಷೇಕಜಲಪಾಲವಿಶುದ್ಧಚಿತ್ತಾ
ಸ್ತೇ ಯಾಂತಿ ಶಂಕರಪದಂ ಕಮಲೇ ಪ್ರಪಶ್ಯ ।
ಪಶ್ಯೇತಿ ವಿಷ್ಣುವಚನೇಷ್ವಪಿ ಸಾದರಾಸ್ತೇ
ಶ್ರುತ್ವಾ ಪ್ರಯಾಂತಿ ಶಿವಮಂದಿರಮೀಶಭಕ್ತಾಃ ॥೮೬॥

ಹಾರೋಪಹಾರಕೃತಭೋಜನಪುಣ್ಯವಂತ
ಸ್ತೇ ಯಾಂತಿ ಶಂಕರಪದಂ ಕಮಲೇ ಪ್ರಪಶ್ಯ ।
ಪಶ್ಯೇತಿ ವಿಷ್ಣುವಚನೇಷ್ವಪಿ ಸಾದರಾಸ್ತೇ
ಶ್ರುತ್ವಾ ಪ್ರಯಾಂತಿ ಶಿವಮಂದಿರಮೀಶಭಕ್ತಾಃ ॥೮೭॥

ಈಶ್ವರ ಭಕ್ತರು ಭಸ್ಮತ್ರಿಪುಂಡ್ರವನ್ನು ಧರಿಸಿದುದರಿಂದಲೂ, ಲಿಂಗಾರ್ಚನೆಯನ್ನು ಮಾಡಿದುದರಿಂದಲೂ, ಪಂಚಾಕ್ಷರ ಮಂತ್ರವನ್ನು ಶ್ರವಣ ಮಾಡಿದುದರಿಂದಲೂ, ಜಪಿಸಿದುದರಿಂದಲೂ, ರುದ್ರಾಭಿಷೇಕವನ್ನು ಮಾಡಿದ ತೀರ್ಥಪಾನಮಾಡಿದುದರಿಂದಲೂ, ಶಿವನೈವೇದ್ಯವನ್ನು ಭೋಜನಮಾಡಿದುದರಿಂದಲೂ, ಉಂಟಾದ ಪುಣ್ಯದಿಂದ ಪರಿಶುದ್ಧವಾದ ಮನಸ್ಸುಳ್ಳವರಾಗಿ, ಶಿವನ ವಾಸಸ್ಥಾನವಾದ ಕೈಲಾಸಕ್ಕೆ

ರಮೇ ದಾರಾಸ್ತೇಷಾಮನವರತಮೀಶಾರ್ಚನರತಾಃ
ಕುಮಾರಾಸ್ತತ್ಕನ್ಯಾಃ ಶಿವಭಜನಚಿಂತಾಸು ನಿರತಾಃ ।
ವಿಭೂತ್ಯಾ ಪೂತಾಂಗಾಃ ಸಿತಭಸಿತರುದ್ರಾಕ್ಷಲಲಿತಾ
ಸ್ತದೀಯಾಸ್ತೇ ಯಾಂತಿ ಸ್ಮರಹರಪದಂ ಪಶ್ಯ ವಿಮಲಾನ್ ॥೮೮॥

ರಮೇ ಭಾಗ್ಯಂ ತೇಷಾಂ ಮದನಹರಪೂಜಾರ್ಥಮಭವ
ತ್ತದೀಯಾಸ್ತೇ ಪುತ್ರಾಃ ಶಿವಭಜನಪೂಜಾರ್ಜಿತಧನಾಃ ।
ಪ್ರಪಶ್ಯೇದಂ ಭಾಗ್ಯಂ ಕಿಮಪಿ ನಯನಾನಂದಜನಕಂ
ತ್ರಿಪುಂಡ್ರಂ ತದ್ಭಾಲೇ ಕರರುಚಿರರುದ್ರಾಕ್ಷವಲಯಂ ॥೮೯॥

ರಮೇ ತೇಷಾಂ ಜಿಹ್ವಾ ಶಿವ ಶಿವ ಮಹೇಶೇತ್ಯಪಿ ಮುಹುಃ
ಸುಧಾಂ ಪೀತ್ವಾ ಪೀನಾಂ ಪುನರಪಿ ಪುನಃ ಪಶ್ಯ ವಿಮಲಾಂ ।

ಹೋಗುತ್ತಿರುವುದನ್ನು, ಲಕ್ಷ್ಮಿಯೇ, ನೋಡು ಎಂದು ವಿಷ್ಣುವು ಹೇಳುವ ಮಾತನ್ನು ಕೇಳುತ್ತ ಸಂತೋಷದಿಂದ ಶಿವಭಕ್ತರು ಶಿವಮಂದಿರಕ್ಕೆ ಹೋಗುತ್ತಿರುವರು. ||೮೩-೮೪-೮೫-೮೬-೮೭||

ಲಕ್ಷ್ಮೀದೇವಿಯೇ, ಆ ಶಿವಭಕ್ತರ ಹೆಂಡಿರು ಯಾವಾಗಲೂ ಶಿವನ ಪೂಜೆಯನ್ನೇ ಮಾಡುವರು. ಅವರ ಪುತ್ರರೂ ಕನ್ಯೆಯರೂ ಶಿವನಾಮವನ್ನುಚ್ಚರಿಸುವರು. ವಿಭೂತಿಯನ್ನು ಧರಿಸಿ ಪರಿಶುದ್ಧರಾಗಿ ರುದ್ರಾಕ್ಷಧಾರಣೆಯಿಂದ ಮನೋಹರರಾಗಿ ಕಾಣುತ್ತ ಅವರೂ ಶಿವನ ಸಮೀಪಕ್ಕೆ ಹೋಗುತ್ತಿರುವರು. ಪರಿಶುದ್ಧರಾದ ಆವರನ್ನು ನೋಡು. ||೮೮||

ಲಕ್ಷ್ಮೀದೇವಿಯೇ, ಆ ಭಕ್ತರ ಸಂಪತ್ತೆಲ್ಲವೂ ಕಾಮಾರಿಯಾದ ಶಿವನ ಪೂಜೆಗೆ ವಿನಿಯೋಗವಾಯಿತು. ಆವರ ಮಕ್ಕಳೂ ತಮ್ಮ ಧನವನ್ನು ಶಿವನಾಮಸ್ಮರಣೆಗೂ ಪೂಜೆಗೂ ವಿನಿಯೋಗಿಸಿದರು. ಅವರ ಪುಣ್ಯವನ್ನು ನೋಡು. ಆವರ ಹಣೆಯಲ್ಲಿ ಭಸ್ಮತ್ರಿಪುಂಡ್ರವೂ, ಕೈಯಲ್ಲಿ ರುದ್ರಾಕ್ಷಿಯ ಕಂಕಣವೂ, ಕಣ್ಣಿಗೆ ಏನೋ ಒಂದು ಸಂತೋಷವನ್ನುಂಟುಮಾಡುವುದಾಗಿರುವುದು. ||೮೯||

ಲಕ್ಷ್ಮೀದೇವಿಯೇ, ಆ ಶಿವಭಕ್ತರ ನಾಲಗೆಗಳು ಶಿವ, ಶಿವ, ಮಹೇಶ, ಎಂದು ಮತ್ತೆ ಮತ್ತೆ ನಾಮೋಚ್ಚಾರಣೆಯೆಂಬ ಅಮೃತ ಪಾನಮಾಡಿ ದಪ್ಪವಾಗಿರುವುದನ್ನು

ಇಯಂ ಧನ್ಯಾ ಮಾನ್ಯಾ ಭುಜಗಪತಿಮಾನ್ಯಾಪಿ ಸತತಂ
ಶಿವಂ ಸ್ತೋತುಂ ಯಾತಿ ಸ್ಮರಹರ ಮಹದ್ಭಾಗ್ಯಮಿತಿ ತಾಂ ॥೯೦॥

ಇಯಂ ವಾಣೀ ಪಶ್ಯತ್ಯತಿವಿನಯಮನಮ್ರಾ ಶಿವರತಾನ್
ಮುಹುರ್ದೃಷ್ಟ್ವಾ ಹೃಷ್ಟಾ ಪುನರಪಿ ಶಚೀ ಪಶ್ಯತಿ ಮುಹುಃ ।
ಇಯಂ ಛಾಯಾ ಪಶ್ಯತ್ಯಪಿ ಮುಹುರಯಂ ಧನ್ಯ ಇತಿ ತಂ
[1] ಶಿವಾಚಾರಂ ಪಶ್ಯ ಸ್ಮರಹರ ಕಥಾಲೋಲಮಮಲಂ ॥೯೧॥

ಧನ್ಯಾಃ ಪ್ರಯಾಂತಿ ಶಿವಮಂದಿರಮಿಂದಿರೇ ತೇ
ಗೌರೀಮನೋಹರಪದಾಂಬುಜಪೂಜನೇನ ।
ಪಶ್ಯಾಧುನಾ ಮುಹುರಯಂ ನ ಮಹೋತ್ಸವಸ್ಸ್ಯಾ
ದೇತೇ ಪ್ರಯಾಂತಿ ಶಿವಮೇವ ಸದಾ ಪ್ರಸನ್ನಾಃ ॥೯೨॥

ನೋಡು. ಮತ್ತು ಇವು ಪರಿಶುದ್ಧವಾಗಿಯೂ ಇರುವುವು. ಈ ನಾಲಿಗೆಯು ಆದಿಶೇಷನಿಂದಲೂ ಪೂಜಿತವಾದುದು. ಶಿವಸ್ತುತಿಯೇ ತಮ್ಮ ಉತ್ತಮ ಕರ್ತವ್ಯವೆಂದು ತಿಳಿದಿರುವುದು. ॥೯೦॥

ಈ ಸರಸ್ವತಿಯು ಶಿವಭಕ್ತರನ್ನು ಅತ್ಯಂತ ವಿನಯದಿಂದ ನಮಸ್ಕರಿಸಿ ಪುನಃ ಪುನಃ ನೋಡುತ್ತ ಸಂತೋಷಪಡುವಳು. ದೇವೇಂದ್ರನ ಪತ್ನಿಯಾದ ಶಚೀದೇವಿಯೂ, ಸೂರ್ಯಪತ್ನಿಯಾದ ಛಾಯೆಯೂ, ಇವರನ್ನು ಪುನಃ ಪುನಃ ಧನ್ಯರೆಂದು ಹೇಳುವರು. ಶಿವನ ಕಥೆಯಲ್ಲಿ ಸಂತೋಷಪಡುವ ಶಿವಾಚಾರವು ಎಂಥದೆಂಬುದನ್ನು ನೋಡು. ॥೯೧॥

ಲಕ್ಷ್ಮಿಯೇ, ಆ ಶಿವಭಕ್ತರು ಗೌರೀಪತಿಯ ಪಾದಕಮಲವನ್ನು ಪೂಜಿಸಿ ಕೃತಾರ್ಥರಾಗಿ ಶಿವನ ಸಮೀಪಕ್ಕೆ ಹೋಗುತ್ತಿರುವರು ನೋಡು. ಇವರು ಯಾವಾಗಲೂ ಶಿವನನ್ನೇ ಶರಣು ಹೊಂದಿರುವರು. ಆದುದರಿಂದ ಇವರು ಶಿವನಲ್ಲಿಯೇ ಐಕ್ಯರಾಗುವರು. ಇದೇ ಒಂದು ಮಹೋತ್ಸವವು. ॥೯೨॥

---

(೧) ಶಿವಏವ ಪರಂಬ್ರಹ್ಮ ಪಂಚಕೃತ್ಯಪರಾಯಣಃ ।
ನ ತತೋಽನ್ಯಾ ಗತಿರಿತಿ ಶಿವಾಚಾರೋಹಿ ಕೀರ್ತಿತಃ ॥

ಎಂಬ ಚಂದ್ರಜ್ಞಾನಾಗಮದಲ್ಲಿ ಹೇಳಿರುವಂತೆ ಸೃಷ್ಟಿ, ಸ್ಥಿತಿ, ಸಂಹಾರ, ನಿಗ್ರಹ, ಅನುಗ್ರಹಾತ್ಮಕವಾದ ಪಂಚಕೃತ್ಯಗಳಲ್ಲಿ ಪರಾಯಣನಾದ ಶಿವನೇ ಪರಬ್ರಹ್ಮನೆಂದೂ, ತದ್ಭಿನ್ನ ದೇವತೆಗಳಾರೂ ರಕ್ಷಕರಲ್ಲವೆಂದೂ ತಿಳಿಯುವುದೇ ಶಿವಾಚಾರ.

ಧನ್ಯಾಸ್ತೇ ಶಿವಲಿಂಗಪೂಜನರತಾಸ್ತದ್ವಿಕ್ಷಣೇನೇಕ್ಷಣಂ
ಧನ್ಯಂ ತಾವದತಃ ಪರಂ ಶಿವರತಃ ಕ್ವಾಸ್ತೀಂದಿರೇ ಸುಂದರಂ ।
ಮಂದಾರೈರಪಿ ಕುಂದಫುಲ್ಲಕಮಲೈಸ್ತತ್ಪಾದುಕಾರಾಧನಂ
ಕರ್ತವ್ಯಂ ಗಿರಿಶಾಲಯಂ ಪ್ರತಿಮುದಾ ಯಾಂತ್ಯಂತಕಾಲೋಕಿತಾಃ ॥೯೩॥

ಕಮಲಾಮಲಲೋಚನೇ ವಿಶಾಲೇ
ನಯನೇ ತೇ ಶಿವಭಕ್ತಪಾದಪದ್ಮಂ ।
ಮುಹುರಾದರತೋ ವಿಲೋಕ್ಯ ಸದ್ಯಃ
ಕೃತಕೃತ್ಯತ್ವಮವಾಪ್ಯ ಕಿಂ ನ ತುಷ್ಟೇ ॥೯೪॥

ಕ್ವ ಪುನರ್ವದ ಶಾಂಭವೋ ಭವಾಂತಃ
ಪುರಮಾವಿಶ್ಯ ನ ಯಾತಿ ಸರ್ವಥಾಪಿ ।
ಅತ ಏವ ವಿಲೋಕಯಾಶು ಭಕ್ತ್ಯಾ
ಕಮಲೇ ನೇತ್ರಯುಗೇ ನ ಪುಣ್ಯಸಿದ್ಧ್ಯೈ ॥೯೫॥

ಶಿವಲಿಂಗವನ್ನು ಪೂಜಿಸುವುದರಲ್ಲಿ ಆಸಕ್ತರಾದ ಭಕ್ತರೇ ಕೃತಾರ್ಥರು. ಅವರನ್ನು ನೋಡುವುದರಿಂದ ನಮ್ಮ ಕಣ್ಣುಗಳೂ ಸಫಲವಾಗುವುವು. ಲಕ್ಷ್ಮಿಯೇ, ಇವರಿಗಿಂತ ಶ್ರೇಷ್ಠರಾದ ಶಿವಭಕ್ತರೆಲ್ಲಿರುವರು ? ಮಂದಾರ ಮುಂತಾದ ಪುಷ್ಪಗಳಿಂದ ಅವರ ಪಾದಗಳನ್ನು ಪೂಜಿಸಬೇಕು. ಎಂದು ಹೇಳುತ್ತಾ, ಗೌರಿಯು ಸಂತೋಷದಿಂದ ಇವರನ್ನು ನೋಡುತ್ತಿರಲು, ಆಗ ಅವರು ಶಿವನ ಮನೆಗೆ ಹೋಗುತ್ತಿರುವರು. ನೋಡು. ॥೯೩॥

ಕಮಲದಂತೆ ನಿರ್ಮಲವಾದ ಮತ್ತು ವಿಸ್ತಾರವಾದ ನಿನ್ನ ಕಣ್ಣುಗಳು ಶಿವಭಕ್ತರ ಪಾದಕಮಲಗಳನ್ನು ಪ್ರೀತಿಯಿಂದ ನೋಡಿ ಕೃತಾರ್ಥವಾಗಿವೆ. ಆದರೆ ಯಾವ ಕಾರಣದಿಂದ ಇನ್ನೂ ತೃಪ್ತಿಪಡಲಿಲ್ಲ ? ॥೯೪॥

ಲಕ್ಷ್ಮಿಯೇ, ಶಿವಭಕ್ತನು ನಿನ್ನ ಅಂತಃಪುರದಲ್ಲಿ ಬಂದು ಕುಳಿತು ವಿಶ್ರಾಂತಿಯನ್ನು ಪಡೆದು ಮುಂದೆ ಪ್ರಯಾಣಮಾಡುವುದಿಲ್ಲ. ನೀನಿದ್ದಲ್ಲಿಗೆ ಬರುವುದೂ ಇಲ್ಲ. ಆದುದರಿಂದ ಬೇಗನೆ ಭಕ್ತಿಯಿಂದ ಪುಣ್ಯಸಂಪಾದನೆಗೋಸ್ಕರ ನಿನ್ನ ಎರಡು ಕಣ್ಣುಗಳಿಂದಲೂ ಈಶ್ವರ ಭಕ್ತರನ್ನು ನೋಡು. ॥೯೫॥

ಪುಣ್ಯಂ ಶಾಂಭವದರ್ಶನೇನ ಮಹತಾಂ ತತ್ಪೂಜನೇನಾಪ್ಯತ
ಸ್ತೇ ದೂರೇ ಗಮನಂ ನ ತತ್ರ ಕಮಲೇ ತದ್ದರ್ಶನಂ ವಾ ಕುರು ।
ತಾವನ್ಮಾತ್ರಮದೃಷ್ಟತೋದ್ಯ ಸಮಭೂತ್ತತ್ಪಾದುಕಾಲೋಕನಾ
ತ್ಪಾಪಾಪಜ್ಜಲರಾಶಯೋಽಪಿ ಸುತರಾಂ ಶುಷ್ಯಂತಿ ನಶ್ಯಂತಿ ಚ ॥೯೭॥

ಅಹೋ ಪುಣ್ಯಮಸ್ಮಾಕಮದ್ಯಾನುಕೂಲಂ
ಶಿವಾರಾಧಕಾಲೋಕನಾಯಾನುವೇಲಂ ।
ಅಲಂ ಜನ್ಮನಾನೇನ ಜನ್ಮಾಂತರೇ ವಾ
ಮಹಾದೇವಭಕ್ತಾಂಘ್ರಿಪದ್ಮಂ ಭಜಾಮಿ ॥೯೮॥

ಭವಾನೀಪತೇ ಪಾಹಿ ಪಾಹೀತಿ ಶೂಲಿನ್
ಭವತ್ಪಾದುಕಾರಾಧಕಾಲೋಕನೇ ವಾ ।
ಮನೋ ಮೇ ಪ್ರವೃತ್ತಂ ಭವತ್ಪಾದುಕೇನ
ಪ್ರಣಾಮಪ್ರವಾಹಸ್ತವಾಯಂ ಮಹೇಶ ॥೯೯॥

ಲಕ್ಷ್ಮೀದೇವಿಯೇ, ಮಹಾತ್ಮರಾದ ಶಿವಭಕ್ತರ ದರ್ಶನದಿಂದಲೂ ಪೂಜೆಯಿಂದಲೂ ಪುಣ್ಯವು ಲಭಿಸುವುದು. ಅದಕ್ಕಾಗಿ ನೀನು ದೂರವಾಗಿ ಹೋಗಬೇಕಾದುದಿಲ್ಲ. ಅವರ ದರ್ಶನವನ್ನಾದರೂ ಮಾಡು. ನಮ್ಮ ಪೂರ್ವಪುಣ್ಯದಿಂದ ಅವರ ಪಾದದರ್ಶನವು ಇಲ್ಲಿಯೇ ಲಭಿಸಿರುವುದು. ಇದರಿಂದ ಪಾಪಗಳು ಮತ್ತು ಕಷ್ಟಗಳೆಂಬ ಸಮುದ್ರಗಳು ಸಂಪೂರ್ಣವಾಗಿ ನಾಶವಾಗುವುವು. ॥೯೭॥

ಆಹಾ, ಈ ದಿನದಲ್ಲಿ ನಮ್ಮ ಪುಣ್ಯದಿಂದ ಶಿವಭಕ್ತರ ದರ್ಶನವಾಯಿತು. ಇಷ್ಟೇ ಸಾಕು. ಈ ಜನ್ಮದಲ್ಲಿಯಾಗಲಿ, ಮತ್ತೊಂದು ಜನ್ಮದಲ್ಲಾಗಲಿ, ನಾನು ಮಹಾದೇವನ ಭಕ್ತರ ಪಾದಕಮಲ ಸೇವೆಯನ್ನು ಮಾಡುವೆನು. ॥೯೮॥

ತ್ರಿಶೂಲಧಾರಿಯಾದ ಭವಾನೀಪತಿಯೇ, ನಿನ್ನ ಪಾದವನ್ನು ಪೂಜಿಸುವ ಭಕ್ತರ ದರ್ಶನ ಮಾಡುವುದರಲ್ಲಿಯಾದರೂ ನನ್ನ ಮನಸ್ಸು ಆಸಕ್ತವಾಯಿತಲ್ಲಾ! ನನ್ನನ್ನು ರಕ್ಷಿಸು. ಇದು ನಿನ್ನ ಪಾದುಕೆಯ ಮಹಿಮೆಯು. ಆದುದರಿಂದ ಮಹೇಶ್ವರನಾದ ನಿನಗೆ ನಾನು ಅನೇಕ ನಮಸ್ಕಾರಗಳನ್ನು ಮಾಡುವೆನು. ॥೯೯॥

ಭಾಗ್ಯಂ ನ ಕೈಲಾಸವಿಲಾಸವಾಸಪ್ರಸಾದೇನ ಯದ್ಯಪಿ ಕಿಂ ತಥಾಪಿ ।
ತ್ವತ್ಪಾದಪದ್ಮಸ್ಮರಣೇನುರಕ್ತಿರ್ವಿರಕ್ತಿರಪ್ಯಸ್ತು ಶಿವಾಸಹಾಯ ॥೯೯॥

ಇತ್ಯುಚ್ಚೈರುಚ್ಚರಂತಂ ಸುರಗಣಸಹಿತಂ ವೀಕ್ಷ್ಯ ಲಕ್ಷ್ಮೀಪತಿಂ ತೇ
ದೃಷ್ಟ್ವಾ ತೇ ಪುಷ್ಪಕಾಗ್ರಾದ್ಗಿರಿವರತನಯಾಕಾಂತಮೇವ ಸ್ಮರಂತಃ ।
ಗತ್ವಾ ಕೈಲಾಸಲೋಕಂ ಶಿವಚರಣರಜಃಪುಂಜಸಂಗಾದ್ವಿಮುಕ್ತಾಃ
ತೇ ತಾವಲ್ಲಿಂಗಪೂಜಾಫಲಕಮಲಮಿದಂ ಪ್ರಾಪುರೇವಾನಿವೃತ್ತ್ಯೈ ॥೧೦೦॥

ತಸ್ಮಿಂಛಾಂಭವಪುಂಗವೇ ಭುವಿ ಸದಾ ಭಾವಪ್ರಭಾವೋತ್ಸವೇ
ತಿಷ್ಠತ್ಯಂತಕಭೀತಿಮಾತ್ರರಹಿತಾಃ ಸರ್ವೇಽಪಿ ಲೋಕಾಃ ಸದಾ ।
ರೋಗೇಭ್ಯೋ ನ ಭಯಂ ನ ಭೂತಜನಿತಾ ಭೀತಿರ್ನ ವಾರಾತಿಜಂ
ನಾಗೇಭ್ಯೋ ನ ಭಯಂ ಜಲಾದಪಿ ಭಯಂ ಭೀತಿರ್ನ ವಾತ್ಯಾದಿಭಿಃ॥೧೦೧॥

ಪಾರ್ವತೀಪತಿಯಾದ ಪರಮೇಶ್ವರನೇ, ಕೈಲಾಸದಲ್ಲಿ ಸುಖವಾಗಿ ವಾಸಮಾಡುವುದನ್ನು ಅನುಗ್ರಹಮಾಡಿದುದರಿಂದ ನಮಗೆ ಯಾವ ಭಾಗ್ಯವೂ ಬಂದಂತಾಗಲಿಲ್ಲ. ಮತ್ತೇನೆಂದರೆ ಅಲ್ಲಿ ವಾಸಮಾಡುವ ನಮಗೆ ನಿನ್ನ ಪಾದಕಮಲ ಧ್ಯಾನದಲ್ಲಿ ಸದಾ ಆಸಕ್ತಿಯೂ ವೈರಾಗ್ಯವೂ ಉಂಟಾಗಬೇಕು. ॥೯೯॥

ಈ ರೀತಿಯಲ್ಲಿ ದೇವತೆಗಳ ಗುಂಪಿನೊಡನೆ ಗಟ್ಟಿಯಾಗಿ ಮಾತನಾಡುತ್ತಿರುವ ಲಕ್ಷ್ಮೀಪತಿಯಾದ ವಿಷ್ಣುವನ್ನು, ಆ ವಿಮಾನದಲ್ಲಿ ಹೋಗುತ್ತಿರುವ ಭಕ್ತರು ನೋಡಿ, ಗಿರಿಜಾಪತಿಯಾದ ಶಿವನನ್ನೇ ಧ್ಯಾನಮಾಡುತ್ತ, ಕೈಲಾಸಲೋಕಕ್ಕೆ ಹೋಗಿ, ಶಿವಪಾದಧೂಳಿಗಳ ಸಂಬಂಧದಿಂದ ಮುಕ್ತಿಯನ್ನು ಪಡೆದರು. ಶಿವಲಿಂಗಪೂಜೆಗೆ ಪುನರ್ಜನ್ಮವಿಲ್ಲದ ಮೋಕ್ಷವೇ ಫಲರೂಪವಾದುದು. ಅದು ಸುಂದರವಾದ ಕಮಲದಂತಿರುವುದು. ಇಂತಹ ಕಮಲವನ್ನು ಆ ಭಕ್ತರೆಲ್ಲರೂ ಅನಾಯಾಸವಾಗಿ ಪಡೆದರು. ॥೧೦೦॥

ಆ ಶಿವಭಕ್ತಶ್ರೇಷ್ಠನಾದ ಚಿತ್ರಕೇತುರಾಜನು ಶಿವೋತ್ಸವಗಳನ್ನು ಮಾಡುತ್ತ ಭೂಮಿಯನ್ನಾಳುತ್ತಿರಲಾಗಿ, ಜನರಿಗೆ ಯಮನ ಭಯವೇ ಇರಲಿಲ್ಲ. ರೋಗಗಳು, ಭೂತಗಳು, ಶತ್ರುಗಳು, ನಾಗಗಳು, ನೀರು, ಗಾಳಿ ಮುಂತಾದವುಗಳ ದೆಸೆಯಿಂದ ಯಾವ ವಿಧವಾದ ಭಯವೂ ಜನರಿಗೆ ಯಾವಾಗಲೂ ಇರಲಿಲ್ಲ. ॥೧೦೧॥

ಪುತ್ರಪೌತ್ರಾದಿಸಂಪನ್ನಾಃ ಸರ್ವೇ ತದ್ದೇಶವಾಸಿನಃ
ಧನಧಾನ್ಯಾದಿಸಂಪನ್ನಾಃ ಸರ್ವೇ ನಿತ್ಯಮಹೋತ್ಸವಾಃ ॥೧೦೨॥

ಶುಭಾನಿ ಸಂತತಂ ತೇಷಾಂ ಗೃಹೇಷು ಶಿವಪೂಜಯಾ ।
ಕದಾಪ್ಯಶುಭವಾರ್ತಾಸ್ತಿ ತದ್ದೇಶೇಷು ನ ಸರ್ವಥಾ ॥೧೦೩॥

ನ ಪುತ್ರಮರಣಂ ದೃಷ್ಟಂ ನೃಪ ತದ್ದೇಶವಾಸಿಭಿಃ ।
ನ ದೃಷ್ಟಾನ್ಯೇವ ತತ್ರತ್ಯೈಃ ಪೌತ್ರಾದಿಮರಣಾನಿ ವಾ ॥೧೦೪॥

ಸಿಂದೂರರೇಣುಸಂಪೂರ್ಣಸೀಮಂತಾತಿಮನೋಹರಾಃ ।
ದಾರಾಸ್ಸರ್ವೇಽಪಿ ತದ್ದೇಶೇ ದಾರಾ ನ ಪತಿವರ್ಜಿತಾಃ ॥೧೦೫॥

ಸತಿ ಭರ್ತರಿ ನಾರೀಣಾಂ ಮರಣಂ ನೈವ ಸರ್ವಥಾ ।
ನ ಪುತ್ರಕ್ಲೇಶಸಂಯುಕ್ತಾಸ್ತೇಽಪಿ ತದ್ದೇಶವಾಸಿನಃ ॥೧೦೬॥

ತದ್ದೇಶೇ ಶೋಕವಾರ್ತಾಪಿ ನಾಸ್ತಿ ಸರ್ವಾತ್ಮನಾ ನೃಪ ।
ಶಿವಪೂಜಾರತಾಃ ಸರ್ವೇ ಪತಿಶುಶ್ರೂಷಣಪ್ರಿಯಾಃ ॥೧೦೭॥

ಆ ದೇಶದಲ್ಲಿ ವಾಸಮಾಡುವ ಸಮಸ್ತ ಜನರೂ ತಮ್ಮ ಮನೆಯಲ್ಲಿ ಶಿವಪೂಜೆಯನ್ನು ಮಾಡುತ್ತಾ, ತತ್ಫಲವಾಗಿ ಧನಧಾನ್ಯಗಳಿಂದಲೂ ಪುತ್ರಪೌತ್ರರಿಂದಲೂ ಕೂಡಿದವರಾಗಿ, ನಿತ್ಯಮಹೋತ್ಸವಗಳನ್ನು ನಡೆಸುತ್ತಿದ್ದರು. ಅವರ ಮನೆಯಲ್ಲಿ ಯಾವಾಗಲೂ ಶುಭಕಾರ್ಯಗಳು ನಡೆಯುತ್ತಿದ್ದುವು. ಅವನ ದೇಶದಲ್ಲಿ ಅಶುಭಕರವಾದ ಮಾತೇ ಇರುತ್ತಿರಲಿಲ್ಲ. ॥೧೦೨-೧೦೩॥

ಎಲೈ ರಾಜನೇ, ಆ ದೇಶದ ಪ್ರಜೆಗಳು ಪುತ್ರಪೌತ್ರಾದಿ ಬಾಲಕರ ಮರಣವನ್ನು ತಮ್ಮ ಜೀವಿತಕಾಲದಲ್ಲಿ ಎಂದೂ ಕಂಡರಿಯರು. ॥೧೦೪॥

ಆ ದೇಶದಲ್ಲಿ ಎಲ್ಲ ಸ್ತ್ರೀಯರೂ ಸುಮಂಗಲಿಯರಾಗಿ ತಮ್ಮ ಬೈತಲೆಗೆ ಚಂದ್ರದ (ಸಿಂದೂರಚೂರ್ಣ) ಅಲಂಕಾರವನ್ನು ಮಾಡಿಕೊಳ್ಳುತ್ತಿದ್ದರು. ಪತಿಹೀನೆಯರೇ ಅಲ್ಲಿ ಕಂಡುಬರುತ್ತಿರಲಿಲ್ಲ. ಪುರುಷರು ಪತ್ನಿಯ ಮರಣದುಃಖವನ್ನಾಗಲಿ ಪುತ್ರರಿಲ್ಲವೆಂಬ ವ್ಯಸನವನ್ನಾಗಲಿ ಕಾಣರು. ॥೧೦೫-೧೦೬॥

ಎಲೈ ರಾಜನೇ, ಅವನ ರಾಜ್ಯದಲ್ಲಿ ದುಃಖದ ಮಾತುಗಳು ಇರಲೇ ಇಲ್ಲ. ಎಲ್ಲ ಸ್ತ್ರೀಯರೂ ಶಿವಪೂಜೆಯಲ್ಲಿಯೂ ಪತಿಸೇವೆಯಲ್ಲಿಯೂ ಆಸಕ್ತರಾಗಿದ್ದರು.

ಭರ್ತುರೇವ ಪ್ರಿಯಂ ನಿತ್ಯಂ ತದ್ದಾರೈರಭಿವಾಂಛಿತಂ ।
ನ ದಾರಕಲಹಸ್ತತ್ರ ಸಪತ್ನೀನಾಂ ನೃಪೋತ್ತಮ ॥೧೦೮॥

ಶಿವನಾಮಜಪೇನೈವ ಸಮಯಸ್ತೈಸ್ಸಮಾಪ್ಯತೇ ।
ಅತೋ ನಾವಸರಸ್ತೇಷಾಂ ಲೌಕಿಕೇ ಕಲಹೇಪಿ ವಾ ॥೧೦೯॥

ಕೃತ್ವಾ ಲಿಂಗಾರ್ಚನಂ ಸರ್ವೇ ಪ್ರಾರ್ಥಯಂತಿ ಮಹೇಶ್ವರಂ ।
ಕೃತಾಂಜಲಿಪುಟಾ ಏವ ಪ್ರಣತಾಃ ಸಾದರಂ ಮುಹುಃ ॥೧೧೦॥

ಭಕ್ತಿಪ್ರದಾನಸಮಯೋಯಮುಮಾಸಹಾಯ
ತ್ವತ್ಪಾದಪದ್ಮಭಜನೇನ ನಿರಂತರಾಯಂ ।
ತ್ವಯ್ಯೇವ ಭಕ್ತಿಮಖಿಲಾಘವಿನಾಶನಾಯ ।
ಧೇಹಿ ಪ್ರಸೀದ ಭಗವನ್ ಶರಣಾಗತಾಯ ॥೧೧೧॥

ಅವರು ಯಾವಾಗಲೂ ಪತಿಗೆ ಹಿತವನ್ನೇ ಕೋರುತ್ತ, ಸವತಿಯರೊಡನೆಯೂ ಸಹ ಜಗಳವಾಡದೆ ಸುಖದಲ್ಲಿದ್ದರು. ॥೧೦೭-೧೦೮॥

ಅವರು ಮನೆಯ ಕೆಲಸಗಳನ್ನು ಮಾಡಿ ಮಿಕ್ಕ ಸಮಯಗಳಲ್ಲಿ ಶಿವನಾಮ ಜಪವನ್ನು ಮಾಡುತ್ತಿದ್ದರು. ಆದುದರಿಂದ ಲೋಕ ವ್ಯವಹಾರ ಸಂಬಂಧವಾದ ಯಾವ ಜಗಳಕ್ಕೂ ಅಲ್ಲಿ ಅವಕಾಶವಿರಲಿಲ್ಲ. ॥೧೦೯॥

ಅವರೆಲ್ಲರೂ ಶಿವಲಿಂಗಾರ್ಚನೆಯನ್ನು ಮಾಡಿ ಪ್ರೀತಿಯಿಂದ ನಮಸ್ಕರಿಸಿ, ಕೈಮುಗಿದುಕೊಂಡು ಮಹೇಶ್ವರನ ಪ್ರಾರ್ಥನೆಯನ್ನು ಮಾಡುವರು. ॥೧೧೦॥

ಉಮಾಪತಿಯೇ, ನಮಗೆ ಭಕ್ತಿಯನ್ನು ಕೊಡುವ ಸಮಯವು ಇದೇ ಆಗಿರುವುದು. ನಿನ್ನ ಪಾದಸೇವೆಯಿಂದ ನಮ್ಮ ಸಮಸ್ತ ಪಾಪಗಳೂ ನಾಶವಾಗುತ್ತವೆ. ಯಾವ ವಿಘ್ನವೂ ಇಲ್ಲದೆ ನಿನ್ನನ್ನೇ ಶರಣು ಹೊಂದಿದ ನಮಗೆ ನಿನ್ನಲ್ಲಿ ಭಕ್ತಿಯುಂಟಾಗುವಂತೆ ವರವನ್ನು ಕೊಡು. ಸಕಲ ಪಾಪಗಳನ್ನೂ ಹೋಗಲಾಡಿಸುತ್ತಾ ನಮ್ಮನ್ನು ಸಲಹು. ॥೧೧೧॥

ತ್ವತ್ಪಾದಪದ್ಮಮಕರಂದರಸಾಭಿಷಿಕ್ತಂ
ಮಚ್ಚಿತ್ತಭೃಂಗಮಸಕೃತ್ಕುರು ಶರ್ವ ಶಂಭೋ ।
ಮತ್ಪ್ರಾರ್ಥನೀಯಮಿಹ ನಾನ್ಯದುಮಾಸಹಾಯ
ಧನ್ಯೋಽಸ್ಮಿ ತೇನ ಧನಿಕೋಽಸ್ಮಿ ಜಗತ್ತ್ರಯೇಽಪಿ ॥೧೧೨॥

ಯದ್ಯನ್ಮಮಾಭಿಲಷಿತಂ ತದುಮಾಸಹಾಯ
ಸಿದ್ಧಂ ತ್ವದಂಘ್ರಿಕಮಲಾರ್ಚನಭಕ್ತಿಲೇಶಾತ್ ।
ಅನ್ಯನ್ನ ವಾಂಛಿತಮಪೀಶ ಕಿಮಸ್ತಿ ಲೋಕೇ
ತ್ವದ್ಭಕ್ತಿದುರ್ಲಭಮಿತಿ ಪ್ರತಿಭಾತಿ ನಿತ್ಯಂ ॥೧೧೩॥

ಆಕಾಂಕ್ಷಾ ಶಿವನಾಮಮಾತ್ರಜಪನೇ ಭಸ್ಮತ್ರಿಪುಂಡ್ರೇ ತಥಾ
ರುದ್ರಾಕ್ಷಾಭರಣೇಽಪಿ ಶಂಗವಿಲಸಲ್ಲಿಂಗಾರ್ಚನೇಽಪಿ ಪ್ರಭೋ ।
ಶಂಗಾರಾಧನಸಾಧನೇಷ್ವಪಿ ಮುಹುರ್ಲಿಂಗಪ್ರಣಾಮೇಽಪಿ ಮೇ
ಲಿಂಗಾಲೋಕನಲೋಲನೇವ ಸತತಂ ಚಿತ್ತಂ ಮಮಾಸ್ತು ಪ್ರಭೋ॥೧೧೪॥

ಸರ್ವಸ್ವರೂಪನಾದ ಶಿವನೇ, ನನ್ನ ಮನಸ್ಸೆಂಬ ದುಂಬಿಯು ನಿನ್ನ ಪಾದಕಮಲದ ಮಕರಂದ ರಸದಲ್ಲಿ ಅನೇಕ ಬಾರಿ ಮುಳುಗಲಿ. ನಾನು ಇದೊಂದನ್ನೇ ಪ್ರಾರ್ಥಿಸುವೆನು. ಉಮಾಪತಿಯೇ, ಇದರಿಂದಲೇ ನಾನು ಕೃತಾರ್ಥನೂ, ಮೂರು ಲೋಕಗಳಲ್ಲಿ ಅತ್ಯಂತ ಧನವಂತನೂ ಎನ್ನಿಸಿಕೊಳ್ಳುವೆನು. ॥೧೧೨॥

ಉಮಾಪತಿಯೇ, ನಿನ್ನ ಪಾದಕಮಲವನ್ನು ಪೂಜಿಸುವುದೆಂಬ ಅಲ್ಪ ಭಕ್ತಿಯಿಂದಲೇ ನನ್ನ ಇಷ್ಟಾರ್ಥಗಳೆಲ್ಲವೂ ಸಿದ್ಧಿಸಿದುವು. ಈ ಲೋಕದಲ್ಲಿ ನಿನ್ನ ಭಕ್ತಿಗೆ ಸಿಕ್ಕದ್ದಿರುವ ಇಷ್ಟವಾದ ವಸ್ತುವಾವುದೂ ಇಲ್ಲವೆಂದೇ ನನಗೆ ತೋರುವುದು. ॥೧೧೩॥

ಹೇ ಸ್ವಾಮಿಯೇ, ಶಿವನಾಮ ಜಪ, ಭಸ್ಮತ್ರಿಪುಂಡ್ರ ಧಾರಣ, ರುದ್ರಾಕ್ಷಿಯ ಆಭರಣ, ಶಿವಲಿಂಗಾರ್ಚನೆ, ಶಿವಲಿಂಗಪೂಜೆಯ ಸಾಧನಗಳು, ನಮಸ್ಕಾರ, ಇವುಗಳಲ್ಲಿ ಪುನಃ ಪುನಃ ನನಗೆ ಆಸಕ್ತಿಯುಂಟಾಗಲಿ. ನನ್ನ ಮನಸ್ಸು ಯಾವಾಗಲೂ ನಿನ್ನ ದರ್ಶನ ಮಾಡುವುದಲ್ಲಿ ಸಂತೋಷಪಡಲಿ. ಅಷ್ಟುಮಟ್ಟಿಗೆ ನನಗೆ ಅನುಗ್ರಹಿಸು. ॥೧೧೪॥

ಮನ್ನೇತ್ರಾಂಬುಜಕೃತ್ಯಮಸ್ತು ಸತತಂ ಬಿಲ್ವಾದಿಕಾಭ್ಯರ್ಚಿತಾ
ಪಾರಾನಂಗವಿಹಾರತುಂಗವಿಲಸಲ್ಲಿಂಗಾರ್ಚನಾಲೋಕನಂ ।
ತೇನೈತಜ್ಜನನಂ ಚ ಧನ್ಯಮಿತಿ ಮೇ ಬುದ್ಧಿಃ ಪ್ರವೃದ್ಧಾ ಮುಹುಃ
ಭೂಯಾದಿತ್ಯನುವಾಸರಂ ಭವತು ಮೇ ಸಂಪ್ರಾರ್ಥನೀಯಂ ಪ್ರಭೋ ॥೧೧೫॥

ಶ್ರೋತ್ರಸ್ಯಾಪಿ ನ ಕೃತ್ಯಮನ್ಯದಧುನಾ ವಿಶ್ವೇಶಪೂಜಾ ಕಥಾ
ಪೀಯೂಷಾರ್ಣವಪಾನಮೇವ ಮುಹುರಪ್ಯತ್ಯಾದರೇಣಾನ್ವಹಂ ।
ತತ್ಕೃತ್ಯಂ ತದಪಾರಪುಣ್ಯಜಲಧಿಪ್ರಾಪ್ಯಂ ತದೇವಾಂತಕಂ
ದೂರೀಕರ್ತುಮಲಂ ಚ ತಾವದಸಕೃತ್ಸರ್ವೇಪ್ಸಿತಾರ್ಥಪ್ರದಂ ॥೧೧೬॥

ಕೃತ್ಯಂ ಮತ್ಕರಯೋರ್ಮಹೇಶ್ವರಮಹಾಲಿಂಗಾಲಯಪ್ರೋಕ್ಷಣಂ
ಲಿಂಗಾಭ್ಯಂಗವಿಲೇಪನಂ ಚ ವಿಲಸತ್ಪಂಚಾಮೃತಾಸೇಚನಂ ।
ಉತ್ಫುಲ್ಲಾಮಲಕುಂದಪಂಕಜಲಸದ್ಬಿಲ್ವೀದಳಾಭ್ಯರ್ಚನಂ
ಕರ್ಪೂರಾಗರುಸಾರಕರ್ದಮಲಸತ್ಪಾಟೀರಸಾರಾರ್ಪಣಂ ॥೧೧೭॥

ನನ್ನ ಕಣ್ಣುಗಳು ಬಿಲ್ವಪತ್ರೆ ಮೊದಲಾದವುಗಳಿಂದ ಪೂಜೆಮಾಡಿದ ಶಿವಲಿಂಗದ ಪೂಜೆಯನ್ನು ನೋಡುವ ಕೆಲಸವನ್ನು ಯಾವಾಗಲೂ ಮಾಡುತ್ತಿರಲಿ. ಅದರಿಂದಲೇ ಈ ಹುಟ್ಟು ಸಾರ್ಥಕವಾಗುವುದೆಂಬ ಬುದ್ಧಿಯು ನನಗುಂಟಾಗಿರುವುದು. ಹೇ ಸ್ವಾಮಿಯೇ, ಪ್ರತಿ ದಿನವೂ ಈ ಯೋಗವು ನನಗೆ ಉಂಟಾಗಲೆಂದು ನಿನ್ನನ್ನು ಪದೇ ಪದೇ ಬೇಡಿಕೊಳ್ಳುವೆನು. ॥೧೧೫॥

ನಮ್ಮ ಕಿವಿಗಳಿಗೂ ಕೂಡ ಪ್ರತಿ ದಿನವೂ ವಿಶ್ವೇಶ್ವರನ ಪೂಜೆಯ ಕಥೆಯೆಂಬ ಅಮೃತ ಸಮುದ್ರವನ್ನು ಪಾನಮಾಡುವ ಕೆಲಸವನ್ನು ಬಿಟ್ಟು ಮತ್ತೊಂದು ಕೆಲಸವಿಲ್ಲ. ಈ ಕೆಲಸವು ವಿಶೇಷ ಪುಣ್ಯದಿಂದ ದೊರೆಯಬೇಕು. ಈ ಕಾರ್ಯವು ಮಾನವನಿಗೆ ಯಮನ ಬಾಧೆಯನ್ನು ದೂರಮಾಡಿ ಸಕಲ ಇಷ್ಟಾರ್ಥಗಳನ್ನೂ ಉಂಟುಮಾಡುವುದು. ॥೧೧೬॥

ಗೌರಿಯೊಡನೆ ವಿಹರಿಸುವುದರಲ್ಲಿ ಪ್ರೀತಿಯುಳ್ಳ ಪರಮೇಶ್ವರನೇ, ಪ್ರತಿ ದಿನವೂ ನನ್ನ ಕೈಗಳಿಗೆ ಮಹೇಶ್ವರನ ಲಿಂಗಾಲಯವನ್ನು ತೊಳೆಯುವುದು. ಲಿಂಗಕ್ಕೆ ಪಂಚಾಮೃತಾಭಿಷೇಕ ಮಾಡುವುದು. ಕುಂದ, ಕಮಲ, ಬಿಲ್ವ ಮುಂತಾದುವುಗಳನ್ನು ಪೂಜಿಸುವುದು, ಕರ್ಪೂರ, ಅಗರು, ಶ್ರೀಗಂಧ ಇವುಗಳಿಂದ ಕೂಡಿದ ಗಂಧವನ್ನು

ಕ್ಷೀರಾನ್ನಾರ್ಪಣಧೂಪದೀಪವಿಲಸನ್ನೀರಾಜನಾದ್ಯರ್ಪಣಂ
ರತ್ನಚ್ಛತ್ರಸಮರ್ಪಣಂ ಚ ವಿಪುಲಶ್ರೀಚಾಮರಾದ್ಯರ್ಪಣಂ ।
ಯಚ್ಚಾದರ್ಶಕರದರ್ಪಣಾರ್ಪಣಮಪಿ ಪ್ರಾಯಃ ಪ್ರಣಾಮಾರ್ಪಣಂ
ಕೃತ್ಯಂ ಮತ್ಕರಯೋರ್ಭವತ್ಯನುದಿನಂ ಗೌರೀವಿಹಾರಾದರ ॥೧೧೮॥

ಜಿಹ್ವಾಕೃತ್ಯಮುಮಾಸಹಾಯಚರಣಾಂಭೋಜಾರ್ಚನಾರಾಧನ
ಧ್ಯಾನಾನುಸ್ಮರಣಪ್ರಭಾವಕಥನಂ ತನ್ನಾಮಸಂಕೀರ್ತನಂ ।
ತದ್ಗೌರೀರಮಣೋಪಹಾರಸುರಸವ್ಯಾಖ್ಯಾನಮಪ್ಯಾದರಾ
ತ್ತತ್ಪೂಜಾಕರಣಾನುವಾದನಮಪಿ ಶ್ರೀನೀಲಕಂಠ ಧ್ರುವಂ ॥೧೧೯॥

ನಾಸಾಕೃತ್ಯಮುಮಾಸಹಾಯಚರಣಾಂಭೋಜಾರ್ಚಿತಾತ್ಯುಲ್ಲಸ
ದ್ಬಿಲ್ವೀಪಲ್ಲವಫುಲ್ಲನೀಲಕಮಲಾಮೋದಾಗ್ರಹಸ್ತದ್ಗ್ರಹಃ ।
ಉಗ್ರಾನುಗ್ರಹತಃ ಸಮುಗ್ರತ ಇತಿ ಜ್ಞೇಯೋ ಗ್ರಹಾನುಗ್ರಹೋ
ಹಾರಾಹಾರಸುಗಂಧಸುಂದರಮಿದಂ ನಾಸಾಪುಟಂ ಧೂರ್ಜಟೇ ॥೧೨೦॥

ಸಮರ್ಪಿಸುವುದು, ಕ್ಷೀರಾನ್ನವನ್ನು ನಿವೇದನ ಮಾಡಿ ಧೂಪ, ದೀಪ, ನೀರಾಜನಗಳನ್ನು ಸಮರ್ಪಿಸುವುದು. ರತ್ನದ ಛತ್ರಿ, ಚಾಮರ ಸುವರ್ಣಮಯವಾದ ಕನ್ನಡಿ ಇವುಗಳನ್ನು ಒಪ್ಪಿಸಿ ನಮಸ್ಕಾರ ಮಾಡುವುದು ಈ ಕೆಲಸಗಳೇ ಸರ್ವದಾ ನಮಗೆ ಇರಲಿ. ॥೧೧೭-೧೧೮॥

ನನ್ನ ನಾಲಗೆಗೆ ಉಮಾಪತಿಯಾದ ಶಿವನ ಪಾದಕಮಲದ ಪೂಜೆ, ಧ್ಯಾನ, ಮುಂತಾದವುಗಳ ಮಹಿಮೆಯನ್ನು ಹೇಳುವುದು, ಗೌರೀಪತಿಯ ನಿವೇದನಕ್ಕೆ ಉಪಯೋಗಿಸುವ ರಸವತ್ತಾದ ವಸ್ತುಗಳನ್ನು ವಿವರಿಸುವುದು, ಆ ದೇವನ ಪೂಜೆಯ ವಿಸ್ತಾರವನ್ನು ವಿವರಿಸುವುದು, ಈ ಕೆಲಸಗಳೇ ಶಾಶ್ವತವಾಗಿರಲಿ. ॥೧೧೯॥

ಮಹಾದೇವನೇ, ನನ್ನ ಮೂಗು, ಉಮಾಪತಿಯ ಪಾದಗಳಿಗೆ ಪೂಜಿಸಿದ ಬಿಲ್ವಪತ್ರೆಯ ಚಿಗುರು, ಅರಳಿದ ನೈದಿಲೆ, ಇವುಗಳ ಸುವಾಸನೆಯನ್ನು ಗ್ರಹಿಸುವುದರಲ್ಲಿ ಆಸಕ್ತವಾಗಿರಲಿ. ಶಿವನ ಅನುಗ್ರಹದಿಂದ ಶಿವನಿಗೆ ಪೂಜಿಸಿದ, ಪುಷ್ಪಹಾರದ, ಸುಗಂಧವನ್ನು ಗ್ರಹಿಸಿ ಸುಂದರವಾಗಿ ಶೋಭಿಸಲಿ. ॥೧೨೦॥

ಪ್ರಣಾಮವ್ಯಾಜೇನ ಸ್ಮರಹರ ಭವತ್ಪಾದರಜಸಾ
ಶಿರೋಮಲ್ಲಕ್ರೀಡಾಂ ಸಕೃದಪಿ ಕರೋತು ಪ್ರಣಯತಃ ।
ಶಿರಃ ಕೃತ್ಯಂ ತಾವದ್ಭವತಿ ಖಲು ತೇನೈವ ತರಸಾ
ನ ಸಾ ಕಿಂ ಮೋಕ್ಷಶ್ರೀರಮಣಮಪಿ ಮಾಮೇವ ಕುರುತೇ ॥೧೨೧॥

ಕೃತ್ಯಂ ನ ಮೇ ಚರಣಯೋರಪಿ ಶಂಕರಾನ್ಯ
ಚ್ಛ್ರೀಕಾಶಿಕಾನಗರಸಂಚರಣಾಲಸೌ ತೌ ।
ಸ್ಯಾತಾಮತಃ ಪರಮುಮಾರಮಣಾನುವಾರಂ
ಕೃತ್ಯಂ ತದೇವ ನ ತಯೋರಪಿ ಕಿಂ ವಿಶಿಷ್ಯ ॥೧೨೨॥

ಶಂಭೋ ಭಾಲತಲಂ ವಿಭೂತಿವಿಲಸದ್ರೇಖಾಂಕಿತಂ ಸರ್ವದಾ
ಸ್ಯಾದೇತೇನ ನವೇಂದುಖಂಡಲಲಿತಂ ಭಾಲಂ ಭವೇತ್ತಾವತಾ ।
ತತ್ಕೃತ್ಯಂ ಚ ಸಮಾಪ್ತಮೇವಮಸಕೃನ್ಮತ್ಪ್ರಾರ್ಥನೀಯಂ ತ್ವಯಾ
ಕರ್ತವ್ಯಂ ಖಲು ಪೂರ್ಣಮೇವ ಭಗವನ್ಸಂಪೂರ್ಣಮೇವ ಪ್ರಭೋ॥೧೨೩॥

ಮನ್ಮಥನನ್ನು ನಾಶಮಾಡಿದ ಶಿವನೇ, ನನ್ನ ತಲೆಯು ನಿನಗೆ ನಮಸ್ಕಾರ ಮಾಡುವ ನೆಪದಿಂದ ನಿನ್ನ ಪಾದದೂಳಿಯೊಡನೆ ಒಂದಾವೃತ್ತಿಯಾದರೂ ಪ್ರೀತಿಯಿಂದ ಜಟ್ಟಿಯಕಾಳಗವನ್ನು ಮಾಡಲಿ. ತಲೆಯ ಕೆಲಸವು ಇಷ್ಟೇ ಸರಿ. ಅದು ಈ ಕಾರ್ಯವನ್ನು ಮಾಡುವುದರಿಂದಲೇ ಬೇಗ ನನ್ನನ್ನು ಮೋಕ್ಷ ಲಕ್ಷ್ಮಿಗೆ ಪತಿಯನ್ನಾಗಿ ಮಾಡುವುದು. ಶಿವನಿಗೆ ಶಿರಸಾ ನಮಸ್ಕಾರ ಮಾಡುವುದರಿಂದ ಮೋಕ್ಷಪ್ರಾಪ್ತಿಯಾಗುವುದೆಂದು ನಾನು ದೃಢವಾಗಿ ನಂಬಿರುವೆನು. ||೧೨೧||

ನನ್ನ ಕಾಲುಗಳಿಗೂ ಶಿವನ ಪ್ರೀತಿಕರವಾದ ಕಾರ್ಯವನ್ನು ಮಾಡುವುದನ್ನು ಬಿಟ್ಟು ಬೇರೆ ಕೆಲಸವಿಲ್ಲ. ಅವು ಕಾಶೀನಗರಕ್ಕೆ ಹೋಗಿ ಅಲ್ಲಿ ಸಂಚರಿಸುವ ಆಯಾಸವನ್ನು ಹೊಂದಲಿ. ಉಮಾಪತಿಯೇ, ಪ್ರತಿದಿನವೂ ಕಾಲುಗಳು ಈ ಉದ್ಯಮವನ್ನೇ ಕೈಗೊಳ್ಳಲಿ. ಇದಕ್ಕಿಂತ ವಿಶೇಷವಾದ ಕೆಲಸವು ಅದಕ್ಕೆ ಮತ್ತೇನಿರುವುದು ? ||೧೨೨||

ಶಿವನೇ, ನನ್ನ ಹಣೆಯು ಯಾವಾಗಲೂ ಪ್ರಕಾಶಮಾನವಾದ ವಿಭೂತಿ ರೇಖೆಯಿಂದ ಶೋಭಿಸುತ್ತಿರಲಿ. ಇದರಿಂದ ನನ್ನ ಹಣೆಯೂ ಚಂದ್ರನ ಕಳೆಯ ಅಲಂಕಾರವನ್ನು ಪಡೆದು, ಅದರ ಕೆಲಸವನ್ನು ಪೂರ್ಣಮಾಡಿಕೊಳ್ಳಲಿ. ಎಲೈ

ಅರ್ಥಿಸ್ಪ್ರಾರ್ಥಿತಮರ್ಥಜಾತಮಸಕೃದ್ದಾತುಂ ಸಮರ್ಥೋ ಭವಾನ್
ಶಂಭೋ ಶಾಂಭವವತ್ಸಲಾಶು ಕರಣಾನ್ಯೇತಸ್ಯ ಸರ್ವಾಣ್ಯಪಿ ।
ತ್ವನ್ನಾಮಸ್ಮರಣಾರ್ಚನಾದಿನಿರತಾನ್ಯೇವಾದರಾತ್ಸಂತು ಮೇ
ತಾನ್ಯೇವಾಸ್ಮದಭೀಷ್ಟಸಿದ್ಧಿಫಲದಾನೀತಿ ಸ್ಮರಾಮಿ ಧ್ರುವಂ ॥೧೨೪॥

ಅಸ್ಮತ್ಸಂತತಿರಪ್ಯನಂತವಿಭವೈರ್ಭಾವೈಃ ಪ್ರಭೂತೈರ್ಯುತಾ
ಲಿಂಗಾರಾಧನಸಾಧನೋದ್ಯತಮತಿಃ ಸಾ ಕಾಲಕಾಲಾರ್ಚನಾತ್ ।
ಕಾಲಾದ್ಭೀತಿಮಪಾಸ್ಯ ಮೌನಿನಿಕರಾಶಾಸ್ಯಾಶು ಪಂಚಾಸ್ಯ ತೇ ।
ತಾವತ್ಪುಣ್ಯಕಥಾಃ ಶೃಣೋತು ಸತತಂ ಸಂಪತ್ಪ್ರವೃದ್ಧ್ಯಾಪಿ ಸಾ ॥೧೨೫॥

ಅಸ್ಮಾಭಿಃ ಶಿವಲಿಂಗಪೂಜನಫಲಂ ಪ್ರಾಪ್ತಂ ಶ್ರುತೇರ್ಯಚ್ಛ್ರುತಂ
ತನ್ನಾರಾಯಣವಾಕ್ಪತಿಪ್ರಭೃತಿಭಿರ್ದೇವೈರ್ಮುಹುಃ ಸಾದರಂ ।

ಸ್ವಾಮಿಯೇ, ನಾನು ಬೇಡಿಕೊಳ್ಳುವ ಇಷ್ಟಾರ್ಥಗಳನ್ನು ಪೂರ್ಣಮಾಡುವುದು ನಿನ್ನ ಮುಖ್ಯ ಕೆಲಸವಲ್ಲವೇ. ||೧೨೩||

ಶಂಭುವೇ, ಯಾಚಕರು ಬೇಡಿದ ಸಮಸ್ತ ವಸ್ತುಗಳನ್ನು ಕೊಡಲು ನೀನೇ ಶಕ್ತನಾಗಿರುವೆ. ನಿನ್ನ ಭಕ್ತರಲ್ಲಿ ಪ್ರೀತಿಯುಳ್ಳ ನೀನು, ಅವರ ಇಷ್ಟಾರ್ಥಗಳನ್ನು ಬೇಗನೆ ನಡೆಸಬೇಕು. ನಿನ್ನ ನಾಮಸ್ಮರಣೆ, ಪೂಜೆ ಮುಂತಾದುವುಗಳಲ್ಲಿ ನನಗೆ ಪ್ರೀತಿಯುಂಟಾಗಲಿ. ಇವೇ ನಮ್ಮ ಇಷ್ಟಾರ್ಥಸಿದ್ಧಿಯನ್ನುಂಟುಮಾಡುವುವೆಂದು ಖಂಡಿತವಾಗಿ ತಿಳಿದಿರುವೆನು. ||೧೨೪||

ನಿನ್ನ ಭಕ್ತರಾದ ನಮ್ಮ ಸಮೂಹವಾದರೋ, ವಿಶೇಷವಾದ ಸಂಪತ್ತಿನಿಂದಲೂ, ಭಕ್ತಿಭಾವದಿಂದಲೂ ಕೂಡಿ ಲಿಂಗಪೂಜೆಗೆ ಬೇಕಾದ ಸಾಧನಗಳನ್ನು ಸಿದ್ಧಪಡಿಸುವುದರಲ್ಲಿ ಮನಸ್ಸು ಮಾಡಿರುವುದು. ಆ ಬುದ್ಧಿಯು ಯಮನಿಗೆ ಶತ್ರುವಾದ ಶಿವನ ಪೂಜೆಯಿಂದ ಯಮನ ಭಯವನ್ನು ಕಳೆದುಕೊಂಡು ಮುನಿಗಳ ಆಶೀರ್ವಾದಕ್ಕೆ ಪಾತ್ರವಾಗಿರುವುದು. ಪಂಚಮುಖನಾದ ಈಶ್ವರನೇ, ಈ ಭಕ್ತವೃಂದವು ನಿನ್ನ ಪುಣ್ಯಕರವಾದ ಕಥೆಯನ್ನು ಯಾವಾಗಲೂ ಕೇಳುತ್ತಿರಲಿ. ಹಾಗೆ ನಿನ್ನ ಕಥೆಯನ್ನು ಕೇಳುತ್ತಿರುವುದು ಸಂಪತ್ತಿನ ಅಭಿವೃದ್ಧಿಗೆ ಕಾರಣವಾಗುವುದಲ್ಲವೆ! ||೧೨೫||

ನಾವು ವೇದಗಳಲ್ಲಿ ಹೇಳಿದಂತೆ ಶಿವಲಿಂಗಪೂಜೆಗೆ ಯಾವ ಫಲವೋ ಆ ಫಲವನ್ನು ಪಡೆದೆವು. ನಾರಾಯಣ, ಬ್ರಹ್ಮರೇ ಮುಂತಾದ ದೇವತೆಗಳು ಪ್ರೀತಿ

ಧನ್ಯೋಽಯಂ ಶಿವಪೂಜಕಸ್ತ್ರಿಭುವನಾರಾಧ್ಯೋಽಯಮಿತ್ಯುಚ್ಯತೇ
ನಿತ್ಯಂ ಮತ್ಪದಸಾರ್ಥಿತೈರಪಿ ಗೃಹವ್ಯಾಪಾರಸಾರಾದರೈಃ ॥೧೨೬॥

ಭೂಲೋಕೋಽಪ್ಯಧುನಾ ಮಹೇಶಕೃಪಯಾ ಕೈಲಾಸ ಏವಾಭವ
ನ್ನಂದೀಶಪ್ರಮುಖಾಶ್ಚ ಸಂತತಮುಮಾಕಾಂತಾರ್ಚನೇ ಸಾದರಂ ।
ಮಂದಂ ಮಂದಿರಮೇತ್ಯ ಸುಂದರವರಂ ವೀರೇಶ್ವರಾರಾಧತೋ ।
ಧನ್ಯೋ ಧನ್ಯತಮೋಽಯಮಿತ್ಯನುದಿನಂ ಮಾಂ ಪ್ರಸ್ತುವಂತೀತ್ಯತಃ ॥೧೨೭॥

ಶಿವ ಶಿವ ಶಿವ ಶಂಭೋ ಚಂದ್ರಮೌಳೇ ಕಪರ್ದಿ ।
ನ್ನನಲವಿಮಲಭಾಲಾಬಾಲಲೀಲಾವಿಲಾಸ ।
ವಸ ವಸ ವಸ ವಾಸೇ ಮನ್ಮನಸ್ಯೇವ ಲಾಸ್ಯಂ
ಕುರು ಕುರು ಕುರು ಗೌರೀಸಂನಿವೇಶ್ಯಾಂಕಭಾಗೇ ॥೧೨೮॥

ಯಿಂದ "ಶಿವಪೂಜೆಯನ್ನು ಮಾಡುವ ಮನುಜನೇ ಕೃತಾರ್ಥನು. ಅವನನ್ನು ಮೂರು ಲೋಕದವರೂ ಪೂಜಿಸಬೇಕು. ಅದರಿಂದ ಅವರು ಶಿವಲೋಕವನ್ನು ಹೊಂದಿ ಐಹಿಕವಾದ ಸಕಲ ಭೋಗಗಳನ್ನೂ ಪಡೆಯುವರು" ಎಂದು ಹೇಳುವರು. ॥೧೨೬॥

ನಂದೀಶ್ವರನೇ ಮುಂತಾದವರು ಉಮಾಪತಿಯಾದ ಶಿವನ ಪೂಜೆಯಲ್ಲಿ ಪ್ರೀತಿಯುಳ್ಳವರಾಗಿ, ಮೆಲ್ಲಗೆ ನಮ್ಮ ಮನೆಗೆ ಬಂದು, ಸುಂದರನಾದ ವೀರೇಶ್ವರನನ್ನು ಪೂಜೆಮಾಡುವ ಈ ಚಿತ್ರಕೇತುರಾಜನೇ, ಅತ್ಯಂತ ಪುಣ್ಯವಂತನೆಂದು ಪ್ರತಿದಿನವೂ ನನ್ನನ್ನು ಸ್ತೋತ್ರಮಾಡುವರು. ಆದುದರಿಂದ ಆ ಮಹೇಶ್ವರನ ಅನುಗ್ರಹದಿಂದ ಈ ಭೂಲೋಕವೇ ಕೈಲಾಸವಾಗಿರುವುದು. ॥೧೨೭॥

ಶಿವನೇ, ಶಂಭುವೇ, ಚಂದ್ರಶೇಖರನೇ, ಜಟಾಧಾರಿಯೇ, ಅಗ್ನಿನೇತ್ರನೇ, ಬಾಲಚಂದ್ರನಿಂದ ಕೂಡಿದವನೇ, ಸರ್ವದಾ ತನ್ನ ತೊಡೆಯಲ್ಲಿ ಗೌರಿಯನ್ನು ಕೂಡಿಸಿಕೊಂಡು, ನನ್ನ ಮನಸ್ಸಿನಲ್ಲಿಯೇ ವಾಸವಾಗಿರು. ಅಲ್ಲಿಯೇ ನರ್ತನವನ್ನೂ ಮಾಡುತ್ತಿರು. ॥೧೨೮॥

ಉತ್ಫುಲ್ಲಮಮಮಾನಸಾಂಬುಜವರಂ ತತ್ಕರ್ಣಿಕಾಯಾಂ ಶಿವಾ ।
ಮಾಲಿಂಗ್ಯಾನ್ವಹಮಾದರೇಣ ಗಿರಿಜಾಜಾನೇ ಶಿವೋಮಾಪತೇ
ಪಾಹೀತಿ ಶೃಣು ತತ್ಕರಾಂಬುಜಮಹಾವೀಣಾಂ ಗೃಹಾಣ ಕ್ಷಣಂ
ತಂತ್ರೀವಾದನಲಾಲಸಃ ಶಿವ ಶಿವ ಕಲ್ಯಾಣಗೌರೀತಿ ಚ ॥೧೨೯॥

ಇತಿ ಶ್ರೀಶಿವರಹಸ್ಯೇ ಹರಾಖ್ಯೇ ತೃತೀಯಾಂಶೇ ಉತ್ತರಾರ್ಧೇ
ಚಿತ್ರಕೇತುನಾಮಶೈವರಾಜಚಾರಿತ್ರವರ್ಣನಂ ನಾಮ ದ್ವಾವಿಂಶೋಽಧ್ಯಾಯಃ

ಚೆನ್ನಾಗಿ ಅರಳಿದ ಮನಸ್ಸೆಂಬ ಕರ್ಣಿಕೆಯಲ್ಲಿ ಗೌರಿಯನ್ನು ಆಲಿಂಗಿಸಿಕೊಂಡು ಯಾವಾಗಲೂ ವಾಸವಾಗಿರುವ ಶಿವನನ್ನು, ಗಿರಿಜಾಪತಿಯೇ, ಉಮಾಪತಿಯೇ ಶಿವನೇ, ಕಲ್ಯಾಣಪ್ರದನೇ, ನನ್ನನ್ನು ರಕ್ಷಿಸು ಎಂಬುದಾಗಿ ಧ್ಯಾನಮಾಡುತ್ತ ಒಂದು ಕ್ಷಣಕಾಲ ವೀಣೆಯನ್ನು ತೆಗೆದುಕೊಂಡು ತಂತ್ರಿಯನ್ನು ಧ್ವನಿಮಾಡಿ ಗಾನ ಮಾಡು.' ಎಂದು ಯಾಜ್ಞವಲ್ಕ್ಯ ಮಹರ್ಷಿಯು ಜನಕಮಹಾರಾಜನಿಗೆ ಚಿತ್ರ ಕೇತುವೆಂಬ ಮಹಾರಾಜನ ವೃತ್ತಾಂತವನ್ನು ಹೇಳುವ ವ್ಯಾಜದಿಂದ ಶಿವಧ್ಯಾನ ಮಹಿಮೆಯನ್ನು ವಿವರಿಸಿ ಹೇಳಿದನು. ॥೧೨೯॥

ಇಲ್ಲಿಗೆ ಶ್ರೀಶಿವರಹಸ್ಯದ ಮೂರನೆಯ ಅಂಶದ ಉತ್ತರಾರ್ಧದಲ್ಲಿ
ಚಿತ್ರಕೇತುವೆಂಬ ಶೈವರಾಜನ ಚರಿತ್ರೆಯ ವರ್ಣನೆಯೆಂಬ
ಇಪ್ಪತ್ತೆರಡನೆಯ ಅಧ್ಯಾಯವು ಮುಗಿದುದು.

॥ ಶ್ರೀಃ ॥

ಅಥ ಶ್ರೀಶಿವರಹಸ್ಯೇ

ತೃತೀಯಾಂಶೇ

ಉತ್ತರಾರ್ಧೇ

ತ್ರಯೋವಿಂಶೋಽಧ್ಯಾಯಃ

॥ ಯಾಜ್ಞವಲ್ಕ್ಯ ಉವಾಚ ॥

ಭೂಯಃ ಸ ಭೂಮಂಡಲಮಂಡನತ್ವಾ
ತ್ತತ್ರೇಂದುಖಂಡಾಭರಣಾರ್ಚನೇನ ।
ಅಖರ್ವಶರ್ವಾರ್ಚನಜಾತಪುಣ್ಯಾಃ
ಸರ್ವೇ ವರೇಣ್ಯಾಃ ಸತತಂ ಧರಣ್ಯಾಂ ॥೧॥

ಉಮಾಕಾಂತಂ ಶಾಂತಂ ಕಿಮಿತಿ ನ ಭಜಾಮೋ ಮುಹುರಹೋ
ಮಹೋದಾರೈರ್ದಾರೈರುರುತರವಿಹಾರೈಃ ಸಹ ಸದಾ ।
ಮಹಾದೇವಧ್ಯಾನಪ್ರಥಿತಸುಧಯಾ ನಿರ್ಮಲಧಿಯಾ
ಕಥಂ ವಾ ನ ಸ್ವಾಂತಂ ಕಥಮಪಿ ನ ವಿಶ್ರಾಂತಮಧುನಾ ॥೨॥

ಇಪ್ಪತ್ತುಮೂರನೆಯ ಅಧ್ಯಾಯ

ಮತ್ತೆ ಯಾಜ್ಞವಲ್ಕ್ಯನು, ಜನಕರಾಜನನ್ನು ಕುರಿತು ಹೀಗೆಂದನು “ ಚಿತ್ರಕೇತುವಿನ ರಾಜ್ಯವು ಭೂಮಂಡಲಕ್ಕೆ ಅಲಂಕಾರ ಪ್ರಾಯವಾಗಿತ್ತು. ಅಲ್ಲಿ ಚಂದ್ರಶೇಖರನಾದ ಶಿವನ ಪೂಜೆಯಿಂದ ಸರ್ವರೂ ಪುಣ್ಯವಂತರಾಗಿದ್ದರು. ಆದುದರಿಂದ ಭೂಮಿಯಲ್ಲಿ ಅಲ್ಲಿಯ ಜನರೇ ಶ್ರೇಷ್ಠರೆನಿಸಿಕೊಂಡಿದ್ದು ಸುಖಿಗಳಾಗಿದ್ದರು. ॥೧॥

ಉಮಾಪತಿಯೂ ಶಾಂತನೂ ಆದ ಶಿವನನ್ನು ಉದಾರವಾದ ಬುದ್ಧಿಯಿಂದ ಪತ್ನಿಯರೊಡಗೂಡಿ ವಿಸ್ತಾರವಾದ ವಿಹಾರ ಸ್ಥಳಗಳಲ್ಲಿ ಯಾವಾಗಲೂ ಏತಕ್ಕೆ

ಸ್ಫುರದ್ರತ್ನಾಗಾರವ್ಯತಿಕರಶರಚ್ಚಾರುಚಪಲಾ
ವಿಲಾಸಪ್ರಾಸಾದಪ್ರಸರದುರುಶೀತಾಂಶುಕಿರಣೈಃ ।
ಸ್ರವನ್ನೀರಂ ಹಾರಂ ರುಚಿಕರಮುಪಸ್ಪೃಶ್ಯ ಚ ಮುಹು ।
ರ್ಮುದಾ ಲಿಂಗಂ ತುಂಗಂ ಕರಕಮಲಸಂಗಂ ನ ಕಲಯೇ ॥೩॥

ಮಹಾದೇವಂ ಬಿಲ್ವೀದಳಕಮಲಕಲ್ಲೋಲಕಮಲ
ಪ್ರವಾಲವ್ಯಾಲಾಳಿಪ್ರಜಲಜಲಜಾನಂದದರಸೈಃ ।
ಸಮಾರಾಧ್ಯಾರಾಧ್ಯಂ ಸದಯಮುದಯೇ ಸಾಯಮಸಕೃ
ನ್ಮಯಾ ನೇಯಃ ಸೋಽಯಂ ಸಮಯ ಇತಿ ಬುದ್ಧಿಃ ಪ್ರಸರತಿ ॥೪॥

ನ ದೈನ್ಯಂ ದೈತ್ಯಾರಿಸ್ಮರಹರಪದಾಂಭೋಜಭಜನಾ
ದದಾನಾನಾಂ ಚಿತ್ತಂ ಕಥಮಪಿ ನ ಚಿಂತಾಕುಲಮತಃ ।
ಪ್ರಸನ್ನಂ ಪಶ್ಯಾಮಸ್ತ್ರಿನಯನಮಿಹಾಸನ್ನಮಸಕೃ
ಲ್ಲಸದ್ಬಿಲ್ವೀಮೂಲೇ ನವವಿಮಲಬಿಲ್ವಾರ್ಚಿತಪದಂ ॥೫॥

ಪೂಜಿಸುವುದಿಲ್ಲ? ನಮ್ಮ ಮನಸ್ಸು ಮಹಾದೇವನ ಧ್ಯಾನವೆಂಬ ಅಮೃತದಿಂದ ನಿರ್ಮಲವಾಗಿ ಇನ್ನೂ ಏತಕ್ಕೆ ವಿಶ್ರಾಂತಿಯನ್ನು ಹೊಂದಲಿಲ್ಲ?

ಪ್ರಕಾಶಿಸುತ್ತಿರುವ ರತ್ನ ಖಚಿತವಾದ ಮನೆಯಲ್ಲಿ, ಶರತ್ಕಾಲದಲ್ಲಿ, ಮನೋಹರ ರಾದ ಸ್ತ್ರೀಯರ ವಿಲಾಸದಿಂದ ಕೂಡಿದ ಉಪ್ಪರಿಗೆಯಲ್ಲಿ, ಹರಡಿರುವ, ವಿಶೇಷವಾದ ಚಂದ್ರಕಿರಣಗಳಿಂದ ಚಂದ್ರಕಾಂತ ಶಿಲೆಯಿಂದ ಸ್ರವಿಸುತ್ತಿರುವ ರುಚಿಯಾದ ನೀರನ್ನು ಆಚಮನ ಮಾಡಿ, ಸಂತೋಷದಿಂದ ಶ್ರೇಷ್ಠವಾದ ಶಿವಲಿಂಗವನ್ನು ಕೈಯಲ್ಲಿ ಪೂಜಾರ್ಥವಾಗಿ ಎಂದೂ ಇಟ್ಟುಕೊಳ್ಳಲಿಲ್ಲ. ॥೩॥

ಅಂತಹ ಸಮಯದಲ್ಲಿ ಬಿಲ್ವಪತ್ರೆಯ ದಳಗಳು, ಕಮಲದ ಹೂಗಳು ಬಿಲ್ವದ ಚಿಗುರುಗಳು, ಕಮಲದ ಆನಂದಕರವಾದ ರಸ, ಇವುಗಳಿಂದ ಕರುಣಾ ಶಾಲಿಯೂ, ಪೂಜ್ಯನೂ, ಆದ ಮಹಾದೇವನನ್ನು ಪ್ರಾತಃಕಾಲ ಸಂಧ್ಯಾಕಾಲಗಳಲ್ಲಿ ಅನೇಕ ಬಾರಿ ಪೂಜಿಸಿ ಕಾಲಕಳೆಯಬೇಕೆಂಬ ಬುದ್ಧಿಯು ನನಗೆ ಈಗ ಉಂಟಾಗಿರು ವುದು. ॥೪॥

ದೈತ್ಯರಿಗೆ ಶತ್ರುವೂ, ಮನ್ಮಥನನ್ನು ನಾಶಮಾಡಿದವನೂ ಆದ ಶಿವನ ಪಾದ ಕಮಲಪೂಜೆಯಿಂದ ದಾರಿದ್ರ್ಯವು ಬರುವುದಿಲ್ಲ. ಮತ್ತು ಪೂಜೆಮಾಡಿದವರ ಮನಸ್ಸು

ವಿಪನ್ನಾಶಸ್ಯಾಯಂ ಸಮಯ ಇತಿ ಮನ್ಯೇ ಮುಹುರಹಂ
ಮಹಾದೇವೋ ಯಸ್ಮಾದಸಕೃದಧುನಾ ಸ್ಮರ್ಯತ ಇತಿ ।
ಅಯಂ ಧನ್ಯಃ ಸೋಽಯಂ ಸಮಯ ಇತಿ ಮನ್ಯೇ ಮುಹುರಹಂ
ಮಹಾಮೋಹೋ ನಾಶಂ ಗತ ಇತಿ ಮುಹುರ್ಮೋದಸಹಿತಃ ॥೬॥

ಮಹೋತ್ಸಾಹಸ್ಯಾಯಂ ಸಮಯ ಇತಿ ಮನ್ಯೇ ಮುಹುರಹಂ
ಮುಹುರ್ಮನ್ಯೇ ಮನ್ಯೇ ಮುಹುರಪಿ ಚ ಮನ್ಯೇ ಮುಹುರಪಿ ।
ಯತಶ್ಚಿತ್ತಾಂಭೋಜೇ ಶಿವಚರಣಪಂಕೇರುಹರಜಃ
ಪ್ರವಿಷ್ಟಂ ಕಷ್ಟಾನಾಮುಪನಯನಮಾಸೀನ್ಮುಹುರಹೋ ॥೭॥

ಕಿಂ ಕಿಂ ನ ದಾತುಮಭಿವಾಂಛತಿ ಚಂದ್ರಮೌಳಿ
ರ್ಭಕ್ತ್ಯಾ ಸ್ಮೃತೋಽಪಿ ಸಕೃದಾದರತಸ್ಸ್ತುತೋಽಪಿ ।
ಭಕ್ತ್ಯಾ ನತೋಽಪಿ ಸ ಯತಃ ಪ್ರಣತಸ್ಸ್ತುತೋ ವಾ
ಭಕ್ತಾಯ ಭಾಗ್ಯನಿಲಯಾಯ ಪದಂ ದದಾತಿ ॥೮॥

ಯಾವ ದುಃಖಕ್ಕೂ ಗುರಿಯಾಗುವುದಿಲ್ಲ. ಆದುದರಿಂದ ಇಲ್ಲಿ ಬಿಲ್ವಪತ್ರೆಯ ಗಿಡದ ಬುಡದಲ್ಲಿ, ಬಿಲ್ವದ ಮನೋಹರವಾದ ಚಿಗುರುಗಳಿಂದ ಅನೇಕ ಬಾರಿ ಪೂಜಿಸಿದ ಪಾದವುಳ್ಳ ಮುಕ್ಕಣ್ಣನು ಪ್ರಸನ್ನನಾಗಿರುವನೆಂದು ಭಾವಿಸುವೆನು. ||೫||

ಈಗ ಅನೇಕಬಾರಿ ಮಹಾದೇವನ ಸ್ಮರಣೆಯು ಬಂದುದರಿಂದ ನಮ್ಮ ವಿಪತ್ತುಗಳು ನಾಶವಾಗುವ ಕಾಲವು ಬಂತೆಂದು ಮತ್ತೆ ಮತ್ತೆ ಸಂತೋಷ ಪಡುವೆನು. ಅಜ್ಞಾನ ನಿವೃತ್ತಿಯಿಂದಲೂ ತೃಪ್ತನಾಗಿರುವೆನು. ||೬||

ನನ್ನ ಮನಸ್ಸೆಂಬ ಕಮಲದಲ್ಲಿ ಶಿವನ ಪಾದಪದ್ಮದ ದೂಳಿಯು ಪ್ರವೇಶಿಸಿದುದರಿಂದ, ನನ್ನ ಕಷ್ಟಗಳೆಲ್ಲ ನಾಶವಾದುವು. ಆದುದರಿಂದ ಇದೇ ಮಹೋತ್ಸವಗಳ ಕಾಲವೆಂದು ನಾನು ಪುನಃ ಪುನಃ ತಿಳಿದುಕೊಳ್ಳುತ್ತಿರುವೆನು. ||೭||

ಚಂದ್ರಶೇಖರನಾದ ಶಿವನನ್ನು ಧ್ಯಾನಿಸಿದರೂ, ಸ್ತೋತ್ರಮಾಡಿದರೂ, ನಮಸ್ಕಾರಮಾಡಿದರೂ, ಆ ದೇವನು ಪುಣ್ಯವಂತನಾದ ಆ ಭಕ್ತನಿಗೆ ಅವನ ಇಷ್ಟಾರ್ಥಗಳನ್ನೆಲ್ಲ ಕೊಟ್ಟು, ನನಗೆ ಉತ್ತಮವಾದ ತನ್ನ ಸ್ಥಾನವನ್ನೇ ದಯಪಾಲಿಸುವನು. ||೮||

ವಿತರಣಗುಣಸಿಂಧುರ್ಬಂಧುರೇವ ಸ್ವಭಕ್ತಾ
ನಯಮುಗಪತಿಕನ್ಯಾಕಾಂತ ಇತ್ಯೇವ ಮನ್ಯೇ ।
ಅಹಮಪಿ ಸಕೃದಾಶಾಪಾಶನಾಶಾಯ ಸಾಯಂ
ಶಿವ ಶಿವ ಶಿವ ಪಾಹೀತ್ಯುಚ್ಚರಾಮಿ ಸ್ಮರಾಮಿ ॥೯॥

ಉಚ್ಚೈರುಚ್ಚಾರ್ಯ ನಾಮ ಸ್ಮರಹರ ಹರ ಮಾಂ ಪಾಹಿ ಪಾಹೀತಿ ಶೈವಂ
ಕೃತ್ವಾ ನೃತ್ಯಂ ಶಿವಾಗ್ರೇ ಸಿತಭಸಿತತನುಸ್ಥೂಲರುದ್ರಾಕ್ಷಮಾಲಃ ।
ಕೈಲಾಸಾವಾಸವಾರ್ತಾ ರುಚಿಕರಸುಸುಧಾಪಾನಪೀನಃ ಕದಾ ವಾ
ದತ್ವಾ ಪ್ರಾಣೋಪಹಾರಂ ಶಿವ ಶಿವ ಶಿವ ತೇ ಯಾಮಿ ಕೈಲಾಸವಾಸಂ ॥೧೦॥

ಕಲ್ಯಾಣಾನಾಂ ವಾಸಮೇವೇತಿ ಮನ್ಯೇ
ತಂ ಕೈಲಾಸಂ ಸೋಽಪಿ ಕೈಲಾಸವಾಸಃ ।
ಯಾ ಕಲ್ಯಾಣೀ ತತ್ಪರೈರರ್ಚನಾದ್ಯೈ
ರಿತ್ಯಸ್ಮಾಕಂ ಬುದ್ಧಿರದ್ಯ ಪ್ರವೃದ್ಧಾ ॥೧೧॥

ಭಕ್ತ ಬಂಧುವಾದ ಶಿವನು ಅವರ ಇಷ್ಟಾರ್ಥಗಳನ್ನು ಕೊಡುವುದರಲ್ಲಿ ಸಮುದ್ರ ದಂತಿರುವನು. ಆ ದೇವನು ಭಕ್ತರನ್ನು ತನ್ನಂತೆ ತಿಳಿಯುವನು. ನಾನೂ ಹಾಗೆಯೇ ಭಕ್ತರು ಶಿವಸ್ವರೂಪರೆಂದು ತಿಳಿಯುವೆನು. ನನ್ನ ಆಸೆ ಎಂಬ ಪಾಶವು ನಾಶವಾಗುವುದಕ್ಕಾಗಿ ಸಂಧ್ಯಾಕಾಲದಲ್ಲಿ ಶಿವನೇ ಕಾಪಾಡು ಎಂದು ನಾಮಸ್ಮರಣೆಮಾಡುತ್ತ ಆ ಶಿವನನ್ನು ಧ್ಯಾನಿಸುವೆನು. ॥೯॥

ಸ್ಮರಹರನೇ, ಹರನೇ, ನನ್ನನ್ನು ರಕ್ಷಿಸು ಎಂದು ಗಟ್ಟಿಯಾಗಿ ಶಿವನಾಮವನ್ನುಚ್ಚರಿಸುತ್ತ, ಶಿವನೆದುರಿಗೆ ಭೂತಿ ರುದ್ರಾಕ್ಷಿಗಳನ್ನು ಧರಿಸಿ, ನರ್ತನಮಾಡುತ್ತ ಶಿವ ಕಥೆಯ ಅಮೃತಪಾನ ಮಾಡಿ, ಶರೀರವನ್ನು ಬೆಳಸಿಕೊಂಡು, ಕೊನೆಗೆ ಪ್ರಾಣವನ್ನು ಶಿವನಿಗೆ ಸಮರ್ಪಿಸಿ ಯಾವಾಗ ಕೈಲಾಸಕ್ಕೆ ಹೋಗುವೆನೋ ತಿಳಿಯದು. ॥೧೦॥

ಆ ಕೈಲಾಸಪರ್ವತವು ಮಂಗಳಗಳಿಗೆ ವಾಸಸ್ಥಾನವಾಗಿರುವುದು. ಆ ಶಿವನಾದರೋ ಅಂತಹ ಕೈಲಾಸದಲ್ಲಿಯೇ ವಾಸವಾಗಿರುವನು. ಆ ಶಿವನ ಪೂಜಾದಿಗಳಿಂದ ಮಂಗಳಕರವಾದ ಬುದ್ಧಿಯು ನಮಗೆ ಈಗ ಉಂಟಾಗಿ ಜ್ಞಾನಾಭಿವೃದ್ಧಿ ಹೊಂದಿರುವುದು. ॥೧೧॥

ಶರ್ವಾಣೀರಮಣಾರ್ಚನೇ ಯದಿ ಮನಃ ಪುಣ್ಯೈಃ ಪ್ರವೃತ್ತಂ ತದಾ
ಕಲ್ಯಾಣಾನಿ ಪದೇ ಪದೇಽಪಿ ಬಹುಧಾ ಸಂಪತ್ಪ್ರವಾಹೋದಯಃ ।
ಆಪತ್ಕಾನನನಾಶ ಏವ ಬಹುಧಾ ಪಾಪಾಬ್ಧಿಸಂಶೋಷಣಂ
ತೇನ ಸ್ಯಾದಿತಿ ಬುದ್ಧಿರದ್ಯ ಸಮಭೂದ್ವೇದಾಂತವಾಕ್ಯೈರ್ಮುಹುಃ ॥೧೨॥

ಯದ್ಯಚ್ಛೋಭನಮಿತ್ಯವೈಮಿ ಭುವನೇ ತತ್ತನ್ಮಹೇಶಾರ್ಚನಾ
ತ್ತ್ವಾವಜ್ಞಾತಮಿತಿ ಸ್ಮರಾಮಿ ಕರಣಂ ಕಾರ್ಯೈಃ ಪರಂ ಜಾಯತೇ
ತತ್ಕಾರ್ಯಾಣಿ ವಿನಾ ನ ತೇನ ಕರಣಾಭಾವೇ ಕ್ವ ಕಾರ್ಯಾಣಿ ವಾ ।
ಸಂಪನ್ನಾನಿ ಭವಂತಿ ಸಂತತಮಿತಿ ಸ್ವಾಂತಂ ವದತ್ಯೇವ ಮೇ ॥೧೩॥

ಸ್ಮೃತೋಽಪಿ ಹರತಿ ವ್ಯಥಾಮಮಿತರೋಗಜಾಲೋದ್ಭವಾ
ಮಪಾರಕರುಣಾನಿಧಿರ್ಗಿರಿಕುಮಾರಿಕಾಕಾಮುಕಃ ।
ಸ ಕಾಲಜನಿತವ್ಯಥಾಮಪಿ ಹರತ್ಯಕಸ್ಮಾತ್ಸ್ಮೃತಃ
ಸುರಾಸುರಶಿರೋಮಣಿಃ ಸ ಖಲು ಶೂಲಪಾಣಿರ್ಮಣಿಃ ॥೧೪॥

ಪುಣ್ಯಫಲದಿಂದ ಗೌರೀಪತಿಯನ್ನು ಪೂಜಿಸುವ ಮನಸ್ಸುಂಟಾದರೆ ಕಲ್ಯಾಣ ಪರಂಪರೆಗಳೂ ಸಂಪತ್ತುಗಳೂ ಪ್ರವಾಹದಂತೆ ಬರುತ್ತಿರುವುವು. ಕಷ್ಟವೆಂಬ ಕಾಡೂ ಪಾಪವೆಂಬ ಸಮುದ್ರವೂ ಒಣಗಿ ನಾಶವಾಗುವುವೆಂದು ವೇದಾಂತ ವಾಕ್ಯಗಳಿಂದ ನನ್ನ ಬುದ್ಧಿಯು ತಿಳಿದುಕೊಂಡಿರುವುದು. ॥೧೨॥

ಭೂಮಿಯಲ್ಲಿ ಯಾವ ಯಾವ ಶುಭಕಾರ್ಯಗಳಿವೆಯೋ ಅವೆಲ್ಲವೂ ಮಹೇಶ್ವರನ ಪೂಜಾರೂಪವಾದ ಕಾರಣದಿಂದಲೇ ಉಂಟಾಗಿರುವುವೆಂದು ತಿಳಿಯುತ್ತೇನೆ. ಕಾರಣವಿಲ್ಲದೆ ಕಾರ್ಯವು ಉಂಟಾಗುವುದಿಲ್ಲವೆಂಬ ನ್ಯಾಯವನ್ನು ನನ್ನ ಮನಸ್ಸು ಹೇಳುತ್ತಿರುವುದು. ॥೧೩॥

ದೇವಾಸುರರಿಗೆ ಶಿರೋಮಣಿ ಪ್ರಾಯನಾದ ಗಿರಿಜಾಪತಿಯು ತನ್ನನ್ನು ಸ್ಮರಿಸಿದ ಮಾತ್ರಕ್ಕೆ ಕರುಣೆಯಿಂದ ಭಕ್ತನ ಅನೇಕ ರೋಗಗಳ ಬಾಧೆಯನ್ನು ನಾಶಮಾಡುವನು. ಮತ್ತೆ ಅಕಸ್ಮಾತ್ತಾಗಿ ಉಂಟಾದ ಯಮನ ಭಯವನ್ನೂ ದೂರಮಾಡುವನು. ॥೧೪॥

ಅಸ್ಮಾಕಂ ಕುಲದೈವತಂ ಶಿವ ಇತಿ ಜ್ಞಾತೋ ಗುರುಃ ಶಾಂಭವಃ
ಸಂಬಂಧೋಽಪಿ ಸಶಾಂಭವೈಃ ಸಹ ಸಹಾಲಾಪೋಽಪಿ ಶೈವೈಃ ಸಹ ।
ಪ್ರೀತಿಸ್ತೈಃ ಸಹ ಸರ್ವದಾಪಿ ಸಹಿತೈರ್ವಾಸೋಽಪ್ಯಶೈವಾನ್ವಯೋ
ನಾಸ್ತ್ಯೇವಾಮರಣಂ ತತಃ ಪರಮಪಿ ಪ್ರಾಯೋ ನ ಸಂತ್ಯೇವ ತೇ ॥೧೫॥

ಅಸ್ಮಾಕಂ ಸುಕೃತಸ್ಯ ನಾವಧಿರುಮಾಕಾಂತಾರ್ಚನಾರಾಧನ
ಧ್ಯಾನಾಸೇವನಕಾರಣಾನಿ ಕರಣಾನ್ಯತ್ಯದ್ಭುತಾನ್ಯೇವ ತೈಃ ।
ಕಾಲೋ ಧಿಕ್ಕೃತ ಏವ ಕಾಲಸದನಾವಾಸಾದಿವಾರ್ತಾ ಕುತಃ
ಕ್ವಾಸ್ಮಾಕಂ ಜನನಾದಿಕಾದಪಿ ಭಯಂ ಸಂಸಾರಜಂ ವಾಭಯಂ ॥೧೬॥

ಸರ್ವತ್ರಾಭಯಮೇವ ನಃ ಶಿವಪದಾಂಭೋಜಾರ್ಚನಾತ್ಸರ್ವದಾ
ಸಂತೋಷಾಂಬುಧಿವೃದ್ಧಿರೇವ ಸತತಂ ಸರ್ವಾಪದಾಂ ವಿಪ್ಲವಃ ।
ಏತದ್ಭಾಗ್ಯಮಶಾಂಭವಸ್ಯ ನ ಕದಾಪ್ಯಸ್ತೀತ್ಯತಃ ಶಾಂಭವೇ
ಷ್ವಸ್ತಿ ಸ್ವಸ್ತಿಮತೀ ಮತಿಃ ಶಿವತರಧ್ಯಾನಾನುಕೂಲಾ ಸತೀ ॥೧೭॥

ನಮ್ಮ ಕುಲದೇವತೆಯು ಶಿವನು. ಶಾಂಭವನೇ ನನ್ನ ಗುರು. ನಮ್ಮ ಸಂಬಂಧ, ಮಾತು, ಪ್ರೀತಿ, ವಾಸ, ಇವುಗಳೆಲ್ಲವೂ ಶಿವಭಕ್ತರೊಡನೆಯೇ ಆಗಿರುವುದು. ಈ ಜನ್ಮದಲ್ಲಿ ಮರಣಪರ್ಯಂತವಾಗಿ ಪರಶಿವಭಕ್ತರಲ್ಲದವರ ಸಂಬಂಧವು ಬೇಡ. ಶಿವಸ್ಮರಣೆಯಿಂದ ಮರಣಾನಂತರದಲ್ಲಿ ಅವನ ಭಕ್ತರಲ್ಲದವರ ಸಂಬಂಧವು ಪ್ರಾಯಃ ಇರುವುದೇ ಇಲ್ಲ. ॥೧೫॥

ನಮ್ಮ ಪುಣ್ಯಕ್ಕೆ ಕೊನೆಯೇ ಇಲ್ಲ. ನಮ್ಮ ಇಂದ್ರಿಯಗಳು ಉಮಾಪತಿಯಾದ ಶಿವನ ಪೂಜೆ, ಧ್ಯಾನ, ಸೇವೆ ಮುಂತಾದುವುಗಳಿಂದ ತೃಪ್ತವಾಗಿವೆ. ಇವುಗಳಿಂದಲೇ ನಾವು ಯಮರಾಜನನ್ನು ಜಯಿಸಿರುವೆವು. ಹೀಗಿರುವಲ್ಲಿ ಯಮನ ಮನೆಗೆ ಹೋಗುವ ಸಂಭವವು ನಮಗೆಲ್ಲಿರುವುದು? ನಮಗೆ ಪೂರ್ವ ಜನ್ಮದ ಭಯವಾಗಲಿ ಸಂಸಾರ ಕಷ್ಟಗಳ ಹಿಂಸೆಯಾಗಲಿ ಇರುವುದಿಲ್ಲ. ॥೧೬॥

ಶಿವಪಾದಕಮಲವನ್ನು ಪೂಜಿಸುವುದರಿಂದ ನಮಗೆ ಯಾವಾಗಲೂ ಎಲ್ಲೆಡೆಯಲ್ಲಿಯೂ ಭಯವಿಲ್ಲದೆ ಸಮಸ್ತ ಕಷ್ಟಗಳೂ ನಾಶವಾಗಿ ಸಂತೋಷ ಸಮುದ್ರವು ಹೆಚ್ಚುತ್ತಿರುವುದು. ಇಂತಹ ಭಾಗ್ಯವು ಶಿವಭಕ್ತನಲ್ಲದವನಿಗೆ ಎಂದೂ ಇರುವುದಿಲ್ಲ.

ಶುದ್ಧಾ ಶಾಂಭವತಾಪಿ ತಾವದಧುನಾ ಭಾಗ್ಯಾನ್ಯಪಾರಾಣ್ಯಪಿ
ಪ್ರಾಜ್ಯಂ ರಾಜ್ಯಮಸಜ್ಯಮೇವ ಹಿ ಧನುರ್ವೀರಾಃ ಕುಮಾರಾ ಅಪಿ ।
ದಾರಾ ಅಪ್ಯಮರೀ ಸಹಾರಕಬರೀಭಾರಪ್ರಣಾಮಾದರಾಃ
ಶರ್ವಾಣೀರಮಣಾಂಘ್ರಿಪಂಕಜರಜೋಲೇಶಪ್ರಸಾದಾತ್ಪರಂ ॥೧೮॥

ಇತ್ಯುಕ್ತ್ವಾ ಸ ನೃಪಾಲಶೇಖರಮಣಿಸ್ತಂ ಶೂಲಪಾಣಿಂ ಮುಹುಃ
ಸ್ತುತ್ವಾ ಕಾಲವಿಲಾಸಜಾಲಮಸಕೃನ್ನಿರ್ಮೂಲ್ಯ ರಾಜ್ಯೇ ಸ್ವಕೇ ।
ದಾರೈಃ ಶಂಕರಸಾದರೈಃ ಶಿವಪರೈರ್ವೀರೈಃ ಕುಮಾರೈರಪಿ
ಪ್ರಾಪ್ಯಾಪಾರಸುಖಂ ಶಿವೈಕಶರಣಃ ಕ್ರೀಡಾವನಾಂತಂ ಯಯೌ ॥೧೯॥

ತದ್ವನಂ ನಾಗಪುಂನಾಗನಾರಿಕೇಳಸಮಾಶ್ರಿತಂ
ರಸಾಲಸಾಲಸರಲಕದಲೀಪುಂಗವೇಷ್ಟಿತಂ ॥೨೦॥

ಕೇತಕೀಮಾಧವೀಜಾಜೀಮಧೂಕವನಮಂಡಿತಂ ।
ಹಂಸರಾಜಸಮಾಕೀರ್ಣಂ ಸರೋವರವಿರಾಜಿತಂ ॥೨೧॥

ಆದುದರಿಂದ ಈಶ್ವರ ಭಕ್ತರಲ್ಲಿ ಶುಭವಾದ ಧ್ಯಾನಕ್ಕೆ ಅನುಕೂಲವಾದ ಮತ್ತು ಮಂಗಳಕರವಾದ ಬುದ್ಧಿಯು ನೆಲಸಿರುವುದು. ||೧೭||

ಶುದ್ಧವಾದ ಶಿವಭಕ್ತಿಯು ನನಗಿರುವುದು. ಅಲ್ಲದೆ ಪಾರ್ವತೀ ಪತಿಯ ಪಾದ ಕಮಲದ ದೂಳಿನ ಒಂದು ಕಣದ ಅನುಗ್ರಹದಿಂದ ಅಪಾರವಾದ ಸಂಪತ್ತೂ, ವಿಸ್ತಾರ ವಾದ ರಾಜ್ಯವೂ, ಶತ್ರುಗಳಿಲ್ಲದುದರಿಂದ ಹೆದೆಯನ್ನೇರಿಸದ ಧನುಸ್ಸೂ ನನ್ನಲ್ಲಿರುವುದು. ನನ್ನ ಮಕ್ಕಳುಗಳೆಲ್ಲ ಶೂರರಾಗಿರುವರು. ನನ್ನ ಪತ್ನಿಯರೂ ದೇವಸ್ತ್ರೀಯರಂತೆ ವಿಶೇಷ ವಾದ ತಲೆಯೂ, ಕೂದಲುಗಳೂ, ಕುತ್ತಿಗೆಯಲ್ಲಿ ಹಾರ ಮುಂತಾದ ಆಭರಣಗಳೂ ಉಳ್ಳವರಾಗಿ, ನಿನಗೆ ನಮಸ್ಕಾರ ಮಾಡುವುದರಲ್ಲಿ ಪ್ರೀತಿಯುಳ್ಳವರಾಗುವರು.” ||೧೮||

ಹೀಗೆಂದು ಆ ರಾಜಶ್ರೇಷ್ಠನಾದ ಚಿತ್ರಕೇತುವು ಹೇಳಿ, ಶೂಲಪಾಣಿಯಾದ ಈಶ್ವರನನ್ನು ಪುನಃ ಪುನಃ ಸ್ತೋತ್ರಮಾಡಿ, ಯಮನ ಬಾಧೆಯನ್ನು ಅನೇಕಬಾರಿ ನಾಶಮಾಡಿ, ಶಿವನಲ್ಲಿ ಭಕ್ತಿಯುಳ್ಳ ಪತ್ನಿಯರಿಂದಲೂ, ಶೂರರಾದ ಮಕ್ಕಳು ಗಳಿಂದಲೂ, ಕೂಡಿ ವಿಶೇಷವಾದ ಸುಖವನ್ನನುಭವಿಸುತ್ತ, ಒಂದಾನೊಂದು ದಿನ ಕ್ರೀಡಾವನಕ್ಕೆ ಹೋದನು. ||೧೯||

ಆ ವನವು ಸಂಪಿಗೆ, ಪುನ್ನಾಗ, ತೆಂಗು, ಮತ್ತಿ, ಬಾಳೆ, ಅಡಿಕೆ, ತಾಳೆ, ಇರು

ತತ್ರಾತಿಸುಂದರಂ ದೃಷ್ಟಂ ಶಾಂಕರಂ ರತ್ನಮಂದಿರಂ ।
ರತ್ನಪ್ರಾಸಾದಸಂಯುಕ್ತಂ ನಕ್ಷತ್ರಗಣವೇಷ್ಟಿತಂ ॥೨೨॥

ಮುಕ್ತಾಹಾರಾ ಇವಾಭಾಂತಿ ನಕ್ಷತ್ರಾಣಿ ವಿಶೇಷತಃ
ಶಿವಾಲಯಸ್ಯ ಶಿಖರೇ ಪ್ರಾಸಾದೇಷ್ವಪಿ ಕೋಟಿಶಃ ॥೨೩॥

ಶಿಖರಾಭರಣತ್ವೇನ ಚಂದ್ರಃ ಸೂರ್ಯಶ್ಚ ಸರ್ವದಾ
ಭಾತಿ ತತ್ರ ವಿಶೇಷೇಣ ಶಿಖರೇ ಶಿವಮಂದಿರೇ ॥೨೪॥

ರತ್ನೈರ್ವಿನಿರ್ಮಿತಾಸ್ತತ್ರ ನಂದಿಕೇಶ್ವರವಿಗ್ರಹಾಃ ।
ಗಣಾನಾಮಪಿ ಸರ್ವೇಷಾಂ ವಿಭಾಂತಿ ಮಣಿವಿಗ್ರಹಾಃ ॥೨೫॥

ಚಿತ್ರಾಣ್ಯಪಿ ವಿಚಿತ್ರಾಣಿ ಮಣಿಭಿತ್ತಿಷು ಕೋಟಿಶಃ ।
ನಾಟ್ಯೋತ್ಸವೋದ್ಯತಾನ್ಯೇವ ಪ್ರದೋಷೇಷು ವಿಶೇಷತಃ ॥೨೬॥

ಪರಿತೋ ಬಿಲ್ವತರವೋ ನವಪಲ್ಲವಮಂಡಿತಾಃ ।
ತೇಽಪಿ ಧನ್ಯಾ ವಯಂ ತಾವದಿತ್ಯನ್ಯೋನ್ಯಂ ವದಂತಿ ಹಿ ॥೨೭॥

ಮಂತಿಗೆ ಜಾಜಿ, ಹಿಪ್ಪೆ ಮುಂತಾದ ಮರಗಿಡಗಳಿಂದಲೂ, ಹಂಸಪಕ್ಷಿಗಳಿಂದ ತುಂಬಿದ ಸರೋವರಗಳಿಂದಲೂ ಶೋಭಿಸುತ್ತಿದ್ದಿತು. ||೨೦-೨೧||

ಅಲ್ಲಿ ರತ್ನ ಖಚಿತವಾದ ಮತ್ತು ಅತ್ಯಂತ ಎತ್ತರವಾದ ಉಪ್ಪರಿಗೆಯಿಂದ ಕೂಡಿದ ಒಂದು ಶಿವಮಂದಿರವು ಕಾಣಿಸಿತು. ಆ ಶಿವಾಲಯದ ಗೋಪುರ ಮತ್ತು ಉಪ್ಪರಿಗೆಗಳಿಗೆ ಮುತ್ತಿನ ಹಾರವನ್ನು ಹಾಕಿದೆಯೋ ಎಂಬಂತೆ ನಕ್ಷತ್ರಗಳು ಪ್ರಕಾಶಿಸುತ್ತಿದ್ದವು. ||೨೨-೨೩||

ಚಂದ್ರಸೂರ್ಯರು ಆ ಶಿವಾಲಯದ ಗೋಪುರಕ್ಕೆ ಯಾವಾಗಲೂ ಆಭರಣ ರೂಪವಾಗಿರುವರು. ಅಲ್ಲಿ ನಂದಿಕೇಶ್ವರನ ವಿಗ್ರಹಗಳೂ, ಗಣಾಧಿಪರ ಮೂರ್ತಿಗಳೂ ರತ್ನಗಳಿಂದ ಮಾಡಿದವುಗಳಾಗಿದ್ದುವು. ||೨೪-೨೫||

ರತ್ನಖಚಿತವಾದ ಗೋಡೆಗಳಲ್ಲಿ ಅನೇಕ ಬಗೆ ಬಗೆಯ ಚಿತ್ರಗಳಿದ್ದುವು. ಆ ದಿವಸ ಪ್ರದೋಷಕಾಲದಲ್ಲಿ ನಾಟ್ಯೋತ್ಸವವೂ ನಡೆಯುತ್ತಿದ್ದಿತು. ||೨೬||

ಆ ದೇವಾಲಯದ ಸುತ್ತಲೂ ಬಿಲ್ವಪತ್ರೆಯ ಮರಗಳು ಹೊಸದಾಗಿ ಚಿಗುರಿದ್ದುವು. ಆ ಮರಗಳು " ಶಿವಾಲಯದ ಸಮೀಪದಲ್ಲಿ ನಾವು ಬೆಳೆದಿರುವೆವು.

ಶಿವಾಲಯಸ್ಯ ನಿಕಟೇ ಜನ್ಮಜಾತಂ ಸ್ಥಿತಿಃ ಸದಾ ।
ರುದ್ರಾಭಿಷೇಕಪಾನೀಯೈಃ ಪಾಲನಂ ಚ ಪ್ರಜಾಯತೇ ॥೨೮॥

ಅಸ್ಮಾಕಂ ಪಲ್ಲವೈರೇವ ಶಂಕರೋಽಯಂ ಪ್ರಪೂಜ್ಯ ತೇ ।
ಇತಃ ಕಿಮಧಿಕಂ ಭಾಗ್ಯಂ ಪುಣ್ಯಂ ವಾ ಕಿಮತೋಽಧಿಕಂ ॥೨೯॥

ಆಕಾರಯಂತಿ ತರವಸ್ತರಸಾ ಶಾಂಕರಾನ್ಪರಂ ।
ಮದೀಯಾಃ ಪಲ್ಲವಾ ರಮ್ಯಾ ಮದೀಯಾಃ ಪಲ್ಲವಾ ಇತಿ ॥೩೦॥

ಆರಕ್ತಾಃ ಕೋಮಲಾ ಏವ ಪಲ್ಲವಾಃ ಕಮಲಾಮಲಾಃ ।
ಆಯಾಂತು ಶಾಂಕರಾಸ್ಸರ್ವೇ ಗೃಹ್ಣಂತ್ವಿತಿ ವದಂತಿ ತೇ ॥೩೧॥

ಅಖಂಡೈರಮಲೈರೇತೈರಾರಕ್ತೈರ್ಬಿಲ್ವಪಲ್ಲವೈಃ ।
ಪೂಜಯಂತ್ವಿತಿ ನಮ್ರಾಸ್ತೇ ಭವಂತಿ ತರವಃ ಸ್ವತಃ ॥೩೨॥

ಸರೋಜಾನ್ಯಪಿ ಸರ್ವಾಣಿ ಗೃಹ್ಣಂತ್ವಿತಿ ವಿಶೇಷತಃ ।
ಆಕಾರಯಂತಿ ಸಹಸಾ ಶಾಂಕರಾನ್ಭೂತಿಭೂಷಿತಾನ್ ॥೩೩॥

ಮಧೂಕಾದ್ಯಾಶ್ಚ ಸರ್ವೇಽಪಿ ತರವಃ ಪುಷ್ಪಸಂಕುಲಾಃ ।
ಹಾರಾನಾಕಾರಯಂತ್ಯೇವ ಶಿವಪೂಜಾಪರಾಯಣಾನ್ ॥೩೪॥

ರುದ್ರಾಭಿಷೇಕ ಮಾಡಿದ ನೀರಿನಿಂದ ನಮ್ಮನ್ನು ಬೆಳೆಸಿರುವರು. ನಮ್ಮ ಚಿಗುರುಗಳಿಂದ ಶಿವನನ್ನು ಪೂಜಿಸುವರು. ಇದಕ್ಕಿಂತ ಹೆಚ್ಚಾದ ಭಾಗ್ಯವು ಮತ್ತಾವುದು? ನಾವೇ ಕೃತಾರ್ಥರು. ||೨೭-೨೮-೨೯||

ನಾವೇ ಪುಣ್ಯಶಾಲಿಗಳು ನಮ್ಮ ಚಿಗುರು ಚೆನ್ನಾಗಿದೆ. ನಮ್ಮ ಚಿಗುರು ರಮ್ಯವಾಗಿ, ಕೆಂಪಗೆ ಮೃದುವಾಗಿ ಕಮಲದಂತೆ ನಿರ್ಮಲವಾಗಿವೆ. ಶಿವಭಕ್ತರೆಲ್ಲರೂ ಬಂದು ತೆಗೆದುಕೊಳ್ಳಿರಿ. ನಿರ್ಮಲವಾಗಿ ಕೆಂಪಗಿರುವ ಪೂರ್ಣವಾದ ಚಿಗುರುಗಳಿಂದ ಶಿವನನ್ನು ಪೂಜಿಸಿರಿ" ಎಂದು ಹೇಳುತ್ತ ಶಿವಭಕ್ತರನ್ನು ಕರೆಯುತ್ತಿರುವುವೋ ಎಂಬಂತೆ ತಾವೇ ಮನೋಹರವಾಗಿ ಬಗ್ಗಿರುವುವು. ||೩೦-೩೧-೩೨||

ಕಮಲಗಳೂ, ಹಿಪ್ಪೆಯ ಮರಗಳೂ ಹೂಗಳಿಂದ ತುಂಬಿ "ನಮ್ಮ ಹೂಗಳು ಮನೋಹರವಾಗಿ ಶುದ್ಧವಾಗಿವೆ, ತೆಗೆದುಕೊಳ್ಳಿರಿ" ಎಂದು ವಿಭೂತಿ

ಮದೀಯಾನಿ ಮನೋಜ್ಞಾನಿ ಪುಷ್ಪಾಣಿ ವಿಮಲಾನ್ಯಪಿ ।
ಅದ್ಯ ಗೃಹ್ಣಂತು ಗೃಹ್ಣಂತು ಗೃಹ್ಣಂತ್ವಿತಿ ವದಂತಿ ತೇ ॥೩೫॥

ದೂರಾಪಾಕಾರಯಂತ್ಯನ್ಯೇ ನತ್ವಾ ಶಾಖಾಭಿರಾದರಾತ್ ।
ಅಸ್ಮದೀಯಪ್ರಸೂನಾನಿ ಗೃಹ್ಣಂತ್ವಿತಿ ವಿಶೇಷತಃ ॥೩೬॥

ದೂರಸ್ಥಿತಾಸ್ತೇ ತರವೋ ವದಂತಿ
ನಾಸೀತ್ಕಥಂ ವಾ ಶಿವಸಂನಿಧಾನಂ ।
ಅಸ್ಮಾಕಮಿತ್ಯಾರ್ತವಚೋಭಿರುಚ್ಚೈಃ
ಪ್ರಿಯಾನಿವಾರ್ತಾ ದಯಿತಾ ವಿದೇಶೇ ॥೩೭॥

ತಾದೃಶಂ ವನಮಾಸಾದ್ಯ ಸ ರಾಜಾ ವಿಸ್ಮಯಂ ಗತಃ ।
ಕಿಮೇವಂ ತರವೋ ಲೋಕೇ ವದಂತಿ ಮಧುರಾಂ ಗಿರಂ ॥೩೮॥

ಇತ್ಯಾಶ್ಚರ್ಯಸಮಾಕ್ರಾಂತಃ ಸ ಕುಮಾರಸಮನ್ವಿತಃ ।
ದಾರೈರಪಿ ಯುತೋ ರಾಜಾ ಹಾರೈರನ್ಯೈಸ್ಸಮಾವೃತಃ ॥೩೯॥

ತತಃ ಪ್ರವಿಷ್ಟಃ ಶಿವಮಂದಿರಾಂತಃ
ಸಂಪೂಜ್ಯ ದೇವೇಶಮುಮಾಸಹಾಯಂ ।

ಯನ್ನು ಧರಿಸಿದ ಈಶ್ವರಭಕ್ತರನ್ನು ತಮ್ಮ ಸಮೀಪಕ್ಕೆ ಕರೆಯುವಂತೆ ಶೋಭಿಸುತ್ತಿದ್ದುವು. ||೩೩-೩೪-೩೫||

ಮತ್ತೆ ಕೆಲವು ಹೂಗಿಡಗಳು ದೂರದಲ್ಲಿದ್ದು ನಮ್ಮ ಹೂಗಳನ್ನು ತೆಗೆದುಕೊಳ್ಳಿರೆಂದು ಕೊಂಬೆಗಳನ್ನು ಬಗ್ಗಿಸಿ ನಮಸ್ಕಾರ ಮಾಡಿ ಕರೆಯುವಂತಿದ್ದುವು. ||೩೬||

ದೂರದಲ್ಲಿರುವ ಮರಗಳು, ತಮಗೆ ಶಿವಸನ್ನಿಧಾನವು ಯಾವ ಕಾರಣದಿಂದ ಉಂಟಾಗಲಿಲ್ಲ, ಎಂದು ವಿದೇಶದಲ್ಲಿರುವ ಸ್ತ್ರೀಯರು ತಮ್ಮ ಪತಿಗಳ ವಿಷಯದಲ್ಲಿ ಆರ್ತರಾಗಿರುವಂತೆ ಆರ್ತಧ್ವನಿಯನ್ನು ಮಾಡುತ್ತಿರುವುವು. ||೩೭||

ಆ ಚಿತ್ರಕೇತುರಾಜನು ಶಿವಾಲಯವನ್ನು ಸೇರಿ, ಲೋಕದಲ್ಲಿ ಮರಗಳೂ ಮಧುರವಾಗಿ ಮಾತನಾಡುವುವೇ? ಎಂದು ಆಶ್ಚರ್ಯಪಡುತ್ತ ತನ್ನ ಪುತ್ರರಿಂದಲೂ ಪತ್ನಿಯರಿಂದಲೂ ಶಿವಭಕ್ತರಿಂದಲೂ ತುಂಬಿ ಶಿವಮಂದಿರದೊಳಕ್ಕೆ ಪ್ರವೇಶಿಸಿ, ಉಮಾಪತಿ

ಪ್ರದಕ್ಷಿಣೀಕೃತ್ಯ ಪುನಃ ಪ್ರಣಮ್ಯ
ತತೋಽಪವಿಷ್ಟಃ ಶಿವಮೇವ ಪಶ್ಯನ್ ॥೪೦॥

ತತಃ ಪರಂ ತತ್ರ ಮುನೀನ್ ದದರ್ಶ
ವಿಭೂತಿಪೂತಾನತಿಪುಣ್ಯರೂಪಾನ್ ।
ರುದ್ರಾಕ್ಷಮಾಲಾಭರಣಾನಪಾರಾನ್
ಹಾರಾನ್ಹರಾರಾಧನಪೂತಚಿತ್ತಾನ್ ॥೪೧॥

ತತಃ ಪರಂ ತತ್ರ ಚತುರ್ಮುಖೋಽಪಿ
ಸಮಾಗತಃ ಶಂಕರಪೂಜನಾಯ ।
ಸಂಪೂಜಯಾಮಾಸ ಶಿವಾಸಹಾಯಂ
ಬಿಲ್ವೈಃ ಪ್ರಸೂನೈರಪಿ ಪುಣ್ಯಗಂಧೈಃ ॥೪೨॥

ಪ್ರದಕ್ಷಿಣೀಕೃತ್ಯ ಮುಹುಃ ಸ ನತ್ವಾ
ಧ್ಯಾತ್ವಾ ಮಹಾದೇವಮುಮಾಸಹಾಯಂ ।
ತತೋಽಪವಿಷ್ಟಃ ಸ ದದರ್ಶ ಭೂಪಂ
ಮಹೇಶ್ವರಧ್ಯಾನನಿವಿಷ್ಟಚಿತ್ತಂ ॥೪೩॥

ಯಾದ ಶಿವನನ್ನು ಪೂಜಿಸಿ, ಪ್ರದಕ್ಷಿಣ ನಮಸ್ಕಾರಗಳನ್ನು ಮಾಡಿ, ಶಿವಲಿಂಗವನ್ನೇ ನೋಡುತ್ತಾ ಅಲ್ಲಿಯೇ ಕುಳಿತನು. ॥೩೮-೩೯-೪೦॥

ಆಮೇಲೆ ಆ ಚಿತ್ರಕೇತುರಾಜನು ವಿಭೂತಿರುದ್ರಾಕ್ಷಿಗಳನ್ನು ಧರಿಸಿ ಪುಣ್ಯಕರವಾದ ರೂಪವುಳ್ಳ ಹರಭಕ್ತರಾದ ಮತ್ತು ಹರನಪೂಜೆಯಿಂದ ಪರಿಶುದ್ಧವಾದ ಮನಸ್ಸುಳ್ಳ ಅನೇಕ ಋಷಿಗಳನ್ನು ಅಲ್ಲಿ ಕಂಡನು. ॥೪೧॥

ಬಳಿಕ ಅಲ್ಲಿಗೆ ಶಿವನ ಪೂಜೆಗೋಸ್ಕರವಾಗಿ ಚತುರ್ಮುಖಬ್ರಹ್ಮನೂ ಬಂದನು. ಮತ್ತು ಗೌರಿಯೊಡಗೂಡಿದ ಶಿವನನ್ನು ಸುವಾಸನೆಯುಳ್ಳ ಬಿಲ್ವಪತ್ರೆಗಳಿಂದಲೂ ಪುಷ್ಪಗಳಿಂದಲೂ ಪೂಜಿಸಿದನು. ॥೪೨॥

ಆ ಬ್ರಹ್ಮನು ಅನೇಕಬಾರಿ ಉಮಾಪತಿಗೆ ಪ್ರದಕ್ಷಿಣ ನಮಸ್ಕಾರಗಳನ್ನು ಮಾಡಿ ಕುಳಿತುಕೊಂಡು, ಇತ್ತ ಮಹೇಶ್ವರನನ್ನು ಧ್ಯಾನಮಾಡುತ್ತಿದ್ದ ರಾಜನನ್ನು ನೋಡಿದನು. ॥೪೩॥

ರಾಜಾ ತದಾ ಮಾನಸಪೂಜನೇನ
ಚಕಾರ ಪೃಷ್ಟಿಂ ಗಿರಿಜಾಸಹಾಯಂ ।
ಹಾರಾಃ ಕುಮಾರಾಶ್ಚ ತಥೈವ ರಾಜ್ಞಃ
ಚಕ್ರುಃ ಶಿವಾರಾಧನಮಾದರೇಣ ॥೪೪॥

ತಂ ವಿಲೋಕ್ಯ ಸ ಚತುರ್ಮುಖಸ್ತದಾ
ಧನ್ಯ ಏವ ನೃಪತಿರ್ವಿಲೋಕಿತಃ ।
ಭೂರಿಪುಣ್ಯವಿಭವೈರಿತಿ ಬ್ರುವನ್
ತುಷ್ಟ ಏವ ಮನಸಾ ಶಿವಾರ್ಚಕಃ ॥೪೫॥

ತತಃ ಪರಂ ಧ್ಯಾನರತಂ ಕೃತಾರ್ಥಂ
ಮತ್ವಾ ಸ ಭೂಪಂ ಮನಸಾ ಪ್ರಣಮ್ಯ ।
ಉಚ್ಚೈಃ ಶಿವಾಂ ವಾಚಮುದೀರ್ಯ ಭಕ್ತ್ಯಾ
ತತ್ರೋಪವಿಷ್ಟಃ ಶಿವ ಇತ್ಯುದಾರಃ ॥೪೬॥

ತದುಕ್ತಶಬ್ದಧ್ವನಿಭಿಃ ಪ್ರಪೂರ್ಣಂ
ಬ್ರಹ್ಮಾಂಡಮೇತತ್ಸಕಲಂ ಸ ರಾಜಾ ।
ವಿಲೋಕ್ಯ ತಂ ವಿಸ್ಮಯಮಾಪ ಸದ್ಯಃ
ಕೋಽಯಂ ಧ್ವನಿಃ ಕ್ವತ್ಯ ಇತಿ ಪ್ರವಿಷ್ಟಃ ॥೪೭॥

ಆಗ ರಾಜನು ಗಿರಿಜಾಪತಿಯನ್ನು ಮನಸ್ಸಿನಲ್ಲಿಯೇ ಪೂಜಿಸುತ್ತಿದ್ದನು. ಹರಭಕ್ತರಾದ ಆ ರಾಜನ ಮಕ್ಕಳೂ ಸಹ ರಾಜನಂತೆಯೇ ಪ್ರೀತಿಯಿಂದ ಶಿವನ ಮಾನಸಪೂಜೆಯನ್ನು ಮಾಡುತ್ತಿದ್ದರು. ॥೪೪॥

ಚತುರ್ಮುಖಬ್ರಹ್ಮನು ಆಗ ರಾಜನನ್ನು ನೋಡಿ, ಅನೇಕ ಪುಣ್ಯಫಲದಿಂದ ಈ ರಾಜನು ಶಿವಪೂಜೆಯನ್ನು ಮಾಡುವ ಮನಸ್ಸುಳ್ಳವನಾಗಿರುವನು. ಇವನೇ ಕೃತಾರ್ಥನು ಎಂದು ಹೇಳುತ್ತ ಮನಸ್ಸಿನಲ್ಲಿಯೇ ಸಂತೋಷಪಟ್ಟನು. ॥೪೫॥

ಆಮೇಲೆ ರಾಜನು ಧ್ಯಾನಾಸಕ್ತನಾಗಿರುವುದರಿಂದ ಕೃತಾರ್ಥನಾದೆನೆಂದು ತಿಳಿದು, ಭಕ್ತಿಯಿಂದ ಗಟ್ಟಿಯಾಗಿ ಮಂಗಳಕರವಾದ ಶಿವನಾಮವನ್ನುಚ್ಚರಿಸುತ್ತ ಬ್ರಹ್ಮನು ಅಲ್ಲಿಯೇ ಕುಳಿತುಕೊಂಡನು. ॥೪೬॥

ಬ್ರಹ್ಮನು ಹೇಳುತ್ತಿದ್ದ ಶಿವನಾಮಗಳ ಧ್ವನಿಯಿಂದ ಬ್ರಹ್ಮಾಂಡವೆಲ್ಲವೂ

ತತಃ ಪರಂ ಸ ರಾಜಾಪಿ ವಿಸ್ಮಯಾಪನ್ನ ಏವ ತಂ ।
ಚತುರ್ಮುಖಂ ವಿಲೋಕ್ಯಾಹ ಸತ್ವಾ ಹಾರಥಿಯಾ ಮುದಾ ॥೪೮॥

॥ ರಾಜೋವಾಚ ॥

ದೃಷ್ಟೋಽಸಿ ಬಹುಕಾಲೇನ ಸದದೃಷ್ಟೇನ ಕೇವಲಂ ।
ದೃಷ್ಟಾ ದೃಷ್ಟಫಲಾವಾಪ್ತಿಸಾಧನಂ ವದ ಸಾದರಂ ॥೪೯॥

॥ ಬಹ್ಮೋವಾಚ ॥

ಧನ್ಯೋತ್ತಮಸ್ತ್ವಂ ನೃಪಶೇಖರಸ್ತ್ವಂ
ಭೂಮಂಡಸ್ಯಾಭರಣಂ ತ್ವಮೇವ ।
ಅತ್ರೇಂದುಖಂಡಾಭರಣಾರ್ಚನೇನ
ಪ್ರಾಪ್ತಂ ತ್ವಯಾ ಭಾಗ್ಯಮಪಾರಮೇವಂ ॥೫೦॥

ಭೂಚಕ್ರಾಧಿಪತಿಸ್ತ್ವಮೇವ ನೃಪತೇ ತ್ವಂ ಶಾಂಭವಾಗ್ರೇಸರ
ಸ್ತ್ವಚ್ಚಿತ್ತಂ ಗಿರಿಜಾಮನೋಹರಪದಾಂಭೋಜಾರ್ಚನೈಃ ಪಾವನಂ ।

ತುಂಬಿಕೊಂಡಿತು. ಆ ರಾಜನು ಇದನ್ನು ಕಂಡು ಈ ಧ್ವನಿಯು ಯಾವುದು? ಎಲ್ಲಿಂದ ಬರುತ್ತಿರುವುದು? ಎಂದು ವಿಚಾರಮಾಡಿ ಆಶ್ಚರ್ಯಪಡುತ್ತಿದ್ದನು. ॥೪೭॥

ಆಮೇಲೆ ಆ ರಾಜನೂ ಆಶ್ಚರ್ಯದಿಂದ ಬ್ರಹ್ಮನನ್ನು ನೋಡಿ ಇವನೂ ಹರಭಕ್ತನೆಂದು ಸಂತೋಷದಿಂದ ನಮಸ್ಕರಿಸಿ, ಅವನನ್ನು ಕುರಿತು ಹೀಗೆ ಮಾತನಾಡಿದನು. ॥೪೮॥

"ನನ್ನ ಉತ್ತಮವಾದ (ಅದೃಷ್ಟ) ಪೂರ್ವಪುಣ್ಯಫಲದಿಂದ ನಿನ್ನ ದರ್ಶನವಾಯಿತು. ದೃಷ್ಟವಾದ ಇಹಲೋಕಫಲಪ್ರಾಪ್ತಿಗೂ, ಅದೃಷ್ಟವಾದ ಪರಲೋಕ ಫಲಪ್ರಾಪ್ತಿಗೂ, ಸಾಧನವಾದುದಾವುದು? ಎಂಬ ವಿಚಾರವನ್ನು ಪ್ರೀತಿಯಿಂದ ನನಗೆ ಹೇಳಬೇಕು" ಎಂದನು. ॥೪೯॥

ಬ್ರಹ್ಮನು ಆಗ ಹೀಗೆಂದನು – ಎಲೈ ರಾಜಶ್ರೇಷ್ಠನೇ, ನೀನೇ ಕೃತಾರ್ಥನು. ಭೂಮಂಡಲಕ್ಕೆ ಆಭರಣಪ್ರಾಯವಾಗಿರುವೆ. ಇಲ್ಲಿ ಚಂದ್ರಶೇಖರನಾದ ಶಿವನ ಪೂಜೆಯಿಂದ ಅನಂತವಾದ ಸಂಪತ್ತನ್ನು ಪಡೆದಿರುವೆ. ॥೫೦॥

ಎಲೈ ರಾಜನೇ, ನೀನೇ ಶಿವಭಕ್ತರಲ್ಲಿ ಶ್ರೇಷ್ಠನು. ಭೂಮಂಡಲಕ್ಕೆ ಚಕ್ರವರ್ತಿಯಾಗಿರುವೆ. ನಿನ್ನ ಮನಸ್ಸು ಶಿವನ ಪಾದಕಮಲವನ್ನು ಪೂಜಿಸುವುದ

ತ್ವಂ ಮಾನ್ಯೋಽಸಿ ನರೇಷು ಕೋಽಪಿ ಭುವನೇ ನ ತ್ವಾದೃಶೋ ದೃಶ್ಯತೇ
ಭಾಗ್ಯಂ ತಾವದಪೇಕ್ಷಿತಂ ಖಲು ಭವೇದೇತಾದೃಶಂ ಸರ್ವಥಾ ॥೫೧॥

ಉದಾರದಾರಾ ಅಪಿ ತೇ ಮನೋಹರಾಃ
ಪರಂ ಸಹಾರಾ ಅಪಿ ತೇ ಚ ಹಾರಾಃ ।
ಹಾರಾಃ ಕುಮಾರಾ ಅಪಿ ತೇ ಸವೀರಾ
ಸ್ತೇಽಪಿ ಪ್ರವೀರಾ ಅಪಿ ತೇಽಪ್ಯುದಾರಾಃ ॥೫೨॥

ಅಸಾರಮೇತತ್ಖಲು ಭಾಗ್ಯಮೇವಂ
ನ ಸಂಶ್ರುತಂ ಕೋಽಪಿ ಪುರಾಪಿ ಭೂಪಃ ।
ಪುಣ್ಯಸ್ವರೂಪೋಽಸಿ ಕೃತಾರ್ಥ ಏವ
ಧನ್ಯೋಽಸ್ಮ್ಯಹಂ ತಾವಕದರ್ಶನೇನ ॥೫೩॥

ಪುಣ್ಯಶ್ಲೋಕಃ ಕೋಽಪಿ ಲೋಕೇ ವಿಶೋಕೋ
ಲೋಕಾಲೋಕಾಲೋಕನೇನಾಪಿ ಲಭ್ಯಃ ।
ಪುಣ್ಯಶ್ಲೋಕಸ್ತ್ವತ್ಸಮಾನಸ್ತ್ವಮೇವ
ತ್ವತ್ತುಲ್ಯೋಽನ್ಯೋ ನೇತ್ರಪಾತ್ರಂ ನ ನೂನಂ ॥೫೪॥

ರಿಂದ ಪರಿಶುದ್ಧವಾಗಿರುವುದು. ಜನರಲ್ಲಿ ನೀನೇ ಪೂಜ್ಯನು. ನಿನ್ನ ಸಮಾನರು ಭೂಮಿಯಲ್ಲಿಲ್ಲ. ಇಂತಹ ಭಾಗ್ಯವು ಯಾವಾಗಲೂ ಇರಬೇಕಾದುದು. ಎಲ್ಲರೂ ಇದನ್ನೇ ಅಪೇಕ್ಷಿಸುವರು. ॥೫೧॥

ನಿನ್ನ ಪತ್ನಿಯರೆಲ್ಲರೂ ಉತ್ತಮವಾದ ಹಾರವನ್ನು ಧರಿಸಿ, ಮನೋಹರೆಯರಾಗಿದ್ದರೂ ಹರನ ಭಕ್ತರಾಗಿರುವರು. ನಿನ್ನ ಮಕ್ಕಳೂ ಶೂರರಾಗಿ ಈಶ್ವರ ಭಕ್ತರೆನಿಸಿರುವರು. ॥೫೨॥

ಹಿಂದೆ ಎಂದೂ ಇಂತಹ ಭಾಗ್ಯವಂತನಾದ ರಾಜನು ಇದ್ದನೆಂದು ನಾನು ಕೇಳಿಲ್ಲ. ನೀನೇ ಪುಣ್ಯಸ್ವರೂಪನೂ ಕೃತಾರ್ಥನೂ ಆಗಿರುವೆ. ನಿನ್ನ ದರ್ಶನದಿಂದ ನಾನೂ ಧನ್ಯನಾದೆನು. ॥೫೩॥

ಲೋಕದಲ್ಲಿ ದುಃಖವಿಲ್ಲದ ಕೀರ್ತಿವಂತನಾದ ಮನುಷ್ಯನು ಸಮಸ್ತ ಲೋಕಗಳಲ್ಲಿ ಹುಡುಕಿದರೂ ಸಿಕ್ಕುವುದಿಲ್ಲ. ಕೀರ್ತಿವಂತನಾದ ನಿನಗೆ ನೀನೇ ಸಮಾನನು. ನಿನ್ನ ಸಮಾನನಾದ ಮನುಷ್ಯನು ನನ್ನ ಕಣ್ಣಿಗೆ ಯಾರೂ ಕಂಡಿಲ್ಲ. ॥೫೪॥

ತ್ವಂ ಲೋಕಾನಾಂ ಭಾಗ್ಯದಾನಾಯ ತಾವ
ದ್ಭೂಲೋಕೇಸ್ಮಿನ್ಭೂರಿ ಪುಣ್ಯಾವತೀರ್ಣಃ ।
ತ್ವಂ ವೈ ಸಾಕ್ಷಾಚ್ಛ್ರೀವಿರೂಪಾಕ್ಷಭಕ್ತೋ
ಭಕ್ತಃ ಕೋ ವಾ ತ್ವಾದೃಶೋ ಭೂತಲೇಪಿ ॥೫೫॥

ತ್ವಯಿ ಶಾಸತಿ ಕಾನನೇಪಿ ರಾಜ
ನ್ಮೃಗಯೋ ಘಾತುಕಜಂತವೋಪಿ ಗಾವಃ ।
ಸಹ ಸಂತಿ ಚರಂತಿ ಸಂತಿ ಸಂತಃ
ಕತಿ ತಾವದ್ಭುವನೇಪಿ ಸಂತಿ ಹಂತ ॥೫೬॥

ಹಂತ ಹಂತ ಕಥಮೀದೃಶಭಾಗ್ಯಂ
ದೃಷ್ಟಮದ್ಯ ದುರದೃಷ್ಟವಿನಾಶಃ ।
ಜಾತ ಏವ ಹಿ ನ ಸಂಶಯಲೇಶೋ
ವ್ಯುಕ್ತಮೇವಮಿದಮೇವ ಹಿ ಸತ್ಯಂ ॥೫೭॥

ಸತ್ಯಂ ಸತ್ಯಂ ಸತ್ಯಮೇತತ್ತ್ರಿಸತ್ಯಂ
ಸತ್ಯಂ ಸತ್ಯಂ ಶಾಂಭವೋ ಭೂತಲೇಷು ।

ನೀನು ಈ ಭೂಲೋಕದಲ್ಲಿ ಸಂಪತ್ತನ್ನುಂಟುಮಾಡುವುದಕ್ಕಾಗಿ ಈ ಜನರ ಪುಣ್ಯಫಲದಿಂದ ಹುಟ್ಟಿರುವೆ. ನೀನೇ ನಿಜವಾದ ಶಿವಭಕ್ತನು. ನಿನ್ನ ಸಮಾನನಾದ ಭಕ್ತನು ಈ ಭೂಲೋಕದಲ್ಲಿ ಯಾವನಿರುವನೋ ತಿಳಿಯದು. ॥೫೫॥

ಎಲೈ ರಾಜನೇ, ನೀನು ರಾಜ್ಯವನ್ನಾಳುತ್ತಿರುವಾಗ ಕ್ರೂರಮೃಗಗಳೂ ಋಷಿಗಳಂತಿವೆ. ಗೋವುಗಳು ಅವುಗಳೊಡನೆ ಸಂಚರಿಸುತ್ತ ಮೇಯುತ್ತಿವೆ. ಇಂತಹ ಸಜ್ಜನರು ಲೋಕದಲ್ಲಿ ಎಷ್ಟು ಜನರಿರುವರು? ಇದೊಂದು ಆಶ್ಚರ್ಯಕರವಾದ ವಿಷಯ. ॥೫೬॥

ಆಹಾ ಆಶ್ಚರ್ಯ! ಈ ದಿನ ಇಂತಹ ಭಾಗ್ಯವನ್ನು ಕಂಡೆನು. ನನ್ನ ದುರದೃಷ್ಟರೂಪವಾದ ಪಾಪವು ನಾಶವಾಯಿತು. ಈ ವಿಷಯದಲ್ಲಿ ಸಂದೇಹವಿಲ್ಲ. ನಾನು ಹೇಳಿದ ಮಾತು ಸತ್ಯವಾದುದು. ॥೫೭॥

ನಾನು ಹೇಳಿದ ಮಾತು ಮೂರು ಬಾರಿಗೂ ಸತ್ಯವಾದುದು. ನಿನ್ನ ಸಮಾನ

ತ್ವತ್ತುಲ್ಯೋನ್ಯೋ ನಾಸ್ತಿ ನಾಸ್ತ್ಯೇವ ನೂನಂ ।
ಸಾಮಾನ್ಯೋ ವಾ ಶಾಂಭವೋ ನಾಸ್ತಿ ಲೋಕೇ ॥೫೮॥

ಪಶ್ಯ ಪಶ್ಯ ತರವೋಪಿ ಶಾಂಕರಾಃ
ಶಂಕರಾಲಯಗತಾಃ ಸ್ವಭಾವತಃ ।
ಶಂಕರಸ್ಮರಣಮೇವ ಸರ್ವದಾ
ಸಾದರಂ ಮೃಗಜನಃ ಕರೋತ್ಯಯಂ ॥೫೯॥

ನಾಮಾನಿ ಹಾರಾಣಿ ಮನೋಹರಾಣಿ
ವದಂತಿ ತಾವತ್ತರವೋ ಮೃಗಾಶ್ಚ ।
ರುದ್ರಾಕ್ಷಮಾಲಾವೃತಕಂಠಭಾಗಾ
ಮೃಗಾಶ್ಚರಂತ್ಯತ್ರ ವಿಭೂತಿಭಾಲಾಃ ॥೬೦॥

ಶಿಕ್ಷಿತಾಶ್ಚ ತರುಭಿಃ ಶುಕಾದಯಃ
ಶಂಕರಸ್ಮರಹರೇತಿವಾದಿನಃ ।
ಸಂಚರಂತಿ ಕಥಮೀದೃಶಂ ಮಹ
ದ್ಭಾಗ್ಯಮದ್ಯ ಸುಕೃತೈರವಾಪ್ಯತೇ ॥೬೧॥

ನಾದ ಮತ್ತೊಬ್ಬ ಭಕ್ತನು ಈ ಲೋಕದಲ್ಲಿಲ್ಲ. ಇದನ್ನೇ ನಾನು ಪದೇ ಪದೇ ಹೇಳುವೆನು. ॥೫೮॥

ಶಿವನ ಆಲಯದಲ್ಲಿರುವ ಮರಗಳೂ ಕೂಡ ಸ್ವಾಭಾವಿಕವಾಗಿ, ಯಾವಾಗಲೂ ಶಿವನಾಮಸ್ಮರಣೆಯನ್ನು ಮಾಡುತ್ತಿವೆ. ಮೃಗಗಳೂ ಕೂಡ ಪ್ರೀತಿಯಿಂದ ಶಿವಸ್ಮರಣೆಯನ್ನು ಹೊಂದುತ್ತಿವೆ. ಈ ಆಶ್ಚರ್ಯವನ್ನು ನೋಡು. ॥೫೯॥

ಗಿಡಗಳೂ ಮೃಗಗಳೂ ಶಿವನಾಮವನ್ನುಚ್ಚರಿಸುವುವು. ಮೃಗಗಳು ಕುತ್ತಿಗೆಯಲ್ಲಿ ರುದ್ರಾಕ್ಷಿಯ ಮಾಲೆಯನ್ನು ಹಾಕಿಕೊಂಡು ಹಣೆಗೆ ವಿಭೂತಿಯನ್ನು ಧರಿಸಿ ತಿರುಗುತ್ತಿವೆ. ॥೬೦॥

ಗಿಡ ಮರಗಳು, ಗಿಣಿ ಮುಂತಾದ ಪಕ್ಷಿಗಳಿಗೆ ಶಿವನಾಮವನ್ನು ಹೇಳಿಕೊಟ್ಟಿದ್ದರಿಂದ, ಅವೂ ಶಂಕರ, ಸ್ಮರಹರ, ಎಂದು ಹೇಳುತ್ತ ಹಾರಾಡುತ್ತಿವೆ. ಇಂತಹ ಭಾಗ್ಯವನ್ನು ಈ ದಿವಸ ನನ್ನ ಪುಣ್ಯದಿಂದ ಪಡೆದಿರುವೆನು. ॥೬೧॥

ಅಶಾಂಕರಗಿರಾ ಪುರಾ ಜಗದಭೂದ್ವಿನಷ್ಟಂ ತತ
ಸ್ತಪಃ ಖಲು ಮಹತ್ತರಂ ಕೃತಮನೇನ ವಿಶ್ವೇಶ್ವರಃ ।
ಪ್ರಸನ್ನ ಇಹ ಜಾಯತೇ ಜಗದಪಾರಹಾರಾವೃತಂ
ಕಿಮದ್ಭುತಮಿದಂ ಮುಹುರ್ನಯನಗೋಚರಂ ಜಾಯತೇ ॥೬೨॥

ಅಶಾಂಭವಕಥಾ ಗತಾ ತ್ವಯಿ ಸತೀಹ ಭೂಮಂಡಲೇ
ಮಹೇಶ್ವರಕಥಾಸುಧಾ ಪ್ರಭವತಿ ಪ್ರಭಾವೈರ್ಮುಹುಃ ।
ಅಹೋ ಕಿಮಿದಮದ್ಭುತಂ ಭುವನಮೇವ ಜಾತಂ ಸದಾ
ಸುಧಾಮಯಮತಃ ಪರಂ ನ ತಪಸಾಪಿ ಕಾರ್ಯೇ ಖಲು ॥೬೩॥

ಕೈಲಾಸಃ ಕಿಮಯಂ ಯತೋತ್ರ ವಿಭವಃ ಸೋಽಯಂ ಪ್ರಭೂತೋ ಮಹಾನ್
ಭಾವೋ ಭಾವವಿಲೋಕನೇನ ಭಗವಾನಾಲೋಕಿತಃ ಕೇವಲಂ ।
ಭಾವಾಕಾರಮುಪೇತ್ಯ ಭಾಲನಯನೋ ಭೂಲೋಕರಕ್ಷಾಮಣಿ
ರ್ಜಾತೋ ಧನ್ಯಮಿದಂ ಜಗಜ್ಜಗದಿದಂ ಕೈಲಾಸ ಏವಾದ್ಭುತಃ ॥೬೪॥

ಶಿವನ ನಾಮಸ್ಮರಣೆಯಿಲ್ಲದುದರಿಂದ ಹಿಂದೆ ನಾನು ಸೃಷ್ಟಿಸಿದ ಪ್ರಪಂಚವು ನಾಶವಾಯಿತು. ತರುವಾಯ ನಾನು ಕಠಿನವಾದ ತಪಸ್ಸನ್ನು ಮಾಡಿದೆನು. ಆ ತಪಸ್ಸಿನಿಂದ ವಿಶ್ವೇಶ್ವರನು ಪ್ರಸನ್ನನಾಗಿ, ವಿಶೇಷವಾದ ಶಿವಭಕ್ತರ ಗುಂಪಿನಿಂದ ತುಂಬಿದ ಆಶ್ಚರ್ಯಕರವಾದ ಈ ನೋಟವನ್ನು ಕರುಣಿಸಿರುವನು. ॥೬೨॥

ಎಲೈ ರಾಜನೇ, ನೀನು ಈ ಭೂಮಂಡಲದಲ್ಲಿ ರಾಜ್ಯವಾಳುತ್ತಿರಲು ಶಿವನ ಕಥೆಯಲ್ಲದ ಇತರ ಕ್ಷುದ್ರಕಥೆಗಳೆಲ್ಲವೂ ನಾಶವಾದುವು. ಮಹೇಶ್ವರನ ಕಥಾಮೃತವು ಮಹಾಮಹಿಮೆಯಿಂದ ಹರಡಿರುವುದು. ಇದೇನಾಶ್ಚರ್ಯ! ಭೂಮಂಡಲವೇ ಅಮೃತಮಯವಾಗಿರುವುದು. ಇಲ್ಲಿಂದ ಮುಂದೆ ತಪಸ್ಸಿನಿಂದ ಏನೂ ಪ್ರಯೋಜನವಿಲ್ಲವೆಂದು ತೋರುವುದಲ್ಲವೇ ? ॥೬೩॥

ಇದೇ ಶಿವನ ನೆಲೆಯಾದ ಕೈಲಾಸವಾಗಿರಬಹುದು. ಕಾರಣವೇನೆಂದರೆ, ಆ ಕೈಲಾಸದ ಸಂಪತ್ತೆಲ್ಲವೂ ಇಲ್ಲಿರುವುದು. ಮನಸ್ಸಿನ ಏಕಾಗ್ರತೆಯಿಂದ ಆ ಮಹಾಮಹಿಮನಾದ ಶಿವನು ಮನಸ್ಸಿನ ವೃತ್ತಿರೂಪವಾಗಿ ಗೋಚರಿಸುತ್ತಿರುವನು. ಈ ಜಗತ್ತೇ ಕೃತಾರ್ಥವಾದುದು. ಈ ಪ್ರಪಂಚವು ಈಗ ಆಶ್ಚರ್ಯಕರವಾದ ಕೈಲಾಸವೇ ಆಗಿರುವುದು. ॥೬೪॥

ಅಪಾರಮಣಿಮಂದಿರವ್ಯತಿಕರೋರುಹಾರಸ್ಫುರ
ಸ್ಮೃಹಾರ್ಘಮಣಿಲಿಂಗಜಾಮಿವ ಮನೋಜ್ಞಶೋಭಾಶ್ರಯಃ ।
ಶಿವಪ್ರಿಯಶಿವಾಲಯೈರಯಮಹೋ ವಿಭಾತಿ ಸ್ವತಃ
ಪ್ರಮೋದಸಹಿತಃ ಸದಾ ಶಿವಜನೋಽಪಿ ಶರ್ವಾರ್ಚಕಃ ॥೬೫॥

ಸೋಽಯಂ ಭಾತಿ ಶಿವಾಲಯಃ ಖಲು ಸುಖಾಂಭೋಧಿಪ್ರಭಾವಾಲಯೋ
ಮುಕ್ತಿಶ್ರೀವಿಭವಾಲಯಃ ಕಿಮಿತಿ ಮೇ ಚಿತ್ತೇ ವಿಕಲ್ಪಃ ಖಲು ।
ಕೈಲಾಸೋಽಯಮುತಾನ್ಯ ಏವ ಗಿರಿಶಾವಾಸಃ ಶಿವಾಸಂಗಮ
ವ್ಯಾಸಂಗಾಯ ವಿನಿರ್ಮಿತೋ ಗಿರಿಜಯಾ ಯದ್ವಾ ಮಹೇಶೇನ ವಾ ॥೬೬॥

ಭೂಪಾಲ ಕಾ ತೇ ಮಹತೀ ತಪಸ್ಯಾ
ಯಯಾ ತ್ವದಾಲೋಕನಮಾತ್ರತೋಽಪಿ ।
ಮುಕ್ತೋ ಭವತ್ಯೇವ ಜನೋ ಜನಾನಾಂ
ಅದೃಷ್ಟಮೇವಂ ಫಲಿತಂ ತಪೋಭಿಃ ॥೬೭॥

ವಿಸ್ತಾರವಾದ ಮತ್ತು ರತ್ನಖಚಿತವಾಗಿರುವ ಶಿವನ ಮನೆಯಲ್ಲಿ ಅಲಂಕರಿಸಿರುವ ಬೆಲೆಯುಳ್ಳ ರತ್ನಹಾರಗಳ ಕಾಂತಿಯಿಂದಲೂ, ಲಿಂಗದಿಂದುಂಟಾದ ಮನೋಹರವಾದ ಕಾಂತಿಯಿಂದಲೂ, ಯಾವಾಗಲೂ ಸಂತೋಷದಿಂದ ಶಿವನ ಪೂಜೆಯನ್ನು ಮಾಡುತ್ತಿರುವ ಭಕ್ತರಿಂದ ಕೂಡಿದ ಶಿವಾಲಯಗಳಿಂದಲೂ, ಈ ಪ್ರದೇಶವು ಆಶ್ಚರ್ಯಕರವಾಗಿ ಪ್ರಕಾಶಿಸುತ್ತಿರುವುದು. ॥೬೫॥

ಈ ಶಿವಾಲಯವು ಸುಖಸಮುದ್ರದ ಮಹಿಮೆಯ ಮನೆಯಾಗಿದೆಯೋ, ಮೋಕ್ಷಲಕ್ಷ್ಮಿಯ ಸಂಪತ್ತಿಗೆ ಆಶ್ರಯವಾಗಿದೆಯೋ, ಎಂಬಂತೆ ನನ್ನ ಮನಸ್ಸಿಗೆ ತೋರುವುದು. ಇದು ಕೈಲಾಸವೋ, ಅಥವಾ ಗೌರಿಯೊಡನೆ ವಿಹಾರಕ್ಕಾಗಿ, ಶಿವನೋ, ಗಿರಿಜೆಯೋ ನಿರ್ಮಿಸಿದ ಮತ್ತೊಂದು ಶಿವಸದನವೋ ಎಂಬ ಸಂದೇಹವು ನನಗಿರುವುದು. ॥೬೬॥

ಎಲೈ ರಾಜನೇ, ನಿನ್ನ ತಪಸ್ಸಿನ ಮಹಿಮೆಯು ಬಹು ದೊಡ್ಡದು. ಜನರು ನಿನ್ನ ದರ್ಶನಮಾತ್ರದಿಂದ ಮೋಕ್ಷವನ್ನು ಪಡೆಯುವರು. ಜನರ ತಪೋರೂಪವಾದ ಅದೃಷ್ಟಫಲವು ಈ ರೀತಿಯಾದ ಫಲವನ್ನು ಕೊಡುತ್ತಿರುವುದು. ॥೬೭॥

ಅತಃ ಪರಂ ನೋಗ್ರತಪೋವಿಚಾರೋ
ಧರ್ಮಾಂತರಸ್ಯಾಪಿ ಕುತೋ ವಿಚಾರಃ ।
ತ್ವದ್ದರ್ಶನೇನಾಘವಿಪರ್ಯಯೋಽಪಿ
ಮುಕ್ತಿಶ್ಚ ಸಂಭಾವಿತ ಏವ ಸತ್ಯಂ ॥೬೮॥

ನಾಸತ್ಯವಾರ್ತಾ ನ ಚ ಪಾಪವಾರ್ತಾ
ತ್ವಯಿ ಸ್ಥಿತೇ ಶಾಸತಿ ಭೂತಲೇಽಸ್ಮಿನ್ ।
ಸರ್ವೇಽಪಿ ಶರ್ವಪ್ರವಣಾಃ ಪ್ರಮಾಣ
ಮತ್ರೈತದಂತಃಕರಣಂ ಪ್ರವೀಣಂ ॥೬೯॥

ಮೋಹಾಂಧಕಾರಪ್ರಳಯೋ ಕಿಮಿಂದುಃ
ಕಿಂ ಭಾಸ್ಕರೋ ವಾ ಪ್ರಳಯಾನಲೋ ವಾ ।
ತತ್ತ್ವಂ ನ ಜಾನೇ ಭುವನೇ ತ್ವಮೇಕಃ
ಸಮಸ್ತಪಾಪಾದ್ರಿಕುಲಾಶನಿರ್ಹಿ ॥೭೦॥

ನಿನ್ನ ದರ್ಶನದಿಂದ ಪಾಪನಾಶವೂ ಮುಕ್ತಿಯೂ ಉಂಟಾಗುವುದೆಂದು ನಿಜವಾಗಿ ನಾನು ತಿಳಿದಿರುವೆನು. ಆದುದರಿಂದ ಇಲ್ಲಿಂದ ಮುಂದೆ ಜನರು ಕಠಿನ ವಾದ ತಪಸ್ಸನ್ನೂ, ಇತರ ಧರ್ಮಾಚರಣೆಗಳನ್ನೂ ಮಾಡಬೇಕಾದುದಿಲ್ಲ. ॥೬೮॥

ಎಲೈ ರಾಜನೇ, ನೀನು ಭೂಮಿಯಲ್ಲಿ ರಾಜ್ಯವಾಳುತ್ತಿರಲು ಅಸತ್ಯವಾದ ಮಾತನ್ನೂ ಪಾಪಕರವಾದ ಮಾತುಗಳನ್ನೂ ಯಾರೂ ಆಡುವುದಿಲ್ಲ. ಇದಕ್ಕೆ ಎಲ್ಲ ಜನರೂ ಶಿವಭಕ್ತರಾಗಿರುವುದೇ ಪ್ರಮಾಣವಾಗಿರುವುದು. ಈ ವಿಷಯವನ್ನು ನನ್ನ ಮನಸ್ಸು ಚೆನ್ನಾಗಿ ವಿಮರ್ಶಿಸಿರುವುದು. ॥೬೯॥

ಈ ಜ್ಞಾನವೆಂಬ ಕತ್ತಲೆಯನ್ನು ನಾಶಮಾಡಲು ಚಂದ್ರ, ಸೂರ್ಯ, ಪ್ರಳಯಾಗ್ನಿ ಇವರುಗಳಲ್ಲಿ ಯಾರು ಕಾರಣರೆಂಬ ನಿಶ್ಚಯವನ್ನು ನಾನರಿಯೆನು. ಈ ಭೂಮಂಡಲದಲ್ಲಿ ನೀನೊಬ್ಬನೇ ಸಮಸ್ತ ಪಾಪಕರ್ಮಗಳಿಗೂ ವಜ್ರಾಯುಧ ಪ್ರಾಯನಾಗಿ ಜ್ಞಾನದಾತನಾಗಿರುವೆ. ॥೭೦॥

ತ್ವಮೇವ ತಾವತ್ಸುರಧೇನುರತ್ರ
ತ್ವಮೇವ ತತ್ಕಲ್ಪತರುಸ್ತ್ವಮೇವಂ ।
ಚಿಂತಾಮಣಿಶ್ಚೇತಿ ಮತಿರ್ಮಮಾಸೀ
ದ್ಯತಃ ಶಿವಾಚಾರರತಾಗ್ರಗಣ್ಯಃ ॥೭೦॥

ಶಿವಾಚಾರಃ ಶೀಲಂ ಗತಕಲುಷಜಾಲಂ ತವ ಕುಲಂ
ಬಲಂ ಮೂಲಂ ಯಸ್ಮಾದನುದಿನಮುಮಾಕಾಂತಭಜನಂ ।
ಧನಂ ತೇ ಧನ್ಯೋತಸ್ತವ ಚರಣಫುಲ್ಲಾಂಬುಜರಜೋ
ಜಗಜ್ಜನ್ಮಾಕಾಂಕ್ಷಾ ವಿಲಯನನಿದಾನಂ ಧ್ರುವಮಿದಂ ॥೭೨॥

ಅಹೋ ಭಿತ್ತಿಚಿತ್ರೈರ್ವಿಚಿತ್ರೈಃ ಪವಿತ್ರೈಃ
ಕಥಂ ನೇತ್ರಪಾತ್ರೈಃ ಕೃತಂ ಲಾಸ್ಯಮೇವ ।
ಹರಾಗ್ರೇ ಹರಾನುಗ್ರಹಾರ್ಥಂ ತಮುಗ್ರಂ
ವಿಲೋಕ್ಯಾಪಿ ಲೋಕೋತ್ಸವಾಯಾಯಮೇವ ॥೭೩॥

ಈ ಭೂಮಿಯಲ್ಲಿ ನೀನೇ ಕಾಮಧೇನು, ಕಲ್ಪವೃಕ್ಷ, ಚಿಂತಾಮಣಿಯಾಗಿರುವೆಯೆಂದು ನನ್ನ ಮನಸ್ಸಿಗೆ ತೋರುವುದು. ಶಿವನೇ ಸರ್ವಸ್ವವೆಂದು ತಿಳಿದಿರುವವರಲ್ಲಿ ನೀನು ಶ್ರೇಷ್ಠನಾಗಿರುವುದರಿಂದ ಆ ಕಲ್ಪವೃಕ್ಷಾದಿಗಳ ಶಕ್ತಿಯು ನಿನ್ನಲ್ಲಿರುವುದು. ॥೭೦॥

ಶಿವಾಚಾರವೇ ನಿನ್ನ ಸ್ವಾಭಾವಿಕವಾದ ನಡತೆಯಾಗಿರುವುದರಿಂದ ನಿನ್ನ ವಂಶವು ಪವಿತ್ರವಾಯಿತು. ನಿತ್ಯವೂ ಶಂಕರನನ್ನೇ ನೀನು ಪೂಜಿಸುತ್ತಿರುವುದರಿಂದ ನಿನ್ನ ಬಲ, ಧನ ಮುಂತಾದ ಸಾಮಗ್ರಿಗಳೆಲ್ಲವೂ ಅಭಿವೃದ್ಧವಾಗುವುವು. ನಿನ್ನ ಪಾದಧೂಳಿಯ ಸಂಪರ್ಕದಿಂದ ಮನುಜರಿಗೆ ಜನನಮರಣಾದಿ ವ್ಯಥೆಗಳು ನಾಶಹೊಂದುವುವು. ಇದು ನಿಶ್ಚಯ. ॥೭೨॥

ಇದೇನಾಶ್ಚರ್ಯ! ಈಶ್ವರನ ಪರಮ ಭಕ್ತನಾದ ಈ ರಾಜನೇ ಶಿವನ ಮುಂಭಾಗದಲ್ಲಿ ಅಪೂರ್ವವಾದ ನೃತ್ಯವನ್ನು ಅಭಿನಯಿಸುವನು. ನಾಟ್ಯ ಸಮಯದಲ್ಲಿ, ರತ್ನಖಚಿತವಾದ ಶಿವಾಲಯದ ಈ ಗೋಡೆಗಳಲ್ಲಿ, ನೃತ್ಯವನ್ನಭಿಯಿಸುತ್ತಿರುವ ಇವನ ಅನೇಕ ಪ್ರತಿಬಿಂಬಗಳು ಕಾಣಿಸುತ್ತಿರುವುವು. ಹೀಗೆ ಇವನು ಶಿವನ ಅನುಗ್ರ

ಪ್ರಸೂನೈಃ ಸಹಾಯಾಂತಿ ತೇ ಶಾಖಿನೋಽಪಿ
ಸ್ಮರಂತೋ ವದಂತಃ ಶಿವೇ ಶಂಕರೇತಿ ।
ಕಿಮೇತದ್ವಿಚಿತ್ರಂ ಮಯಾ ದೃಷ್ಟಮದ್ಯ
ಪ್ರಭೂತಪ್ರಭಾವಪ್ರಭಾವಸ್ಯ ಭಾವಿ ॥೭೪॥

ಶಿವ ಶಂಕರ ಶಂಕರೇತಿ ಯಾ
ಶುಕವಾಣೀ ಶರಣಂ ಭವೇತಿ ಚ
ಮುಹುರಾದರತಃ ಶ್ರುತಾ ಸತೀ
ಸಕಲಾಪದ್ವಿನಿವಾರಣೋದ್ಯತಾ ॥೭೫॥

ಸಂಕೋಚೇನ ಸಮಾಗತಾಶ್ಚ ತರವಃ ಶಾಖಾಭಿರತ್ಯಾದರಾತ್
ಉತ್ಫುಲ್ಲಪ್ರಸವಾನ್ ಕ್ಷಿಪಂತಿ ಬಹುಧಾ ತತ್ತುಂಗಲಿಂಗೇ ಮುದಾ ।
ಉಚ್ಚೈರುಚ್ಚರಣೇನ ಶಂಕರಮಹಾದೇವೇತಿ ಬಿಲ್ವೇದಲಾ
ನ್ಯಾನೀತಾನಿ ಗೃಹಾಣ ತಾನಿ ವಿವಿಧಾನೀತಿ ಬ್ರುವಂತೋ ಮುಹುಃ ॥೭೬॥

ಹವನ್ನು ಸಂಪಾದಿಸುವುದಕ್ಕೋಸ್ಕರ, ಶಿವನ ಸನ್ನಿಧಿಯಲ್ಲಿ ನೃತ್ಯವನ್ನಭಿನಯಿಸಿದನು. ಇದು ಲೋಕಕಲ್ಯಾಣಕ್ಕಾಗಿಯೇ ನಡೆಯುತ್ತಿರುವುದಲ್ಲವೆ. ॥೭೩॥

ಈ ಶಿವಾಲಯದ ಬಳಿಯಲ್ಲಿರುವ ವೃಕ್ಷಗಳೂ ಸಹ ಸುಗಂಧಯುಕ್ತವಾದ ಹೂವುಗಳಿಂದೊಡಗೂಡಿ, ಶಿವನನ್ನು ಮನಸ್ಸಿನಲ್ಲಿ ಸ್ಮರಿಸುತ್ತಾ ಅವನ ಸನ್ನಿಧಿಗೆ ಬರುತ್ತಿರುವುವು. ಇದೇನು ವಿಚಿತ್ರ? ಈ ವಿಚಿತ್ರ ಪ್ರಸಂಗವು ಶಿವನ ಮಹಿಮಾತಿಶಯವನ್ನು ಸೂಚಿಸುತ್ತಿರುವುದಲ್ಲವೆ! ॥೭೪॥

ಈ ವೃಕ್ಷಗಳಲ್ಲಿ ವಾಸಿಸುತ್ತಿರುವ ಗಿಣಿಗಳು, ತಮ್ಮ ಮಧುರವಾದ ವಾಣಿಯಿಂದ, ಓ, ಶಿವನೇ! ಓ, ಶಂಕರನೇ! ನಮ್ಮನ್ನು ರಕ್ಷಿಸು ಎಂದು ಬಾರಿಬಾರಿಗೂ, ಶಿವನಾಮವನ್ನುಚ್ಚರಿಸುತ್ತಿರುವುವು. ಅವುಗಳ ಮಧುರ ವಾಣಿಯನ್ನು ಕೇಳಿದೊಡನೆಯೇ, ಸಕಲ ದುಃಖಗಳೂ ನಾಶವಾಗುವುವೋ ಎಂಬಂತಿರುವುದು. ॥೭೫॥

ಪುಷ್ಪಭರಿತವಾದ ಈ ವೃಕ್ಷಗಳು, ತಮ್ಮ ಕೊಂಬೆಗಳನ್ನು ಬಗ್ಗಿಸಿಕೊಂಡು ಶಿವ! ಶಂಕರ! ಮಹಾದೇವ! ಎಂದು ನಾನಾ ಬಗೆಯಿಂದ ಶಿವನಾಮಗಳನ್ನು ಗಟ್ಟಿಯಾಗಿ ಉಚ್ಚರಿಸುತ್ತಾ, ಇಗೋ, ಈ ನಮ್ಮ ಪುಷ್ಪಗಳನ್ನು ಸ್ವೀಕರಿಸು, ಎಂದು

ಧನ್ಯಾನಿ ನೇತ್ರಾಣಿ ತದೀಕ್ಷಣೇನ
ತದೀಯಶಬ್ದಶ್ರವಣೇನ ತಾನಿ ।
ಶ್ರೋತ್ರಾಣಿ ಧನ್ಯಾನಿ ಮನಃ ಪವಿತ್ರಂ
ತಚ್ಚಿಂತನೇನಾಪಿ ಪುನಃ ಪುನರ್ಮೇ ॥೨೭॥

ಪ್ರದಕ್ಷಿಣೀಕೃತ್ಯ ಶಿವಾಲಯಂ ತೇ
ಪ್ರಯಾಂತಿ ತಾವತ್ತರವಃ ಪ್ರಣಮ್ಯ ।
ಅದೃಷ್ಟಪೂರ್ವಂ ಖಲು ಭಾಗ್ಯಮೇತತ್
ತವೈವ ಭಾಗ್ಯಂ ಸಕಲಂ ನೃಪೇದಂ ॥೨೮॥

ಇದಂ ಕಥಂ ಕೌತುಕಮೇವ ಸೃಷ್ಟಂ
ದೃಷ್ಟಂ ಮಹೇಶೇನ ಮುಹುರ್ಮುಹುಃ ಕಿಂ ।
ತದ್ದರ್ಶನಾತ್ಸ್ಯಾದ್ವಿರತಂ ಮನೋಽಪಿ
ತೃಪ್ತಂ ನ ನೇತ್ರಂ ಪುನರೇವ ಚಿತ್ರಂ ॥೨೯॥

ಹೇಳುತ್ತಾ, ಸುಗಂಧಯುಕ್ತವಾದ ತಮ್ಮ ಕುಸುಮಗಳನ್ನು ಈ ಶಿವಲಿಂಗದ ಮೇಲೆ ಎರಚುತ್ತಿರುವುವು. ॥೨೬॥

ಆ ವೃಕ್ಷಗಳನ್ನು ನೋಡುವುದರಿಂದ ನನ್ನ ಈ ಕಣ್ಣುಗಳು ಸಾರ್ಥಕವಾದುವು. ಈ ವೃಕ್ಷಗಳ ಭಕ್ತಿಭಾವವನ್ನು ಧ್ಯಾನಿಸಿ, ನನ್ನ ಚಿತ್ತವು ಶುದ್ಧವಾಯಿತು. ॥೨೭॥

ಓ ರಾಜನೇ! ಆಲಯದ ಬಳಿಯಲ್ಲಿರುವ ಈ ವೃಕ್ಷಗಳು ಈ ಶಿವಾಲಯದ ಪ್ರದಕ್ಷಿಣೆಯನ್ನು ಮಾಡಿ ಶಿವನನ್ನು ನಮಸ್ಕರಿಸಿ ಇಲ್ಲಿಂದ ತೆರಳುತ್ತಿರುವುವು. ಇದು ನಿನ್ನ ಸುಕೃತವಿಶೇಷದ ಮಹಿಮೆಯಲ್ಲವೇ! ನನಗೆ ಇದೊಂದು ಅಪೂರ್ವವಾದ ದೃಶ್ಯವಾಗಿರುವುದು. ॥೨೮॥

ಅದ್ಭುತವಾದ ಈ ದೃಶ್ಯವನ್ನು ಶಿವನೇ ಸ್ವೇಚ್ಛೆಯಿಂದ ಸೃಷ್ಟಿಸಿರಬಹುದೇ! ಇದನ್ನು ನೋಡಿದುದರಿಂದ ನನ್ನ ಚಿತ್ತವು ಶಾಂತವಾಗಿರುವುದು. ಕಣ್ಣುಗಳು ಮಾತ್ರ ಇನ್ನೂ ತೃಪ್ತಿಹೊಂದಿರುವುದಿಲ್ಲ. ॥೨೯॥

ಶುಕಾಂಗನಾಗಾನಮಿದಂ ಮನೋಜ್ಞಂ
ಶಿವೇ ಶಿವೇ ಶಂಕರ ಶಂಕರೇತಿ ।
ಶ್ರುತಂ ಮುಹುಃ ಸಾದರಮೇವ ತೃಪ್ತಂ
ನ ಚಿತ್ತಮೇತಸ್ಯ ವಿಶೇಷತೋಽದ್ಯ ॥೮೦॥

ಧನ್ಯಂ ವನಂ ಹಾರಮಿದಂ ಸಹಾರಂ
ಯಸ್ಮಿನ್ ವನೇ ತೇ ತರವೋಽಪಿ ಧನ್ಯಾಃ ।
ಭೃಂಗಾಃ ಕುರಂಗಾ ಅಪಿ ತೇ ತುರಂಗಾಃ
ಶಾಂಗಾಃ ಪ್ರಸಂಗಾದಪಿ ತೇಽದ್ಯ ದೃಷ್ಟಾಃ ॥೮೧॥

ನಷ್ಟಂ ಪಾತಕಕಾನನಂ ಶಿವವನಧ್ಯಾನೇನ ತದ್ದರ್ಶನಾತ್ ।
ಆಪದ್ರಾಶಿಲಯೋಽಪಿ ಜಾತ ಇತಿ ಮೇ ಭಾಗ್ಯೋದಯೋ ಜಾಯತೇ ।
ಅಸ್ಮಿನ್ನೇವ ವನೇ ವಸಾಮಿ ಶಿವಸಾತ್ಕೃತ್ವಾ ಶರೀರಂ ಪರಂ
ಯತ್ರಾವಾಸಮುಪೇಕ್ಷತೇ ಮುಹುರಹೋ ದಾಕ್ಷಾಯಣೀವಲ್ಲಭಃ ॥೮೨॥

ಈ ಕೀರಾಂಗನೆಯರು, ಓ ಪಾರ್ವತಿಯೇ, ಓ ಪರಮೇಶ್ವರನೇ, ಎಂದು ಪಾರ್ವತೀ ಪರಮೇಶ್ವರರ ನಾಮವನ್ನುಚ್ಚರಿಸುತ್ತಾ ಮಧುರವಾದ ಗಾನವನ್ನು ಮಾಡುತ್ತಿರುವುವು. ಕರ್ಣಾನಂದಕರವಾದ ಈ ಗಾನವನ್ನು ದೀರ್ಘಕಾಲದವರೆಗೆ ಲಾಲಿಸಿದರೂ ಸಹ ನನ್ನ ಚಿತ್ತವು ತೃಪ್ತಿಯನ್ನು ಪಡೆದಿರುವುದಿಲ್ಲ. ॥೮೦॥

ಈಶ್ವರ ಭಕ್ತರ ವೃಂದದಿಂದ ಕೂಡಿರುವ ಈ ವನವೇ ಧನ್ಯವಾದುದು. ಇಲ್ಲಿ ಅಚೇತನಗಳಾದ ಗಿಡಮರಗಳೂ, ಚೇತನಗಳಾದ ದುಂಬಿ, ಜಿಂಕೆ, ಕುದುರೆ ಮುಂತಾದ ಪ್ರಾಣಿಗಳೂ ಸಹ ಸದಾ ಶಿವನನ್ನೇ ಸೇವಿಸುತ್ತ ಈಶ್ವರಭಕ್ತಾಗ್ರೇಸರ ರಂತಿರುವುವು. ಇದಲ್ಲವೇ ಆಶ್ಚರ್ಯ! ಅದ್ಭುತವಾದ ಈ ದೃಶ್ಯವನ್ನು ನನ್ನ ಪೂರ್ವಜನ್ಮದ ಭಾಗ್ಯವಿಶೇಷದಿಂದ ಈಗ ನೋಡಿದೆನು. ॥೮೧॥

ಶಿವನು ನೆಲಸಿರುವ ಈ ವನವನ್ನು ನೋಡಿದುದರಿಂದ ನನ್ನ ಪಾಪರಾಶಿಯು ನಷ್ಟವಾಯಿತು. ಅದರ ದರ್ಶನದಿಂದ ಸಕಲ ಕಷ್ಟಗಳೂ ನಾಶವಾದುವು. ಇದರಿಂದ ನನ್ನಲ್ಲಿ ಅಪೂರ್ವವಾದ ಭಾಗ್ಯವುದಯಿಸುತ್ತಿರುವುದು. ಶಿವನು ವಾಸಿಸಿರುವ ಈ ವನದಲ್ಲಿಯೇ ವಾಸವಾಗಿದ್ದು ನಶ್ವರವಾದ ಈ ಶರೀರವನ್ನು ಅವನಲ್ಲಿ ಅರ್ಪಿಸು ವೆನು. ॥೮೨॥

ತರವೋ ಗುರವೋ ವನೇಽಧುನಾಸ್ಮಿನ್
ಶಿವಪಂಚಾಕ್ಷರಮುಕ್ಷರಂ ವದಂತಃ ।
ಇದಮೇವ ಕಿಲಾತಿಪಾವನಂ
ವನಮೀಶಾನಸಮರ್ಚನೋದ್ಯತಂ ॥೮೩॥

ಅಭೂತಪೂರ್ವಂ ಖಲು ಸರ್ವಮೇತತ್
ವನೇ ವಿಚಿತ್ರಂ ಚರಿತಂ ಪವಿತ್ರಂ ।
ಚಿರಂ ಚರಿತ್ರಂ ಖಲು ನೇತ್ರಪಾತ್ರಂ
ತ್ರಿನೇತ್ರಚಿತ್ರಂ ತದಿದಂ ಪವಿತ್ರಂ ॥೮೪॥

ಧನ್ಯಂ ಜಗತ್ತ್ರಯಮಿದಂ ಜಗದೇತಿ ಮುಕ್ತಿಂ
ಭಕ್ತಂ ವಿಲೋಕ್ಯ ಸಕೃದಾಶು ಭವಂತಮೇಕಂ ।
ತ್ವಂ ಪುಣ್ಯಮೂರ್ತಿರಸಿ ಪುಣ್ಯವತಾಂ ವರಿಷ್ಠೋ
ನಿಷ್ಠಾವಶಿಷ್ಟಮಧುನಾ ಕುರುತೇ ಕನಿಷ್ಠಂ ॥೮೫॥

ಅತ್ಯುನ್ನತವಾಗಿ ಬೆಳೆದಿರುವ ವೃಕ್ಷಗಳು ಈ ವನದಲ್ಲಿ ಪವಿತ್ರವಾದ ಶಿವಪಂಚಾಕ್ಷರೀ ಮಂತ್ರವನ್ನು ಜಪಿಸುತ್ತಿರುವುವು. ಈಶ್ವರ ಸೇವೆಯಲ್ಲಿ ನಿರತವಾದ ಈ ವನವು ಅತ್ಯಂತ ಪವಿತ್ರವಾಗಿರುವುದಲ್ಲವೇ ! ॥೮೩॥

ಇದೆಲ್ಲವೂ ಹಿಂದೆಂದೂ ನೋಡದಿರುವ ದೃಶ್ಯವಾಗಿರುವುದು. ಈ ವನದ ಪವಿತ್ರವಾದ ಮಹಿಮೆಯೂ ಅದ್ಭುತವಾಗಿರುವುದು. ಈ ಮಹಿಮೆಯನ್ನು ನೋಡುವ ಭಾಗ್ಯವು ನನ್ನ ಕಣ್ಣುಗಳಿಗೆ ಲಭಿಸಿರುವುದು. ಇದೆಲ್ಲಾ ಈಶ್ವರನ ಲೀಲೆಯ ಮಹಿಮೆಯಲ್ಲವೇ ? ॥೮೪॥

ಓ ರಾಜೇಂದ್ರನೇ, ನಿನ್ನಿಂದ ಲೋಕತ್ರಯವು ಪರಮಪಾವನವಾಗಿರುವುದು. ಈ ಜಗತ್ತಿನಲ್ಲಿ ಜನ್ಮವನ್ನೆತ್ತಿರುವ ಸಕಲ ಪ್ರಾಣಿವೃಂದವೂ ನಿನ್ನ ದರ್ಶನಮಾತ್ರದಿಂದಲೇ ಮುಕ್ತಿಯನ್ನು ಹೊಂದುವುದು. ನಿನ್ನನ್ನು ನೋಡಿದರೆ, ಪುಣ್ಯರಾಶಿಗಳೇ, ಮೂರ್ತಿಮತ್ತಾಗಿ ಬಂದಿರುವುವೋ ಎಂಬಂತೆ ಕಾಣಿಸುತ್ತಿರುವುದು. ನೀನು ಭಾಗ್ಯಶಾಲಿಗಳಾದ ಜನರಲ್ಲೆಲ್ಲಾ ಶ್ರೇಷ್ಠತಮನಾಗಿರುವೆ. ನಿನ್ನ ದರ್ಶನದಿಂದ ಭಕ್ತಿಭಾವನೆಯುಂಟಾಗಿ ಈ ಜಗತ್ತೇ ಈಗ ಹೇಯವಾಗಿ ತೋರುತ್ತಿರುವುದು. ॥೮೫॥

ಶಿವಾಚಾರನಿಷ್ಠೋ ವರಿಷ್ಠೋ ವಿಶಿಷ್ಟಾತ್
ವರಿಷ್ಠೋಽಪಿ ನಿಷ್ಠಾ ಶಿವಾಚಾರಪೂತಾತ್ ।
ಸಮಭ್ಯರ್ಚ್ಯ ಮುಕ್ತೋ ಭವಿಷ್ಯತ್ಯತಸ್ತ್ವಂ
ಗರಿಷ್ಠೋಽಸಿ ಗೌರೀಪತೇಃ ಪೂಜನೇನ ॥೮೬॥

ಮಯಸ್ಕರಮಯಸ್ತ್ವಯಂ ಸಕಲದೇಶ ಏವಂ ಕುತಃ
ಯತಸ್ತ್ವಮಸಿ ಭಾಗ್ಯವಾನಮಿತಪುಣ್ಯಪೂರ್ಣಾಂಬುಧಿಃ ।
ತ್ವಮೇವ ಸತತಂ ಮಮ ಪ್ರಿಯವಿಧಾನದಕ್ಷಃ ಕ್ಷಣಂ
ವಿಲೋಚನವಿಲೋಕನೈರಮಿತಪುಣ್ಯಕೀರ್ಣಂ ನೃಪ ॥೮೭॥

ಭೂಮಂಡಲಂ ಮಂಡಿತಮೇವ ರಾಜನ್
ತ್ವಯಾ ವಿಚಿತ್ರಂ ತದಿದಂ ನ ಚಿತ್ರಂ ।
ಯತಸ್ತ್ರಿನೇತ್ರೋ ಹೃದಯೇ ಪವಿತ್ರೇ
ತವಾಸ್ತಿ ನಿತ್ಯಂ ಗಿರಿಜಾಸಹಾಯಃ ॥೮೮॥

ಈಶ್ವರ ಸೇವೆಯಲ್ಲಿ ನಿರತನಾದ ಮನುಷ್ಯನು, ಸಕಲ ಪ್ರಾಣಿಗಳಿಗಿಂತಲೂ ಶ್ರೇಷ್ಠತಮನೆನಿಸಿರುವನು. ಸತ್ಪುರುಷನಾದವನು ಈಶ್ವರ ಭಕ್ತನ ಸಂಗವನ್ನು ಬೆಳಸಿ, ಅಪಾರವಾದ ಭಕ್ತಿಯನ್ನು ಸಂಪಾದಿಸಿ ಮೋಕ್ಷವನ್ನು ಹೊಂದುವನು. ನೀನಾದರೋ ಉಮಾರಮಣನಾದ ಶಿವನನ್ನು ಪೂಜಿಸಿ, ಈಶ್ವರಭಕ್ತಾಗ್ರೇಸರನೆಂದೆನಿಸಿಕೊಂಡಿರುವೆ. ॥೮೬॥

ಪುಣ್ಯಶಾಲಿಯಾದ ನೀನು ಇಲ್ಲಿ ನೆಲಸಿರುವುದರಿಂದ ಈ ಪ್ರದೇಶವೆಲ್ಲವೂ ಈಶ್ವರಮಯವಾಗಿರುವುದು. ನೀನೇ ನನ್ನ ಹಿತೈಷಿಯಾಗಿರುವೆ. ಆದುದರಿಂದ ಒಂದು ಬಾರಿ ನನ್ನ ಕಡೆಗೆ ನಿನ್ನ ಪವಿತ್ರವಾದ ದೃಷ್ಟಿಯನ್ನು ಬೀರಿ ನನ್ನನ್ನು ಪವಿತ್ರೀಕರಿಸು. ॥೮೭॥

ಎಲೈ ಭೂಪಾಲಕನೇ, ನಿನ್ನ ಪವಿತ್ರವಾದ ಹೃದಯದಲ್ಲಿ ಪಾರ್ವತೀವಲ್ಲಭನಾದ ಪರಮೇಶ್ವರನು ನೆಲಸಿರುವನು. ಈಶ್ವರಧ್ಯಾನನಿರತನಾದ ನೀನು ಸಕಲ ಲೋಕಗಳನ್ನೂ ಅಲಂಕರಿಸಿರುವೆ ಎಂದರೆ ಅದು ಅತಿಶಯೋಕ್ತಿಯಾಗಲಾರದು." ॥೮೮॥

ಇತ್ಯಾಕರ್ಣ್ಯ ವಚಸ್ತಸ್ಯ ವಾಕ್ಪತೇರ್ಭೂಪತಿರ್ಮುದಾ ।
ಶಿವಧರ್ಮೋತ್ತಮಃ ಕೋ ವಾ ತಂ ವದಾದ್ಯವಿಶೇಷತಃ ॥೮೯॥

ಶಿವಧರ್ಮಸುಧಾಂಭೋಧಿಕಲ್ಲೋಲಕುಲಮಾಲಯಾ ।
ಮಮ ಮಾನಸಹಂಸೋಽಪಿ ವಿಲಾಸಂ ಸಮುಪೇಕ್ಷತೇ ॥೯೦॥

ಇತಿ ರಾಜವಚಃ ಶ್ರುತ್ವಾ ಪೀಯೂಷಸದೃಶಂ ಪ್ರಿಯಂ ।
ಪ್ರಾಹ ಗಂಭೀರಯಾ ವಾಚಾ ಶಿವಸ್ಮರಣಪೂರ್ವಕಂ ॥೯೧॥

ಧರ್ಮರತ್ನಖನಿರೇವ ಭೂಪತೇ
ತ್ವಂ ಶಿವಾರ್ಚನರತೋ ಯತಸ್ತತಃ ।
ಧರ್ಮತತ್ತ್ವಮುಸಕೃನ್ನಯಾಮಿ ತ
ತ್ತ್ವತ್ಕೃತಾಮಿತಶಿವಾರ್ಚನಾದಿಭಿಃ ॥೯೨॥

ತ್ವಯಾ ನೋಕ್ತೋ ಧರ್ಮಃ ಕಥಮಪಿ ನ ಯದ್ಯಪ್ಯನುದಿನಂ
ತಥಾಪಿ ತ್ವದ್ವೃತ್ತಿಃ ಕಥಯತಿ ಪರಂ ಧರ್ಮಮಧುನಾ ।

ಹೀಗೆಂದ ಬ್ರಹ್ಮನ ಮಾತನ್ನು ಕೇಳಿ, ರಾಜನು ಅವನನ್ನು ಕುರಿತು ಪ್ರೀತಿಯಿಂದ ಹೀಗೆಂದನು "ಓ ಪಿತಾಮಹನೇ! ಈ ಲೋಕದಲ್ಲಿ, ಶ್ರೇಷ್ಠತಮನಾದ ಈಶ್ವರಭಕ್ತನಾರು? ಎಂಬುದನ್ನು ನನಗೆ ತಿಳಿಯಪಡಿಸು. ॥೮೯॥

ಹಂಸವು, ಅನೇಕ ತರಂಗಗಳಿಂದ ಕೂಡಿರುವ ಸುಧಾಸಮುದ್ರದಲ್ಲಿ ವಿಹರಿಸಲು ಬಯಸುವಂತೆ, ನನ್ನ ಈ ಚಿತ್ತವು, ಈಶ್ವರಪ್ರಿಯವಾದ ಧರ್ಮಗಳನ್ನು ಕೇಳುವುದಕ್ಕೆ ಹಾತೊರೆಯುತ್ತಿರುವುದು." ॥೯೦॥

ಬ್ರಹ್ಮನು ರಾಜನ ಅಮೃತದಂತೆ ಮಧುರವಾದ ಆ ಮಾತನ್ನು ಕೇಳಿ, ಸಂತೋಷಭರಿತನಾಗಿ, ಬಳಿಕ, ಶಿವನನ್ನು ಸ್ಮರಿಸಿ, ರಾಜನನ್ನು ಕುರಿತು ಗಂಭೀರವಾದ ವಾಣಿಯಿಂದ ಹೀಗೆಂದನು. ॥೯೧॥

"ಎಲೈ, ಭೂಪಾಲಕನೇ, ಈಶ್ವರಪೂಜಾಸಕ್ತನಾದ ನೀನು ಧರ್ಮವೆಂಬ ರತ್ನಗಳಿಗೆ ಗಣಿಯಂತಿರುವೆ. ನಿನ್ನ ಈಶ್ವರ ಸೇವೆಯಿಂದುಂಟಾದ ಪುಣ್ಯವಿಶೇಷವನ್ನು ನಾನೂ, ಸಂಪಾದಿಸಲು ಪ್ರಯತ್ನಿಸುವೆನು. ॥೯೨॥

ನೀನು ಇದುವರೆಗೆ ಎಂದೂ ನನಗೆ ಧರ್ಮಸ್ವರೂಪವನ್ನು ಉಪದೇಶಿಸಲಿಲ್ಲ. ಆದರೂ ನಿನ್ನ ಸದಾಚಾರವೇ ನನಗೀಗ ಧರ್ಮವನ್ನುಪದೇಶಿಸುತ್ತಿರುವುದು. ನೀನೇ

ಗುರುಃ ಸಾ ಮೇ ಭೂಪ ಪ್ರತಿಹತಮಹಾಪಾಪಸುಕೃತ
ಪ್ರಸಾರೂಪಾಪಾರವ್ಯಸನಪರಿಪಾಕಾ ಹತಕೃಪಾ ॥೯೩॥

ಧರ್ಮಾಸ್ತೇ ಯಮಶಾಸಕಾ ಅಪಿ ಯಮಸ್ತಾವದ್ಬಿಭೇತ್ಯನ್ವಹಂ
ಯೈಸ್ತಲ್ಲೋಕನಿವಾಸಿನಾಮಪಿ ಮುಹುರ್ಲಜ್ಜಾ ಪ್ರವೃದ್ಧಾ ಪುರಾ ।
ಸಂತಾಪೋಽಪಿ ಮಹೀಭೃತಾಂ ನೃಪ ಮುಹುಸ್ತೇ ತಾವದತ್ಯುತ್ತಮಾಃ
ತ್ವತ್ಪಾದಾಂಬುಜದರ್ಶನಾದಪಿ ಭವಂತ್ಯೇವೇತಿ ಮೇ ಪ್ರತ್ಯಯಃ ॥೯೪॥

ಇತಿ ತದ್ವಚನಂ ಶ್ರುತ್ವಾ ರಾಜಾ ಸಂತುಷ್ಟಮಾನಸಃ ।
ಶಿವವಿದ್ಯಾಪ್ರಭಾವಂ ಮೇ ವದೇತ್ಯಾಹ ವಿಚಕ್ಷಣಃ ॥೯೫॥

ಸರ್ವಾಸಾಮಪಿ ವಿದ್ಯಾನಾಂ ಶಿವವಿದ್ಯಾಶಿರೋಮಣಿಃ ।
ತತ್ಪ್ರಭಾವಾನುಕಥನಂ ಜಾಯತೇ ಪುಣ್ಯರಾಶಿಭಿಃ ॥೯೬॥

ನನಗೆ ಧರ್ಮೋಪದೇಶಕನಾದ ಗುರುವಾಗಿರುವೆ. ನಿನ್ನ ದರ್ಶನದಿಂದ, ನನ್ನಲ್ಲಿದ್ದ, ಕ್ಷುದ್ರವಾದ ಮನೋಭಾವನೆಯು ದೂರವಾಗಿ ಸಕಲ ಪಾಪರಾಶಿಗಳೂ ನಷ್ಟವಾದುವು. ಇದು ನನ್ನ ಪೂರ್ವಜನ್ಮದ ಸುಕೃತ ರಾಶಿಯ ವಿಶೇಷದ ಫಲವಲ್ಲವೇ ? ॥೯೩॥

ಧರ್ಮಗಳನ್ನು ಅಧೀನದಲ್ಲಿಟ್ಟುಕೊಂಡಿರುವವನು ಯಮನೇ. ಆದರೂ ಯಮನು ಧರ್ಮಗಳಿಗೆ ಹೆದರುವನು. ಭೂಲೋಕದಲ್ಲಿ ಧರ್ಮಪರಿಪಾಲನೆಮಾಡಿದ ಅನೇಕ ರಾಜರು, ಯಮಲೋಕವನ್ನು ಸೇರಿ, ಅಲ್ಲಿ ನಡೆಯುವ ಧರ್ಮ ಕಾರ್ಯಾದಿಗಳನ್ನು ನೋಡಿ ನಾಚಿಕೆಗೊಳ್ಳುವರು. ಮತ್ತು ದುಃಖಪಡುವರು. ಆದರೆ ಎಲೈ ರಾಜನೇ, ನಿನ್ನ ಧರ್ಮಮಾರ್ಗವು ಮಾತ್ರ ಅಂತಹುದಲ್ಲ. ಅಂತಹ ಕ್ಷುದ್ರರಾಜರು ನಿನ್ನ ಪಾದಕಮಲವನ್ನು ನೋಡಿ, ಧನ್ಯರಾಗುವರು ಮತ್ತು ಧರ್ಮಿಷ್ಠರೆಂದೆನಿಸುವರು." ॥೯೪॥

ಬ್ರಹ್ಮನ ಆ ಮಾತನ್ನು ಕೇಳಿ, ಜ್ಞಾನಿಯಾದ ಆ ರಾಜನು ಸಂತುಷ್ಟನಾಗಿ, ತನಗೆ ಶಿವಕಥಾಮಹಿಮೆಯನ್ನು ತಿಳಿಯಪಡಿಸುವಂತೆ ಬ್ರಹ್ಮನನ್ನು ಪ್ರಾರ್ಥಿಸಿದನು. ॥೯೫॥

ಆಗ ಬ್ರಹ್ಮನು ಹೀಗೆ ಉಪದೇಶಿಸಲಾರಂಭಿಸಿದನು. " ಎಲೈ, ರಾಜೇಂದ್ರನೇ ! ಶಿವವಿದ್ಯೆ ಎಂಬುದು ಸಕಲ ವಿದ್ಯೆಗಳಲ್ಲಿಯೂ ಶ್ರೇಷ್ಠವಾದುದು. ಅದರ ಮಹಿಮೆ

ಮಾದೃಶೈಸ್ತತ್ಪ್ರಭಾವೋऽಪಿ ವರ್ಣನೀಯಃ ಕಥಂ ಮುಹುಃ ।
ತತ್ಸ್ವರೂಪಾಪರಿಜ್ಞಾನೇ ತಜ್ಜ್ಞಾನಮತಿದುರ್ಲಭಂ ॥೯೭॥

ತಜ್ಜ್ಞಾನಾರ್ಥಂ ತಪಸ್ತಪ್ತಂ ಮಯಾ ನಾರಾಯಣೇನ ಚ ।
ತಥಾಪಿ ಸಾ ನ ವಿಜ್ಞಾತಾ ಶಿವವಿದ್ಯಾ ಮಹತ್ತರಾ ॥೯೮॥

ಯದ್ವಿದ್ಯಾಭ್ಯಸನೇನೈವ ಮಹಾಪಾತಕಪರ್ವತಾಃ ।
ವಿನಶ್ಯಂತಿ ನ ಸಂದೇಹಸ್ತೂಲಾದ್ರಿರಿವ ವಹ್ನಿನಾ ॥೯೯॥

ಶಿವವಿದ್ಯಾಪ್ರಭಾವಜ್ಞಃ ಶಂಭುರೇವ ನ ಸಂಶಯಃ ।
ತತ್ಪ್ರಭಾವಪರಿಜ್ಞಾನಮಸ್ಮಾಕಮತಿದುರ್ಲಭಂ ॥೧೦೦॥

ಯನ್ನು ವರ್ಣಿಸುವ ಸುಯೋಗವು ಅನೇಕ ಪುಣ್ಯಕರ್ಮಗಳಿಂದಲೇ ಲಭಿಸುವುದಲ್ಲದೇ ಅನ್ಯಥಾ ದೊರೆಯಲಾರದು. ||೯೬||

ನಮ್ಮಂತಹ ಅಜ್ಞರಿಗೆ ಶಿವಕಥಾ ಮಹಿಮೆಯನ್ನು ವರ್ಣಿಸಲು ಸಾಧ್ಯವೇ? ಶಿವನ ಸ್ವರೂಪವನ್ನು ತಿಳಿಯದೇ ಶಿವವಿದ್ಯೆಯ ಅಪಾರವಾದ ಮಹಿಮೆಯನ್ನು ವರ್ಣಿಸುವುದು ಅಶಕ್ಯವೇ ಸರಿ. ಶಿವನ ಸ್ವರೂಪವನ್ನು ತಿಳಿಯುವುದೇ ಅತ್ಯಂತ ದುಸ್ತರ. ||೯೭||

ಈ ಹಿಂದೆ ನಾನು ಶ್ರೇಷ್ಠವಾದ ಶಿವವಿದ್ಯೆಯನ್ನು ತಿಳಿದುಕೊಳ್ಳುವುದಕ್ಕಾಗಿ ವಿಷ್ಣುವಿನೊಂದಿಗೆ, ಘೋರವಾದ ತಪಸ್ಸನ್ನಾಚರಿಸಿದೆನು. ಆದರೂ ನಾವು ಅದನ್ನು ತಿಳಿಯಲು ಅಸಮರ್ಥರಾದೆವು. ||೯೮||

ಅಮೂಲ್ಯವಾದ ಶಿವವಿದ್ಯೆಯನ್ನು ಪುನಃ ಪುನಃ ಅನುಸಂಧಾನಮಾಡುವುದರಿಂದ, ಅಗ್ನಿಯಿಂದ ಅರಳೆಯ ರಾಶಿಯು ನಾಶವಾಗುವಂತೆ, ಮಹತ್ತರವಾದ ಪಾಪರಾಶಿಗಳು ಕ್ಷಣಕಾಲದಲ್ಲಿ ನಾಶವಾಗುವುವು. ||೯೯||

ಶಿವವಿದ್ಯೆಯ ಮಹಿಮೆಯನ್ನು ತಿಳಿದುಕೊಂಡಿರುವವನು, ಸಾಕ್ಷಾತ್ ಶಿವನೇ ಆಗುವನು. ಅದರಲ್ಲಿ ಸಂಶಯವಿಲ್ಲ. ಆದರೆ ನಮ್ಮಂತಹ ಅಜ್ಞರಿಗೆ ಅದರ ಮಹಿಮೆಯನ್ನು ತಿಳಿದುಕೊಳ್ಳುವ ಸುಯೋಗವು ದುರ್ಲಭ. ||೧೦೦||

ಪುರಾ ವಿದ್ಯಾಃ ಸಮುಸ್ತಾಸ್ತಾಸ್ತುಷಾರಗಿರಿಕಂದರೇ ।
ತಪಃ ಶಿವಪ್ರಸಾದಾರ್ಥಂ ಕರ್ತುಮಭ್ಯುದ್ಯತಾಸ್ತತಃ ॥೧೦೧॥

ಪ್ರಜ್ವಾಲ್ಯ ಪಾವಕಾನ್ ಪಶ್ಚಾತ್ಪುರಸ್ತಾತ್ಪಾರ್ಶ್ವಯೋರಪಿ ।
ದೃಷ್ಟ್ವಾ ಭಾನುಂ ಪ್ರಚಂಡಾಂಶುಂ ತಪಸ್ತೇಪುರ್ಮಹೀಪತೇ॥೧೦೨॥

ಯುಗಾನಾಮಯುತಂ ತತ್ರ ಶಾಂತಾಸ್ತಾಸ್ತಪಸಾ ತತಃ ।
ಓಂಕಾರರೂಪಸ್ತತ್ರೇಶಃ ಪ್ರಸನ್ನೋ ಮುನಿರೂಪಭಾಕ್ ॥೧೦೩॥

ತಮಾಗತಂ ಸಮಾಲೋಕ್ಯ ವಿದ್ಯಾಮೂರ್ತಿರುವಾಚ ತಂ ।
ಕೋಽಸಿ ಕೋಽಸಿ ಮುನಿಶ್ರೇಷ್ಠ ವದೇತಿ ಮುಹುರಾದರಾತ್ ॥೧೦೪॥

ಹಿಂದೆ ಒಂದಾನೊಂದು ಕಾಲದಲ್ಲಿ, ಸಮುಸ್ತ ವಿದ್ಯೆಗಳು, (ವಿದ್ಯಾಭಿಮಾನಿಗಳಾದ ದೇವತೆಗಳು ಎಂದರ್ಥ) ಶಿವನ ಅನುಗ್ರಹವನ್ನು ಸಂಪಾದಿಸುವುದಕ್ಕೋಸ್ಕರ ಹಿಮವತ್ಪರ್ವತದ ತಪ್ಪಲು ಪ್ರದೇಶದಲ್ಲಿ ತಪಸ್ಸನ್ನು ಆಚರಿಸತೊಡಗಿದವು. ॥೧೦೧॥

ಎಲೈ, ಭೂಪಾಲಕನೇ! ಆ ವಿದ್ಯೆಗಳು, ತಮ್ಮ ಸುತ್ತಲೂ, ನಾಲ್ಕು ಕಡೆಗಳಲ್ಲಿಯೂ, ಅಗ್ನಿಯನ್ನು ಸ್ಥಾಪಿಸಿ, ಅವುಗಳನ್ನು ಪ್ರಜ್ವಲಿಸುವಂತೆ ಮಾಡಿ ಅವುಗಳ ಮಧ್ಯದಲ್ಲಿ ನಿಂತು ಪ್ರಖರವಾದ ಕಿರಣಗಳನ್ನು ಪ್ರಸರಿಸಿದ ಸೂರ್ಯನನ್ನು ಎವೆಯಿಕ್ಕದೇ ನೋಡುತ್ತಾ ಪಂಚಾಗ್ನಿ ಮಧ್ಯೆ ಕಠಿಣವಾದ ತಪಸ್ಸನ್ನಾಚರಿಸಿದುವು. ॥೧೦೨॥

ಈ ರೀತಿಯಲ್ಲಿ ಉಗ್ರವಾದ ತಪಸ್ಸನ್ನು ಕೈಗೊಂಡ ಆ ವಿದ್ಯೆಗಳು ಹತ್ತು ಸಹಸ್ರ ಯುಗಗಳು ಕಳೆಯುವವರೆಗೂ ತಪಸ್ಸನ್ನು ನೆರವೇರಿಸಿದುವು. ಬಳಿಕ ಓಂಕಾರ ಸ್ವರೂಪನಾದ ಪರಮೇಶ್ವರನು ಅವರ ತಪಸ್ಸಿಗೆ ಮೆಚ್ಚಿ ಋಷಿಯ ರೂಪವನ್ನು ತಾಳಿ ಪ್ರತ್ಯಕ್ಷನಾದನು. ॥೧೦೩॥

ಋಷಿವೇಷದಿಂದ ತಮ್ಮ ಮುಂಭಾಗದಲ್ಲಿ ಬಂದು ನಿಂತಿರುವ ಶಿವನನ್ನು, ವಿದ್ಯೆಗಳು "ಓ ಮುನಿಪುಂಗವನೇ! ನೀನಾರೆಂಬುದನ್ನು ನಮಗೆ ತಿಳಿಯಪಡಿಸು" ಎಂದು ವಿನಯದಿಂದ ಪ್ರಾರ್ಥಿಸಲು, ॥೧೦೪॥

|| ಓಂಕಾರ ಉವಾಚ ||

ಓಂಕಾರ ಇತಿ ಮೇ ನಾಮ ಮಯಾ ತಪ್ತಂ ತಪಃ ಪುರಾ ।
ಶಿವವಿದ್ಯಾಜ್ಞಾನಸಿದ್ಧ್ಯೈ ನಿರಾಹರಣಸಂತತಂ ॥೧೦೫॥

ಅತ್ರೋಂಕಾರಾಭಿದಂ ಲಿಂಗಂ ತುಂಗಂ ಮಂಗಲದಾಯಕಂ ।
ತದರ್ಚಿತಂ ಪುರಾ ಗೌರ್ಯಾ ಸ್ವೇಷ್ಟಸಿದ್ಧ್ಯರ್ಥಮಾದರಾತ್॥೧೦೬॥

ಅತ್ರೈವ ಸಾ ತಪಃ ಕೃತ್ವಾ ತಪಸಃ ಫಲಮಾಪ ಚ ।
ಶಿವಾರ್ಧಾಂಗಪ್ರಾಪ್ತಿರೂಪಂ ತತ್ರಾನ್ಯದತಿದುರ್ಲಭಂ ॥೧೦೭॥

ದುರ್ಲಭಾನಿ ಫಲಾನ್ಯತ್ರ ಸಿದ್ಧ್ಯಂತೀತಿ ವಿಶೇಷತಃ ।
ಅತ್ರೈವ ತಪ್ತಂ ಬಹುಭಿಸ್ತಪಃ ಪೂರ್ವಂ ಮುನೀಶ್ವರೈಃ ॥೧೦೮॥

ವಸಿಷ್ಠಾದ್ಯೈರ್ಮುನಿಗಣೈಃ ಸಿದ್ಧೈಶ್ಚ ಕಪಿಲಾದಿಭಿಃ ।
ನಾರದಾದ್ಯೈಶ್ಚ ಬಹುಭಿಃ ಗಂಧರ್ವೈರಪಿ ಕಿನ್ನರೈಃ ॥೧೦೯॥

ಋಷಿ ವೇಷಧಾರಿಯಾದ ಓಂಕಾರೇಶ್ವರನು ಹೀಗೆಂದನು. “ ಎಲೈ ವಿದ್ಯಾಮೂರ್ತಿಗಳೇ ! ಓಂಕಾರವೆಂಬುದೇ ನನ್ನ ನಾಮಧೇಯ. ಈ ಹಿಂದೆ ನಾನು ಶಿವ ವಿದ್ಯೆಯನ್ನು ತಿಳಿದುಕೊಳ್ಳುವುದಕ್ಕೋಸ್ಕರ ನಿರಾಹಾರದಿಂದ ಬಹುಕಾಲ ಇಲ್ಲಿ ತಪಸ್ಸನ್ನಾಚರಿಸಿದೆನು. ||೧೦೫||

ಈ ಪರ್ವತದಲ್ಲಿ ಓಂಕಾರವೆಂಬ ನಾಮಧೇಯದಿಂದ ಪ್ರಸಿದ್ಧಿಗೊಂಡ, ಅತ್ಯುನ್ನತವಾದ ಮತ್ತು ಶ್ರೇಷ್ಠವಾದ ಶಿವಲಿಂಗವಿರುವುದು. ಈ ಹಿಂದೆ ಗಿರಿಜೆಯು ತನ್ನ ಇಷ್ಟಾರ್ಥಗಳ ಸಿದ್ಧಿಗೋಸ್ಕರ ಆ ಲಿಂಗವನ್ನು ಭಕ್ತಿಯಿಂದ ಪೂಜಿಸಿರುವಳು. ||೧೦೬||

ಅವಳು ಇದೇ ಸ್ಥಳದಲ್ಲಿ ತಪಸ್ಸನ್ನಾಚರಿಸಿ, ತಪಸ್ಸಿನ ಫಲವಾಗಿ ಈಶ್ವರನ ಅರ್ಧಾಂಗಿಯೆಂದೆನಿಸಿಕೊಂಡಳು. ಈ ಫಲವು ಇತರರಿಗೆ ದುರ್ಲಭವಲ್ಲವೆ! ||೧೦೭||

ಇತರ ಸ್ಥಳಗಳಲ್ಲಿ ದುರ್ಲಭವಾದ ಫಲಗಳು ಈ ಸ್ಥಳದಲ್ಲಿ ಸುಲಭವಾಗಿ ಲಭಿಸುವುವು. ಮತ್ತು ಅನೇಕ ಮುನಿಶ್ರೇಷ್ಠರು ಈ ಪ್ರದೇಶದಲ್ಲಿಯೇ ತಪಸ್ಸನ್ನಾಚರಿಸಿ, ಇಷ್ಟಾರ್ಥಗಳನ್ನು ಪಡೆದಿರುವರು. ||೧೦೮||

ಪವಿತ್ರವಾದ ಈ ಸ್ಥಳದಲ್ಲಿ ವಸಿಷ್ಠಾದಿಮುನಿಗಳೂ, ಕಪಿಲನೇ ಮೊದಲಾದ ಸಿದ್ಧರೂ, ನಾರದಾದಿ ಋಷಿಗಳೂ, ಗಂಧರ್ವರೂ, ಕಿನ್ನರರೂ, ನಂದಿಕೇಶ್ವರನೇ

ಗಣೈಶ್ಚ ನಂದಿಕೇಶಾದ್ಯೈಸ್ತಪಸ್ತಪ್ತಂ ಮಹಾತ್ಮಭಿಃ ।
ಹಿಮಾದ್ರಿಣಾ ತಪಸ್ತಪ್ತಂ ಮೇರುಣಾ ಮಂದರೇಣ ಚ ॥೧೧೦॥

ವಿಂಧ್ಯೇನ ಗಂಧಮಾದೇನ ಶ್ರೀಶೈಲೇನ ವಿಶೇಷತಃ ।
ಶೇಷೇಣಾತ್ರ ತಪಸ್ತಪ್ತಂ ತಥಾ ಕರ್ಕೋಟಕೇಣ ಚ ॥೧೧೧॥

ತಪ್ತಂ ನಾರಾಯಣೇನಾಪಿ ತಪ್ತಂ ಕಮಲಯಾ ತಪಃ ।
ಇಂದ್ರೇಣಾಪಿ ತಪಸ್ತಪ್ತಂ ಶಚ್ಯಾ ತಪ್ತಂ ತಪಃ ಪುರಾ ॥೧೧೨॥

ಬ್ರಹ್ಮಣಾಪಿ ತಪಸ್ತಪ್ತಂ ಸರಸ್ವತ್ಯಾ ತಪಃ ಕೃತಂ ।
ಅನ್ಯೈಶ್ಚ ಮುನಿಭಿರ್ದೇವೈಃ ದೇವದಾರೈಸ್ತಪಃ ಕೃತಂ ॥೧೧೩॥

ಶಿವವಿದ್ಯಾಜ್ಞಾನಸಿದ್ಧ್ಯೈ ಕಲ್ಪಾವಧಿ ಮಹತ್ತರಂ ।
ತಥಾಪಿ ತತ್ಪರಿಜ್ಞಾನಂ ನ ಜ್ಞಾತಂ ತದನಂತರಂ ॥೧೧೪॥

ಪುನರ್ಘೋರತರಂ ತಪ್ತಂ ತೈಃ ಕಲ್ಪಶತಮಾದರಾತ್ ।
ತೇನಾಪಿ ತಪಸಾ ಶಂಭುರ್ನಪ್ರಸನ್ನಸ್ತತಃ ಪರಂ ॥೧೧೫॥

ಮೊದಲಾದ ಪ್ರಮಥಗಣಗಳೂ, ಮತ್ತು ಹಿಮವಂತ, ಮೇರು, ಮಂದರ ಮುಂತಾದವರು ಇಲ್ಲಿ ತಪಸ್ಸು ಮಾಡಿರುವರು. ॥೧೦೯-೧೧೦॥

ಮತ್ತು ಈ ಸ್ಥಳದಲ್ಲಿ ವಿಂಧ್ಯ, ಗಂಧಮಾದ, ಶ್ರೀಶೈಲ ಮುಂತಾದ ಪರ್ವತಗಳೂ, ಆದಿಶೇಷ, ಕಾರ್ಕೋಟಕ ಮುಂತಾದ ಸರ್ಪಶ್ರೇಷ್ಠರೂ ತಪಸ್ಸನ್ನಾಚರಿಸಿರುವರು. ॥೧೧೧॥

ವಿಷ್ಣು, ಲಕ್ಷ್ಮೀ, ಇಂದ್ರ, ಶಚಿ, ಬ್ರಹ್ಮ, ಸರಸ್ವತೀ ಮೊದಲಾದ ದೇವತೆಗಳು ಪವಿತ್ರವಾದ ಈ ಸ್ಥಳದಲ್ಲಿ ತಪಸ್ಸನ್ನಾಚರಿಸಿರುವರು. ಇದಲ್ಲದೇ ಇನ್ನೂ ಅನೇಕ ಮಂದಿ ಋಷಿಗಳೂ, ದೇವತೆಗಳೂ, ದೇವತಾಸ್ತ್ರೀಯರೂ, ಶಿವವಿದ್ಯೆಯ ಸಿದ್ಧಿಗೋಸ್ಕರ ಕಲ್ಪಾಂತಪರ್ಯಂತ ಘೋರತರವಾದ ತಪಸ್ಸನ್ನು ಮಾಡಿರುವರು. ಆದರೂ ಅವರು ಶಿವವಿದ್ಯೆಯನ್ನು ತಿಳಿದುಕೊಳ್ಳಲಾರದೇ ಹೋದರು. ॥೧೧೨-೧೧೩-೧೧೪॥

ದೀರ್ಘಕಾಲದ ವರೆಗೆ ತಪಸ್ಸನ್ನಾಚರಿಸಿದರೂ ಶಿವವಿದ್ಯೆಯು ತಿಳಿಯದಿರಲು, ಅವರು ಪುನಃ ಸಹಸ್ರ ಕಲ್ಪಗಳು ಕಳೆಯುವವರೆಗೆ ಭಯಂಕರವಾದ ತಪಸ್ಸನ್ನಾಚರಿಸಿದರು. ಆದರಿಂದಲೂ ಪರಮೇಶ್ವರನು ಅವರಿಗೆ ಪ್ರಸನ್ನನಾಗದಿರಲು, ॥೧೧೫॥

ಪರಸ್ಪರ ವಿಚಾರಾರ್ಥಮುಪವಿಷ್ಟಾಃ ಶಿವಾಲಯೇ ॥೧೧೬॥

ಸಂಕ್ಷೀಣಾಸ್ತನವಃ ಕೃತೇನ ತಪಸಾ ಪಂಚಾಗ್ನಿಮಧ್ಯೇ ಸದಾ
ವೈರೂಪ್ಯಂ ಸಮುಭೂತ್ತನುಷ್ವತಿತರಾಮಸ್ನಾದ್ಯಭಾವಾದಿಹ ।
ನ ಪ್ರಾಪ್ತಂ ಫಲಮಲ್ಪಮಪ್ಯನುದಿನಂ ಕ್ಷೀಣಂ ಕಿಲಾಯುಃ ಪುನ
ರ್ನಾಯುಃ ಕಿಂ ತಪಸಾ ವಿನೇಯಮಧುನಾ ಕಿಂ ತೇನ ಕೃತ್ಯಂ ಚ ನಃ॥೧೧೭॥

ಯೇನಾನಂದಘನಸ್ಯ ತಸ್ಯ ಪರಮಾ ವಿದ್ಯಾ ನ ಲಬ್ಧಾ ನ ವಾ
ತಜ್ಜ್ಞಾನಂ ಚ ವಿಮುಕ್ತಿದಂ ಕಥಮಪಿ ಪ್ರಾಪ್ತಂ ಪರಾನಂದದಂ।
ತೇನ ತ್ಯಾಜ್ಯಮಿದಂ ವಪುಃ ಪುನರಪಿ ಜ್ಞಾನಾರ್ಥಮೇವಾದರಾತ್
ಯತ್ನಃ ಕಾರ್ಯ ಇತಿ ಪ್ರಧಾವತಿ ಮನಃ ಸಾ ದುರ್ಲಭಾ ಸರ್ವಥಾ।೧೧೮॥

ಬಳಿಕ ಅವರು ಗಹನವಾದ ಈ ವಿಷಯವನ್ನು ಅನ್ಯೋನ್ಯವಾಗಿ ವಿಮರ್ಶಿಸುವುದಕ್ಕೋಸ್ಕರ ಸರ್ವರೂ ಶಿವಾಲಯದಲ್ಲಿ ಕುಳಿತುಕೊಂಡರು. ||೧೧೬||

ವಿಚಾರಾಸಕ್ತರಾದ ಅವರು ಪರಸ್ಪರವಾಗಿ ಹೀಗೆಂದು ಮಾತಾಡಿಕೊಂಡರು. "ದೀರ್ಘಕಾಲದವರೆಗೆ ಪಂಚಾಗ್ನಿಗಳ ಮಧ್ಯದಲ್ಲಿ ನಿಂತು ತಪಸ್ಸನ್ನಾಚರಿಸಿದುದರಿಂದ ನಮ್ಮ ದೇಹಗಳು ಕೃಶವಾದವು. ಕಾಲಕ್ಕೆ ಸರಿಯಾಗಿ ಆಹಾರವನ್ನು ಸೇವಿಸದೆ ದೇಹಗಳು ವಿರೂಪವಾದುವು. ಆದರೂ ಫಲಲೇಶವೂ ನಮಗೆ ಲಭಿಸಲಿಲ್ಲ. ಆಯುಸ್ಸು ಮಾತ್ರ ವೃಥಾ ಕ್ಷೀಣವಾಯಿತು. ಇನ್ನು ಉಳಿದಿರುವ ಅಲ್ಪವಾದ ಜೀವಿತವನ್ನಾದರೂ ತಪಸ್ಸಿನಿಂದೇಕೆ ಕಳೆಯಬೇಕು. ಅದರಿಂದ ನಮಗೆ ಲಭಿಸುವ ಫಲವಾದರೂ ಏನಿರುವುದು? ಇಷ್ಟಾರ್ಥಸಿದ್ಧಿಯಾಗದಿರುವ ಕಾರ್ಯದಿಂದ ತಾನೇ ಯಾವ ಪ್ರಯೋಜನವಿದ್ದೀತು? ||೧೧೭||

ಪರಮಾನಂದಸ್ವರೂಪನಾದ ಶಿವನ ವಿದ್ಯೆಯು ನಮಗೆ ಲಭಿಸಲಿಲ್ಲ. ನಿರತಿಶಯಾನಂದರೂಪವಾದ ಮೋಕ್ಷವನ್ನುಂಟುಮಾಡುವ ಜ್ಞಾನವೂ ಬರಲಿಲ್ಲ. ಆದುದರಿಂದ ಮತ್ತೊಮ್ಮೆ ಆ ಜ್ಞಾನವನ್ನು ಸಂಪಾದಿಸುವುದಕ್ಕೋಸ್ಕರವೇ ಈ ದೇಹವನ್ನು ತ್ಯಜಿಸಬೇಕೆಂದು ನಮ್ಮ ಮನಸ್ಸು ಬಯಸುತ್ತಿರುವುದು. ಅಪಾರವಾದ ಮಹಿಮೆಯುಳ್ಳ ಆ ಶಿವವಿದ್ಯೆಯು ದುರ್ಲಭವಲ್ಲವೆ? ||೧೧೮||

ತಪಃ ಶಿವಾರಾಧನಮಿತ್ಯವೈಮಿ
ತದ್ದುರ್ಲಭಂ ತೇನ ಕೃತಂ ಫಲಂ ನ ।
ನಾಲ್ಪಂ ತಪಸ್ತತ್ಫಲಸಾಧನಂ ಚ
ಸಾ ದುರ್ಲಭಾ ತೇನ ಮನೋಽಪಿ ದೂನಂ ॥೧೧೯॥

ಸಂತುಷ್ಟಂ ನ ಮನಃ ಕೃತೇನ ತಪಸಾ ಲಬ್ಧಂ ಫಲಂ ನೇತ್ಯತಃ
ಕಿಂ ತೇನಾಪಿ ಫಲೇನ ಜೀವನಧನತ್ಯಾಗೋಪಯುಕ್ತೇನ ವಾ ।
ತ್ಯಕ್ತೇಽಪಿ ಪ್ರಸಭೇನ ತೇನ ಪುನರಾಕಾಂಕ್ಷಾ ನ ಶಾಂತಾ ತತಃ
ಸರ್ವಂ ವ್ಯರ್ಥಮಭೂತ್ತಪಃ ಫಲಮಿದಂ ಕಿಂ ಜಾಯತೇ ತತ್ತತಃ ॥೧೨೦॥

ತಪಃಸ್ವರೂಪಂ ಶಿವಪೂಜನಂ ಚೇತ್
ತಜ್ಜ್ಞಾನಸಿದ್ಧಿಂ ನ ಕರೋತಿ ತರ್ಹಿ ।

ಈಶ್ವರಾರಾಧನೆಯೇ ಉತ್ಕೃಷ್ಟವಾದ ತಪಸ್ಸಾಗಿರುವುದೆಂದು ಭಾವಿಸುತ್ತೇನೆ. ಆದರೆ ಅದು ಮಾತ್ರ ನಮ್ಮಂತಹ ಸಾಮಾನ್ಯ ಜನರಿಗೆ ದುರ್ಲಭವಾಗಿರುವುದು. ನಾವು ಇದುವರೆಗೂ ಆಚರಿಸಿದ ಭಯಂಕರವಾದ ತಪಸ್ಸಿನಿಂದ ಯಾವ ಫಲವೂ ದೊರಕಲಿಲ್ಲ. ಈಶ್ವರಾರಾಧನವೆಂಬ ಆ ಫಲವನ್ನು ಪಡೆಯುವುದರಲ್ಲಿ ಅಲ್ಪವಾದ ತಪಸ್ಸು ಸಾಧನವಾಗುವುದಿಲ್ಲ. ಶಿವವಿದ್ಯೆಯೆಂಬುದು ಅತ್ಯಂತ ದುರ್ಲಭ. ಆದುದರಿಂದಲೇ ನಮ್ಮ ಮನಸ್ಸು ಈಗ ದುಃಖಿತವಾಗಿದೆ. ॥೧೧೯॥

ನಾವು ಆಚರಿಸಿದ ತಪಸ್ಸಿನಿಂದ ಯಾವ ಫಲವೂ ದೊರಕದೇ ಇದ್ದುದರಿಂದ ನಮ್ಮ ಮನಸ್ಸು ಚಿಂತಾಕ್ರಾಂತವಾಗಿರುವುದು. ಅಥವಾ ಯಾವ ಫಲಕ್ಕೋಸ್ಕರ ಈ ಜೀವನವನ್ನೇ ತ್ಯಜಿಸಬೇಕಾಗುವುದೋ ಆ ಫಲದಿಂದ ಯಾವ ಪುರುಷಾರ್ಥವು ತಾನೇ ಲಭಿಸುವುದು? ಆದರೂ ಈಶ್ವರಾನುಗ್ರಹವೆಂಬ ಫಲವನ್ನು ಪಡೆಯುವ ಇಚ್ಛೆಯಿಂದ, ಪ್ರಾಣಗಳನ್ನು ತ್ಯಜಿಸಿದರೂ, ಪುನಃ ಆ ಫಲದ ಅಪೇಕ್ಷೆಯು ಹೋಗುವಂತಿಲ್ಲ. ಇದುವರೆಗೆ ನಾವು ಕೈಗೊಂಡ ತಪಸ್ಸು ವ್ಯರ್ಥವಾಗಿ ಪರಿಣಮಿಸಿತು. ಇದರ ಕಾರಣವೇನಿರಬಹುದು? ॥೧೨೦॥

ಈಶ್ವರಾರಾಧನೆಯೇ ತಪಸ್ಸೆಂದು ಹೇಳಿಸಿಕೊಳ್ಳುವುದಾದರೆ ಅದರಿಂದ ಎಂದಿಗೂ ಜ್ಞಾನವು ಲಭಿಸಲಾರದು. ಹಾಗಾದರೆ ಶಿವವಿದ್ಯಾಜ್ಞಾನದ ಪ್ರಾಪ್ತಿಗೆ

ಕಿಮಸ್ತಿ ತತ್ಸಾಧನಮಿತ್ಯಯಂ ಚ
ಭೂಯೋ ವಿಚಾರೇ ಪ್ರಕೃತೇಃ ಪ್ರವೃದ್ಧಃ ॥೧೨೧॥

ಅಲಂ ವಿಚಾರೈರಪಿ ದುಷ್ಕರೈಸ್ತೈಃ
ತಜ್ಜ್ಞಾನಸಿದ್ಧಿಃ ಕಥಮದ್ಯ ವಾ ಸ್ಯಾತ್ ।
ಅಸಾರಪಾಪಾನಪಹಾರಕೇಣ
ಸ್ವಲ್ಪೇನ ತಾವತ್ತಪಸಾಽಧುನಾಃ ॥೧೨೨॥

ಅತಸ್ತಪೋ ಘೋರತರಂ ವಿಸೃಜ್ಯ
ತಜ್ಜ್ಞಾನವಾರ್ತಾಮಪಿ ದೂರತೋಽಪಿ ।
ಆಶಾಂ ವಿಹಾಯಾಪಿ ಫಲೇಷು ತೇಷು
ಶಿವಂ ಸ್ಮರಾಮಃ ಶಿವಮರ್ಚಯಾಮಃ ॥೧೨೩॥

ಅಲಭ್ಯಲಾಭಾಯ ತಪಃ ಕೃತಂ ಚೇತ್
ಕಿಂ ತೇನ ತತ್ಸಿದ್ಧಿರಪೇಕ್ಷಿತಾ ಸ್ಯಾತ್ ।
ಕಿಂ ಚಂದ್ರಮಾ ದಾತುಮಪಿ ಪ್ರವೃತ್ತಃ
ಗೃಹ್ಣಾತಿ ತಂ ಕುಬ್ಜತರೋಽತಿಬಾಲಃ ॥೧೨೪॥

ಯಾವ ಸಾಧನವಿರುವುದು ? ಎಂಬುದಾಗಿ ನಮ್ಮ ಈ ವಿಚಾರಸರಣಿಯು ಮನಸ್ಸಿನಲ್ಲಿ ಮುಂದುವರಿಯುತ್ತಿರುವುದು. ॥೧೨೧॥

ಅಥವಾ ಕೊನೆಗಾಣದಿರುವ ಈ ವಿಚಾರಗಳಿಂದ ಸಾಕು. ಜ್ಞಾನವು ಸಿದ್ಧಿಸುವ ಬಗೆ ಹೇಗೆ? ಆದರೆ, ನಮ್ಮ ಅಪಾರವಾದ ಪಾಪವನ್ನು ನಾಶಮಾಡುವುದರಲ್ಲಿ ಅಸಮರ್ಥವಾದ ಈ ತಪಸ್ಸಿನಿಂದಲಾದರೂ ಯಾವ ಪ್ರಯೋಜನವು ತಾನೇ ಕಂಡುಬಂದಿತು ? ॥೧೨೨॥

ಆದುದರಿಂದ ಉಗ್ರವಾದ ಈ ತಪೋನುಷ್ಠಾನವನ್ನೂ ಮತ್ತು ಅದರಿಂದ ಜ್ಞಾನವು ಲಭಿಸುವುದೆಂಬ ಅಭಿಮಾನವನ್ನೂ ದೂರದಲ್ಲಿರಿಸಿ ಫಲವನ್ನು ಅಪೇಕ್ಷಿಸದೇ ಶಿವನನ್ನು ಸ್ಮರಿಸೋಣ, ಆವನನ್ನು ಪೂಜಿಸೋಣ. ॥೧೨೩॥

ದುರ್ಲಭವಾದ ಫಲವನ್ನುದ್ದೇಶಿಸಿ ತಪಸ್ಸನ್ನಾಚರಿಸಿದರೆ ಆ ವಸ್ತುವು ಲಭಿಸುವುದುಂಟೇ? ಅಥವಾ ಫಲಸಿದ್ಧಿಯನ್ನು ಅಪೇಕ್ಷಿಸುವುದರಿಂದ ತಾನೇ ಯಾವ ಪ್ರಯೋಜನವಿರುವುದು. ? ಅತ್ಯಂತ ಕುಳ್ಳನಾಗಿರುವ ಬಾಲಕನು ಚಂದ್ರಬಿಂಬವನ್ನು

ನ ಬಾಲವತ್ಕ್ರೀಡನಮೇವ ಕಿಂ ತತ್
ತಪೋಽಪಿ ತಜ್ಜ್ಞಾನಫಲಸ್ಯ ಲಾಭಃ ।
ಕಥಂ ಭವಿಷ್ಯತ್ಯಧುನಾ ಕೃಪಾಬ್ಧಿಃ
ಶಂಭುಃ ಪರಂ ತತ್ತಪಸಾ ನ ತೃಪ್ತಃ ॥೧೨೫॥

ಸಂಪೂರ್ಣಕಾಮೋಽಪಿ ಮಹೇಶ್ವರೋಽಸೌ
ಪುನಃ ಪುನರ್ವಾಂಛತಿ ತತ್ಫಲಾನಿ ।
ದಾತುಂ ಪುನಃ ಪೂಜನಮೇವ ಲಿಂಗೇ
ಬಿಲ್ವಾದಿಭಿರ್ಭೂತಿವಿಭೂಷಣಾನಾಂ ॥೧೨೬॥

ಭಕ್ತಿರ್ಯಾಽವ್ಯಭಿಚಾರಿಣೀ ಹೃದಿ ಮುಹುಃ ಸಾ ವಹ್ನಿಕಲ್ಪಾ
ಮನಃ ಸಂತಾಪಾಯ ವಿನಿರ್ಮಿತಾ ಭಗವತೀ ತದ್ಭಿನ್ನಯಾ ಕೇವಲಂ ।
ಭಕ್ತ್ಯಾ ಪ್ರೀತಿರತಃ ಪರಂ ಖಲು ಸದಾ ಸಾ ದುರ್ಲಭಾ ದೇಹಿನಾಂ
ಸಾ ಚೇನ್ಮೋಕ್ಷಪದಂ ದದಾತಿ ಗಿರಿಶೇ ಸಾ ಯಾಚನೀಯಾ ಮುಹುಃ
॥೧೨೭॥

ಅಪೇಕ್ಷಿಸಿ, ಅದನ್ನು ಹಿಡಿಯುವೆನೆಂದು ಹೋದರೆ, ಚಂದ್ರನು ತನ್ನ ಬಿಂಬವನ್ನು ಆ ಬಾಲಕನಿಗೆ ಕೊಡಲು ಸಿದ್ಧನಿರುವನೇ? ॥೧೨೪॥

ತಪಸ್ಸೆಂದರೆ, ಬಾಲಕರ ವಿನೋದಗಳಂತೆ ಅಲ್ಲ. ಅದು ಕಾಯಕ್ಲೇಶವನ್ನುಂಟುಮಾಡುವುದು. ಆದರೂ, ಅದರಿಂದ ನಮಗೆ ಈಗ ಇಷ್ಟಾರ್ಥವು ಲಭಿಸಿರುವುದಿಲ್ಲ. ಕಾರಣವೇನೆಂದರೆ, ನಮ್ಮ ಆ ತಪಸ್ಸಿನಿಂದ ಈಶ್ವರನು ಇದು ವರೆಗೂ ಪ್ರಸನ್ನನಾಗಿರುವುದಿಲ್ಲ. ॥೧೨೫॥

ಆಪ್ತಕಾಮನಾದ ಪರಮೇಶ್ವರನು, ತನ್ನನ್ನು ಅನವರತವೂ, ಪತ್ರಪುಷ್ಪಗಳಿಂದ ಆರಾಧಿಸುವ ಭಕ್ತರಿಗೆ, ಮತ್ತೆ, ಮತ್ತೆ, ಯೋಗ್ಯವಾದ ಫಲಗಳನ್ನು ದಯಪಾಲಿಸಲಿಚ್ಛಿಸುವನು. ಆದುದರಿಂದ, ಪರಮೇಶ್ವರನನ್ನು ಆರಾಧಿಸುವುದರಿಂದಲೇ, ಶಿವವಿದ್ಯಾರಹಸ್ಯವು ತಿಳಿಯುವುದಲ್ಲದೇ ಅನ್ಯಥಾ ಬರಲಾರದು. ॥೧೨೬॥

ನಿಶ್ಚಲವಾದ ಭಕ್ತಿಯು, ಮನಃ ಸಂತಾಪಕ್ಕೆ ಅಗ್ನಿಯಂತಿರುವುದು. ಹೃದಯದಲ್ಲಿ ಆ ಭಕ್ತಿಯು ನೆಲಸಿದ್ದರೆ ಮನಃಕ್ಲೇಶವು ಎಂದೂ ಲಭಿಸಲಾರದು. ಭಗವದ್ವಿಷಯಕವಾದ ಶುದ್ಧಮನಸ್ಸೇ ಭಕ್ತಿಯೆನಿಸಿಕೊಳ್ಳುವುದು. ಇತರ ವಿಷಯಗಳಲ್ಲಿ ವ್ಯಾಪಿ

ಪ್ರಾಪ್ಯಾಪ್ಯವ್ಯಭಿಚಾರಿಣೀಮತಿದೃಢಾಂ ಭಕ್ತಿಂ ಮುಹುಃ ಸಾದರಂ
ಯೋ ಲಿಂಗಾರ್ಚನತತ್ಪರೋ ನ ವಿಲಸದ್ಬಿಲ್ವೀದಲೈಃ ಶಂಕರೇ ।
ನ ಸ್ಯಾತ್ತಸ್ಯ ಗತಿಃ ಕದಾಪಿ ನ ಭವತ್ಯೇವೇತಿ ಮನ್ಯೇ ತತಃ
ಶರ್ವಾರಾಧನಮೇವ ಸಾಧು ವಿವಿಧೈರ್ಬಿಲ್ವೈರ್ವಿಧೇಯಂ ನರೈಃ ॥೧೨೮॥

ಅನಲ್ಪಕಲ್ಪೇಷು ತಪಃ ಕೃತಂ ಚೇತ್
ಪೂತಂ ಮನಃ ಸ್ಯಾದತಿಪೂತಚಿತ್ತಃ ।
ಕರೋತಿ ಬಿಲ್ವಾದಿಭಿರಾದರೇಣ
ಮಹೇಶಲಿಂಗಾರ್ಚನಮೇವ ಮರ್ತ್ಯಃ ॥೧೨೯॥

ಕಿಂ ಕಿಂ ಲಿಂಗಸಮರ್ಚನೇನ ನ ಫಲಂ ಪ್ರಾಪ್ತವ್ಯಮಿತ್ಯಾದರೈಃ
ಹಾರ್ದೈರ್ಹಾರಸಮನ್ವಿತೈಃ ಮುಹುರಪಿ ಶ್ರೀಬಿಲ್ವಪತ್ರಾದಿಭಿಃ ।

ಸಿದ ಮನಸ್ಸೇ ಪ್ರೀತಿ ಎಂದು ಹೇಳಿಸಿಕೊಳ್ಳಲ್ಪಡುವುದು. ಅಂತಹ ಪ್ರೀತಿಯನ್ನು ತೊರೆಯಲೂ ಅಸಾಧ್ಯ. ಅದರಿಂದ ಯಾವ ಆಮುಷ್ಮಿಕಫಲವೂ ದೊರೆಯಲಾರದು. ಆದರೆ ಪ್ರಾಣಿಗಳಿಗೆ ಅತ್ಯಂತ ದುರ್ಲಭವಾದ ಭಕ್ತಿಯೇ ಮೋಕ್ಷಪದವಿಯನ್ನು ದಯಪಾಲಿಸುವುದಾದರೆ ನಾವು ಅದನ್ನೇ ಅವಲಂಬಿಸೋಣ. ||೧೨೭||

ಯಾವ ಮನುಷ್ಯನು ಈಶ್ವರನಲ್ಲಿ ಭಕ್ತಿಭಾವನೆಯಿಂದ ಕೂಡಿದ್ದರೂ, ಪತ್ರಪುಷ್ಪಾದಿಗಳಿಂದ ಶಿವಲಿಂಗವನ್ನು ಅರ್ಚಿಸುವುದಿಲ್ಲವೋ, ಅವನಿಗೆ ಎಂದಿಗೂ ಸದ್ಗತಿಯುಂಟಾಗಲಾರದು. ಆದ್ದರಿಂದ ನಾವು ಸದಾ ವಿವಿಧವಾದ ಪೂಜಾಸಾಮಗ್ರಿಗಳಿಂದ, ಶಿವಲಿಂಗವನ್ನು ಅರ್ಚಿಸಬೇಕು. ಇದೇ ಇಷ್ಟಾರ್ಥಸಿದ್ಧಿಗೆ ಮುಖ್ಯಸಾಧನ. ||೧೨೮||

ಅನೇಕ ಕಲ್ಪಗಳ ಪರ್ಯಂತ ತಪಸ್ಸನ್ನಾಚರಿಸಿದರೆ ಆಗ ಚಿತ್ತವು ಪವಿತ್ರವಾಗುವುದು. ಶುದ್ಧವೆನಿಸುವುದು. ಬಳಿಕ ಮನುಷ್ಯನು ಬಿಲ್ವಪತ್ರೆ ಮುಂತಾದ ಪೂಜಾಸಾಮಗ್ರಿಗಳಿಂದ ಭಕ್ತಿಪುರಸ್ಸರವಾಗಿ ಶಿವಲಿಂಗವನ್ನು ಅರ್ಚಿಸುವನು. ||೧೨೯||

ಈಶ್ವರಭಕ್ತಾಗ್ರೇಸರರಾದ ಮನುಜರು ಭಕ್ತವೃಂದದಿಂದೊಡಗೂಡಿ ಲಿಂಗಾರಾಧನೆಯಿಂದ ಯಾವ ಫಲವನ್ನೂ ಇಚ್ಛಿಸದೇ, ಬಿಲ್ವಪತ್ರಾದಿ ಪೂಜಾಸಾಮಗ್ರಿಗಳಿಂದ ಈಶ್ವರನನ್ನು ಅರ್ಚಿಸುವರಲ್ಲವೇ? ಆದರೂ ಅವರ ಭಕ್ತಿಪೂರ್ವಕವಾದ

ಭಕ್ತ್ಯಾ ಪೂಜಿತ ಏವ ತಾವದಸಕೃದ್ಯದ್ವಾ ಸಕೃತ್ತತ್ಫಲಂ
ದಾಸ್ಯತ್ಯೇವ ಶಿವಾಪತಿಃ ಕರುಣಯಾ ಕಾರುಣ್ಯಪೂರ್ಣಾರ್ಣವಃ ॥೧೩೦॥

ಇತಿ ಶ್ರೀಶಿವರಹಸ್ಯೇ ಹರಾಖ್ಯೇ ತೃತೀಯಾಂಶೇ ಪೂರ್ವಾರ್ಧೇ
ರಾಜಚತುರ್ಮುಖಸಂವಾದೇ ಶಿವಧರ್ಮವರ್ಣನಂ ನಾಮ
ತ್ರಯೋವಿಂಶೋಽಧ್ಯಾಯಃ

ಆರಾಧನೆಗೆ ಈಶ್ವರನು ಮೆಚ್ಚಿ, ಅವರಿಗೆ ಸಕಲ ಇಷ್ಟಾರ್ಥಗಳನ್ನೂ ದಯಪಾಲಿಸುವನು. ಈಶ್ವರನು ದಯಾಸಾಗರನಾಗಿರುವನು” ಎಂದು ವಿದ್ಯಾಮೂರ್ತಿಗಳು ಆಲೋಚಿಸಿದುದನ್ನು ಬ್ರಹ್ಮನು ರಾಜನಿಗೆ ಶಿವತತ್ತ್ವೋಪದೇಶದ ಸಂದರ್ಭದಲ್ಲಿ ವಿವರಿಸಿ ಹೇಳಿದನು. ॥೧೩೦॥

ಇಲ್ಲಿಗೆ ಶ್ರೀಶಿವರಹಸ್ಯದ ಮೂರನೆಯ ಅಂಶದ ಉತ್ತರಾರ್ಧದಲ್ಲಿ
ರಾಜ ಮತ್ತು ಬ್ರಹ್ಮ ಇವರ ಸಂಭಾಷಣೆಯಲ್ಲಿ ಶಿವಧರ್ಮವರ್ಣನೆಯೆಂಬ
ಇಪ್ಪತ್ತುಮೂರನೆಯ ಅಧ್ಯಾಯವು ಮುಗಿದುದು.

॥ ಶ್ರೀಃ ॥

ಅಥ ಶ್ರೀಶಿವರಹಸ್ಯೇ

ತೃತೀಯಾಂಶೇ

ಉತ್ತರಾರ್ಧೇ

ಚತುರ್ವಿಂಶೋಽಧ್ಯಾಯಃ

॥ ಯಾಜ್ಞವಲ್ಕ್ಯ ಉವಾಚ ॥

ಇತ್ಯುಕ್ತ್ವಾ ಪುನರಿಂದುಶೇಖರಪದಾಂಭೋಜಾರ್ಚನಾಯಾದರಾತ್
ಪೂತಾಸ್ತತ್ತಪಸಾ ಪುನಃ ಶ್ರುತಿಲಸದ್ಭೂತ್ಯಾಪಿ ಪೂತಾಃ ಪರಂ ।
ಲಿಂಗಾರಾಧನಮೇವ ಕೃತ್ಯಮಿತಿ ತೇ ಸರ್ವೇ ಪ್ರವೃತ್ತಾಃ ಪರಂ
ತಲ್ಲಿಂಗಾರ್ಚನಸಾಧನೇಷು ವಿಲಸದ್ಬಿಲ್ವೇದಲೇಷ್ವನ್ವಹಂ ॥೧॥

ಶಿವಪೂಜನಮೇವ ಕೇವಲಂ ಸಕಲಾರ್ಥಪ್ರದಮರ್ಥಸಿದ್ಧಿಭಿಃ ।
ತದಪೇಕ್ಷಿತಮೇವ ಸಾಧನಂ ವಿವಿಧಂ ತಾವದಶೇಷಸಿದ್ಧಿದಂ ॥೨॥

ಇಪ್ಪತ್ತುನಾಲ್ಕನೆಯ ಅಧ್ಯಾಯ

ಬಳಿಕ ಯಾಜ್ಞವಲ್ಕ್ಯ ಮಹರ್ಷಿಯು ರಾಜನನ್ನು ಕುರಿತು ಹೀಗೆಂದನು. ಎಲೈ ಜನಕ ರಾಜನೇ! ಈ ರೀತಿಯಲ್ಲಿ ಅವರು ಪರಸ್ಪರವಾಗಿ ಸಂಭಾಷಿಸಿ, ಶಿವ ಲಿಂಗಾರ್ಚನೆಯನ್ನು ಕೈಗೊಳ್ಳಬೇಕೆಂದು ನಿಶ್ಚಯಿಸಿದರು. ತಪಸ್ಸಿನಿಂದ ಶುದ್ಧರಾದ ಅವರು ಮಂತ್ರಪೂತವಾದ ವಿಭೂತಿಯನ್ನು ಲೇಪಿಸಿ, ಲಿಂಗಾರ್ಚನೆಯಲ್ಲಿಯೇ ಬದ್ಧಶ್ರದ್ಧರಾಗಿ, ಅದಕ್ಕೆ ಸಾಧನಭೂತವಾದ ಬಿಲ್ವಪತ್ರೆಯೇ ಮುಂತಾದ ಸಾಮುಗ್ರಿಗಳನ್ನು ಸಂಗ್ರಹಿಸುವುದರಲ್ಲಿ ಆಸಕ್ತರಾದರು. ||೧||

ಶಿವಲಿಂಗಾರ್ಚನೆಯೇ, ಸಕಲ ಇಷ್ಟಾರ್ಥಗಳನ್ನು ದಯಪಾಲಿಸುವುದು. ಆದರೆ, ಅದಕ್ಕೆ ಬೇಕಾಗುವ ಸಾಮುಗ್ರಿಗಳು, ನಾನಾ ವಿಧವಾಗಿರುವುವು. ಆ ಸಾಧನಗಳು ಸಕಲ ಇಷ್ಟಾರ್ಥಗಳೂ ಸಿದ್ಧಿಯಾಗುವಂತೆ ಮಾಡುವುವು. ||೨||

ಮುನಯೋಽಪಿ ಪುರಾ ಮಹೇಶ್ವರಂ ನವಬಿಲ್ವೀದಲಗಂಧಚಂದನೈಃ ।
ಅಭಿಪೂಜ್ಯ ನಿಜೇಪ್ಸಿತಂ ಮುಹುಃ ಪ್ರತಿಪನ್ನಾಃ ಖಲು ಶಾಂಭವಂ ಪದಂ॥೩॥

ಯಂ ಯಂ ಕಾಮಂ ಯೇ ಮನಸ್ಯೇವ ಕೃತ್ವಾ
ಬಿಲ್ವೈರೀಶಂ ಪೂಜಯಂತ್ಯಾದರೇಣ ।
ತೇ ತಂ ಪ್ರಾಪ್ಯಾವಿಚ್ಯುತಂ ಪ್ರಾಪ್ನುವಂತಃ
ಕಾಮಾನನ್ಯಾನ್ಮೋಕ್ಷಮಂತೇ ಪ್ರಯಾಂತಿ ॥೪॥

ಸಂತಃ ಪರಂ ಶಂಕರಮರ್ಚಯಂತಃ
ಕೃತಾಂತವಾರ್ತಾಮಪಿ ತೇ ಕದಾಪಿ ।
ನಾಕರ್ಣಯಂತ್ಯೇವ ನ ದುಃಖಭಾಜಃ
ಭವಂತಿ ಸರ್ವೇ ಗತದುಃಖಭಾರಾಃ ॥೫॥

ಸಂಸಾರಸಾಗರವಿಶೋಷಕಮಿಂದುಮೌಳಿ
ಪಾದಾರವಿಂದಭಜನಂ ಪ್ರವದಂತಿ ಸಂತಃ ।

ಈ ಹಿಂದೆ ಅನೇಕ ಮುನಿಶ್ರೇಷ್ಠರು ಬಿಲ್ವಪತ್ರೆ, ಸುಗಂಧಪೂರಿತವಾದ ಶ್ರೀಗಂಧ ಮುಂತಾದ ಪೂಜಾಸಾಮಗ್ರಿಗಳಿಂದ ಶಿವನನ್ನು ಪೂಜಿಸಿ, ತಮ್ಮ ಇಷ್ಟಾರ್ಥಗಳನ್ನು ಪಡೆದು, ಶಾಶ್ವತವಾದ ಈಶ್ವರಸಾನ್ನಿಧ್ಯವನ್ನು ಹೊಂದಿದರು. ॥೩॥

ಮನುಷ್ಯರು, ಯಾವ ಯಾವ ಫಲಗಳನ್ನು ಬಯಸಿ, ಶ್ರದ್ಧಾಭಕ್ತಿ ಪುರಃಸರವಾಗಿ ಪರಮೇಶ್ವರನನ್ನು ಬಿಲ್ವ ಪತ್ರೆಗಳಿಂದ ಆರಾಧಿಸುವರೋ, ಅವರು ತಮ್ಮ ಉದ್ದಿಷ್ಟ ಫಲಗಳನ್ನು ಪಡೆದು, ಇನ್ನೂ ಸಕಲವಾದ ಫಲಗಳನ್ನು ಹೊಂದುವರಲ್ಲದೆ ಅಂತ್ಯದಲ್ಲಿ ಶಾಶ್ವತವಾದ ಮೋಕ್ಷವನ್ನು ಸಹ ಸಂಪಾದಿಸುವರು. ॥೪॥

ಸತ್ಪುರುಷರಾದವರು, ಸತತವೂ, ಈಶ್ವರನನ್ನೇ ಅರ್ಚಿಸುವರು. ಆದುದರಿಂದಲೇ ಅವರಿಗೆ ಮೃತ್ಯುಭಯವು ತೋರುವುದಿಲ್ಲ. ಅವರು ಆಧ್ಯಾತ್ಮಿಕ, ಆಧಿಭೌತಿಕ, ಆಧಿದೈವಿಕವೆಂಬ ದುಃಖತ್ರಯಗಳಿಂದ ಬಾಹಿರರಾಗಿ ಸದಾ ಸುಖವನ್ನೇ ಅನುಭವಿಸುವರು. ॥೫॥

ಅಪಾರವಾದ ಸಂಸಾರದುಃಖವನ್ನು ಹೋಗಲಾಡಿಸುವ ದಯಾಮಯನಾದ ಪರಮೇಶ್ವರನ ಅಡಿದಾವರೆಗಳನ್ನು ಅರ್ಚಿಸಬೇಕೆಂದು ಸಜ್ಜನರು ಹೇಳುವರು.

ತಸ್ಮಾದ್ವಿಹಾಯ ಸಕಲಂ ವಿಷಯಂ ವಿಶಿಷ್ಯ
ಗೌರೀಪತಿಂ ಸತತಮಾಶು ವಯಂ ಭಜಾಮಃ ॥೬॥

ದೂರ್ವಾಂಕುರೈರಪಿ ನವೈರ್ನವಬಿಲ್ವಪತ್ರೈಃ
ಗಂಗಾಜಲೈರನಿಲಶೀತಲಪುಷ್ಪಯುಕ್ತೈಃ ।
ಅಭ್ಯರ್ಚ್ಯ ಲಿಂಗಮಿಹಶಾಂಗಮನಂಗಶತ್ರುಂ
ಗೌರೀಪತಿಂ ಸತತಮೇವ ವಯಂ ಭಜಾಮಃ ॥೭॥

ಉದ್ಧೂಲ್ಯ ಗಾತ್ರಮಸಿತೇತರಭೂತಿಪೂತ
ಫಾಲತ್ರಿಪುಂಡ್ರಲಲಿತಾಂಗವಿಶೇಷಕಾಂತಾಃ ।
ರುದ್ರಾಕ್ಷಭೂಷಣವಿಭೂಷಿತಪೂತದೇಹಾಃ
ಶ್ರೀವಿಶ್ವನಾಥಚರಣೌ ಶರಣಂ ಭಜಾಮಃ ॥೮॥

ಅಲಂ ದೇವಭಾವೇನ ಜನ್ಮಾಂತರೇ ವಾ
ಮನುಷ್ಯತ್ವಮಾಸಾದ್ಯ ತತ್ತದ್ದ್ವಿಜತ್ವಂ ।
ಮಹಾಶಾಂಭವತ್ವಂ ಪ್ರಪದ್ಯಾಂಬಿಕೇಶಂ
ಭಜಾಮೋ ಮಹಾಕಾಲದುಃಖಾಪನುತ್ತ್ಯೈ ॥೯॥

ಆದುದರಿಂದ ನಾವೂ ಕ್ಷಣಿಕವಾದ ವಿಷಯಸುಖಗಳನ್ನು ತ್ಯಜಿಸಿ ಉಮಾಕಾಂತನಾದ ಪರಮೇಶ್ವರನನ್ನು ಆರಾಧಿಸೋಣ. ॥೬॥

ಕೋಮಲವಾದ ದೂರ್ವಾಂಕುರಗಳಿಂದಲೂ, ನೃದುವಾದ ಬಿಲ್ವಪತ್ರೆಗಳಿಂದಲೂ, ಸುಗಂಧಯುಕ್ತವಾದ ಪುಷ್ಪಗಳಿಂದಲೂ, ಮತ್ತು ಶೀತಲವಾದ ಗಂಗಾಜಲಗಳಿಂದಲೂ ಕಾಮರಿಪುವಾದ ಶಿವನ ಲಿಂಗವನ್ನು ಅನವರತವೂ ಪೂಜಿಸುವೆವು. ॥೭॥

ಪರಿಶುದ್ಧವಾದ ವಿಭೂತಿಯಿಂದ ನಮ್ಮ ಶರೀರವನ್ನು ಲೇಪಿಸಿಕೊಂಡು, ಹಣೆಯಲ್ಲಿ ಭಸ್ಮ ತ್ರಿಪುಂಡ್ರವನ್ನು ಧರಿಸಿ, ದೇಹವನ್ನು ರುದ್ರಾಕ್ಷಗಳಿಂದ ಅಲಂಕರಿಸಿ ವಿಶ್ವೇಶ್ವರನ ಚರಣದ್ವಯಗಳನ್ನು ಸೇವಿಸುವೆವು. ॥೮॥

ಮುಂದಿನ ಜನ್ಮದಲ್ಲಾದರೂ ನಮಗೆ ದೇವತೆಗಳ ಜನ್ಮವು ಬೇಡ. ಏಕೆಂದರೆ, ದೇವತೆಗಳ ಜನ್ಮವನ್ನು ತಾಳಿದರೆ ದೇವತೆಗಳು ಶಿವಾರ್ಚನೆಯಲ್ಲಿ ಉತ್ತಮಾಧಿಕಾರಿಗಳೆಂದೆನಿಸಿಕೊಳ್ಳುವುದಿಲ್ಲ. ಆದುದರಿಂದ ಜನ್ಮಾಂತರದಲ್ಲಾದರೂ ನಮಗೆ ಮನುಷ್ಯ

ಯದಾ ಶಂಕರಾರಾಧನಾಸಕ್ತಮೇತತ್
ಮನಃ ಸ್ಯಾತ್ತದಾ ಕಾಲಭೀತಿಃ ಕುತಃ ಸ್ಯಾತ್ ।
ವಯಂ ಶಂಕರಾರಾಧನೇನೈವ ಕಾಲಂ
ನಯಾಮೋ ನಯಾಮೋ ನಯಾಮೋ ವಯಶ್ಚ ॥೧೦॥

ಇದಂ ಚೇದ್ವಯಃ ಶಂಕರಾರಾಧನೇನ
ಕ್ಷಯಂ ಯಾತಿ ಪುಣ್ಯೈರಗಣ್ಯೈಸ್ತದಾ ಕಿಂ ।
ಸ ಕಾಲೋಽಪಿ ಭೀತೋ ನ ನಿತ್ಯಂ ಪ್ರಪನ್ನಾಃ
ಭವೇದಸ್ಮದೀಯಾಂಸ್ತದಾಸ್ಮಾನ್ನಿಶಿಷ್ಯ ॥೧೧॥

ಮಹಾಕಾಲಕಾಲಾರ್ಚನಾಸಕ್ತಚಿತ್ತಃ
ಕ್ಷಣಂ ವಾ ಕ್ಷಣಾರ್ಧಂ ಯ ಏವ ಪ್ರಬುದ್ಧಃ ।
ತಮಾರಾಧಯತ್ಯೇವ ಕಾಲೋಽಪಿ ನಿತ್ಯಂ
ಸ ಭೀತಸ್ತದೀಯಾನ್ ತದಾರಾಧಕಾಂಶ್ಚ ॥೧೨॥

ಜನ್ಮವು ಲಭಿಸಿ, ಅದರಲ್ಲಿಯೂ ಮುಖ್ಯವಾಗಿ ದ್ವಿಜ ಜನ್ಮವು ದೊರೆತು, ಈಶ್ವರ ಭಕ್ತರಾಗಿ ಈಶ್ವರನನ್ನೇ ಸದಾ ಆರಾಧಿಸುವ ಸುಯೋಗವನ್ನು ಪರಮೇಶ್ವರನು ನಮಗೆ ಉಂಟುಮಾಡಲೆಂದು ಅವನನ್ನು ಪ್ರಾರ್ಥಿಸುವೆವು. ||೯||

ಈ ಚಿತ್ತವು ಈಶ್ವರಾರಾಧನೆಯಲ್ಲಿಯೇ ಆಸಕ್ತವಾದುದಾದರೆ ಆಗ ಮೃತ್ಯು ಭಯವು ಎಲ್ಲಿಂದ ಬಂದೀತು? ಆದುದರಿಂದ ನಾವು ಈಶ್ವರಾರಾಧನೆಯಿಂದಲೇ ನಮ್ಮ ಆಯುಸ್ಸನ್ನು ಕಳೆಯುವೆವು. (ಕಳೆಯೋಣ). ||೧೦||

ನಮ್ಮ ಈ ಜೀವನವು ಈಶ್ವರಾರಾಧನೆಯಿಂದಲೇ, ಕ್ಷಯಿಸುವುದಾದರೆ, ಆಗ ನಮಗಾಗಲಿ, ನಮ್ಮ ಬಂಧುಬಳಗದವರಿಗಾಗಲಿ ಮೃತ್ಯುವಿನ ಭಯವು ಇರುವುದೇ? ಎಂದಿಗೂ ಇಲ್ಲ. ||೧೧||

ಯಾವನು ಅಜ್ಞಾನವೆಂಬ ನಿದ್ರೆಯಿಂದ ಎಚ್ಚೆತ್ತು ಜಾಗರೂಕನಾಗಿ ಮೃತ್ಯುಂಜಯನಾದ ಶಿವನನ್ನು ಕ್ಷಣಕಾಲವಾದರೂ ಅರ್ಚಿಸುವನೋ, ಅವನು ಎಂದಿಗೂ ಮೃತ್ಯುವಿನ ಬಾಯಿಗೆ ತುತ್ತಾಗಲಾರನು. ಈಶ್ವರಭಕ್ತನಾದ ಅವನಿಗೆ ಹೆದರಿ, ಯಮನು ಅವನನ್ನು ಪೂಜಿಸುವನು. ಇದಲ್ಲದೆ, ಈಶ್ವರಾರಾಧನೆಯಲ್ಲಿ ಆಸಕ್ತರಾದ

ಕಃ ಕಾಲಕಾಲಭಜನಾನುರತೋ ನ ಲೋಕೇ
ಶೋಕಾಪಹಾರಕರಣೋದ್ಯತಚಿತ್ತವೃತ್ತಿಃ ।
ಸರ್ವಾಘನಾಶಕ ಇತಿ ಪ್ರಥಿತಃ ಸ ಶೋಕಂ
ನಿರ್ಮೂಲಯಿಷ್ಯತಿ ಸದಾಶಿವ ಏವ ನಿತ್ಯಂ ॥೧೩॥

ವಿಶೋಕತ್ವಮಾಪ್ನೋತಿ ಶಶ್ವನ್ಮಹೇಶಂ
ಸಮಾರಾಧ್ಯ ಪತ್ರೈರ್ಜಲೈರ್ವಾ ಪವಿತ್ರೈಃ ।
ತತಃ ಕಾಲಭೀತಿರ್ನ ಜಾತು ಪ್ರಜಾತಾ
ಪ್ರಣಶ್ಯತ್ಯವಶ್ಯಂ ಪುನರ್ನೈವ ಮೃತ್ಯುಃ ॥೧೪॥

ಮಹಾಮೃತ್ಯುಮೃತ್ಯುಂ ಮಹಾದೇವಮೇಕಂ
ಸಮಾರಾಧ್ಯ ಕೋ ವಾ ನ ಯಾತ್ಯೇವ ಮುಕ್ತಿಂ ।
ಜರಾಜನ್ಮದುಃಖಾದಿಸಂಹಾರಹೇತುಃ
ವೃಷಾಧೀಶಕೇತುರ್ಹತಾಂಭೋಜಕೇತುಃ ॥೧೫॥

ಅವನ ಬಂಧುಗಳಿಗೂ ಮೃತ್ಯುಭಯವಿರುವುದಿಲ್ಲ. ಮತ್ತು ಅವರು ಯಮನಿಗೂ, ಪೂಜ್ಯರಾಗುವರು. ॥೧೨॥

ಈ ಲೋಕದಲ್ಲಿ, ಯಾವನು ಶೋಕ ಮೋಹಗಳನ್ನು ಹೋಗಲಾಡಿಸುವುದರಲ್ಲಿ ಉತ್ಕಟೇಚ್ಛೆಯಿಂದ ಕೂಡಿರುವನೋ, ಅವನು ಮೃತ್ಯುಂಜಯನಾದ ಶಿವನನ್ನು ಆರಾಧಿಸಲಾರನೇ? ದಯಾಮಯನಾದ ಆ ದೇವನನ್ನು ಆರಾಧಿಸಲು, ಅವನು ಶೀಘ್ರವಾಗಿ, ಸಂಸಾರದುಃಖವನ್ನು ನಿರ್ಮೂಲಗೊಳಿಸುವನು. ಪರಮೇಶ್ವರನು ಸಕಲ ಪಾಪಗಳನ್ನೂ ನಾಶಮಾಡುವನೆಂದು ಪ್ರಸಿದ್ಧವಾಗಿರುವುದಲ್ಲವೇ! ॥೧೩॥

ಬಿಲ್ವಪತ್ರಗಳಿಂದಲಾಗಲಿ ಅಥವಾ, ಕೇವಲ ಜಲದಿಂದಲೇ ಆಗಲಿ ಪರಮೇಶ್ವರನನ್ನು ಆರಾಧಿಸುವವನು, ದುಃಖದಿಂದ ಬಿಡುಗಡೆಯನ್ನು ಹೊಂದುವನು. ಅವನಿಗೆ, ಮೃತ್ಯುಭಯವೇ ಇರುವುದಿಲ್ಲ. ಅವನ ಪಾಪರಾಶಿಗಳೆಲ್ಲವೂ ಶೀಘ್ರವಾಗಿ ನಾಶವಾಗುವುವು. ಪುನರ್ಜನ್ಮವೇ ಅವನಿಗೆ ಸಂಭವಿಸಲಾರದು. ॥೧೪॥

ಘೋರವಾದ ಮೃತ್ಯುದೇವತೆಯನ್ನೇ ಜಯಿಸಿರುವ ಪರಮೇಶ್ವರನನ್ನು ಆರಾಧಿಸಿದರೆ, ಯಾವನು ತಾನೇ ಮೋಕ್ಷವನ್ನು ಹೊಂದಲಾರ? ವೃಷಭಧ್ವಜನಾದ ಶಿವನು, ಜನ್ಮಜರಾಮರಣಗಳೆಂಬ ದುಃಖ ಸಮುದಾಯಗಳನ್ನು ಹೋಗಲಾಡಿಸುವವನಲ್ಲವೇ? ॥೧೫॥

ಜನಿಂ ಪ್ರಾಪ್ನುವಂತ್ಯೇವ ಭೂಯೋಽಪಿ ಮರ್ತ್ಯಾಃ
ಶಿವಾರಾಧನಾಭಾವಸಂಭಾವಿತಾಸ್ತೇ ।
ಜರಾಂ ಮೃತ್ಯುಮಂತೇ ಪ್ರಪನ್ನಾ ಭವಂತಿ
ಪ್ರಪನ್ನಾಶ್ಚ ಯಾಮಂ ಮುಹುಃ ಸದ್ಮ ದುಃಖೈಃ ॥೧೬॥

ಅವಿಜ್ಞೇಯವಿಶ್ವೇಶಪೂಜಾಪ್ರಭಾವಾ
ಸ್ತಮೇವಾದರಾದನ್ವಹಂ ಮಾರ್ಗಗಮ್ಯಂ ।
ಪ್ರಭಾವಂ ವಿದಿತ್ವಾ ಪ್ರಯಾಂತ್ಯೇವ ಶಂಭುಂ
ತದಜ್ಞಾನತೋ ಯಾಂತಿ ಯಾಮಂ ಪುರಂ ತು ॥೧೭॥

ಇತಿ ನಿಶ್ಚಿತ್ಯ ತೇ ಸರ್ವೇ ಭಸ್ಮೋದ್ಧೂಳಿತವಿಗ್ರಹಾಃ ।
ರುದ್ರಾಕ್ಷಮಾಲಾಭರಣಾಃ ಶಂಕರಪ್ರವಣಾಸ್ತದಾ ॥೧೮॥

ತತಃ ಪರಂ ತು ಮುನಯಃ ಸರ್ವೇಽಪಿ ಕೃತನಿಶ್ಚಯಾಃ ।
ಶಂಕರಂ ಶಂಕರಂ ಜ್ಞಾತ್ವಾ ಪೂಜಯಾಮಾಸುರಾದರಾತ್ ॥೧೯॥

ಜನರು ಶಿವನನ್ನು ಆರಾಧಿಸದಿರುವುದರಿಂದ ಪುನಃ ಪುನಃ ಈ ಲೋಕದಲ್ಲಿ ಜನ್ಮವನ್ನು ತಾಳುವರು. ಬಳಿಕ ಮುಪ್ಪನ್ನು ಅನುಭವಿಸಿ, ಅಂತ್ಯಕಾಲದಲ್ಲಿ ಮರಣ ಯಾತನೆಯನ್ನು ಹೊಂದಿ, ಯಮಲೋಕವನ್ನು ಪಡೆದು ಅಲ್ಲಿ ವಿವಿಧವಾದ ದುಃಖಗಳನ್ನು ಅನುಭವಿಸುವರು. ||೧೬||

ಅಜ್ಞಾನಿಗಳು, ಈಶ್ವರಾರಾಧನೆಯ ಮಹಿಮೆಯನ್ನು ಅರಿತಿರುವುದಿಲ್ಲ. ಆದರೆ ಜ್ಞಾನಿಗಳು, ಅದರ ಮಹಿಮೆಯನ್ನು ತಿಳಿದು, ಅವನನ್ನೇ ಆರಾಧಿಸಿ ಪರಶಿವನ ಸಾನ್ನಿಧ್ಯವನ್ನು ಹೊಂದುವರು. ಅಜ್ಞಾನಿಗಳಾದರೋ, ಅಜ್ಞಾನದ ದೆಸೆಯಿಂದ ಆ ದೇವನ ಮಹಿಮೆಯನ್ನರಿಯದೇ ಯಮಲೋಕವನ್ನು ಹೊಂದುವರು.” ||೧೭||

ಹೀಗೆಂದು ನಿಶ್ಚಯಿಸಿ ವಿದ್ಯಾಮೂರ್ತಿಗಳೆಲ್ಲರೂ ಶರೀರದ ಆದ್ಯಂತವೂ ಭಸ್ಮವನ್ನು ಧರಿಸಿ, ರುದ್ರಾಕ್ಷಮಾಲೆಗಳಿಂದಲಂಕೃತರಾಗಿ ಈಶ್ವರಧ್ಯಾನದಲ್ಲಿ ಮಗ್ನರಾದರು. ||೧೮||

ಬಳಿಕ ಸಕಲ ಮುನಿಗಳೂ ಮನಃಸ್ಥೈರ್ಯವನ್ನು ಹೊಂದಿ ಪರಮೇಶ್ವರನು ಲೋಕಕಲ್ಯಾಣಕರನಾಗಿರುವನೆಂದು ತಿಳಿದು ಅವನನ್ನು ಆರಾಧಿಸಿದರು. ||೧೯||

ಬಿಲ್ವಪತ್ರೈಃ ಸಮಾರಾಧ್ಯ ಜಲೈರಪಿ ವಿಶೇಷತಃ ।
ತೈಃಕಾಲಯಾಪನಂ ತತ್ರ ಕೃತಮೇವ ಪ್ರಯತ್ನತಃ ॥೨೦॥

ಭಜನೀಯೋ ಮಹಾದೇವಃ ಸರ್ವಸಿದ್ಧಿಪ್ರದಾಯಕಃ ।
ಅತಃಪರಂ ಭವದ್ಭಿಶ್ಚ ತ್ಯಾಜ್ಯೋ ಮೋಹೋ ವಿಶೇಷತಃ ॥೨೧॥

ಸಿದ್ಧಿಪ್ರದೇ ಮಹಾದೇವೇ ತಿಷ್ಠತ್ಯತ್ರ ವಿಶೇಷತಃ ।
ಲಿಂಗೇ ತುಂಗೇ ಲಿಂಗಪೂಜಾ ವಿಧೇಯಾ ಸಾದರಂ ಮುಹುಃ ॥೨೨॥

ನ ತೃಪ್ತಸ್ತಪಸಾ ಶಂಭುರ್ನ ದಾನೈರ್ಯಜನೈರಪಿ ।
ಕಿಂ ತು ಲಿಂಗಾರ್ಚನೇನೈವ ಪ್ರೀತೋ ಭವತಿ ಶಂಕರಃ ॥೨೩॥

ಕಃ ಕರಸ್ಥಸುಧಾತುಲ್ಯಂ ಶಿವಲಿಂಗಾರ್ಚನಂ ಜನಃ ।
ತ್ಯಕ್ತುಮಿಚ್ಛತಿ ಮೂಢಾತ್ಮಾ ಸ ಕೋ ವಾ ತನ್ನ ವಿದ್ಮಹೇ ॥೨೪॥

ಸಕಲ ಇಷ್ಟಾರ್ಥಗಳನ್ನೂ ದಯಪಾಲಿಸುವ ಪರಮೇಶ್ವರನನ್ನು ಬಿಲ್ವಪತ್ರೆಗಳಿಂದಲೂ ಮತ್ತು ಶುದ್ಧೋದಕದಿಂದಲೂ ಪೂಜಿಸಿ, ಅವನ ಅಡಿದಾವರೆಗಳನ್ನು ಸೇವಿಸಿದರು. ಮತ್ತು ಅದೇ ಧರ್ಮದಿಂದಲೇ ಕಾಲಯಾಪನೆಮಾಡಿದರು." ಎಲೈ ರಾಜನೇ, ಇನ್ನು ಮುಂದೆ ನೀನು ಅಜ್ಞಾನವನ್ನು ದೂರಮಾಡು. ||೨೦||

ಈ ಹಿಮವತ್ಪರ್ವತದಲ್ಲಿ ಸಕಲ ಸಿದ್ಧಿಗಳನ್ನೂ ಉಂಟುಮಾಡುವ ಪರಮೇಶ್ವರನು ವಿಶೇಷವಾಗಿ ನೆಲಸಿರುವನು. ಆದುದರಿಂದ ಇಲ್ಲಿ ಶ್ರೇಷ್ಠವಾದ ಶಿವಲಿಂಗವನ್ನು ಭಕ್ತಿಯಿಂದ ಪೂಜಿಸಬೇಕು. ||೨೨||

ಈಶ್ವರನು ತಪಸ್ಸಿನಿಂದಾಗಲಿ, ದಾನಧರ್ಮಗಳಿಂದಲಾಗಲಿ ಅಥವಾ ಯಜ್ಞಯಾಗಾದಿ ಕರ್ಮಗಳಿಂದಲಾಗಲಿ ತೃಪ್ತಿಯನ್ನು ಹೊಂದುವುದಿಲ್ಲ. ಲಿಂಗಪೂಜೆಯೊಂದರಿಂದಲೇ ಅವನು ತುಷ್ಟನಾಗುವನು. ||೨೩||

ಅಂಗೈಯಲ್ಲಿರುವ ಅಮೃತದಂತೆ ಸುಲಭವಾಗಿರುವ ಲಿಂಗಾರ್ಚನೆಯನ್ನು ಯಾವ ಮೂಢನು ಉಪೇಕ್ಷಿಸುವನೋ, ಅವನನ್ನು ನಾನು ಏನೆಂದು ತಿಳಿಯಬೇಕೋ ಕಾಣೆನು. ||೨೪||

ಸುಧಾಂ ಮುಖಸ್ಥಿತಾಂ ತ್ಯಕ್ತ್ವಾ ತೃಷಿತಃ ಪಥಿಕಃ ಪಥಿ ।
ಕೋ ವಾ ರಾಸಭಮೂತ್ರಾದಿಪಾನಾಯ ಯತತೇ ಜಡಃ ॥೨೫॥

ನ ಜಾನೀಮೋ ಲೋಕೇ ಕಮಪಿ ಗಿರಿಜಾಕಾಮುಕಪದ
ಪ್ರಸಾದಾರ್ಥಂ ಯತ್ನಂ ಕಥಮಪಿ ಕರೋತ್ಯೇವ ನ ಮುದಾ ।
ತಮೇಕಂ ಹಿತ್ವಾ ಯಃ ಶುನಕಶುನಕೀಯೋಗಜನಿತಃ
ಮಲಾಶೀ ಪಾಪಾನಾಮಪಿ ಖಲು ಸ ರಾಶಿರ್ಭೃಶಮಪಿ ॥೨೬॥

ಮಹೇಶ್ವರಕಥಾರಸಃ ಸರಸಮಾನಸೇ ಕೇವಲಂ
ಸುಖಾನಿ ಜನಯತ್ಯಹೋ ಮುಹುರಪಾರರೂಪಾಣ್ಯಪಿ ।
ಕ್ಷಣಾರ್ಧಮಪಿ ಶಂಕರೋ ಯದಿ ಮುದಾ ಹೃದಂಭೋಜಗಃ
ತದಾ ಸುಖಮಹೋದಧಿಃ ಕಿಮಿತಿ ನ ಪ್ರವೃದ್ಧೋ ಭವೇತ್ ॥೨೭॥

ದಾರಿಯಲ್ಲಿ ಹೋಗುವ ಪಥಿಕನು ತನ್ನ ಸಮೀಪದಲ್ಲಿ ರುಚಿಕರವಾದ ಅಮೃತವನ್ನಿಟ್ಟುಕೊಂಡು, ಬಾಯಾರಿಕೆಯಾದಾಗ ಆ ಅಮೃತವನ್ನು ಬಿಟ್ಟು ಕತ್ತೆಯ ಮೂತ್ರವನ್ನು ಕುಡಿಯಲು ಯತ್ನಿಸುವನೇ ? ಅವನು ಹಾಗೆ ಯತ್ನಿಸಿದಲ್ಲಿ ಕಡುಮೂರ್ಖನಾಗುವನಲ್ಲದೇ ವಿವೇಕಶಾಲಿಯೆಂದೆನಿಸಿಕೊಳ್ಳಲಾರನು. ॥೨೫॥

ಈ ಲೋಕದಲ್ಲಿ ಉಮಾರಮಣನಾದ ಶಿವನ ಅನುಗ್ರಹವನ್ನು ಸಂಪಾದಿಸುದಕ್ಕೋಸ್ಕರ ಪ್ರಯತ್ನಿಸದಿರುವವನು ಯಾವನು ತಾನೇ ಇರುವನು? ಅದನ್ನು ನಾವು ಅರಿಯಲಾರದವರಾಗಿರುವೆವು. ಯಾವನು ಈಶ್ವರಾನುಗ್ರಹವನ್ನು ಸಂಪಾದಿಸುವುದರಲ್ಲಿ ನಿರತನಾಗದೇ, ಈಶ್ವರ ಸೇವೆಯನ್ನುಪೇಕ್ಷಿಸಿ ಸ್ವೇಚ್ಛೆಯಿಂದ ವರ್ತಿಸುವನೋ, ಅವನು ಹೀನಜನ್ಮವಾದ ನಾಯಿಯ ಉದರದಲ್ಲಿ ಜನಿಸುವನು. ಶಿವಸೇವೆಯನ್ನು ಕೈಗೊಳ್ಳದಿರುವ ಅವನ ಬಾಯಿಯು ಅಮೇಧ್ಯವನ್ನು ಭಕ್ಷಿಸಿದಂತೆಯೇ ಸರಿ. ಇದಲ್ಲದೇ ನೀಚನಾದ ಅವನೇ ಪಾಪರಾಶಿಸ್ವರೂಪನಾಗಿರುವನು. ॥೨೬॥

ದಿವ್ಯವಾದ ಈಶ್ವರಕಥಾಮೃತವು ನಿರ್ಮಲವಾದ ಮನಸ್ಸಿನಲ್ಲಿ ಇರುವುದೇ ಆದರೆ, ಅದು ಅನಿರ್ವಚನೀಯವಾದ ಸುಖಪರಂಪರೆಗಳನ್ನುಂಟುಮಾಡುವುದು. ಇದಲ್ಲವೇ ಆಶ್ಚರ್ಯ! ಈ ಹೃದಯಕಮಲದಲ್ಲಿ ಕ್ಷಣಕಾಲವಾದರೂ ಪರಮೇಶ್ವರನು ನೆಲಸಿದುದೇ ಆದರೆ, ಆಗ ಸುಖಸಮುದ್ರವು ವೃದ್ಧಿಯನ್ನು ಹೊಂದಲಾರದೇ ? ॥೨೭॥

ಅಪಾರಸುಖರೂಪತಾಮುಪಗತೋಽಪಿ ಮುಕ್ತೋ ಭವೇ
ದುಮಾಪತಿಪದಾಂಬುಜಸ್ಮರಣಲಾಲಸೇ ಮಾನಸೇ ।
ಕದಾಪಿ ನ ಜನಿರ್ಭವೇನ್ನ ಚ ಜರಾಪಿ ಮೃತ್ಯುರ್ಭವೇ
ದಿತಿ ಸ್ಮರಹರಂ ಹರಂ ಸ್ಮರ ಪುನಃ ಪುನಃ ಶಂಕರಂ ॥೨೮॥

ನಿಧಾನಕಲಶಾಕಾರಂ ಶಿವಲಿಂಗಾರ್ಚನಂ ಪರಂ ।
ಕಸ್ತ್ಯಕ್ತ್ವಾ ತಪಸೇ ಯತ್ನಂ ಕರೋತಿ ತದಿಹಾದ್ಭುತಂ ॥೨೯॥

ನೇಯಂ ವಯಃ ಖಲು ಸದಾಶಿವಚಿಂತನೇನ
ಲಿಂಗಾರ್ಚನೇನ ಚ ಲಸನ್ನವಬಿಲ್ವಪತ್ರೈಃ ।
ಆಶಾಸ್ಯಮೀಶಚರಣಸ್ಮರಣಂ ಕ್ಷಣಂ ವಾ
ಕೃತ್ಯಂ ತದೇತದಿತಿ ಮೇ ಮನಸಃ ಪ್ರವೃತ್ತಿಃ ॥೩೦॥

ಕ್ಲೇಶೋಽಪ್ಯಲ್ಪೋ ಬಿಲ್ವಪತ್ರಾರ್ಚನಾದೌ
ಲಿಂಗಂ ತುಂಗಂ ದುರ್ಲಭಂ ನಾರ್ಮದಂ ನ ।

ಚಿತ್ತವು ಎಡಬಿಡದೇ ಉಮಾರಮಣನಾದ ಪರಮೇಶ್ವರನ ಅಡಿದಾವರೆಗಳ ಸ್ಮರಣೆಯಲ್ಲಿ ನಿರತವಾದರೆ, ಅದರಿಂದಲೇ ಅವನು ನಿರತಿಶಯವಾದ ಸುಖವನ್ನು ಅನುಭವಿಸುತ್ತಾ ಮೋಕ್ಷವನ್ನು ಹೊಂದುವನು. ಅವನಿಗೆ ಜನ್ಮಜರಾಮರಣಗಳು ಎಂದಿಗೂ ಸಂಭವಿಸಲಾರವು. ಎಲೈ ರಾಜನೇ, ಆದುದರಿಂದ ಕಾಮರಿಪುವಾದ ಶಿವನನ್ನು ಪುನಃ ಪುನಃ ಸ್ಮರಿಸು. ಶಿವಲಿಂಗಾರ್ಚನೆಯು ಹಣದ ಗಡಿಗೆಗೆ ಸದೃಶವಾದುದು. ಇಂತಹ ಕರ್ಮವನ್ನು ಬಿಟ್ಟು ತಪಸ್ವಿಯಾಗುವುದುಚಿತವಲ್ಲ. ॥೨೮-೨೯॥

ಈ ವಯಸ್ಸನ್ನು ಈಶ್ವರ ಧ್ಯಾನದಿಂದಲೂ ಮತ್ತು ಲಿಂಗಪೂಜೆಯಿಂದಲೂ ಕಳೆಯಬೇಕು. ಎಲೈ ಮುನಿಗಳೇ, ಕ್ಷಣಕಾಲವಾದರೂ, ಈಶ್ವರನ ಚರಣಗಳನ್ನು ಸ್ಮರಿಸುವುದು ನಮ್ಮ ಕರ್ತವ್ಯವಾಗಿರುವುದು. ಆದುದರಿಂದಲೇ ನನ್ನ ಮನಸ್ಸು ಈಶ್ವರ ಧ್ಯಾನಮಾಡುವುದರಲ್ಲಿ ಅತಿ ಕಾತುರವಾಗಿದೆ. ॥೩೦॥

ಬಿಲ್ವಪತ್ರಾರ್ಚನೆಯಲ್ಲಿ ಅಧಿಕವಾದ ಪ್ರಯಾಸವು ಕಾಣುವುದಿಲ್ಲ. ನರ್ಮದಾತೀರದಲ್ಲಿರುವ ಶ್ರೇಷ್ಠವಾದ ಶಿವಲಿಂಗವು ಅಂತಹ ದುರ್ಲಭವಾದುದಲ್ಲ. ರೇವಾನದಿಯ ನೀರಿನಿಂದ ಶಿವಲಿಂಗಾರ್ಚನೆಯನ್ನು ಮಾಡುವುದು ಅತಿ ಕಷ್ಟವಲ್ಲ.

ರೇವಾನೀರೈರೀಶಲಿಂಗಾರ್ಚನಂ ನ
ಪ್ರಾಪ್ಯಾ ಮುಕ್ತಿರ್ದುರ್ಲಭಾಪೀತಿ ತನ್ಮೇ ॥೩೧॥

ಹಾ ಹಂತ ಹಂತ ಕಥಮೇವಮಿದಂ ವಿನೀತ
ಮಾಯುಃ ಶಿವಾರ್ಚನವಿಹೀನಜನಿರ್ವ್ಯಥಾ ಸ್ಯಾತ್ ।
ಇತ್ಯಾದಿವೇದಶಿಖರೋಕ್ತಿರಪಿ ಶ್ರುತಾ ಸಾ
ಸರ್ವಾತ್ಮನಾ ನ ಗಣಿತಾ ನ ವಿಚಾರಿತಾಪಿ ॥೩೨॥

ದುಃಖೇ ನ ಕೇವಲಮತಃ ಪರಮಸ್ತಿ ಕೃತ್ಯಂ
ಕಿಂ ನೋ ವಯೋಽಪಿ ಗಲಿತಂ ಗಲಿತಂ ಚ ಪಾಪಂ ।
ಹಾ ಹಂತ ಹಂತ ಬತ ಹಂತ ನಿತಾಂತಮಂತೇ
ಸ್ವಾಂತಂ ಶಿವಾರ್ಚನಪರಂ ಕಥಮದ್ಯ ಜಾತಂ ॥೩೩॥

ಶ್ರೀಕಾಲಕಾಲಕರುಣಾತರುಣಾ ಕಿಮಾಸೀ
ದಂತೇ ವಯಸ್ಯಬಲಮೇವ ಶರೀರಮಸ್ಯ ।

ಆದರೆ ದುರ್ಲಭವಾದ ಮೋಕ್ಷವೆಂಬ ವಸ್ತುವನ್ನು ಸುಲಭವಾಗಿ ಹೊಂದಲು ಇದೇ ಉಪಾಯವೆಂದು ನಾನು ತಿಳಿಯುವೆನು. ॥೩೧॥

ಅಯ್ಯೋ! ನಮ್ಮ ಈ ಜೀವಿತವು ಇದುವರೆಗೆ ವ್ಯರ್ಥವಾಗಿ ಕಳೆಯಿತಲ್ಲವೇ! ಈಶ್ವರಾರ್ಚನೆಯನ್ನು ಮಾಡದಿರುವ ಮನುಜನ ಜೀವಿತವು ವ್ಯರ್ಥವಾದುದೆಂದು ಉಪನಿಷತ್ತುಗಳು ಸಾರಿ ಸಾರಿ ಹೇಳುತ್ತಿರುವುದನ್ನು ನಾವು ಕೇಳಿರುವೆವು. ಆದರೂ, ಉಪನಿಷತ್ತುಗಳ ಆ ಹಿತೋಪದೇಶವನ್ನು ವಿಮರ್ಶಿಸದೆ ದುರ್ಲಕ್ಷಿಸಿರುವೆವಲ್ಲಾ! ॥೩೨॥

ಇನ್ನು ಮುಂದಾದರೂ ದುಃಖಕರವಾದ ಸಂಸಾರದಲ್ಲಿ ಆಸಕ್ತರಾಗಿರುವುದರಿಂದ ನಮಗೆ ಯಾವ ಪ್ರಯೋಜನವು ತಾನೇ ಇರುವುದು? ಆದುದರಿಂದಲೇ, ಇನ್ನು ನಾವು ಸಂಸಾರಿಗಳಾಗಿರಲಾರೆವು. ಜೀವಿತವು ವ್ಯರ್ಥವಾಗಿ ಕಳೆದು ಹೋದಂತೆ ಅದರೊಂದಿಗೆ ನಾವು ಮಾಡಿದ ಪಾಪಗಳೂ ಸಹ, ಈಶ್ವರಾರಾಧನೆಯ ಮಹಿಮೆಯಿಂದ ನಾಶವಾಗಿರುವುವು. ಈ ಮುಪ್ಪಿನ ಕಾಲದಲ್ಲಾದರೂ, ನಮ್ಮ ಮನಸ್ಸು, ಈಶ್ವರಾರಾಧನೆಯಲ್ಲಿ ಆಸಕ್ತವಾಯಿತಲ್ಲ ಎಂದು ಸಂತೋಷಪಡುತ್ತಿರುವೆನು. ॥೩೩॥

ಮೃತ್ಯುಂಜಯನಾದ ಈಶ್ವರನ ಅಪಾರ ಕರುಣೆಯೆಂಬ ದಿವ್ಯವೃಕ್ಷವಿದ್ದೂ ತಾನೇ ಪ್ರಯೋಜನವಿರುವುದೇ! ಏಕೆಂದರೆ, ಅಂತ್ಯಕಾಲದಲ್ಲಿ ನನ್ನ ಈ ಶರೀರವು

ಕರ್ತುಂ ನ ವಾಂಛತಿ ಮನೋಽಪಿ ಶಿವಾರ್ಚನಾನಿ
ಬಿಲ್ವಾದಿಕಾನಯನಮಸ್ಯ ನ ಶಕ್ಯಮೇವ ॥೩೪॥

ಅರಣ್ಯೇ ಸಂಚಾರೇಽಬಲವತಿ ಶರೀರೇ ಶ್ರಮಕಥಾ
ಕುತೋ ವಾ ಬಿಲ್ವಾನಾಂ ಗ್ರಹಣಸಮಯೇ ಸ್ಯಾಚ್ಛಮಕಥಾಂ ।
ಇದಾನೀಂ ದೃಷ್ಟಿರ್ವಾ ಪ್ರಸರತಿ ನ ಬಿಲ್ವೇಷು ಬಹುಧಾ
ಕಿಮಸ್ಮಾಕಂ ಭಾಗ್ಯಂ ವಯಸಿ ವಿಗತೇ ಯೌವನವನೇ ॥೩೫॥

ಮಹಾದೇವೋಽಸ್ಮಾಕಂ ಕಥಮಪಿ ಭವತ್ಪೂಜನಮತಿಃ
ನ ಜಾತಾ ಜಾತಾ ಸಾ ಜಠರಪಿಠರೀಪೂರಣಕರೀ ।
ಪುರಾ ತೇನಾಪಾರವ್ಯಸನಕಥನಾರ್ತೇನ ಮನಸಾ
ತಥಾ ನೀತಾ ಸಾಪಿ ಸ್ಮರಹರ ಹತೋಽಹಂ ಮುಹುರಹೋ ॥೩೬॥

ಶಿವನನ್ನು ಆರಾಧಿಸುವುದರಲ್ಲಿ ಅತ್ಯಂತ ಅಶಕ್ತವಾಗಿರುವುದು. ಚಪಲವಾದ ಈ ಚಿತ್ತವೂ ಸಹ ಶಿವನನ್ನು ಅರ್ಚಿಸಬಯಸುವುದಿಲ್ಲ. ಶಿವಪೂಜೆಗೆ ಸಾಧನವಾದ ಬಿಲ್ವಪತ್ರೆ ಮುಂತಾದುವುಗಳನ್ನು ಸಂಗ್ರಹಿಸುವುದಾದರೋ ನನಗೆ ಅಸಾಧ್ಯವೇ ಆಗಿರುವುದು. ॥೩೪॥

ದುರ್ಬಲವಾದ ಈ ಶರೀರವನ್ನು ಹೊತ್ತು ಅರಣ್ಯದಲ್ಲಿ ಸಂಚರಿಸುವುದೇ ಶ್ರಮಸಾಧ್ಯ. ಹೀಗಿರುತ್ತಿರಲು, ಬಿಲ್ವಪತ್ರೆಗಳನ್ನು ತರುವುದೆಂದರೆ, ಸಾಧ್ಯವಾಗುವುದೆ? ನಮ್ಮ ದೃಷ್ಟಿಯಾದರೋ ಬಿಲ್ವ ಪತ್ರೆಗಳ ಕಡೆಗೂ ಹೋಗುವುದಿಲ್ಲ. ರಮಣೀಯವಾದ ಯೌವನವು ಕಳೆದು ಹೋಗಿ ವಾರ್ಧಕ್ಯವು ಸಂಭವಿಸಿದ ಬಳಿಕ, ನಮಗೆ ಈಶ್ವರಾರ್ಚನೆಯಲ್ಲಿ, ಇಚ್ಛೆಯುಂಟಾಗಿಯೂ ಪ್ರಯೋಜನವಿಲ್ಲವಲ್ಲಾ! ಇದು ನಮ್ಮ ದುರದೃಷ್ಟದ ವಿಲಾಸವಲ್ಲವೇ? ॥೩೫॥

ಓ, ಶಂಕರನೇ! ಹಿಂದೆ, ನನಗೆ ನಿನ್ನನ್ನು ಪೂಜಿಸಬೇಕೆಂಬ ಬುದ್ಧಿಯುದ್ಭವಿಸಲಿಲ್ಲ. ಆಗ ಈ ಕೆಟ್ಟ ಹೊಟ್ಟೆಯನ್ನು ತುಂಬಿಸುವುದರಲ್ಲಿಯೇ ನನ್ನ ಆಯುಸ್ಸು ಕ್ಷೀಣವಾಯಿತು. ಬುದ್ಧಿಯನ್ನು ದುರ್ವಿನಿಯೋಗಪಡಿಸಿ ಅದರಿಂದ ಅಪಾರವಾದ ವ್ಯಸನಗಳಿಗೆ ಗುರಿಯಾದೆನು. ಅಯ್ಯೋ! ನನ್ನ ಜೀವಿತವೇ ನಾಶವನ್ನು ಹೊಂದಿದಂತಾಯಿತು. ॥೩೬॥

ಅಹೋ ಮಾಯಾಮೋಹಃ ಕಥಮಪಿ ನ ನಷ್ಟಃ ಕಥಮಪಿ
ಸ್ಮರಾರಾತಿರ್ಧ್ಯಾತೋ ನ ಖಲು ಮುಹುರತ್ಯಾದರದರೈಃ ।
ಸ್ಮರಾಪಸ್ಮಾರಾರ್ತಸ್ಸ್ಮರಶರವಿಹಾರಾಕರ ಪರಂ
ಮನೋ ದೂನಂ ನೂನಂ ಸ್ಮರಹರ ಹರೋಽಸೀತ್ಯಪಿ ಹರ ॥೩೭॥

ನ ರೇವಾತೀರೇ ವಾ ಸ್ಮರಹರ ವಿಹಾರೋ ಮಮ ಕಥಾ
ಮುದಾ ಲಿಂಗೇ ತುಂಗೇ ನವವಿಮಲಬಿಲ್ವೀದಲಯುತೇ ।
ಮನೋವೃತ್ತಿರ್ನೇತ್ರೇ ಕಥಮಪಿ ಭವಿತ್ರೀ ಶಿವ ಕದಾ
ಧರಿತ್ರೀ ಮದ್ಗಾತ್ರಂ ಕಥಮಪಿ ನ ಭಾರಾಯ ಮನುತೇ ॥೩೮॥

ಕೃತಾಂತೋಽಪಿ ದೂತೈಃ ಪ್ರಮತ್ತೈಃ ಪ್ರವೃತ್ತೈಃ
ಕಥಂ ವಾ ನ ನೇಷ್ಯತ್ಯಪಾರಾಘಯುಕ್ತಂ ।
ತದಾ ಮೋಚಕಃ ಕೋಽಪಿ ನಾಸ್ತ್ಯೇವ ಲೋಕೇ
ಭವಂತಂ ವಿನಾ ತಾವದರ್ಧೇಂದುಮೌಳೇ ॥೩೯॥

ಅಯ್ಯೋ! ಇನ್ನೂ ಸಂಸಾರದಲ್ಲಿರುವ ವ್ಯಾಮೋಹವು ತೊಲಗಿರುವುದಿಲ್ಲ. ಕಾಮರಿಪುವಾದ ಈಶ್ವರನನ್ನು ಭಕ್ತಿಲೇಶದಿಂದಾದರೂ ಧ್ಯಾನಿಸಲಿಲ್ಲ. ಚಿತ್ತವು ಮನ್ಮಥಲೀಲೆಗಳಲ್ಲಿ ಆಸಕ್ತವಾಗಿ, ರಾಗದ್ವೇಷಗಳಿಂದ ಕಲುಷಿತವಾಗಿರುವುದು. ಓ ಮಹಾದೇವನೇ, ಅಜ್ಞಾನಿಗಳಾದ ಜನರ ಅಜ್ಞಾನವನ್ನು ಹೋಗಲಾಡಿಸುವವನಾದುದರಿಂದ "ಹರ"ಯೆಂಬ ಅನ್ವರ್ಥಸಂಜ್ಞೆಯನ್ನು ಹೊಂದಿರುವ ನೀನು ನಮ್ಮ ಮನಃಕ್ಲೇಶವನ್ನು ಹೋಗಲಾಡಿಸಲಾರೆಯಾ? ॥೩೭॥

ಓ ಶಿವನೇ, ಈ ರೇವಾನದಿಯ ತೀರದಲ್ಲಿ ಸಂಚರಿಸುವ ಸುಯೋಗವು ನನಗೆ ಯಾವ ಸಮಯದಲ್ಲಿ ಲಭಿಸುವುದು? ನನ್ನ ಮನಸ್ಸು ಉನ್ನತವಾದ ಶಿವಲಿಂಗವನ್ನು ಧ್ಯಾನಿಸುವ ಕಾಲವು ಯಾವುದು? ನನ್ನ ನೇತ್ರಗಳು ರೇವಾನದಿಯ ತೀರದಲ್ಲಿರುವ ಲಿಂಗವನ್ನು ಯಾವಾಗ ನೋಡುವುವೋ? ನಿನ್ನ ದರ್ಶನವು ನನಗೆ ಸಂಭವಿಸದಿದ್ದರೆ, ಭೂಮಿಗೆ ಆಗ ನನ್ನ ಶರೀರವು ಭಾರವೆನಿಸುವುದಿಲ್ಲವೆ? ॥೩೮॥

ಅನೇಕ ಪಾಪಕರ್ಮಗಳನ್ನು ಆಚರಿಸಿದ ನನ್ನನ್ನು ಅಂತ್ಯಕಾಲದಲ್ಲಿ ಯಮನು ತನ್ನ ದೂತರ ಸಹಾಯದಿಂದ ತನ್ನ ಆಲಯಕ್ಕೆ ಎಳೆಸಿಕೊಂಡು

ಶಿವ ಶ್ರೀಮಹಾದೇವ ಗೌರೀಪತೇ ಮಾಂ
ತ್ವದೀಯಂ ನಯಾಪಾರಸಂಸಾರಪಾರಂ ।
ಭವಂತಂ ವಿನಾ ಕೋಽಪಿ ಪಾತಾ ನ ಮೇ ಸ್ಯಾತ್
ನ ಮಾತಾ ಪಿತಾ ವಾ ನ ದಾತಾ ಮಹೇಶ ॥೪೦॥

ಅಘೋರಾ ಹಿ ಸಂಸಾರವೃತ್ತಿಸ್ತ್ವಪಾರಾ
ಹರಾಚಾರಹೀನಸ್ಯ ಹಾರಾನುಕಾರಃ ।
ಕದಾಪ್ಯಸ್ಯ ನೇತ್ಯೇವ ಸಂಸಾರಪಾರಂ
ನಯಾಶು ಪ್ರಪಶ್ಯೇಶ ಪಶ್ಯ ಪ್ರಪಶ್ಯ ॥೪೧॥

ಕದಾ ವಾ ಮುದಾ ವಾ ಮಹಾದೇವ ದೇವೇಃ
ಪೃಪಾಲಂಭನೇನಾಪಿ ಕಾಲೋ ವಿನೇಯಃ ।
ಸ್ವಕಾಲೋಽಪಿ ನೇಯಃ ಸ ಕಾಲೋಽಯಮಾಸೀ
ದಿತಿ ಶ್ರೀಮಹಾಕಾಲಕಾಲಾನುವೇಲಂ ॥೪೨॥

ಹೋಗದೇ ಇರುವನೇ! ಓ ಚಂದ್ರಶೇಖರನೇ, ಆಗ ಯಮನ ಬಲೆಗೆ ಸಿಲುಕಿದ ನನ್ನನ್ನು ಉದ್ಧರಿಸಲು ನೀನೊಬ್ಬನೇ ಶಕ್ತನಾಗಿರುವೆಯಲ್ಲದೇ ಇತರರಾರೂ ನನ್ನನ್ನು ಉದ್ಧರಿಸಲಾರರು. ||೩೯||

ಓ ಶಿವನೇ, ಮಹಾದೇವನೇ, ಗೌರೀಪತಿಯೇ, ಸಂಸಾರವೆಂಬ ಸಾಗರದಲ್ಲಿ ಮುಳುಗಿ ಪಾರವನ್ನು ಕಾಣದಿರುವ ನನ್ನನ್ನು ಪಾರುಗಾಣಿಸು. ನೀನೇ ನನಗೆ ರಕ್ಷಕನಾಗಿರುವೆಯಲ್ಲದೇ, ತಾಯಿತಂದೆಗಳು ಸಹ ಪತಿತನಾದ ನನ್ನನ್ನು ಉದ್ಧರಿಸಲಾರರು. ||೪೦||

ಸಂಸಾರದಲ್ಲಿರುವ ಭಯಂಕರವಾದ ಜೀವನಕ್ಕೆ ಎಲ್ಲೆಯೇ ಇರುವುದಿಲ್ಲ. ಈಶ್ವರಪ್ರಿಯವಾದ ಆಚಾರಗಳಿಂದ ಬಾಹಿರನಾದ ನನಗೆ ಈಶ್ವರಭಕ್ತರ ಸಹವಾಸವಾದರೂ ಇರುವುದೇ! ಇಲ್ಲ. ಆದುದರಿಂದ ನನ್ನ ದುಃಖಮಯವಾದ ಈ ಸಂಸಾರವನ್ನು ಹೋಗಲಾಡಿಸು. ನನ್ನನ್ನು ನಿನ್ನ ಕರುಣಾಕಟಾಕ್ಷಕ್ಕೆ ಪಾತ್ರನನ್ನಾಗಿ ಮಾಡು. ||೪೧||

ಓ, ಮಹಾದೇವನೇ! ನಮ್ಮ ಆಯುಸ್ಸು ಮಹಾದೇವನನ್ನು ಸಂತೋಷದಿಂದ ಅರ್ಚಿಸಿದರೂ ಕಳೆಯುವುದು. ಶಿವದೂಷಣೆಮಾಡುತ್ತಿದ್ದರೂ ಆಯುಸ್ಸು

ಅಯಂ ಪುಣ್ಯಕಾಲೋ ಮಹಾಕಾಲಕಾಲ
ಸ್ಮೃತೌ ಯೇನ ಕಾಲಸ್ವಭಾವೋಽಯಮಾಸೀತ್ ।
ಅಯಂ ಶೋಭನಸ್ಯಾಪಿ ಕಾಲೋಽಯಮಾಸೀ
ದಿತೋಽಭೂನ್ಮಹೇಶಸ್ಮೃತಿರ್ಮುಕ್ತಿದಾನಪ್ರವೀಣಾ ॥೪೩॥

ಸ ಸಂಸಾರಮೋಹಪ್ರವಾಹೋ ವಿನಷ್ಟಃ
ಕ್ಷಣಾರ್ಧಾದಿಹಾರ್ದೇಂದುಮೌಳೇ ಕೃಪಾಲೋ ।
ಅಯಂ ಭಾವಲೀಲಾಭಿರಿತ್ಯೇವ ಕುರ್ಮಃ
ಶಿವಾರಾಧನಂ ಬಾಲಬಿಲ್ವೀದಲಾದ್ಯೈಃ ॥೪೪॥

ಸಂಸಾರಚಂಡಕರಧೀರಕರಪ್ರಚಾರೈ
ಸ್ತಪ್ತಂ ಶರೀರಮಿದಮೇತದತಃಪರಂ ಮೇ ।
ಗೌರೀಮನೋಹರತರುಪ್ರವರೋಪಕಂಠ
ಛಾಯಾಮುಪೇತ್ಯ ನಿವಸಾಮಿ ಖಲು ಪ್ರಕಾಮಂ ॥೪೫॥

ಸವೆಯುವುದು. ಹೀಗಿರುವಲ್ಲಿ ನಮ್ಮ ಆಯುಸ್ಸಿಗೆ ಸಾರ್ಥಕತೆಯನ್ನು ಕಲ್ಪಿಸಬೇಕಾದರೆ, ಶಿವಾರಾಧನೆಯನ್ನು ನಡೆಸಬೇಕು. ಆ ಕಾಲವೇ ಮಹಾದೇವನ ಪ್ರೀತಿಗೆ ಎಲ್ಲೆಯಂತಾಗುವುದು. ॥೪೨॥

ಮಹಾದೇವನನ್ನು ಸ್ಮರಿಸುವುದಕ್ಕೆ ಇದೇ ಶುಭವಾದ ಕಾಲವಾಗಿದೆ. ಇದು ಈ ಕಾಲದ ಮಹಿಮೆಯಾಗಿರುವುದು. ಈ ಕಾಲವೇ ಪುಣ್ಯವನ್ನು ಸೂಚಿಸುವ ಚಿಹ್ನೆ. ಆದರಿಂದಲೇ ಮುಕ್ತಿಪ್ರದವಾದ ಈಶ್ವರಸ್ಮರಣೆಯು ಈಗ ಸಂಭವಿಸಿರುವುದು. ॥೪೩॥

ಓ, ಚಂದ್ರಶೇಖರನೇ! ಕರುಣಾಮಯನಾದ ನಿನ್ನ ಅನುಗ್ರಹದಿಂದ ಧಾರಾಕಾರವಾಗಿ ಅನುಸರಿಸಿ ಬರುತ್ತಿದ್ದ, ಸಂಸಾರವ್ಯಾಮೋಹವು ದೂರ ಸರಿಯಿತು. ಇದು ಶಿವಭಕ್ತಿಯ ಮಹಿಮೆಯಿಂದಲೇ ಉಂಟಾಯಿತೆಂದು ನಾವು ಹೇಳುವೆವು. ಆದುದರಿಂದಲೇ, ಕೋಮಲವಾದ ಬಿಲ್ವಪತ್ರೆಗಳಿಂದ ಈಗ ಶಿವನನ್ನು ಆರಾಧಿಸುವೆವು. ॥೪೪॥

ನನ್ನ ಈ ಶರೀರವು ಸಂಸಾರವೆಂಬ ಸೂರ್ಯನ ಪ್ರಖರವಾದ ಕಿರಣಗಳಿಂದ ಬೆಂದು ಬಳಲಿರುವುದು. ಆದುದರಿಂದ ಈಗ ಉಮಾರಮಣನಾದ ಪರಶಿವನೆಂಬ ವೃಕ್ಷದ ನೆರಳನ್ನು ಆಶ್ರಯಿಸಿ ನಾನು ಸ್ವೇಚ್ಛೆಯಿಂದ ವಾಸಿಸುವೆನು. ॥೪೫॥

ದುರ್ವೃತ್ತವೃತ್ತಶಮನೋಪಶಮಾಯ ಶರ್ವಂ
ಶಶ್ವತ್ಸಮಾಹಿತಸಮರ್ಪಣಕಾರಣೇಷು ।
ಲಿಂಗೇಷು ಫುಲ್ಲಕಮಲೈರಮಲೈಶ್ಚ ಬಿಲ್ವೈ
ರಭ್ಯರ್ಚಯಾಮಿ ಸಿತಭೂಮಿವಿಭೂಷಿತಾಂಗಃ ॥೪೬॥

ನಾತಃ ಪರಂ ಕೃತ್ಯಮುಮಾಸಹಾಯ
ಪಾದಾರವಿಂದಭಜನಾದಪಿ ಕಿಂ ವದಾನ್ಯತ್ ।
ಕೃತ್ಯಂ ವಿಶಿಷ್ಯ ಸಕಲೇಪ್ಸಿತದಾನದಕ್ಷ
ದಾಕ್ಷಾಯಣೀರಮಣಮಕ್ಷರಮಾಶ್ರಯಾಮಃ ॥೪೭॥

ಗೌರೀಮನೋರಮಣ ತೇ ಚರಣಾರವಿಂದ
ಮಸ್ಮಾಕಮಸ್ತು ಶರಣಂ ತರುಣೇಂದುಮೌಳೇ ।
ನಕ್ಷತ್ರಮಂಡಲನಿಭಾಮಲಕಂಠಮಾಲಾ
ಲೀಲಾವಲೋಕನವಿಲೋಚನಫಾಲಲೋಲ ॥೪೮॥

ದುರಾಚಾರಗಳಿಂದ ಉಂಟಾಗಿರುವ ಪಾಪರಾಶಿಗಳನ್ನು ಕಳೆದುಕೊಳ್ಳುವುದಕ್ಕೋಸ್ಕರ, ಸಕಲ ಇಷ್ಟಾರ್ಥಗಳನ್ನೂ ದಯಪಾಲಿಸುವ, ವಿಶೇಷ ಮಹಿಮೆಯುಳ್ಳ ರೇವಾನದಿಯ ದಡದಲ್ಲಿರುವ ಲಿಂಗಗಳಲ್ಲಿ, ಬಿಲ್ವಪತ್ರೆಗಳು, ಕಮಲಪುಷ್ಪಗಳು ಮುಂತಾದ ಪೂಜಾಸಾಮಗ್ರಿಗಳಿಂದ ಶಿವನನ್ನು ಆರಾಧಿಸುವೆನು. ॥೪೬॥

ಉಮಾಸಹಿತನಾದ ಪರಮೇಶ್ವರನ ಪಾದಸೇವೆಗಿಂತಲೂ ಇನ್ನಾವ ಕಾರ್ಯವು ನಮಗಿರುವುದೆಂಬುದನ್ನು ಹೇಳು. ಆದುದರಿಂದ, ಸಕಲ ಇಷ್ಟಾರ್ಥಗಳನ್ನೂ ದಯಪಾಲಿಸುವುದರಲ್ಲಿ ಸಮರ್ಥನಾದ ಮತ್ತು ನಿತ್ಯನಾದ ಪರಮೇಶ್ವರನನ್ನು ಆಶ್ರಯಿಸುವೆನು. ॥೪೭॥

ಓ, ಚಂದ್ರಶೇಖರನೇ, ನಿನ್ನ ಅಡಿದಾವರೆಗಳು ನಮಗೆ ಆಶ್ರಯವನ್ನು ನೀಡುವಂತೆ ನಮ್ಮನ್ನು ಅನುಗ್ರಹಿಸು. ನಕ್ಷತ್ರ ಮಂಡಲದಂತೆ, ಕಾಂತಿಯುಕ್ತವಾದ ನಿನ್ನ ಕಂಠಾಭರಣವನ್ನು ವಿಲಾಸಪೂರಿತವಾದ ದೃಷ್ಟಿಯಿಂದ ನೀನು ನೋಡುತ್ತಿರುವೆ. ಇಂತಹ ಹಸನ್ಮುಖಿಯಾದ ನೀನು ನನ್ನನ್ನು ಪ್ರೀತಿಸು. ॥೪೮॥

ಅದ್ಯಾಧುನಾಪಿ ಯದಿ ಮಾನಸಮೀಶಪಾದ
ಪದ್ಮಾರ್ಚನೇ ರತಮತಃ ಪರಮಸ್ಮದೀಯಂ ।
ಸಂಸಾರದುಃಖಮಖಿಲಂ ಗತಮೇವ ಜಾತಂ
ತಜ್ಜನ್ಮಕೃತ್ಯಮಪಿ ತಾವದತಃ ಪರಂ ಕಿಂ ॥೪೯॥

ಜನ್ಮೋತ್ತರಂ ಯದಿ ಕದಾಚಿದಪಿ ಸ್ಮರಾರಿ
ಪಾದಾರವಿಂದಮಕರಂದರಸಾಭಿಷೇಕಃ ।
ಚಿತ್ತ ಭ್ರಮದ್ಭ್ರಮರಪುಂಗವ ಮಸ್ತಕೇ ಸ್ಯಾತ್
ಸ್ಯಾದೇವ ತರ್ಹಿ ಭವಬಂಧವಿಮೋಚನಂ ಚ ॥೫೦॥

ಅದ್ಯಾಪ್ಯಘೌಘವಿಲಯಾಯ ಮನಃಪ್ರವೃತ್ತಿಃ
ನಾಸೀತ್ಪುರಾ ಬಹುತರಾಘಸಮನ್ವಯೇನ ।
ಕಿಂ ತಾವತಾಪಿ ಸಕೃದಪ್ಯಧುನಾಪಿ ಭಕ್ತ್ಯಾ
ಸದ್ಯಃ ಸ್ಮೃತೋ ಹರತಿ ಜನ್ಮಭಯಂ ಮಹೇಶಃ ॥೫೧॥

ಇನ್ನಾದರೂ ಈ ನನ್ನ ಚಿತ್ತವು, ಪರಮೇಶ್ವರನ ಪಾದಕಮಲಗಳನ್ನರ್ಚಿಸು ವುದರಲ್ಲಿ ಆಸಕ್ತವಾದರೆ, ಆಗ ನಮ್ಮ ಸಕಲ ಸಂಸಾರ ದುಃಖವೂ ದೂರವಾದಂತೆ ಯೇ ಸರಿ. ಇದಕ್ಕಿಂತಲೂ ಈ ಜನ್ಮದಲ್ಲಿ ನಾವು ಹೊಂದಬೇಕಾದ ಬೇರೆ ಫಲವು ಯಾವುದಿರುವುದು ? ॥೪೯॥

ಎಲೈ ಭ್ರಮರದಂತೆ ಚಪಲವಾದ ಚಿತ್ತವೇ ? ಮುಂದಿನ ಜನ್ಮದಲ್ಲಾದರೂ ನನ್ನ ಶಿರಸ್ಸಿನಲ್ಲಿ, ಈಶ್ವರನ ಅಡಿದಾವರೆಗಳ ಮಕರಂದವು ಬೀಳುವಂತೆ ಮಾಡು. ಆಗ ನಮಗೆ ನಿಜವಾಗಿಯೂ, ಈ ಸಂಸಾರದಿಂದ ಬಿಡುಗಡೆಯುಂಟಾಗುವುದು. ॥೫೦॥

ಜನ್ಮಾಂತರದಲ್ಲಿ ಸಂಪಾದಿಸಿದ ಪಾಪರಾಶಿಗಳಿಂದ ಮನಸ್ಸು ಕಲುಷಿತವಾಗಿ ರುವುದು. ಈಗ ಅದು ಪಾಪಗಳನ್ನು ನಾಶಮಾಡುವ ಕಾರ್ಯದಲ್ಲಿ ಪ್ರವರ್ತಿಸಲು ಅಸಮರ್ಥವಾಗಿರುವುದು. ಆದರೆ, ಈಗಲಾದರೂ, ಒಂದೇಒಂದು ಬಾರಿ ಭಕ್ತಿಯಿಂದ ಶಿವನನ್ನು ಸ್ಮರಿಸಿದರೆ, ಶಂಕರನು ಮುಂದೆ ಜನನ ಭಯವನ್ನು ಹೋಗಲಾಡಿಸ ಲಾರನೇ ! ॥೫೧॥

ಕೃಪಾಬ್ಧಿಪೂರಃ ಸ ಹರಃ ಸ್ಮೃತೋಽಪಿ
ಕದಾಚಿದಪ್ಯಾದರತೋಽನುವಾರಂ ।
ಕೃತಾನ್ಯಪಾರಾಣ್ಯಪಿ ಪಾತಕಾನಿ
ಹರತ್ಯವಶ್ಯಂ ಹರ ಏವ ಯಸ್ಮಾತ್ ॥೫೨॥

ಶಿವಾರ್ಚನಾಕಾರಮಹಾಗ್ನಿದಗ್ಧ
ಮಪಾರಪಾಪೋರುಪತಂಗಜಾತಂ ।
ಭವತ್ಯವಶ್ಯಂ ತತ ಏವ ನಿತ್ಯಂ
ಮಹೇಶ್ವರಾರಾಧನಮೇವ ಕುರ್ಮಃ ॥೫೩॥

ಶಿವಪೂಜನರೂಪಮೌಷಧಂ
ಹೃದಯೇ ಯಸ್ಯ ನಿವಿಷ್ಟಮೇಕದಾ ।
ತದಾಪಾರಮಹಾಭಯಾಪಹಂ
ಮಹತೀತ್ಯೇವ ಮತಿರ್ಮಮಾಧುನಾ ॥೫೪॥

ಕರುಣಾಕರತಾ ಮಹೇಶ್ವರೇ
ವಿದಿತಾ ಯದ್ಯಪಿ ಸರ್ವಥಾಪಿ ಸಾ ।
ಅನುಕೂಲತಯಾ ಶಿವಾರ್ಚನೇ
ಷ್ವನುವೃತ್ತಾ ನ ಬಭೂವ ದುರ್ಮತೇಃ ॥೫೫॥

ದಯಾಸಾಗರನಾದ ಪರಮೇಶ್ವರನನ್ನು ಒಂದೇ ಒಂದು ಬಾರಿ ಪ್ರೀತಿಪೂರ್ವಕವಾಗಿ ಸ್ಮರಿಸಿದರೂ ಸಹ, ಅವನು ನಮ್ಮ ಸಕಲ ಪಾಪಗಳನ್ನೂ ನಾಶಮಾಡುವನು. ಪಾಪಹರನಾದ್ದರಿಂದಲೇ ಶಂಕರನಿಗೆ ಹರನೆಂಬ ಹೆಸರಿರುವುದು. ॥೫೨॥

ದೀಪದ ಹುಳುಗಳು, ಧಗಧಗಿಸುವ ಬೆಂಕಿಯಲ್ಲಿ ಬಿದ್ದು ಬೆಂದುಹೋಗುವಂತೆ, ಪಾಪರಾಶಿಗಳು ಈಶ್ವರಾರಾಧನೆಯಿಂದ ಕ್ಷಣಕಾಲದಲ್ಲಿ ನಾಮಾವಶೇಷವನ್ನು ಹೊಂದುವುವು. ಆದುದರಿಂದ ನಾವು ನಿತ್ಯವೂ ಈಶ್ವರನನ್ನೇ ಅರ್ಚಿಸಬೇಕು. ॥೫೩॥

ಯಾವನ ಹೃದಯದಲ್ಲಿ ಶಿವಪೂಜೆಯೆಂಬ ದಿವ್ಯವಾದ ಔಷಧವು ಸದಾ ಇರುವುದೋ, ಅವನ ಸಕಲ ಸಂಸಾರ ಭಯಗಳೂ ದೂರವಾಗುವುವೆಂದು ನಾನು ದೃಢವಾಗಿ ನಂಬಿರುವೆನು. ॥೫೪॥

ಪರಮೇಶ್ವರನು, ಕರುಣಾಕರನಾಗಿರುವನೆಂದು ತಿಳಿದುದೇ ಆದರೆ, ಆ ತಿಳಿವ

ಸುಲಭಾಪಿ ಶಿವಾರ್ಚನೇ ರತಿಃ
ಸುಲಭಾ ನೇತಿ ನ ಚಿತ್ರಮೇವ ಹಿ ।
ಸುಲಭಂ ಕಿಮುಭಾಗ್ಯಸಂಗಮೇ
ಸುಗಮಂ ಭಾಗ್ಯಸಮಾಗಮಾತ್ಫಲು ॥೫೬॥

ಅದ್ಯಾಪಿ ಶಂಕರಪದಾಂಬುಜಪೂಜನಾಯ
ಚಿತ್ತಂ ಪ್ರವೃತ್ತಮಪಿ ನೈವ ಕೃತಾರ್ಥಮಾಸೀತ್ ।
ಪ್ರತ್ಯೂಹಕೋಟಿಸಹಿತೇ ಮನಸಿ ಪ್ರವೃತ್ತೇ
ಕಿಂ ತೇನ ತತ್ಫಲಮಪಿ ವಿಘ್ನಿತಮಾಶು ಸಿದ್ಧಿಂ ॥೫೭॥

ಧನ್ಯಾಸ್ತೇ ಹೃದಿ ಸಂತತಂ ಶಿವಪದಾಂಭೋಜಂ ನಿಧಾಯಾದರಾತ್
ಆನಂದಾಮೃತಧಾರಯಾಪಿ ಪರಯಾ ಗಂಭೀರಯಾ ಸೇವನಂ ।
ಕುರ್ವಂತೋ ವಿರತಿಂ ನ ಯಾಂತಿ ಸುಕೃತೈರಪ್ಯಂತಹೀನೈರ್ಮುಹು
ಸ್ತದ್ಭಾಗ್ಯಂ ಭುವನೇಷು ದುರ್ಲಭತರಂ ತದ್ಭುಕ್ತಿಮುಕ್ತಿಪ್ರದಂ ॥೫೮॥

ಳಿಕೆಯು, ಅವನ ಅರ್ಚನೆಯಲ್ಲಿ ಸಾಧಕವಾಗುವುದು. ಆದರೆ, ದುಷ್ಟನಿಗೆ ಆ ಬುದ್ಧಿಯು ಜಾಗ್ರತೆ ಉಂಟಾಗುವುದಿಲ್ಲ. ॥೫೫॥

ಶಿವಾರ್ಚನೆಯಲ್ಲಿ, ಆಸಕ್ತಿಯು ಸುಲಭವಾಗಿರುವುದು. ಆದರೆ ಅದು ಒಂದು ವೇಳೆ ದುರ್ಲಭವೆಂದು ಹೇಳಿದರೂ, ಆಶ್ಚರ್ಯವಲ್ಲ. ಏಕೆಂದರೆ, ಮನುಜನು ದುರ್ಭಾಗ್ಯಶಾಲಿಯಾಗಿದ್ದರೆ, ಅವನಿಗೆ ಈಶ್ವರಾರಾಧನೆಯಲ್ಲಿ ಆಸಕ್ತಿಯು ದುರ್ಲಭವೇ. ಅವನು ಸದ್ಭಾಗ್ಯದಿಂದ ಕೂಡಿದ್ದರೆ ಆಸಕ್ತಿಯು ಸುಲಭವೆನಿಸುವುದು. ಹೀಗೆ ಶಿವಪೂಜಾಸಕ್ತಿಯು ಭಾಗ್ಯವಿಶೇಷಾಧೀನವಾದುದು. ॥೫೬॥

ಈಗ ನಮ್ಮ ಚಿತ್ತವು, ಶಿವನ ಅಡಿದಾವರೆಗಳನ್ನು ಪೂಜಿಸಲು ತೊಡಗಿದ್ದರೂ ಸಹ, ಅದು ಸಫಲವಾಗಲಿಲ್ಲ. ಏಕೆಂದರೆ ಮನಸ್ಸು, ಅಸಂಖ್ಯಾತವಾದ ಪಾಪಗಳಿಂದ ಕೂಡಿದ್ದರೆ, ಅದು ಒಂದುವೇಳೆ ಶಿವಪೂಜೆಯಲ್ಲಿ ಆಸಕ್ತವಾದರೂ ಅದರಿಂದ ಫಲವು ಲಭಿಸಲಾರದು. ॥೫೭॥

ಯಾವ ಮನುಷ್ಯರು, ಶಿವ ಪಾದಕಮಲವನ್ನು ಸತತವೂ, ಧ್ಯಾನಿಸುತ್ತಾ, ಆದರಿಂದ, ವರ್ಣಿಸಲಸಾಧ್ಯವಾದ ಆನಂದವನ್ನು ಅನುಭವಿಸುತ್ತಾ, ಅಪಾರವಾದ ಫಲಗಳನ್ನು ಪಡೆಯುವರೋ, ಅವರೇ ಈ ಲೋಕದಲ್ಲಿ ಕೃತಕೃತ್ಯರೆಂದೆನಿಸಿಕೊಳ್ಳು

ನಿಧಾಯ ಹೃದಿ ಶಂಕರಂ ಯದಿ ನಿಧಾಯ ಪೂಜಾಂ ಮುಹುಃ
ಪ್ರನೃತ್ಯತಿ ಮಹೇಶ್ವರ ಸ್ಮರ ಹರೇತಿ ಹಾರಃ ಪರಂ ।
ತದಾ ಪರಮವಾಪ್ನುಯಾದ್ಗಿರಿಶಪಾದುಕಾರಾಧನ
ಪ್ರಸಾದಮತಿದುರ್ಲಭಂ ಶುಭದಮದ್ಭುತಂ ಸಂತತಂ ॥೫೯॥

ತಿರಸ್ಕರೋತ್ಯೇವ ಯಮಂ ಯಮಾದಿಭಿ
ರ್ವಿನಾಪಿ ತಾವತ್ಸಕೃದಾದರೇಣ ।
ಸ್ಮೃತ್ವಾ ಸಕೃದ್ವಾ ಶಿವಮಾದರೇಣ
ಪ್ರಯಾತಿ ದುಃಖೌಘಮಹಾಬ್ಧಿಪಾರಂ ॥೬೦॥

ದುಃಖಾನಿ ನೈವ ಗಣಯತ್ಯಪಿ ಪಾತಕಾನಿ
ಘೋರಾಣ್ಯಪಾರವಿವಿಧಾರ್ಣವಲಕ್ಷಣಾನಿ ।
ಸ್ಮೃತ್ವಾ ಸಕೃದ್ಗಿರಿಶಪಾದರಜಃ ಪ್ರಸನ್ನಂ
ಸಂಸಾರಶೋಕಪರಿಹಾರಕರಂ ಸ್ಮರಾರಿಂ ॥೬೧॥

ವರು. ಆದರೆ, ಲೋಕಗಳಲ್ಲಿ ಆ ಭಾಗ್ಯವು ಲಭಿಸುವುದೇ ಮೊದಲು ಕಷ್ಟವಾದುದು. ಶಿವಪೂಜೆಯೆಂಬುದು ಚಿತ್ತೈಕಾಗ್ರ್ಯರೂಪವಾದ ಭಕ್ತಿಯನ್ನು ದಯಪಾಲಿಸಿ, ಅದರ ಮೂಲಕ ಮೋಕ್ಷಸುಖವನ್ನು ದೊರಕಿಸುವುದು. ॥೫೮॥

ಈಶ್ವರಭಕ್ತನಾಗಿದ್ದು, ಸದಾ ಶಿವನನ್ನು ಪೂಜಿಸಿ ಧ್ಯಾನಿಸಿದರೆ ಆಗ ಅವನು ಶಿವನ ಅನುಗ್ರಹಕ್ಕೆ ಪಾತ್ರನಾಗುವನು. ಪರಮೇಶ್ವರನ ಪಾದಕಮಲಗಳ ಅನುಗ್ರಹವು ಸಾಮಾನ್ಯಜನರಿಗೆ ದುರ್ಲಭವಾದುದು. ಶಾಂಭವನಾದರೋ ಆದಕ್ಕಾಗಿ ಶಿವ ನಾಮಗಳನ್ನುಚ್ಚರಿಸುತ್ತಾ ನರ್ತನಮಾಡುವನು. ॥೫೯॥

ಈಶ್ವರಪೂಜಕನು ಯಮ ನಿಯಮಾದಿ ಅಷ್ಟಾಂಗ ಯೋಗಸಾಧಕನಾಗದಿದ್ದರೂ, ಮೃತ್ಯುವಿನ ಭಯದಿಂದ ಬಿಡುಗಡೆಯನ್ನು ಹೊಂದುವನು. ಏಕೆಂದರೆ ಒಂದೇ ಒಂದು ಬಾರಿ ಶಿವನನ್ನು ಸ್ಮರಿಸಿದರೆ ಸಾಕು. ಅದರಿಂದ ಸಕಲ ದುಃಖಗಳೂ, ನಾಶಹೊಂದುವುವು. ॥೬೦॥

ಈಶ್ವರನ ಪಾದಕಮಲಗಳ ನಿರ್ಮಲವಾದ ಧೂಳನ್ನು ಸ್ಮರಿಸುವುದರಿಂದ ಭಯಂಕರವಾದ ಪಾಪರಾಶಿಗಳು ಶೀಘ್ರವಾಗಿ ನಷ್ಟವಾಗುವುವು. ಅಂತಹ ಭಕ್ತನಿಗೆ ದುಃಖಗಳು ಬರಲಾರವು. ಒದಗಿದರೂ ಅವನು ಲಕ್ಷಿಸುವುದಿಲ್ಲ. ॥೬೧॥

ಅಪಾರಪಾಪೌಘಲಯಾಯ ಸಾಯಂ
ಲಿಂಗಾರ್ಚನಂ ಕರ್ತುಮಪಿ ಪ್ರವೃತ್ತಂ ।
ಪ್ರಬೋಧಯತ್ಯೇವ ಶಿವಪ್ರಭಾವಃ
ಪ್ರಭಾವಮಾಶಾಪರಿಪಾಕಹೀನಂ ॥೬೨॥

ಮುಕ್ತ್ಯಂಗನಾವಶ್ಯಕರಂ ಚ ಲೋಕೇ
ಶಿವಾರ್ಚನಂ ತಾವದಿತಿ ಸ್ಮರಾಮಿ ।
ತದೇವ ಸರ್ವಾರ್ಥದಮಿತ್ಯವೈಮಿ
ತದೇವ ತಾವತ್ಸುಲಭಂ ಪವಿತ್ರಂ ॥೬೩॥

ಅನಾಯಾಸೇನೈವ ಸ್ಮರಹರಪದಾಂಭೋಜಭಜನೇ
ವಿಮುಕ್ತಿಃ ಸ್ಯಾದೇಷಾ ಕಥಮಪಿ ನ ಕೇನಾಪಿ ತಪಸಾ ।
ಅವಶ್ಯಂ ತತ್ತಾವದ್ಭಜನಮಪಿ ಭಾವಸ್ಯ ಭವತೀ
ತ್ಯಪಾರಾನಂದಾನಾಂ ನಿಧಿರಪಿ ಸ ಏವ ಸ್ಮರಹರಃ ॥೬೪॥

ಯಾವನು, ತನ್ನ ಪಾಪಗಳನ್ನು ನಾಶಪಡಿಸುವ ಉದ್ದೇಶದಿಂದ ಸಾಯಂಕಾಲದಲ್ಲಿ ಶಿವಲಿಂಗವನ್ನು ಅರ್ಚಿಸುವನೋ, ಅವನು ಶಿವನ ಮಹಿಮೆಯಿಂದ ಸಕಲ ಪಾಪಗಳಿಂದಲೂ, ಮತ್ತು ರಾಗದ್ವೇಷಗಳಿಂದಲೂ, ಬಿಡುಗಡೆಯನ್ನು ಹೊಂದಿ ದಿವ್ಯವಾದ ಜ್ಞಾನವನ್ನು ಪಡೆಯುವನು. ॥೬೨॥

ಲೋಕದಲ್ಲಿ ಮುಕ್ತಿಯೆಂಬ ಸ್ತ್ರೀಯನ್ನು ವಶಪಡಿಸಿಕೊಳ್ಳುವ ಕಾರ್ಯದಲ್ಲಿ ಶಿವಾರ್ಚನೆಯೆಂಬುದೇ ಪ್ರಬಲವಾದ ಸಾಧನವಾಗಿರುವುದೆಂದು ತಿಳಿಯುವೆನು. ಅದೇ, ಸಕಲ ಇಷ್ಟಾರ್ಥಗಳನ್ನೂ ದಯಪಾಲಿಸುವುದು. ಅದೇ, ಅನುಷ್ಠಾನಕ್ರಮದಲ್ಲಿ, ಸುಲಭವೂ ಶ್ರೇಷ್ಠತಮವೂ ಆಗಿರುವುದು. ॥೬೩॥

ಈಶ್ವರನ ಪಾದಕಮಲಗಳನ್ನು ಸ್ಮರಿಸಿದುದಾದರೇ ಅನಾಯಾಸವಾಗಿ ಮುಕ್ತಿಯು ಲಭಿಸುವುದು. ಆ ಮುಕ್ತಿಯು, ಘೋರವಾದ ತಪೋಽನುಷ್ಠಾನದಿಂದಲೂ ಸಹ ಲಭಿಸಲಾರದು. ಆದುದರಿಂದ ಶಿವನನ್ನು ಭಜಿಸುವುದು ಅತ್ಯಗತ್ಯ. ಕಾಮರಿಪುವಾದ ಪರಶಿವನೇ, ಅಪಾರವಾದ ಆನಂದಗಳಿಗೆ ನೆಲೆಯಾಗಿರುವನಲ್ಲವೆ! ॥೬೪॥

ಶಿವಧ್ಯಾನಸುಧಾಪಾನಪೀನಾನನಮುದುರ್ಜನಂ ।
ಜನಂ ತ್ರಿಲೋಚನಂ ಮನ್ಯೇ ಧನ್ಯಂ ಮಾನ್ಯಂ ಪುನಃ ಪುನಃ ॥೬೫॥

ಶಿವನಾಮಸುಧಾ ಮುಹುರ್ಮುಹುಃ
ಯದಿ ಪೀತಾ ಸಕೃದೇವ ವಾ ತದಾ ।
ಸಕಲಾಘವಿಪರ್ಯಯೋ ಭವೇದ
ಪಿ ಮುಕ್ತಿಶ್ಚ ಭವತ್ಯಪಿ ಧ್ರುವಂ ॥೬೬॥

ಯನ್ನಾಮಕೀರ್ತನವಿನೋದರಸಾಭಿಷಿಕ್ತಾಃ
ತೇ ತಾವದಂತಕರಿಪುಪ್ರಮಥಾಗ್ರಗಣ್ಯಾಃ ।
ಸದ್ಯೋ ಭವಂತಿ ಭವತಾಪವಿಲೀನಚಿತ್ತಾಃ
ಸಂತೋ ವಿಭೂತಿಕೃತಪೂತಲಸತ್ತ್ರಿಪುಂಡ್ರಾಃ ॥೬೭॥

ಅಸ್ಮಾಕಂ ಕಿಮಿಹಾಸ್ತಿ ದುಷ್ಕರತರಂ ಲಿಂಗೇಽತಿತುಂಗೇ ಮುಹುಃ
ಬಿಲ್ವೀಪಲ್ಲವಮಾತ್ರಮತ್ರ ನಿಹಿತಂ ಹಂತ್ಯೇವ ಪಾಪಾಚಲಾನ್ ।

ಶಿವಧ್ಯಾನವೆಂಬ ಅಮೃತವನ್ನು ಆ ಕಂಠವಾಗಿ ಪಾನಮಾಡಿ, ತೃಪ್ತಿಗೊಂಡಿರುವ ಸತ್ಪುರುಷನು, ಸಾಕ್ಷಾತ್ ಶಿವಸ್ವರೂಪಿಯೆ ಆಗಿರುವನೆಂದು ತಿಳಿಯುವೆನು. ಅವನೇ ಭಾಗ್ಯಶಾಲಿಯು ಮತ್ತು ಗೌರವಶಾಲಿಯೂ ಎನಿಸುವನು. ||೬೫||

ಶಿವನಾಮಾಮೃತವನ್ನು ಒಂದೇ ಒಂದು ಬಾರಿ ಪಾನಮಾಡುವುದರಿಂದಲೇ ಸಕಲ ಪಾಪಗಳೂ ನಾಶವನ್ನು ಹೊಂದುವುವಲ್ಲದೇ ಶೀಘ್ರವಾಗಿ ಮೋಕ್ಷವು ಲಭಿಸುವುದು. ಇದು ನಿಜ. ||೬೬||

ಈಶ್ವರನ ನಾಮವನ್ನು ಗಾನಮಾಡಿ, ಅದರಿಂದುಂಟಾಗುವ ಆನಂದವನ್ನು ಸವಿಯುವವರು, ಶೀಘ್ರದಲ್ಲಿಯೇ ಪರಮೇಶ್ವರ ಪ್ರಮಥಗಣಗಳಲ್ಲಿ ಶ್ರೇಷ್ಠರೆಂದು ಪರಿಗಣಿತರಾಗುವರು. ಫಳಫಳನೆ ಹೊಳೆಯುತ್ತಿರುವ ತ್ರಿಪುಂಡ್ರಗಳನ್ನು ಧರಿಸಿ ಶಿವನಾಮಾಸಕ್ತರಾದ ಆ ಸತ್ಪುರುಷರು ಸಂಸಾರದಲ್ಲಿ ನಿಜವಾದ ವೈರಾಗ್ಯವನ್ನು ತಾಳುವರು. ||೬೭||

ಇಲ್ಲಿ ನಮಗೆ ದುಷ್ಕರವಾದ ಕೆಲಸವು ಯಾವುದು ತಾನೇ ಇರುವುದು? ಶ್ರೇಷ್ಠವಾದ ಈ ಶಿವಲಿಂಗದ ಮೇಲೆ ಕೋಮಲವಾಗಿರುವ ಒಂದೇ ಒಂದು ಬಿಲ್ವಪತ್ರೆಯನ್ನು ಇಡುವುದರಿಂದಲೇ ನಮ್ಮ ಪಾಪರಾಶಿಗಳೆಲ್ಲವೂ ಕ್ಷಣಕಾಲದಲ್ಲಿ

ಅಂತೇ ದಾಸ್ಯತಿ ಮುಕ್ತಿಮೇವ ಕಿಮುತೋಽಪ್ಯನ್ಯತ್ಫಲಂ ವಾಂಛಿತಂ
ತುಚ್ಛಂ ವಾಂಛತಿ ಕಃ ಫಲಂ ವಿಧಿಹತಂ ಬ್ರಹ್ಮಾದಿಕಾನಾಂ ಹಿ ತತ್ ॥೬೮॥

ವಾರಂ ವಾರಂ ಶಂಕರಧ್ಯಾನರೂಪಂ
ಪೀಯೂಷಂ ಚೇತ್ಪೀತಮಸ್ವಾದರೇಣ ।
ಪಾಪೈರ್ಭೀತಿಂ ನೋಪಯಾತ್ಯೇವ ಸತ್ಯಂ
ಮೋಕ್ಷಶ್ರೀರಪ್ಯಾದರೇಣಾವೃತಾ ಸ್ಯಾತ್ ॥೬೯॥

ನ ಕೃತಾಂತಕೃತಾಂತಪೂಜನಂ
ಕೃತಮೇವೇತಿ ಕೃತಾಕೃತಂ ಕೃತಂ ।
ಕೃತಮದ್ಯ ತದಾದರಾತ್ಕೃತಂ
ಕುರುತೇ ತಾವದಘೌಘವಿಪ್ಲವಂ ॥೭೦॥

ನಾಶಹೊಂದುವುವು. ಇದಲ್ಲದೇ, ಅದೇ ಬಿಲ್ವಪತ್ರಾರ್ಚನೆಯಿಂದಲೇ ಅಂತ್ಯ ಕಾಲದಲ್ಲಿ ಮುಕ್ತಿಯು ಲಭಿಸುವುದು. ಇದಕ್ಕಿಂತಲೂ ಅತಿಶಯವಾದ ಯಾವ ಫಲವನ್ನು ತಾನೇ ನಾವು ಅಪೇಕ್ಷಿಸುವೆವು? ಶಾಶ್ವತವಾದ ಮೋಕ್ಷಸುಖವೆಂಬ ಫಲವನ್ನು ತೊರೆದು ಕ್ಷಣಿಕಸುಖರೂಪವಾದ ಸ್ವರ್ಗಾದಿಫಲವನ್ನು ಯಾವ ಮೂರ್ಖನು ತಾನೇ ಬಯಸುವನು? ಆ ಸ್ವರ್ಗಾದಿಸುಖಗಳು ಬ್ರಹ್ಮಾದಿ ದೇವತೆಗಳಿಗೇ ಯೋಗ್ಯವಾಗಿರುವುದಲ್ಲದೇ, ಸಂಸಾರದಿಂದ ನಿವೃತ್ತರಾಗಬೇಕೆಂದಿರುವ ನಮಗೆ ಎಂದಿಗೂ ಉಚಿತವಾದುದಲ್ಲ. ||೬೮||

ಪ್ರತಿಕ್ಷಣದಲ್ಲಿಯೂ ಶಿವಧ್ಯಾನಾಮೃತವನ್ನೇ ಪಾನಮಾಡುತ್ತಿದ್ದರೆ ಮನುಜನಿಗೆ ಪಾಪಗಳಿಂದ ಭಯವೇ ಇರುವುದಿಲ್ಲ. ಅದಲ್ಲದೆ ಮೋಕ್ಷರೂಪವಾದ ಸಂಪತ್ತು ಅನಾಯಾಸವಾಗಿ ಲಭಿಸುವುದು. ||೬೯||

ಅಂತಕನಿಗೂ ಅಂತಕನೆನಿಸಿದ ಪರಮೇಶ್ವರನ ಪೂಜೆಯನ್ನು ನಾನು ಮಾಡಲಿಲ್ಲ ಎನ್ನುವರು ಕೆಲವರಿದ್ದರೆ, ಮಾಡಿದೆನು ಎನ್ನುವವರೂ ಹಲವರಿರುವರು. ಮಾಡಿಯೂ ಮಾಡದಂತಿರುವವರು ಮತ್ತೆ ಕೆಲವರು. ಒಟ್ಟಿನಲ್ಲಿ ಮಾಡುವ ಪರಶಿವಪೂಜೆಯು ಆದರಪುರಸ್ಸರವಾಗಿ ನಡೆದದ್ದೇ ಆದರೆ, ಪೂಜಿಸಿದವನ ಸಕಲ ಪಾಪರಾಶಿಯೂ ಕ್ಷಣಕಾಲದಲ್ಲಿ ನಾಶಹೊಂದುವುದು." ||೭೦||

ಇತ್ಯುಕ್ತ್ವಾಂತೇ ವಿಚಾರ್ಯಾಂತೇ ಕರ್ತವ್ಯಂ ಶಿವಪೂಜನಂ ।
ಇತ್ಯಾಶು ವಿನಿವೃತ್ತಾಶ್ಚ ತಪಸೋ ದೇಹಶೋಷಕಾತ್ ॥೭೧॥

ತತಃ ಪರಂ ತು ತೇ ಸರ್ವೇ ಗತ್ವಾ ಚ ಸುರವಾಹಿನೀಂ ।
ಗೌರೀರಮಣಪಾದಾಬ್ಜನಿಃಸೃತಾಂ ದದೃಶುರ್ಮುದಾ ॥೭೨॥

ತತ್ರ ಸ್ನಾತ್ವಾ ಪ್ರಯತ್ನೇನ ಭಸ್ಮೋದ್ಧೂಳಿತವಿಗ್ರಹಾಃ ।
ತ್ರಿಪುಂಡ್ರರುದ್ರಾಕ್ಷಧರಾಃ ಶಿವನಾಮಜಪೋತ್ಸುಕಾಃ ॥೭೩॥

ಯಯುರ್ಬಿಲ್ವವನಂ ಸರ್ವೇ ಸರ್ವಾಘೌಘವಿನಾಶಕಂ ।
ಮಹೇಶ್ವರಪ್ರಿಯಕರಂ ಮಾಹೇಶ್ವರಸಮಾವೃತಂ ॥೭೪॥

ಉತ್ತುಂಗಲಿಂಗಸಂಗೇನ ಮನೋಹರಮಹರ್ನಿಶಂ ।
ಸಮರ್ಚಿತಾನಿ ಲಿಂಗಾನಿ ತಾನಿ ಸರ್ವಾಣಿ ಶಾಂಕರೈಃ ॥೭೫॥

ಆ ಬ್ರಹ್ಮಾದಿ ದೇವತೆಗಳು ಪರಸ್ಪರವಾಗಿ ಈ ರೀತಿ ಪರ್ಯಾಲೋಚಿಸಿ, ಇನ್ನು ಮುಂದೆ ಶಿವಪೂಜೆಯನ್ನು ಕೈಗೊಳ್ಳಬೇಕೆಂದು ನಿಶ್ಚಯಿಸಿ ದೇಹದಂಡನೆಯನ್ನುಂಟುಮಾಡುವ ತಪಸ್ಸಿನಿಂದ ವಿಮುಖರಾದರು. ॥೭೧॥

ಬಳಿಕ ಅವರೆಲ್ಲರೂ, ಸಂತೋಷದಿಂದೊಡಗೂಡಿ, ಈಶ್ವರನ ಪಾದಪದ್ಮಗಗಳಿಂದ ಜನಿಸಿ, ಹೊರಬೀಳುತ್ತಿರುವ, ದೇವಗಂಗೆಯ ಬಳಿಗೆ ಹೋಗಿ ಅದನ್ನು ಸಂದರ್ಶಿಸಿದರು. ॥೭೨॥

ಅಲ್ಲಿ ಅತ್ಯಂತ ಶ್ರದ್ಧೆಯಿಂದ ಸ್ನಾನಮಾಡಿ, ಶರೀರಾದ್ಯಂತವನ್ನೂ ಭಸ್ಮದಿಂದ ಲೇಪಿಸಿ, ಹಣೆಯಲ್ಲಿ ತ್ರಿಪುಂಡ್ರವನ್ನು ಧರಿಸಿ, ರುದ್ರಾಕ್ಷಮಾಲೆಗಳಿಂದ ಭೂಷಿತರಾಗಿ, ಈಶ್ವರನಾಮವನ್ನು ಜಪಿಸುತ್ತಾ ಮುಂದೆ ನಡೆದರು. ॥೭೩॥

ಹಾಗೆಯೇ ಅವರೆಲ್ಲರೂ, ಬಿಲ್ವವನವನ್ನು ಕುರಿತು ತೆರಳಿದರು. ಆಬಿಲ್ವವನವು ಸಕಲ ಪಾಪಗಳನ್ನೂ ನಾಶಮಾಡುವ ಸಾಮರ್ಥ್ಯವುಳ್ಳದ್ದು. ಈಶ್ವರನ ಪ್ರೀತಿಗೆ ಪಾತ್ರವಾದುದು. ಈಶ್ವರಭಕ್ತರಿಂದ ಕೂಡಿದುದೂ ಆಗಿದ್ದಿತು. ॥೭೪॥

ಆ ವನವು ಉನ್ನತವಾದ ಶಿವಲಿಂಗಗಳಿಂದ ಕೂಡಿ, ಸದಾ ಸುಂದರವಾಗಿ ತೋರುತ್ತಿದ್ದಿತು. ಅಲ್ಲಿರುವ, ಈಶ್ವರಲಿಂಗಗಳನ್ನು ಭಕ್ತರು ಸದಾ ಪೂಜಿಸುತ್ತಿದ್ದರು. ॥೭೫॥

ಏಕೈಕಬಿಲ್ವಮೂಲಸ್ಥಂ ಲಿಂಗಮೇಕೈಕಪೂಜಿತಮ್ ।
ದೃಷ್ಟ್ವಾ ತೇ ಪ್ರಣತಾಃ ಸರ್ವೇ ಬಿಲ್ವಾರಾಧನತತ್ಪರಾಃ ॥೭೬॥

ತತ್ರ ದೃಷ್ಟಾಃ ಕಶ್ಯಪಾದ್ಯಾಃ ಮುನಯಃ ಶಿವತತ್ಪರಾಃ ।
ಲಿಂಗಾರಾಧನಮಾತ್ರೇಣ ಸಂತುಷ್ಟಾಶ್ಚಾಗ್ನಿಸಂಮಿತಾಃ ॥೭೭॥

ಕೇಚಿನ್ನೃತ್ಯಂತಿ ತನ್ಮೂಲೇ ಶಿವಾರಾಧನತತ್ಪರಾಃ ।
ಹರ ಶಂಭೋ ಮಹೇಶೇತಿ ಜಪಂತಃ ಪರಮಂ ಮನುಮ್ ॥೭೮॥

ಸ್ತುವಂತಿ ಕೇಚಿದ್ಗಿರಿಜಾಸಹಾಯಂ
ನಮಂತಿ ಕೇಚಿದ್ವೃಷಭೇಶಕೇತುಮ್ ।
ಜಪಂತಿ ಕೇಚಿಚ್ಛಿವನಾಮ ಧನ್ಯಾಃ
ಸಮರ್ಚಯಂತ್ಯೋ ನವಬಿಲ್ವಪತ್ರೈಃ ॥೭೯॥

ಸಮಾರಾಧ್ಯ ಗೌರೀಶಪಾದಾರವಿಂದಂ
ನವೈರ್ಬಿಲ್ವಪತ್ರೈಃ ಪವಿತ್ರೈಃ ಪವಿತ್ರಾಃ ।

ಒಂದೊಂದು ಬಿಲ್ವಪತ್ರೆಯ ವೃಕ್ಷದ ಬಳಿಯಲ್ಲಿದ್ದ ಲಿಂಗವನ್ನು ಒಬ್ಬೊಬ್ಬ ಭಕ್ತನು ಶ್ರದ್ಧೆಯಿಂದ ಪೂಜಿಸುತ್ತಿದ್ದನು. ಬ್ರಹ್ಮಾದಿಗಳು ಆ ಶಿವಲಿಂಗಗಳನ್ನು ನೋಡಿ ನಮಸ್ಕರಿಸಿ, ಬಿಲ್ವವೃಕ್ಷವನ್ನು ಆರಾಧಿಸುವುದರಲ್ಲಿಯೇ ಮಗ್ನರಾದರು. ||೭೬||

ಆಗ, ಶಿವಧ್ಯಾನಾಸಕ್ತರಾದ ಕಶ್ಯಪಾದಿ ಮುನಿಗಳು ಅಗ್ನಿಸಮೇತರಾಗಿ ಕಾಣಿಸಿಕೊಂಡರು. ಅವರೆಲ್ಲರೂ, ಈಶ್ವರಾರಾಧನೆಯಿಂದಲೇ ಸಂತುಷ್ಟರಾಗಿದ್ದರು. ||೭೭||

ಕೆಲವರು ಶಿವಧ್ಯಾನಾಸಕ್ತರಾಗಿ, ಶಿವ, ಶಂಭೋ, ಮಹೇಶ ಎಂದು ಶ್ರೇಷ್ಠವಾದ ಶಿವನಾಮಘಟಿತ ಮಂತ್ರವನ್ನು ಜಪಿಸುತ್ತಾ, ವೃಕ್ಷದ ಕೆಳಭಾಗದಲ್ಲಿ ನರ್ತಿಸುತ್ತಿದ್ದರು. ||೭೮||

ಕೆಲವರು, ಶಿವನನ್ನು ಸ್ತುತಿಸುವರು. ಕೆಲವರು, ನಮಸ್ಕರಿಸುವರು. ಮತ್ತೆ ಕೆಲವರು ಕೋಮಲವಾದ ಬಿಲ್ವಪತ್ರೆಗಳಿಂದ ಗೌರೀಪತಿಯನ್ನು ಪೂಜಿಸುತ್ತಾ, ಶಿವನಾಮಗಳನ್ನು ಜಪಿಸುತ್ತಿರುವರು. ||೭೯||

ಮತ್ತೆ ಕೆಲವರು ಕೋಮಲವಾದ ಬಿಲ್ವಪತ್ರೆಗಳಿಂದ ಶಿವನ ಪಾದಪದ್ಮ

ಜಪಂತ್ಯೇವ ನಾಮಾನಿ ಶೈವಾನಿ ನೂನಂ
ಪ್ರನೃತ್ಯಂತಿ ಹಸ್ತಾಗ್ರಸಂಘಾತನೇನ ॥೮೦॥

ಮಹಾದೇವ ದೇವಾದಿದೇವಾಧಿದೇವ
ಪ್ರಸೀದ ಪ್ರಸೀದ ಪ್ರಸೀದ ಪ್ರಸೀದ
ಪ್ರಸೀದ ಪ್ರಸೀದ ಪ್ರಸೀದ ಪ್ರಸೀದ
ಪ್ರಸೀದ ಪ್ರಭೋ ಚಂದ್ರಮೌಳೇ ಪ್ರಸೀದ ॥೮೧॥

ಅನಾಥೈಕನಾಥಸ್ತ್ವಮೇಕೋ ಮಹೇಶ
ಸ್ಮರಾರೇ ಪುರಸ್ತಾದಧಸ್ತಾಚ್ಚ ಪಶ್ಚಾತ್ ।
ತ್ವಮೇವಾಸಿ ಪಾರ್ಶ್ವೇಽಪಿ ಪಶ್ಯ ಪ್ರಸೀದ
ಸ್ಮರಂತಂ ಭವಂತಂ ಕೃತಾಂತಾಂತಕೃತ್ತ್ವಂ ॥೮೨॥

ಭವಂತಂ ವಿನಾನ್ಯಂ ನ ಜಾನೇ ನ ಜಾನೇ
ಮತಿಸ್ತ್ವಂ ಗತಿಸ್ತ್ವಂ ಪತಿಸ್ತ್ವಂ ಮಹೇಶ ।
ಪಿತಾಸಿ ತ್ವಮೇವೇಂದುಮೌಳೇ ಕಿಮಿಾಡೇ
ಭವಂತಂ ವಿನಾ ಕೋಽಪಿ ನೇಡ್ಯೋಽಪಿ ಲೋಕೇ ॥೮೩॥

ವನ್ನು ಆರಾಧಿಸಿ, ಶಿವನಾಮಗಳನ್ನು ಜಪಿಸುವರು. ಹಾಗೆಯೇ ಅಂಗೈಗಳಿಂದ ತಾಳವನ್ನು ಹಾಕುತ್ತಾ ಹಲವರು ನರ್ತಿಸುವರು. ॥೮೦॥

ಅವರೆಲ್ಲರೂ ಪರಶಿವನನ್ನು ಕುರಿತು ಓ ಮಹಾದೇವನೇ, ಚಂದ್ರಶೇಖರನೇ. ಪ್ರಸನ್ನನಾಗು. ನಮಗೆ ಅನುಗ್ರಹಮಾಡು ಎಂದು ಪದೇಪದೆ ಪ್ರಾರ್ಥಿಸುತ್ತಿದ್ದರು.॥೮೧॥

ಓ ಮಹೇಶ್ವರನೇ, ಅನಾಥರಕ್ಷಕನೆಂದರೆ ನೀನೊಬ್ಬನೇ ಅಲ್ಲವೆ! ಎಲ್ಲಿ ನೋಡಿದರಲ್ಲಿ ನೀನೇ ಇರುವೆ. ಒಮ್ಮೆ ನಮ್ಮ ಕಡೆಗೆ ನಿನ್ನ ಕೃಪಾಕಟಾಕ್ಷವನ್ನು ಬೀರು. ನಮ್ಮಲ್ಲಿ ಪ್ರಸನ್ನನಾಗು. ॥೮೨॥

ನಾನು ನಿನ್ನನ್ನು ಬಿಟ್ಟು ಇನ್ನಾರನ್ನೂ ಪರಾತ್ಪರವಸ್ತುವೆಂದು ತಿಳಿದಿರುವುದಿಲ್ಲ. ನೀನೇ ನಮ್ಮ ಬುದ್ಧಿಯಾಗಿರುವೆ. ನೀನೇ ಆಶ್ರಯನು. ನೀನೇ ಸ್ವಾಮಿಯು. ಓ ಚಂದ್ರಶೇಖರನೇ, ನಮ್ಮ ತಂದೆಯೂ ನೀನೇ ಆಗಿರುವೆ. ಹೀಗಿರುವಲ್ಲಿ ನಿನ್ನನ್ನಲ್ಲದೇ ಇನ್ನಾರನ್ನು ಸ್ತುತಿಸಲಿ? ಈ ಲೋಕದಲ್ಲಿ ನಿನ್ನನ್ನು ಬಿಟ್ಟು ಮತ್ತಾರು ಪೂಜ್ಯರಾಗಿರುವರು? ॥೮೩॥

ಮಪಂಗಂ ಚ ತುಂಗೇನ ಲಿಂಗೇನ ಸಂಗಂ
ಭವಂತಂ ಪರಂ ಪ್ರಾಪ್ತುಮೇವೇತಿ ಮನ್ಯೇ ।
ಇದಂ ಬಿಲ್ವಪತ್ರಾವೃತಂ ಲಿಂಗಮೀಶಂ
ಸಮಸ್ತಾರ್ಥದಾನೋದ್ಯತಂ ಸರ್ವದಾಪಿ ॥೮೪॥

ಪ್ರಪಶ್ಯಾಮಿ ತುಂಗಾನಿ ಲಿಂಗಾನ್ಯಭಂಗಾ
ನ್ಯಪಾರಾಣಿ ತದ್ದರ್ಶನೇನೈವ ಮುಕ್ತಿಃ ।
ಭವಿತ್ರೀ ಮಮೇಶಾನ ನೂನಂ ನ ಯಾಚೇ
ನ ಯಾಚೇಽನ್ಯದನ್ಯತ್ರ ವಾಂಛಾ ಕುತಃ ಸ್ಯಾತ್ ॥೮೫॥

ನ ಚೇಂದ್ರಾದಿಲೋಕೇಷು ವಾಂಛಾ ಮಹೇಶ
ಸ್ಮರಾರೇ ಭವತ್ಪಾದಪದ್ಮೇ ಶಪಾಮಿ ।
ನಿಧಿಂ ಪ್ರಾಪ್ಯ ಕೋ ವಾ ಮುಹುಃ ಕಾಚಖಂಡಂ
ಸ್ವತುಂಡೇನ ಗೃಹ್ಣಾತಿ ಚಂಡಾಲವೃತ್ತಿಃ ॥೮೬॥

ನನ್ನ ಶರೀರವನ್ನು ಉನ್ನತವಾದ ಈ ಶಿವಲಿಂಗದ ಸನ್ನಿಧಿಯಲ್ಲಿ ಅರ್ಪಿಸಿದರೆ ನಿನ್ನ ಸನ್ನಿಧಿಯು ಲಭಿಸುವುದೆಂದು ಭಾವಿಸುವೆನು. ಓ ಸ್ವಾಮಿಯೇ, ಬಿಲ್ವಪತ್ರೆಗಳಿಂದ ಸುತ್ತಲೂ ಆವೃತವಾಗಿರುವ ಈ ನಿನ್ನ ಲಿಂಗವು ಸಕಲ ಇಷ್ಟಾರ್ಥಗಳನ್ನೂ ದಯಪಾಲಿಸುವುದಲ್ಲವೆ! ॥೮೪॥

ಓ ಪ್ರಭುವೇ, ಉನ್ನತವಾದ ಈ ಶಿವಲಿಂಗಗಳನ್ನು ನೋಡುವುದರಿಂದಲೇ ಮುಕ್ತಿಯು ಸಂಭವಿಸುವುದು. ಹೀಗಿರುತ್ತಿರಲು ಮುಕ್ತಿಯನ್ನಲ್ಲದೇ ಇನ್ನಾವ ಫಲವನ್ನು ನಿನ್ನ ಸನ್ನಿಧಿಯಲ್ಲಿ ಪ್ರಾರ್ಥಿಸಲಿ? ಅಥವಾ ಶಾಶ್ವತವಾದ ಮೋಕ್ಷಸುಖಕ್ಕಿಂತಲೂ ಇತರವಾದ ಫಲದಲ್ಲಿ ಇಚ್ಛೆಯು ಹೇಗೆತಾನೇ ಸಂಭವಿಸುವುದು? ॥೮೫॥

ಓ ಮಹೇಶನೇ, ನಾನು ಇಂದ್ರಲೋಕವೇ ಮುಂತಾದ ಲೋಕಗಳನ್ನು ಬಯಸುವುದಿಲ್ಲ. ಇದನ್ನು ನಿನ್ನ ಪಾದಪದ್ಮಗಳ ಸನ್ನಿಧಿಯಲ್ಲಿ ಪ್ರಮಾಣಮಾಡಿ ಹೇಳುವೆನು. ಯಾವನಾದರೂ ಅತುಲವಾದ ಐಶ್ವರ್ಯವನ್ನು ಹೊಂದಿ, ಅನಂತರ ತುಚ್ಛವಾದ ಗಾಜಿನ ಚೂರುಗಳನ್ನು ಸ್ವೀಕರಿಸುವನೇ? ಹಾಗೆ ಅದನ್ನು ತೆಗೆದುಕೊಂಡಲ್ಲಿ ಅವನು ಮೂರ್ಖನೇ ಅಲ್ಲವೆ! ॥೮೬॥

ದೃಢಾ ಭಕ್ತಿರೀಶಾನಪಾದಾರವಿಂದೇ
ಮಮಾಸ್ತ್ವಸ್ತು ನಿತ್ಯಂ ಮಮಾಸ್ತ್ವಸ್ತು ಸಾ ಮೇ ।
ಸಮರ್ಥಾ ಹಿ ಧರ್ಮಾರ್ಥಕಾಮಪ್ರದಾನೇ
ತಥಾ ಮೋಕ್ಷದಾನೇ ಸಮರ್ಥಾ ಮಹೇಶ ॥೮೭॥

ಇತಿ ಸ್ತುತ್ವಾ ಪ್ರಹೃಷ್ಟಾಂತಾನ್ನತ್ವಾ ದೇವಾಸ್ತತಃ ಪರಂ ।
ತಾನೂಚುಃ ಶಿವಪೂಜಾಯಾಃ ಸ್ವರೂಪಂ ಕಿಮಿತಿ ಪ್ರಿಯೇ ॥೮೮॥

|| ಮುನಯ ಊಚುಃ ||

ಸಾಧು ಪೃಷ್ಟಮಿದಂ ಪ್ರಾಜ್ಞಾಃ ಶಿವಪೂಜನಸಾಧನಂ ।
ಶಿವಾರ್ಚನಸ್ವರೂಪಂ ಚ ವೇದೋಕ್ತಮಧುನೋಚ್ಯತೇ ॥೮೯॥

ಸ್ನಾತ್ವಾ ಜಲೈಃ ಸಮುದ್ಧೂಲ್ಯ ಭಸ್ಮನಾಂಗಾನಿ ಸಾದರಂ ।
ಅಗ್ನಿರಿತ್ಯಾದಿಭಿರ್ಮಂತ್ರೈಃ ಕೃತ್ವಾ ಭಸ್ಮಾಭಿಮಂತ್ರಣಂ ॥೯೦॥

ನನಗೆ ಪರಮೇಶ್ವರನ ಅಡಿದಾವರೆಗಳಲ್ಲಿ ದೃಢವಾದ ಭಕ್ತಿಯುಂಟಾಗಲಿ. ಅದೇ ಧರ್ಮಾರ್ಥಕಾಮಮೋಕ್ಷಗಳೆಂಬ ಚತುರ್ವಿಧಗಳಾದ ಪುರುಷಾರ್ಥಗಳನ್ನು ದಯಪಾಲಿಸುವುದರಲ್ಲಿ ಸಮರ್ಥವಾಗಿರುವುದು. ||೮೭||

ದೇವತೆಗಳು ಈ ರೀತಿಯಲ್ಲಿ ಸ್ತುತಿಸಿ, ಶಿವಸ್ತೋತ್ರದಿಂದ ಸಂತುಷ್ಟರಾದ ಆ ಕಶ್ಯಪಾದಿಮುನಿಗಳನ್ನು ನೋಡಿ, ಶಿವಪೂಜೆಯ ಸ್ವರೂಪವನ್ನು ಹೇಳಬೇಕೆಂದು ಕೇಳಿದರು. ||೮೮||

ಆಗ ಮುನಿಗಳು ದೇವತೆಗಳನ್ನು ಕುರಿತು ಹೀಗೆಂದರು—ಎಲೈ ದೇವತೆಗಳಿರಾ, ನಿಮ್ಮ ಈ ಪ್ರಶ್ನೆಯು ಸಮಂಜಸವಾಗಿರುವುದು. ಈಗ ಶಿವಪೂಜೆಯ ಸಾಧನಗಳನ್ನೂ ಮತ್ತು ಅದರ ಮಹಿಮೆಯನ್ನೂ ವೇದೋಕ್ತವಾದ ರೀತಿಯಿಂದ ನಿಮಗೆ ತಿಳಿಸುವೆವು. ||೮೯||

ಮೊದಲು ಶುದ್ಧವಾದ ನೀರಿನಲ್ಲಿ ಸ್ನಾನಮಾಡಿ ಶರೀರಾದ್ಯಂತವೂ ಭಸ್ಮವನ್ನು ಲೇಪಿಸಿ, "ಅಗ್ನಿರಿತಿಭಸ್ಮ" "ವಾಯುರಿತಿಭಸ್ಮ" ಎಂಬಿವೇ ಮುಂತಾದ ಮಂತ್ರಗಳಿಂದ ಭಸ್ಮವನ್ನು ಅಭಿಮಂತ್ರಿಸಿ ಭಸ್ಮತ್ರಿಪುಂಡ್ರವನ್ನು ಧರಿಸಿಕೊಳ್ಳ

ತ್ರಿಪುಂಡ್ರಧಾರಣಂ ಕೃತ್ವಾ ಕೃತ್ವಾ ರುದ್ರಾಕ್ಷಧಾರಣಂ ।
ಬಿಲ್ವಮೂಲೇ ಸಂನಿವಿಶ್ಯ ಜಪ್ತ್ವಾ ಮಂತ್ರಂ ಷಡಕ್ಷರಂ ॥೯೧॥

ಬಿಲ್ವವೃಕ್ಷ ನಮಸ್ತೇಽಸ್ತು ಶಿವಪೂಜನಸಾಧನ ।
ಮೂಲತೋ ಭವರೂಪಾಯ ಮಧ್ಯತೋ ಮೃಡರೂಪಿಣೇ ॥೯೨॥

ಅಗ್ರತಃ ಶಿವರೂಪಾಯ ಪತ್ರೈರ್ವೇದಸ್ವರೂಪಿಣೇ ।
ಸ್ಕಂಧೇ ವೇದಾಂತರೂಪಾಯ ತರುರಾಜಾಯ ತೇ ನಮಃ ॥೯೩॥

ನಮಸ್ತೇ ಬಿಲ್ವತರವೇ ಭಾನುಸೋದರ ತೇ ನಮಃ ।
ಶಿವಪೂಜೋದ್ಯತಾಭೀಷ್ಟಸಾಧನಾಯ ನಮೋ ನಮಃ ॥೯೪॥

ಇತಿ ಸಂಪ್ರಾರ್ಥಿತಂ ಬಿಲ್ವಂ ನತ್ವಾ ಕೃತ್ವಾ ಪ್ರದಕ್ಷಿಣಂ ।
ಕೃತಾಂಜಲಿಪುಟೋ ಭೂತ್ವಾ ಪ್ರಾರ್ಥಯೇತ್ಪುನರಾದರಾತ್ ॥೯೫॥

ಬೇಕು. ಬಳಿಕ ರುದ್ರಾಕ್ಷಮಾಲಿಕೆಯನ್ನು ಹಾಕಿಕೊಂಡು ಬಿಲ್ವವೃಕ್ಷದ ಕೆಳಗಡೆ ಕುಳಿತು ಶಿವಷಡಕ್ಷರೀಮಂತ್ರವನ್ನು ಜಪಿಸಿ, ಮುಂದೆ ಹೇಳುವ ರೀತಿಯಲ್ಲಿ ವೃಕ್ಷವನ್ನು ಪ್ರಾರ್ಥಿಸಬೇಕು. ॥೯೦-೯೧॥

"ಓ ಬಿಲ್ವವೃಕ್ಷವೇ, ನಿನ್ನನ್ನು ವಂದಿಸುವೆನು, ನೀನು ಶಿವಪೂಜೆಗೆ ಮುಖ್ಯ ಸಾಧನವಾಗಿರುವೆ. ನಿನ್ನ ಮೂಲದಲ್ಲಿಯೂ ಮಧ್ಯದಲ್ಲಿಯೂ ಅಗ್ರದಲ್ಲಿಯೂ ಕ್ರಮವಾಗಿ ಭವ, ಮೃಡ, ಶಿವ ಎಂಬ ನಾಮಧೇಯಗಳಿಂದ ತ್ರಿಮೂರ್ತಿಗಳೂ ನೆಲಸಿರುವರು. ನಿನ್ನ ಪತ್ರಗಳೇ ವೇದಗಳಾಗಿರುವುವು. ನಿನ್ನ ಸ್ಕಂಧದ ಭಾಗವೇ (ಮರದ ಕೊಂಬೆಗಳು ಶಾಖೋಪಶಾಖೆಗಳಾಗಿ ಯಾವ ಪ್ರದೇಶದಿಂದ ಆವಿರ್ಭವಿಸುವುವೋ ಆ ಪ್ರದೇಶಕ್ಕೆ ಸ್ಕಂಧವೆಂದು ಹೆಸರು.) ಉಪನಿಷತ್ತುಗಳು. ವೃಕ್ಷರಾಜನಾದ ನಿನಗೆ ನಮಸ್ಕಾರ. ॥೯೨-೯೩॥

ಓ, ಬಿಲ್ವವೃಕ್ಷವೇ, ಸೂರ್ಯನ ಸಹೋದರನಾದ ನಿನ್ನನ್ನು ವಂದಿಸುವೆನು. ನೀನು, ಈಶ್ವರಾರಾಧನೆಯಲ್ಲಿ ಆಸಕ್ತರಾದವರ ಸಕಲ ಇಷ್ಟಾರ್ಥಗಳನ್ನೂ ಪೂರೈಸುವುದರಲ್ಲಿ ಸಾಧನನಾಗಿರುವೆ. ಅಂತಹ ನಿನಗೆ ನಮಸ್ಕರಿಸುವೆನು." ॥೯೪॥

ಈರೀತಿ ಬಿಲ್ವವೃಕ್ಷವನ್ನು ಪ್ರಾರ್ಥಿಸಿ, ಪ್ರದಕ್ಷಿಣೆ ಮಾಡಿ, ಅಂಜಲಿಬದ್ಧನಾಗಿ ಪುನಃ ಭಕ್ತಿಯಿಂದ, ಬಿಲ್ವವನ್ನು ಮುಂದೆ ಹೇಳುವಂತೆ ಪ್ರಾರ್ಥಿಸಬೇಕು.॥೯೫॥

ವೇದರೂಪಾಣಿ ಪತ್ರಾಣಿ ಶಿವಪೂಜಾರ್ಥಮದ್ಯ ತೇ ।
ಪ್ರಾರ್ಥಯಾಮೀತಿ ಸಂಪ್ರಾರ್ಥ್ಯ ಭವೇತ್ತದ್ಗ್ರಹಣೋದ್ಯತಃ ॥೯೬॥

ರುದ್ರಾಧ್ಯಾಯಂ ಜಪನ್ನೇವ ಸ್ಮರನ್ನೇವ ಮಹೇಶ್ವರಂ ।
ಗೃಹೀತ್ವಾ ಬಿಲ್ವಪತ್ರಾಣಿ ಪೂಜಯೇದ್ಗಿರಿಜಾಪತಿಂ ॥೯೭॥

ಸುಬಿಲ್ವಪತ್ರಪೃಷ್ಠೇನ ಯೋಜಯೇಲ್ಲಿಂಗಮಸ್ತಕಂ ।
ಉತ್ತಾನೈಃ ಪೂಜಯೇತ್ಪತ್ರೈರುತ್ತರಾಗ್ರೈರ್ಜಲಾನ್ವಿತೈಃ ॥೯೮॥

ಯಥೋತ್ಪನ್ನೇನ ಪುಷ್ಪೇಣ ಪೂಜಯೇದ್ಗಿರಿಜಾಪತಿಂ ।
ಸರ್ವಾತ್ಮನಾ ವೃಂತಹೀನಂ ಬೃಹತೀಪುಷ್ಪಮರ್ಪಯೇತ್ ॥೯೯॥

"ಎಲೈ, ಬಿಲ್ವವೃಕ್ಷವೇ, ವೇದಸ್ವರೂಪವಾಗಿರುವ ನಿನ್ನ ಈ ಪತ್ರಗಳನ್ನು ಶಿವಪೂಜಾರ್ಥವಾಗಿ ಯಾಚಿಸುತ್ತೇನೆ." ಹೀಗೆಂದು ಪ್ರಾರ್ಥಿಸಿ, ಪತ್ರೆಗಳನ್ನು ಕುಯ್ಯಲು ಪ್ರಾರಂಭಿಸಬೇಕು. ॥೯೬॥

ಬಳಿಕ, ಬಿಲ್ವಪತ್ರೆಗಳನ್ನು ರುದ್ರಾಧ್ಯಾಯ ಜಪಪೂರ್ವಕವಾಗಿ ಮಹೇಶ್ವರನನ್ನು ಸ್ಮರಿಸುತ್ತಾ ಕೊಯ್ಯಬೇಕು. ಅನಂತರ ಮಹಾದೇವನನ್ನು ಸ್ಮರಿಸಿ ಪತ್ರೆಗಳಿಂದ ಅವನನ್ನು ಪೂಜಿಸಬೇಕು. ॥೯೭॥

ಪೂಜಾಕಾಲದಲ್ಲಿ ನೂತನವಾದ ಬಿಲ್ವಪತ್ರೆಯ ತಳಭಾಗವನ್ನು ಲಿಂಗದ ಮೇಲೆ ಇರಿಸಬೇಕು. ಪತ್ರೆಗಳ ಅಗ್ರವನ್ನು ಉತ್ತರದಿಕ್ಕಿಗೆ ಅಭಿಮುಖವಾಗಿ ಮಾಡಿ, ಅವುಗಳ ಮೇಲುಭಾಗವು ಕಾಣುವಂತೆ ಶಿವನನ್ನು ಅರ್ಚಿಸಬೇಕು. ಮತ್ತು ಅವುಗಳನ್ನು ಮೊದಲು ನೀರಿನಿಂದ ಪ್ರೋಕ್ಷಿಸಬೇಕು. ॥೯೮॥

ಆಗ ತಾನೇ ಅರಳಿರುವ ಹೂವಿನಿಂದ ಶಿವನನ್ನು ಪೂಜಿಸಬೇಕು. ಹೆಗ್ಗುಳ್ಳದ ಪುಷ್ಪದ ತೊಟ್ಟನ್ನು ತೆಗೆದು ಆ ಹೂವನ್ನು ದೇವರಿಗೆ ಸಮರ್ಪಿಸಬೇಕು. ॥೯೯॥

ಚಂಪಕಾಮಲ್ಲಿಕಾಜಾಜೀಕರವೀರಾಣಿ ಕಾನಿ ತು ।
ಯಥೇಷ್ಟಮೇವ ದೇಯಾನಿ [1] ಸಿತಾನ್ಯಪ್ಯಸಿತಾನಿ ಚ ॥೧೦೦॥

ಅರ್ಕಂ ವಾ ಕರವೀರಂ ವಾ ಬಕಂ ಕನಕಮೇವ ವಾ ।
ದತ್ವಾ ಲಿಂಗೇ ಶಿವಂ ಸ್ಮೃತ್ವಾ ಭಕ್ತ್ಯಾ ಪಾಪೈಃ ಪ್ರಮುಚ್ಯತೇ ॥೧೦೧॥

ವೃಂತಹೀನಾನಿ ಪದ್ಮಾನಿಕುಮುದಾನಿ ನವಾನ್ಯಪಿ ।
ಶಿವಪೂಜೋಪಯುಕ್ತಾನಿ ನಾನ್ಯಾನೀತ್ಯವಧಾರಿತಂ ॥೧೦೨॥

ನವಾರುಣೈರ್ಬಿಲ್ವಪತ್ರೈಃ ಪೂಜಯಿತ್ವಾ ಮಹೇಶ್ವರಂ ।
ಬ್ರಹ್ಮಹಾಪಿ ವಿಮುಕ್ತಃ ಸ್ಯಾದ್ಭೂತಿರುದ್ರಾಕ್ಷಭೂಷಣಃ ॥೧೦೩॥

ಉದ್ಧೂಲ್ಯ ಭಸ್ಮನಾಂಗಾನಿ ಧೃತ್ವಾ ತಿರ್ಯಕ್ತ್ರಿಪುಂಡ್ರಕಂ ।
ಬಿಲ್ವಪತ್ರೈಃ ಸಮಭ್ಯರ್ಚ್ಯ ಮುಕ್ತೋ ಭವತಿ ಮಾನವಃ ॥೧೦೪॥

ಸಂಪಿಗೆ, ಮಲ್ಲಿಗೆ, ಜಾಜೀ, ಕಣಗಲು ಮುಂತಾದ ಹೂಗಳನ್ನು ಹೇರಳವಾಗಿ ಶಿವನಿಗೆ ಸಮರ್ಪಿಸಬೇಕು. ಆ ಹೂವುಗಳು ಮಾಲಾಕಾರದಲ್ಲಿರಬಹುದು. ಅಥವಾ ಬಿಡಿ ಬಿಡಿಯಾಗಿಯಾದರೂ ಇರಬಹುದು. ॥೧೦೦॥

ಎಕ್ಕದಹೂವು, ಕರವೀರಪುಷ್ಪ, ಶಿವಮಲ್ಲಿಪುಷ್ಪ, ಕನಕಪುಷ್ಪ, ಇವುಗಳನ್ನು ಲಿಂಗದ ಮೇಲಿರಿಸಿ ಭಕ್ತಿ ಪುರಃಸರವಾಗಿ ಶಿವನನ್ನು ಸ್ಮರಿಸಬೇಕು. ಅದರಿಂದ ಸಕಲಪಾಪಗಳೂ, ನಾಶವಾಗುವುವು. ॥೧೦೧॥

ಕೆಂಪು ಮತ್ತು ಬಿಳಿಯ ತಾವರೆ ಹೂಗಳನ್ನು ಬಿಡಿಬಿಡಿಯಾಗಿ ತೊಟ್ಟನ್ನು ಕಿತ್ತೇ ಪೂಜಿಸಬೇಕು. ಉಳಿದ ಹೂಗಳ ತೊಟ್ಟನ್ನು ಬಿಡಿಸಕೂಡದು.

ಚಿಗುರಾದ ಬಿಲ್ವಪತ್ರೆಗಳಿಂದ ಮಹೇಶ್ವರನನ್ನು ಪೂಜಿಸಿದರೆ, ಬ್ರಹ್ಮಹತ್ಯೆಯಿಂದುಂಟಾದ ಪಾಪವನ್ನೂ ಸಹ ಕಳೆದುಕೊಳ್ಳಬಹುದು. ॥೧೦೩॥

ಶರೀರವನ್ನು ಭಸ್ಮದಿಂದ ಲೇಪಿಸಿ, ಹಣೆಯಲ್ಲಿ ಅಡ್ಡಲಾಗಿ ಭಸ್ಮ ತ್ರಿಪುಂಡ್ರವನ್ನು ಧರಿಸಿ, ಬಿಲ್ವಪತ್ರೆಗಳಿಂದ ಲಿಂಗವನ್ನು ಪೂಜಿಸಿದರೆ ಅದರಿಂದ ಮನುಜನು ಮೋಕ್ಷವನ್ನು ಹೊಂದುವನು. ॥೧೦೪॥

---

(1) (ಬದ್ಧೇ ಸಂದಾನಿತಂ ಮೂತ ಮುದ್ಧಿತಂ ಸಾದಿತಂ ಸಿತಂ) ಎಂಬ ಕೋಶದಂತೆ ಸಿತಶಬ್ದವು 'ಷಿಙ್-ಬಂಧನೆ' ಎಂಬ ಧಾತುವಿನಿಂದ ನಿಷ್ಪನ್ನವಾಗಿ, ಬಂಧಿಸಲ್ಪಟ್ಟದ್ದು ಎಂಬರ್ಥವನ್ನು ಕೊಡುವುದು)

ಭಕ್ತ್ಯಾ ದತ್ವಾ ಮಹೇಶಾಯ ಕೋಮಲಂ ಬಿಲ್ವಪಲ್ಲವಂ ।
ಕೈಲಾಸಂ ಸಮವಾಪ್ನೋತಿ ಗೃಹಂ ಗೃಹಪತಿರ್ಯಥಾ ॥೧೦೫॥

ಸಂತಿ ಪತ್ರಾಣ್ಯನೇಕಾನಿ ಪ್ರಸೂನಾನ್ಯಪಿ ಕೋಟಿಶಃ ।
ಬಿಲ್ವಪತ್ರಾರ್ಪಣೇನೈವ ತುಷ್ಟೋ ಭವತಿ ಶಂಕರಃ ॥೧೦೬॥

ಏಕಸ್ಯ ಬಿಲ್ವಪತ್ರಸ್ಯ ಶಿವಲಿಂಗೇ ಪ್ರದಾನತಃ ।
ಯತ್ಪುಣ್ಯಂ ಸಮವಾಪ್ನೋತಿ ತದ್ವೇದ ಗಿರಿಜಾಪತಿಃ ॥೧೦೭॥

ಬಿಲ್ವಪತ್ರಪ್ರದಾನಸ್ಯ ಪುಣ್ಯಮೇತಾವದಿತ್ಯಪಿ ।
ವೇದೈರಪಿ ನ ವಿಜ್ಞಾತಮನ್ಯೇಷಾಂ ತತ್ರ ಕಾ ಕಥಾ ॥೧೦೮॥

ಬಿಲ್ವೇ ಭಸ್ಮನಿ ರುದ್ರಾಕ್ಷೇ ಶಂಕರಸ್ಯ ಯಥಾ ರುಚಿಃ ।
ತಥಾ ರುಚಿರ್ಭವಾನ್ಯಾಂ ಚ ತದನ್ಯತ್ರ ರುಚಿರ್ನ ತು ॥೧೦೯॥

ಈಶ್ವರಾರಾಧಕನಾದ ಗೃಹಸ್ಥನು ಭಕ್ತಿಪುರಃಸರವಾಗಿ ಕೋಮಲವಾದ ಬಿಲ್ವಪತ್ರೆಗಳಿಂದ ಶಿವನನ್ನು ಅರ್ಚಿಸಿದರೆ, ಅಂತ್ಯದಲ್ಲಿ ಅವನಿಗೆ ಕೈಲಾಸ ಲೋಕವು ಪ್ರಾಪ್ತವಾಗುವುದು. ॥೧೦೫॥

ಲೋಕದಲ್ಲಿ ಅಸಂಖ್ಯಾತವಾದ ನಾನಾಬಗೆಯ ಪತ್ರೆಗಳೂ ಮತ್ತು ಪುಷ್ಪಗಳೂ ಇರುವುವು. ಆದರೆ ಈಶ್ವರನು ಬಿಲ್ವಪತ್ರೆಯ ಪೂಜೆಯಿಂದಲೇ ಸಂತುಷ್ಟನಾಗುವನಲ್ಲದೇ, ಇತರ ಯಾವ ಪತ್ರಪುಷ್ಪಗಳಿಂದಲೂ ಸುಪ್ರೀತನಾಗಲಾರನು. ॥೧೦೬॥

ಒಂದೇಒಂದು ಬಿಲ್ವಪತ್ರವನ್ನು ಶಿವಲಿಂಗದಲ್ಲಿ ಅರ್ಪಿಸುವುದರಿಂದ ಶಿವಪೂಜಕನು ಯಾವ ವಿಧವಾದ ಪುಣ್ಯವನ್ನು ಪಡೆಯುವನೆಂಬುದನ್ನು ಶಿವನೇ ಅರಿತಿರುವನಲ್ಲದೇ, ಮನುಷ್ಯ ಮಾತ್ರದಿಂದ ಅದನ್ನು ವರ್ಣಿಸಲು ಸಾಧ್ಯವಿಲ್ಲ. ॥೧೦೭॥

ಬಿಲ್ವಪತ್ರಾರ್ಚನೆಯಿಂದ ಲಭಿಸುವ ಪುಣ್ಯದ ಮಹಿಮೆಯನ್ನು ವೇದಗಳೂ ಸಹ ಅರಿತಿರುವುದಿಲ್ಲ. ಹೀಗಿರುವಲ್ಲಿ, ಅಜ್ಞರಾದ ಇತರರು ಅದನ್ನು ಹೇಗೆ ತಾನೇ ತಿಳಿಯುವರು ? ॥೧೦೮॥

ಶಿವನಿಗೆ ಬಿಲ್ವ, ಭಸ್ಮ, ರುದ್ರಾಕ್ಷ ಇವುಗಳಲ್ಲಿ ಅತಿಶಯವಾದ ಪ್ರೀತಿಯಿರುವುದು. ಬಿಲ್ವದಳಗಳಲ್ಲಿ ಇರುವ ಪ್ರೀತಿಗೆ ಸದೃಶವಾದ ಪ್ರೀತಿಯು ತನ್ನ ಪ್ರೇಯಸಿ

ಅಖಂಡಾನಿ ಸಖಂಡಾನಿ ಬಿಲ್ವಪತ್ರಾಣಿ ತೇಷ್ವಪಿ ।
ಅತಿಪ್ರೀತಿರಖಂಡೇಷು ದುರ್ಲಭಾನ್ಯೇವ ತಾನಿ ತು ॥೧೧೦॥

ಲಿಂಗಾನಿ ದುರ್ಲಭಾನ್ಯೇವ ಬಿಲ್ವಪತ್ರಾಣ್ಯಪಿ ಸ್ವತಃ ।
ಸುಲಭಾನಿ ಭವಂತ್ಯೇವ ಕ್ವಚಿದ್ಭಾಗ್ಯವತಾಂ ನೃಣಾಂ ॥೧೧೧॥

ನವಾನಿ ಬಿಲ್ವಪತ್ರಾಣಿ ದುರ್ಲಭಾನಿ ಭವಂತಿ ಚ ।
ಅನವಾನ್ಯಪಿ ಸಂಪಾದ್ಯ ಪೂಜಯೇತ್ತೈರುಮಾಪತಿಂ ॥೧೧೨॥

ಬಿಲ್ವಪತ್ರಾಣಿ ದೇಯಾನಿ ಶುಷ್ಕಾಣಿ ಸ್ಫುಟಿತಾನ್ಯಪಿ ।
ಭಿನ್ನಾನ್ಯಪಿ ಚ ವಾ ಭಾಗ್ಯೈಶ್ಛಿದ್ರಾಣ್ಯಪಿ ಕದಾಚನ ॥೧೧೩॥

ಯಾದ ಪಾರ್ವತಿಯಲ್ಲಿ ತೋರುವುದಲ್ಲದೇ, ಇತರ ಯಾವ ವಸ್ತುಗಳಲ್ಲಿಯೂ ಕಾಣುವುದಿಲ್ಲ. ||೧೦೯||

ಬಿಲ್ವಪತ್ರೆಗಳು ಎರಡು ಬಗೆಯಾಗಿರುವುವು. ಅವುಗಳಲ್ಲಿ ಕೆಲವು ಪತ್ರೆಗಳು ಕ್ರಿಮಿಕೀಟಗಳ ಬಾಧೆಗೆ ಗುರಿಯಾಗದೇ ಅಖಂಡವಾಗಿರುವುವು. ಇನ್ನು ಕೆಲವು ಪತ್ರೆಗಳು ಕ್ರಿಮಿಕೀಟಗಳ ಬಾಧೆಯಿಂದಲೂ ಮತ್ತು ಇತರ ಕಾರಣಗಳಿಂದಲೂ ಚೂರಾಗಿರುವುವು. ಇದನ್ನು ಖಂಡಪತ್ರೆಯೆನ್ನುವರು. ಎರಡು ಬಗೆಯ ಪತ್ರೆಗಳನ್ನೂ ಶಿವನು ಪ್ರೀತಿಸುವನು. ಆದರೆ ಅಖಂಡವಾದ ಪತ್ರಗಳಲ್ಲಿ ಅತಿಶಯವಾದ ಪ್ರೀತಿ ಯಿರುವುದು. ಅಂತಹ ಅಖಂಡವಾದ ಪತ್ರಗಳು ಲಭಿಸುವುದೇ ವಿರಳ. ||೧೧೦||

ಸ್ವಾಭಾವಿಕವಾಗಿ ಶಿವಲಿಂಗಗಳೂ ಮತ್ತು ಬಿಲ್ವಪತ್ರೆಗಳೂ ಲಭಿಸುವುದೇ ಅತ್ಯಂತ ವಿರಳ. ಪುಣ್ಯಶಾಲಿಗಳಿಗಾದರೋ ಭಾಗ್ಯವಿಶೇಷದಿಂದ ಅವುಗಳು ಲಭಿಸು ವುವು. ||೧೧೧||

ಹೊಸದಾದ ಬಿಲ್ವಪತ್ರೆಗಳು ಅತ್ಯಂತ ದುರ್ಲಭವಾದರೆ, ಹಳೆಯ ಪತ್ರೆ ಗಳನ್ನಾದರೂ ಸಂಗ್ರಹಿಸಿ ಅವುಗಳಿಂದ ಉಮಾಕಾಂತನಾದ ಶಿವನನ್ನು ಪೂಜಿಸ ಬಹುದು. ||೧೧೨||

ಅಖಂಡವಾದ ಒಳ್ಳೆಯ ಬಿಲ್ವಪತ್ರೆಗಳು ಸಿಕ್ಕದಿದ್ದರೆ, ಅವುಗಳ ಚೂರುಗಳ ನ್ನಾಗಲಿ, ರಂಧ್ರಯುಕ್ತವಾದ ಪತ್ರೆಗಳನ್ನಾಗಲಿ ಈಶ್ವರನಿಗೆ ಅರ್ಪಿಸಬಹುದು.||೧೧೩||

ಯಾವತ್ತದ್ರಕ್ಷಣಂ ಶಕ್ಯಂ ತಾವತ್ಕೃತ್ವೈವ ಸಾದರಂ ।
ದೇಯಂ ಬಿಲ್ವಂ ಮಹೇಶಾಯ ತಚ್ಚೂರ್ಣಮಪಿ ತತ್ಪ್ರಿಯಂ॥೧೧೪॥

ದುರ್ಲಭಂ ಬಿಲ್ವಚೂರ್ಣಂ ಚೇದ್ಬಿಲ್ವಚಂದನಮೇವ ವಾ ।
ದದ್ಯಾನ್ನಿತ್ಯಂ ಮಹೇಶಾಯ ತೇನ ತುಷ್ಯತಿ ಶಂಕರಃ ॥೧೧೫॥

ಬಿಲ್ವಪತ್ರೈರನಭ್ಯರ್ಚ್ಯ ತಚ್ಚೂರ್ಣೈಸ್ತಸ್ಯ ಚಂದನೈಃ ।
ನ ಭೋಕ್ತವ್ಯಂ ನ ಶೇತವ್ಯಂ ಕದಾಪಿ ದ್ವಿಜಜನ್ಮನಾ ॥೧೧೬॥

ಅಪಾರಾಣಿ ಸುಗಂಧೀನಿ ಪ್ರಸೂನಾನಿ ಮಹೇಶ್ವರಃ ।
ಬಿಲ್ವಾಭಾವೇ ನ ಗೃಹ್ಣಾತಿ ತೇನ ಪ್ರೀತಃ ಸದಾಶಿವಃ ॥೧೧೭॥

ಸೂರ್ಯಾಭಾವೇ ಯಥಾ ಧ್ವಾಂತಂ ನ ನಶ್ಯತಿ ತಥಾಽಸುರಾಃ ।
ಬಿಲ್ವಪತ್ರಾರ್ಚನಾಭಾವೇ ನ ಪಾಪಂ ಯಾತಿ ಸರ್ವಥಾ ॥೧೧೮॥

ಬಿಲ್ವಪತ್ರೆಯನ್ನು ಸಾಧ್ಯವಾದಷ್ಟು ಜೋಪಾನದಿಂದ ರಕ್ಷಿಸಿ, ಅದನ್ನು ಈಶ್ವರನಲ್ಲಿ ಸಮರ್ಪಿಸಬೇಕು. ಅದರ ಚೂರ್ಣವೂ ಸಹ ಈಶ್ವರನಿಗೆ ಪ್ರಿಯವಾದುದು. ||೧೧೪||

ಬಿಲ್ವಚೂರ್ಣವು ದೊರಕದಿದ್ದರೆ, ಅದರ ಚಂದನವನ್ನು ಮಾಡಿ ಅದನ್ನು ಶಿವನಿಗೆ ಅರ್ಪಿಸಬೇಕು. ಅದರಿಂದ ಈಶ್ವರನು ಸುಪ್ರೀತನಾಗುವನು. ||೧೧೫||

ಒಂದುವೇಳೆ ಬಿಲ್ವಪತ್ರೆಗಳು ದೊರಕದಿದ್ದರೆ ಅದರ ಚೂರ್ಣದಿಂದಾಗಲಿ ಚಂದನದಿಂದಾಗಲಿ ಶಿವನನ್ನು ಅರ್ಚಿಸದೆ ಎಂದಿಗೂ ಭೋಜನವನ್ನು ಮಾಡಬಾರದು. ಇದು ಬ್ರಾಹ್ಮಣನ ಮುಖ್ಯ ಧರ್ಮ. ||೧೧೬||

ಬಿಲ್ವಪತ್ರೆಯೊಂದಿಲ್ಲದಿದ್ದರೆ, ಸುಗಂಧಯುಕ್ತವಾದ ಅಸಂಖ್ಯಾಕವಾದ ಎಷ್ಟೇ ಪುಷ್ಪಗಳಿಂದರ್ಚಿಸಿದರೂ ಅದರಿಂದ ಮಹೇಶ್ವರನು ಸುಪ್ರೀತನಾಗುವುದಿಲ್ಲ. ಆದುದರಿಂದ, ಪುಷ್ಪಗಳು ಇರಲಿ ಇಲ್ಲದಿರಲಿ. ಬಿಲ್ವಪತ್ರೆಯನ್ನು ಮಾತ್ರ ಅರ್ಪಿಸಲೇ ಬೇಕು. ಅಷ್ಟರಿಂದಲೇ ಶಿವನು ಸುಪ್ರೀತನಾಗುವನು. ||೧೧೭||

ಎಲೈ, ದೇವತೆಗಳಿರಾ ! ಸೂರ್ಯನು ಉದಯಿಸದಿದ್ದರೆ, ಕತ್ತಲೆಯು ಹೇಗೆ ನಾಶ ಹೊಂದುವುದಿಲ್ಲವೋ ಅದರಂತೆ ಶಿವನಿಗೆ ಬಿಲ್ವಪತ್ರೆಯನ್ನು ಸಮರ್ಪಿಸದಿದ್ದರೆ, ಪಾಪವು ಎಂದಿಗೂ ಕ್ಷಯಿಸುವುದಿಲ್ಲ. ||೧೧೮||

ಬಿಲ್ವೀತರುಜವಾತೇ ವಾ ಯಾ ಪ್ರೀತಿರ್ಗಿರಿಜಾಪತೇಃ ।
ಸಾ ಪ್ರೀತಿರ್ಪುಷ್ಪವಾತೇಽಪಿ ಶಂಕರಸ್ಯ ನ ಜಾಯತೇ ॥೧೧೯॥

ಸೂರ್ಯಃ ಸೃಷ್ಟೋ ಮಹೇಶೇನ ಧ್ವಾಂತಸಂಹರಣಾಯ ಸಃ ।
ಬಿಲ್ವಃ ಸೃಷ್ಟಃ ಶಿವೇನೈವ ಪಾಪನಾಶಾಯ ಕೇವಲಂ ॥೧೨೦॥

ಆದಿತ್ಯಃ ಸಮುಭೂತೋಽಸ್ಮಾತ್ತಸ್ಮಾದ್ಬಿಲ್ವಂ ಪ್ರಜಾಯತೇ ।
ಉಪವಾಸಹಿತಃ ಸೋಮಃ ಸ ತಯೋರ್ಜನಕೋ ಯತಃ ॥೧೨೧॥

ನೀಲೋತ್ಪಲಕೃತಾಂ ಮಾಲಾಂ ಶಂಕರಾಯ ಸಮರ್ಪಯೇತ್ ।
ಪ್ರಫುಲ್ಲಪದ್ಮಮಾಲಾಂ ಚ ಕುಡ್ಮಲೈರ್ನಾರ್ಚಯೇಚ್ಛಿವಂ ॥೧೨೨॥

ಕರವೀರಪ್ರಸೂನಾನಿ ಪ್ರಕ್ಷಿಪನ್ ಲಿಂಗಮಸ್ತಕೇ ।
ಮುಚ್ಯತೇ ಪಾತಕೈಃ ಸರ್ವೈರ್ಬ್ರಹ್ಮಹತ್ಯಾದಿಭಿಃ ಸುರಾಃ ॥೧೨೩॥

ಬಿಲ್ವವೃಕ್ಷದ ಮೇಲಿನಿಂದ ಬೀಸಿಬರುವ ಗಾಳಿಯಲ್ಲಿಯೂ ಸಹ ಈಶ್ವರನಿಗೆ ಅತ್ಯಂತ ಪ್ರೀತಿಯಿರುವುದು. ಅವನು, ಸುಗಂಧಯುಕ್ತವಾದ ಹೂವಿನ ಗಾಳಿಯನ್ನೂ ಸಹ ಹಾಗೆ ಪ್ರೀತಿಸುವುದಿಲ್ಲ. ॥೧೧೯॥

ಸೃಷ್ಟಿಕರ್ತನಾದ ಪರಮೇಶ್ವರನು ಕತ್ತಲೆಯನ್ನು ಹೋಗಲಾಡಿಸುವುದಕ್ಕೋಸ್ಕರ ಸೂರ್ಯನನ್ನು ಸೃಷ್ಟಿಸಿರುವಂತೆ, ಜನರ ಸಕಲ ಪಾಪಗಳನ್ನು ನಾಶಮಾಡುವುದಕ್ಕಾಗಿ ಬಿಲ್ವವೃಕ್ಷವೆಂಬ ದಿವ್ಯಸಾಧನವನ್ನು ಸೃಜಿಸಿರುವನು. ॥೧೨೦॥

ಈಶ್ವರನಿಂದ ಸೂರ್ಯನು ಉತ್ಪನ್ನವಾದಂತೆ ಬಿಲ್ವವೃಕ್ಷವೂ ಸಂಜನಿಸಿತು. ಈ ಎರಡು ಪದಾರ್ಥಗಳಿಗೂ ಜನಕನಾಗಿರುವ ಮಹಾದೇವನನ್ನು ಉಪವಾಸಾದಿಗಳಿಂದ ಶುದ್ಧನಾಗಿ ಭಕ್ತಿಯಿಂದರ್ಚಿಸಬೇಕು. ॥೧೨೧॥

ಕನ್ನೈದಿಲೆ ಮತ್ತು ಚೆನ್ನಾಗಿ ಅರಳಿರುವ ಕಮಲಪುಷ್ಪ ಇವುಗಳಿಂದ ರಚಿಸಲ್ಪಟ್ಟ ಮಾಲಿಕೆಯನ್ನು ಶಿವನಿಗೆ ಸಮರ್ಪಿಸಬೇಕು. ಆದರೆ ಮೊಗ್ಗುಗಳಿಂದ (ಅರಳದಿರುವ ಹೂವು) ಎಂದಿಗೂ ಶಿವನನ್ನು ಅರ್ಚಿಸಬಾರದು. ॥೧೨೨॥

ಎಲೈ ದೇವತೆಗಳೇ, ಯಾವ ಮನುಜನು ಕರವೀರಪುಷ್ಪಗಳಿಂದ ಶಿವನನ್ನು ಪೂಜಿಸುವನೋ, ಅವನು ಬ್ರಹ್ಮಹತ್ಯೆಯೇ ಮೊದಲಾದ ಮಹಾಪಾತಕಗಳನ್ನು ಗಳಿಸಿದ್ದರೂ, ಅವುಗಳಿಂದ ಬಿಡುಗಡೆಯನ್ನು ಹೊಂದುವನು. ॥೧೨೩॥

ಕರವೀರಪ್ರಸೂನೇನ ಯೋ ನಾರ್ಚಯತಿ ಶಂಕರಂ ।
ಸ ದರಿದ್ರೋ ಭವತ್ಯೇವ ಸವಂಶಃ ಪ್ರತಿಜನ್ಮನಿ ॥೧೨೪॥

ಮಂದಾರೈಃ ಕನಕೈರ್ವಾಪಿ ಯಃ ಸಾಯಂ ಶಿವಮರ್ಚಯೇತ್ ।
ಸ ಮುಕ್ತಃ ಪಾಪಕೋಟಿಭ್ಯೋ ಮುಕ್ತೋ ಭವತಿ ಮಾನವಃ ॥೧೨೫॥

ಬೃಹತೀಕುಸುಮೈರ್ನಿತ್ಯಂ ಯೋಽರ್ಚಯೇದ್ಗಿರಿಜಾಪತಿಂ ।
ಅಸ್ಥೂಲೈರಪಿ ವಾ ಸ್ಥೂಲೈರ್ಮುಚ್ಯತೇ ಪಾಪಬಂಧನಾತ್ ॥೧೨೬॥

ಯಃ ಪ್ರಯಚ್ಛತಿ ಶರ್ವಾಯ ಫುಲ್ಲಚಂಪಕಮಾಲಿಕಾಂ ।
ಸಾಯಂಕಾಲೇ ವಿಶೇಷೇಣ ಸ ಯಾತಿ ಶಿವಮಂದಿರಂ ॥೧೨೭॥

ಪುನ್ನಾಗಮಾಲಿಕಾಂ ದತ್ವಾ ಮಹೇಶಾಯ ನಿಶಾಮುಖೇ ।
ಮುಚ್ಯತೇ ಪಾಪಕೋಟಿಭ್ಯಃ ಸದ್ಯ ಏವ ನ ಸಂಶಯಃ ॥೧೨೮॥

ಯಾವನು ಕರವೀರಪುಷ್ಪದಿಂದ ಶಿವನನ್ನು ಅರ್ಚಿಸುವುದಿಲ್ಲವೋ, ಅವನು ಪ್ರತಿಜನ್ಮದಲ್ಲಿಯೂ ದರಿದ್ರನಾಗಿಯೇ ಹುಟ್ಟುವನು. ಅವನ ಸಂತತಿಯಲ್ಲಿ ಜನಿಸಿದವರೆಲ್ಲರೂ ಪ್ರತಿ ಜನ್ಮದಲ್ಲಿಯೂ ದರಿದ್ರರಾಗಿಯೇ ಜನಿಸುವರು. ॥೧೨೪॥

ಯಾವ ಮನುಜನು ಮಂದಾರಪುಷ್ಪಗಳಿಂದಾಗಲಿ ಅಥವಾ ಕನಕಪುಷ್ಪಗಳಿಂದಾಗಲಿ (ಕನಕಪುಷ್ಪವೆಂದರೆ ಸುವರ್ಣಮಯವಾದ ಪುಷ್ಪ ಎಂದರ್ಥ.) ಸಾಯಂಕಾಲದಲ್ಲಿ ಶಿವಪೂಜೆಯನ್ನಾಚರಿಸುವನೋ, ಅವನು ಹಿಂದೆ ಅನೇಕ ಪಾಪಗಳನ್ನು ಆಚರಿಸಿದ್ದರೂ ಅವುಗಳಿಂದ ಬಿಡುಗಡೆಯನ್ನು ಹೊಂದಿ ಅಂತ್ಯದಲ್ಲಿ ಶಾಶ್ವತವಾದ ಮೋಕ್ಷಪದವಿಯನ್ನು ಹೊಂದುವನು. ॥೧೨೫॥

ಬೃಹತೀಪುಷ್ಪಗಳಿಂದ ಶಿವನನ್ನು ಅರ್ಚಿಸುವವನು, ಸ್ಥೂಲ ಮತ್ತು ಸೂಕ್ಷ್ಮವಾದ ಸಕಲ ಪಾಪಗಳಿಂದಲೂ ಬಿಡುಗಡೆ ಹೊಂದುವನು. ॥೧೨೬॥

ಯಾವನು ಅರಳಿರುವ ಸಂಪಿಗೆಯ ಹೂವುಗಳ ಮಾಲಿಕೆಯನ್ನು ಶಿವನಿಗೆ ಅರ್ಪಿಸುವನೋ, ಅದರಲ್ಲಿಯೂ ಮುಖ್ಯವಾಗಿ ಸಂಧ್ಯಾಕಾಲದಲ್ಲಿ ಸಮರ್ಪಿಸುವನೋ ಅವನು ಶಿವಗೃಹವನ್ನೇ ಸೇರುವನು. ॥೧೨೭॥

ಸಂಧ್ಯಾಕಾಲದಲ್ಲಿ ಪುನ್ನಾಗಪುಷ್ಪಗಳ (ಸುರಹೊನ್ನೇ)ಮಾಲಿಕೆಯಿಂದ ಶಿವನನ್ನು ಪೂಜಿಸಿದರೆ, ಕೋಟ್ಯಂತರವಾದ ಪಾಪಗಳಿಂದ ಕೂಡಿದ್ದರೂ ಅವುಗಳಿಂದ ವಿನಿರ್ಮುಕ್ತನಾಗುವನು. ಇದರಲ್ಲಿ ಸಂಶಯವಿಲ್ಲ. ॥೧೨೮॥

ಶತಪತ್ರಪ್ರಸೂನಾನಿ ಯಃ ಪ್ರಯಚ್ಛತಿ ಶಂಕರೇ ।
ದ್ರೋಣಪುಷ್ಪಾಣಿ ವಾ ನಿತ್ಯಂ ಸ ಯಾತಿ ಶಿವಮಂದಿರಂ ॥೧೨೯॥

ಅರ್ಚಯಿತ್ವಾ ಮಹಾದೇವಂ ಕುತುಕೀಕುಸುಮೈರ್ನಿಶಿ ।
ಅರಾತಿಭ್ಯಃ ಸರ್ವಥಾಪಿ ನ ಬಿಭೇತ್ಯೇವ ಮಾನವಃ ॥೧೩೦॥

ದೂರ್ವಾಂಕುರೈರ್ನವ್ಯೈಃ ಶುದ್ಧೈರಭಿಪೂಜ್ಯ ಸದಾಶಿವಂ ।
ಸರ್ವಪುಷ್ಪಾರ್ಚನಫಲಂ ಪ್ರಾಪ್ನೋತ್ಯೇವ ನ ಸಂಶಯಃ ॥೧೩೧॥

ಯವತಂಡುಲಗೋಧೂಮಚಣಕೈರ್ದ್ವಿದಲೈರಪಿ ।
ಸಿತಾಸಿತೈಸ್ತಿಲೈರೀಶಂ ಸರ್ಷಪೈಶ್ಚ ಸಮರ್ಪಯೇತ್ ॥೧೩೨॥

ಪ್ರಿಯಂಗುಭಿಶ್ಚ ನೀವಾರೈಃ ಶ್ಯಾಮಾಕೈಃ ಶಾಲಿಭಿಸ್ತಥಾ ।
ಅಣುಭಿಶ್ಚ ಸಮಾರಾಧ್ಯ ಮುಚ್ಯತೇ ಪಾಪಕೋಟಿಭಿಃ ॥೧೩೩॥

ಯಾವನು, ತಾವರೆಯ ಹೂಗಳಿಂದಾಗಲಿ ಅಥವಾ ತುಂಬೆಯ ಹೂಗಳಿಂದಾಗಲಿ ಶಂಕರನನ್ನು ನಿತ್ಯವೂ ಪೂಜಿಸುವನೋ, ಅವನು ಅಂತ್ಯದಲ್ಲಿ ಶಿವಾಲಯಕ್ಕೆ ತೆರಳುವನು. ॥೧೨೯॥

ಪ್ರದೋಷಕಾಲದಲ್ಲಿ, ಕುತುಕೀ ಪುಷ್ಪಗಳಿಂದ(?) ಶಿವನನ್ನು ಪೂಜಿಸಿದವನಿಗೆ ಶತ್ರುಭಯವಿರುವುದಿಲ್ಲ. ॥೧೩೦॥

ಪರಿಶುದ್ಧವಾದ ದೂರ್ವಾಂಕುರಗಳಿಂದ ಶಿವನನ್ನು ಅರ್ಚಿಸಿದರೆ ಎಲ್ಲಾ ಬಗೆಯ ಪುಷ್ಪಗಳ ಅರ್ಚನೆಯಿಂದುಂಟಾದ ಫಲವನ್ನು ಹೊಂದುವನು. ॥೧೩೧॥

ಇದಲ್ಲದೇ, ನವಣೆ, ಅಕ್ಕಿ, ಗೋಧಿ, ಕಡಲೆ, ಹೆಸರು, ಉದ್ದು, ತೊಗರಿ, ಬಿಳಿಯ ಎಳ್ಳು, ಕರಿಯ ಎಳ್ಳು, ಮತ್ತು ಸಾಸುವೆ, ಮುಂತಾದ ಧಾನ್ಯಗಳಿಂದಲೂ ಶಿವನನ್ನು ಅರ್ಚಿಸಬಹುದು. ॥೧೩೨॥

ನವಣೆ, ಕಾಡುಬತ್ತ, ಬತ್ತ, ಸಣ್ಣಬತ್ತ, ಸಾವೆ, ಇವುಗಳಿಂದ ಶಂಕರನನ್ನು ಅರ್ಚಿಸುವವನು ಕೋಟ್ಯಂತರವಾದ ಪಾಪಗಳನ್ನು ಆಚರಿಸಿದ್ದರೂ ಅವುಗಳಿಂದ ಮುಕ್ತನಾಗುವನು. ॥೧೩೩॥

ದಧ್ನಾ ಕ್ಷೀರೈರ್ಘೃತೇನಾಪಿ ಮಧುನಾ ಸಿತಯಾಪಿ ಚ ।
ಸಮಭ್ಯರ್ಚ್ಯ ಮಹಾದೇವಂ ಮುಚ್ಯತೇ ಪಾಪಕೋಟಿಭಿಃ ॥೧೩೪॥

ಹಿಮಸೀಕರಸಂಕಾಶನೀರಧಾರಾಭಿಷೇಚನೈಃ ।
ಮಹಾಲಿಂಗೇ ಪ್ರದೋಷೇಷು ಮಹಾಪಾಪೈಃ ಪ್ರಮುಚ್ಯತೇ ॥೧೩೫॥
ಕ್ಷೀರಾಜ್ಯಮಧುಧಾರಾಭಿರ್ಯೋಽಭಿಷಿಂಚೇದುಮಾಪತಿಂ ।
ಸ ಏವ ಹಯಮೇಧಾದಿಯಾಗಕೋಟಿಫಲಂ ಲಭೇತ್ ॥೧೩೬॥

ಆಕಲ್ಪಾರ್ಜಿತಪಾಪನಾಶಕಮಿತಿ ಜ್ಞೇಯಂ ಶಿವಾರಾಧನಂ
ಸಾಮಾನ್ಯೇನ ತದಪ್ಯಖಂಡವಿಲಸದ್ಬಿಲ್ವೀದಲೈಶ್ಚೇತ್ಕೃತಂ ।
ತತ್ಕಿಂ ಕಿಂ ಫಲಮಾತನೋತಿ ಬಹುಧಾ ತನ್ನೈವ ಜಾನೇ ನಿಜಂ
ದಾಸ್ಯತ್ಯೇವ ಪದಂ ಸದಾಶಿವ ಇತಿ ಜ್ಞಾತಂ ತದನ್ಯತ್ತಥಾ ॥೧೩೭॥

ಮೊಸರು, ಹಾಲು, ತುಪ್ಪ, ಜೇನು ತುಪ್ಪ, ಸಕ್ಕರೆ, ಇವುಗಳಿಂದ ಶಿವನನ್ನು ಆರಾಧಿಸುವವನು ಸಕಲ ಪಾಪಗಳನ್ನೂ ಕಳೆದುಕೊಳ್ಳುವನು. ॥೧೩೪॥

ಹಿಮದ ತುಂತುರುಗಳಂತೆ ತಣ್ಣಗಿರುವ, ನೀರಿನ ಧಾರೆಗಳಿಂದ ಶಿವಲಿಂಗಕ್ಕೆ ಪ್ರದೋಷಕಾಲದಲ್ಲಿ ಸ್ನಾನಮಾಡಿಸುವುದರಿಂದ ಮಹಾಪಾಪ ವಿನಿರ್ಮುಕ್ತನಾಗುವನು. ॥೧೩೫॥

ಯಾವನು, ಹಾಲು, ತುಪ್ಪ, ಜೇನುತುಪ್ಪ, ಇವುಗಳಿಂದ ಶಿವನನ್ನು ಸ್ನಾನ ಮಾಡಿಸುವನೋ ಅವನು ಅಶ್ವಮೇಧ ಯಾಗವೇ ಮುಂತಾದ ಕೋಟ್ಯಂತರ ಯಾಗಗಳ ಅನುಷ್ಠಾನ ಮಾಡುವುದರಿಂದ ಉಂಟಾಗುವ ಫಲವನ್ನು ಹೊಂದುವನು. ॥೧೩೬॥

ಸ್ವಾಭಾವಿಕವಾಗಿ ಶಿವಪೂಜೆಯು ಕಲ್ಪದ ಆದಿಯಿಂದ ಮೊದಲುಗೊಂಡು ಆಚರಿಸಿದ ಪಾಪರಾಶಿಗಳನ್ನು ನಾಶಮಾಡುವುದು. ಇದು ಶಿವಪೂಜೆಯ ಮಹಿಮೆ. ಹೀಗಿರುವಾಗ ಅವನಿಗೆ ಪ್ರಿಯತಮವಾದ ಮತ್ತು ಅಖಂಡವಾದ ಬಿಲ್ವಪತ್ರೆಗಳಿಂದ ಪೂಜಿಸಿದರೆ ಇಷ್ಟಾರ್ಥವು ಸಿದ್ಧಿಸುವುದಿಲ್ಲವೆಂದು ಹೇಳಲು ಸಾಧ್ಯವೇ? ಈ ರೀತಿಯಲ್ಲಿ ಶಿವನನ್ನು ಎಡಬಿಡದೇ ಆರಾಧಿಸುವವರಿಗೆ ಶಾಶ್ವತವಾದ ಶಿವಪದವಿಯೇ ಪ್ರಾಪ್ತವಾಗುವುದೆಂದು ನಾನು ತಿಳಿಯುವೆನು. ಇನ್ನಾವ ಕರ್ಮವೂ ಶಿವಪೂಜೆಯಂತೆ ಇಷ್ಟಾರ್ಥಗಳನ್ನು ಕೊಡಲಾರದು. ॥೧೩೭॥

ಮುಕ್ತಿಪ್ರಾಸಾದಮಾರ್ಗಪ್ರಥಿತಮಣಿಲಸದ್ದೀರ್ಘಸೋಪಾನಪಂಕ್ತಿಃ
ಭಕ್ತಿಃ ಶ್ರೀಪತಿನೇತ್ರಪೂಜಿತಶಿವಾಕಾಂತಾಂಘ್ರಿಪಂಕೇರುಹೇ ।
ಸಾ ಭಕ್ತಿರ್ಯದಿ ಬಿಲ್ವಪಲ್ಲವಲಸನ್ಮಲ್ಲೀಪ್ರಸೂನಾರ್ಪಣೇ
ಶಾಂಗೇ ಲಿಂಗವರೇ ತದಾರ್ಜಿತಮಿದಂ ತಾವಜ್ಜಗಜ್ಜಾಯತೇ ॥೧೩೮॥

ಧನ್ಯೈರ್ಜನ್ಮಸಹಸ್ರಸಾಧಿತಮಹಾಪುಣ್ಯಾರ್ಣವೈಃ ಕೇವಲಂ
ಭಕ್ತಿಃ ಶಂಕರಪಾದಪದ್ಮಭಜನೇ ತಾವತ್ಪರಂ ಲಭ್ಯತೇ ।
ಸಾ ಲಬ್ಧಾ ಜನನಾದಿದುಃಖನಿಕರಂ ಹಂತ್ಯೇವ ಹಂತ್ಯಾಪದಾಂ
ರಾಶೀನಪ್ಯಮಿತಾನ್ ಕರೋತಿ ಪರಮಾನಂದಾಶ್ರಯಂ ಸರ್ವದಾ ॥೧೩೯॥

**ಇತಿ ಶ್ರೀಶಿವರಹಸ್ಯೇ ಹರಾಖ್ಯೇ ತೃತೀಯಾಂಶೇ ಪೂರ್ವಾರ್ಧೇ
ದೇವಮುನಿಸಂವಾದೇ ಬಿಲ್ವಪುಷ್ಪಪಂಚಾಮೃತಧಾನ್ಯಜಲಧಾರಾದಿ
ಶಿವಪೂಜಾಮಹಿಮಾ ಫಲವರ್ಣನಂ ನಾಮ
ಚತುರ್ವಿಂಶೋಽಧ್ಯಾಯಃ**

ವಿಷ್ಣುನೇತ್ರದಿಂದ ಪೂಜಿತವಾದ ಈಶ್ವರನ ಪಾದಕಮಲದಲ್ಲಿರುವ ಭಕ್ತಿ ಭಾವನೆಯೇ ಮುಕ್ತಿಯೆಂಬ ಮಹಡಿಯನ್ನು ಏರಲು ಸೋಪಾನಗಳಂತೆ ಇರುವುದು. ಈಶ್ವರಲಿಂಗದಲ್ಲಿ ಭಕ್ತಿಪುರಸ್ಸರವಾಗಿ ಬಿಲ್ವಪತ್ರೆಗಳಿಂದ ಕೂಡಿರುವ ಮಲ್ಲಿಗೆಯಹೂವುಗಳನ್ನು ಅರ್ಪಿಸಿದವನು, ಈ ಜಗತ್ತಿನಲ್ಲಿ ಕೃತಕೃತ್ಯತೆಯನ್ನು ಪಡೆಯುವನು.॥೧೩೮॥

ಭಾಗ್ಯಶಾಲಿಗಳಾದವರು ಹಿಂದಿನ ಅನೇಕ ಜನ್ಮಗಳಲ್ಲಿ ಸಂಗ್ರಹಿಸಿದ ಪುಣ್ಯವಿಶೇಷಗಳ ಮಹಿಮೆಯಿಂದ ಈಶ್ವರನ ಪಾದಪದ್ಮಗಳ ಸೇವೆಯನ್ನು ಭಕ್ತಿಯಿಂದ ಕೈಗೊಳ್ಳುವರು. ಆ ಭಕ್ತಿಯು ಆಧ್ಯಾತ್ಮಿಕಾದಿ ತಾಪತ್ರಯಗಳನ್ನು ಹೋಗಲಾಡಿಸುವುದಲ್ಲದೇ ಜನ್ಮಜರಾಮರಣಾದಿದುಃಖಗಳನ್ನು ನಿವಾರಿಸಿ ಶಾಶ್ವತವಾದ ಮೋಕ್ಷಾನಂದವನ್ನುಂಟುಮಾಡುವುದು ಎಂದು ಬ್ರಹ್ಮನು ರಾಜನಿಗೆ ಬೋಧಿಸಿದನೆಂದು ಯಾಜ್ಞವಲ್ಕ್ಯಮುನಿಯು ಜನಕರಾಜನಿಗೆ ತಿಳಿಯಪಡಿಸಿದನು. ॥೧೩೯॥

ಇಲ್ಲಿಗೆ ಶ್ರೀಶಿವರಹಸ್ಯದ ಮೂರನೆಯ ಅಂಶದ ಉತ್ತರಾರ್ಧದಲ್ಲಿ ದೇವರ್ಷಿಗಳ
ಸಂವಾದದಲ್ಲಿ ಬಿಲ್ವಪತ್ರೆ, ಪುಷ್ಪ, ಪಂಚಾಮೃತ, ಧಾನ್ಯ, ಜಲಧಾರೆ
ಮುಂತಾದವುಗಳಿಂದ ಶಿವನನ್ನು ಪೂಜಿಸುವುದರಿಂದ ಉಂಟಾಗುವ ಫಲದ ವರ್ಣನೆ
ಎಂಬ ಇಪ್ಪತ್ತನಾಲ್ಕನೆಯ ಅಧ್ಯಾಯವು ಮುಗಿದುದು.

॥ ಶ್ರೀಃ ॥

ಅಥ ಶ್ರೀಶಿವರಹಸ್ಯೇ

ತೃತೀಯಾಂಶೇ

ಉತ್ತರಾರ್ಧೇ

ಪಂಚವಿಂಶೋಽಧ್ಯಾಯಃ

॥ ಯಾಜ್ಞವಲ್ಕ್ಯ ಉವಾಚ ॥

ಇತ್ಯುಕ್ತಮುನಿವಾಕ್ಯಾನಿ ಶ್ರುತ್ವಾ ಸಂತುಷ್ಟಮಾನಸಾಃ ।
ಶಿವಲಿಂಗಾರ್ಚನೋದ್ಯೋಗಂ ಚಕ್ರುಃ ಸರ್ವೇ ಸುರಾಸ್ತದಾ ॥೧॥

ಭಸ್ಮನೋದ್ಧೂಲ್ಯ ಸರ್ವಾಂಗಂ ಕೋಮಲೈರ್ಬಿಲ್ವಪಲ್ಲವೈಃ ।
ಕಮಲೈರಮಲೈಃ ಕಾಲೇ ಪೂಜಯಾಮಾಸುರೀಶ್ವರಂ ॥೨॥

ಉತ್ಫುಲ್ಲನೀಲೋತ್ಪಲಮಾಲಿಕಾಭಿಃ ಸಹಸ್ರಪತ್ರೈಃ ಶತಪತ್ರಪುಷ್ಪೈಃ ।
ಪ್ರಫುಲ್ಲಮಲ್ಲೀಕರವೀರಜಾಜೀಪ್ರಸೂನವೃಂದೈರಭಿಪೂಜಿತಸ್ತೈಃ ॥೩॥

ಇಪ್ಪತ್ತೈದನೆಯ ಅಧ್ಯಾಯ

ಯಾಜ್ಞವಲ್ಕ್ಯನು ಮತ್ತೆ ಜನಕರಾಜನನ್ನು ಕುರಿತು ಹೀಗೆಂದನು — ಎಲೈ ರಾಜನೇ, ಮುನಿಗಳ ಆ ಮಾತುಗಳನ್ನು ಕೇಳಿ ದೇವತೆಗಳೆಲ್ಲರೂ ಪರಮಾನಂದಭರಿತರಾಗಿ ಅಂದಿನಿಂದಲೇ ಶಿವಲಿಂಗಾರ್ಚನೆಯಲ್ಲಿ ನಿರತರಾದರು. ॥೧॥

ಅವರು ಸರ್ವಾಂಗಗಳನ್ನು ಭಸ್ಮದಿಂದ ಲೇಪಿಸಿ, ಮೃದುವಾದ ಬಿಲ್ವಪತ್ರೆಗಳಿಂದಲೂ ಮತ್ತು ಶುದ್ಧವಾದ ಕಮಲಪುಷ್ಪಗಳಿಂದಲೂ ವಿಹಿತವಾದ ಕಾಲದಲ್ಲಿ ಈಶ್ವರನನ್ನು ಅರ್ಚಿಸಿದರು. ॥೨॥

ಚೆನ್ನಾಗಿ ಅರಳಿರುವ ಕನ್ನೈದಿಲೆ, ಮಲ್ಲಿಗೆ, ಕಮಲ, ತಾವರೆ, ಕಣಿಗಲು, ಜಾಜೀ ಮುಂತಾದ ಹೂವುಗಳಿಂದ ಶಿವನನ್ನು ಪೂಜಿಸಿದರು. ॥೩॥

ಕಸ್ತೂರಿಕಾಸಂಯುತಚಂದ್ರಭಾಗ
ಪಾಟೀರಸಾರೈರಪಿ ಲಿಂಗಪೂಜಾ ।
ಕೃತಾ ಸುರೈಸ್ತೈರ್ದವನೇನ ಪೂಜಾ
ಕೃತಾ ಮಹೇಶಸ್ಯ ಕೃತಾಂತಭೀತ್ಯೈ ॥೪॥

ಘನಸಾರಗಿರಿಪ್ರಭೂತದೀಪ್ತ್ಯೈಃ
ಮಧುರಾನ್ನೈರಮಿತೈಃ ಸಿತಾಭಿಷೇಕೈಃ ।
ದಧಿದುಗ್ಧವಿಶೇಷಸಾರಯುಕ್ತೈ
ರುಪಹಾರೋಽಪಿ ಶಿವಾಯ ಕಲ್ಪಿತಸ್ತೈಃ ॥೬॥

ಸುಧಾಧಾರಾಹೀರಾಂ ನವಕುಸುಮಗಂಧೋತ್ಕರಯುತಾಂ
ಮುಹುರ್ದತ್ತ್ವಾಂ ದತ್ತಂ ವಸನಮಪಿ ನೀರಾಜನಮಪಿ ।
ಮಹಾಹಾರೈರ್ಹಾರೈರ್ಹರ ಹರ ಗೃಹಾಣೇತಿ ಬಹುಧಾ
ಪ್ರಸೂನಾನಿ ಕ್ಷಿಪ್ತಾನ್ಯಮಲಮಣಿಯುಕ್ತಾನಿ ಗಿರಿಶೇ ॥೭॥

ಕಸ್ತೂರಿಯಿಂದ ಯುಕ್ತವಾದ ಅನೇಕ ಸುಗಂಧದ್ರವ್ಯಗಳಿಂದ ಶಿವನನ್ನು ಪೂಜಿಸಿದರು. [1]ದವನಪತ್ರೆಯನ್ನು ಶಿವನಿಗೆ ಅರ್ಪಿಸಿದರು. ॥೫॥

ಅವರು ಪರ್ವತದಂತೆ ಉನ್ನತವಾದ ಕರ್ಪೂರವನ್ನು ರಾಶಿರಾಶಿಯಾಗಿರಿಸಿ ಅವುಗಳನ್ನು ಹೊತ್ತಿಸಿ, ನೀರಾಜನದಿಂದ ಶಂಕರನನ್ನು ತೃಪ್ತಿಗೊಳಿಸಿದರು. ಮಧುರವಾದ ಶಾಲ್ಯಾನ್ನಗಳಿಂದಲೂ ಮತ್ತು ಶರ್ಕರಾಭಿಷೇಕದಿಂದಲೂ ಸ್ನಾನಮಾಡಿಸಿದ್ದರು. ಹಾಲು, ಮೊಸರು ಮುಂತಾದ ಸಾರತಮವಾದ ಪದಾರ್ಥಗಳಿಂದ ಕೂಡಿರುವ ಪಕ್ವಾನ್ನವನ್ನು ಸಿದ್ಧಪಡಿಸಿ ನಿವೇದಿಸಿದರು. ॥೬॥

ಈಶ್ವರನ ಪರಮಭಕ್ತರಾದ ಅವರು ಅಮೃತದ ಧಾರೆಯಂತೆ ಕಾಂತಿಯಿಂದ ಕಂಗೊಳಿಸುತ್ತಿರುವ ಮತ್ತು ಆಗತಾನೆ ಅರಳಿದ ಹೂವುಗಳ ಪರಿಮಳಯುಕ್ತವಾದ ಸರವನ್ನೂ, ಮುತ್ತಿನ ಹಾರವನ್ನೂ ಶಿವನಿಗರ್ಪಿಸಿದರು. ನೂತನವಾದ ವಸ್ತ್ರವನ್ನೂ, ನೀರಾಜನವನ್ನೂ ಅರ್ಪಿಸಿದರು. ಶಿವ, ಶಂಭೋ, ಭಕ್ತರಾದ ನಾವು ಅರ್ಪಿಸುವ ಈ ವಸ್ತುಗಳನ್ನು ಸ್ವೀಕರಿಸು ಎಂದು ಪರಿಪರಿಯಾಗಿ ಶಿವನನ್ನು ಪ್ರಾರ್ಥಿಸುತ್ತಾ

---

1 ದವನ—ಎಂದರೆ ಒಂದು ಜಾತಿಯ ಸುಗಂಧಯುಕ್ತವಾದ ಪತ್ರೆ. ಅದು ಈಶ್ವರನಿಗೆ ಪ್ರಿಯವಾದುದು.

ಸುವರ್ಣರತ್ನಾಭರಣಾನ್ಯಸಾರಾ
ಣ್ಯನೇಕಲೋಕೋತ್ತರಪಟ್ಟಕೂಲೈಃ ।
ಸಂಭಾವ್ಯ ದತ್ತಾನ್ಯಪಿ ಲಿಂಗಮೂಲಂ
ತಲ್ಲಿಂಗಪಾರ್ಶ್ವೇಷು ವಿಶೇಷತಸ್ತು ॥೮॥

ಸುರತ್ನದಂಡಾಂಚಿತಚಾಮರೌಘೈಃ
ಛತ್ರೈರಪಾರೈರ್ವಿಮಲೇಂದುತುಲ್ಯೈಃ ।
ಸಮರ್ಚಯಾಮಾಸುರುಮಾಸಹಾಯಂ
ಪ್ರಣಮ್ಯ ನೃತ್ಯಂ ಚ ಕೃತಂ ಮುಹುಸ್ತೈಃ ॥೯॥

ತತಃ ಪರಂ ತುಷ್ಟುವುರಾದರೇಣ
ಸುವರ್ಣವರ್ಣಂ ಗಿರಿಜಾಸಹಾಯಂ ।
ಸಾಯಂ ನಿರಸ್ತಾಖಿಲಮಾಯಿಮಾಯಂ
ಸ್ವಮಾಯಯಾ ಸಪ್ರಿಯಮಪ್ರಮೇಯಂ ॥೧೦॥

ಅಮೂಲ್ಯವಾದ ರತ್ನಗಳನ್ನೂ ಮತ್ತು ಸುಗಂಧಪೂರಿತವಾದ ಹೂವುಗಳನ್ನು ಭಕ್ತಿಯಿಂದಿತ್ತರು. ॥೭॥

ಅಮೂಲ್ಯವಾದ ಮತ್ತು ಅನೇಕ ಸುವರ್ಣ ಖಚಿತವಾದ ಆಭರಣಗಳಿಂದಲೂ, ಮತ್ತು ರತ್ನಖಚಿತವಾದ ಒಡವೆಗಳಿಂದಲೂ ಶಿವನನ್ನು ಅಲಂಕರಿಸಿ, ಅತ್ಯುತ್ಕೃಷ್ಟವಾದ ಪಟ್ಟವಸ್ತ್ರಗಳನ್ನು ಹೊದಿಸಿದರು. ಇದಲ್ಲದೇ, ಮುಖ್ಯವಾಗಿ ಶಿವಲಿಂಗದ ಕೆಳಭಾಗದಲ್ಲಿಯೂ ಮತ್ತು ಅದರ ಅಕ್ಕಪಕ್ಕಗಳಲ್ಲಿಯೂ, ವಸ್ತ್ರಾದಿಗಳಿಂದ ಆಲಂಕರಿಸಿದರು. ॥೮॥

ರತ್ನಖಚಿತವಾದ ದಂಡಗಳಿಂದ ಶೋಭಿಸುತ್ತಿರುವ ಚಾಮರಗಳಿಂದಲೂ, ಮತ್ತು ಪೂರ್ಣಿಮೆಯ ಚಂದ್ರನಂತೆ, ಅತ್ಯಂತ ಕಾಂತಿಯಿಂದ ಕಂಗೊಳಿಸುತ್ತಿರುವ ಶ್ವೇತಛತ್ರಗಳಿಂದಲೂ, ಉಮಾರಮಣನಾದ ಪರಮೇಶ್ವರನನ್ನು ಸೇವಿಸಿದರು. ಬಳಿಕ, ಶಿವನಿಗೆ ನಮಸ್ಕರಿಸಿ ನೃತ್ಯವನ್ನಭಿನಯಿಸಿದರು. ॥೯॥

ಅನಂತರ ಅವರೆಲ್ಲರೂ, ಸುವರ್ಣದಂತೆ ದಿವ್ಯವಾದ ಕಾಂತಿಯಿಂದ ಹೊಳೆಯುತ್ತಿರುವ ಮತ್ತು ಸಾಯಂಕಾಲದಲ್ಲಿ ಆರಾಧಿಸುವುದರಿಂದ ತನ್ನ ಮಾಯೆಯ ಮಹಿಮೆ

ಅಪಾರಕರುಣಾಕರಸ್ಮರಹರಾಮರಾಧೀಶ್ವರ
ಪರಿಸ್ಫುರದುರಃಸರಪ್ರವರಹೀರ ಹಾರಾಕರ ।
ವಿಚಾರಯ ಪುನಃ ಪುನಃ ಪರಮುದಾರ ಗೌರೀಕರ
ಪ್ರಸಾರಚತುರಾದರಾದುರುವಿಹಾರ ಹಾರಂ ಪರಂ ॥೧೧॥

ಕದಾಪಿ ಹರ ಹಾರತಾ ನ ಸುವಿಚಾರತಾ ನ ತ್ವಯಾ
ಕಿಮೇವಮುಚಿತಾ ಮತಿರ್ಗಿರಿಕುಮಾರಿಕಾಕಾಮುಕ ।
ಸ್ಮರಜ್ವರಪುರಸ್ಸರಜ್ವರವಿಕಾರಸಂಹಾರಕ
ಸ್ಮರಂ ಹರ ಪುನಃ ಪುನಃ ಸ್ಮರ ಪುನಃ ಪುನರ್ಹಾರತಾಂ ॥೧೨॥

ಅಸಹ್ಯಜನಿದುರ್ದಶಾಂ ಹರ ಜರಾತಿಭಾರಂ ಹರ
ಪ್ರಸಹ್ಯ ಹರ ದುಸ್ಸಹಂ ಮರಣಕಾರಣಂ ಸಂಹರ ।
ಯದೇತದಪಕಾರಕಂ ತದಪಿ ಪಾಪರೂಪಂ ಹರ
ಸ್ಮರ ಸ್ಮರ ಹರಾರ್ಚನಪ್ರವಣಮೇವ ಮೇ ಮಾನಸಂ ॥೧೩॥

ಯಿಂದ, ಅಜ್ಞಾನಿಗಳಾದವರ ಅಜ್ಞಾನವನ್ನು ಹೋಗಲಾಡಿಸುವ ಪ್ರಭಾವವುಳ್ಳ ಉಮಾಕಾಂತನನ್ನು ಬಗೆ ಬಗೆಯಿಂದ ಸ್ತುತಿಸಿದರು. ॥೧೦॥

"ಓ, ಕರುಣಾಸಾಗರನೇ! ಕಾಮರಿಪುವೇ! ದೇವಾಧಿದೇವನೇ! ಕಾಂತಿ ಯುಕ್ತವಾದ ರತ್ನದ ಹಾರಗಳನ್ನು ಎದೆಯಲ್ಲಿ ಧರಿಸಿರುವವನೇ! ಭಕ್ತವತ್ಸಲನೇ! ಪ್ರೇಯಸಿಯಾದ ಗಿರಿಜೆಯನ್ನು ಹಸ್ತಕಮಲಗಳಿಂದ ಲಾಲಿಸುವುದರಲ್ಲಿ ಚತುರನೇ! ನಿನ್ನ ಭಕ್ತರಾದ ನಮ್ಮಲ್ಲಿ ದಯೆದೋರು. ॥೧೧॥

ಓ, ಭಕ್ತವತ್ಸಲನಾದ ಶಿವನೇ, ನೀನು ಭಕ್ತರಾದ ನಮ್ಮ ಹೃದಯವನ್ನು ಇದುವರೆಗೆ ಎಂದೂ ವಿಮರ್ಶಿಸಿರುವುದಿಲ್ಲ. ಉಮಾಕಾಂತನೇ, ಈ ರೀತಿ ಅವಿಚಾರ ಪೂರಿತವಾದ ಬುದ್ಧಿಯು ನಿನಗೆ ಉಚಿತವೇ! ಕಾಮಜ್ವರದಿಂದುಂಟಾಗುವ ಕಾಮವಿ ಕಾರವನ್ನು ಹೋಗಲಾಡಿಸುವುದರಲ್ಲಿ ಚತುರನಾದವನೇ, ಭಕ್ತಾಗ್ರೇಸರರಾದ ನಮ್ಮ ಕಾಮವಿಕಾರವನ್ನು ಹೋಗಲಾಡಿಸು. ನಾವು ನಿನ್ನಲ್ಲಿ ಭಕ್ತಿಭಾವನೆಯಿಂದ ಕೂಡಿ ರುವೆವೆಂಬುದನ್ನು ಮರೆಯದಿರು. ನಮ್ಮನ್ನು ಸರ್ವದಾ ಸಲಹುತ್ತಿರು. ॥೧೨॥

ಶಿವನೇ, ಸಹಿಸಲಸಾಧ್ಯವಾದ ಜನ್ಮ, ಜರಾ, ಮರಣಗಳೆಂಬ ಕೆಟ್ಟ ಅವಸ್ಥೆ ಗಳನ್ನು ಹೋಗಲಾಡಿಸು. ಮತ್ತು ದುಃಖಕಾರಣವಾದ ಪಾಪವನ್ನು ನಾಶಪಡಿಸು.

ಅನಾಥಜನನಾಥತಾ ಕಥಮುಮಾಸನಾಥಾಧುನಾ
ತವಾಪಿ ಕಥಯಾಸಕೃಜ್ಜನಿಜರಾವ್ಯಥಾರ್ತಾಯ ಮೇ ।
ಕದಾಪಿ ಕಥಿತಾನ ಸಾ ಮಯಿ ಕದರ್ಥನಾ ಯೋ ಮಯಾ
ಕಿಮರ್ಥಮತಿಥಿರ್ವ್ಯಥಾಂ ಕಥಯತೀಶ್ವರಾರ್ಥೀ ಮುದಾ ॥೧೪॥

ಅತಃ ಪರಮಪಿ ಪ್ರಭೋ ಭವ ಭವಾಬ್ಧಿಪಾರಂ ನಯ
ಶ್ರಿಯಾ ಸದಯ ಸಾ ದಯಾ ಮಯಿ ನ ಕಿಂ ವಿಧೇಯಾ ತ್ವಯಾ ।
ನ ಕೋಽಪಿ ದಯನೀಯತಾಮುಪಗತೋಽಪಿ ಲೋಕೇ ಮಯಿ
ಸ್ಥಿತೇ ಸತಿ ಸತೀಪತಿವ್ರತವಿದೂನಮಾನೇ ಸದಾ ॥೧೫॥

ಕ್ವ ತೇ ವದ ದಯಾರ್ದ್ರತಾ ಕ್ವ ಚ ಮಹೇಶತಾ ವಾ ಕ್ವ ವಾ
ಮಹಾಫಲಯಹೇತುತಾ ಕ್ವ ಸಹತಾ ತದಾ ಸಾ ತವ ।

ನಮ್ಮ ಈ ಚಿತ್ತವು ಶಿವಾರಾಧನೆಯಲ್ಲಿಯೇ ತತ್ಪರವಾಗಿರುವುದೆಂಬುದನ್ನು ಪುನಃ ಪುನಃ ಸ್ಮರಿಸು. ॥೧೩॥

ಉಮಾನಾಥನೇ! ನೀನು, ಅನಾಥರಕ್ಷಕನೆಂದು ಹೇಳಿಸಿಕೊಳ್ಳಲ್ಪಡುವೆಯಲ್ಲವೇ! ಜನ್ಮಜರಾಮರಣಗಳಿಂದುಂಟಾದ ವ್ಯಥೆಯಿಂದ ಪೀಡಿತರಾಗಿ ಅನಾಥರಾದ ನಮ್ಮನ್ನು ರಕ್ಷಿಸು. ನಾನು ನಿನ್ನಲ್ಲಿ ಯಾವ ಬಗೆಯ ಅಪರಾಧವನ್ನು ಮಾಡಿರುವೆನೆಂಬುದನ್ನು ನೀನು ನನಗೆ ಇದುವರೆಗೂ ಹೇಳಿರುವುದಿಲ್ಲ. ಈಶ್ವರಭಕ್ತನಾದವನು, ತನ್ನ ದುಃಖಗಳನ್ನು ನಿನ್ನ ಸನ್ನಿಧಿಯಲ್ಲಿ ಏಕೆಂದು ಹೇಳಿಕೊಳ್ಳುವನು? ಇದರ ಕಾರಣವೇನೆಂಬುದನ್ನು ನೀನು ವಿಚಾರಿಸು. ॥೧೪॥

ಪ್ರಭುವೇ; ಇನ್ನಾದರೂ ನಮ್ಮನ್ನು ಈ ಸಂಸಾರಸಾಗರದಿಂದ ಪಾರುಗಾಣಿಸು. ನಮ್ಮ ಇಷ್ಟಾರ್ಥವನ್ನು ನೆರವೇರಿಸು. ನೀನು ನನ್ನಲ್ಲೇಕೆ ದಯೆದೋರಬಾರದು? ನನ್ನ ಚಿತ್ತವು ಅನವರತವೂ ನಿನ್ನನ್ನೇ ಧ್ಯಾನಿಸುವುದರಲ್ಲಿ ಆಸಕ್ತವಾಗಿರುವುದರಿಂದ, ಈ ಲೋಕದಲ್ಲಿ ನಿನ್ನನ್ನು ಬಿಟ್ಟರೆ, ಇನ್ನಾರೂ, ನನ್ನಲ್ಲಿ ದಯೆದೋರಲಾರರು. ॥೧೫॥

ಸ್ವಾಮಿಯೇ, ನಿನ್ನ ದಯಾರ್ದ್ರತೆಯು ಎಲ್ಲಿರುವುದು? ನಿರರ್ಗಳವಾದ ಸ್ವಾಮಿತ್ವವು ಎಲ್ಲಿಹೋಯಿತು.? ಅದನ್ನು ಹೇಳು. ಓ, ಗಿರಿಜಾಕಾಂತನೇ! ನಿನ್ನ,

ಅಪಾರಸುಖಹೇತುತಾಪ್ಯಮಿತಭಾಗ್ಯದತ್ವಂ ಕ್ವ ವಾ
ಕ್ವ ದೀನಜನಬಂಧುತಾಪ್ಯಗಕುಮಾರಿಕಾವಲ್ಲಭ ॥೧೬॥

ಪ್ರಭೂತವಿಭವೇ ಸತಿ ತ್ವಯಿ ಮಹೇಶ್ವರೇ ದಕ್ಷಕೇ
ಕ್ಷಣಾರ್ಧಮಪಿ ಮೇ ಕಥಂ ಭವತಿ ದುಃಖಲೇಶೋಽಪಿ ವಾ ।
ಪ್ರಪಶ್ಯ ದಯಯಾಧುನಾಪ್ಯಹಹ ಹಾ ಕೃಪಾಂಭೋನಿಧೇ
ನಿಧಿರ್ಯದಿ ವಶೇ ತದಾವದ ದರಿದ್ರತಾ ವಾ ಕುತಃ ॥೧೭॥

ಕದಾಪಿ ನ ಸಮರ್ಪಿತಂ ಯದಿ ಮುದಾ ನ ಬಿಲ್ವೀದಲಂ
ನವಂ ಕಮಲಮೇವ ವಾ ವಿಮಲಶಂಗಲಿಂಗೇ ತದಾ ।
ಭವತ್ವಹಹ ದುಃಖಮಪ್ಯಭಿನವಾಂಬುಬಿಲ್ವೀದಲಂ
ಯದರ್ಪಿತಮುಮಾಪತೇ ತ್ವಯಿ ತದಾದರೇಣ ಸ್ಮರ ॥೧೮॥

ಪಾಪಗಳನ್ನು ನಾಶಮಾಡುವ ಅಪಾರವಾದ ಸಾಮರ್ಥ್ಯವು ಏನಾಯಿತು? ಸಹನ ಶಕ್ತಿಯು ಎಲ್ಲಿ ಮಾಯವಾಯಿತು? ಶಾಶ್ವತವಾದ ಸುಖವನ್ನೂ, ಮತ್ತು ಹೇರಳವಾದ ಸಂಪತ್ತನ್ನೂ ದಯಪಾಲಿಸುವ ನಿನ್ನ ಆ ಸಾಮರ್ಥ್ಯವು ಏನಾಯಿತು? ಅನಾಥರಕ್ಷಕನೆಂದೆನಿಸಿಕೊಂಡಿರುವ ನಿನ್ನ, ಅನಾಥಸಂರಕ್ಷಣೆಯ ಸಾಮರ್ಥ್ಯವು ಎಲ್ಲಿರುವುದು? ||೧೬||

ದುಃಖಗಳನ್ನು ನಾಶಮಾಡುವುದರಲ್ಲಿ ಸಮರ್ಥವಾದ ಅಪಾರ ಮಹಿಮೆಯಿಂದ ಕೂಡಿರುವ ನೀನಿರುವಾಗ, ನಮಗೆ ಕ್ಷಣಾರ್ಧಕಾಲವಾದರೂ, ದುಃಖರಾಶಿಯು ಪ್ರಾಪ್ತವಾಗಬಹುದೇ? ಆದುದರಿಂದ ದಯಾಸಾಗರನೇ! ಈಗಲಾದರೂ ನನ್ನಲ್ಲಿ ದಯೆದೋರು. ನಮ್ಮ ಅಧೀನದಲ್ಲಿ ಅಪಾರವಾದ ಐಶ್ವರ್ಯವಿರುವುದೇ ಆದರೆ, ಆಗ ನಮಗೆ ದಾರಿದ್ರ್ಯವು ಹೇಗೆ ತಾನೇ ಸಂಭವಿಸೀತು? ||೧೭||

ಉಮಾಕಾಂತನೇ! ನಿನ್ನ ನಿರ್ಮಲವಾದ ಲಿಂಗದಲ್ಲಿ, ಒಂದೇ ಒಂದು ಬಿಲ್ವ ಪತ್ರೆಯನ್ನಾಗಲಿ, ಅಥವಾ ಹೊಸದಾದ ಕಮಲವನ್ನಾಗಲಿ, ಭಕ್ತಿಪೂರ್ವಕವಾಗಿ ಸಮರ್ಪಿಸದಿದ್ದರೆ ಆಗ ದುಃಖವು ಸಂಭವಿಸುವುದು ಸಹಜವೇ. ಆದರೆ ನಾವು ನಿನಗೆ ಭಕ್ತಿಪುರಃಸರವಾಗಿ, ನಿರ್ಮಲವಾದ ಉದಕವನ್ನೂ ಮತ್ತು ಬಿಲ್ವಪತ್ರೆಯನ್ನೂ ಸಮರ್ಪಿಸಿರುವೆನೆಂಬುದನ್ನು ಮರೆಯದೆ ಸ್ಮರಿಸುತ್ತಿರು. ||೧೮||

ಹರ ಸ್ಮರ ಹರಾಮರಪ್ರವರ ಶಂಕರೇತ್ಯುಚ್ಚಕೈಃ
ನ ನಾಟ್ಯಮಪಿ ಕಿಂ ಮಯಾ ಕೃತಮುಮಾಸಹಾಯ ಕ್ಷಣಂ ।
ಸ್ಮರ ಸ್ಮರ ಪುನಃ ಸ್ಮರ ಸ್ಮರಹರಾಶು ವೀರೇಶ್ವರ
ಪ್ರಸೀದ ದಯಯಾಧುನಾ ಹೃದಯನಿರ್ದಯತ್ವಂ ತ್ಯಜ ॥೧೯॥

ಅಪಾರಕರುಣಾದಿಕಾಖಿಲಗುಣೌಘಪೂರ್ಣಾರ್ಣವ
ಕ್ವ ತೂರ್ಣಮಪಿ ಕರ್ಮಣಾ ಮಯಿ ಚ ಶರ್ಮಣಾನುಕ್ಷಣಂ ।
ಅವಾರಣಮುಮಾಮನೋರಮಣ ಧಾರಣೇ ಕಾರಣೇ
ನಿವಾರಣಮಿದಂ ಕಥಂ ಕಥಯ ವಿಶ್ವನಾಥಾಧುನಾ ॥೨೦॥

ಭವೋದ್ಭವ ಭವತ್ಪುರಪ್ರವರಧೀರದೌವಾರಿಕೈಃ
ಪುರಂದರಪುರಃಸರಾದರನಿರಾದರಂ ವಾರಿತಾಃ ।
ದಯಾಕರ ನ ಕಾತರೇಽಪ್ಯಮರಭಾವಮಾಶಾಸ್ಮಹೇ
ಭವತ್ಪದಸರೋರುಹಭ್ರಮರಭಾಜೋ ವಯಂ ॥೨೧॥

ಓ ಸ್ವಾಮಿಯೇ, ನಿನ್ನ ಭಕ್ತರಾದ ನಾವು ಹರ, ದೇವೇಶ, ಶಂಕರ ಎಂದು ಗಟ್ಟಿಯಾಗಿ ನಿನ್ನ ನಾಮಗಳನ್ನುಚ್ಚರಿಸುತ್ತಾ ನಿನ್ನ ಸನ್ನಿಧಿಯಲ್ಲಿ ನೃತ್ಯವನ್ನು ಅಭಿನಯಿಸಲಿಲ್ಲವೇ? ಉಮಾಕಾಂತನೇ, ಆ ನಮ್ಮ ಸೇವೆಯನ್ನು ಪುನಃ ಪುನಃ ಸ್ಮರಿಸು, ಪ್ರಸನ್ನನಾಗು. ॥೧೯॥

ಸಂಪೂರ್ಣವಾದ ಕೃಪೆಗೆ ಆದಿಭೂತನಾದವನೇ, ಸಮಸ್ತ ಗುಣರಾಶಿಗೆ ಸಮುದ್ರಪ್ರಾಯನಾದವನೇ, ನಮ್ಮ ಯಾವುದೋ ಸುಕರ್ಮಗಳ ಪರಿಣಾಮವಾಗಿ ಚಿರಕಾಲ ನಿಲ್ಲದ ಸುಖವು ಲಭಿಸಿರಬಹುದು. ಆದರಿಂದ ನಮಗೆ ಪ್ರಯೋಜನ ದೊರಕದು. ಮಹಾದೇವನೇ, ಈ ಜನ್ಮಧಾರಣೆಗೆ ಕಾರಣವೆನಿಸಿದ ಮಹಾಪಾಪ ನಿವಾರಣೆಗೆ ಮುಖ್ಯಸಾಧನವಾದುದು ಯಾವುದೆಂಬುದನ್ನು ವಿವರಿಸಿ ಹೇಳುವವನಾಗು. ॥೨೦॥

ಭವೋದ್ಭವನೇ, ಇಂದ್ರಾದಿದೇವತೆಗಳು ನಿನ್ನನ್ನು ಸಂದರ್ಶಿಸುವುದಕ್ಕೋಸ್ಕರ, ನಿನ್ನ ಬಳಿಗೆ ಬರುವವರಾಗಿದ್ದರೂ, ಅವರನ್ನು ನಿನ್ನ ನಗರರಕ್ಷಕರಾದ ಸೇವಕರು ಒಳಗೆ ಬರದಂತೆ ತಡೆಗಟ್ಟುವರು. ಆದುದರಿಂದ ನಾವು ಎಂದಿಗೂ ದೇವತಾಭಾವವನ್ನು ಇಚ್ಛಿಸಲಾರೆವು. ಮತ್ತೇನೆಂದರೆ, ಭ್ರಮರಗಳು ಕಮಲವನ್ನು

ಯಮಾದಿನಿಯಮೈರಲಂ ಸಕಲಯಾಗದಾನೈರಲಂ
ತಪೋಭಿರಲಮಪ್ಯಲಂ ಕಲಿಮಲಾಪಹಂ ಕೇವಲಂ ।
ಸಶೂಲಮಮಲಾಮಲಜ್ವಲಸಭಾವಲೀಲಾರಸೈ
ರನುಕ್ಷಣಮಯಂ ಮಯಾ ಸಮಯಮೇವ ನೇಯಂ ವಯಃ ॥೨೨॥

ಶರದಿಂದುಕರಾತಿಸುಂದರಂ
ಗಿರಿಜಾಧೀರಮನೋಹರಂ ಹರಂ ।
ಗಿರಿರಾಜಕುಮಾರಿಕಾವರಂ
ಕಲಯೇ ಶಂಕರಮಿಂದುಶೇಖರಂ ॥೨೩॥

ಶರಣಾಗತವಜ್ರಪಂಜರಂ
ಪರಮಧ್ಯಾತ್ಮರತಂ ಪರಾತ್ಪರಂ ।
ಕರುಣಾರಸಸಾರಸಾಗರಂ
ಕಲಯೇ ಶಂಕರಮಿಂದುಶೇಖರಂ ॥೨೪॥

ಸದಾ ಸೇವಿಸುವಂತೆ ನಾವೂ ಸಹ ಪರಮೇಶ್ವರನ ಪಾದಗಳೆಂಬ ಕಮಲಗಳಲ್ಲಿ ಭ್ರಮರಗಳಂತೆ ಇರಲು ಅಪೇಕ್ಷಿಸುವೆವು. ॥೨೧॥

ಯಮನಿಯಮಾದಿಗಳ ಅನುಷ್ಠಾನವು ಸಾಕು. ವಿವಿಧವಾದ ದಾನಗಳಿಂದಲೂ ಯಜ್ಞಯಾಗಾದಿ ಕರ್ಮಗಳ ಅನುಷ್ಠಾನದಿಂದಲೂ ಸಾಕು. ತಪೋನುಷ್ಠಾನದಿಂದಲೂ ಇಷ್ಟಾರ್ಥ ಸಿದ್ಧಿಯುಂಟಾಗಲಾರದು. ತ್ರಿನೇತ್ರನಾದ ಪರಮಾತ್ಮನ, ರಾಗದ್ವೇಷಗಳನ್ನು ಹೋಗಲಾಡಿಸುವ ಲೀಲಾಮಯವಾದ ಕಥಾಮೃತಗಳಿಂದಲೇ ಅಮೂಲ್ಯವಾದ ಈ ಸಮಯವನ್ನು ಕಳೆಯಬೇಕಾಗಿದೆ. ಆದುದರಿಂದ ಈ ವಯಸ್ಸನ್ನು ಈಶ್ವರ ಕಥಾಶ್ರವಣದಲ್ಲಿಯೇ ವಿನಿಯೋಗಿಸಬೇಕು. ॥೨೨॥

ಶರತ್ಕಾಲದ ಚಂದ್ರನ ಕಿರಣಗಳಂತೆ ಸುಂದರನೂ, ಗಿರಿಜಾಕಾಂತನೂ, ಚಂದ್ರಚೂಡನೂ, ಪಾಪನಾಶಕನೂ ಆದ ಈಶ್ವರನನ್ನು ಸದಾ ಧ್ಯಾನಿಸುವೆ(ನು)ವು. ॥೨೩॥

ಶರಣಾಗತರನ್ನು ರಕ್ಷಿಸುವವನೂ, ನಿತ್ಯನೂ, ಆತ್ಮಾನಂದವನ್ನು ಅನುಭವಿಸುವವನೂ, ಅಜ್ಞಾನ ಸಂಬಂಧದಿಂದ ಬಿಡುಗಡೆ ಹೊಂದಿದವನೂ, ದಯಾಸಾಗರನೂ ಚಂದ್ರಶೇಖರನೂ ಆದ ಪರಮೇಶ್ವರನನ್ನು ಸರ್ವದಾ ಭಜಿಸುವೆನು. (ವು) ॥೨೪॥

ಅಮರಪ್ರವರಂ ಮಹೇಶ್ವರಂ
ರುಚಿರೋರಃಸರಹಾರಕಂಧರಂ ।
ತ್ರಿಪುರಾಸುರಮಾರಸಂಹರಂ
ಕಲಯೇ ಶಂಕರಮಿಂದುಶೇಖರಂ ॥೨೫॥

ಮನಸಾ ವಚಸಾಪಿ ಕರ್ಮಣಾ
ಶಿವಮುಸ್ಮತ್ಕುಲದೈವತಂ ಮುದಾ ।
ಕಲಯೇ ಪುನರೇವ ಸಾದರಂ
ಗಿರಿಜಾವಲ್ಲಭಮಿಂದುಶೇಖರಂ ॥೨೬॥

ನ ಜನಿರ್ನ ಜರಾ ಮೃತಿರ್ನ್ಯಥಾ
ಕಥಮುಸ್ಯಾರ್ಧಶಶಾಂಕಶೇಖರೇ ।
ಸ್ಮೃತಿಮಾರ್ಗಗತೇ ಗತಾಗತೈಃ
ಕಲಯೇ ಶಂಕರಮಿಂದುಶೇಖರಂ ॥೨೭॥

ಕರುಣಾಕರ ಶಂಕರೇತಿ ವಾ
ಹರ ಶಂಭೋ ಭಗವಂಛಿವೇತಿ ವಾ ।
ವೃಷಭೇಶ್ವರಕೇತನೇತಿ ವಾ
ಕಲಯೇ ಶಂಕರಮಿಂದುಶೇಖರಂ ॥೨೮॥

ದೇವತೆಗಳಲ್ಲಿ ಶ್ರೇಷ್ಠನೂ, ಜಗದೊಡೆಯನೂ, ಮನೋಹರವಾದ ರುದ್ರಾಕ್ಷ ಮಾಲೆಯನ್ನು ಉರಃ ಸ್ಥಲದಲ್ಲಿ ಧರಿಸಿರುವವನೂ, ಚಂದ್ರಶೇಖರನೂ ಆದಶಿವನನ್ನು ಸದಾ ಧ್ಯಾನಿಸುವೆನು. (ವು) ॥೨೫॥

ನಮ್ಮ ಕುಲದೇವತೆಯೂ, ಗಿರಿಜಾರಮಣನೂ ಆದ ಶಿವನನ್ನು ಮನೋವಾಕ್ಕಾಯ ಕರ್ಮಗಳಿಂದ ಪ್ರೀತಿಪುರಸ್ಸರವಾಗಿ ಧ್ಯಾನಿಸುವೆನು. (ವು) ॥೨೬॥

ಚಂದ್ರಶೇಖರನಾದ ಶಿವನನ್ನು ಸ್ಮರಿಸುವ ಮಾತ್ರದಿಂದಲೇ, ಜನ್ಮಜರಾದಿಗಳು ಸಂಭವಿಸುವುದಿಲ್ಲ. ಪರಲೋಕವನ್ನು ಕುರಿತು ಗಮನಾಗಮನಗಳೂ ಇರುವುದಿಲ್ಲ. ಆದುದರಿಂದಲೇ ಚಂದ್ರಚೂಡನಾದ ಪರಶಿವನನ್ನು ಸದಾ ಧ್ಯಾನಿಸುವೆನು. (ವು) ॥೨೭॥

ಕರುಣಾಕರ, ಶಂಕರ, ಶಿವ, ಹರ, ಶಂಭೋ, ಭಗವನ್, ವೃಷಭಧ್ವಜ

ತ್ರಿದಶಾಧಿಪ ಭೂತಿಭೂಷಣ
ತ್ರಿಪುರಾರೇ ಮುರವೈರಿಪೂಜಿತಾಂಘ್ರೇ ।
ಕುರು ಮಾಮಕತಾಮತಿಂ ಕ್ಷಣಂ
ಮಯಿ ನಿತ್ಯಂ ಕಲಯೇ ಮಹೇಶ್ವರಂ ॥೨೯॥

ಕಲಿಕಾಮಭಯಾಪಹಂ ಮುದಾ
ಗಿರಿಜಾಕಾಮುಕಮೇಕಮೇಕದಾ ।
ಕಲಯೇ ಕಲಯೇ ಪುನಃ ಪುನಃ
ಕಲಯೇ ಕೌತುಕಹೇತುಕಂ ಶಿವಂ ॥೩೦॥

ನವಕೋಮಲಬಿಲ್ವಪಲ್ಲವೈಃ
ಕಮಲೈರಪ್ಯಮಲೈರನುಕ್ಷಣಂ ।
ವಿಷಮೇಕ್ಷಣಮರ್ಚಯಾಮ್ಯಹಂ
ಕಲಯೇ ಶಂಕರಮಿಂದುಶೇಖರಂ ॥೩೧॥

ಎಂಬುದಾಗಿ ಶಿವನ ನಾಮಗಳನ್ನುಚ್ಚರಿಸುತ್ತಾ ಚಂದ್ರಶೇಖರನಾದ ಶಿವನನ್ನು ಸದಾ ಚಿಂತಿಸುವೆನು. ॥೨೮॥

ಓ ದೇವೇಶನೇ, ಭಸ್ಮಭೂಷಿತನೇ! ವಿಷ್ಣುವಿನಿಂದಲೂ ಪೂಜಿಸಲ್ಪಟ್ಟ ಪಾದಕಮಲಗಳಿಂದ ಶೋಭಿಸುವವನೇ! ನಾನು ನಿನ್ನವನೆಂದೇ ಸದಾ ತಿಳಿದುಕೊ. ನಿನ್ನನ್ನು ಅನವರತವೂ ಹಾಗೆ ಧ್ಯಾನಿಸುವೆನು. ॥೨೯॥

ರಾಗದ್ವೇಷಗಳನ್ನು ಹೋಗಲಾಡಿಸುವ ಗಿರಿಜಾಕಾಂತನಾದ ಪರಮೇಶ್ವರನನ್ನು ಬಾರಿ ಬಾರಿಗೂ ಸ್ಮರಿಸುವೆನು. ಪರಶಿವನೇ ನಿಜವಾದ ಪರಮಾನಂದವನ್ನು ದಯಪಾಲಿಸುವವನಾಗಿರುವನು. ॥೩೦॥

ತ್ರಿಲೋಚನನಾದ ನಿನ್ನನ್ನು ಕೋಮಲವಾದ ಬಿಲ್ವಪತ್ರೆ, ಶುಭ್ರವಾದ ತಾವರೆ ಇಂತಹವುಗಳಿಂದ ಪೂಜಿಸುತ್ತಾ, ಚಂದ್ರಶೇಖರನೆನಿಸಿದ ನಿನ್ನನ್ನೇ ಸದಾ ಧ್ಯಾನಮಾಡುತ್ತಿರುವೆನು. ॥೩೧॥

ಶಿವಮಿತ್ಯನುವೇಲಮಾದರಾ
ದನುವಾರಂ ಗಿರಿಜಾಮನೋಹರಂ ।
ಕಲಯೇ ಖಲು ಕಾಲಕಾಲ ಮಾಂ
ದಯಯಾ ಕೇವಲಯಾ ವಿಲೋಕಯ ॥೩೨॥

ದಯನೀಯತಮೋಽಸ್ಮಿ ತೇ ದಯಾ
ಮಯಿ ತಾವತ್ಪ್ರಸೃತಾ ಯದಿ ಕ್ಷಣಂ ।
ಕ್ವ ತದಾ ತವ ಹಾನಿರಾತುರೇ
ಹರ ಹಾರೇ ಕುರು ಸಾದರಂ ದಯಾಂ ॥೩೩॥

ವಿಶ್ವಾಸೋಽಪಿ ಯಥಾ ಭವೇದತಿದೃಢಸ್ತ್ವತ್ಪಾದಪದ್ಮೇ ತಥಾ
ಮಯ್ಯಾರ್ತೇ ಶರಣಾಗತೇ ಕರುಣಯಾ ತಾವದ್ವಿಧೇಯಾ ದಯಾ ।
ಸಾ ಸರ್ವಾಘಕುಲೌಘನಾಶನಕರೀ ಸಾ ಮುಕ್ತಿದಾನಕ್ಷಮಾ
ಸಾ ಸಂಪತ್ಕರುಣೋದ್ಯತಾಪಿ ಭಗವನ್ಪಾಲೇಕ್ಷಣಾನುಕ್ಷಣಂ ॥೩೪॥

ಓ ಮೃತ್ಯುಂಜಯನೇ! ಗಿರಿಜಾರಮಣನಾದ ನಿನ್ನನ್ನು ಅನವರತವೂ ಭಕ್ತಿಯಿಂದ ಚಿಂತಿಸುವೆನು. ನನ್ನನ್ನು ನಿನ್ನ ಕರುಣಾಕಟಾಕ್ಷದಿಂದ ನೋಡಿ, ಉದ್ಧರಿಸು. ॥೩೨॥

ಹರನೇ! ನೀನು ನನ್ನಲ್ಲಿ ದಯೆದೋರುವುದಾದರೆ, ನಾನು ನಿನ್ನ ದಯೆಗೆ ಪಾತ್ರನಾಗಿಯೇ ಇರುವೆನು. ನನ್ನಲ್ಲಿ ದಯೆದೋರುವುದರಿಂದ ನಿನಗುಂಟಾಗುವ ಹಾನಿಯಾದರೂ ಏನಿರುವುದು? ಆದುದರಿಂದ ನಿನ್ನ ಭಕ್ತನಾದ ನನ್ನಲ್ಲಿ ಕೃಪೆದೋರು. ॥೩೩॥

ಮುಕ್ಕಣ್ಣನೇ! ನಿನ್ನ ಭಕ್ತನಾದ ನನಗೆ ನಿನ್ನ ಅಡಿದಾವರೆಗಳಲ್ಲಿ ನಿಶ್ಚಲವಾದ ಭಕ್ತಿಯುಂಟಾಗುವಂತೆ ನನ್ನನ್ನು ಅನುಗ್ರಹಿಸು. ನಿನ್ನ ದಯೆಯೇ ಸಕಲ ಪಾಪಗಳನ್ನೂ ನಾಶಮಾಡುವುದು. ಅದೇ ಮೋಕ್ಷವನ್ನು ದಯೆಪಾಲಿಸುವುದರಲ್ಲಿಯೂ ಸಮರ್ಥವಾಗಿರುವುದಲ್ಲದೆ ಸಕಲ ಸಂಪತ್ತುಗಳನ್ನೂ ಉಂಟುಮಾಡುವುದು. ॥೩೪॥

ಏಕಸ್ತ್ವಾಮಹಂ ಕಲೌ ಕಲಿಮಲಪ್ರಧ್ವಂಸಕಂ ಶಾಸಕಂ
ಕಾಲಸ್ಯಾಪಿ ವಿನಾಶಕಂ ಜನಿಜರಾರೋಗಸ್ಯ ಕಾಮಾಂತಕಂ ।
ತ್ವಾಂ ಮತ್ವಾ ಶರಣಾಗತೋಽಸ್ಮಿ ಶರಣಂ ಚಾನ್ಯಂ ನ ಜಾನೇ ಮನಃ
ಸರ್ವೇಭ್ಯೋಽಪಿ ನಿವೃತ್ತಮೇವ ತದಿದಂ ಜಾನಾಸಿ ಗೌರೀಪತೇ ॥೩೫॥

ಕದಾಪಿ ನ ಶಿವೇತರಾಮರಕಥಾಸು ನಾಸ್ತ್ಯಾದರೋ
ನ ತದ್ಭಜನಕಾತರಂ ನ ಚ ತದರ್ಚನೇ ಕಾತರಂ ।
ಮನೋ ಮಮ ತದಾದರಾದ್ವಿದಿತಮೇವ ವೀರೇಶ್ವರ
ತ್ವಯಾ ಮಯಿ ದಯಾ ಕಥಂ ಕಥಯ ಸಾ ವಿಧೇಯಾಧುನಾ ॥೩೬॥

ಯದ್ಯೇತಸ್ಯ ಮನಃ ಶಿವೇತರಸುರಧ್ಯಾನೇ ರತಂ ತರ್ಹಿ ಮೇ
ಸದ್ಯಃ ಶ್ವಾಸಯ ಮನ್ಮನೋಹರ ಹರ ತ್ವತ್ಪಾದಪದ್ಮಂ ಪ್ರತಿ ।

ಪಾರ್ವತೀಪತಿಯೇ, ನೀನು ರಾಗದ್ವೇಷಗಳೆಂಬ ಶತ್ರುಗಳನ್ನು ನಾಶಪಡಿಸುವುದರಲ್ಲಿ ಸಮರ್ಥನೂ, ದುಷ್ಟನಿಗ್ರಹನಿಪುಣನೂ, ಮೃತ್ಯುಂಜಯನೂ ಜನ್ಮಜರಾಮರಣಗಳೆಂಬ ಮಹಾವ್ಯಾಧಿಗಳನ್ನು ಕ್ಷಣಕಾಲದಲ್ಲಿ ಹೋಗಲಾಡಿಸುವವನೂ, ಮನ್ಮಥಶತ್ರುವೂ ಆಗಿರುವೆಯೆಂದು ಭಾವಿಸಿ, ಈ ಕಲಿಯುಗದಲ್ಲಿ ನಾನೊಬ್ಬನೇ ನಿನ್ನ ಏಕಾಂತಭಕ್ತನಾಗಿ ನಿನ್ನನ್ನೇ ಮರೆಹೊಕ್ಕಿರುವೆನು. ನಿನ್ನನ್ನು ಬಿಟ್ಟು ಮತ್ತಾರನ್ನೂ ನಾನು ಆಶ್ರಯಿಸಲಾರೆ. ಈ ಚಿತ್ತವು ಸಕಲ ವಸ್ತುಗಳನ್ನೂ ಬಿಟ್ಟು ನಿನ್ನನ್ನೇ ಚಿಂತಿಸುತ್ತಿರುವುದು. ಇದನ್ನು ನೀನು ಅರಿಯೆಯಾ ! ॥೩೫॥

ವೀರೇಶ್ವರನೇ, ಶಿವನನ್ನು ಬಿಟ್ಟು ಇನ್ನಿತರ ಯಾವ ದೇವತೆಗಳ ಕಥೆಯನ್ನು ಕೇಳುವುದರಲ್ಲಿಯೂ ನನಗೆ ಆಸಕ್ತಿಯುಂಟಾಗಲಾರದು. ನನ್ನ ಈ ಮನಸ್ಸು ಇತರ ದೇವತೆಗಳನ್ನು ಭಜಿಸುವುದರಲ್ಲಾಗಲಿ, ಅರ್ಚಿಸುವುದರಲ್ಲಾಗಲಿ ಎಂದಿಗೂ ಆಸಕ್ತವಾಗಿರುವುದಿಲ್ಲ. ಇದನ್ನು ನೀನು ತಿಳಿಯದೇ ಇರುವೆ. ಹೀಗಿರುವಾಗ ಈಗಲಾದರೂ ನೀನು ನನ್ನಲ್ಲಿ ದಯೆದೋರಲಾರೆಯಾ ? ॥೩೬॥

ಪರಮೇಶ್ವರನೇ, ನಿನ್ನ ಏಕಾಂತಭಕ್ತನಾದ ಈ ನನ್ನ ಚಿತ್ತವು ನಿನ್ನನ್ನು ಬಿಟ್ಟು ಇತರ ದೇವತೆಗಳ ಧ್ಯಾನದಲ್ಲಿ ಆಸಕ್ತವಾದುದೇ ಆದರೆ, ಆಗ ನೀನು ನನ್ನನ್ನು ಶೀಘ್ರದಲ್ಲಿಯೇ ತೀವ್ರವಾದ ಶಿಕ್ಷೆಗೆ ಗುರಿಮಾಡು. ನನ್ನ ಚಿತ್ತವು ನಿನ್ನ ಅಡಿದಾವರೆಗಳಲ್ಲಿಯೇ ಲೀನವಾಗುವಂತೆ ಮಾಡು. ಇದರಿಂದ ನಿನ್ನ ಯಥಾರ್ಥ

ತೇನ ತ್ವಂ ಹರತಾಪಿ ಯಾ ತ್ವಯಿ ಸದಾ ಸಾ ರಕ್ಷಿತಃ ಸ್ಯಾನ್ನ ಚೇತ್
ವಿಶ್ವಾಸೋಽಪಿ ನ ತತ್ರ ತೇನ ಹರತಾ ಸಂಪಾದನೀಯಾ ತ್ವಯಾ ॥೩೭॥

ಏತಸ್ಯಾಣು ಮನೋಽಹರತ್ವಮಧುನಾ ಶಕ್ಯಂ ನ ಚೇತ್ತರ್ಹಿ ತೇ
ಘೋರಾಪಾರಸಸಾರಸಾಗರಮಹಾಸಂಸಾರಸಂಹಾರಕಃ ।
ಕೋ ವಾ ಸ್ಯಾದಿತಿ ಚಿಂತಯೈವ ಮರಣೇ ಸಂರಕ್ಷಣೀಯಸ್ತ್ವಯಾ
ಕಃ ಸ್ಯಾದಿತ್ಯಪಿ ಚಿಂತಯಾ ಸ ಮರಣಂ ಕಿಂ ಹಂತ ಗೌರೀಪತೇ ॥೩೮॥

ಕಲ್ಪಾಂತೇ ಯದಿ ರಕ್ಷಣೇ ತವ ಮತಿಃ ಸ್ಯಾತ್ತರ್ಹಿ ಸಾ ಕಿಂ ವೃಥಾ
ಕಲ್ಪಃ ಕೇನ ವಿಲೋಕಿತೋಽಪಿ ಕಲಿತಃ ಕಾಲಃ ಸ ಕಲ್ಪಾಂತರೇ ।
ಭೂಯಃ ಸ್ಯಾದನವಸ್ಥಿತಿಃ ಪುನರಪಿ ಸ್ಯಾದೇವಮೂರ್ತಿಃ ಪುನಃ
ಸಂಸಾರೇ ಸತಿ ರಕ್ಷಣಂ ಗತಮಿದಂ ಹಾ ಹಂತ ಗೌರೀಪತೇ ॥೩೯॥

ರೂಪವು ಅರ್ಥವಾಗುವುದು. ಅದಿಲ್ಲದಿದ್ದರೆ ನಿನ್ನಲ್ಲಿ ನಿನ್ನ ಭಕ್ತರಿಗೆ ಎಂದಿಗೂ ನಂಬಿಕೆಯುಂಟಾಗಲಾರದು. ಆದುದರಿಂದ ನೀನು ನಿನ್ನ ಧರ್ಮವನ್ನು ಈ ರೀತಿ ಕಾಪಾಡಿಕೊಳ್ಳಬೇಕು. ॥೩೭॥

ಗಿರಿಜಾವಲ್ಲಭನೇ, ಶರಣಾಗತನಾದ ನಿನ್ನ ಈ ಭಕ್ತನ ಮನಸ್ಸಿಗೆ ನೀನು ಆಶ್ರಯವನ್ನು ನೀಡಲಾರೆಯಾದರೆ ಭಯಂಕರವಾದ ಈ ಸಂಸಾರಸಾಗರದಿಂದ ನನ್ನನ್ನು ಪಾರುಗಾಣಿಸುವವರಾರು? ಮರಣಕಾಲದಲ್ಲಿ ಈ ಪ್ರಕಾರವಾದ ಚಿಂತೆಗೆ ಗುರಿಯಾಗಿರುವೆನು. ಆದುದರಿಂದ ನನ್ನನ್ನು ಕಾಪಾಡುವುದು ನಿನ್ನ ಕರ್ತವ್ಯವಲ್ಲವೆ! ಹಾಗಿಲ್ಲದಿದ್ದರೆ ನನ್ನನ್ನು ರಕ್ಷಿಸುವವರಾರು? ಎಂಬ ಚಿಂತೆಯು ಎಂದಿಗೂ ನನಗೆ ಹೋಗಲಾರದು. ॥೩೮॥

ಗಿರಿಜಾಕಾಂತನೇ! ಕಲ್ಪದ ಅಂತ್ಯದಲ್ಲಿ ಚರಾಚರಾತ್ಮಕವಾದ ಪ್ರಾಣಿವರ್ಗವನ್ನು ರಕ್ಷಿಸಬೇಕೆಂದು ನೀನು ಸಂಕಲ್ಪಿಸಿದರೆ, ನಿನ್ನ ಆ ಸಂಕಲ್ಪವು ವ್ಯರ್ಥವೇ! ಏಕೆಂದರೆ ಕಲ್ಪದ ಸೃಷ್ಟಿಗೆ ಅನುಕೂಲವಾದ ಈಕ್ಷಣವೆಂಬ ವ್ಯಾಪಾರವು ಯಾರ ಅಧೀನವಾಗಿರುವುದು? ಕಲ್ಪವನ್ನು ಸೃಷ್ಟಿಸಿರುವವರು ಯಾರು? ಮತ್ತು ಕಲ್ಪಾಂತ್ಯವನ್ನು ಕಲ್ಪಿಸುವವರಾರು? ಕಾಲನಾರು? ಈ ಲೋಕಗಳನ್ನು ಸಂಹರಿಸುವುದಕ್ಕೋಸ್ಕರ ರುದ್ರನನ್ನು ಸೃಷ್ಟಿಸಿದವರಾರು? ಇದೆಲ್ಲವೂ ನಿನ್ನಿಂದಲೇ ಉಂಟಾಗುವುದಲ್ಲವೇ? ಈ ಪ್ರಕಾರವಾಗಿ ಸಂಸಾರದ ಉನ್ನತಿಯೂ ಮತ್ತು ಅವನತಿಯೂ

ಕಿಂ ಮೇ ದುಷ್ಕೃತಮೀದೃಶಂ ವಿಸದೃಶೀ ಸಾ ದುರ್ದಶಾ ದುರ್ದಶಾಂ
ನ ಪ್ರಾಪ್ನೋತಿ ಕಥಂ ಕಥಂಚಿದಧುನಾ ಶ್ರೀವಿಶ್ವನಾಥೇ ಸ್ಮೃತೇ ।
ಕಿಂ ತದ್ದುಷ್ಕೃತಕಾರ್ಯಮಪ್ಯಹಹ ಮೇ ಕಿಂ ನಿರ್ದಯಾ ಮಯ್ಯಪಿ
ತ್ವಯ್ಯೇವಾಸ್ತು ಮನಸ್ತಥಾಪಿ ಶರಣಂ ತಂ ಚಂದ್ರಮೌಳೇ ಮಮ ॥೪೦॥

ಕದಾಚಿದಪಿ ಸಾ ದಯಾ ಭವತು ಮಯ್ಯುಮಾಕಾಂತ ತೇ
ಭವಚ್ಚರಣಪಂಕಜಸ್ಮರಣಮೇವ ಮೇ ಜೀವನಂ ।
ಅನನ್ಯಶರಣೇ ತ್ವಯಿ ಮಯಿ ದಯಾ ವಿಧೇಯಾ ನ ಕಿಂ
ವಿಧೇಯಮದಮುಯಾ ತಯಾ ಕಿಮಯಮೇವ ನಾಕಾಂಕ್ಷಿತಃ ॥೪೧॥

ಆಧೇಯಂ ಸಮಪೇಕ್ಷತೇ ಖಲು ದಯಾರತ್ನಂ ತದಾಧಾರತಾ
ಮಯ್ಯೇವಾಸ್ತು ನಿರಸ್ತಪಾತಕಕುಲೇ ಭೂಮಂಡಲೇಽಪ್ಯಂಕುರಂ ।

ಅವ್ಯಾಹತವಾಗಿ ಪರಿವರ್ತಿಸಿರುವುದು. ಆದುದರಿಂದ ಸಂಸಾರದಲ್ಲಿರುವಾಗಲೇ ನಮ್ಮನ್ನು ರಕ್ಷಿಸುವ ಭಾರವು ನಿನ್ನದಾಗಿದೆಯಲ್ಲವೇ? ॥೩೯॥

ಅಯ್ಯೋ! ನನ್ನ ಪಾಪವು ಎಷ್ಟು ಭಯಂಕರವಾಗಿರುವುದು? ಅಸಹ್ಯವಾದ ವಿಪನ್ನಾವಸ್ಥೆಯು ನನಗೀಗ ಪ್ರಾಪ್ತವಾಗಿರುವುದಲ್ಲ! ಹೀಗಿದ್ದರೂ, ಒಮ್ಮೆ, ಜಗದೊಡೆಯನಾದ ಶಿವನನ್ನು ಸ್ಮರಿಸುವ ಮಾತ್ರದಿಂದಲೇ ನನ್ನ ಆದುರ್ದೆಶೆಯು ನಾಶಹೊಂದುವುದು. ಓ, ಪ್ರಭುವೇ, ನಾನು ಯಾವ ಪಾಪಕೃತ್ಯವನ್ನು ಆಚರಿಸಿದೆನೆಂಬುದನ್ನು ಹೇಳಲಾರೆಯಾ! ಇನ್ನಾದರೂ ನನ್ನಲ್ಲಿ ದಯೆದೋರಲಾರೆಯ! ಹೇಗಾದರೂ ನನ್ನ ಚಿತ್ತವು ನಿನ್ನಲ್ಲಿಯೇ ಭಕ್ತಿಯಿಂದಡಗಿರಲಿ. ನೀನೇ ನನ್ನ ರಕ್ಷಕನಾಗಿರುವೆ ॥೪೦॥

ಉಮಾಕಾಂತನೇ! ನಿನ್ನ ದಯೆಯು ನನ್ನಲ್ಲಿ ಯಾವ ಸಮಯದಲ್ಲಾದರೂ ಆಗಲಿ. ನನಗಾದರೋ ನಿನ್ನ ಅಡಿದಾವರೆಗಳ ಸ್ಮರಣೆಯೇ ನಿತ್ಯಜೀವನ. ನಿನ್ನನ್ನೇ ಮರೆಹೊಕ್ಕಿರುವ ನನ್ನಲ್ಲಿ ನೀನು ದಯೆದೋರಲಾರೆಯಾ! ಭಕ್ತನಾದ ಈ ನಾನು ನಿನ್ನ ದಯೆಗೆ ಪಾತ್ರನಾಗಿಲ್ಲವೇ! ॥೪೧॥

ನಿನ್ನ ದಯೆಯೆಂಬ ರತ್ನವು ತನಗೆ ಒಂದು ಆಶ್ರಯವನ್ನು ಅಪೇಕ್ಷಿಸುವುದಾದರೆ ಅದಕ್ಕೆ ನಾನೇ ಆಶ್ರಯನಾಗುವೆನು. ನನ್ನಲ್ಲಿಯೇ ಅದನ್ನು ಇರಿಸುವವನಾಗು. ಅದರಿಂದ ನಾನು ಪರಿಶುದ್ಧನೂ ಕುಲಧನ್ಯನೂ ಆಗುವೆನು. ಈ ಭೂಲೋಕಲ್ಲಿ ನಿಸ್ಸಾರ

ಬೀಜಂ ಸಂಜನಯತ್ಯಪಾಸ್ತಕುಶಲೇಽಪ್ಯುತ್ಪನ್ನಬೀಜಂ ತಥಾ
ಕಿಂ ಮಯ್ಯುಪ್ಯುಪಸಾದಿತಂ ತವ ದಯಾರತ್ನಂ ನ ಮೋಕ್ಷಾಂಕುರಂ ॥೪೨॥

ಹೇ ವೀರೇಶ್ವರ ಹೇ ಕೃಪಾರ್ಣವ ದಯಾಲೇಶೋಽಪಿ ಚಿತ್ತೇ ಮಯಿ
ಪ್ರಾಯಃ ಪಾತಕಕಾನನಾನಲಶಮೋಽಪಾಯಃ ಸ ಏವಾಧುನಾ ।
ಸಿದ್ಧಿಂ ಕಿಂ ಮದಪೇಕ್ಷಿತಾಂ ನ ಜನಯೇತ್ಕಿಂ ವಾ ಕೃತಾರ್ಥೋಽಸ್ಮ್ಯಹಂ
ತೇನೈವೇತಿ ನ ಬುದ್ಧಿರದ್ಭುತತಮಾ ಸಿದ್ಧಾ ನ ಕಿಂ ಮೇ ವದ ॥೪೩॥

ಅತ್ಯಾರ್ತಾಯ ಭಿಷಕ್ತ್ವಮೋಽಸಿ ಭಗವನ್ನಾರ್ತಿಶ್ಚ ಸಂಸಾರಜಾ
ಸಾ ತಾವತ್ತ್ವದವೇಕ್ಷಣಾದಪಿ ಲಯಂ ಪ್ರಾಪ್ನೋತಿ ಕಾ ತಾವತಾ ।
ಹಾನಿಃ ಸ್ಯಾದಧುನಾಪಿ ತೇ ಯದಿ ದಯಾ ನ ಸ್ಯಾತ್ತದಾ ಜೀವನಂ
ನ ಸ್ಯಾದೇವ ತತಃ ಪರಂ ನ ದಯಯಾ ಕೃತ್ಯಂ ನ ವಾ ಭೇಷಜ್ಯೈಃ ॥೪೪॥

ವಾದ ಪ್ರದೇಶದಲ್ಲಿಯೂ ಬೀಜದಿಂದ ಮೊಳಕೆಯುಂಟಾಗುವುದು. ಹೀಗಿರುವಾಗ ನಿನ್ನ ದಯಾರತ್ನವೆಂಬ ಬೀಜವನ್ನು ನಿನ್ನ ಏಕಾಂತಭಕ್ತನಾದ ನನ್ನಲ್ಲಿ ಇರಿಸಿದರೆ ಅದರಿಂದ ಮೋಕ್ಷವೆಂಬ ಮೊಳಕೆಯು ಆವಿರ್ಭವಿಸಲಾರದೇ ? ॥೪೨॥

ವೀರೇಶ್ವರನೇ! ಕೃಪಾಸಿಂಧುವೇ! ನಿನ್ನ ಕೃಪಾಲೇಶವಾದರೂ ನನ್ನಲ್ಲಿ ಇದ್ದುದೇ ಆದರೆ, ಅದರಿಂದಲೇ ಕಾಡುಕಿಚ್ಚಿನಂತೆ ಭಯಂಕರವಾದ ನನ್ನ ಪಾಪ ರಾಶಿಯು ಕ್ಷಣಕಾಲದಲ್ಲಿ ದಹಿಸಿ ಹೋಗಲಾರದೇ! ಅದರಿಂದಲೇ ನನ್ನ ಇಷ್ಟಾರ್ಥವು ಸಿದ್ಧಿಸಿ ಕೃತಾರ್ಥನಾಗುವೆನಲ್ಲವೇ! ಆಗ ನಿನ್ನ ದಯಾಲೇಶದ ಮಹಿಮೆಯಿಂದಲೇ ನನ್ನ ಇಷ್ಟಾರ್ಥಗಳೆಲ್ಲವೂ ಸಿದ್ಧಿಸುವುದು ನಿಶ್ಚಯವೆಂದು ನಾನು ತಿಳಿದುಕೊಳ್ಳುವುದಿಲ್ಲವೇ! ಅದನ್ನು ನನಗೆ ಹೇಳುವವನಾಗು. ॥೪೩॥

ಭಗವಂತನೇ! ಮನೋವ್ಯಾಧಿಯಿಂದ ಪೀಡಿತನಾದವನ ವ್ಯಾಧಿಯನ್ನು ನಾಶಪಡಿಸುವುದರಲ್ಲಿ ನೀನು ಶ್ರೇಷ್ಠನಾದ ವೈದ್ಯನಾಗಿರುವೆ. ಆ ವ್ಯಾಧಿಯು ಸಂಸಾರ ಸಂಬಂಧದಿಂದ ಉಂಟಾಗಿರುತ್ತದೆ. ಅದು ನಿನ್ನ ದರ್ಶನಮಾತ್ರದಿಂದಲೇ ಸಂಪೂರ್ಣ ನಾಶವಾಗುವುದು. ಮನೋವ್ಯಾಧಿಯು ನಾಶವಾಗಲು ಬಳಿಕ ಯಾವ ತೊಂದರೆಯು ತಾನೇ ಸಂಭವಿಸೀತು ? ಓ ಪ್ರಭುವೇ! ಇನ್ನಾದರೂ ನೀನು ದಯೆದೋರದಿದ್ದರೆ ನನ್ನ ಜೀವನವು ನಶಿಸಿದಂತೆಯೇ ಸರಿ. ಪ್ರಾಣಗಳು ಈ ಶರೀರವನ್ನು ಆಗಲಿ ಹೋದ ಬಳಿಕ ನೀನು ನನ್ನಲ್ಲಿ ದಯೆದೋರಿಯಾದರೂ ಯಾವ ಪ್ರಯೋಜನ

ಯಾವಜ್ಜೀವತಿ ತಾವದೇವ ಭಿಷಜಾಂ ಭೈಷಜ್ಯಚಿಂತಾ ಭವೇತ್
ನಿರ್ವೃತ್ತಂ ಯದಿ ಜೀವನಂ ಕ್ವ ಭಿಷಜಾಂ ವಾರ್ತಾಪಿ ಕಾರ್ತಸ್ವರೈಃ ।
ಕೃತ್ಯಂ ತತ್ರ ಕೃತಾಂತದೂತಕೃತಮುತ್ಪ್ರಾರ್ತಂ ಶರೀರಂ ತದಾ
ತತ್ಕಾರ್ತಾಂತವಿಲೋಕನೇನ ಕಥಮುಪ್ಯರ್ಧೇಂದುಮೌಳೇ ವದ ॥೪೫॥

ದಾತಾ ನ ತ್ವಾದೃಶೋಽಸ್ತಿ ತ್ರಿಭುವನಭುವನೇ ದೇಯಮುಸ್ತ್ವತ್ರ ಭಕ್ತಿಃ
ತಲ್ಲೇಶೋ ವಾ ಮಹೇಶ ಪ್ರಶಮನಸಮಯೇ ಯಾಚಕಸ್ತೇ ಕಿಲಾಹಂ ।
ಮದ್ವೈಮುಖ್ಯಂ ಸುಮುಖ ಸಹಸಾ ನೋಚಿತಂ ತೇ ಯತಸ್ತೇ
ದೇಯಂ ಸರ್ವಸ್ವಮೇತತ್ಕಿಮಿತಿ ಹ ನ ಮತಿಃ ಪೂರ್ಣಕಾಮಸ್ಯ ಶಂಭೋ ॥೪೬॥

ವಿರುವುದು ? ಅಥವಾ ಇನ್ನಿತರ ಔಷಧಗಳಿಂದಲಾದರೂ ಪ್ರಯೋಜನವಿರುವುದೇ ? ॥೪೪॥

ರೋಗಿಗೆ ಜೀವಿಸಿರುವವರೆಗೆ ವೈದ್ಯರ ಔಷಧಿಯ ಚಿಂತೆ ಇರುವುದು. ಪ್ರಾಣಗಳು ಶರೀರವನ್ನು ಬಿಟ್ಟುಹೋದ ಬಳಿಕ ದುಃಖಪೂರಿತವಾದ ಆರ್ತನಾದಗಳೇ ವಿನಾ, ಆಗ ವೈದ್ಯರ ಚಿಂತೆಗೆ ಅವಕಾಶವೇ ಇರುವುದಿಲ್ಲ. ಪ್ರಾಣಗಳು ಹೋದ ಬಳಿಕ ಮುಂದಿನ ಕರ್ತವ್ಯಗಳು ಯಮದೂತರ ಅಧೀನವಾಗುವುವು. ಪ್ರಾಣಗಳು ಶರೀರವನ್ನು ಬಿಟ್ಟುಹೋಗುವ ಸಮಯದಲ್ಲಿ ಯಮದೂತರ ದರ್ಶನದಿಂದಲೇ ಈ ಶರೀರವು ಜರ್ಜರಿತವಾಗುವುದು. ಹೀಗೆ ಸದಾ ದುಃಖಭೂಯಿಷ್ಠವಾದುದು ಈ ಶರೀರ. ॥೪೫॥

ಓ ಮಹೇಶನೇ ,ನಿನಗೆ ಸಮಾನನಾದ ದಾನಿಯೂ, ನನಗೆ ಕೊಡಬಾರದ ವಸ್ತುವೂ, ಮೂರು ಲೋಕಗಳಲ್ಲಿ ಎಲ್ಲಿಯೂ ಕಾಣುವುದಿಲ್ಲ. ನಿನ್ನ ವಿಷಯದಲ್ಲಿ ನನಗೆ ಭಕ್ತಿ ಲೇಶವಾದರೂ ಉಂಟಾಗುವಂತೆ ಅನುಗ್ರಹಿಸು. ಮರಣಕಾಲವು ಸಮಿಾಪಿಸಿರಲು, ಈಗ ನಾನು ಯಾಚಕನಾಗಿ ನಿನ್ನ ಬಳಿಗೆ ಬಂದಿರುವೆನು. ಇನ್ನಾದರೂ ನನ್ನನ್ನು ತಿರಸ್ಕರಿಸುವುದು ನಿನಗೆ ಶೋಭಿಸುವುದಿಲ್ಲ. ಸ್ವಾಮಿಯೇ, ಆಪ್ತಕಾಮನಾದ ನಿನ್ನಲ್ಲಿ ಶರಣಾಗತನಾದ ನನಗೆ ನಿನ್ನ ಸರ್ವಸ್ವವನ್ನೂ ಕೊಟ್ಟು ಕಾಪಾಡಬೇಕೆಂಬ ಉದಾರವಾದ ಭಾವನೆಯು ಇನ್ನೂ ಉದಯಿಸಿರುವುದಿಲ್ಲವೇ ? ॥೪೬॥

ತ್ವಯಾ ಯದಿ ನ ದೀಯತೇ ಮಯಿ ದಯಾಪಿ ಸಾ ಕಿಂ ದಯಾ ।
ಸ್ವಯಂ ಮಯಿ ಪತಿಷ್ಯತಿ ಪ್ರಿಯತಮೋ ಮುಹುಃ ಸಾದರಂ
ತತಃ ಪರಮಹೋ ಕಿಮಿತ್ಯಪಿ ನ ಚಿಂತಯಾ ಕಿಂ ತಯಾ
ಸ್ವಯಂ ಯದಿ ನ ದೀಯತೇ ಕ್ವಚಿದಪೇಕ್ಷಿತಾ ಸ್ಯಾದ್ಗತಿಃ ॥೪೭॥

ಅನನ್ಯಶರಣೋಽಯಮಿತ್ಯಪಿ ಮತಿರ್ನ ಕಿಂ ತೇ ತತಃ
ತವಾಪಿ ಪರಿಪಾಲನೇ ಮತಿರುದೇತು ಮಯ್ಯಾತುರೇ ।
ಲಲಾಟಲಿಖಿತಾಕ್ಷರಂ ಪರಿಹರಾಶಿದುಷ್ಟಂ ಮುಹುಃ
ಲಲಾಟನಯನಾರ್ಚನೇಽಪ್ಯಹಹ ಕಷ್ಟಮೇವಂ ಕಥಂ ॥೪೮॥

ಉಪೇಂದ್ರೋ ನೇತ್ರಾಬ್ಜಂ ಶಿವಚರಣಪಂಕೇರುಹಗತಂ
ಚಕಾರಾತಃ ಪ್ರೀತಃ ಶಿವ ಇತಿ ಚ ವಿಶ್ವಸ್ಯ ತು ಮಯಾ ।
ಮನಸ್ತ್ವತ್ಪಾದಾಬ್ಜೇ ನಿಹಿತಮಿದಮೇವಾಸ್ಯ ಹಿ ಧನಂ
ಗೃಹೀತ್ವಾ ವ್ಯಾಕೋಚಂ ಕಿಮಿತಿ ಕುರುಷೇ ಶಂಕರ ಫಲಂ ॥೪೯॥

ನೀನೇ ನನ್ನಲ್ಲಿ ದಯದೋರಲಾರೆಯಾದರೆ, ಅಚೇತನವಾದ ಆ ದಯೆಯು ನನ್ನಲ್ಲಿ ನೆಲಸೀತೇ ? ನೀನು ಹೃತ್ಪೂರ್ವಕವಾಗಿ ನನ್ನಲ್ಲಿ ದಯೆದೋರದಿದ್ದರೆ ನನ್ನ ಇಷ್ಟಾರ್ಥವು ಎಂದಾದರೂ ಕೈಗೂಡುವುದೇ ? ಆದುದರಿಂದ ನಾವು ಅದಕ್ಕೋಸ್ಕರ ಚಿಂತಿಸಿ ಫಲವೇನು ? ಅಯ್ಯೋ, ವಿಧಿವಿಲಾಸವನ್ನು ಏನೆಂದು ವರ್ಣಿಸಲಿ ? ಪರಶಿವನ ದಯೆಯೊಂದು ದೊರತರೆ ಸಾಕು. ॥೪೭॥

ನಾನು ನಿನ್ನನ್ನೇ ಮೊರೆಹೋಗಿರುವೆನೆಂಬುದನ್ನು ನೀನು ಅರಿಯಲಾರೆಯಾ ! ಇನ್ನಾದರೂ ಸಂಕಟಕ್ಕೆ ಗುರಿಯಾದ ನನ್ನನ್ನು ಕಾಪಾಡುವ ಔದಾರ್ಯವು ನಿನ್ನಲ್ಲುಂಟಾಗಲೆಂದು ಪ್ರಾರ್ಥಿಸುವೆನು. ವಿಧಿಯು ಬರೆದ ದೌರ್ಭಾಗ್ಯಸೂಚಕವಾದ ಲಲಾಟರೇಖೆಯನ್ನು ಅಳಿಸು. ಫಾಲೇಕ್ಷಣನಾದ ನಿನ್ನನ್ನು ಭಜಿಸಿದರೂ ನನಗೆ ಈ ದುರ್ದೆಶೆಯೇ ? ॥೪೮॥

ಹಿಂದೆ ಒಂದಾನೊಂದು ಕಾಲದಲ್ಲಿ ವಿಷ್ಣುವು ತನ್ನ ನೇತ್ರಕಮಲವನ್ನು ಕಿತ್ತು, ಶಿವನ ಅಡಿದಾವರೆಗಳಲ್ಲಿರಿಸಿದನು. ಅದರಿಂದ ಶಿವನು ಸುಪ್ರೀತನಾದನು. ಅವರಂತೆಯೇ ಶಿವನು ಭಕ್ತವತ್ಸಲನಾಗಿರುವನೆಂದು ನಂಬಿ ನನ್ನ ಮನಸ್ಸನ್ನೇ ನಿನ್ನ ಅಡಿದಾವರೆಗಳಲ್ಲಿ ಇರಿಸಿದೆನು. ಅದೇ ನನ್ನ ಧನವಲ್ಲವೇ ? ಅದನ್ನು

ಕಿಮುಕ್ತೈರವ್ಯಕ್ತೈರಹಹ ವಚನೈರಪ್ಯಲಮಲಂ
ಮಹಾಕಾಲವ್ಯಾಲಪ್ರಬಲಖಲ ಕಾಲಂ ಭಜ ಮನಃ ।
ಹಿತಂ ತೇ ತೇನೈವ ಪ್ರಭವತಿ ಚ ಸಂಭಾವಿತಮಪಿ
ಪ್ರಭುರ್ನಾನ್ಯಾಧೀನಃ ಪರಮಕರುಣಾಸಾಗರ ಇತಿ ॥೫೦॥

ಇತಿ ಸ್ತುತೋ ಮಹಾದೇವಃ ಪ್ರಸನ್ನಃ ಕರುಣಾನಿಧಿಃ
ದದೌ ಸುರೇಭ್ಯಃ ಪರಮಂ ಸುಖಂ ತುಷ್ಟಾಶ್ಚ ತೇ ಸುರಾಃ ॥೫೧॥

ಅತಃ ಪರಂ ಭವದ್ಭಿಶ್ಚ ವಿಧೇಯಂ ಶಿವಪೂಜನಂ ।
ತೇನೈವ ತುಷ್ಟೋ ಭಗವಾನಭೀಷ್ಟಮಪಿ ದಾಸ್ಯತಿ ॥೫೨॥

॥ ಬ್ರಹ್ಮೋವಾಚ ॥

ಇತ್ಯುಕ್ತ್ವಾ ಭಗವಾಂಸ್ತತ್ರ ಪ್ರಣತಸ್ತಾಭಿರಾಪರಾತ್ ।
ಅದೃಶ್ಯಃ ಸಮಭೂದೇವ ತತಸ್ತಾಃ ಶಂಕಿತಾ ಭೃಶಂ ॥೫೩॥

ಸ್ವೀಕರಿಸಿಯೂ ಸಹ ನೀನು ನನ್ನ ಇಷ್ಟಾರ್ಥವನ್ನು ಪೂರಯಿಸಲು ಅದೇಕೆ ಹಿಂಜರಿಯುವೇ ? ॥೪೯॥

ದೀನವಾದ ಈ ಮಾತುಗಳಿಂದೇನು ಪ್ರಯೋಜನ ? ಇನ್ನು ಈ ಮಾತುಗಳು ಸಾಕು. ಎಲೈ ದುಷ್ಟವಾದ ಚಿತ್ತವೇ, ಇನ್ನಾದರೂ ಅಂತಕಾಂತಕನಾದ ಶಿವನನ್ನು ಭಜಿಸು. ಅದರಿಂದ ನಿನಗೆ ಶುಭವುಂಟಾಗುವುದು. ಕರುಣಾಕರನಾದ ಶಿವನು ಇನ್ನಾವುದರಿಂದಲೂ ಸುಪ್ರೀತನಾಗಲಾರನು." ॥೫೦॥

ದೇವತೆಗಳು ಈ ರೀತಿಯಲ್ಲಿ ಶಿವನನ್ನು ಸ್ತುತಿಸಲು, ಅದರಿಂದ ಕರುಣಾಕರನಾದ ಶಿವನು ಪ್ರಸನ್ನನಾಗಿ ಅವರಿಗೆ ಪರಮಸೌಖ್ಯವನ್ನುಂಟುಮಾಡಿದನು. ಆಗ ಆ ದೇವತೆಗಳೂ ಸಹ ಸಂತೋಷಗೊಂಡರು. ॥೫೧॥

ಎಲೈ, ವಿದ್ಯಾಮೂರ್ತಿಗಳೇ, ಆದುದರಿಂದ ನೀವೂ ಸಹ ಶಿವನನ್ನು ಪೂಜಿಸಿರಿ. ಅದರಿಂದಲೇ ಶಿವನು ಸುಪ್ರೀತನಾಗಿ ನಿಮ್ಮ ಇಷ್ಟಾರ್ಥಗಳನ್ನೂ ನೆರವೇರಿಸುವನು." ಎಂದು ವೇಷಧಾರಿಯಾದ ಶಂಕರನು ನುಡಿದನು. ॥೫೨॥

ಆ ವಿದ್ಯಾಮೂರ್ತಿಗಳು ಮತ್ತೆ ಭಗವಂತನನ್ನು ಸ್ತುತಿಸಿ ನಮಸ್ಕರಿಸಿದರು. ಬಳಿಕ ಶಿವನು ಸ್ತುತ್ಯನಾಗಿ ಮಾಯವಾಗಲು, ಅದನ್ನು ಕಂಡು ಆ ವಿದ್ಯಾಮೂರ್ತಿಗಳು ಶಂಕಿಸತೊಡಗಿದರು. ॥೫೩॥

ಅಹೋ ಕೋಽಯಂ ದೃಷ್ಟೋ ನಯನಸುಭಗೋ ವೃದ್ಧವಪುಷಾ ।
ಮಹಾದೇವಃ ಸೋಽಯಂ ಕಿಮಿತಿ ವಿದಿತೋ ನೇಶ್ವರ ಇತಿ
ಅಹೋ ಭಾಗ್ಯಂ ನಾಸೀದ್ಗಿರವರಸುತಾಕಾಂತಭಜನೇ
ನ ಬಿಲ್ವಂ ವಾ ದತ್ತಂ ಶಿವಚರಣಪಂಕೇರುಹತಲೇ ॥೫೪॥

ಅಹೋ ದಿಗ್ಧಿಗ್ಜನ್ಮ ವ್ರಜತು ವಿಲಯಂ ಯಾತು ನಿರಯಂ
ಮಹಾಕಾಲಾಗ್ನೌ ವಾ ಪತತು ಝಟಿತಿ ವ್ಯಕ್ತಮಧುನಾ ।
ಕಥಂ ಭಸ್ಮೀಭೂತಂ ನ ಭವತಿ ಶರೀರಂ ಶಿವಪದಂ
ನ ದೃಷ್ಟಂ ಕಷ್ಟಾನಾಮುಪನಯನಶಕ್ತಂ ಕ್ಷಣಮಪಿ ॥೫೫॥

ಉಮಾಕಾಂತಂ ಶಾಂತಂ ಸಕೃದಪಿ ನಮಂತೋ ವಿಧಿಮುಖೈಃ
ಮುಹುರ್ದೇವೈಃ ಸರ್ವೈರಪಿ ಸತತಮುಚ್ಚಾರ್ಯಃ ಸುರಪದಂ ।
ಅತೀತ್ಯಾಂತೇ ತೇ ತೇ ಶಿವಚರಣಪಂಕೇರುಹರಜಃ
ಸಮಾಸಾದ್ಯಾನಂದ್ಯೈರನುದಿನಮವಿಶ್ರಾಂತಹೃದಯಾಃ ॥೫೬॥

"ಇದೇನಚ್ಚರಿ! ಈಗ ನಾವು ನೇತ್ರಾನಂದಕರನಾದ ವೃದ್ಧನ ವೇಷವನ್ನು ಧರಿಸಿ ಬಂದ ಓರ್ವ ದಿವ್ಯಪುರುಷನನ್ನು ನೋಡಿದೆವಲ್ಲ! ಅವನಾರಾಗಿರಬಹುದು! ಜಗತ್ಪ್ರಭುವಾದ ಅವನೇ ಈಶ್ವರನೆಂದು ನಾವೇಕೆ ತಿಳಿದುಕೊಳ್ಳಲಾರದೇ ಹೋದೆವು! ಅಯ್ಯೋ! ಉಮಾರಮಣನಾದ ಪರಮೇಶ್ವರನನ್ನು ಭಜಿಸುವಭಾಗ್ಯವು ನಮಗೆ ಲಭಿಸಲಿಲ್ಲ. ಅವನ ಅಡಿದಾವರೆಗಳಲ್ಲಿ ಒಂದೇ ಒಂದು ಬಿಲ್ವಪತ್ರೆಯನ್ನಾದರೂ ಸಮರ್ಪಿಸಲಿಲ್ಲ. ॥೫೪॥

ಅಯ್ಯೋ! ನಮ್ಮ ಈ ಜನ್ಮಕ್ಕೆ ಧಿಕ್ಕಾರವಿರಲಿ. ನಮ್ಮ ಜೀವವು ನರಕಕ್ಕೆ ಹೋಗಲಿ. ಅಥವಾ ಭಯಂಕರವಾದ ಕಾಡುಕಿಚ್ಚಿನಲ್ಲಾದರೂ ಬೀಳಲಿ. ಈ ಶರೀರ ವೇತಕ್ಕೆ ದಹಿಸಿ ಭಸ್ಮಾವಶೇಷವಾಗಬಾರದು! ಸಕಲ ತೊಂದರೆಗಳನ್ನೂ ಹೋಗಲಾಡಿಸುವ ಸಾಮರ್ಥ್ಯವುಳ್ಳ ಶಿವಪದವನ್ನು ನೋಡಿದಿರುವ ಈ ಜನ್ಮವೇತಕ್ಕೆ? ॥೫೫॥

ಬ್ರಹ್ಮಾದಿ ದೇವತೆಗಳು ಶಾಂತಮೂರ್ತಿಯಾದ ಗಿರಿಜಾರಮಣನನ್ನು ನಮಸ್ಕರಿಸಿ ಅರ್ಚಿಸಿ, ಅಂತ್ಯದಲ್ಲಿ, ಶಿವನ ಅಡಿದಾವರೆಗಳ ಧೂಳಿನ ಅನುಗ್ರಹಕ್ಕೆ ಪಾತ್ರ

ಸ್ತುತೋ ವಾ ಯೋ ಭಕ್ತ್ಯಾ ಸಕೃದಪಿ ಸ ಏವಾಮರಮಣಿಃ
ಕರೋತಿ ಶ್ರೀಮಂತಂ ಪದಮಪಿ ಸುಖಸ್ಯಾಶು ದಯಯಾ ।
ಅನಲ್ಪಾನಲ್ಪಾನ್ವಾ ನ ಗಣಯತಿ ಕಾರುಣ್ಯಜಲಧಿಃ
ಮಹಾದೇವೋ ದೇವಃ ಕಥಮಪಿ ನ ದೃಷ್ಟೋ ಮುಹುರಪಿ ॥೫೭॥

ನ ಯದ್ರೂಪಂ ದೃಷ್ಟಂ ಸಕೃದಪಿ ವಿಧೀಂದ್ರಾದಿಭಿರಪಿ
ಪ್ರಪನ್ನಾನಾಮಾರ್ತಿಂ ಶಮಯತಿ ಸಕೃದ್ವಾ ಶ್ರುತಮಪಿ ।
ಕಥಂ ವಾರಂ ವಾರಂ ನಯನಕಮಲೈರರ್ಚಿತಮಪಿ
ಸ್ವತೋ ನಾಸೀನ್ನಾಸೀನ್ಮನಸಿ ಶಿವಬುದ್ಧಿಃ ಕಥಮಪಿ ॥೫೮॥

ನಿಧಾನಕಲಶೋ ಗತಃ ಕರಗತೋಽಪಿ ಹಾ ಹಾ ಕಥಂ
ವೃಥಾ ಕಿಮಿತಿ ಜೀವನಂ ಮೃತಸಮಾನಮೇವಾಧುನಾ ।
ಮಹೇಶಚರಣಾಂಬುಜಸ್ಮರಣಕಾರಣೇಽಸುಕ್ಷಣಂ
ಕಥಂ ನ ಕೃತಮೇವ ಸಾ ಮತಿರಭೂತ್ಕಥಂ ಕುಂಠಿತಾ ॥೫೯॥

ರಾಗಿ, ಸುರಪದವಿಯನ್ನು ದಾಟಿ ಪರಮೇಶ್ವರನ ಅಡಿದಾವರೆಗಳನ್ನು ಹೊಂದಿ ಶಾಂತಚಿತ್ತದಿಂದ ಪರಮಾನಂದನವನ್ನು ಭವಿಸುವರು. ॥೫೬॥

ದೇವೇಶನಾದ ಶಿವನು ಒಂದೇ ಒಂದು ಬಾರಿ ತನ್ನನ್ನು ಸ್ತುತಿಸಿದರೂ ಸಹ ಆ ಸ್ತೋತ್ರಕ್ಕೆ ಮೆಚ್ಚಿ, ಪರಮಸುಖಕ್ಕೆ ಕಾರಣವಾಗಿರುವ ಸಂಪದ್ಯುಕ್ತವಾದ ತನ್ನ ಪದವಿಯನ್ನು ಭಕ್ತರಿಗೆ ದಯಪಾಲಿಸುವನು. ಕರುಣಾಸಾಗರನಾದ ಅವನಿಗೆ ತನ್ನ ಭಕ್ತರಲ್ಲಿ, ಇವನು ಹೀನನು ಎಂಬ ಕ್ಷುದ್ರವಾದ ಭೇದಭಾವನೆಯೇ ಇರುವುದಿಲ್ಲ. ಅಂತಹ ಭಗವಂತನನ್ನು ನಾವು ಪುನಃ ನೋಡಲಿಲ್ಲವಲ್ಲ. ॥೫೭॥

ಬ್ರಹ್ಮ, ಇಂದ್ರ ಮುಂತಾದ ದೇವತೆಗಳೂ ಸಹ ಶಿವನ ರೂಪವನ್ನು ಸಾಕ್ಷಾತ್ಕರಿಸಿರುವುದಿಲ್ಲ. ಅದು ದುಃಖಪೀಡಿತರಾದ ಜನರ ಸಂಕಟವನ್ನು ಶ್ರವಣ ಮಾತ್ರದಿಂದಲೇ ಹೋಗಲಾಡಿಸುವುದು. ಆ ಶಿವರೂಪವನ್ನು ಬಾರಿ ಬಾರಿಗೂ ನಮ್ಮ ನೇತ್ರಕಮಲಗಳಿಂದ ಅರ್ಚಿಸಿದೆವು. ಆದರೂ ಅದರ ನಿಜರೂಪವನ್ನು ನಾವು ತಿಳಿಯಲಾರದೇ ಹೋದೆವಲ್ಲಾ. ॥೫೮॥

ಅಯ್ಯೋ! ಇದೇನಚ್ಚರಿ! ಕೈಗೆ ಸಿಕ್ಕಿದ ನಿಧಿಯ ಕಲಶವು ಮಾಯವಾಯಿತಲ್ಲ! ವ್ಯರ್ಥವಾದ ಈ ಜೀವನವು ಇದ್ದರೂ ಇಲ್ಲದಿದ್ದರೂ ಒಂದೇ

ಅಪಾರಪಾಪಾಂಬುಧಿಶೋಷಕಸ್ಯ
ಮಹೇಶ್ವರಸ್ಯಾಮಿತವಿಕ್ರಮಸ್ಯ ।
ಪಾದಾರವಿಂದಸ್ಮರಣಂ ಕ್ಷಣಂ ವಾ
ಕ್ಷಣಾರ್ಧಮಪ್ಯಾಶು ತನೋತಿ ಮುಕ್ತಿಂ ॥೬೦॥

ಅಹೋ ಭಾಗ್ಯಂ ಲೋಕೇ ಕಥಮಪಿ ಕೃತಾಂತಾಂತಕಪದ
ಪ್ರಸಾದಾರ್ಥಂ ಯತ್ನೋ ನ ಭವತಿ ಸುರಾಣಾಮಪಿ ನೃಣಾಂ ।
ಕಥಂ ವಾ ತದ್ಭೂಯಾದಿತಿ ಮನಸಿ ಚಿಂತಾಪಿ ನಿರತಾ
ಮಹಾದೇವೈಶ್ವರ್ಯಂ ಕಥಮಪಿ ನ ಚಿಂತಾವಧಿ ಮಿತಂ ॥೬೧॥

ಅಪಾರಂ ಯಸ್ಯ ಸ್ಯಾದವಿತಥಮಪಾರಂ ಸಕೃದಪಿ
ಪ್ರಭೂತಂ ತದ್ಭಾಗ್ಯಂ ಶ್ರುತಮಪಿ ನ ಕೇನಾಪಿ ತಪಸಾ
ತದೈಶ್ವರ್ಯೇ ಯತ್ತಾ ಶ್ರುತಿಗಣವಿಮೃಗ್ಯಾಪಿ ನ ತತಃ
ತಮೀಶಾನಂ ಕೋ ವಾ ಭಜತಿ ಗಿರಿಜಾಲಿಂಗಿತತನುಂ ॥೬೨॥

ಆಯಿತಲ್ಲಾ! ಇದ್ದರೂ ಮೃತಿಯನ್ನು ಹೊಂದಿದಂತೆಯೇ ಸರಿ. ಕ್ಷಣಕಾಲವಾದರೂ ಈ ಚಿತ್ತವು ಶಿವನ ಅಡಿದಾವರೆಗಳನ್ನು ಸರಿಯಾಗಿ ಸ್ಮರಿಸಲಿಲ್ಲವಲ್ಲಾ! ॥೫೯॥

ದಾಟಲಸಾಧ್ಯವಾದ ಪಾಪವೆಂಬ ಸಮುದ್ರವನ್ನು ಒಣಗಿಸುವ ಮತ್ತು ಅತುಲವಾದ ಪರಾಕ್ರಮವುಳ್ಳ ಪರಮೇಶ್ವರನ ಅಡಿದಾವರೆಗಳನ್ನು ಕ್ಷಣಕಾಲವಾದರೂ ಸ್ಮರಿಸಿದರೆ ಅದು ಶೀಘ್ರವಾಗಿ ಮುಕ್ತಿಯನ್ನು ಕರುಣಿಸುವುದು. ॥೬೦॥

ಅಹೋ ಆಶ್ಚರ್ಯ, ಈ ಲೋಕದಲ್ಲಿ ಮನುಷ್ಯರಾಗಲಿ ಅಥವಾ ದೇವತೆಗಳಾಗಲಿ ಮೃತ್ಯುಂಜಯನ ಪಾದಪ್ರಸಾದವನ್ನು ಪಡೆಯುವುದರಲ್ಲಿ ಪ್ರಯತ್ನಿಸುವುದಿಲ್ಲ. ಇದು ವಿಧಿವಿಲಾಸವೇ! ಪರಮೇಶ್ವರನ ಅಡಿದಾವರೆಗಳ ಅನುಗ್ರಹವನ್ನು ಹೊಂದಬೇಕೆಂಬ ಇಚ್ಛೆಯು ನಮಗೆಂದು ಉದಯಿಸುವುದೋ ಎಂದು ಚಿಂತಾಕ್ರಾಂತರಾಗಿರುವೆವು. ಜಗದೊಡೆಯನಾದ ಪರಮೇಶ್ವರನ ಮಹಿಮಾತಿಶಯವನ್ನು ವರ್ಣಿಸಲು ಅಸಾಧ್ಯವಲ್ಲವೆ! ॥೬೧॥

ಆ ಪರಶಿವನ ಸೌಭಾಗ್ಯವು ಅತುಲವೂ ಶಾಶ್ವತವೂ ಆಗಿರುವುದು. ತಪೋಽನುಷ್ಠಾನವನ್ನು ಕೈಗೊಂಡರೂ ಅದರ ಮಹಿಮೆಯನ್ನು ಕೇಳಿ ತಿಳಿಯಲು ಅಖಂಡ ಶಿವನ ನಿತ್ಯಸೌಭಾಗ್ಯವನ್ನು ವೇದಗಳು ಎಲ್ಲಿಯೂ ಸರಿಯಾಗಿ ಹೇಳಿರುವು

ಉಪೇಂದ್ರಾದ್ಯಾಃ ಸರ್ವೇ ಮುಹುರಪಿ ಸದಾ ವ್ಯಗ್ರಹೃದಯಾ
ತಮೋಽಪ್ಯುಗ್ರಂ ಮತ್ವಾ ಕಥಮಪಿ ಶಿವಧ್ಯಾನನಿರತಾಃ ।
ಕದಾ ಕೋ ವಾ ಭಾವೀತ್ಯಪಿ ಸಮಯ ಇತ್ಯೇವ ಶರಣಂ
ಪ್ರಪನ್ನಾಸ್ತಂ ದೇವಾಃ ಶರಣಮನುವಾರಂ ಹರಮಹೋ ॥೬೩॥

ಮಹಾಮಾಯಾಪಾಶೈರ್ಜಗದಿಹ ಸ ಬದ್ಧ್ವಾ ಪಶುಪತಿಃ
ವಿಧಿಂ ವಿಷ್ಣುಂ ವಾಯುಂ ಹಿಮಕರಮುಖಾನಪ್ಯುರುಬಲಾನ್
ವಿಲಾಸೈಃ ಕಲ್ಪಾಂತೇ ಖಲು ಕರುಣಯಾ ಮುಂಚತಿ ಮುಹುಃ
ಪುನರ್ಬದ್ಧ್ವಾ ಪಾಶೈಸ್ತ್ಯಜತಿ ವಿವಿಧೈಃ ಕ್ರೀಡತಿ ತಥಾ ॥೬೪॥

ದಿಲ್ಲ. ಹೀಗಿರಲು ಗಿರಿಜಾವಲ್ಲಭನಾದ ಅವನನ್ನು ಭಜಿಸಲು ಯಾರಿಂದ ಸಾಧ್ಯ? ||೬೨||

ವಿಷ್ಣು ಮೊದಲಾದ ದೇವತೆಗಳು ಬಾರಿಬಾರಿಗೂ ಅನೇಕ ದುಃಖಗಳನ್ನು ಅನುಭವಿಸುತ್ತಾ, ಬಳಿಕ ಪರಶಿವನೇ ತಮ್ಮ ದುಃಖವನ್ನು ಹೋಗಲಾಡಿಸುವುದರಲ್ಲಿ ಶಕ್ತನಾಗಿರುವನೆಂದು ತಿಳಿದು, ಅತ್ಯಂತ ಪ್ರಯಾಸದಿಂದ ಶಿವನನ್ನು ಧ್ಯಾನಿಸುವುದರಲ್ಲಿ ಆಸಕ್ತರಾದರು. ನಾವೆಂದು ಶಿವನ ಅನುಗ್ರಹಕ್ಕೆ ಪಾತ್ರರಾಗುವೆವೋ ಎಂದು ಚಿಂತಿಸುತ್ತಾ ಶಿವಾನುಗ್ರಹದ ಸಮಯವನ್ನೇ ನಿರೀಕ್ಷಿಸುತ್ತಾ ಅವರು ಈಗ ಮರೆಹೊಕ್ಕಿರುವರು. ||೬೩||

ಭೂತನಾಥನಾದ ಶಿವನು ಅನಾದಿಸಿದ್ಧವಾದ ಅಜ್ಞಾನವೆಂಬ ಪಾಶಗಳಿಂದ ಚರಾಚರಾತ್ಮಕವಾದ ನಿಖಿಲ ಪ್ರಪಂಚವನ್ನೂ ಬಂಧಿಸುವನು. ದೇವತೆಗಳಾದ ವಿಷ್ಣು, ಬ್ರಹ್ಮ, ವಾಯು, ಹಿಮವಂತ ಮುಂತಾದವರೂ ಶಿವನ ಮಾಯಾಪಾಶಕ್ಕೆ ಸಿಲುಕುವರು. ಈ ರೀತಿಯಲ್ಲಿ ಬಂಧನಕ್ಕೊಳಗಾದ ಅವರನ್ನು ಪ್ರಲಯಕಾಲದಲ್ಲಿ ಬಂಧವಿಮುಕ್ತರನ್ನಾಗಿ ಮಾಡಿ, ಕಲ್ಪಾದಿಯಲ್ಲಿ ಪುನಃ ಮಾಯಾಪಾಶಗಳಿಂದ ಬಂಧಿಸುವನು. ಮತ್ತೆ ಪ್ರಲಯಕಾಲವು ಸಮೀಪಿಸಲು ಅವರನ್ನು ಬಂಧಮುಕ್ತರನ್ನಾಗಿ ಮಾಡುವನು. ಈ ರೀತಿ ಶಿವನು ನಾನಾಬಗೆಯ ಕ್ರೀಡೆಗಳಿಂದ ಸದಾ ನಲಿಯುತ್ತಿರುವನು. ||೬೪||

ಕಲ್ಪಾಂತೇ ನಿಜಮಾಯಯಾ ಜಗದಿದಂ ದಗ್ಧ್ವಾ ತದೋದುಂಬರ
ಪ್ರಚ್ಛನ್ನೋರುಶಲಾಟುಲೀನಮಶಕಾಕಾರಾನ್ ಹರೀಂದ್ರಾದಿಕಾನ್ ।
ದೃಷ್ಟ್ವೋಡ್ಡೀಯ ಗತಾನ್ ಮಹಾಪ್ರಲಯಜಾಸಾರಾಗ್ನಿದಗ್ಧಾನ್ ಮುದಾ
ಗೌರೀಸ್ಮೇರವಿಹಾರವೀಕ್ಷಣರತಃ ಕ್ರೀಡಾಂ ಕರೋತ್ಯಾದರಾತ್ ॥೬೫॥

ರಜೋವೃತ್ತಿರ್ವ್ಯಾಜೇ ಸೃಜತಿ ಪುನರಿತ್ಯೇವಮಖಿಲಂ
ಜಗಜ್ಜಾಲಂ ಲೀಲಾ ಕಿಮಪಿ ಸ ಯಥಾ ಪೂರ್ವಮುಮಯಾ ।
ಸಹ ಕ್ರೀಡಾಂ ಕುರ್ವನ್ನವತಿ ಜಗದೇತತ್ಸಗಿರಿಶಃ
ಕಥಂ ವಾ ಧ್ಯೇಯಃ ಸ್ಯಾದಮಿತವಿಭವೋಽಯಂ ಭವ ಇತಿ ॥೬೬॥

ಭವಂತ್ಯಸ್ಮಾಲ್ಲೋಕಾ ಇತಿ ಭವತಿ ಸೋಽಯಂ ಭವ ಇತಿ
ಸ್ವಯಂ ಯಸ್ಮಾಲ್ಲೋಕಾನ್ ಹರತಿ ಹರ ಇತ್ಯೇವ ಭವತಿ ।

ಶಿವನು ಕಲ್ಪದ ಅವಸಾನದಲ್ಲಿ ತನಗೆ ಅಧೀನವಾಗಿರುವ ಮಾಯೆಯ ಮೂಲಕ ಈ ಲೋಕಗಳನ್ನು ದಹಿಸುವನು. ಆಗ ಉದುಂಬರ ವೃಕ್ಷದಲ್ಲಿ (ಅತ್ತಿಯ ಮರ) ಗುಪ್ತವಾಗಿರುವ ಉದುಂಬರದ ಚಿಕ್ಕ ಚಿಕ್ಕ ಕಾಯಿಗಳಲ್ಲಿ ಕ್ರಿಮಿಗಳಂತೆ ಆಕಾರವನ್ನು ತಾಳಿ ಅಡಗಿಕೊಂಡಿರುವ ವಿಷ್ಣು, ಇಂದ್ರ ಮುಂತಾದ ದೇವತೆಗಳನ್ನು ಅಟ್ಟಹಾಸದಿಂದ ನೋಡುವನು. ಕ್ರಿಮಿಗಳ ರೂಪವನ್ನು ತಾಳಿದ ಆ ದೇವತೆಗಳು ಉದುಂಬರ ಫಲದಿಂದ ಮೇಲಕ್ಕೆ ಹಾರಿ ಬಂದು ಭಯಂಕರವಾದ ಪ್ರಲಯಕಾಲದ ಅಗ್ನಿಯಲ್ಲಿ ಬಿದ್ದು ಬೆಂದು ಹೋಗುತ್ತಿರುವುದನ್ನು ತನ್ನ ವಿಲಾಸಪೂರಿತವಾದ ಕಣ್ಣುಗಳಿಂದ ನೋಡಿ, ಪ್ರೇಯಸಿಯಾದ ಗಿರಿಜೆಯ ನಗುಮೊಗವನ್ನು ನೋಡುತ್ತಾ ಕ್ರೀಡಿಸುವನು. ಇದು ಆ ಪರಶಿವನ ಪ್ರಲಯಲೀಲೆ. ||೬೫||

ಮಾಯೆಯ ಮೂಲಕ ಪುನಃ ಜಗತ್ತನ್ನು ಸೃಷ್ಟಿಸಿ ಹಿಂದಿನಂತೆಯೇ ತನ್ನ ಅರ್ಧಾಂಗಿಯಾದ ಗಿರಿಜೆಯೊಂದಿಗೆ ಕ್ರೀಡಿಸುತ್ತಾ, ಈ ಜಗತ್ತನ್ನು ರಕ್ಷಿಸುವನು. ಹೀಗಿರುತ್ತಿರಲು ಅಪಾರವಾದ ಮಹಿಮೆಯುಳ್ಳ ಆ ಶಿವನ ನಿಜರೂಪವನ್ನು ಧ್ಯಾನಿಸಲು ಶಕ್ಯವೇ? ||೬೬||

ಆ ಶಿವನಿಗೆ "ಭವಂತಿ ಅಸ್ಮಾಲ್ಲೋಕಾಃ ಇತಿ ಭವಃ" (ಲೋಕಗಳನ್ನು ಸೃಷ್ಟಿಸಿರುವನು.) ಎಂಬ ವ್ಯುತ್ಪತ್ತಿಯನ್ನು ಅನುಸರಿಸಿ ಭವ ಎಂಬ ನಾಮಧೇಯವೂ "ಹರತಿ ಲೋಕಾನಿತಿ ಹರಃ" (ಲೋಕಗಳನ್ನು ಪ್ರಲಯಕಾಲದಲ್ಲಿ ಸಂಹರಿಸು

ಅತಃ ಸೇಯಂ ಲೀಲಾಪ್ಯನಲನಿಟಿಲಸ್ಯೇತಿ ಹೃದಯಂ
ವದತ್ಯೇಷಾ ಲೀಲಾ ಕಲಯತಿ ಕೃತಾಂತಾದ್ಭುತಭಯಂ ॥೬೭॥

ಯನ್ನತ್ವಾ ಮುನಯೋ ನ ಯಾಂತಿ ಮನಸಾ ತೃಪ್ತಿಂ ತಮದ್ಯೇಶ್ವರಂ
ದ್ರಷ್ಟುಂ ಭಾಗ್ಯಮಹೋ ನ ಜಾತಮಧುನಾ ಪಾಪೈರ್ವಯಂ ವಂಚಿತಾಃ ।
ಕಿಂ ದುಷ್ಟಂ ನಿಟಿಲಸ್ಥಲೇಽಪಿ ಲಿಖಿತಂ ಧಿಗ್ಧಿಗ್ಧಿಗೇತದ್ಯತಃ
ಗೌರೀಕಾಂತಪದಾರವಿಂದಮಸಕೃದ್ದೃಷ್ಟಂ ಪ್ರಕೃಷ್ಟಂ ಚ ನ ॥೬೮॥

ಅಹೋ ಮಾಯಾಜಾಲಂ ಪ್ರಲಯಮುಪಯಾತು ಕ್ಷಣಮಪಿ
ಪ್ರಯತ್ನೇನಾಪೀಹ ಸ್ಮರಹರಪದಾಂಭೋಜಭಜನಂ ।
ನ ಜಾತಂ ದುರ್ಜನ್ಮ ಪ್ರಲಯಮುಪಯಾತು ಪ್ರಸಭತಃ
ಕಥಂ ನಾಶೋ ನಾಸೀದಘಕುಲಮಹಾಪರ್ವತಗಣೈಃ ॥೬೯॥

ವವನು) ಎಂಬ ವ್ಯುತ್ಪತ್ತಿಯನ್ನನುಸರಿಸಿ ಹರ ಎಂಬ ನಾಮಧೇಯವೂ ಪ್ರಸಿದ್ಧವಾಗಿರುವುದು. ಆ ನಾಮಾರ್ಥವನ್ನನುಸರಿಸಿಯೇ ಅವನ ಲೀಲೆಯು ಸತತವಾಗಿ ಮುಂದುವರಿಯುತ್ತಿರುವುದು. ಜಗನ್ನಾಥನಾದ ಶಿವನ ಲೀಲೆಯನ್ನು ಸ್ಮರಿಸುವ ಮಾತ್ರದಿಂದಲೇ ಮೃತ್ಯು ಭಯವು ದೂರವಾಗುವುದು. ॥೬೭॥

ಮುನಿಗಳು ಯಾವ ದೇವನನ್ನು ಸ್ತುತಿಸಿ ತೃಪ್ತರಾಗುವುದಿಲ್ಲವೋ, ಆ ಶಿವನ ನಿಜಸ್ವರೂಪವನ್ನು ನೋಡುವ ಭಾಗ್ಯವು, ನಮ್ಮ ಪ್ರಾರಬ್ಧ ಕರ್ಮಗಳ ದೆಸೆಯಿಂದ ಲಭಿಸಲಿಲ್ಲ. ಗಿರಿಜಾವಲ್ಲಭನಾದ ಪರಮೇಶ್ವರನ ಅಡಿದಾವರೆಗಳನ್ನು ನೋಡದಿರುವುದೇ, ನಮ್ಮ ಹೀನವಾದ ಹಣೆಯ ಬರಹವನ್ನು ಸೂಚಿಸುವುದು. ನಮ್ಮ ಕ್ಷುದ್ರವಾದ ಈ ಬಾಳಿಗೆ ಧಿಕ್ಕಾರವಿರಲಿ. ॥೬೮॥

ಅಯ್ಯೋ! ನಮ್ಮ ಅಜ್ಞಾನವು ಶೀಘ್ರವಾಗಿ ನಾಶವನ್ನು ಹೊಂದಲಿ. ಎಷ್ಟೊಂದು ಶ್ರಮವಹಿಸಿದರೂ, ಪರಮೇಶ್ವರನ ಅಡಿದಾವರೆಗಳನ್ನು ಭಜಿಸುವ ಯೋಗವು ನಮಗೆ ದೊರಕಲಿಲ್ಲ. ಈ ಹಾಳು ಜನ್ಮವು ಈಗಲೇ ಲಯವನ್ನು ಹೊಂದಲಿ. ಪೂರ್ವಜನ್ಮದ ಪಾಪವಿಶೇಷದಿಂದಲೇ ಅದು ಇನ್ನೂ ನಾಶ ಹೊಂದಿರುವುದಿಲ್ಲ. ಅಯ್ಯೋ, ಹೀಗಾದರೆ ಎಂದು ನಾವು ಆನಂದದಿಂದಿರುವುದು ? ॥೬೯॥

ತನೂಹುಸ್ತೇ ಧನ್ಯಂ ಸತತಮಪಿ ಲಿಂಗಾರ್ಚನರತಂ
ಶಿವಧ್ಯಾನಾನಂದಾಮೃತನಿಧಿನಿಮಗ್ನಂ ಮುನಿವರಾಃ
ಸ ಧನ್ಯೋ ವಂದ್ಯಃ ಸ್ಯಾದನವರತಮರ್ಧಾಂಗವಿಲಸತ್ತ
ಟಿತ್ಕೋಲಾಟೋಪಪ್ರತಿಭಟಶಿವಾವಲ್ಲಭರತಃ ॥೨೦॥

ಲೋಕೇ ಕೋಽಪಿ ವಿನಷ್ಟಪಾತಕಗಿರಿರ್ಗೌರೀವಿಹಾರೋತ್ಸವ
ವ್ಯಾಪಾರಪ್ರವರಂ ಹರಂ ಪರತರಂ ಮತ್ವೈವ ವೀರೇಶ್ವರಂ ।
ಧ್ಯಾತ್ವಾ ತಿಷ್ಠತಿ ತಾದೃಶಂ ಯದಿ ಭವೇದ್ಭಾಗ್ಯಂ ತದಾ ಶಂಕರ
ಧ್ಯಾನಾನಂದರಸಪ್ರವಾಹನಿವಹವ್ಯಾಪ್ತಂ ಸ ಚಿತ್ತಂ ಕುತಃ ॥೨೧॥

ಅಲಂ ಕಾಲೇಕಾಲೇ ಕಥಮಪಿ ಕೃತಂ ನೇಶಭಜನಂ
ಮಹಾಮೃತ್ಯೋರ್ಭೀತಿರ್ವಿಲಯಮುಪಯಾತ್ಯೇವ ಸಹಸಾ ।
ಯತಸ್ತತ್ಕಿಂ ಭಾಗ್ಯಂ ಭವತಿ ಭಗವಾನ್ ಭಾಲನಯನಃ
ಪ್ರಸನ್ನಃ ಕಿಂ ನಸ್ಯಾದಿತಿ ಖಲು ಮನೋಽವ್ಯಗ್ರಮಧುನಾ ॥೨೨॥

ಅನವರತವೂ ಲಿಂಗಾರ್ಚನೆಯಲ್ಲಿಯೇ ಆಸಕ್ತನಾದ ಮನುಜನು ಪುಣ್ಯಶಾಲಿಯೆಂದು ಜ್ಞಾನಿಗಳಾದ ಮುನಿವರ್ಯರು ಹೇಳುವರು. ಪುಣ್ಯಶಾಲಿಯಾದ ಅವನೇ ವಂದನೆಗೆ ಅರ್ಹನಾಗಿರುವನು. ಅವನು ಅರ್ಧನಾರೀಶ್ವರನಾದ ಶಿವನನ್ನೇ ಸದಾ ಧ್ಯಾನಿಸುವನಲ್ಲವೇ? ॥೨೦॥

ಲೋಕದಲ್ಲಿ ಈಶ್ವರಭಕ್ತನಾದವನು ದೈವಾನುಗ್ರಹದಿಂದ ತನ್ನ ಪಾಪರಾಶಿಗಳನ್ನು ಕಳೆದುಕೊಂಡು ಗಿರಿಜಾವಲ್ಲಭನಾದ ಪರಮೇಶ್ವರನನ್ನು ಧ್ಯಾನಿಸುತ್ತಾ, ಪರಮಾನಂದತುಂದಿಲನಾಗಿ ಕಾಲವನ್ನು ಕಳೆಯುವನು. ಆದರೆ ಈ ರೀತಿಯಲ್ಲಿ ಪರಮೇಶ್ವರನನ್ನು ಭಜಿಸುವವನು ಕೋಟ್ಯಂತರ ಜನಗಳಲ್ಲೊಬ್ಬನು. ಅಂತಹ ಭಾಗ್ಯವು ನಮಗೆ ದೊರಕಿದ್ದರೆ ನಮ್ಮ ಚಿತ್ತವು ಈಶ್ವರಧ್ಯಾನಾಮೃತವನ್ನು ಸೇವಿಸುವುದರಲ್ಲಿ ಆಸಕ್ತವಾಗಿರುತ್ತಿರಲಿಲ್ಲವೇ? ॥೨೧॥

ಮಹಾಮೃತ್ಯುವಿನ ಭಯವನ್ನು ಕಳೆದುಕೊಳ್ಳುವ ಸಲುವಾಗಿ ಕಾಲಕಾಲಕ್ಕೆ ಸಾಕಾದಷ್ಟು ಶಿವಧ್ಯಾನವನ್ನು ಮಾಡಲಿಲ್ಲ. ಶಿವಧ್ಯಾನಕ್ಕಿಂತಲೂ ದೊಡ್ಡನಿಧಿಯು ನಮಗಾವುದು? ಈಗ ನಾವು ಮಾಡುವ ಶಿವಭಜನೆಯಿಂದ ಶಂಕರನು ಪ್ರಸನ್ನನಾಗುವನೋ ಇಲ್ಲವೊ ಎಂದು ನನ್ನ ಮನಸ್ಸು ತವಕಪಡುತ್ತಿರುವುದು. ॥೨೨॥

ಶರದ್ರಾಕಾಕಾಂತಂ ಕಲಯತಿ ಕಲೌ ಕೋಽಪಿ ಸುಕೃತೀ
ತದೀಯಂ ಕಿಂ ಭಾಗ್ಯಂ ಭವತಿ ಸಕಲಸ್ಯಾಪ್ಯನುದಿನಂ ।
ಕ್ವ ವೀರೇಶಧ್ಯಾನಪ್ರವಣಮನಸಃ ಕೋಽಪಿ ತುಲನಾಂ
ಸಮಾರೂಢೋ ರೂಢಃ ಸ್ಮೃತರುಚಿರಗೌರೀಪರಿವೃಢಃ ॥೭೩॥

ಸ್ಮೃತ್ವಾ ಪುನಃ ಪುನರುಮಾಪತಿದಿವ್ಯಲೀಲಾಂ
ಮತ್ವಾ ಕೃತಾರ್ಥಮತಿಮಪ್ಯನುವಾರಮೇವ ।
ಕೃತ್ವಾ ಶಿವಾರ್ಚನಮಹರ್ನಿಶಮಾದರೇಣ
ಶ್ರುತ್ವಾ ಸ್ಥಿತಾಶ್ಶಿವಕಥಾಕಥನೇನ ವಿದ್ಯಾಃ ॥೭೪॥

॥ ಯಾಜ್ಞವಲ್ಕ್ಯ ಉವಾಚ ॥

ಇತಿ ಬ್ರಹ್ಮವಚಃ ಶ್ರುತ್ವಾ ಸ ರಾಜಾ ಪ್ರೀತಮಾನಸಃ ।
ಶಿವಾರ್ಚನರತಸ್ತತ್ರ ಚಕಾರ ವಸತಿಂ ನೃಪ ॥೭೫॥

ಶರತ್ಕಾಲದ ಚಂದ್ರಿಕೆಯಂತೆ ಪರಿಶುದ್ಧನಾಗಿರುವ ಶಿವನನ್ನು ಯಾವ ಪುಣ್ಯಶಾಲಿಯು ಸ್ಮರಿಸುವನೋ, ಅವನ ಭಾಗ್ಯವನ್ನು ವರ್ಣಿಸಲಸಾಧ್ಯವಾಗಿರುವುದು. ಅತುಲವಾದ ಪರಾಕ್ರಮಗಳಿಂದ ಕೂಡಿರುವ ಆ ಪರಶಿವನನ್ನು ಧ್ಯಾನಿಸುವುದರಲ್ಲಿ ಆಸಕ್ತವಾದ ಚಿತ್ತದ ಮಹಿಮಾತಿಶಯವನ್ನು ಯಾರಿಂದಲಾದರೂ ಚಿಂತಿಸಲು ಸಾಧ್ಯವೇ? ॥೭೩॥

ಈ ರೀತಿಯಲ್ಲಿ ಆ ವಿದ್ಯೆಗಳು ಬಾರಿ ಬಾರಿಗೂ ಶಿವನ ಲೋಕಾತಿಶಯವಾದ ಲೀಲೆಗಳನ್ನು ಸ್ಮರಿಸುತ್ತಾ, ತಾವು ಕೃತಾರ್ಥರಾದೆವೆಂದು ನಿಶ್ಚಯಿಸಿ, ಹಗಲಿರುಳು ಶಿವನನ್ನೇ ಅರ್ಚಿಸುತ್ತಾ, ಶಿವಕಥಾಮೃತವನ್ನು ಪಾನಮಾಡಿ ಸುಖದಿಂದಿದ್ದವು. ॥೭೪॥

ಬಳಿಕ ಯಾಜ್ಞವಲ್ಕ್ಯನು ಜನಕರಾಜನನ್ನು ಕುರಿತು ಹೀಗೆಂದನು. "ಎಲೈ ರಾಜೇಂದ್ರನೇ! ಬ್ರಹ್ಮನ ಆ ವಾಣಿಯನ್ನು ಕೇಳಿ ರಾಜನು ಸಂತೋಷಭರಿತನಾಗಿ ಎಂದಿನಂತೆ ಶಿವಪೂಜಾಸಕ್ತನಾಗಿ ಆ ಅರಣ್ಯದಲ್ಲಿ ವಾಸಿಸುತ್ತಿದ್ದನು. ॥೭೫॥

ದಾರೈರುದಾರೈಸ್ತೈರ್ವಿರೈಃ ಕುಮಾರೈರಪಿ ಸಾದರಂ ।
ಸಹೈವ ಶಂಕರಧ್ಯಾನನಿರತೋ ಭೂಪತಿರ್ನೃಪ ॥೨೬॥

ತಸ್ಯ ಭೂಪಸ್ಯ ನಾಹಾರೋ ದಾರೇಷ್ವಪಿ ರುಚಿಸ್ತತಃ ।
ಕುಮಾರೇಷ್ವಪಿ ನ ಪ್ರೀತಿಃ ಸ ಯತಃ ಶಂಕರಾದರಃ ॥೨೭॥

ಸ ನೃಪಃ ಶಂಕರಾಕಾರಸುಧಾನಿಧಿವಿಲೋಕನಾತ್ ।
ತಲ್ಲೀಲಾಲೋಲಕಲ್ಲೋಲಮಾಲಿಕಾಸಮಲಂಕೃತಃ ॥೨೮॥

ಯಥಾ ಯಥಾ ಶಂಕರಪೂಜನೇ ರತಿಃ
ತಸ್ಯ ಪ್ರವೃದ್ಧಾ ಬಹುಪುಣ್ಯರಾಶೇಃ ।
ತಥಾ ತಥಾ ತಸ್ಯ ನಿವೃತ್ತಿರೇವ
ಧೀರೇಷು ದಾರೇಷ್ವಪಿ ತೇಽಪಿ ಹಾರಾಃ ॥೨೯॥

ಮಹೋದಾರದಾರಾದಾರಾನಾದರೋಽಸೌ
ಧರಾಧೀಶ್ವರೋ ಹಾರವೀರಪ್ರವೀರಃ ।

ಅವನು ಭಕ್ತಿ ಪುರಃಸರವಾಗಿ ಶಿವಧ್ಯಾನಾಸಕ್ತನಾಗಿ ತನ್ನ ಪತ್ನೀಪುತ್ರರಿಂ ದೊಡಗೂಡಿ ಬಹುಕಾಲ ಅಲ್ಲಿಯೇ ಸುಖದಿಂದ ವಾಸವಾಗಿದ್ದನು. ॥೨೬॥

ಶಿವಾರಾಧನೆಯಲ್ಲಿ ಮಗ್ನನಾದ ಅವನಿಗೆ ಆಹಾರವು ರುಚಿಸಲಿಲ್ಲ. ಪ್ರೇಯಸಿಯ ಸಹವಾಸವೇ ಹೇಯವಾಗಿ ತೋರಿತು. ಪುತ್ರರಲ್ಲಿ ವ್ಯಾಮೋಹವು ಕಮ್ಮಿಯಾಯಿತು. ॥೨೭॥

ಅವನು ಸುಧಾ ಸಾಗರದಂತೆ ತೃಪ್ತಿಯನ್ನುಂಟುಮಾಡುವ ಶಿವನನ್ನು ನೋಡಿ, ಶಿವಲೀಲಾತರಂಗಗಳಲ್ಲಿ ಮುಳುಗಿ, ತದೇಕಧ್ಯಾನದಿಂದ ಕಾಲಕಳೆಯುತ್ತಿದ್ದನು. ॥೨೮॥

ಅವನ ಶಿವಪೂಜಾಸಕ್ತಿಯು ಹೆಚ್ಚಿದಂತೆಲ್ಲಾ ಪುಣ್ಯರಾಶಿಯು ಬೆಳೆಯತೊಡಗಿತು. ಕ್ರಮವಾಗಿ ತನ್ನ ಸ್ತ್ರೀಯರಲ್ಲಿ ಮೋಹಾದಿಗಳು ದೂರವಾದುವು. ಬರಬರುತ್ತಾ ಧೀರಳಾದ ಅವನ ಪತ್ನಿಯೂ ಸಹ ಈಶ್ವರನ ಪರಮಭಕ್ತಳಾದಳು. ॥೨೯॥

ಈಶ್ವರಭಕ್ತರಲ್ಲಿ ಅಗ್ರೇಸರನಾದ ಆ ಭೂಪಾಲಕನು ಉದಾರಳಾದ ತನ್ನ ಪತ್ನಿಯಲ್ಲಿ ಅನಾದರವನ್ನು ತೋರಿದನು. ತನ್ನ ಮಗನನ್ನೂ ಸಹ ಈಶ್ವರನೆಂಬ

ಕುಮಾರೇಽಪಿ ಹಾರತ್ವಬುದ್ಧ್ಯಾ ಚಕಾರ
ಸ್ವರಾಕಾರನಾಟ್ಯೈಃ ಪರಾಂ ಪ್ರೀತಿಮಾರಾತ್ ॥೬೦॥

ವಿಭವಸ್ತಸ್ಯ ಭೂಪಸ್ಯ ಸರ್ವೋಽಪಿ ಶಿವಪೂಜನೇ ।
ಉಪಯುಕ್ತಸ್ತತಸ್ತಸ್ಯ ಬುದ್ಧಿರಪ್ಯಭವನ್ಮಹುಃ ॥೬೧॥

ಫಾಲಲೋಚನಪೂಜಾರ್ಥಂ ಯದ್ಭಾಗ್ಯಮಪಿ ಕಲ್ಪಿತಂ ।
ತೇನ ಭಾಗ್ಯೇನ ಭಾಗ್ಯಾನಾಂ ಭಾಗ್ಯತ್ವಮಿತಿ ನಿಶ್ಚಿತಂ ॥೬೨॥

ತ ಏವ ಲೋಕೇ ಖಲು ಭಾಗ್ಯವಂತಃ
ತೇ ಪುಣ್ಯವಂತೋಽಪಿ ಯ ಏವ ನಿತ್ಯಂ ।
ಯೇ ಶಂಕರಾರಾಧನಸಾಧನೇನ
ಸ್ವಾಂತೇ ನ ತುಷ್ಟಾಃ ಫಲತಃ ಪ್ರಕೃಷ್ಟಾಃ ॥೬೩॥

ಯಾವಂತಃ ಸಂತಿ ಲೋಕೇ ಶಿವಭಜನರತಾಸ್ತೇ ಶಿವಂ ಪ್ರಾಪ್ಯ ನಿತ್ಯಂ
ಭೂಯಸ್ತತ್ಪ್ರಾಪ್ಯ ಪುಣ್ಯೈಃ ಪುನರಪಿ ಸ ಶಿವಂ ಪ್ರಾಪ್ನುವಂತ್ಯೇವ ಧನ್ಯಾಃ ।

ಭಾವನೆಯಿಂದ ತಿಳಿದನು. ಶಿವಲಿಂಗದ ಮುಂಭಾಗದಲ್ಲಿ ಮಧುರವಾದ ಗಾನವನ್ನೂ, ಅದಕ್ಕನುಸಾರವಾದ ನಾಟ್ಯವನ್ನೂ ಅಭಿನಯಿಸಿದನು. ಇದರಿಂದ ಅವನ ಚಿತ್ತಕ್ಕೆ ಶಾಂತಿಯು ಸಂಪೂರ್ಣವಾಗಿ ಲಭಿಸುತ್ತಿತ್ತು. ॥೬೦॥

ಅವನು ತನ್ನ ಸಕಲೈಶ್ವರ್ಯಗಳನ್ನೂ ಶಿವಪೂಜೆಯಲ್ಲಿಯೇ ವಿನಿಯೋಗಿಸಿದನು. ಅದರಂತೆ ಮನಸ್ಸನ್ನೂ ಸಂಪೂರ್ಣವಾಗಿ ಶಿವನಲ್ಲಿ ಅರ್ಪಿಸಿದನು. ॥೬೧॥

ತನಗೆ ಅನೇಕ ವಿಧವಾದ ಭಾಗ್ಯಗಳು ಕಂಡುಬಂದರೂ, ಅವುಗಳಲ್ಲಿ ಯಾವ ಭಾಗ್ಯದ ಮಹಿಮೆಯಿಂದ ಶಿವನನ್ನು ಆರಾಧಿಸುವ ಸದವಕಾಶವು ಲಭಿಸುವುದೋ, ಅದೇ ಶ್ರೇಷ್ಠತಮವಾದುದೆಂದು ತಿಳಿದನು. ॥೬೨॥

ಯಾವ ಭಕ್ತರು ನಿತ್ಯವೂ ಈಶ್ವರನನ್ನು ಆರಾಧಿಸಿ ಅದರಿಂದ ತೃಪ್ತಿಯನ್ನೇ ಹೊಂದುವುದಿಲ್ಲವೋ, ಅವರೇ ಲೋಕದಲ್ಲಿ ಧನ್ಯರು. ಅವರು ಈಶ್ವರಾರ್ಚನೆಯಿಂದ ಉತ್ತಮವಾದ ಫಲವನ್ನು ಹೊಂದುವರು. ॥೬೩॥

ಯಾರು ಈ ಲೋಕದಲ್ಲಿ ಶಿವಪೂಜಾಸಕ್ತರಾಗಿರುವರೋ ಅವರೆಲ್ಲರೂ ಶಿವನನ್ನೇ ಹೊಂದಿ, ಅತಿಶಯವಾದ ಸುಖವನ್ನನುಭವಿಸಿ ಅಂತ್ಯಕಾಲದಲ್ಲಿ ಶಾಶ್ವತ

ತೇ ತಾವತ್ಸರ್ವಮಾನ್ಯಾಃ ಪ್ರತಿದಿನಮಮಿತಾ ಮತ್ಪ್ರಣಾಮಾಶ್ಚತೇಭ್ಯಃ
ಪಾಪಾಬ್ಧಿಃ ಶೋಷಮೇತಿ ಪ್ರಲಯಮುಪಗತಃ ಕೋಽಪಿ ಸಂಸಾರರಾಶಿಃ॥೮೪॥

ಯೇ ಪೂತಾಃ ಶಿವವಿದ್ಯಯಾ ಶಿವರತಾಃ ಶಾಂಗೇಽಪಿ ಲಿಂಗೇ ಮುಹುಃ
ಬಿಲ್ವೀಪಲ್ಲವಮಾತ್ರಮೇಕಮಮಲಂ ದತ್ವಾಪಿ ನತ್ವಾ ಮುಹುಃ ।
ನೃತ್ಯಂತಿ ಪ್ರಲಯಾನಲಾದಪಿ ಭಯಂ ತ್ಯಕ್ತ್ವಾ ತ ಏವಾದರಾತ್
ಪೂಜ್ಯಾಃ ಪೂಜ್ಯತಮಾಶ್ಚ ದುರ್ಲಭತಮಾಸ್ತೇ ಭೂತಲೇ ಭೂಪತೇ ॥೮೫॥

ತಂ ಭೂಪಾಲಂ ದ್ರಷ್ಟುಮಾಯಾಂತಿ ನಿತ್ಯಂ
ದೇವಾಃ ಸರ್ವೇ ಸಾದರಾ ಏವ ದಾರೈಃ ।
ಸಾಕಂ ತಸ್ಯಾಪ್ಯಂಗನಾಶಂಗಗಾನಂ
ಕೃತ್ವಾ ಕಾಲಂ ಯಾಪಯಂತಿ ಪ್ರಮೋದೈಃ ॥೮೬॥

ವಾದ ಶಿವಸಾನ್ನಿಧ್ಯವನ್ನು ಪಡೆದು ನಿತ್ಯಾನಂದವನ್ನು ಅನುಭವಿಸುವರು. ಅವರೇ ಸರ್ವರ ಮನ್ನಣೆಗೆ ಪಾತ್ರರಾಗಿರುವರು. ಅವರಿಗೆ ನಾವು ವಂದಿಸುವೆವು. ಅವರ ದೆಸೆಯಿಂದಲೇ ಪಾಪವೆಂಬ ಸಮುದ್ರವು ಒಣಗುವುದು. ಮತ್ತು ಸತತವಾಗಿ, ಮುಂದುವರಿಯುತ್ತಿರುವ ಈ ಸಂಸಾರವು ಲಯವನ್ನು ಹೊಂದುವುದು. ॥೮೪॥

ಎಲೈ ನೃಪತಿಯೇ, ಯಾರು ಶಿವವಿದ್ಯೆಯನ್ನು ತಿಳಿದು, ಪರಿಶುದ್ಧರಾಗಿರುವರೋ ಅವರೇ ಧನ್ಯರು. ಅವರು ಸದಾ ಶಿವಧ್ಯಾನಾಸಕ್ತರಾಗಿ ಶಿವಲಿಂಗದ ಸನ್ನಿಧಿಯಲ್ಲಿ ಕೋಮಲವಾದ ಬಿಲ್ವಪತ್ರೆಯನ್ನರ್ಪಿಸಿ, ಬಾರಿಬಾರಿಗೂ ಶಿವನಿಗೆ ನಮಸ್ಕರಿಸಿ ನಾಟ್ಯವನ್ನಭಿನಯಿಸುವರು. ಅವರಿಗೆ ಪ್ರಲಯಕಾಲದ ಭಯಂಕರವಾದ ಅಗ್ನಿಯ ಭಯವು ಸಹ ಇರುವುದಿಲ್ಲ. ಈ ಭೂತಲದಲ್ಲಿ ಅವರೇ ಅತ್ಯಂತ ಪೂಜ್ಯರಾಗಿರುವರು. ಆದರೆ ಅಂತಹ ಈಶ್ವರಭಕ್ತಾಗ್ರಣಿಗಳು ದುರ್ಲಭರಲ್ಲವೆ ! ॥೮೫॥

ಈಶ್ವರನ ಏಕಾಂತಭಕ್ತನಾದ ಆ ರಾಜನನ್ನು ಸಂದರ್ಶಿಸುವುದಕ್ಕೋಸ್ಕರ ಪ್ರತಿದಿನವೂ ದೇವತೆಗಳೆಲ್ಲರೂ ತಮ್ಮ ಪತ್ನಿಯರೊಂದಿಗೆ ಅಲ್ಲಿಗೆ ಬರುವರು. ದೇವತಾಸ್ತ್ರೀಯರು ರಾಜನ ಪತ್ನಿಯೊಂದಿಗೆ ಕಲೆತು ಶಿವನ ಸ್ತೋತ್ರವನ್ನು ಗಾನರೂಪದಲ್ಲಿ ಹಾಡಿ ಸಂತೋಷದಿಂದ ಕಾಲವನ್ನು ಕಳೆಯುವರು. ॥೮೬॥

ಸ ಭೂಪ ಶಿವವಿದ್ಯಯಾ ಸತತಮೇವ ಪೂತಃ ಪುನಃ
ತಯಾ ನಿಜಸುತಾನಪಿ ವ್ರತವಿಶೇಷತಃ ಪಾವನಾತ್ ।
ಸ್ವದಾರನಿಕರಾನಪಿ ವ್ರತವಿಶೇಷಪೂತಾನ್ ಮುಹುಃ
ವಿಲೋಕ್ಯ ಶಿವಪೂಜನಶ್ರವಣಮಾನಸೋಽಭೂನ್ನೃಪಃ ॥೮೭॥

ಸ ವಂದ್ಯೋ ಗಂಧರ್ವೈರ್ಭವತಿ ಸತತಂ ಕಿನ್ನರವರೈಃ
ಗಣೈಃ ಸಿದ್ಧೈರ್ದೇವೈರಪಿ ಭವತಿ ಪೂಜ್ಯಃ ಶಿವರತಃ ।
ತದಾವಾಸೋ ಜಾತಃ ಸತತಮಪಿ ಕೈಲಾಸಸದೃಶಃ
ಶಿವಃ ಸಾಂಬೋ ನಿತ್ಯಂ ನಿವಸತಿ ಗೃಹೇ ತಸ್ಯ ನೃಪತೇಃ ॥೮೮॥

ಕೈಲಾಸವಾಸನಿರತೋಽಪಿ ಮಹೇಶ್ವರೋಽಭೂ
ತ್ತದ್ರತ್ನಸದ್ಮನಿಲಯೋ ನಿಯಮೇನ ನಿತ್ಯಂ ।
ತತ್ಪುಣ್ಯರಾಶಿರಮಿತೋ ವವೃಧೇ ಬುಧಾನಾಂ
ಆಶ್ಚರ್ಯಸಾಧನಮಭೂನ್ನೃಪವರ್ಯಚೇಷ್ಟಾ ॥೮೯॥

ಎಲೈ ರಾಜನೇ, ಆ ರಾಜನು ಶಿವಕಥಾಶ್ರವಣದಿಂದ ಪರಿಶುದ್ಧನಾಗಿ, ಸಮಯೋಚಿತವಾದ ನಿಯಮಗಳನ್ನು ಪರಿಪಾಲಿಸುತ್ತಿರುವ ತನ್ನ ಪತ್ನೀಪುತ್ರರನ್ನು ನೋಡಿ ಹಿಗ್ಗಿ, ಶಿವಪೂಜಾಮಹಿಮೆಯನ್ನು ಲಾಲಿಸುತ್ತಾ ಕಾಲವನ್ನು ಕಳೆಯುತ್ತಿದ್ದನು. ॥೮೭॥

ಆ ಭೂಪಾಲಕನನ್ನು ಗಂಧರ್ವರು, ಸಿದ್ಧರು, ಕಿನ್ನರರು ಇಂದ್ರಾದಿದೇವತೆಗಳೂ ಸಹ ವಂದಿಸುತ್ತಿದ್ದರು. ಅವನ ವಾಸಸ್ಥಾನವು ಕೈಲಾಸಲೋಕಕ್ಕೆ ಸದೃಶವಾಗಿದ್ದಿತು. ಅವನ ಮನೆಯಲ್ಲಿ ಶಿವನು ತನ್ನ ಪ್ರಿಯತಮೆಯೊಂದಿಗೆ ಸದಾ ವಾಸಿಸುತ್ತಿರುವನು. ॥೮೮॥

ಪರಮೇಶ್ವರನು ತನ್ನ ನಿಜವಾದ ವಾಸಸ್ಥಾನವೆನಿಸಿದ ಕೈಲಾಸದಲ್ಲಿ ವಾಸಿಸಲು ವಿರಕ್ತನಾದರೂ ಸಹ, ಆ ರಾಜನ ರತ್ನಖಚಿತವಾದ ಗೃಹದಲ್ಲಿ ಸರ್ವದಾ ವಾಸವಾಗಿರಲು ಬಯಸುತ್ತಿದ್ದನು. ಇದರಿಂದ ಆ ರಾಜನ ಪುಣ್ಯವು ಪ್ರತಿದಿನದಲ್ಲಿಯೂ ಅಭಿವೃದ್ಧಿಯನ್ನು ಹೊಂದುತ್ತಿದ್ದಿತು. ಅವನ ನಡತೆಗಳನ್ನು ನೋಡಿ ದೇವತೆಗಳೂ ಅಚ್ಚರಿಗೊಂಡರು. ॥೮೯॥

ತಚ್ಛ್ರೇಷ್ಟಯಾಪಿ ಸ್ಮೃತಯೇಷ್ಟಲಾಭಃ
ಸಾ ಕಷ್ಟನಾಶಾಯ ಖಲು ಸ್ಮೃತಾ ಸ್ಯಾತ್ ।
ಸಾ ಶಾಂಭವಾನಾಮಪಿ ದುರ್ಲಭಾ ಸ್ಯಾತ್
ನ ತಾದೃಶಃ ಶಾಂಭವಪುಂಗವೋಽಪಿ ॥೯೦॥

ಅಮಿತವಿವಿಧಭಾಗ್ಯೈರ್ಭರ್ಗಲೀಲಾರ್ಚಕಾನಾಂ
ಅನುನಯಕರಣೇನಾಪ್ಯನ್ವಹಂ ಯಾತಿ ಕಾಲಃ ।
ಕಲಯತಿ ಖಲು ಕಾಲೋಽಸ್ಯಾದರೈಃ ಕಾಲಕಾಲ
ಸ್ಮರಣಭಜನಪೂತಾನದ್ಭುತಂ ಜಾತಮೇವಂ ॥೯೧॥

ಜೀವಂತಿ ತೇ ಶಂಕರಪಾದಪದ್ಮ
ಪೂಜಾರತಾ ಏವ ನಿರಂತರಾಯಂ
ಯೇ ಕಾಲಭೀತಿಂ ಪರಿಹೃತ್ಯ ಹಿತ್ವಾ
ಮೋಹಂ ಚ ಸಂಸಾರಭಯಾಂಬುರಾಶಿಂ ॥೯೨॥

ರಾಜನು ಕೈಗೊಂಡ ಈಶ್ವರಾರಾಧನೆಯೇ ಮುಂತಾದ ಸತ್ಕಾರ್ಯಗಳನ್ನು ಸ್ಮರಿಸುವುದರಿಂದ ಸಕಲ ಇಷ್ಟಾರ್ಥಗಳೂ ಲಭಿಸುವುವು. ಆದರೆ ಅದು ಈಶ್ವರಭಕ್ತಾಗ್ರೇಸರರಿಗೂ ದುರ್ಲಭವಾದುದು. ಅಂತಹ ಈಶ್ವರಭಕ್ತಾಗ್ರೇಸರನೂ ಸಹ ಅತ್ಯಂತ ದುರ್ಲಭನೇ. ॥೯೦॥

ಅಪಾರವಾದ ಪುಣ್ಯವಿಶೇಷಗಳ ಮಹಿಮೆಯಿಂದ ಶಿವಾರಾಧನೆಯಲ್ಲಿ ಆಸಕ್ತರಾದ ಭಕ್ತರೊಂದಿಗೆ ಕಲೆಯುವುದರಿಂದಲೇ, ಮೃತ್ಯುಭಯವು ದೂರವಾಗುವುದು. ಮೃತ್ಯುಂಜಯನಾದ ಶಿವನನ್ನು ಸ್ಮರಣ ಮತ್ತು ಭಜನಗಳಿಂದ ತೃಪ್ತಿಗೊಳಿಸಿದವರನ್ನು ಯಮನೂ ಸಹ ಆದರದಿಂದ ಸೇವಿಸುವನು. ಇದು ಆಶ್ಚರ್ಯಕರವಲ್ಲವೇ! ॥೯೧॥

ಯಾರು ಮೃತ್ಯುವಿಗೆ ಹೆದರದೆ ಸಂಸಾರಭಯದಿಂದ ದೂರವಾಗಿ ಶೋಕ ಮೋಹಗಳನ್ನು ತೊರೆದು ಶಿವಪೂಜೆಯಲ್ಲಿಯೇ ಆಸಕ್ತರಾಗುವರೋ, ಅವರೇ ಧನ್ಯರು. ಅವರೇ ಯಾವ ತೊಂದರೆಯೂ ಇಲ್ಲದಂತೆ ಜೀವಿಸುವರು. ॥೯೨॥

ಸೋಽಪ್ಯಂತಕೋಽಪ್ಯಂತಕತಾಂ ವಿಹಾಯ
ಪ್ರ್ಯಮಾಸಹಾಯಸ್ಮರಣಾನುರಕ್ತಾನ್ ।
ಸಮರ್ಚಯತ್ಯೇವ ವಿಹಾಯ ದೂತಾನ್
ವೇಷಾಂತರೇಣೈವ ನಿಶಾವಸಾನೇ ॥೯೩॥

ಶಮನೋಪಶಮಾಯ ಸೋಽಪಿ ನಿತ್ಯಂ
ಕುರುತೇ ಶಂಕರಪೂಜನಂ ನೃಪಾಲಃ ।
ಅಮಲಃ ಖಲು ಲೋಕಪಾವನಃ
ಶಿವಪೂಜಾಫಲಮಾತ್ರಜೀವನಃ ॥೯೪॥

ನ ಕ್ವಾಪಿ ಶ್ರುತ ಏವ ಭೂಪತಿರುಮಾಕಾಂತಾಂಘ್ರಿಪಂಕೇರುಹ
ಧ್ಯಾನಾರಾಧನಜೀವನೋ ಜನಿಜರಾಮೃತ್ಯುರ್ವ್ಯಥಾಸಾಧನಃ ।
ಭೂತ್ಯಾ ಪಾವನ ಏವ ಭೂತಿನಿವಹೋ ವಿಶ್ವೇಶ್ವರಾರಾಧನಂ ।
ಕುರ್ವನ್ನೇವ ಜಗತ್ತ್ರಯಾರ್ಜಿತಜಯೋ ಜಾತಃ ಸ ಕೋಽಪಿ ಪ್ರಭುಃ॥೯೫॥

ಸಕಲ ಜೀವಿಗಳಿಗೂ ಮೃತ್ಯುವೆಂದೆನಿಸಿಕೊಂಡಿರುವ ಯಮನೂ ಸಹ ತನ್ನ ಕಾರ್ಯವನ್ನು ಒಂದುಕಡೆ ಪ್ರತ್ಯೇಕಿಸಿ, ಪ್ರಾತಃಕಾಲವಾಗಲು ದೂತರನ್ನಗಲಿ ವೇಷವನ್ನು ಮಾರ್ಪಡಿಸಿಕೊಂಡು ಶಿವಭಕ್ತರಿದ್ದಲ್ಲಿಗೆ ಬಂದು ಅವರನ್ನು ಸೇವಿಸುವನು. ॥೯೩॥

ಆದರಂತೆ ಆ ರಾಜನೂ ಸಹ ಮೃತ್ಯುವನ್ನು ಹೋಗಲಾಡಿಸಿಕೊಳ್ಳುವುದಕ್ಕೋಸ್ಕರ ಪ್ರತಿದಿನವೂ, ಶಿವನನ್ನು ಆರಾಧಿಸುವನು. ಅವನಿಂದ ಲೋಕಗಳೇ ಪವಿತ್ರವಾದಂತಿರುವುವು. ಶಿವಪೂಜೆಯಿಂದುಂಟಾಗುವ ಫಲವೇ ಅವನ ಜೀವನಕ್ಕೆ ಆಧಾರವಾಯಿತು. ॥೯೪॥

ಶಿವನ ಅಡಿದಾವರೆಗಳ ಧ್ಯಾನದಲ್ಲಿ ನಿಮಗ್ನನಾದ ಆ ರಾಜನು, ಜನ್ಮಜರಾಮರಣಗಳಿಗೆ ಗುರಿಯಾದನೆಂಬುದನ್ನು ನಾವೆಂದೂ ಎಲ್ಲಿಯೂ ಕೇಳಿರುವುದಿಲ್ಲ. ಅವನು ಶಿವಪ್ರಿಯವಾದ ವಿಭೂತಿಯನ್ನು ಧರಿಸಿದ್ದರಿಂದಲೇ ಪರಿಶುದ್ಧನೆನಿಸಿದನು. ಅಲ್ಲದೇ ಈಶ್ವರನನ್ನು ಎಡಬಿಡದೇ ಆರಾಧಿಸುತ್ತಾ ಅವನು ಲೋಕತ್ರಯಗಳಲ್ಲಿ ಶ್ರೇಷ್ಠನಾದನು. ॥೯೫॥

ತಸ್ಯಾನಂದಘನಾರ್ಚನೇನ ಧನದೋ ದತ್ವಾ ನಿಧೀನ್ಯಾತ್ಯತಃ
ತೈರೀಶಾರ್ಚನತತ್ಪರಃ ಪುನರಪಿ ಪ್ರಾಪ್ನೋತಿ ಭಾಗ್ಯಂ ನವಂ
ತೇನಾಪ್ಯರ್ಧಶಶಾಂಕಮೌಲಿಚರಣಧ್ಯಾನಪ್ರವೀಣೋ ನೃಪಃ
ದೃಷ್ಟಃ ಪಾಪನಿನಾಶನಾಯ ಬಹುಧಾ ಪುಣ್ಯಾಬ್ಧಿಸಂವರ್ಧಕಃ ॥೬೬॥

ಸಾಯಂ ಶಂಕರಪೂಜನಾಯ ಯತತೇ ರಾಜಾ ಯದಾ ಸಾದರಂ
ಪುಷ್ಪಾದ್ಯೈರಮಿತೈಃ ಪ್ರಫುಲ್ಲವದನೈರ್ಹೀರೈಶ್ಚ ದಾರೈಸ್ತದಾ ।
ಸರ್ವೇ ತದ್ವನವಾಸಿನೋಽಪಿ ಮುನಯಃ ಶಾರ್ದೂಲಸಂಘಾನ್ವಿತೈಃ
ಏಣೀಗೋಕುಲಮಂಡಲೈಃ ಸಹ ಸಮಾಗತ್ಯಾರ್ಚಯಂತೀಶ್ವರಂ ॥೬೭॥

ನೃತ್ಯಂ ಕುರ್ವಂತಿ ಕೇಚಿನ್ನೃಪವರವಿಹಿತಾಂ ಶಂಕರಾರ್ಚ್ಯಾಂ ವಿಲೋಕ್ಯ
ಪ್ರಾಪ್ತಂ ಭಾಗ್ಯಂ ಕಿಮೇತದ್ಬಹುವಿಧಮಿತಿ ತೇ ಶಾಂಗಲಿಂಗಾರ್ಚನೇನ ।

ಅವನ ಶಿವಲಿಂಗಾರ್ಚನೆಯ ಮಹಿಮೆಯಿಂದ ಧನಾಧಿಪನಾದ ಕುಬೇರನು, ಅವನ ಸನ್ನಿಧಿಗೆ ಬಂದು ಅಮಿತವಾದ ತನ್ನ ಐಶ್ವರ್ಯವನ್ನು ಸಮರ್ಪಿಸಿ, ತನ್ನ ಲೋಕಕ್ಕೆ ತೆರಳುವನು. ರಾಜನು ಆ ಐಶ್ವರ್ಯದ ಸಹಾಯದಿಂದ ಈಶ್ವರನನ್ನು ಪ್ರೀತಿಗೊಳಿಸಿ, ಅಪೂರ್ವವಾದ ಭಾಗ್ಯವಿಶೇಷಕ್ಕೆ ಪಾತ್ರನಾಗುವನು. ಚಂದ್ರಶೇಖರನ ಚರಣಗಳನ್ನು ಸ್ಮರಿಸುವುದರಲ್ಲಿ ಆಸಕ್ತನಾದ ಅವನು ಪುಣ್ಯರಾಶಿಗಳನ್ನು ವೃದ್ಧಿಗೊಳಿಸಿದವನಾಗಿ ಪಾಪಗಳನ್ನು ನಿರ್ಮೂಲಗೊಳಿಸುವನಂತೆ ತೋರಿಬಂದನು. ॥೯೬॥

ಸಾಯಂಕಾಲದಲ್ಲಿ ರಾಜನು ಶಿವಪೂಜೆಯನ್ನು ಮಾಡತೊಡಗಲು, ಆಗ ಆ ವನದಲ್ಲಿ ವಾಸವಾಗಿದ್ದ ಮುನಿಗಳೆಲ್ಲರೂ ಅಮೂಲ್ಯವಾದ ರತ್ನಗಳನ್ನೂ ಮತ್ತು ಚೆನ್ನಾಗಿ ಅರಳಿ ಘಮಘಮಿಸುತ್ತಿರುವ ನಾನಾವಿಧವಾದ ಹೂವುಗಳನ್ನು ತೆಗೆದುಕೊಂಡು, ತಮ್ಮ ಪತ್ನಿಯರೊಂದಿಗೆ ಈಶ್ವರ ಸನ್ನಿಧಿಗೆ ಬಂದು, ಶಿವನನ್ನು ಅರ್ಚಿಸುವರು. ಆ ಮುನಿಗಳೊಂದಿಗೆ ವನದಲ್ಲಿ ವಾಸವಾಗಿದ್ದ, ಹುಲಿ, ಜಿಂಕೆ, ಗೋವು ಮುಂತಾದ ಪ್ರಾಣಿಗಳೂ ಸಹ ತಮ್ಮ ವೈರಭಾವವನ್ನು ಬಿಟ್ಟು ಅಲ್ಲಿಗೆ ಶಿವಪೂಜಾರ್ಥವಾಗಿ ಬರುವುವು. ॥೯೭॥

ರಾಜನು ಮಾಡಿದ ಶಿವಪೂಜೆಯನ್ನು ನೋಡಿ ಕೆಲವರು ಸಂತೋಷದಿಂದ ನೃತ್ಯವನ್ನಭಿನಯಿಸುವರು. ಇನ್ನು ಕೆಲವರು ಇದೆಂತಹ ಭಾಗ್ಯವಿಶೇಷ? ಎಂದು

ನತ್ವಾ ಧ್ಯಾತ್ವಾಪಿ ಕೇಚಿದ್ಗಿರಿವರತನಯಾಕಾಂತಲಿಂಗಾನಿ ದೃಷ್ಟ್ವಾ
ಹೃಷ್ಟಾಃ ಪುಣ್ಯೈರಪಾರೈರಿತಿ ಖಲು ವಿವಿಧಸ್ತೋತ್ರವಾರ್ತಾನುರಕ್ತಾಃ ॥೯೮॥

ಅಸ್ಮಾಕಮಿಂದುಶಕಲಾಭರಣಾರ್ಚನೇನ
ಭೀತಿಃ ಕದಾಪಿ ನ ಯಮಾದಿತಿ ಸಂವದಂತಃ
ನೃತ್ಯಂತಿ ಶಾಂತಮನಸಃ ಶಿವ ಶಂಕರೇತಿ
ಸ್ವಾನಂದರಾಶಿಸಮಲಂಕೃತಬಾಷ್ಪಪೂರಾಃ ॥೯೯॥

ಹರ ಶಂಕರ ಶಂಕರೇತಿ ಭೂಯಃ
ಪ್ರವದಂತಃ ಖಲು ಸಂತ ಏವ ನಿತ್ಯಂ ।
ನಿವಸಂತಿ ಶಿವಾಲಯೇಷು ತೇಷಾ
ಮಭಿವೃದ್ಧಿಃ ಖಲು ಸರ್ವದಾಪಿ ಮೋದೈಃ ॥೧೦೦॥

ರಾತ್ರಿಂ ನ ಜಾನಂತಿ ಶಿವಾರ್ಚನೇನ
ದಿನಂ ನ ಜಾನಂತಿ ನಿಶಾಮುಖಂ ವಾ

ತಮ್ಮ ತಮ್ಮೊಳಗೆ ಆಚ್ಚರಿಗೊಳುತ್ತಾ, ಸುಂದರವಾದ ಆ ಶಿವಲಿಂಗಗಳನ್ನು ನೋಡಿ "ನಮ್ಮ ಪುಣ್ಯದ ಮಹಿಮೆಯಿಂದಲೇ ನಮಗೆ ಈ ಶಿವಲಿಂಗಗಳ ದರ್ಶನವು ಲಭಿಸಿರುವುದು" ಎಂದು ಹೇಳುತ್ತಾ, ನಾನಾ ಬಗೆಯಿಂದ ಶಿವನನ್ನು ಸ್ತುತಿಸುವರು. ॥೯೮॥

"ಚಂದ್ರಶೇಖರನನ್ನು ಅರ್ಚಿಸುವುದರಿಂದ ನಮಗೆ ಎಂದಿಗೂ ಮೃತ್ಯುಭಯವಿರುವುದಿಲ್ಲ" ಎಂದು ಅನ್ಯೋನ್ಯವಾಗಿ ಮಾತನಾಡಿಕೊಳ್ಳುತ್ತಾ ಆ ಮುನಿಗಳು ಶಾಂತಚಿತ್ತರಾಗಿ "ಶಿವ" "ಶಂಕರ" ಎಂದು ತಾವೂ ಶಿವನಾಮಗಳನ್ನುಚ್ಚರಿಸುತ್ತಾ ನರ್ತಿಸುವರು. ಆಗ ಅವರ ನೇತ್ರಗಳಿಂದ ಆನಂದ ಬಾಷ್ಪಗಳ ಧಾರೆಗಳು ಭಾವಾವೇಶದಿಂದ ಸಂತತವಾಗಿ ಸುರಿಯುವುವು. ॥೯೯॥

ಸತ್ಪುರುಷರು, ಅನವರತವೂ "ಹರ" "ಶಂಕರ" "ಶಿವ" ಎಂದು ಶಿವನನ್ನು ಸ್ಮರಿಸುತ್ತಾ, ಶಿವದೇವಾಲಯಗಳಲ್ಲಿ ವಾಸವಾಗಿರುವರು. ಅವರ ಆನಂದವು ಪ್ರತಿದಿನವೂ ವೃದ್ಧಿಯನ್ನು ಹೊಂದುವುದು. ॥೧೦೦॥

ಅವರು, ಯಾವಾಗಲೂ ಶಿವನನ್ನು ಆರಾಧಿಸುತ್ತಲೇ ಕಾಲವನ್ನು ಕಳೆಯು

ತೇ ಸರ್ವದಾ ಶಂಕರಪೂಜನೇನ
ಕಾಲಂ ನಯಂತೀತಿ ವಿಶೇಷತಸ್ತು ॥೧೦೧॥

ಬಾಲ್ಯೈರಪ್ಯನಿಶಂ ಶಿವಾರ್ಚನರತಿರ್ದಾರೈಶ್ಚ ಕನ್ಯಾಕುಲೈಃ
ಸೋತ್ಸಾಹೈಃ ಶಿವಪೂಜನೋದ್ಯತಲಸತ್ಸ್ವಾಂತೈರನಂತೈರಪಿ ।
ನೀತಃ ಕಾಲ ಇತಿ ಪ್ರಬೋಧಸಮಯಃ ಸರ್ವೋಽಪ್ಯಬೋಧಃ ಕದಾ
ಕಸ್ಯ ಸ್ಯಾದಿತಿ ಚಿಂತಯಾಪಿ ಸಮಯಃ ಕಾಲಂ ನಯಂತ್ಯೇವ ಹಿ ॥೧೦೨॥

ವಿಶ್ವೇಶಾರ್ಚನಜಾತಪುಣ್ಯವಿಭವೈರ್ಜಾತಂ ಜಗದ್ವ್ಯಾಪ್ತಂ
ಭೂಪಾಲೇ ಪ್ರಬಲೇತಿ ಶಾಂಭವವರೈಸ್ತಾವದ್ಧರಾಮಂಡಲಂ
ಸರ್ವಂ ಪಾವನಮೇವ ಶಾಂಭವವರಾಪಾರಶ್ರಿಯಾ ಕೇವಲಂ
ತದ್ಭಾಗ್ಯಂ ನ ಕದಾಪಿ ಜಾತಮಧುನಾ ತತ್ಸೂರ್ಯತೇ ಶೋಭನಂ ॥೧೦೩॥

ಇತಿ ಶ್ರೀಶಿವರಹಸ್ಯೇ ಹರಾಖ್ಯೇ ಉತ್ತರಾರ್ಧೇ ದೇವಸಂಘಕೃತ
ಶಿವಪೂಜಾ ಶಿವಸ್ತುತಿ ಶಿವಪ್ರಸಾದ ಬ್ರಹ್ಮಾದಿ ಪಶ್ಚಾತ್ತಾಪವರ್ಣನಂ ನಾಮ
ಪಂಚವಿಂಶೋಽಧ್ಯಾಯಃ

ವರು. ಆದುದರಿಂದಲೇ, ಹಗಲು, ರಾತ್ರಿ, ಸಾಯಂಕಾಲವೆಂಬ ಕಾಲವಿಭಾಗದ ಅರಿವು ಸಹ ಅವರಿಗಿರುವುದಿಲ್ಲ. ॥೧೦೧॥

ಈ ರೀತಿಯಲ್ಲಿ ಹಗಲಿರುಳುಗಳ ವಿವೇಚನೆಯಿಲ್ಲದೇ, ಪತ್ನೀಪುತ್ರರಿಂದೊಡಗೂಡಿ ಎಡಬಿಡದೇ, ಶಿವತತ್ಪರರಾದ ಆ ಭಕ್ತಶ್ರೇಷ್ಠರು ಹೀಗೆಂದು ಚಿಂತಿಸುವರು– ಅಯ್ಯೋ, ನಾವು ಕಾಲದ ಪರಿವೆಯಿಲ್ಲದೇ, ಶಿವನನ್ನು ಆರಾಧಿಸುತ್ತಿರುವೆವು. ಆದರೆ ನಮಗಿನ್ನೂ ಜ್ಞಾನೋದಯವಾಗಿರುವುದಿಲ್ಲ. ಅದೆಂದಿಗಾದೀತು ? ಎಂದು ಚಿಂತೆಗೊಳಗಾಗಿ ಕಾಲವನ್ನು ಕಳೆಯುವರು. ॥೧೦೨॥

ಪ್ರಪಂಚವು, ಪುಣ್ಯಶಾಲಿಗಳಾದ ಈಶ್ವರಭಕ್ತಾಗ್ರೇಸರರಿಂದ ವ್ಯಾಪ್ತವಾಗಿರುವುದು. ಈ ಭೂಪಾಲಕನು ವಿಶೇಷವಾಗಿ ಈಶ್ವರನ ಏಕಾಂತಭಕ್ತನಾಗಿರುವನು ಈಶ್ವರಭಕ್ತರಿಂದ ಈ ಭೂಮಂಡಲವು ಪವಿತ್ರವಾಗಿರುವುದು. ಮತ್ತು ಅವರ ಅಪಾರವಾದ ಕಾಂತಿಯಿಂದ ಅದು ಪ್ರಜ್ವಲಿಸುತ್ತಿರುವುದು. ಆದರೆ ನಮಗೆ ಅಂತಹ ಭಾಗ್ಯವು

ಲಭಿಸಲಿಲ್ಲ. ಅದು ಲಭಿಸಲೆಂದೇ ಈಶ್ವರನನ್ನು ಸ್ಮರಿಸುವೆವು ಎಂದು ಯಾಜ್ಞವಲ್ಕ್ಯ ಮಹರ್ಷಿಯು ಜನಕರಾಜನಿಗೆ ತಿಳಿಸಿದನು. ||೧೦೩||

ಇಲ್ಲಿಗೆ .ಶಿವರಹಸ್ಯದ ಮೂರನೆಯ ಅಂಶದ ಎರಡನೆಯ ಭಾಗದಲ್ಲಿ,
ದೇವತೆಗಳಿಂದ ಮಾಡಲ್ಪಟ್ಟ, ಶಿವಪೂಜೆ, ಶಿವಸ್ತೋತ್ರ, ಶಿವಾನುಗ್ರಹಪ್ರಾಪ್ತಿ,
ಮತ್ತು ಬ್ರಹ್ಮಾದಿ ದೇವತೆಗಳ ಪಶ್ಚಾತ್ತಾಪ ವರ್ಣನೆಯೆಂಬ
ಇಪ್ಪತ್ತೈದನೆಯ ಅಧ್ಯಾಯವು ಮುಗಿದುದು

॥ ಶ್ರೀಃ ॥

ಅಥ ಶ್ರೀಶಿವರಹಸ್ಯೇ

ತೃತೀಯಾಂಶೇ

ಉತ್ತರಾರ್ಧೇ

ಷಡ್ವಿಂಶೋऽಧ್ಯಾಯಃ

॥ ಯಾಜ್ಞವಲ್ಕ್ಯ ಉವಾಚ ॥

ಸ ರಾಜಾ ಶಾಂಭವಂ ದೇಶಂ ಪಾಲಯನ್ನಿಖಿಲಾನಪಿ ।
ಚಕಾರ ಶಾಂಭವಾನೇವ ಪಾವನಾಚ್ಛಿವವಿದ್ಯಯಾ ॥೧॥

ಸ ತಾವದ್ಧನ್ಯಮಾತ್ಮಾನಮಮನ್ಯತ ಮಹೀಪತಿಃ ।
ಶಿವಾರ್ಚನರತಾನ್ ದೃಷ್ಟ್ವಾ ಸರ್ವಾನಪಿ ವಿಶೇಷತಃ ॥೨॥

ಚತುರ್ಮುಖೋಽಪಿ ಸ ಯಯೌ ಭೂಪಾಲೇನಾನುಮೋದಿತಃ ।
ಕೃತ್ವಾ ಶಿವಾರ್ಚನಂ ನತ್ವಾ ಪುನಃ ಪುನರುಮಾಪತಿಃ ॥೩॥

ಇಪ್ಪತ್ತಾರನೆಯ ಅಧ್ಯಾಯ

ಬಳಿಕ ಆ ದೊರೆಯು ಈಶ್ವರಭಕ್ತರಿಂದ ತುಂಬಿದ್ದ ತನ್ನ ದೇಶವನ್ನು ಪಾಲಿಸುತ್ತಾ, ಅಲ್ಲಿರುವರನ್ನೆಲ್ಲಾ ಪವಿತ್ರವಾದ ಶೈವವಿದ್ಯೆಯಿಂದ ಶಿವಧರ್ಮಾನುಯಾಯಿಗಳನ್ನಾಗಿ ಮಾಡಿದನು. ॥೧॥

ಎಲ್ಲಾ ತನ್ನ ಪ್ರಜೆಗಳೂ ಶಿವಪೂಜಾಪರಾಯಣರಾಗಿರುವುದನ್ನು ನೋಡಿ ಆ ರಾಜನು ತಾನು ಧನ್ಯನೆಂದು ತಿಳಿದನು. ॥೨॥

ರಾಜನಿಂದ ಅಪ್ಪಣೆಯನ್ನು ತೆಗೆದುಕೊಂಡು ಆಗ ಬ್ರಹ್ಮನು ಶಿವಪೂಜೆ ಮಾಡಿ ಶಿವನಿಗೆ ನಮಸ್ಕಾರಮಾಡಿ ತಾನೂ ತನ್ನ ಲೋಕಕ್ಕೆ ತೆರಳಿದನು. ॥೩॥

ತದಾನೀಮಾಗತಃ ಶೇಷಸ್ತಂ ನೃಪಂ ದ್ರಷ್ಟುಮಾದರಾತ್ ।
ಶಿವಪೂಜಾರತಂ ಧೀರಂ ಶಿವವ್ರತಪರಾಯಣಂ ॥೪॥

ತಂ ದೃಷ್ಟ್ವಾ ಪ್ರಣತೋ ಭಕ್ತ್ಯಾ ರಾಜಾನಂ ಶೈವಪುಂಗವಂ ।
ಕೃತಾರ್ಥೋಽಸ್ಮೀತಿ ತಂ ಪ್ರಾಹ ಸ ಶೇಷೋ ಭೂತಿಭೂಷಣಃ ॥೫॥

ಸ ಭೂಪತಿಶ್ಚ ತಂ ದೃಷ್ಟ್ವಾ ಶೇಷಂ ಕೃತಶಿವಾರ್ಚನಂ ।
ಶಿವನಾಮಜಪೋದ್ಯುಕ್ತಂ ಪ್ರಾಹ ಗಂಭೀರಯಾ ಗಿರಾ ॥೬॥

ಕಸ್ಮಾದಕಸ್ಮಾದದ್ಯಾಶು ದೇಶಾದಿಹ ಸಮಾಗತಃ ।
ಕಿಂ ತೇ ವ್ರತಂ ಕುಲಂ ಕಿಂ ವಾ ಕುಲನಾರೀವ್ರತಂ ಚ ಕಿಂ ॥೭॥

ಶೀಲಂ ಚ ತವ ಕಿಂ ನಿತ್ಯಂ ಮಹಿಲಾಶೀಲಮೇವ ವಾ ।
ಕೇನಾಚಾರೇಣ ಸತತಂ ಕ್ರಿಯತೇ ದಿನಯಾಪನಂ ॥೮॥

ಮತ್ತೆ ಒಂದು ದಿನ ಶಿವಪೂಜೆಯಲ್ಲಿ ಆಸಕ್ತನಾದ ಆ ಧೀರರಾಜನನ್ನು ನೋಡುವುದಕ್ಕಾಗಿ ಮಹಾಶೇಷನು ಆದರದಿಂದ ಬಂದನು. ॥೪॥

ಮಹಾದೇವ ಭಕ್ತ ಶ್ರೇಷ್ಠನಾದ ಆ ದೊರೆಯನ್ನು ನೋಡಿ ಮಹಾಶೇಷನು ಭಕ್ತಿಯಿಂದ ಮೊದಲು ನಮಸ್ಕಾರ ಮಾಡಿದನು. ಮತ್ತು ತಾನು ಕೃತಾರ್ಥನಾದೆನೆಂದು ವಿಭೂತಿಭೂಷಿತನಾದ ಆ ಶೇಷನು ದೊರೆಯೊಡನೆ ಹೇಳಿ ಸಂತೋಷಪಟ್ಟನು. ॥೫॥

ನೃಪನಾದರೋ ಶಿವಪೂಜೆಯನ್ನು ಮುಗಿಸಿಕೊಂಡು, ಶಿವ ಮಂತ್ರ ಜಪವನ್ನು ಜಪಿಸುತ್ತಿರುವ ಶೇಷನೊಡನೆ ಗಂಭೀರವಾದ ವಾಣಿಯಿಂದ ಹೀಗೆ ಮಾತನಾಡಿದನು. ॥೬॥

"ನೀನು ಯಾವ ದೇಶದಿಂದ ಇಲ್ಲಿಗೆ ಬಂದೆ? ನಿನ್ನ ವ್ರತವಾವುದು? ನಿನ್ನ ಕುಲವೆಂತಹದು.? ನಿನ್ನ ಕುಲದ ನಾರಿಯರ ವ್ರತವಾದರೂ ಏನು? ॥೭॥

ನಿನ್ನ ಸ್ವಭಾವವೆಂತಹುದು? ನಿನ್ನ ಸ್ತ್ರೀಯರ ನಡತೆಯಾದರೂ ಹೇಗಿದೆ? ಯಾವ ವೃತ್ತಿಯನ್ನು ಅವಲಂಬಿಸಿ ಕಾಲಹರಣ ಮಾಡುತ್ತಿರುವೆ?" ॥೮॥

ಇತಿ ತದ್ವಚನಂ ಶ್ರುತ್ವಾ ವಪುಷಾ ಮಾನುಷೇಣ ಸಃ ।
ಶೇಷಃ ಪ್ರಾಹಾತಿವಿನಯಾತ್ ಪ್ರಣಮ್ಯ ಗಿರಿಜಾಪತಿಂ ॥೯॥

ಪಾತಾಲೇ ವಸತಿಃ ಕುಲಂ ಚ ನೃಪತೇ ಮೇ ಪನ್ನಗಾನಾಂ ವ್ರತಂ
ಶರ್ವಾರಾಧನಮೇವ ಮತ್ಕುಲಸತೀವೃಂದಸ್ಯ ತಾವದ್ವ್ರತಂ ।
ಶಶ್ವಲ್ಲಿಂಗಸಮರ್ಚನಂ ಕುಲಸತೀಶೀಲಂ ಶಿವಾರಾಧನಂ
ತನ್ಮೇ ಶೀಲಮನಾಕುಲಂ ಮಮ ಮನಃ ಶ್ರೀಕಾಲಕಾಲಾರ್ಚನೇ ॥೧೦॥

ಅನ್ಯಃ ಕೋಽಪಿ ನ ಪೂಜ್ಯತೇ ಹಿ ನ ಶಿವಾದನ್ಯಃ ಸಮಾರಾಧ್ಯತೇ
ನ ಧ್ಯಾತೋಽಪಿ ನ ಕೀರ್ತಿತೋ ಪಿ ನ ಮನಾಕ್ ದೃಷ್ಟಃ ಸ್ಮೃತೋಽಪಾ ಮಯಾ
ನಾನ್ಯಸ್ಯತ್ರಿದಶೇಷು ಕಸ್ಯಚಿದಪಿ ಜ್ಞಾತಂ ಸ್ವರೂಪಂ ಶಿವಂ
ತ್ಯಕ್ತ್ವಾನ್ಯಸ್ಯ ಕದಾಪಿ ಸಾದರಧಿಯಾ ನಾಮಾಪಿ ನ ಶ್ರೂಯತೇ ॥೧೧॥

ಹೀಗೆ ಪ್ರಶ್ನಿಸಿದ ರಾಜನ ಮಾತನ್ನು ಕೇಳಿ ಮಹಾಶೇಷನು ಮನುಷ್ಯರೂಪವನ್ನು ತಳೆದು ಶಿವನಿಗೆ ವಂದಿಸಿ ವಿನಯದಿಂದ ಹೀಗೆ ಹೇಳತೊಡಗಿದನು. ॥೯॥

ಎಲೈ ! ದೊರೆಯೇ ! ನಾನು ಪಾತಾಳದಲ್ಲಿ ವಾಸಿಸುವೆನು. ನನ್ನ ಕುಲವು ಹಾವುಗಳ ವಂಶ. ನಮ್ಮ ಕುಲದಲ್ಲಿ ಹುಟ್ಟಿದ ಪತಿವ್ರತಾಸ್ತ್ರೀಯರಿಗೆ ಶಿವಪೂಜೆಯೇ ಮುಖ್ಯವ್ರತ. ಯಾವಾಗಲೂ ಶಿವಲಿಂಗಾರ್ಚನೆ ಮಾಡುವುದೇ ನಮ್ಮ ಯುವತಿಯರಿಗೆ ಸ್ವಭಾವ. ಅಲ್ಲದೇ ಅದೇ ನಿಯಮಪಾಲನೆ. ಆ ಶಿವಪೂಜೆಮಾಡುವುದೇ ನನ್ನ ನಡತೆ. ಅದು ಅವ್ಯಾಹತವಾದದ್ದು. ಶ್ರೀ ಕಾಲನಾಶಕನಾದ ಮಹಾದೇವನಲ್ಲಿ ಯಾವಾಗಲೂ ನನ್ನ ಮನಸ್ಸು ಸ್ಥಿರವಾಗಿ ನಟ್ಟಿರುವುದು. ॥೧೦॥

ಶಿವನನ್ನು ಬಿಟ್ಟು ಬೇರೆಯವನನ್ನು ನಾನು ಧ್ಯಾನಿಸಲಿಲ್ಲ. ಅಥವಾ ಆರಾಧನೆ ಮಾಡಲಿಲ್ಲ. ಸ್ಮರಿಸಲೂ ಇಲ್ಲ. ಮತ್ತು ಇತರ ದೇವರ ದರ್ಶನವನ್ನೂ ಮಾಡಿದವನು ನಾನಲ್ಲ. ದೇವತೆಗಳಲ್ಲಿ ಯಾವನಿಗೂ ಗೋಚರಿಸದ ಆ ಶಿವನ ಸ್ವರೂಪವನ್ನು ಬಿಟ್ಟು ಬೇರೊಬ್ಬನ ರೂಪವನ್ನು ಆದರದಿಂದ ಎಂದೂ ಸ್ಮರಿಸಲಾರೆ. ಇತರ ದೇವತೆಯ ಹೆಸರನ್ನೂ ಸಹ ನಾನು ಕೇಳಲಿಲ್ಲ. ॥೧೧॥

ಅನ್ಯಾರಾಧನಪೂಜನಾದಿನಿರತಂ ನ ಸ್ವಾಂತಮಸ್ಮತ್ಕುಲೇ
ದಾರಾಣಾಮಪಿ ಸರ್ವಥಾಪಿ ಸುತರಾಂ ಪುಂಸಾಂ ಶಿವನ್ಯಾಮರಃ
ನಾಸ್ಮಾದ್ದೃಷ್ಟಿಪಥಂ ಪ್ರಯಾತಿ ಸಹಸಾ ಶೈವತ್ವಮಾಸಾದ್ಯ ಚೇತ್
ಆಯಾತಿ ಪ್ರಯತೋ ವಿಭೂತಿಸಹಿತಃ ತೇನೈವ ಸಂಭಾಷ್ಯತೇ ॥೧೨॥

ಯಃ ಕಶ್ಚಿದ್ಭವತು ತ್ರಿಲೋಚನರತೋ ಭೂತಿಪ್ರಭಾಭಾಸುರೋ
ರುದ್ರಾಕ್ಷೋಜ್ವಲಮಾಲಿಕಾತಿರುಚಿರೋ ಲಿಂಗಾರ್ಚಕಾರಾಧಕಃ ।
ಲಿಂಗಾರಾಧನತತ್ಪರಃ ಶಿವಕಥಾಪೀಯೂಷಧಾರಾಧರಃ
ತತ್ಪಾನಾದಪಿ ಪೀನ ಏವ ಸ ಮಯಾ ಸಂಭಾಷ್ಯತೇ ಸಾದರಂ ॥೧೩॥

ಲಿಂಗಾರಾಧನಮಂತರೇಣ ನ ತೃಷಾ ಕಾಲೇ ವಸಂತೇಪಿ ವಾ
ಗ್ರೀಷ್ಮೇ ವಾ ವಿಪಿನೇಪಿ ನೀರನಿಕಟೇ ನೀರೇ ಕರಸ್ಥೇಪಿ ವಾ ।
ತನ್ನೀರಂ ತು ನ ಪೀಯತೇ ಫಲಕುಲಂ ನ ಸ್ಪೃಶ್ಯತೇ ನೇಕ್ಷ್ಯತೇ
ನಾನ್ನಂ ವಾ ದಧಿ ಶರ್ಕರಾದಿಕಕಥಾ ದೂರೇ ಧರಾಧೀಶ್ವರ ॥೧೪॥

ನಮ್ಮ ಕುಲದಲ್ಲಿ ಯಾರಿಗೂ ಶಿವನನ್ನು ಬಿಟ್ಟು ಬೇರೊಬ್ಬನ ಆರಾಧನಾದಿಗಳಲ್ಲಿ ಮನಸ್ಸು ಹುಟ್ಟಲಿಲ್ಲ. ನಮ್ಮ ದೇಶದಲ್ಲಿ ಹೆಂಗಸರಿಗಾಗಲೀ ಗಂಡಸರಿಗಾಗಲೀ ಶಿವನ ಹೊರತು ಬೇರೆ ದೇವತೆಯೇ ಇಲ್ಲ. ಆತನು ನಮ್ಮ ಕಣ್ಣಿಗೆ ಗೋಚರಿಸಲಾರನು. ಮತ್ತು ಶಿವದೀಕ್ಷೆಯನ್ನು ಸ್ವೀಕರಿಸಿ, ವಿಭೂತಿಭೂಷಣನಾಗಿ ಮಹಾದೇವನ ಪೂಜೆಯಲ್ಲಿ ಯಾವನು ನಿರತನಾಗಿರುವನೋ, ಅವನೇ ನಮಗೆ ಸದಾ ಕಾಣುವನು. ಮತ್ತು ಆತನೊಡನೆ ಸಂಭಾಷಣೆಯನ್ನೂ ನಾವು ನಡೆಸುವೆವು. ||೧೨||

ಶ್ರೀಮಹಾದೇವನ ಅರ್ಚನೆಯಲ್ಲಿ ನಿರತನಾಗಿ ವಿಭೂತಿಯಿಂದ ಅಲಂಕೃತನಾದವನು ಯಾವ ಜಾತಿಯವನೇ ಆಗಲಿ, ಆತನು ನನಗೆ ಹಿತನು. ರುದ್ರಾಕ್ಷವನ್ನು ಧರಿಸಿಕೊಂಡು ಮಹೇಶ್ವರ ಭಕ್ತರನ್ನು ಸತ್ಕರಿಸತಕ್ಕ ಮನುಷ್ಯನಲ್ಲಿ ನನಗೆ ವಿಶ್ವಾಸವಿದೆ. ಲಿಂಗಾರ್ಚನೆಮಾಡುತ್ತಾ ಶಿವನ ಕಥಾಮೃತವನ್ನು ಪಾನಮಾಡಿ ಉಬ್ಬುತ್ತಿರುವ ಮನುಷ್ಯನೊಡನೆ ನಾನು ಭಾಷಣಮಾಡಲಪೇಕ್ಷಿಸುತ್ತೇವೆ. ||೧೩||

ಎಲೈ ರಾಜನೇ, ನಾನು ಲಿಂಗಾರ್ಚನೆಯನ್ನು ಮಾಡದೇ ವಸಂತಕಾಲದಲ್ಲಿ ಯಾದರೂ ನೀರನ್ನು ಕುಡಿಯಲಾರೆ. ಅಥವಾ ನನಗೆ ಬಾಯಾರಿಕೆಯನ್ನು ಪರಿ

ತದ್ವಸ್ತ್ರಂ ಪರಿಧೀಯತೇ ನವಮಿತಿ ಶ್ಲಾಘ್ಯಂ ಶಿವಾಯಾರ್ಪಿತಂ
ತದ್ರತ್ನಾಭರಣಂ ಯದನ್ನಮಮಲಂ ಕ್ಷೀರಂ ಫಲಂ ವಾ ಜಲಂ ।
ತತ್ಸರ್ವಂ ಶಿವಭುಕ್ತಮಿತ್ಯಪಿ ಮಿತಂ ಭಕ್ತ್ಯಾ ಪರಂ ಗೃಹ್ಯತೇ
ತೇನೈವೋದರಪೋಷಣಾದಿಕಮಪಿ ಪ್ರಾಪ್ತೇನ ಮೇ ಜಾಯತೇ ॥೧೫॥

ಕಸ್ತೂರೀಘನಸಾರಕುಂಕುಮರಜಃ ಪಾಟೀರಸಾರಾದಿಕಂ ಭೂತ್ಯಾ
ಸಂಯುತಮೇವ ಸಂತತಮುಮಾಕಾಂತಾಯ ಯದ್ದೀಯತೇ
ಲಿಂಗೇ ತತ್ಫಲು ದೀಯತೇ ಸುಕುಸುಮಂ ಬಿಲ್ವೀದಳಂ ವಾ ಪರಂ
ನಿರ್ಮಾಲ್ಯಂ ಶಿರಸಾ ಪ್ರಗೇ ಪರಮುಮಾಕಾಂತಂ ಸಮಭ್ಯರ್ಚತು ॥೧೬॥

ಹರಿಸುವುದೆಂದರೆ ಲಿಂಗಾರ್ಚನೆಯೇ. ನಡುಬೇಸಗೆಯಲ್ಲಿಯಾದರೂ, ಕಾಡಿನಲ್ಲಿಯಾದರೂ ಹತ್ತಿರದಲ್ಲಿ ನೀರಿದ್ದರೂ ಅಥವಾ ಹಸ್ತದಲ್ಲೇ ಇದ್ದರೂ ಲಿಂಗಾರ್ಚನೆ ಮಾಡದೇ ಅದನ್ನು ಸ್ವೀಕರಿಸುವುದಿಲ್ಲ. ಮತ್ತು ಶಿವಾರ್ಚನೆ ಮಾಡದೇ ಹಣ್ಣನ್ನೂ ಮುಟ್ಟಲಾರೆ. ನೋಡುವುದೂ ಇಲ್ಲ. ಮೊಸರು ಸಕ್ಕರೆ ಬೆರಸಿದ ಅನ್ನವನ್ನು ಸಹಾ ಶಿವನಿಗೆ ಅರ್ಪಿಸದೇ ನಾನು ಸ್ವೀಕರಿಸುವುದಿಲ್ಲ. ಇತರ ವಸ್ತುಗಳ ವಿಷಯದಲ್ಲಿ ಹೇಳುವುದೇನು ? ||೧೪||

ಶ್ರೀ ಮಹಾದೇವನಿಗೆ ಅರ್ಪಿತವಾದ ವಸ್ತ್ರವನ್ನೇ ಹೊಸಬಟ್ಟೆಯೆಂದು ತಿಳಿದು ಉಪಯೋಗಿಸುತ್ತೇನೆ. ಆ ಶಿವನಿಗೆ ಅಲಂಕರಿಸಿದ ರತ್ನಾಭರಣಗಳನ್ನು ಶುಭವೆಂದು ತಿಳಿಯುತ್ತೇನೆ. ಅವನಿಗೆ ಅರ್ಪಿಸಿದ ಅನ್ನ, ಹಾಲು, ಹಣ್ಣು, ನೀರು ಇವೆಲ್ಲವನ್ನೂ ಆತನು ಭುಂಜಿಸಿ ಮಿಕ್ಕುದೆಂದು ತಿಳಿದು ನಾನದನ್ನು ಸ್ವೀಕರಿಸುವೆನು. ಆದರಿಂದಲೇ ನಾನು ಹೊಟ್ಟೆತುಂಬಿಕೊಳ್ಳುವೆನಲ್ಲದೇ, ಬೇರೊಂದನ್ನೂ ಆಹಾರವನ್ನಾಗಿ ಸ್ವೀಕರಿಸುವುದಿಲ್ಲ. ||೧೫||

ಕಸ್ತೂರಿ, ಕರ್ಪೂರ, ಕುಂಕುಮ, ಚಂದನ ಇವುಗಳನ್ನು ವಿಭೂತಿಯೊಡನೆ ಸೇರಿಸಿ ಅದನ್ನು ಶ್ರೀ ಮಹಾದೇವನಿಗೆ ಅರ್ಪಿಸಬೇಕು. ಲಿಂಗಕ್ಕೆ ಇತರ ಹೂಗಳೊಡನೆ ಹೊಸ ಬಿಲ್ವದಳವನ್ನು ಪೂಜೆಮಾಡಬೇಕು. ಬಳಿಕ ಶಂಕರನ ಭಕ್ತನು ಆ ಶಿವ ನಿರ್ಮಾಲ್ಯಗಳನ್ನು ಪ್ರಾತಃಕಾಲದಲ್ಲಿ ಶಿರಸ್ಸಿನಲ್ಲಿ ಧರಿಸಬೇಕು. ಇದೇ ಸದಾ ಶಿವನನ್ನು ಪೂಜಿಸುವ ಕ್ರಮ. ||೧೬||

ಅಸ್ಮಾಕಂ ಋತುಕಾಲ ಏವ ವನಿತಾಸಂಗೋಽಪಿ ತತ್ಸಂಗಮಂ
ಶಂಗಧ್ಯಾನಪುರಃಸರಂ ಸುಖಮಪಿ ಜ್ಞಾತಂ ಮಹೇಶಾರ್ಪಿತಂ ।
ನಾರೀ ಭಸ್ಮವಿಭೂಷಿತಾ ಪರಮಪಿ ಸ್ಪೃಷ್ಟಾಪಿ ದೃಷ್ಟಾಪಿ ಸಾ
ರುದ್ರಾಕ್ಷಾಭರಣಾ ಶಿವಾರ್ಚನರತಾ ವೀರೇಶಗಾನೋತ್ಸವಾ ॥೧೭॥

ಸ್ವಪ್ನೇಽಪ್ಯಶಿವವ್ರತಾಮೃತಕಥಾ ವ್ಯರ್ಥಾ ಸುಧಾಸಾಧನಂ
ಪಾಪಾಪಾರಕಲಾದಿಸಾಧನಮಿತಿ ಜ್ಞಾತ್ವೈವ ನ ಶ್ರೂಯತೇ ।
ಅಸ್ಮಾಭಿಃ ಶಿವವೀಕ್ಷಣೇನ ಸಮಯಃ ಸರ್ವಃ ಸದಾ ನೀಯತೇ
ಶ್ರೀವೀರೇಶಕಥಾವಿಶೇಷಕಥನೈರ್ದಾರೈಃ ಕುಮಾರೈರಪಿ ॥೧೮॥

ಅಸ್ಮಾಭಿಃ ಸ್ಮರವೈರಿಪೂಜನರತೈರ್ನಾರಾರಿಪೂಜಾರತೋ
ಯಃ ಕಶ್ಚಿದ್ಭವನೇಷು ನೇತ್ರಪದವೀಂ ಪ್ರಾಪ್ತಃ ಸಮಾಲಿಂಗ್ಯತೇ ।
ಅನ್ಯಃ ಸ್ಪೃಶ್ಯತ ಏವ ನಾತಿವಿಮಲೋ ದೃಷ್ಟೋಽಪಿ ದೂರಾದಪಿ
ಸ್ಪೃಷ್ಟಂ ದೂರನಿರಾಕೃತೋಽಪಿ ಭವತೀಕ್ಷತ್ಯುತ್ಸವೋ ಜಾಯತೇ ॥೧೯॥

ಪತ್ನಿಯು ಋತುಸ್ನಾತಳಾಗಿ ಬಂದ ಕಾಲದಲ್ಲಿ ಸ್ತ್ರೀಸಂಭೋಗ ಮಾಡುವೆವು. ಆ ಕಾಲದಲ್ಲಿಯೂ ಆ ಸದಾಶಿವನ ಧ್ಯಾನವಿರುವುದೇ ಹೊರತು ಬೇರೆ ಇಲ್ಲ. ಪರಮೇಶ್ವರ ಧ್ಯಾನಮಾಡಿ ನಂತರ ಉಂಟಾದ ಸುಖಭೋಗಗಳನ್ನೂ ಶಿವನಿಗೆ ನಾವು ಸಮರ್ಪಿಸುವೆವು. ನಮ್ಮ ಕುಲ ಯುವತಿಯರು ವಿಭೂತಿಯಿಂದಲೂ ರುದ್ರಾಕ್ಷಿಯಿಂದಲೂ ಅಲಂಕೃತರಾಗುವರು. ಯಾವಾಗಲೂ ಶಿವಪೂಜೆಯಲ್ಲಿ ಆಸಕ್ತರಾಗಿಯೇ ನಮ್ಮ ಪತ್ನಿಯರು ಕಣ್ಣಿಗೆ ಗೋಚರಿಸುವರು. ॥೧೭॥

ಶಿವನ ಹೊರತು ಇತರ ದೇವತೆಗಳ ವ್ರತಗಳನ್ನಾಗಲಿ ಕಥೆಗಳನ್ನಾಗಲೀ ಸ್ವಪ್ನದಲ್ಲಿ ಕೇಳಿದವನಿಗೂ ಅನಂತ ಪಾಪಗಳು ಸಂಭವಿಸುವುವು ಎಂದು ತಿಳಿದು ನಾವು ಅಶೈವ ಕಥೆಗಳನ್ನು ಕೇಳುವುದೇ ಇಲ್ಲ. ಸದಾಶಿವನ ದರ್ಶನ ಮತ್ತು ಶಿವನ ಕಥೆ ಹೇಳುವುದು, ಕೇಳುವುದು ಇವುಗಳಿಂದ ನಾವು, ನಮ್ಮ ಹೆಂಡತಿ ಮಕ್ಕಳೂ ಸಹ ಕಾಲವನ್ನು ತಳ್ಳುತ್ತಿರುವೆವು. ॥೧೮॥

ನಾವು ಶ್ರೀಶಂಕರನನ್ನು ಪೂಜೆ ಮಾಡುತ್ತಿರುವಾಗ ಶ್ರೀ ಸದಾಶಿವನ ದೀಕ್ಷೆಯನ್ನು ಧರಿಸಿದವನು, ನಮ್ಮ ಮನೆಯೊಳಕ್ಕೆ ಬಂದದ್ದನ್ನು ಕಂಡರೆ, ಕೂಡಲೇ ಅವನನ್ನು ಸಂತೋಷದಿಂದ ಆಲಿಂಗಿಸುತ್ತೇವೆ. ಅದಲ್ಲದೇ ಇತರನು ಅತ್ಯಂತ ಪರಿ

ಅಸ್ಮದ್ಬಾಲಕಸೇವಕೈರಪಿ ಮುಹುರ್ಲಿಂಗಾರ್ಚನಾದ್ಯುದ್ಯತೈಃ
ಬಿಲ್ವಾದ್ಯಾಹರಣೋತ್ಸವೈಃ ಶಿವಕಥಾಲಾಪಪ್ರವಾಹೋತ್ಸುಕೈಃ
ಕಾಲೋ ನೀಯತ ಏವ ಕಾಲಜಭಯಂ ತ್ಯಕ್ತ್ವೈವ ತೈರ್ಬಾಲಕೈಃ
ಲಿಂಗಾರಾಧನಮೇವ ಸಾಧುವಿವಿಧಂ ಧ್ಯೇಯಂ ವಿಧೇಯಂ ಚ ನಃ ॥೨೦॥

ಅಸ್ಮಾಕಂ ಖಲು ಕಾಲಕಾಲಭಜನಾತ್ಕಾಲೋಽಪಿ ರಂಕಾಯತೇ
ಶಂಕಾತಂಕವಿವರ್ಜಿತೇನ ಮನಸಾ ಶಂಗಃ ಪರಂ ಸ್ಮಾರ್ಯತೇ
ಭೂತಿಃ ಶಂಕರನಿರ್ಮಿತಾ ಸಿತತರಾ ನಿತ್ಯಂ ಪರಂ ಧಾರ್ಯತೇ
ದಾರಾಣಾಮಪಿ ತದ್ವ್ರತಂ ಖಲು ಸದಾ ತಲ್ಲಿಂಗಪೂಜಾದಿಕಂ ॥೨೧॥

ಅಸ್ಮದ್ವಂಶಸಮುದ್ಭವೇನ ನ ಶಿವಾದನ್ಯಃ ಸಮಾರಾಧ್ಯತೇ
ತಚ್ಚಿಂತಾಪಿ ನ ತತ್ಕಥಾಪಿ ಸುತರಾಂ ಸ್ವಪ್ನೇಽಪಿ ವಾ ಜಾಯತೇ ।

ಶುದ್ಧನಾಗಿ ಬಂದರೂ, ಆತನನ್ನು ಮುಟ್ಟಲಾರೆವು. ಒಂದು ವೇಳೆ ಆತನನ್ನು ಸ್ಪರ್ಶಮಾಡಿದರೂ ದೂರಕ್ಕೆ ತಳ್ಳಿ ಆನಂದಪಡುತ್ತೇವೆ. ॥೧೯

ನಮ್ಮ ಚಿಕ್ಕ ಚಿಕ್ಕ ಮಕ್ಕಳೂ ಕೂಡ ಲಿಂಗಾರ್ಚನೆಯಲ್ಲಿ ನಿರತರಾಗಿರುವರು. ಅವರು ಅರ್ಚನೆಗಾಗಿ ಬಿಲ್ವಗಳನ್ನು ತರುವರು. ಶಿವಕಥೆಯನ್ನು ಕೇಳುವುದೆಂದರೆ ಅವರಿಗೆ ತುಂಬಾ ಸಂತೋಷ. ಹೀಗೆಯೇ ಶಿವಾರ್ಚನೆಯಲ್ಲಿ ಕಾಲಕಳೆಯುವ ನಮ್ಮ ಬಾಲಕರಿಗೆ ಯಮನಿಂದ ಹೆದರಿಕೆಯಿಲ್ಲ. ನಮಗೆ ಲಿಂಗಾರಾಧನೆಯೇ ದಿವ್ಯ ದೇವತೋಪಾಸನೆಯಾಗಿದೆ. ॥೨೦॥

ನಮಗಂತೂ ಶ್ರೀ ಮಹಾದೇವನ ನಾಮಸಂಕೀರ್ತನೆಯಿಂದ ಕಾಲವು ಬಡವಾಗುತ್ತದೆ. ಮತ್ತು ಯಾವ ವಿಧವಾದ ಸಂದೇಹವೂ ಇಲ್ಲದೇ ಶಿವನನ್ನು ಧ್ಯಾನಿಸುತ್ತೇವೆ. ಶ್ರೀ ಪರಮೇಶ್ವರನಿಗರ್ಪಿಸಿದ, ಶುಭ್ರವಾದ ವಿಭೂತಿಯನ್ನು ಧಾರಣ ಮಾಡುತ್ತೇವೆ. ನಮ್ಮ ಭಾರ್ಯೆಯರಿಗೂ ಕೂಡ ಈ ವ್ರತವು ನಿಯತವಾಗಿರುವುದು. ॥೨೧॥

ನಮ್ಮ ಕುಲದಲ್ಲಿ ಜನಿಸಿದವನು ಶಿವನನ್ನು ಹೊರತು ಬೇರೆಯವನನ್ನು ಪೂಜಿಸುವುದಿಲ್ಲ. ಸ್ವಪ್ನಕಾಲದಲ್ಲಿಯೂ ಆ ಶಿವನಲ್ಲದ ದೇವನ ಕಥೆ, ಅವನ ಧ್ಯಾನ ಇವು ನಮಗೆ ಉಂಟಾಗುವುದಿಲ್ಲ. ಶಂಕರ ಭಕ್ತರಲ್ಲದವರೊಡನೆ ಸಹವಾಸ ಮಾಡುವುದಿಲ್ಲ.

ನಾಶೈವೈಃ ಸಹ ಸಂಗಮೋಽಪಿ ಸಹಸಾ ಶೈವೀ ಕಥಾ ಶ್ರೂಯತೇ
ಶೈವೇಭ್ಯಃ ಶಿವ ತತ್ಪರೈಃ ಸಹ ಸಭಾ ಶೈವೀ ಸದಾ ವೇಶ್ಮನಿ ॥೨೨॥

ಲಿಂಗಾನ್ಯೇವ ಗೃಹೇಷು ರತ್ನರಚಿತಶ್ರೀನಂದಿಕೇಶಾನ್ವಿತಾ
ಶ್ರೀಭೃಂಗೀರಿಟಿಸಂಯುತಾನಿ ತರವೋ ಬಿಲ್ವಸ್ಯ ತತ್ಪಲ್ಲವೈಃ ।
ತನ್ಮೂಲೇ ಶಿವಪೂಜನಂ ಪ್ರತಿದಿನಂ ಶೈವೀ ಕಥಾ ಶ್ರೂಯತೇ
ತತ್ರೈವ ಪ್ರತಿವಾಸರಂ ಶಿವಜನೈಃ ಸಾಕಂ ಶಿವಸ್ಸ್ತೂಯತೇ ॥೨೩॥

ಆರಾಧ್ಯಂ ಶಿವಲಿಂಗಮೇವ ಸತತಂ ಧ್ಯೇಯೋ ಮಹೇಶೋ ಮುಹುಃ
ಜಪ್ಯಸ್ತಾವದಹರ್ನಿಶಂ ಶಿವಮಯಃ ಪಂಚಾಕ್ಷರಃ ಕೇವಲಂ ।
ವಾದೋಽಪಿ ಪ್ರತಿವಾಸರಂ ಶಿವಕಥಾತಾತ್ಪರ್ಯಬೋಧಾಯ ನಃ
ಸರ್ವಂ ಭೂಪ ವಯಃ ಶಿವಾರ್ಚನಶಿವಧ್ಯಾನೈರ್ವಿನೀತಂ ಮಯಾ ॥೨೪॥

ಯಾವಾಗಲೂ ಶಿವಸಂಬಂಧವಾದ ಚರಿತ್ರೆಯನ್ನೇ ಕೇಳುತ್ತೇವೆ. ಶಿವನ ಆರಾಧನೆಯಲ್ಲಿ ಆಸಕ್ತರಾಗಿ ಶಿವದೀಕ್ಷೆಯನ್ನು ಪಡೆದ ಭಕ್ತರೊಡಗೂಡಿಯೇ ಸಭೆಯನ್ನು ಮಾಡುತ್ತೇವೆ. ನಮ್ಮ ಸಭೆಯೆಲ್ಲಾ ಶೈವೀಸಭೆಯೆನಿಸುವುದು. ॥೨೨॥

ಬಿಲ್ವವೃಕ್ಷದ ಮೂಲದಲ್ಲಿ ಸ್ಥಾಪಿಸಿರುವ ನಂದಿಕೇಶ್ವರ, ಭೃಂಗಿ, ರಿಟಿ ಇವುಗಳಿಂದ ಕೂಡಿದ ಗೌರೀಶಂಕರನನ್ನು (ಶಿವಪಂಚಾಯತನ) ಬಿಲ್ವಪತ್ರೆಗಳಿಂದ ನಮ್ಮವರು ಪೂಜಿಸುವರು. ಮತ್ತು ಪ್ರತಿದಿನವೂ ಬಿಲ್ವಮೂಲದಲ್ಲಿ ಶಿವಸಂಬಂಧವಾದ ಕಥೆಗಳನ್ನು ಕೇಳುತ್ತೇವೆ. ಈಶ್ವರ ಭಕ್ತರೊಡಗೂಡಿ ಅಲ್ಲಿ ಶಿವನನ್ನು ಸದಾ ಹೊಗಳುತ್ತೇವೆ. ॥೨೩॥

ನಮಗೆ ಪೂಜ್ಯವಸ್ತುವೆಂದರೆ ಶಿವನೇ. ಧ್ಯೇಯ ವಸ್ತುವೆಂದರೆ ಈಶ್ವರನೇ ಹೊರತು ಬೇರೆ ಇಲ್ಲ. ಹಗಲಿರುಳೂ ಪಂಚಾಕ್ಷರೀ ಜಪವನ್ನು ಜಪಿಸತಕ್ಕವರಾಗಿದ್ದೇವೆ. ಪ್ರತಿನಿತ್ಯವೂ ಶಂಕರ ಚರಿತ್ರೆಯ ವಿಷಯವಾಗಿ ಚರ್ಚೆ ಮಾಡುತ್ತೇವೆ. ಆ ಶಿವಕಥೆಯು ನಮಗೆ ತಿಳಿಯದ ತಿಳಿವಳಿಕೆಯನ್ನುಂಟುಮಾಡಿಕೊಡುತ್ತದೆ. ಎಲೈ! ರಾಜನೇ! ನನ್ನ ವಯಸ್ಸೆಲ್ಲವೂ ಶಿವನ ಧ್ಯಾನ ಪೂಜೆಗಳಲ್ಲಿಯೇ ಕಳೆದು ಹೋಯಿತು. ॥೨೪॥

ಅಸ್ಮಾಕಂ ರಸನಾ ಮಹೇಶ್ವರಶಿವಶ್ರೀವಿಶ್ವನಾಥಾಂಬಿಕಾ
ಕಾಂತಾನಂಗಹರಾಂತಕಾಂತಕಮಹಾದೇವೇತಿ ನಾಮಾಮೃತಂ ।
ಪೀತ್ವಾ ಕ್ಷೀರಸಮನ್ವಿತಾಮಪಿ ಸ ತಾಂ ನಾಪೇಕ್ಷತೇ ನ ಸ್ಪೃಹಾಂ
ದ್ರಾಕ್ಷಾಣಾಂ ಕುರುತೇ ನ ಭೋಜನರತಿಂ ನವೇಕ್ಷುಕಾಂಡೇ ರತಿಂ ॥೨೫॥

ಹಾರಂ ಕೇವಲಮಾದರಾದ್ಗುಣವಿಧಿಪ್ರಾಪ್ತೋಪಹಾರಂ ಪರಂ
ಗೃಹ್ಣಾತ್ಯೇವ ಕದಾಚಿದಾಶು ರಸನಾ ತೃಪ್ತೈವ ನಾಮಾಮೃತೈಃ
ಚಕ್ಷುಃ ಪೂಜಿತಶಂಗಲಿಂಗನಿಕರಾಲಂಕಾರಸಂವೀಕ್ಷಣೈಃ
ಪ್ರೀತಂ ನಾನ್ಯವಿಲೋಕನಾಯ ಯತತೇ ನಿದ್ರಾವಸಾನೇಷ್ವಪಿ ॥೨೬॥

ಚಿತ್ತಂ ಶೈಲಸುತಾಸಹಾಯಚರಣಾಂಭೋಜಾರ್ಚನಧ್ಯಾನತಃ
ಸಂತುಷ್ಟಂ ಕರಣಾಂತರಪ್ರಿಯತಮವ್ಯಾಪಾರಹೀನಂ ಪರಂ ।
ಕೋ ವಾ ಸ್ವಾಭಿಮತಂ ವಿಹಾಯ ಪುನರಪ್ಯನ್ಯತ್ರ ಯಾತ್ಯಾದರಾ
ದಭ್ರಾಂತಂ ಶಿವಪಾದಪದ್ಮಭಜನಧ್ಯಾನೇ ನಿಧಾನೇ ಮಮ ॥೨೭॥

ನಮ್ಮ ಈ ನಾಲಿಗೆಯಾದರೂ ಮಹಾದೇವ! ಶಂಕರ, ಕಾಮಾರಿ, ಕಾಲನಾಶಕ, ಮಹೇಶ ಎಂಬ ಶ್ರೀ ಶಂಕರನ ನಾಮಾಮೃತವನ್ನು ಕುಡಿದುದರಿಂದ ಅದಕ್ಕೆ ಇತರ ಪದಾರ್ಥದಲ್ಲಿ ಆಸೆಯೇ ಇಲ್ಲ. ದ್ರಾಕ್ಷಿ, ಮೃಷ್ಟಾನ್ನ, ಕಬ್ಬಿನ ಹಾಲು ಇವುಗಳೊಂದೂ ಅದಕ್ಕೆ ಬೇಡವಾಗಿದೆ. ॥೨೫॥

ಗೌಣವೆಂಬ ಉಪಸರ್ಜನ ರೂಪವಾದ ಗುಣವಿಧಿಯಂತೆ ನಾವು ಶಿವನಿಗೆ ಅರ್ಪಿಸಿದ ಆಹಾರವನ್ನು ಮಾತ್ರ ಸೇವಿಸುತ್ತೇವೆ. ಆದರೆ ಈ ಆಹಾರ ಸೇವನೆಯು ಮುಖ್ಯವಾಗಿಲ್ಲ. ವಸ್ತುತಃ ನಮ್ಮ ನಾಲಗೆಯು ಕೇವಲ ಶಿವನಾಮಕೀರ್ತನದಿಂದಲೇ ತೃಪ್ತವಾಗಿದೆ. ಕಣ್ಣೂ, ಸಹ ಶ್ರೀ ಶಂಕರನಿಗೆ ಅಲಂಕರಿಸಿದ ವಸ್ತುಗಳನ್ನು ಮಾತ್ರ ಈಕ್ಷಿಸುತ್ತದೆಯಲ್ಲದೇ ಇತರ ಯಾವುದನ್ನೂ ನೋಡಲಪೇಕ್ಷಿಸುವುದಿಲ್ಲ. ॥೨೬॥

ನನ್ನ ಮನಸ್ಸು ಗಿರಿಜಾಪತಿಯ ಪಾದಕಮಲ ಧ್ಯಾನದಲ್ಲಿ ತೊಡಗಿದ್ದುದರಿಂದ ಅದು ಇತರ ಇಂದ್ರಿಯಗಳಿಗೆ ಅತ್ಯಂತ ಇಷ್ಟವಾದ ವಿಷಯಗಳಲ್ಲಿಯೂ ಪರಾಙ್ಮುಖವಾಗಿದೆ. ಲೋಕದಲ್ಲಿ ತನಗೆ ಬೇಕಾದ ವಸ್ತುವನ್ನು ಸೇವಿಸದೇ ಬೇರೆಯದನ್ನು ಯಾವನೂ ಬಯಸಲಾರನು. ಅಂತೆಯೇ ನನ್ನ ಮನಸ್ಸು ಶಿವಧ್ಯಾನದಲ್ಲಿ ಸ್ಥಿರವಾಗಿ ನಿಂತಿದೆ. ॥೨೭॥

ಶ್ರೋತ್ರೇ ಶಂಕರಶಂಕರಾಮಿತಕಥಾಪೀಯೂಷಪೂರ್ಣಾರ್ಣವೇ
ತನ್ನಾಮಶ್ರವಣೋತ್ಸುಕೇ ಶಿವಕಥಾಸಂಜೀವನೀಸಂಯುತೇ
ಶ್ರೀವಿಶ್ವೇಶ್ವರದಿವ್ಯನಾಮಮಣಯೋ ಮತ್ಕರ್ಣರೂಪಾಂ ಗುಹಾಂ
ಪ್ರಾಪ್ತಾಃ ಪಾಪತಮೋನಿವಾರಕತಯಾ ಪ್ರಾಪ್ತಾಃ ಪ್ರಸಿದ್ಧಿಂ ಮತೇ ॥೨೮॥

ಅಸ್ಮಾಕಂ ಕುಲದೈವತಂ ಶಿವ ಇತಿ ಸ್ವಪ್ನೇಽಪಿ ತತ್ಪೂಜನಾ
ತದ್ಧ್ಯಾನಾದಪಿ ತತ್ಕಥಾಶ್ರವಣತೋ ನಿತ್ಯಂ ಶಿವಂ ಜಾಯತೇ ।
ನಾರೀಣಾಮಶಿವಾಭಿಧಾನಕಥನಂ ಸ್ವಪ್ನೇಽಪಿ ವಾ ದುರ್ಲಭಂ
ಸ್ವಪ್ನೇ ಶಂಕರ ಏವ ಶೈಲತನಯಾಕಾಂತೋ ಮಯಾ ದೃಶ್ಯತೇ ॥೨೯॥

ಸ್ವಪ್ನೇ ಶಂಕರ ಏವ ಶಶ್ವದುಮಯಾ ಸಾಕಂ ಪ್ರಿಯಂ ಭಾಷಣಂ
ಕುರ್ವಂಸ್ತತ್ಕರಪಂಕಜಾರ್ಚಿತಪದಾಂಭೋಜೋ ಮಯಾ ದೃಶ್ಯತೇ।
ಭಾಗ್ಯೇ ಶಾರದಚಂದ್ರಮಂಡಲನಿಭಾಸ್ತಾರೋರುಹಾರಾವಳೀ
ಶೋಭಾಲಂಕೃತ ಏವ ಭಾತಿ ಹೃದಯೇ ಸರ್ವೇಷ್ಟದಾನೋತ್ಸುಕಃ ॥೩೦॥

ಎಲೈ ! ಬುದ್ಧಿಯೇ ! ಈ ನನ್ನ ಶ್ರೋತ್ರೇಂದ್ರಿಯವು ಶಂಕರನ ನಾಮಾಮೃತವೆಂಬ ಅಮೃತದಿಂದ ತುಂಬಿದೆ. ಮತ್ತು ಇದು ಶಿವನಾಮವೆಂಬ ಸಂಜೀವಿನಿಯನ್ನು ಹೊಂದಬೇಕೆಂದು ಬಹಳ ಉತ್ಸುಕತೆಯುಳ್ಳದ್ದಾಗಿದೆ. ಶ್ರೀ ಮಹೇಶ್ವರನ ದಿವ್ಯನಾಮಗಳೆಂಬ ರತ್ನಗಳು ನಿನ್ನ ಕರ್ಣವೆಂಬ ಗುಹೆಯನ್ನು ಪ್ರವೇಶಿಸಿ ಅಲ್ಲಿ ಅಡಗಿರುವ ತಮೋ ರೂಪವಾದ ಪಾಪವನ್ನು ನಿವಾರಿಸುತ್ತವೆ. ಅದರಿಂದಲೇ ಅವು ಅಷು ಪ್ರಸಿದ್ಧಿಯನ್ನು ಹೊಂದಿವೆ. ||೨೮||

ನಮ್ಮ ಕುಲಾಭಿಮಾನ ದೇವತೆ ಶಿವನು, ಎಂದು ತಿಳಿದು ಸ್ವಪ್ನಾವಸ್ಥೆಯಲ್ಲಿ ಸಹಾ ಆತನ ಪೂಜೆಯನ್ನು ಮಾಡುವೆವು. ಮತ್ತು ಆತನ ಧ್ಯಾನ, ಕಥಾಶ್ರವಣ ಇವುಗಳಿಂದ ನಮಗೆ ಒಳ್ಳೆಯದೇ ಆಗುತ್ತಿದೆ. ನಮ್ಮ ಪತ್ನಿಯರಿಗೂ ಸಹ ಇತರ ದೇವತೆಗಳ ದರ್ಶನವು ಸ್ವಪ್ನದಲ್ಲಿಯೂ ದುರ್ಲಭ. ಕನಸಿನಲ್ಲಿಯೂ ನಾನು ಶೈಲ ಪುತ್ರಿಯ ಕಾಂತನಾದ ಶಂಕರನನ್ನೇ ನೋಡುತ್ತೇನೆ. ||೨೯||

ಶ್ರೀ ಪರಮೇಶ್ವರನು ಉಮಾದೇವಿಯೊಡನೆ ಪ್ರಿಯವಾದ ಸಲ್ಲಾಪಗಳನ್ನು ಎಸಗುತ್ತಾ ಇರುವಂತೆ ಕನಸಿನಲ್ಲಿ ನನಗೆ ಕಾಣಿಸುವನು. ಮತ್ತು ಆ ಉಮಾ ಪತಿಯು ಆತನ ಕೋಮಲವಾದ ಕರಗಳಿಂದ ಶಂಕರನ ಚರಣಕಮಲವನ್ನು

ಸುಸ್ವಪ್ನೇ ವೃಷಭಧ್ವಜಃ ಸ್ಫುರತಿ ಮೇ ಚಿತ್ತೇ ಪಿನಾಕೀ ಶಿವಃ
ಶ್ರೀಕಂಠೋ ವಿಷಮಾಕ್ಷ ಏವ ಗಿರಿಜಾಕ್ರೀಡಾವಿನೋದಾದರಃ ।
ಕುಸ್ವಪ್ನೇ ಗರುಡಧ್ವಜಃ ಸ್ಫುರತಿ ಮೇ ಚಿತ್ತೇ ತದಾ ತಾಡ್ಯತೇ
ದಂಡೈರೇವ ಕಿಮಾಗತೋಽಸಿ ಗಿರಿಜಾಕ್ರೀಡಾರತೇ ಶಂಕರೇ ॥೩೧॥

ನಿತ್ಯಂ ಮತ್ಕುಲಕಾಮಿನೀಭಿರನಿಶಂ ಗೌರೀಪತೇ ಶಂಕರ
ಶ್ರೀವಿಶ್ವೇಶ್ವರಚಂದ್ರಚೂಡಗಿರಿಜಾಕ್ರೀಡಾವಿನೋದಾದರ ।
ತ್ರಾಹಿ ತ್ರಾಹಿ ಸದೇತಿ ಗಾನಕಲನೈಃ ಕಾಲೋ ಮುದಾ ನೀಯತೇ
ಬಾಲಕ್ರೀಡನಲಾಲಸಾಭಿರಭಿತೋ ಡೋಲಾಕುಲಾಂದೋಲನೇ ॥೩೨॥

ಪೂಜಿಸುತ್ತಿರುವಂತೆ ಸ್ವಪ್ನದಲ್ಲಿ ಭಾಸವಾಗುತ್ತದೆ. ಮತ್ತು ಶರತ್ಕಾಲದ ಚಂದ್ರನಂತೆ ಥಳಥಳಿಸುತ್ತಿರುವ ಶುಭ್ರವಾದ ನಕ್ಷತ್ರಮಾಲೆಯಿಂದ ಅಲಂಕೃತನಾದ ಚಂದ್ರ ಚೂಡನು ನನಗೆ ಆಗಾಗ ಕಾಣಿಸುತ್ತಿರುವನು. ಯಾವಾಗಲೂ ಆ ಶಿವನು ನನಗೆ ಬೇಕಾದುದನ್ನು ಅನುಗ್ರಹಿಸಲು ಉತ್ಸಾಹಿಯಾಗಿ ಇರುವನೋ ಎಂಬಂತೆ ನನ್ನ ಹೃದಯದಲ್ಲಿ ತೋರುವನು. ||೩೦||

ಶುಭಕರವಾದ ಕನಸಿನಲ್ಲಿ, ನನ್ನ ಮನಸ್ಸಿನಲ್ಲಿ ಶಿವನು ಪಿನಾಕವನ್ನು ಧರಿಸಿದವನಾಗಿಯೂ, ಮೂರು ಕಣ್ಣುಳ್ಳವನೂ, ಶ್ರೀಕಂಠನೂ ಆಗಿ ಪಾರ್ವತಿಯೊಡನೆ ವಿನೋದದಿಂದ ಇರುವಂತೆ ಕಾಣುವನು. ಅದೇ ನನ್ನ ಚಿತ್ತದಲ್ಲಿ ಕೆಟ್ಟಕನಸು ಬಿದ್ದಾಗ, ವಿಷ್ಣುವು ಗರುಡನನ್ನೇರಿಬಂದಂತೆ ತೋರುತ್ತದೆ. ಆಗ ನಾನು ಶ್ರೀಶಂಕರನು ಗಿರಿಜೆಯೊಡನೆ ವಿಲಾಸದಲ್ಲಿರುವಾಗ ನೀನು ಏತಕ್ಕಾಗಿ ಇಲ್ಲಿಗೆ ಬಂದೆ ಎಂದು ಆ ವಿಷ್ಣುವನ್ನು ಗದರಿಸಿ, ದೊಣ್ಣೆಯಿಂದ ಹೊಡೆದು ಓಡಿಸುತ್ತೇನೆ. ನನಗೆ ಸ್ವಪ್ನವು ಒಮ್ಮೆ ಹೀಗಾಗುತ್ತದೆ. ||೩೧||

ನಮ್ಮ ಕುಲದ ಯುವತಿಯರು ಪ್ರತಿನಿತ್ಯವೂ ಸಂಗೀತವನ್ನು ಹಾಡುತ್ತಾ ಶಂಕರ! ಗಿರಿಜಾಪತೇ! ಚಂದ್ರನನ್ನು ಜಡೆಯಲ್ಲಿ ಧರಿಸಿದ ವಿಶ್ವೇಶ್ವರನೇ, ಎಂದು ಮುಂತಾಗಿ ಆ ಶಿವನ ನಾಮಗಳನ್ನೇ ಉಚ್ಚರಿಸುತ್ತಾ ಸಂತೋಷದಿಂದ ಕಾಲ ಕಳೆಯುತ್ತಾರೆ. ಚಿಕ್ಕ ಹೆಣ್ಣುಮಕ್ಕಳು ಬಾಲ್ಯೋಚಿತವಾದ ಕ್ರೀಡಾವ್ಯಾಪಾರದಲ್ಲಿ ಆಸಕ್ತರಾಗಿ ತೂಗಾಟವೇ ಮುಂತಾದ ಸಂದರ್ಭದಲ್ಲಿ ಶಿವನಲ್ಲಿ ನಟ್ಟ ಚಿತ್ತವುಳ್ಳವರಾಗಿ ವಿನೋದಿಸುತ್ತಾರೆ. ||೩೨||

ಕಾ ಕಾರ್ತಸ್ವರಡೋಲಯಾಮಣಿಗಣಶ್ರೀವ್ಯಾಪ್ತಯಾ ಬಾಲಕಂ
ನ ಕ್ರೀಡಾನಿರತಂ ಕರೋತಿ ಶಿವ ಇತ್ಯೇವಾದ್ಯಡೋಲಾನ್ವಯೇ ।
ಡೋಲೇಯಂ ಮೃಡ ತೇ ಮೃಡಾಣಿ ಸತತಂ ಕ್ರೀಡಾಂ ಕುರುಷ್ವೇತ್ಯಪಿ
ವ್ಯಾಹಾರವ್ಯವಹಾರಶೀಲನಪರಾ ನ ಸ್ಯಾತ್ಕುಲೇ ಮೇ ನೃಪ ॥೩೩॥

ಡೋಲೇಯಂ ಗಿರಿಜಾಪತೇರಿತಿ ಭವೇದಾದೌ ತದಾಂದೋಲನಂ
ಬಾಲಸ್ಯ ಪ್ರಸವೇ ಶಿವೇ ಶಿವ ಶಿವಾ ಡೋಲೇತಿ ಕನ್ಯೋದಯೇ ।
ಏವಂ ಕೌತುಕಮೇವ ಶಂಕರ ಕೃಪಾಪಾತ್ರೇ ಕಳತ್ರೇಪಿ ಮೇ
ದಾರ್ಯೈಃ ಶಂಕರಪೂಜನೇನ ಸಮಯಃ ಸರ್ವಪ್ರಿಯೋ ನೀಯತೇ ॥೩೪॥

ಅಸ್ಮಾಭಿರಿಂದುಶಕಲಾಭರಣಪ್ರಸಾದಾತ್
ಗೌರೀಪತೇ ಶಿವ ಮೃಡೇತಿ ಮಹೇಶ್ವರೇತಿ ।

ನಮ್ಮ ಕುಲದಲ್ಲಿ ಜನಿಸಿದ ಪ್ರತಿಯೊಬ್ಬಳು ಬಂಗಾರಮಯವಾದ ಮತ್ತು ರತ್ನಖಚಿತವಾದ ತೊಟ್ಟಿಲಿನಲ್ಲಿ ತನ್ನ ಮಗುವನ್ನು ಮಲಗಿಸಿ ಆಡಿಸುವುದಕ್ಕೆ ಮುಂಚೆ, ಶಂಕರ ಮತ್ತು ಶಿವೇ, (ಗೌರಿ) ನಿಮ್ಮ ವಿಹಾರಕ್ಕಾಗಿ ಈ ತೊಟ್ಟಿಲನ್ನು ಅರ್ಪಿಸಿರುವೆನು. ನೀವಿಬ್ಬರೂ ಇದರಲ್ಲಿ ಸುಖವಾಗಿ ಕ್ರೀಡಿಸಿ ಎಂದು ಹೇಳುತ್ತಾ ಸಂತೋಷದಿಂದ, ಅದನ್ನು ಪಾರ್ವತೀ ಪರಶಿವರಿಗರ್ಪಿಸಿ, ಅನಂತರ ತಮ್ಮ ಮಕ್ಕಳನ್ನು ಅದರಲ್ಲಿಟ್ಟು ಆಡಿಸುವರು. ||೩೩||

ನನ್ನ ಪತ್ನಿಯರು ಶ್ರೀಶಂಕರನಲ್ಲಿ ಭಕ್ತಿಯುಳ್ಳವರು. ಅವರಿಗೆ ಗಂಡುಮಗು ಜನಿಸಿದಾಗ ಅವರು ಮೊದಲು ತೊಟ್ಟಿಲಿನಲ್ಲಿ ಶಂಕರನನ್ನು ಇಟ್ಟು, ದೇವ, ಇದು ನಿನಗೆ ಎಂದು ತೂಗಿ, ಅನಂತರ ಮಗುವನ್ನು ಮಲಗಿಸುತ್ತಾರೆ. ಹೆಣ್ಣುಕೂಸು ಹುಟ್ಟಿದಾಗ ಆ ತೊಟ್ಟಿಲಿನೊಳಗೆ ಮೊದಲು ಗೌರಿಯನ್ನು ಮಲಗಿಸಿ ತೂಗಿ, ಬಳಿಕ ತನ್ನ ಕೂಸನ್ನು ಮಲಗಿಸುವರು. ಹೀಗೆ ನಮ್ಮಲ್ಲಿ ಶಿವಭಕ್ತಿಪ್ರದರ್ಶಕವಾದ ನಾನಾ ವಿಚಿತ್ರಗಳನ್ನು ಕಾಣಬಹುದು. ನನ್ನ ಭಾರ್ಯೆಯರೆಲ್ಲರೂ ಶಿವಪೂಜೆಯಲ್ಲಿ ತುಂಬಾ ಆದರವುಳ್ಳವರು. ಶಂಕರನ ಆರಾಧನೆಯಿಂದಲೇ ಎಲ್ಲಾ ಕಾಲವನ್ನೂ ತಳ್ಳುವರು. ||೩೪||

ನಾವು ಶ್ರೀಚಂದ್ರಮೌಳೀಶ್ವರನ ಅನುಗ್ರಹಕ್ಕೆ ಪಾತ್ರರಾಗಿರುವುದರಿಂದ ಗೌರೀಪತೇ! ಶಿವ! ಮೃಡ, ಎಂದು ಮುಂತಾದ ಶಿವನಾಮಾಮೃತವನ್ನು ಅನೇಕ

ನಾಮಾಮೃತಂ ಮುಹುರಪಾರಮಪಿ ಪ್ರಪೀತಂ
ಪೀನಾಶ್ಚ ತೇನ ತನವೋಽಪಿ ಗತಾಶ್ಚ ರೋಗಾಃ ॥೩೫॥

ಅಸ್ಮಾಭಿರ್ನಿಜಬಾಲಕೈಃ ಸಹ ಸದಾ ವಿಶ್ವೇಶ್ವರಃ ಪೂಜ್ಯತೇ
ತನ್ನಾಮಾಮೃತಮೇವ ಪೂತಹೃದಯೈಃ ನಿತ್ಯಂ ಮುಹುಃ ಪೀಯತೇ ।
ತನ್ನಾಮಾಧ್ವನಿ ಜಪ್ಯತೇ ಮುಹುರುಮಾಕಾಂತೇತಿ ವಾ ಗೀಯತೇ
ಸದ್ಮನ್ಯಪ್ಯುಪಭುಜ್ಯತೇ ಗಿರಿಸುತಾಕಾಂತೋಪಭುಕ್ತಂ ಮುದಾ ॥೩೬॥

ಶೃಣ್ವಂತಃ ಶ್ರುಂಗಲೀಲಾಮತಿಸಿತಭಸಿತೈರಂಗಮುದ್ಧೂಲಯಂತಃ
ಶಂಭುಂ ಸಂಪ್ರಾರ್ಥಯಂತಃ ಕತಿ ಕತಿ ಭುವನೇ ಶಾಂಭವಾಃ ಸಂತಿ ಸಂತಃ।
ಲಿಂಗಾರಾಧನಸಾಧನೈರ್ಬಹುವಿಧೈರ್ಭಾಗ್ಯೈರ್ವಯಂ ಸಂವೃತಾಃ
ಕಲ್ಪಾನೋಕಹಮೂಲರತ್ನವಿಲಸದ್ಗೇಹಾಂತರೇಷು ಸ್ಥಿತಿಃ ॥೩೭॥

ಅಸ್ಮಾಕಂ ನ ತೃಷಾದಿಕಂ ನ ಚ ಜರಾ ಮೃತ್ಯುಸ್ತು ದೂರೇ ತತೋ
ರೋಗಃ ಪ್ರೋಷಿತ ಏವ ನೇತಿ ಪರಮಾನಂದಪ್ರವೃದ್ಧಿಃ ಸದಾ ।

ಕಾಲ ಪಾನ ಮಾಡಿದ್ದೇವೆ. ಆದುದರಿಂದ ಈಗ ನಾವು ಪುಷ್ಟರೂ ಆರೋಗ್ಯವಂತರೂ ಆಗಿದ್ದೇವೆ. ॥೩೫॥

ನಾವು ನಮ್ಮ ಚಿಕ್ಕಮಕ್ಕಳೊಂದಿಗೆ ಕೂಡಿ ವಿಶ್ವೇಶ್ವರನನ್ನು ಆರಾಧಿಸುತ್ತೇವೆ. ಯಾವಾಗಲೂ ಆ ಶಿವನಾಮಾಮೃತವನ್ನೇ ಪಾನಮಾಡುತ್ತೇವೆ. ಶ್ರೀ ಸದಾಶಿವನಿಗೆ ನೈವೇದ್ಯಮಾಡಿ ಮಿಕ್ಕ ಅನ್ನವನ್ನೇ ನಾವು ಮನೆಯಲ್ಲಿ ಭುಂಜಿಸುತ್ತೇವೆ. ಪ್ರಯಾಣಕಾಲದಲ್ಲಿಯೂ ಕೂಡ ತಪ್ಪದೆ ದಾರಿಯಲ್ಲೆಲ್ಲಾ ಶಂಕರನ ದಿವ್ಯನಾಮಗಳನ್ನೇ ಪಠಿಸುತ್ತೇವೆ. ॥೩೬॥

ಲೋಕದಲ್ಲಿ ಶಿವಲೀಲಾಕಥೆಗಳನ್ನು ಕೇಳುತ್ತಾ, ಅತ್ಯಂತ ಶುದ್ಧವಾದ ಭಸ್ಮವನ್ನು ಧರಿಸಿದ ಸತ್ಪುರುಷರು ಎಲ್ಲೋ ಕೆಲವರಿರುವರು. ಶ್ರೀ ಶಂಕರನನ್ನು ಪ್ರಾರ್ಥಿಸುವ ಸಜ್ಜನರು ಎಷ್ಟು ಮಂದಿತಾನೇ ಇರಬಹುದು? ಅನೇಕ ವಿಧವಾದ ಶಿವಾರಾಧನೆಯ ಸಾಧನೆಯ ಭಾಗ್ಯವು ನಮಗೆ ಒದಗಿದೆ. ಆದುದರಿಂದಲೇ ನಾವು ಕಲ್ಪವೃಕ್ಷದ ಕೆಳಗೆ, ರಚಿತವಾದ ರತ್ನಮಂದಿರದಲ್ಲಿ ವಾಸ ಮಾಡುವೆವು. ॥೩೭॥

ಶ್ರೀಮಹಾದೇವನ ಭಕ್ತರಾದ ನಮಗೆ ಹಸಿವು ಬಾಯಾರಿಕೆಗಳಾಗುವುದಿಲ್ಲ. ಮೃತ್ಯು ಭಯವೂ ಕೂಡ ನಮಗಿಲ್ಲ. ಅಂದಮೇಲೆ ರೋಗದ ಹೆಸರನ್ನಾದರೂ ಹೇಗೆ

ಏತದ್ಭಾಗ್ಯಮುಮಾಸಹಾಯಚರಣಾಂಭೋಜಾರ್ಚನಾತ್ಕೇವಲಂ
ಕಾಲೋ ದೃಶ್ಯತ ಏವ ನಾತಿವಿಮುಲಾ ಶ್ರೀಕಾಲಕಾಲಾರ್ಚನೈಃ ॥೩೮॥

ಕಃ ಕಾಲಾಂತಕತತ್ಪರೋಽಪಿ ಭುವನೇ ಮೃತ್ಯುಂ ಪ್ರಪಶ್ಯತ್ಯತೋ
ಮೃತ್ಯುರ್ದೂರತ ಏವ ಯಾತಿ ಬಹುಧಾ ಭೀತಃ ಸ್ವದೂತೈಃ ಸಹ ।
ಕಾಂತಾ ಪೀನಪಯೋಧರೋದ್ವಹನತಃ ಕ್ಲಾಂತಾನುಮಧ್ಯಾ ಪ್ರಗೇ
ನೈವಾಲಿಂಗನಮಿಚ್ಛತಿ ಪ್ರಿಯತಮೋ ನಾಲಂ ತಥೋತ್ಕಂಠಯಾ ॥೩೯॥

ಕುರ್ವಂತೀ ಖಲು ನೀಲಕಂಠಭಜನಂ ತದ್ಧ್ಯಾನಧಾರಾಮೃತಂ
ಪೀತ್ವಾ ಸಂತತಮಂತಕಾಂತಕ ಮಹಾದೇವೇತಿ ಸಂವಾದಿನೀ ।
ಅಸ್ಮಾಭಿಃ ಶಿವಪೂಜನೋತ್ತರಮಿದಂ ಸಂಪ್ರಾರ್ಥ್ಯತೇ ಶಂಕರಃ
ಪಾಹಿ ತ್ವತ್ಪದಪದ್ಮಸದ್ಮನಿ ಮನೋ ಮೇ ಸಂವದತ್ಯನ್ವಹಂ ॥೪೦॥

ನಾವು ಕೇಳಬಲ್ಲೆವು? ಉಮಾಸಹಾಯನಾದ ಶಿವನ ಪೂಜೆಯಿಂದಲೇ ನಮಗೆ ಪರಮಾನಂದವುಂಟಾಗುತ್ತದೆ. ಪ್ರತಿನಿತ್ಯವೂ ಶ್ರೀಕಾಲಮಥನೇಶ್ವರನ ಸೇವೆಯಲ್ಲಿಯೇ ಕಾಲವನ್ನು ಕಳೆಯುತ್ತೇವೆ. ನಮ್ಮ ದೇಹವು ಇದರಿಂದಲೇ ಪರಿಶುದ್ಧವೆನಿಸಿದೆ. ॥೩೮॥

ಪ್ರಪಂಚದಲ್ಲಿ ಕಾಲನಾಶಕನಾದ ಶಂಕರನ ಭಕ್ತನು ಮೃತ್ಯುವನ್ನು ನೋಡುವನೇ? ಮೃತ್ಯುವು ಆತನನ್ನು ನೋಡಿ ದೂರದಿಂದಲೇ ತನ್ನ ದೂತರೊಡನೆ ಹೆದರಿ ಓಡಿಹೋಗುತ್ತದೆ. ನಮ್ಮ ಕಾಂತೆಯರು ಉನ್ನತವಾದ ಮತ್ತು ದಪ್ಪ ಸ್ತನಗಳನ್ನು ಧರಿಸುವುದರಿಂದ ಮಂದಗಾಮಿನಿಯರಾಗಿ ಉತ್ಕಂಠಾಯುತರಾಗಿ ನಡೆಯುತ್ತಿದ್ದರೂ, ಪ್ರಾತಃಕಾಲದಲ್ಲಿ ಶಿವಪೂಜಾಸಕ್ತಹೃದಯರಾಗಿರುವುದರಿಂದ, ತಮ್ಮ ಪ್ರಿಯತಮರು ಆಲಿಂಗಿಸಿಕೊಳ್ಳಲೆತ್ನಿಸಿದರೂ, ಅವರು ಆ ಕಾರ್ಯಕ್ಕೆ ಮನಗೊಡರು. ॥೩೯॥

ನಮ್ಮ ನಾರಿಯರು ಪ್ರಿಯತಮರ ಆಲಿಂಗನ ಕಾಲದಲ್ಲಿಯೂ ನೀಲಕಂಠನಾದ ಶಂಕರನ ಭಜನ ಧ್ಯಾನಾದಿಗಳಲ್ಲಿ ಆಸಕ್ತರಾಗಿರುತ್ತಾರೆ. ಬಳಿಕ ಕಾಲಾಂತಕ! ಮಹಾದೇವ! ಶಂಕರ! ಎಂದು ಶಿವನ ನಾಮಾಮೃತವನ್ನು ಪಾನಮಾಡುತ್ತಿರುವರು. ನಾವಾದರೋ ಪ್ರತಿದಿನವೂ ಪೂಜಾನಂತರದಲ್ಲಿ ಹೇ! ದೇವ, ನನ್ನ ಈ ಮನಸ್ಸು ನಿನ್ನ ಪಾದಕಮಲವೆಂಬ ಮಂದಿರದಲ್ಲಿ ಯಾವಾಗಲೂ ನೆಲಸುವಂತೆ ನಮಗನುಗ್ರಹಿಸೆಂದು ಬೇಡುತ್ತಿರುವೆವು. ॥೪೦॥

ಅನ್ಯತ್ಪ್ರಾರ್ಥನಯಾ ವಿನಾಪಿ ಸಕಲಂ ಭಾಗ್ಯಂ ಪ್ರಲಬ್ಧಂ ಮಯಾ
ಮದ್ಗೇಹಾಂಗಣಮೇತ್ಯ ತಿಷ್ಠತಿ ಸದಾ ವೃಂದಾರಕಾಣಾಂ ಗಣಃ ।
ಮದ್ಗೇಹದ್ವಾರಿ ದೇವಾಃ ಪ್ರತಿದಿನಮಭಯಂ ಪ್ರಾರ್ಥಯಂತೇ ನಸಾಸಾಂ
ಶ್ರೀಕಂಠಾಹಾರಲೇಶೈರನುದಿನಮಸಕೃತ್ ಪುಷ್ಟದೇಹಾ ವಿಮೋಹಾಃ ॥೪೧॥

ಅಸ್ಮಾಕಂ ಲಿಂಗಪೂಜಾವ್ರತನಿಯಮರತಿಃ ಸ್ಯಾತ್ ಪ್ರಸಾದಾತ್ ತವೇತಿ ।
ಸ್ವಾರಾಜ್ಯಾವಾಂಛಯಾಪೀತ್ಯನುದಿನಮಸಕೃತ್ ನಮ್ರವಕ್ತ್ರಾರವಿಂದಾಃ
ಅತಃ ಪರಮಸಾರತೋ ರತಿರಪಾರಸಂಸಾರತೋ
ನಿವೃತ್ತಮುಪಯಾತು ಮೇ ಕಿಮಪಿ ವಾಂಛಿತಂ ತತ್ರ ನ ।
ಭವತ್ಕರುಣಯಾ ಪರಂ ಚಿರಮಪಾರಭಾಗ್ಯೋದಯಃ ॥೪೩॥

ಪ್ರತಿಕ್ಷಣಮಭೂದತಸ್ತ್ವಯಿ ಮನಃ ಸ್ಥಿರಂ ಜಾಯತಾಂ
ಅತಃ ಪರಮುಮಾಪತೇ ಜನನಕಷ್ಟಮುತ್ಕೃಷ್ಟಮಪ್ಯ
ಪಾಸ್ಯಮಿತಿ ಮೇ ಮತಿರ್ಮಮ ಕುಲೇಽಪಿ ಜನ್ಮ ವ್ಯಥಾಂ ।

ನನಗೆ ಇತರ ಎಲ್ಲಾ ಐಶ್ವರ್ಯಗಳೂ ಅನಪೇಕ್ಷಿತವಾಗಿ ಲಬ್ಧವಾದವು. ದೇವತೆಗಳು ಯಾವಾಗಲೂ ನನ್ನ ಮನೆಯ ಅಂಗಳದಲ್ಲಿ ನೆರೆದಿರುವರು. ಮತ್ತು ನನ್ನ ಮನೆಯ ಬಾಗಿಲಿನಲ್ಲಿ ದೇವತೆಗಳು ಪ್ರತಿದಿನವೂ ಅಭಯವನ್ನು ಬೇಡುವರಲ್ಲದೇ ಶ್ರೀಶಂಕರನ ನೈವೇದ್ಯವನ್ನು ಅನೇಕ ಬಾರಿ ಭುಂಜಿಸಿ, ಪುಷ್ಟರಾಗುತ್ತಾ ತಮ್ಮ ಅಜ್ಞಾನವನ್ನು ಕಳೆದುಕೊಳ್ಳುವರು. ॥೪೧॥

ನಮಗೆ ಶಿವಲಿಂಗ ಪೂಜೆಯಲ್ಲಿಯೇ ಆಸಕ್ತಿಯುಂಟಾಗಲೆಂದು ನಿನ್ನ ಅನುಗ್ರಹವನ್ನು ಬೇಡುತ್ತೇವೆ. ನಿನ್ನ ಅನುಗ್ರಹದಿಂದ ಸ್ವರ್ಗಲೋಕ ಸಂಪಾದನೆಯಾಗುವುದಾದರೂ ನಮಗೆ ಇಷ್ಟವಿಲ್ಲ. ನಿನ್ನ ಭಕ್ತಿಯೊಂದಿದ್ದರೆ ಸಾಕೆಂದು ದೇವತೆಗಳು ನಮ್ರಮುಖರಾಗಿ ದಿನವೂ ಪ್ರಾರ್ಥಿಸುತ್ತಾರೆ.

ಒಟ್ಟಿನಲ್ಲಿ ಸಾರಾಂಶವೇನೆಂದರೆ ನನಗೆ ಈ ಸಂಸಾರದಲ್ಲಿ ಇರಲು ಅಪೇಕ್ಷೆ ಇಲ್ಲ. ಸಾಂಸಾರಿಕ ರತಿಯು ನನ್ನಲ್ಲಿ ಮಾಯವಾಗಲಿ. ನಿನ್ನ ಕರುಣೆಯೊಂದಿದ್ದರೆ ಅದರಿಂದ ಅಪರಿಮಿತವಾದ ಭಾಗ್ಯವು ನನಗೆ ಲಭಿಸುವುದು. ॥೪೩॥

ಅನಾಥರಿಗೆ ರಕ್ಷಕನಾದವನೇ! ಉಮಾಪತಿಯೇ, ನಮಗೆ ಜನನ ದುಃಖವುಂಟಾಗದಂತೆ ಅನುಗ್ರಹಿಸು. ನಮ್ಮ ಕುಲದಲ್ಲಿ ಯಾರಿಗೂ ಜನನ ವ್ಯಥೆಯು

ಹರಾಮುರವರಾದರಾದಪಹರೋರುಜನ್ಮವ್ಯಥಾ
ಮನಾಥ ಜನನಾಥ ಮೇ ಕಥಯ ವಿಶ್ವನಾಥಾಧುನಾ ॥೪೩॥

ಅನನ್ಯಶರಣೋಽಯಮಿತ್ಯಪಿ ಮತಿರ್ನ ಕಿಂ ತೇ ತತಃ
ತವಾಪಿ ಪರಿಪಾಲನೇ ಮತಿರುದೇತು ಮಾಮಾತುರೇ ।
ಅಹೋ ನಿಟಿಲಲೋಚನಂ ಕಿಮಿತಿ ದುಷ್ಟಮಸ್ಯಾಭವತ್
ಲಲಾಟನಯನಾರ್ಚನೇಪ್ಯಹಹ ಕಷ್ಟಮೇವಂ ಕಥಂ ॥೪೪॥

ಸಂಸಾರೇ ಯದಿ ಪಾತ್ಯತೇ ಮುಹುರಯಂ ಭಕ್ತಸ್ತ್ವಯಾ ಕಿಂ ತತಃ
ಸ್ವಾಂತಂ ಮೇ ಗಿರಿಜಾಸಹಾಯನಿರತಂ ನೇತುಂ ಸಮರ್ಥೋಽಸ್ತಿ ಕಃ ।
ವಹ್ನಿಸ್ತಾವದಧೋ ನಿಪಾತಿತ ಇತಿ ಜ್ವಾಲಾಂ ತದೀಯಾಮಧಃ
ಕಃ ಕರ್ತುಂ ಯತತೇ ಮನಾಗಪಿ ಮಹಾಜ್ವಾಲಾಪ್ಯಧೋಯಾತ್ಯಪಿ ॥೪೫॥

ಉತ್ಫುಲ್ಲಂ ನಳಿನಂ ಕರೋತಿ ಮಲಿನಂ ಭಾನುಃ ಕೃಶಾನುಃ ಕರೋ
ತ್ಯಾಮಂ ಪಾವನಮಂಬುರಾಶಿರಖಿಲಂ ರಥ್ಯಾಜಲಂ ಕೇವಲಂ ।

ಉಂಟಾಗಬಾರದು ಎಂದು ನನಗೆ ಅನ್ನಿಸುತ್ತದೆ. ವಿಶ್ವನಾಥ ! ಜನನ ಮರಣ ರೂಪವಾದ ಸಾಂಸಾರಿಕ ಕಷ್ಟಗಳನ್ನು ಪರಿಹರಿಸಿ ಕಾಪಾಡು ! ॥೪೩॥

ಈತನಿಗೆ ನಾನಲ್ಲದೇ ಬೇರೆ ರಕ್ಷಕರಿಲ್ಲವೆಂದು ಈ ದುಃಖಿಯಾದ ನನ್ನ ವಿಷಯದಲ್ಲಿ ಅಭಿಮಾನ ಹುಟ್ಟಲಿ. ದೇವ, ಭಾಲಲೋಚನನೂ, ಲಲಾಟನಯನನೂ ಆದ ನಿನ್ನನ್ನು ನೋಡುವ ಭಾಗ್ಯವು ನನಗಿಲ್ಲವಲ್ಲಾ. ಅಯ್ಯೋ, ಈ ಸಂಸಾರದಲ್ಲಿ ಸಿಕ್ಕಿದ ನನಗೆಂತು ನಿನ್ನ ದರ್ಶನ ಲಭಿಸಿತು. ॥೪೪॥

ದೇವ, ಸಂಸಾರದಲ್ಲಿ ಪುನಃ ನೀನು ಭಕ್ತನನ್ನು ಪ್ರವೇಶಮಾಡಿಸಿದ ಮಾತ್ರಕ್ಕೆ ಆತನ ಭಕ್ತಿಭಾವವನ್ನು ಕಳೆಯುವುದಕ್ಕೆ ಸಾಧ್ಯವಾಗುವುದೆ? ಪರಶಿವನಲ್ಲಿಟ್ಟ ನನ್ನ ಮನಸ್ಸನ್ನು ಅನ್ಯಥಾ ತಿರುಗಿಸಲು ಯಾರಿಂದಲೂ ಸಾಧ್ಯವಾಗದು. ಹೇಗೆಂದರೆ, ಬೆಂಕಿಯನ್ನು ಎಷ್ಟು ಕೆಳಗೆ ಎಸೆದರೂ ಆದರಿಂದ ಹುಟ್ಟುವ ಜ್ವಾಲೆಯು ಮಾತ್ರ ಮೇಲಕ್ಕೇ ಏರುವುದಲ್ಲವೆ? ಅದರಂತೆ ನನ್ನ ಮನಸ್ಸು ಯಾವ ಸ್ಥಿತಿಯಲ್ಲಿದ್ದರೂ ಪರಶಿವನನ್ನೇ ಹಿಂಬಾಲಿಸುವುದು. ॥೪೫॥

ನಳಿನವು ಮಲಿನವಾಗಿದ್ದರೂ, ಸೂರ್ಯನು ಅದನ್ನು ಅರಳಿಸುವನು. ಅಗ್ನಿಯು ಎಂತಹ ಅಪಕ್ವವಸ್ತುವನ್ನೂ ಪಚನಮಾಡುವುದು. ಕೇವಲ ವಾರಿಯು

ದೋಷಂ ಕಿಂಗಣಯತ್ಯಯಂ ಖಲಿಮಪಿ ಶ್ರೀಕಾಲಕಾಲೇಧಾನಾ
ಆನಿಶಾಶಾನವಿಲೋಕಯಾಶು ದಯಯಾ ತ್ವಂ ತಾವಕಂ ಮಾಂ ಕುರು॥೪೬॥

ಅಂಕಂ ಕಿಂ ನ ಕರೋತಿ ಕುತ್ಸಿತಮುಮಾಕಾಂತಾರ್ಭಕಸ್ತಾವತಾ
ತತ್ಯಾಗಂ ಕುರುತೇ ನ ಕೋಪಿ ಜನಕಸ್ತ್ವಂ ಮೇ ಪಿತಾ ಮಾಮಿತಃ ।
ತ್ವದ್ಭಕ್ತಂ ಕುರು ನಿರ್ಮಲಂ ಗತಭಯಂ ಸಂಸಾರರೋಗಾತುರಂ
ಕಾಲವ್ಯಾಕುಲಮಂತಕಾಂತಗತಾಶೇಷಾಘರಾಶಿಂ ಕುರು ॥೪೭॥

ಸಂಸಾರಾರ್ಣವಕರ್ಣಧಾರ ಇತಿ ಯಾ ಸಿದ್ಧಾಃ ಪ್ರಸಿದ್ಧಿಸ್ತತಃ
ಸ್ವಾಮಿನ್ ತಾಮನುಸೃತ್ಯ ವೃತ್ತಿರುಚಿತಾ ತೇ ತಾವದೇತಸ್ಯ ಕಾ ।
ಹಾನಿಃ ಸ್ಯಾನ್ನಗತಾಗತೈರಪಿ ಪುನಃ ಜನ್ಮವ್ಯಪಾಯೇ ಕಥಂ
ಕೀರ್ತಿಃ ಸ್ಯಾತ್ತವ ಸಾ ತದೇವ ಮಹತೀ ಚಿಂತಾ ನಿರಂತಾ ಮಮ ॥೪೮॥

ನೀರು, ನದಿಯ ನೀರು ಇವುಗಳಿಂದ ಕೊಳಕಾಗಿರುವ ಜಲರಾಶಿಯನ್ನು ಸಮುದ್ರವು ಶುದ್ಧೀಕರಿಸುತ್ತದೆ. ಹಾಗೆಯೇ ಶ್ರೀಪರಮೇಶ್ವರನು ದುಷ್ಟನಾದವನಲ್ಲಿ ಆತನ ದೋಷವನ್ನು ಲೆಕ್ಕಕ್ಕೆ ತರದೆ, ಕೇವಲ ಗುಣಗ್ರಹಣದಿಂದ ಕಾಪಾಡುವನು, ಎಂಬುದು ಸತ್ಯವಾದುದು. ಓ ಕಾಲಮಥನ, ಈಶ್ವರ ಈ ನನ್ನನ್ನು ದಯೆಯಿಂದ ಒಂದುಬಾರಿ ನೋಡು, ನನ್ನನ್ನು ನಿನ್ನವನನ್ನಾಗಿ ತಿಳಿ. ||೪೬||

ಈಶ್ವರನೇ, ಮಗುವು ತಪ್ಪುಮಾಡುವುದಿಲ್ಲವೇ ? ಉಮಾಕಾಂತನಾದ ನೀನು ಅಷ್ಟಕ್ಕೆ ಆ ಮಗುವನ್ನು ತ್ಯಜಿಸುವೆಯಾ ! ಯಾವ ತಂದೆಯಾದರೂ ತಪ್ಪುಮಾಡಿದ ಚಿಕ್ಕಮಗುವನ್ನು ಮನ್ನಿಸಿ ತನ್ನ ತೊಡೆಯ ಮೇಲೆ ಕೂರಿಸಿಕೊಳ್ಳುವನಲ್ಲವೆ ? ನನಗೆ ನೀನು ತಂದೆ. ನಿನ್ನ ಭಕ್ತನಾದ ನಾನು ಸಂಸಾರಕಷ್ಟದಲ್ಲಿ ಸಿಲುಕಿರುವೆನು. ನನ್ನನ್ನುದ್ಧರಿಸಿ ಅಭಯದಾನಮಾಡು. ನನ್ನ ಪಾಪರಾಶಿಯನ್ನೆಲ್ಲಾ ಧ್ವಂಸ ಮಾಡು. ಮತ್ತು ಅಂತಕನಾಶಕನೇ, ನನ್ನ ಪಾಪಗಳನ್ನೆಲ್ಲಾ ನಾಶಮಾಡಿ ಪಾಪ ವಿಮುಕ್ತನನ್ನಾಗಿ ಮಾಡು. ||೪೭||

ದೇವನೇ, ನೀನು ಸಂಸಾರವೆಂಬ ಸಮುದ್ರವನ್ನು ದಾಟಿಸತಕ್ಕ ನಾವಿಕನೆಂದು ಪ್ರಸಿದ್ಧಿಯಿದೆ. ಅದನ್ನು ಅನುಸರಿಸಿ ವರ್ತಿಸುವುದು ನಿನಗೆ ಯುಕ್ತವಲ್ಲವೇ ? ಅನಿತ್ಯ ಶರೀರವನ್ನು ಧರಿಸಿದ ನಮ್ಮಿಂದ ನಿನಗೇನೂ ತೊಂದರೆಯಾಗಲಾರದು. ನಮ್ಮ

ಇತ್ಯೇವಾನ್ವಹಮಿಾಶಪೂಜನರತ್ಯೈಃ ಸಂಪ್ರಾರ್ಥ್ಯತೇ ಸಾದರಂ
ನಾನ್ಯತ್ಸರ್ವಮನನ್ಯಲಬ್ಧಮಿತಿ ತೇ ತತ್ಪ್ರಾರ್ಥನೀಯಂ ಪರಂ ।
ಯದ್ಯತ್ಸ್ವಾತ್ಸಮುಪೇಕ್ಷಿತಂ ತದಖಿಲಂ ಸಿದ್ಧಂ ನ ಭೂಷಾದಿಷು
ಪ್ರೀತಿರ್ಭೂತಿವಿಭೂಷಣಸ್ಯ ಪರಮಂ ತದ್ಭೂಷಣಂ ಮೇ ಯತಃ ॥೪೯॥

ಹಾರೋ ಹಾರವಿಭೂಷಣಾಯ ಸ ತಥಾ ಕೇಯೂರಹೀರಪ್ರಭಾ
ಕೋಟೀರಾಮಲರತ್ನಕುಂಡಲಗಣಚ್ಛಾಯಾಂಛವಿರ್ನಾ ಪರಂ ।
ಕಿಂತೂದ್ಧೂಲನ ಭಸ್ಮಭಾಲವಿಲಸದ್ಭಸ್ಮತ್ರಿಪುಂಡ್ರೇ ಯಥಾ
ರುದ್ರಾಕ್ಷಮಲಮಾಲಿಕಾ ಕರತಲೇ ಲಿಂಗಂ ಶಿವಾಷ್ಟಾಕ್ಷರೇ ॥೫೦॥

ಪ್ರಾಯೋಂತಃಕರಣಪ್ರಿಯಾಭರಣತಾಂ ವಿಶ್ವೇಶಪಾದಾಂಬುಜ
ಧ್ಯಾನಂ ಶಂಕರನಾಮಕೀರ್ತನಮಣಿರ್ಜಿಹ್ವಾಂಗಣಾಲಂಕೃತಿಃ ।
ಮತ್ಕರ್ಣಾಭರಣಂ ಚ ಶಂಕರಕಥಾ ರತ್ನಾರ್ಣವಾಕರ್ಣನಂ
ಶ್ರೀಚಾಮಿಾಕರಕಂಕಣೇ ಕರಯುಗಸ್ಯೇಶಾಯ ಬಿಲ್ವಾರ್ಪಣಂ ॥೫೧॥

ಜನ್ಮವನ್ನು ನಾಶಗೊಳಿಸದಿದ್ದರೆ ನಿನಗೆ ನಿರಂತರವಾದ ಯಶಸ್ಸು ಹೇಗೆತಾನೆ ಲಭಿಸೀತು? ಎಂದು ನನಗೆ ಚಿಂತೆಯಾಗಿದೆ.” ॥೪೮॥

ಮೇಲೆ ಹೇಳಿದ ರೀತಿ ನಾನು ನಿತ್ಯವೂ ಸ್ವಾಮಿಯನ್ನು ಪ್ರಾರ್ಥಿಸುವೆನು. ಇತರ ಎಲ್ಲಾ ವಿಧವಾದ ಕಾಮನೆಯೂ ಕೂಡ ನಿನ್ನಿಂದಲೇ ಸಿದ್ಧಿಸಬೇಕೇ ಹೊರತು ಇತರರಿಂದ ಅದು ಸಿದ್ಧಿಸುವುದಿಲ್ಲವೆಂದು ದೇವರಲ್ಲಿ ಮೊರೆಯಿಡುವೆನು. ಅದರಿಂದ ನಮಗೆ ಸಕಲ ಇಷ್ಟಾರ್ಥಗಳೂ ಸಿದ್ಧಿಸಿವೆ. ಇಂತಹ ನನಗೆ ವಿಭೂತಿ ಭೂಷಣನಾದ ಪರಶಿವನ ಪ್ರೀತಿಯೇ ನನಗೊಂದು ಒಡವೆಯೆನಿಸುವುದು, ॥೪೯॥

ಶಿವಭಕ್ತನಾದವನಿಗೆ ಭಸ್ಮವನ್ನು ಲೇಪಿಸಿಕೊಳ್ಳುವುದು, ಭಸ್ಮತ್ರಿಪುಂಡ್ರಧಾರಣೆ, ಕರದಲ್ಲಿ ರುದ್ರಾಕ್ಷಿಯ ಮಾಲಿಕೆ, ಶಿವಲಿಂಗವನ್ನು ಧರಿಸುವಿಕೆ, ಶಿವಮಂತ್ರಜಪ ಮೊದಲಾದುವುಗಳೆಲ್ಲಾ ರುಚಿಸುವಹಾಗೆ, ವಜ್ರದ ಹರಳು ಕಟ್ಟಿದ ಹತ್ತುಕಡಕು, ವಜ್ರದ ಕಿರೀಟ, ರತ್ನಗಳನ್ನು ಮೆಟ್ಟಿದ ಕುಂಡಲ, ಕನಕರತ್ನಾಹಾರವೇ ಮೊದಲಾದುವು ಬೇಕಾಗಲಾರವು. ॥೫೦॥

ಸಾಮಾನ್ಯವಾಗಿ ಶ್ರೀವಿಶ್ವೇಶ್ವರನ ಪಾದಕಮಲದ ಧ್ಯಾನಮಾಡುವಿಕೆಯೇ ನನ್ನ ಅಂತಃಕರಣಕ್ಕೆ ಒಡವೆ. ಜಿಹ್ವಾಭರಣವೆಂದರೆ ಶಿವನಾಮಕೀರ್ತನೆ. ಕರ್ಣ

ಮನ್ನೇತ್ರಾಭರಣಂ ಮಹೇಶ್ವರಮಹಾಲಿಂಗಾರ್ಚನಾಲೋಕನಂ
ಮದ್ಫಾಲಸ್ಯ ವಿಭೂಷಣಂ ಸಿತಲಸದ್ಭಸ್ಮತ್ರಿಪುಂಡ್ರಂ ಪರಂ ।
ಶ್ರೀವಿಶ್ವೇಶಪದಾಂಬುಜಪ್ರಣತಯಸ್ತಾವಚ್ಛಿರೋಭೂಷಣಂ
ಮತ್ಕಂಠಾಭರಣಂ ಪ್ರಕೃಷ್ಟಮಮಲಾರುದ್ರಾಕ್ಷಮಾಲಾಪರಂ ॥೫೨॥

ನಾಸಾಲಂಕರಣಂ ಶಿವಾರ್ಪಿತಲಸದ್ಬಿಲ್ವೀದಳಾಘ್ರಾಣನಂ
ಮದ್ವಂಶಾಭರಣಂ ಶಿವೈಕಶರಣಸ್ತ್ವತ್ಪಾದುಕಾರಾಧನಂ
ಧ್ಯಾನಾಭ್ಯರ್ಚನಜಾತಪುಣ್ಯವಿಭವೋ ಭಾವಃ ಪರಂ ಭಾವುಕೈಃ ॥೫೩॥

ಇತ್ಯಾಕರ್ಣ್ಯ ವಿಶಿಷ್ಯ ಶೇಷವಚನಂ ಭೂಯಃ ಸಮುತ್ಥಾಪನಂ
ನತ್ವಾ ಸಾದರಮಾದರೇಣ ಬಹುಧಾ ಶಂಗಾಂಗಮಾಲಿಂಗ್ಯ ಚ ।
ಧನ್ಯೋಽಯಂ ಶಿವತತ್ಪರೋಽಯಮಧುನಾ ದೃಷ್ಟಃ ಶಿವೋ ವೀಕ್ಷಿತಃ ।
ಸಾಕ್ಷಾದಕ್ಷಯಪುಣ್ಯಕೋಟಿಭಿರಯಂ ಕಿಂ ಶಾಂಭವೋ ದುರ್ಲಭಃ ॥೫೪॥

ಕುಂಡಲವಾದರೋ ಶಿವಕಥಾಲಹರಿಯನ್ನು ಕೇಳುವಿಕೆ. ಹಸ್ತದಿಂದ ಚಿಗುರುಬಿಲ್ವಗಳನ್ನು ಶಿವನಿಗೆ ಪೂಜೆಮಾಡುವುದೇ ಬಂಗಾರದ ಹಸ್ತಾಭರಣವಾಗಿದೆ. ॥೫೧॥

ಶ್ರೀಮಹೇಶ್ವರ ಲಿಂಗಪೂಜಾದರ್ಶನವೇ ನನಗೆ ನೇತ್ರಾಭರಣ. ಶುಭ್ರವಾದ ಭಸ್ಮತ್ರಿಪುಂಡ್ರಧಾರಣೆಯೇ ಹಣೆಯ ಆಭರಣವು. (ಮುಂದಲೆಬಿಟ್ಟು) ಶ್ರೀವಿಶ್ವೇಶ್ವರನ ಪಾದಗಳಿಗೆ ಎರಗುವಿಕೆಯೇ ಶಿರೋಭೂಷಣ. ಕೊರಳಿನ ರತ್ನಹಾರವಾದರೋ ರುದ್ರಾಕ್ಷಮಾಲೆಯೇ ಆಗಿರುವುದು. ॥೫೨॥

ಸದಾ ಶಿವನಿಗೆ ಪೂಜೆಮಾಡಿದ ಬಿಲ್ವದಳವನ್ನು ಆಘ್ರಾಣಿಸುವುದು ನನ್ನ ನಾಸಿಕಕ್ಕೆ ಆಭರಣಪ್ರಾಯವಾಗಿದೆ. ಶಿವನೇ ಗತಿಯಾದ ನನ್ನ ವಂಶಕ್ಕೆ ಆ ಪರಶಿವನ ಪಾದುಕಾರಾಧನೆಯೇ ಕುಲದೀಪದಂತಾಗಿದೆ. ಶಿವಧ್ಯಾನಮಾಡಿದುದರಿಂದ ಉಂಟಾದ ಪುಣ್ಯವೆಂದರೆ ಶಂಕರಭಕ್ತರ ಮನಸ್ಸಿನಲ್ಲಿ ಶಿವವಿಷಯವಾಗಿ ಉದಯಿಸುವ ಭಾವನೆಯು ಆಗಿರುತ್ತದೆ" ಎಂದು ಮಹಾಶೇಷನು ರಾಜನಿಗಂದನು. ॥೫೩॥

ಹೀಗೆ ಮಹಾಶೇಷನು ವಿಜ್ಞಾಪಿಸಿದುದನ್ನು ಕೇಳಿ ರಾಜನು ಸಂತಸಗೊಂಡು ಬಳಿಕ ಆತನಿಗೆ ವಂದಿಸಿದನು. ಅನೇಕ ಬಾರಿ ಸ್ನೇಹದಿಂದ ಆಲಿಂಗನಮಾಡಿ

ಇತ್ಯುಕ್ತ್ವಾ ಸ ದದೌ ಹಾರೋ ಹಾರಾನ್ ಹಾರಾಯ ಸಾದರಂ ।
ಹಾರ್ಯೈಃ ಕುಮಾರ್ಯೈರ್ದಾರೈಶ್ಚ ಸಹ ನತ್ವಾ ಪುನಃ ಪುನಃ ॥೫೫॥

ಸಂಭಾವಿತಃ ಪ್ರಾಪ ಸ ಭೋಗಿರಾಜಃ
ತೇನಾಂಬಿಕಾವಲ್ಲಭಭೋಜನಾಯ ।
ಸ್ವಲೋಕಮುತ್ಕಾದರತಸ್ತದೀಯಾಂ
ಸಂಭಾವ್ಯ ವೃತ್ತಿಂ ಬಹುಧಾ ವಿಶಿಷ್ಯ ॥೫೬॥

ಉಷಿತ್ವಾ ಸ ಕಿಯತ್ಕಾಲಂ ಸ್ವಾಲಯಂ ಗಂತುಮುದ್ಯತಃ ।
ರಾಜಾ ತದಾನೀಮಭ್ಯರ್ಚ್ಯ ಶಂಕರಂ ಬಿಲ್ವಪಲ್ಲವೈಃ ॥೫೭॥

ತದಾನಿನೋಂ ತಂ ದ್ರಷ್ಟುಮಾಗತೋ ಗರುಡಧ್ವಜಃ ।
ಲಕ್ಷ್ಮೀಲಲಿತವಾಮಾಂಗಃ ಸನಕಾದಿಸಮನ್ವಿತಃ ॥೫೮॥

ಕೊಂಡನು. ಆತನ ದರ್ಶನದಿಂದ ಆ ರಾಜನು ಮತ್ತೂ ಧನ್ಯನಾದನು. ಹೀಗೆ ಶಿವಧರ್ಮಾನುಯಾಯಿಯಾದವನ ದರ್ಶನವು ಸಾಕ್ಷಾತ್ ಶಿವನ ದರ್ಶನದಂತೆ ಫಲಕಾರಿಯಾಗುತ್ತದೆ. ಇಂತಹವರನ್ನು ಸಂದರ್ಶಿಸಲು ಅಕ್ಷಯವಾದ ಪುಣ್ಯವಿಶೇಷವು ಮುಖ್ಯ ಕಾರಣವೆನಿಸುವುದು. ಆದುದರಿಂದಲೇ ಶಂಕರ ಭಕ್ತರ ದರ್ಶನವು ದುರ್ಲಭ. ॥೫೪॥

ಹಾಗೆಯೇ ಆ ರಾಜನ ಹೆಂಡಿರು ಮಕ್ಕಳು ಮಹಾಶೇಷನಿಗೆ ಎರಗಿದರು. ಅನಂತರ ಶಿವಭಕ್ತನಾದ ಅರಸನು ಶಂಕರ ಪೂಜಕನಾದ ಮಹಾಶೇಷನಿಗೆ ಅನೇಕ ಮಾಲ್ಯಾದಿಗಳನ್ನು ದಾನಮಾಡಿದನು ॥೫೫॥

ಭೋಗೀಂದ್ರನಾದ ಮಹಾಶೇಷನು ರಾಜನಿಂದ ಸತ್ಕರಿಸಲ್ಪಟ್ಟವನಾಗಿ ತನ್ನ ಲೋಕಕ್ಕೆ ಹೋಗಿ ಅಲ್ಲಿ ಆತನ ಆದರಾತಿಥ್ಯವನ್ನು ಹೊಗಳಿದನು. ॥೫೬॥

ಮಹಾಶೇಷನು ಕೆಲವು ಕಾಲ ಆ ಅರಸನ ಮನೆಯಲ್ಲಿದ್ದು ಬಳಿಕ ತನ್ನ ಗೃಹಕ್ಕೆ ತೆರಳಿದನು. ಆ ಕಾಲದಲ್ಲೆಲ್ಲಾ ಆ ದೊರೆಯು ಶಂಭುವನ್ನು ಬಿಲ್ವದಳಗಳಿಂದ ಪೂಜಿಸುತ್ತಲೇ ಇದ್ದನು. ॥೫೭॥

ಆಗಲೇ ಒಂದು ಸಾರಿ ಶ್ರೀ ಮಹಾವಿಷ್ಣುವು ಲಕ್ಷ್ಮೀದೇವಿಯೊಡಗೂಡಿ ಸನಕಾದಿ ಮುನಿಗಳನ್ನು ಮುಂದಿಟ್ಟುಕೊಂಡು ಆ ರಾಜ ಸಂದರ್ಶನಕ್ಕಾಗಿ ಅಲ್ಲಿಗೆ ಬಂದನು. ॥೫೮॥

ಶಂಖಚಕ್ರಗದಾಶಾರ್ಙ್ಗಕೌಸ್ತುಭಾದಿವಿಭೂಷಿತಃ ।
ತಂ ದೃಷ್ಟ್ವಾ ವಿಸ್ಮಯಂ ಪ್ರಾಪ್ತಾಃ ಸರ್ವೇ ದೌವಾರಿಕಾಸ್ತದಾ ॥೫೯॥

ತ್ವರಯಾ ಗರುಡಾರೂಢಂ ಪ್ರವೇಷ್ಟುಂ ಶಿವಮಂದಿರಂ ।
ಸಮುದ್ಯತೋ ನಿಬದ್ಧೋಽಪಿ ಹಾರ್ಯೈರ್ದೌವಾರಿಕೈರಪಿ ॥೬೦॥

ತದ್ದ್ವಾರಿಕದಂಡಮಂಡಲಮಯಂ ದೃಷ್ಟ್ವಾಪಿ ನಾರಾಯಣಃ
ಭೀತೋ ದೂರತ ಏವ ಕೋಽಯಮುಭವತ್ಕಾಲೋ ಖಲೋ ದುರ್ದಶಾಂ ।
ಮಹ್ಯಂ ಸಂಜನಯತ್ಯಹೋ ಮಹೇಶಕರುಣಾಹೀನೋತಿಹೀನೋಽಸ್ಮ್ಯಹಂ
ಹಾ ಹಾ ಹಂತ ಕಿಮಂತಕಾ ಇವ ಕಥಂ ತಿಷ್ಠಂತಿ ದೌವಾರಿಕಾಃ ॥೬೧॥

ನಾಭೂದೇವ ಕಿಮಂತಕಾಂತಕಕೃಪಾ ಯೇನಾಧುನಾ ಶಾಂಭವೋ
ಭೂಪಾಲೋ ನ ವಿಲೋಕಿತೋಽಪಿ ನ ತತಃ ಸಂಭಾಷಿತೋ ವಾ ಮುದಾ ।
ಯತ್ಸಂಭಾಷಣಮೇವ ಭೂಷಣಮಿತಿ ಜ್ಞಾತಂ ತದೇವ ಕ್ಷಣಂ
ನೋಕ್ಷಸ್ಯಾಪಿ ವಿಲಕ್ಷಣಂ ಕರಣಮಿತ್ಯಾಹುರ್ಮಹಾಶಾಂಭವಾಃ ॥೬೨॥

ಆತನು ಶಂಖ, ಚಕ್ರ, ಶಾರ್ಙ್ಗಧನುಸ್ಸು, ಕೌಸ್ತುಭರತ್ನ ಇವುಗಳಿಂದ, ಅಲಂಕೃತನಾಗಿದ್ದನು. ಆ ವಿಷ್ಣುವನ್ನು ನೋಡಿ ಎಲ್ಲಾ ಬಾಗಿಲು ಕಾಯುವವರೂ ಆಶ್ಚರ್ಯಗೊಂಡರು. ॥೫೯॥

ಗರುಡನನ್ನು ಏರಿ ಆತುರದಿಂದ ಶಿವದೇವಾಲಯವನ್ನು ಪ್ರವೇಶಿಸಲು ಉದ್ಯುಕ್ತನಾದ ವಿಷ್ಣುವನ್ನು ಶಂಕರ ಸೇವಕರಾದ ದ್ವಾರ ರಕ್ಷಕರು ನೋಡಿ, ಅವನನ್ನು ತಡೆದರು. ॥೬೦॥

ಶ್ರೀವಿಷ್ಣುವು ಆಗ ದೊಣ್ಣೆಗಳನ್ನು ಹಿಡಿದು ನಿಂತಿರುವ ದ್ವಾರಪಾಲಕರನ್ನು ನೋಡಿ ಹೆದರಿದನು. ಅಲ್ಲದೆ ಸಾಕ್ಷಾತ್ ಯಮನೇ ನನಗೆ ದುಃಖವನ್ನುಂಟು ಮಾಡಲು ಹೀಗೆ ದ್ವಾರಪಾಲಕವೇಷದಿಂದ ಬಂದಿರಬಹುದೇ? ಎಂದು ಯೋಚಿಸಿದನು. ಅಯ್ಯೋ! ನಾನು ಸದಾಶಿವನ ಕರುಣೆಗೆ ಪಾತ್ರನಾಗಲಿಲ್ಲ. ಆದುದರಿಂದ ಈ ಭೀತಿ ನನಗೆ ಉಂಟಾಗಿದೆ. ಈ ಬಾಗಿಲು ಕಾವಲುಗಾರರು ಯಮನ ಹಾಗೆ ನನಗೆ ಭಾಸವಾಗುತ್ತಿದ್ದಾರೆ. ॥೬೧॥

ನಾನು ಶಂಕರ ಸೇವಕನಾದ ಆ ರಾಜನನ್ನು ದರ್ಶನಮಾಡಲಿಲ್ಲ. ಮತ್ತು ಸಂತೋಷದಿಂದಲೇ ನನಗೆ ಶ್ರೀ ಶಿವನ ಅನುಗ್ರಹ ಲಭಿಸಲಿಲ್ಲ. ಆ ಶೈವರಾಜ

ವಿಘ್ನಾ ಏವ ಭವಂತಿ ತಾವದಸಕೃನ್ನೂನಂ ಖಲು ಶ್ರೇಯಸಾಂ
ತದ್ದ್ವಾರಿಕಬುದ್ಧಿರೇವಮುಭವಸ್ಮಾ ನಾ ನಿಷೇದ್ಧುಂ ಮುಹುಃ ।
ಉಡ್ಡೀಯಾಪಿ ನ ಗಂತುಮೇವಮುಚಿತಂ ದಂಡಾಗ್ರಭೀತೋಽಧುನಾ
ಸ್ತಬ್ಧೋಽಯಂ ಗರುಡೋಽ ದೃಢೋಽಪಿ ಝುಟಿತಿ ವ್ಯಗ್ರಂ ಚ ಚಿತ್ತಂ ಮಯಾ ॥೬೩॥

ಪುಣ್ಯಾನ್ಯಸ್ಯ ಬಹೂನಿ ತಾವದಧುನಾ ಸಂಪಾದನೀಯಾನ್ಯಪಿ
ಪ್ರಾಯಃ ಪರ್ವತರಾಜರಾಜತನಯಾಕಾಂತಾಂಘ್ರಿಪಂಕೇರುಹಂ ।
ನ ಧ್ಯಾತಂ ಮುಹುರಾದರೇಣ ಸದನಾತ್ತೀವ್ರೇಣ ಕಿಂ ನಿರ್ಗಮೇ
ನ ಧ್ಯಾತಂ ಯದಿ ಸಾದರಂ ಮುಹುರಿಯಂ ಪ್ರತ್ಯೂಹವಾರ್ತಾ ಕುತಃ ॥೬೪॥

ಸರ್ವಾಘೌಘವಿನಾಶತಃ ಸ್ಮರಣತೋ ಗೌರೀಪತೇಃ ಸ್ಯಾದತಃ
ಪ್ರತ್ಯೂಹೋ ವಿಲಯಂ ಪ್ರಯಾತಿ ಬಹುಧಾ ಪ್ರತ್ಯೂಹಸಂಘಕ್ಷಯೇ ।
ಶ್ರೀವಿಶ್ವೇಶ್ವರಪಾದಪದ್ಮಭಜನಂ ತಾವತ್ಪರಂ ಸಾಧನಂ
ತಸ್ಮಾದಪ್ಯಧಿಕಂ ನ ಸಾಧನಮಿತಿ ಜ್ಞಾತಂ ಮುನೀಂದ್ರೈರಪಿ ॥೬೫॥

ನೊಡನೆ ಸಂಭಾಷಿಸುವುದು ಭೂಷಣವೆಂದು ಮನಗಂಡು ಆ ತತ್ತ್ವವನ್ನು ಮಹಾತ್ಮರಾದ ಶೈವರು ಮೋಕ್ಷಕಾರಣವಾದುದೆಂದು ಬೋಧಿಸಿದರು. ॥೬೨॥

ಶ್ರೇಯಸ್ಸಂಪಾದನೆಗೆ ಅನೇಕ ತೊಂದರೆಗಳು ಬಂದೊದಗುವುವು. ಒಳಗಡೆ ಪ್ರವೇಶಿಸುವುದನ್ನು ಈ ದ್ವಾರಪಾಲಕರು ತಡೆಗಟ್ಟುತ್ತಿರುವರು. ಅವರಿಗೆ ಅಂತಹ ಬುದ್ಧಿಯು ಹುಟ್ಟಿದರೂ ಹುಟ್ಟಬಹುದು. ಇವರ ದಂಡಗಳಿಗೆ ಹೆದರಿ ಗರುಡನಿಂದ ಹಾರಿ ಹೋಗೋಣವೆಂದರೆ ಅದು ಅಷ್ಟು ಉಚಿತವೆನಿಸುವುದಿಲ್ಲ. ಇವರ ಉಗ್ರ ದಂಡಗಳನ್ನು ನೋಡಿ ಗರುಡನೂ ಸ್ತಬ್ಧನಾದನು. ನನಗೂ ಜಾಗ್ರತವಾದ ಬುದ್ಧಿಯು ಚಾಂಚಲ್ಯವನ್ನು ಹೊಂದಿದೆ. ॥೬೩॥

ಪ್ರಾಯಃ ನಾನು ಅನಂತ ಪುಣ್ಯಗಳನ್ನು ಗಳಿಸಬೇಕಾಗಿದೆ. ಮನೆಯಿಂದ ಹೊರಡುವ ಹೊತ್ತಿನಲ್ಲಿ ನಾನು ಶ್ರೀಗೌರೀಶಂಕರನನ್ನು ಧ್ಯಾನಿಸಬೇಕಾಗಿತ್ತು. ಆದರದಿಂದ ಆತನನ್ನು ಧ್ಯಾನಿಸಲಿಲ್ಲ. ಹಾಗೆ ಧ್ಯಾನಮಾಡಿದ್ದರೆ ಈಗ ನನಗೆ ಇಂತಹ ತೊಂದರೆಗಳು ಒದಗುತ್ತಿರಲಿಲ್ಲ. ॥೬೪॥

ಗೌರೀನಾಥನ ಸ್ಮರಣೆಯಿಂದ ನಮ್ಮ ಪಾಪಗಳು ಅಳಿಯುವುವು. ವಿಘ್ನವು ನಾಶವಾಗುವುದು. ವಿಘ್ನವು ನಿವೃತ್ತಿಯಾದನಂತರ ಸುಖಿಯಾಗುವನು. ಸಮಸ್ತ

ಸಂಸಾರೋಽಪಿ ಲಯಂ ಪ್ರಯಾತಿ ಬಹುಧಾ ವಿಶ್ವೇಶ್ವರಾರಾಧನಾತ್
ಪ್ರತ್ಯೂಹಃ ಸ ಕಥಂ ನ ಯಾತಿ ವಿಲಯಂ ವಿಶ್ವೇಶ್ವರಾರಾಧನೇ ।
ತದ್ಧ್ಯಾತಂ ಸುರಭೂರುಹಃ ಸುರಮಣಿಸ್ತದ್ದೇವಗೌರಿತ್ಯಪಿ
ಶಾಂತಿಸ್ತೇನ ನ ವಾಪಿ ತೇಽಪಿ ನಿಧಯಃ ಪ್ರಾಪ್ತಾ ಭವಂತ್ಯೇವ ಹಿ ॥೬೬॥

ಬ್ರಹ್ಮಾಂಡಂ ಪ್ರಳಯಂ ಪ್ರಯಾತಿ ಗಿರಿಜಾಕಾಂತಾಂಘ್ರಿಪಂಕೇರುಹ
ಶ್ರೀಪೂಜಾ ಋಜುಭಾವವತ್ಫಲು ಸಕೃದೂರ್ಜಾಸಕೃತ್ಸಾ ಯದಿ ।
ತರ್ಹಿ ಸ್ಯಾತ್ಸಕಲೋದಯಸ್ಥಿತಿರಿತಿ ವ್ಯಕ್ತಾ ತತಸ್ತತ್ಸ್ಮೃತೇಃ
ಸರ್ವಾಭೀಷ್ಟಫಲಶ್ರಿಯಾಂ ಸಮುದಯಃ ಸ್ಯಾದೇವ ಸರ್ವಾತ್ಮನಾ ॥೬೭॥

ನ ಜಾನೀಮಸ್ತಾವದ್ಗಿರಿಶಚರಣಾಂಭೋಜಭಜನ
ಪ್ರಭಾವಂ ಭಾವಾನಾಮಭಿಮತಸಮಸ್ತಾರ್ಥಫಲದಂ

ಪಾಪಗಳನ್ನೂ ನಾಶಮಾಡುವ ಶ್ರೀವಿಶ್ವೇಶ್ವರನ ಪಾದಕಮಲಗಳನ್ನು ಸೇವಿಸುವುದು ಪರಮಗತಿಗೆ ಸಾಧನವು. ಇನ್ನು ಬೇರೆ ಇದಕ್ಕಿಂತಲೂ ಶ್ರೇಷ್ಠವಾದುದು ಇಲ್ಲವೆಂದು ಮುನಿಗಳೂ ಕೂಡ ಅಭಿಪ್ರಾಯಪಟ್ಟಿರುತ್ತಾರೆ. ||೬೫||

ಶ್ರೀಪರಮೇಶ್ವರನ ಪಾದಸೇವೆಯಿಂದ ಮನುಷ್ಯನು ಈ ಸಂಸಾರದಿಂದ ಮುಕ್ತನಾಗುವನು. ಅಂದಬಳಿಕ ಅವಾಂತರ ತೊಂದರೆಗಳು ಅವನಿಗೆ ನಾಶವಾಗುವುದಿಲ್ಲವೇ? ಆತನನ್ನು ಧ್ಯಾನಮಾಡುವುದರಿಂದ ಕಲ್ಪವೃಕ್ಷ, ಚಿಂತಾಮಣಿ, ಕಾಮಧೇನು, ನವನಿಧಿಗಳು ಇವುಗಳನ್ನೂ ಹೊಂದುವನಲ್ಲದೇ ಮನುಷ್ಯನು ಚಿರಶಾಂತಿಯನ್ನು ಪಡೆದು ಮುಕ್ತನಾಗುವನು. ||೬೬||

ಬ್ರಹ್ಮಾಂಡವೇ ನಾಶವಾಗುವುದು. ತದ್ಗತವಾದ ಸಕಲ ಕ್ರಿಯೆಗಳೂ ನಷ್ಟವಾಗುವುವು. ಆದರೆ ಮಹೇಶ್ವರ ಪಾದಪೂಜೆಯಿಂದ ದೊರಕುವ ಪುಣ್ಯವು ಮಾತ್ರ ಸ್ಥಿರವಾದುದು. ಆ ಪಾದಪೂಜಾಫಲವೇ ಒಂದುವೇಳೆ ಅಭಿವ್ಯಕ್ತವಾದರೆ, ಆಗ ಅದೇ ಬ್ರಹ್ಮಾಂಡವೆನಿಸುವುದು. ಆ ಮಹಾದೇವನ ಪಾದಸ್ಮರಣೆಯಿಂದ ಸಕಲವಾದ ಐಶ್ವರ್ಯ ಸಮುದಾಯವೇ ಸಿದ್ಧಿಸಿದಂತಾಗುವುದು. ||೬೭||

ತಪಸ್ಸೇ ಮೊದಲಾದ ಸಕಲ ಕರ್ಮಗಳಿಗೂ, ಅನುರೂಪವಾದ ಫಲವನ್ನೂ ಒದಗಿಸುವುದೇ ಈ ಪರಶಿವನ ಪಾದಧ್ಯಾನದಿಂದುಂಟಾದ ಶಕ್ತಿ, ಇಂತಹ ಶಕ್ತಿಯನ್ನೂ

ತದೇವಾಪರಾಘಕ್ಷಯಕರಮಪೂರ್ವಾಣಿ ತನುತೇ
ನ ವಾ ಪೂರ್ವೇ ಪಕ್ಷೇಪ್ಯಹಹ ನ ವಿಜಾನಂತಿ ವಿಧಯಃ ॥೬೮॥

ಉಮಾಕಾಂತೇ ಸ್ವಾಂತೇ ಯದಿ ನಿಹಿತಮತ್ಯಾದರದರ್ಶೈಃ
ತದಾ ತಾವಲ್ಲೋಕೋ ವಿಜಿತ ಇತಿ ಮನ್ಯೇ ಧ್ರುವಮಿದಂ ।
ಅಪಾರೈರಾಕಲ್ಪಂ ಪ್ರತಿದಿನಮಹಾದಾನತಪಸಾಂ
ಸಮೂಹೈರೇವ ಸ್ಯಾದಿತಿಮತಿರಭೂದೇವ ಸಹಸಾ ॥೬೯॥

ಕಿಮೇವಂ ಪ್ರತ್ಯೂಹಃ ಸಮಭವದಹೋ ಶಾಂಭವಪದಂ
ಮನಾಕ್ ದೃಷ್ಟಂ ಯತ್ನೇ ಸತಿ ತಿಮಿರರೂಪೋಯಮಧುನಾ ।
ಅಯಂ ತಾವದ್ಗೌರೀರಮಣಚರಣಾಂಭೋಜಕಲನ
ಪ್ರಸಾದಾರ್ಕಾದಾಶು ಪ್ರಶಮಮುಪಯಾಸ್ಯತ್ಯಪಿ ನ ಕಿಂ ॥೭೦॥

ನಾವು ಅರಿಯಲಾರದೇ ಹೋಗಿರುವೆವು. ಈ ಪರಶಿವ ಪಾದಸೇವೆಯೇ, ಮೊದಲು ಮಾನವರ ಪಾಪರಾಶಿಯನ್ನೂ ನಾಶಮಾಡಿ, ತನ್ಮೂಲಕ ಅಪೂರ್ವವನ್ನೂ ಅಂದರೆ ಹಿಂದಿಲ್ಲದಿದ್ದ ಸುಕೃತ ವಿಶೇಷವನ್ನುಂಟುಮಾಡುವುದು. ಆದರೆ ಕರ್ಮವಿಧಾಯಕ ವಾಕ್ಯಗಳು ಇದನ್ನು ಮೊದಲೇ ತಿಳಿಯಪಡಿಸುವುದಿಲ್ಲವಲ್ಲಾ! ಇದು ಆಶ್ಚರ್ಯ. ॥೬೮॥

ಉಮಾಪತಿಯನ್ನು ಆದರದಿಂದ ಮನಸ್ಸಿನಲ್ಲಿ ಧ್ಯಾನಿಸಿದ ಮಾತ್ರಕ್ಕೆ ಎಲ್ಲಾ ಲೋಕವನ್ನು ನಾವು ಗೆಲ್ಲಬಹುದೆಂದು ನಿಶ್ಚಯವಾಗಿ ತಿಳಿಯುತ್ತೇನೆ. ಆದರೆ ಪ್ರತಿ ನಿತ್ಯವೂ ನಡೆಸುವ ಮಹಾದಾನ, ತಪಸ್ಸು, ಇವುಗಳನ್ನು ಪ್ರಳಯದವರೆಗೂ ಆಚ ಸುತ್ತಿದ್ದರೆ, ಅವುಗಳಿಂದ ಆ ಶಕ್ತಿ ಬರುವುದೆಂದು ಅನೇಕರಿಗೆ ಭಾವನೆ ಇದೆ. ಇದು ತಪ್ಪು. ॥೬೯॥

ಆಹಾ! ಇದೇನು! ಈಗ ನನಗೆ ಈ ತೆರನಾದ ವಿಘ್ನವು ಉಪಸ್ಥಿತವಾಗಿದೆ? ಶಾಂಭವರ ದರ್ಶನದಲ್ಲಿ ಪ್ರಯತ್ನಿಸಿದರೆ ಈ ವಿಘ್ನವು ತಿಮಿರ ರೂಪವಾಗಿ ಆವರಿಸಿದೆ. ಇದು ಶ್ರೀ ಗೌರೀಶಂಕರನ ಪಾದಕಮಲಗಳ ಭಜನವೆಂಬ ಸೂರ್ಯತೇಜಸ್ಸಿನಿಂದ ಮಾತ್ರ ನಾಶವಾಗಲಾರದೇನು? ಆದ್ದರಿಂದ ಈಗ ಶಿವಧ್ಯಾನವೇ ಮುಖ್ಯವಾದ ಉಪಾಯ. ॥೭೦॥

ಇದಂ ಚ ರಜನೀಮುಖಂ ಶಿವಪದಾಂಬುಜಾರಾಧನ
ಪ್ರಸಾದನಿಧಿಪಾವನಂ ಶನಿಯುತೋಽಪಿ ವಾರೋಽಧುನಾ ।
ಶಿವೋ ಯದಿ ಸಮರ್ಚಿತಃ ಸಕಲಸಿದ್ಧಿರದ್ಯಾಶು ಮೇ
ಭವಿಷ್ಯತಿ ನ ಸಂಶಯಃ ಶಿವಕೃಪಾ ಯದಿ ಸ್ಯಾನ್ಮಯಿ ॥೭೮॥

ಮೃಗೈರಪಿ ಮಹೋತ್ಸವೈಃ ಸಿತವಿಭೂತಿಪೂತೈರಹೋ
ಪ್ರದೋಷಸಮಯೇ ಗತಿಃ ಕ್ರಿಯತ ಏವ ದೂರ್ವಾಂಕುರೈಃ ।
ಸುಬಿಲ್ವದಳಸಂಯುತೈರಪಿ ಮನೋಹರೈಃ ಸಾದರಂ
ಮಹೇಶಸದನಂ ಪ್ರತಿ ಪ್ರಿಯಮಯೂರಗೋಭಿಃ ಸಹ ॥೭೯॥

ಪ್ರಯಾಂತಿ ತರವೋಽಪ್ಯಮೀ ವಿವಿಧಪುಷ್ಪಗುಚ್ಛಾವೃತಾಃ
ಕೃತಾಬ್ಜಜಲಸೇಚನಾಃ ಸಿತವಿಭೂತಿಪುಂಡ್ರಾಂಕಿತಾಃ ।
ಶಿವಾಲಯಮಮೀ ಶುಕಪ್ರಭೃತಿಪತ್ರಿವರ್ಗಾ ಅಪಿ
ಪ್ರಭೂತವಿಭವೋ ನೃಪಃ ಶಿವಪದಾಂಬುಜಾರಾಧಕಃ ॥೮೦॥

ಈ ಸಾಯಂಕಾಲದ ಸಮಯವು ಶಿವಪೂಜೆಗೆ ಅನುಕೂಲವಾಗಿದೆ. ಮತ್ತು ಪವಿತ್ರವೂ ಎನಿಸಿದೆ. ಈ ದಿನ ಶನಿವಾರವೂ ಆದುದರಿಂದ ಮತ್ತು ಶುಭಪ್ರದ. ಇಂತಹ ಶನಿಪ್ರದೋಷದಲ್ಲಿ ನಾನು ಶಿವಪೂಜೆಗೈದರೆ ಎಲ್ಲಾ ಸಿದ್ಧಿಯೂ ನನಗೆ ಲಭಿಸುವುದು. ಇದರಲ್ಲಿ ಸ್ವಲ್ಪವೂ ಸಂಶಯವಿಲ್ಲ. ನನ್ನಲ್ಲಿ ಶಿವನ ದಯೆಯಿದ್ದರೆ ಈ ಕೆಲಸದಲ್ಲಿ ನನಗೆ ಪ್ರವೃತ್ತಿಯುಂಟಾಗುವುದು. ॥೭೮॥

ಈ ಪ್ರದೋಷಕಾಲದಲ್ಲಿ ಮೃಗಗಳೂ ಸಹ ಶುಭ್ರವಾದ ವಿಭೂತಿಗಳನ್ನು ಧರಿಸಿವೆ. ದೂರ್ವಾಂಕುರಗಳಿಂದ ಮತ್ತು ಬಿಲ್ವದಳಗಳಿಂದ ಆದರ ಪೂರ್ವಕವಾಗಿ ಶಿವಪೂಜೆಯನ್ನು ಮಾಡುತ್ತಿವೆ. ಮಹೇಶ್ವರ ದೇವಾಲಯದ ಮುಂದೆ ಮನೋಹರಗಳಾದ ನವಿಲುಗಳೂ ಈಶ ಸೇವೆಯನ್ನು ಮಾಡುತ್ತಿವೆ. ॥೭೯॥

ಈ ಮರಗಳು ನಾನಾತರಹ ಹೂಗೊಂಚಲುಗಳಿಂದ ಕೂಡಿವೆ. ಇಲ್ಲಿರುವ ಗಿಳಿಯೇ ಮೊದಲಾದ ಪಕ್ಷಿಗಳೂ ಜಲಸೇಚನಗಳಿಂದಲೂ ವಿಭೂತಿಪುಂಡ್ರಗಳಿಂದಲೂ ಶೋಭಿಸುತ್ತಿವೆ. ಹಾಗೆಯೇ ಶಿವಪೂಜೆಗೆ ತೊಡಗಿ, ಶಿವಾಲಯವನ್ನು ಪ್ರವೇಶಿಸುತ್ತಿರುವುವು. ಈ ರಾಜನಾದರೋ ಅತ್ಯಂತ ಪುಣ್ಯಶಾಲಿ. ಈಗ ಶಿವಪೂಜೆಯಲ್ಲಿ ಈತನು ಆಸಕ್ತನಾಗದೆ ಇರುವನೇ? ॥೮೦॥

ಭಾಗ್ಯಂ ಶಂಕರಪೂಜಯಾ ಶನಿಯುತೇ ಕಾಮಃ ಪರಂ ಲಭ್ಯತೇ
ಲಿಂಗೇ ಬಿಲ್ವದಳಾರ್ಪಣಂ ಚ ವಿವಿಧಶ್ರೇಯಸ್ಕರಂ ಜಾಯತೇ ।
ತತ್ಕಿಂ ವಿಘ್ನಿತ ಏವ ಜಾತಮಧುನಾ ತೇನೈವ ಭಾಗ್ಯಂ ಮಹತ್
ಪ್ರಾಯೋ ಯಾಸ್ಯತಿ ಸಾಯಮೀಶಭಜನಾಭಾವೇನ ಸರ್ವಾತ್ಮನಾ ॥೭೪॥

ಇತಿ ವ್ಯಾಕುಲಚಿತ್ತಸ್ಯ ವಚನಾನೀಂದಿರಾಪತೇಃ ।
ಶ್ರುತ್ವಾ ಸನಂದನಃ ಪ್ರಾಹ ತಮೇವ ಗರುಡಧ್ವಜಂ ॥೭೫॥

॥ ಸನಂದನ ಉವಾಚ ॥

ಅಯಂ ಪುಣ್ಯತಮಃ ಕಾಲಃ ಕಾಲಕಾಲಸಮರ್ಚನೇ ।
ಶನಿತ್ರಯೋದಶೀ ಪುಣ್ಯಾ ಪ್ರದೋಷೋಽಯಂ ವಿಶೇಷತಃ ॥೭೬॥

ಪ್ರದೋಷಕಾಲೇ ಸಂಪ್ರಾಪ್ತೇ ಕೃತ್ವಾ ಸ್ನಾನಾದಿಕಂ ತತಃ ।
ಪೂಜನೀಯೋ ಮಹಾದೇವಃ ಶಿವಲಿಂಗೇ ಶಿವಾತ್ಮಕೇ ॥೭೭॥

ಶನಿಪ್ರದೋಷದ ದಿನ ಶಿವಪೂಜೆ ಮಾಡುವುದರಿಂದ ಐಶ್ವರ್ಯವು ಪ್ರಾಪ್ತವಾಗುವುದಲ್ಲದೆ ಸಕಲ ಇಷ್ಟಾರ್ಥಗಳು ಸಿದ್ಧಿಸುತ್ತವೆ. ಈಗ ಶಿವಲಿಂಗದಲ್ಲಿ ಒಂದು ಬಿಲ್ವದಳವನ್ನು ಅರ್ಪಿಸುವುದರಿಂದಲೂ ಅನೇಕ ವಿಧವಾದ ಶ್ರೇಯಸ್ಸು ಮನುಷ್ಯನಿಗೆ ಉಂಟಾಗುತ್ತದೆ. ಹೀಗಿರುವಲ್ಲಿ ಈಗ ನಾನು ತೊಂದರೆಗೆ ಸಿಕ್ಕಿರುವೆನು. ಈಗ ಶ್ರೀಶಂಕರನ ಪೂಜಾದಿಗಳನ್ನು ಮಾಡದಿರುವುದರಿಂದ ನನಗೆ ಮಹತ್ತರವಾದ ಭಾಗ್ಯವು ನಷ್ಟವಾಗುತ್ತದೆ." ||೭೪||

ಹೀಗೆ ಚಿಂತಾಕ್ರಾಂತನಾದ ವಿಷ್ಣುವಿನ ಮಾತನ್ನು ಕೇಳಿ ಸನಂದನನು ಗರುಡಧ್ವಜನಾದ ನಾರಾಯಣನಿಗೆ ಹೀಗೆಂದನು. ||೭೫||

" ಮಹಾವಿಷ್ಣುವೇ, ಈ ಕಾಲವು ಶಿವಾರ್ಚನೆಮಾಡಲು ಅತ್ಯಂತ ಪವಿತ್ರವಾಗಿದೆ. ಅಲ್ಲದೇ ಶನಿತ್ರಯೋದಶಿಯು ಪುಣ್ಯಪ್ರದವಾದುದು. ಅದರಲ್ಲಿಯೂ ಈ ಪ್ರದೋಷಕಾಲವು ಹೆಚ್ಚು ಸುಕೃತಫಲದಾಯಕವು. ||೭೬||

ಪ್ರದೋಷಕಾಲವು ಸನ್ನಿಹಿತವಾದಾಗ ಸ್ನಾನ ಮೊದಲಾದುವನ್ನು ಆಚರಿಸಬೇಕು. ಬಳಿಕ ಶಿವಂಕರನಾದ ಮತ್ತು ಲಿಂಗಸ್ವರೂಪಿಯಾದ ಶಂಕರನನ್ನು ಶಿವಲಿಂಗದಲ್ಲಿ ಆವಾಹಿಸಿ ಪೂಜಿಸಬೇಕು. ||೭೭||

ಸಶುಕ್ಲವಾಸಸಾ ಪೂಜ್ಯೋ ಭಸ್ಮನಾ ಭೂಷಿತೇನ ಚ ।
ರುದ್ರಾಕ್ಷಾಭರಣೇನಾಪಿ ತತಃ ಪೀತಾಂಬರಂ ತ್ಯಜ ॥೭೮॥

ಸ್ನಾನಂ ಕುರು ಪ್ರಯತ್ನೇನ ಶಿವತೀರ್ಥೇ ಶಿವಪ್ರಿಯೇ ।
ಶಿವಪಾದಾಂಬುಜೋತ್ಪನ್ನಮಿದಂ ತೀರ್ಥಮಘಾಪಹಂ ॥೭೯॥

ಅತ್ರ ಸ್ನಾನೇನ ಪಾಪಾನಿ ವಿನಶ್ಯಂತಿ ನ ಸಂಶಯಃ ।
ಅನೇನೈವ ಜಲೇನೇಶಃ ಸಸರ್ಜ ಜಗತಾಂ ತ್ರಯಂ ॥೮೦॥

ಸಸರ್ಜ ಜಲಮೀಶಾನೋ ಪ್ರಥಮಂ ತದನಂತರಂ ।
ಅಗ್ನಿಂ ಚಂದ್ರಂ ಚ ಸೂರ್ಯಂ ಚ ಭವಂತಂ ವಿಧಿಮೇವ ಚ ॥೮೧॥

ತತಃ ಸರ್ವಾನಿಮಾನ್ ಲೋಕಾನ್ ಸಸರ್ಜಾನೇನ ಕೇವಲಂ ।
ಇದಂ ಖಲು ಮಹತ್ ಸ್ಥಾನಂ ಉಮಾಕಾಂತಪ್ರಿಯಂ ಹರೇ ॥೮೨॥

ಶುದ್ಧವಾದ ಮಡಿಪಂಚೆಗಳನ್ನು ಧರಿಸಬೇಕು. ವಿಭೂತಿಯಿಂದ ಅಲಂಕೃತನಾಗಿ ರುದ್ರಾಕ್ಷಿಯನ್ನು ಧರಿಸಬೇಕು. ಶಿವನನ್ನು ಅರ್ಚಿಸಬೇಕು. ಆ ಕಾಲದಲ್ಲಿ ನೀನು ಪೀತಾಂಬರವನ್ನು ತ್ಯಜಿಸಬೇಕು. ||೭೮||

ಮಂಗಳಕರವಾದ ಮತ್ತು ಶಿವನಿಗೆ ಪ್ರಿಯವಾದ ಶಿವತೀರ್ಥದಲ್ಲಿ ಸ್ನಾನ ಮಾಡು. ಈ ಶಿವತೀರ್ಥವು ಶಿವನ ಪಾದಕಮಲಗಳಿಂದ ಉಕ್ಕಿದ ಜಲಬಿಂದುಗಳಿಂದ ರಚಿತವಾಗಿದೆ. ಮತ್ತು ಪಾಪಗಳನ್ನು ನಾಶಮಾಡತಕ್ಕ ಶಕ್ತಿಯುಳ್ಳದ್ದಾಗಿದೆ. ||೭೯||

ಈ ಶಿವತೀರ್ಥದಲ್ಲಿ ಮೈ ತೊಳೆಯುವುದರಿಂದ ಪಾಪಗಳು ಅಳಿಯುವುವು. ಇದರಲ್ಲಿ ಸಂದೇಹಬೇಡ. ಶಂಕರನು ಈ ತೀರ್ಥದ ನೀರಿನಿಂದಲೇ ಮೂರು ಲೋಕಗಳನ್ನೂ ಸೃಷ್ಟಿಸಿದನು. ||೮೦||

ಮೊದಲು ಈಶ್ವರನು ನೀರನ್ನು ಸೃಷ್ಟಿಸಿದನು. ಬಳಿಕ ಅಗ್ನಿ, ಚಂದ್ರ, ಸೂರ್ಯ, ನೀನು (ಅಂದರೆ ವಿಷ್ಣು) ಬ್ರಹ್ಮ ಇವರನ್ನು ನಿರ್ಮಿಸಿದನು. ||೮೧||

ಓ ವಿಷ್ಣುವೇ, ಈಶ್ವರನು ಆಮೇಲೆ ಎಲ್ಲಾ ಲೋಕಗಳನ್ನೂ ಸೃಷ್ಟಿಮಾಡಿದನು. ಈ ಸ್ಥಳವು ಬಹು ಮಹಿಮೆಯುಳ್ಳದ್ದು. ಮತ್ತು ಗೌರೀಪತಿಗೆ ತುಂಬಾ ಪ್ರಿಯವಾದುದು. ||೮೨||

ಗೌರೀನಿರ್ಮಿತಮೇವೇದಂ ಲಿಂಗಂ ಸಂಪೂಜಿತಂ ಮಯಾ ।
ಸಮರ್ಚಯ ಪ್ರಯತ್ನೇನ ಭೂತಿರುದ್ರಾಕ್ಷಭೂಷಣಃ ॥೮೩॥

ತ್ಯಜ ಚಕ್ರಂ ಗದಾಂ ಶಂಖಂ ಶಾರ್ಙ್ಗಂ ಚ ಗರುಡಂ ತ್ಯಜ ।
ಅಶಾಂಭವಾನಿ ಚಿಹ್ನಾನಿ ಸರ್ವಾಣ್ಯಪಿ ಪರಿತ್ಯಜ ॥೮೪॥

ಪ್ರದೋಷಕಾಲೇ ಸಂಪ್ರಾಪ್ತೇ ಶುಚಿರ್ಭೂತೇನ ಭಸ್ಮನಾ ।
ಪೂಜನೀಯೋ ಮಹಾದೇವೋ ಬಿಲ್ವಪತ್ರಾದಿಸಾಧನೈಃ ॥೮೫॥

ಅದೂರೇ ಬಿಲ್ವತರವಃ ಸಂತಿ ತದ್ಬಿಲ್ವಪಲ್ಲವೈಃ ।
ಕರವೀರೈಶ್ಚ ಕನಕೈಃ ಲಿಂಗಮರ್ಚಯ ಶಂಕರಂ ॥೮೬॥

ಮುನಯೋಽಪಿ ಪ್ರಯತ್ನೇನ ಪ್ರದೋಷೇ ಗಿರಿಶಾರ್ಚನಂ ।
ಕುರ್ವಂತಿ ಬಿಲ್ವಪತ್ರಾದ್ಯೈಃ ಶಿವಪಂಚಾಕ್ಷರೋತ್ಸವೈಃ ॥೮೭॥

ಗೌರಿಯು ಸ್ಥಾಪಿಸಿದ ಈ ಲಿಂಗವನ್ನು ನಾನು ಪೂಜಿಸಿದೆನು. ನೀನೂ ಕೂಡ ವಿಭೂತಿಯನ್ನೂ ರುದ್ರಾಕ್ಷಿಯನ್ನೂ ಧರಿಸಿ, ಪೂಜೆಮಾಡು. ||೮೩||

ಚಕ್ರ, ಗದೆ, ಶಂಖ, ಗರುಡ ಇವು ಶೈವರಿಗೆ ಉಚಿತವಲ್ಲದ ವಸ್ತುಗಳು. ಅವುಗಳನ್ನೆಲ್ಲಾ ಬಿಟ್ಟುಬಿಡು. ||೮೪||

ಪ್ರದೋಷಕಾಲವು ಒದಗಿದ ಕೂಡಲೆ ಶುಚಿಯಾಗಿ ವಿಭೂತಿಯನ್ನು ಲೇಪಿಸಿಕೊಂಡು, ಬಳಿಕ ಬೇಕಾದ ಉಪಕರಣಗಳೊಡನೆ ಬಿಲ್ವದಳಗಳೇ ಮೊದಲಾದವುಗಳಿಂದ ಶಿವನನ್ನು ಪೂಜಿಸಬೇಕು. ||೮೫||

ಇಲ್ಲೇ ಸಮೀಪದಲ್ಲಿ ಬಿಲ್ವವೃಕ್ಷಗಳು ಹೇರಳವಾಗಿವೆ. ಅವುಗಳ ದಳಗಳಿಂದಲೂ ಬಂಗಾರದಂತೆ ಹೊಂಬಣ್ಣದಿಂದೆಸೆಯುವ ಕರವೀರಹೂಗಳಿಂದಲೂ ಈ ಶಿವಲಿಂಗವನ್ನು ಪೂಜಿಸು. ||೮೬||

ಮುನಿಗಳೂ ಕೂಡ ಪ್ರದೋಷಕಾಲದಲ್ಲಿ ಬಿಲ್ವದಳಗಳಿಂದ ಮತ್ತು ಪಂಚಾಕ್ಷರೀಜಪಪುರಃಸ್ಸರವಾಗಿ ಪಾರ್ವತೀಪ್ರಿಯನನ್ನು ಪೂಜಿಸುತ್ತಿರುವರು. ||೮೭||

ನಿವಾರಿತೋಽಸಿ ಪ್ರಬಲೈರ್ಭೂಪದೌವಾರಿಕೈರ್ಹರೇ ।
ಅಶಾಂಭವತ್ವವಿಜ್ಞಾನಾತ್ ತ್ವಯಿ ತಾವದಸಂಶಯಂ ॥೮೮॥

ಭಸ್ಮೋದ್ಧೂಳಿತಸರ್ವಾಂಗಸ್ತ್ರಿಪುಂಡ್ರಾಂಕಿತಮಸ್ತಕಃ
ರುದ್ರಾಕ್ಷಮಾಲಾಭರಣಃ ಶಾಂಭವಃ ಶಿವತತ್ಪರಃ ॥೮೯॥

ಶಾಂಭವಾಲೋಕನೇನಾಪಿ ಭೀತಾ ದೌವಾರಿಕಾಃ ಪರಂ ।
ಶಿವಾಲಯಪ್ರವೇಶೇಷು ನ ಕರಿಷ್ಯಂತಿ ವಾರಣಂ ॥೯೦॥

ಪಶ್ಯ ಶಾರ್ದೂಲಬೃಂದಾನಿ ಭಸ್ಮಪೂತಾನಿ ತಾನ್ಯಪಿ ।
ಏಣೀಮುಖಾನ್ ಮೃಗಾನ್ ಪಶ್ಯ ಸರ್ವಾನ್ ಭಸ್ಮವಿಭೂಷಿತಾನ್ ॥೯೧॥

ಮಯೂರಾದಿಪತಂಗಾಂಶ್ಚ ಪಶ್ಯ ಭಸ್ಮವಿಭೂಷಿತಾನ್ ।
ರುದ್ರಾಕ್ಷಮಾಲಾಭರಣಾನ್ ಶಿವಧ್ಯಾನ ಪರಾಯಣಾನ್ ॥೯೨॥

ತರೂನಪ್ಯತ್ರ ತರಸಾ ಹಾರರೂಪಧರಾನ್ ಪರಾನ್ ।
ವಿಲೋಕಯ ಪ್ರಯತ್ನೇನ ಶಿವಪೂಜನಸಾಧನಾನ್ ॥೯೩॥

ಈ ರಾಜನ ಸೇವಕರಾದ ಬಾಗಿಲು ಕಾವಲುಗಾರರು ನೀನು ಶೈವನಲ್ಲವೆಂಬ ಸಂಶಯದಿಂದ ದ್ವಾರದಲ್ಲಿ ನಿನ್ನನ್ನು ತಡೆದರು. ॥೮೮॥

ಮೈತುಂಬಾ ವಿಭೂತಿಯನ್ನು ಲೇಪಿಸಿಕೊಂಡು, ಹಣೆಗೆ ಭಸ್ಮತ್ರಿಪುಂಡ್ರವನ್ನಿಟ್ಟು ರುದ್ರಾಕ್ಷಮಾಲೆಗಳಿಂದ ಅಲಂಕೃತರಾದ ಶಂಭುಭಕ್ತರನ್ನು ನೋಡಿದೊಡನೆಯೇ, ದ್ವಾರರಕ್ಷಕರು ಹೆದರುವರು. ಮತ್ತು ಶಿವದೇವಾಲಯ ಪ್ರವೇಶಮಾಡುವ ಅವರನ್ನು ತಡೆಯುವುದಿಲ್ಲ. ॥೮೯-೯೦॥

ನವಿಲೇ ಮೊದಲಾದ ಹಕ್ಕಿಗಳನ್ನು ನೋಡು. ಇವೆಲ್ಲಾ ಭಸ್ಮಭೂಷಿತವಾಗಿ ರುದ್ರಾಕ್ಷಮಾಲೆಗಳನ್ನು ಧರಿಸಿವೆ. ಮತ್ತು ಎಲ್ಲವೂ ಶಿವಧ್ಯಾನದಲ್ಲಿ ಆಸಕ್ತವಾಗಿವೆ. ॥೯೨॥

ಎಲೈ ನಾರಾಯಣನೇ, ಇಗೋ, ಇಲ್ಲಿ ನೋಡು. ಈ ಮರಗಳು ಈಶ್ವರನ ರೂಪಗಳನ್ನು ಧರಿಸಿವೆ. ಇಲ್ಲಿ ನೋಡು. ಶಿವಪೂಜಾಸಾಮಗ್ರಿಗಳು ವಿಶೇಷವಾಗಿವೆ. ॥೯೩॥

ಪ್ರದೋಷಕಾಲೇ ಸಂಪ್ರಾಪ್ತೇ ಶಾಂಭವಂ ವೇಷಮಾವಹ ।
ಅಶಾಂಭವಾನಾಂ ಸಹಸಾ ಪ್ರವೇಶೋಽತ್ರ ನ ಸರ್ವಥಾ ॥೯೪॥

ಭೂತನಾಥಾರ್ಚನಪರೋ ಭೂಪತಿರ್ಭೂತಿಭೂಷಣಃ ।
ಸ ಭೂತಿರಹಿತಂ ಪ್ರಾಯೋ ನ ಪಶ್ಯತಿ ವಿಶೇಷತಃ ॥೯೫॥

ಭೂಮಂಡಲಮಿದಂ ಸರ್ವಂ ಮಂಡಿತಂ ಶಾಂಭವೈಃ ಪರಂ ।
ಅಶಾಂಭವಾನಾಂ ವಾರ್ತಾಪಿ ಸರ್ವಥಾತ್ರ ನ ದೃಶ್ಯತೇ ॥೯೬॥

ಕಿಂ ವಾ ಶಾಂಭವವೇಷೇಣ ಸ್ಥಿತಿರತ್ರೋಚಿತಾ ನ ತೇ ।
ಪ್ರದೋಷೇಷು ವಿಶೇಷೇಣ ನಾಶಾಂಭವವಿಲೋಕನಂ ॥೯೭॥

ಅಶಾಂಭವಂ ಪ್ರದೋಷೇಷು ಯಃ ಪಶ್ಯತ್ಯಪಿ ಮೋಹತಃ ।
ಸ ಯಾತಿ ನರಕಂ ಘೋರಂ ಕುಯೋನಿಮಪಿ ಗಚ್ಛತಿ ॥೯೮॥

ನೀನು ಪ್ರದೋಷಕಾಲವು ಬಂದಕೂಡಲೇ ಶಾಂಭವರ ವೇಷವನ್ನು ಧರಿಸ ಬೇಕು. ಏಕೆಂದರೆ ಶಂಕರಭಕ್ತರಲ್ಲದವರಿಗೆ ಅಲ್ಲಿ ಒಳಗೆ ಪ್ರವೇಶಮಾಡುವುದು ಸಾಧ್ಯವಾಗುವುದಿಲ್ಲ. ॥೯೪॥

ಈ ಶಂಕರನ ಪೂಜಾಸಕ್ತನಾದ ರಾಜನು ವಿಭೂತಿಯಿಂದ ಅಲಂಕೃತನಾಗಿರು ವನು. ಸಾಮಾನ್ಯವಾಗಿ ಆ ಶಂಕರನು ವಿಭೂತಿಯನ್ನು ಧರಿಸದವರನ್ನು ನೋಡು ವುದೇ ಇಲ್ಲ. ॥೯೫॥

ಈ ಭೂವಲಯವೆಲ್ಲಾ ಶಂಕರಭಕ್ತರಿಂದ ತುಂಬಿಹೋಗಿದೆ. ಶೈವರಲ್ಲದವರ ಹೆಸರುಕೂಡ ಇಲ್ಲಿ ಕೇಳುವುದಿಲ್ಲ. ಮತ್ತು ಈ ಸ್ಥಳದಲ್ಲಿ ಅಶೈವರು ಯಾರೂ ಅವನ ಕಣ್ಣಿಗೆ ಬೀಳಲಾರರು. ॥೯೬॥

ಎಲೈ ಹರಿಯೇ, ಈಗ ನಿನಗೆ ಶೈವವೇಷವು ಶೋಭಿಸಲಾರದೇನು? ಹಾಗಾ ದರೆ ಪ್ರದೋಷಕಾಲದಲ್ಲಿ ಮುಖ್ಯವಾಗಿ ಶೈವರಲ್ಲದವರ ದರ್ಶನವನ್ನೇ ಮಾಡ ಬಾರದು. ॥೯೭॥

ಅಜ್ಞಾನವಶಾತ್ ಯಾವನಾದರೂ ಪ್ರದೋಷಕಾಲದಲ್ಲಿ ಶಂಭುಭಕ್ತನಲ್ಲದಿರು ವವನನ್ನು ನೋಡಿದ ಮಾತ್ರಕ್ಕೆ, ಆತನು ರೌರವಾದಿ ಘೋರ ನರಕವನ್ನು ಹೊಂದು ವನಲ್ಲದೇ ಕೀಳುಜಾತಿಯಲ್ಲಿ ಜನ್ಮವನ್ನು ತಾಳುವನು. ॥೯೮॥

ಅಶಾಂಭವಮುಖಂ ದೃಷ್ಟ್ವಾ ಪ್ರದೋಷೇ ಮೋಹತೋಽಪಿ ವಾ ।
ದರಿದ್ರೋ ಜಾಯತೇ ಮರ್ತ್ಯಃ ಸುರೋ ರಾಸಭತಾಮಿಯಾತ್ ।.೯೯॥

ಧಿಗಶಾಂಭವಜನ್ಮಾನಿ ಭೂತಿಹೀನಾನಿ ಸರ್ವದಾ ।
ಪ್ರದೋಷೇಷು ವಿಶೇಷೇಣ ಭೂತಿಹೀನೋ ನಿರರ್ಥಕಃ ॥೧೦೦॥

ರುದ್ರಾಕ್ಷಧಾರಣಂ ಶ್ರೌತಂ ಶ್ರೌತಂ ತದ್ಭಸ್ಮಧಾರಣಂ ।
ತತ್ತ್ಯಕ್ತಂ ಯೇನ ಸಹಸಾ ಸ ತಾವತ್ಪತಿತೋ ಭವೇತ್ ॥೧೦೧॥

ಅಸ್ಮಾಕಮೀಶಾನಪದಾರ್ಚಕಾನಾಂ
ವಿಭೂತಿರುದ್ರಾಕ್ಷವಿಭೂಷಣಾನಾಂ ।
ಉದ್ಧೂಲನೇನಾಸ್ತು ಪವಿತ್ರಮೇತತ್
ಗಾತ್ರಂ ಪ್ರದೋಷೇಷು ವಿಶೇಷತಸ್ತು ॥೧೦೨॥

ಕಿಂಚ ಪೀತಾಂಬರಧರಂ ಶಂಖಚಕ್ರಗದಾಂಕಿತಂ ।
ವಿಲೋಕ್ಯ ಸಾಯಂ ಮನುಜೋ ದರಿದ್ರೋ ಭವತಿ ಧ್ರುವಂ ॥೧೦೩॥

ಪ್ರದೋಷಸಮಯದಲ್ಲಿ ಶೈವೇತರನ ಮುಖವನ್ನು ಅಕಸ್ಮಾತ್ತಾಗಿ ನೋಡಿದ ಮನುಷ್ಯನೂ ಕೂಡ ಬಡವನಾಗುವನು. ಹಾಗೆ ನೋಡಿದ ದೇವತೆಯು (ಸುರನು) ಕತ್ತೆಯ ಜನ್ಮವನ್ನು ಹೊಂದುವನು. ॥೯೯॥

ವಿಭೂತಿಯನ್ನು ಧರಿಸದ ಶೈವಭಿನ್ನರ ಜನ್ಮಗಳಿಗೆ ಧಿಕ್ಕಾರವಿರಲಿ. ಪ್ರದೋಷ ಕಾಲದಲ್ಲಿಯಾದರೂ ಭಸ್ಮವನ್ನು ಇಟ್ಟುಕೊಳ್ಳದಿರುವವನ ಜನ್ಮವು ವ್ಯರ್ಥವು. ॥೧೦೦॥

ರುದ್ರಾಕ್ಷಿಯನ್ನೂ ಮತ್ತು ಭಸ್ಮವನ್ನೂ ಧರಿಸಬೇಕೆಂದು ವೇದದಲ್ಲಿ ಹೇಳಿದೆಯಲ್ಲವೇ! ಇಂತಹ ವೇದವಿಹಿತವಾದ ಕರ್ಮಗಳನ್ನು ಅನುಷ್ಠಾನಮಾಡದವನು ಕೂಡಲೇ ಪತಿತನಾಗುವನು. ॥೧೦೧॥

ವಿಭೂತಿ, ರುದ್ರಾಕ್ಷಿ ಇವೇ ಆಭರಣಗಳಾಗಿ ಉಳ್ಳ ಶಿವಪಾದಪೂಜಕರು ನಮಗೆ ಮಾನ್ಯರು. ವಿಭೂತಿಯನ್ನು ಮೈತುಂಬಾ ಲೇಪಿಸಿಕೊಳ್ಳುವುದು ಪ್ರದೋಷ ಕಾಲದಲ್ಲಿ ಅತ್ಯಂತ ಪವಿತ್ರವಾಗಿದೆಯೆಂದು ಹೇಳಿದೆ. ॥೧೦೨॥

ಪೀತಾಂಬರವನ್ನೂ, ಶಂಖ, ಚಕ್ರ, ಗದೆ ಇವುಗಳನ್ನು ಧರಿಸಿದವನನ್ನೂ

ಕಿಂಚಾಯುಧೈಃ ಕಿಮೇತೈಸ್ತೈಃ ಕೃತ್ಯಮತ್ರ ಜನಾರ್ದನ ।
ಪೀತಾಂಬರೇಣ ಕಿಂ ಕೃತ್ಯಂ ಗರುಡೇನಾಪಿ ಕಿಂ ಫಲಂ ॥೧೦೪॥

ಕಿಂ ವಾಽಶಾಂಭವವೇಷದೂಷಿತತನುಂ ದೃಷ್ಟ್ವೈವ ದೌವಾರಿಕಾಃ
ಕ್ರುದ್ಧಾ ಏವ ಭವಂತಿ ತೇಷು ಸಹಸಾ ಶಾಂತಾಃ ಕದಾಪಿ ತ್ವಯಿ ।
ಇಂದ್ರೇ ವಾಪಿ ವಿಧೌ ವಿಧಿಪ್ರಭೃತಿಷು ವ್ಯಗ್ರಾಃ ಸ್ವದಂಡಾಹತೌ
ವ್ಯಗ್ರಾಃ ಕರ್ತುಮಮೀ ಸ್ವಕೇಽಪಿ ಸಹಸಾ ತಾವತ್ ಪ್ರವೃತ್ತಾಃ ಪರಂ ॥೧೦೫॥

ಕಃ ಶಾಂಭವೇಷು ಕುರುತೇಽಪ್ಯಭಿಮಾನವಾರ್ತಾಂ
ದುರ್ವೇಷದೂಷಿತತನುಸ್ತು ನ ತತ್ರ ಯಾತಿ ।
ದೈವಾದ್ಗತೋ ಯದಿ ತದಾ ಸ ನಿಪಾತಿತೋಽಪಿ
ತದ್ದಂಡಭೀಷಣರವೇಣ ನ ತಾಡನೇನ ॥೧೦೬॥

ಮನುಷ್ಯನು ಪ್ರದೋಷಕಾಲದಲ್ಲಿ ನೋಡಿದರೆ ದರಿದ್ರನಾಗುವನು. ಇದು ನಿಶ್ಚಯ. ॥೧೦೩॥

ಎಲೈ ಜನಾರ್ದನನಾದ ವಿಷ್ಣುವೇ, ಈ ಆಯುಧಗಳಿಂದ ಮತ್ತು ಪೀತಾಂಬರದಿಂದ ಏನು ಕೆಲಸ? ಅಲ್ಲದೆ ಈ ಗರುಡನಿಂದಾದರೂ ಏನು ಫಲ. ॥೧೦೪॥

ಶೈವರಿಗೆ ಉಚಿತವಲ್ಲದ ವೇಷಗಳಿಂದ ಭೂಷಿತರಾದವರ ಶರೀರವನ್ನು ನೋಡಿದೊಡನೆಯೇ ದ್ವಾರಪಾಲಕರು ಸಿಟ್ಟಾಗುತ್ತಾರೆ. ಅವರು ಕೆಲವು ವೇಳೆ ಈಗ ನಿನ್ನ ವಿಷಯದಲ್ಲಿ ಶಾಂತರಾಗುವರು. ಇಂದ್ರ ಮತ್ತು ಬ್ರಹ್ಮನೇ ಮೊದಲಾದವರು ಶೈವಭೂಷಣಗಳನ್ನು ಬಿಟ್ಟು ಇತರ ವೇಷಗಳನ್ನು ಧರಿಸಿದರೆ, ಅವರನ್ನು ದ್ವಾರಪಾಲಕರು ತಮ್ಮ ದಂಡಗಳಿಂದ ದಂಡಿಸುವರು. ಆಗ ಇವರು ಜಾಗ್ರತೆಯಾಗಿ ಶಾಸನ ಮಾಡುವುದರಲ್ಲಿ ಆಸಕ್ತರಾಗುವರು. ॥೧೦೫॥

ಶಿವನಲ್ಲಿ ವಿಶ್ವಾಸವಿದ್ದರೂ ಶೈವರಿಗೆ ಉಚಿತವಲ್ಲದ ವೇಷಗಳನ್ನು ಧರಿಸಿದವನು ಶಿವಾಲಯಕ್ಕೆ ಹೋಗಲು ಅರ್ಹನಲ್ಲ. ಅಕಸ್ಮಾತ್ ದೈವವಶದಿಂದ ಹೋದರೆ ಆಗ ದ್ವಾರಪಾಲಕರ ದಂಡಧ್ವನಿಯಿಂದಲೇ ಕೆಳಗೆ ಬೀಳುವನು. ॥೧೦೬॥

ಧನ್ಯಃ ಶಾಂಭವಪುಂಗವೇಷು ವಿನತೋ ಭೂತಿತ್ರಿಪುಂಡ್ರಾಂಕಿತೋ
ರುದ್ರಾಕ್ಷಾಭರಣೋ ಮಹೇಶ್ವರಮಹಾದೇವೇತಿ ವಾ ಸಂವದನ್ ।
ತೈರಪ್ಯರ್ಚಿತ ಏವ ಯಾತಿ ಭವನಂ ಶಂಭೋಃ ಪರಂ ಶಾಂಭವಃ
ತಂ ಕೋ ವಾ ಜಗತೀತಲೇ ನ ನಮತಿ ಶ್ರೀವಿಶ್ವನಾಥಪ್ರಿಯಂ ।೧೦೭॥

ಅಥ ಶ್ರೀಶಿವರಹಸ್ಯೇ ಹರಾಖ್ಯೇ ತೃತೀಯಾಂಶೇ ಉತ್ತರಾರ್ಧೇ
ಶೇಷರಾಜಸಂವಾದೇ ವಿಷ್ಣುಸನಂದನ ಸಂವಾದೇ ಶನಿಪ್ರದೋಷ
ಮಹಿಮಾವರ್ಣನಂ ನಾಮ ಷಡ್ವಿಂಶೋಽಧ್ಯಾಯಃ

ಯಾವನು ಶಂಕರಭಕ್ತರೊಳಗೆ ನಮ್ರನೂ ವಿಭೂತಿ ಮತ್ತು ರುದ್ರಾಕ್ಷಿಗಳನ್ನು ಧರಿಸಿದವನೂ ಆಗಿ ಯಾವಾಗಲೂ ಮಹಾದೇವ, ಶಂಕರ ಎಂದು ಶಂಕರನ ನಾಮಸ್ಮರಣೆಯನ್ನು ಮಾಡುವನೋ, ಅವನೇ ಧನ್ಯನು. ಅಂಥವರನ್ನು ಪೂಜಿಸುವುದರಿಂದ ಮನುಷ್ಯನು ಶಿವಸಾಯುಜ್ಯವನ್ನು ಹೊಂದುವನು. ಹೀಗಿರಲು ಅಂತಹ ಶ್ರೀವಿಶ್ವನಾಥನ ಪ್ರಿಯನಾದ ಶಾಂಕರನನ್ನು ಯಾವನುತಾನೇ ಪೂಜಿಸಲಾರನು ? ಎಂದು ಸನಂದನಮಹರ್ಷಿಯು ಮಹಾವಿಷ್ಣುವಿಗೆ ತಿಳಿಸಿದನೆಂದು ಯಾಜ್ಞವಲ್ಕ್ಯ ಮಹರ್ಷಿಯು ಜನಕರಾಜನಿಗೆ ಶನಿಪ್ರದೋಷದ ಮಹಿಮೆಯನ್ನು ವಿವರಿಸಿದನು. ॥೧೦೭॥

ಇಲ್ಲಿಗೆ ಶ್ರೀಶಿವರಹಸ್ಯದಲ್ಲಿ ಹರನಾಮಕವಾದ ಮೂರನೆಯ ಅಂಶದ ಉತ್ತರಾರ್ಧದಲ್ಲಿ
ಮಹಾಶೇಷ, ರಾಜರ್ಷಿ ಸಂವಾದ ಮತ್ತು ವಿಷ್ಣು ಸನಂದನ ಸಂವಾದರೂಪವಾದ
ಶನಿಪ್ರದೋಷಮಹಿಮಾವರ್ಣನವೆಂಬ ಇಪ್ಪತ್ತಾರನೆಯ ಅಧ್ಯಾಯವು
ಮುಗಿದುದು.

॥ ಶ್ರೀಃ ॥

ಅಥ ಶ್ರೀಶಿವರಹಸ್ಯೇ

ತೃತೀಯಾಂಶೇ

ಉತ್ತರಾರ್ಧೇ

ಸಪ್ತವಿಂಶೋಽಧ್ಯಾಯಃ

॥ ಯಾಜ್ಞವಲ್ಕ್ಯ ಉವಾಚ ॥

ಇತಿ ತಸ್ಯ ವಚಃ ಶ್ರುತ್ವಾ ಸೋಽಪಿ ನಾರಾಯಣಸ್ತದಾ ।
ಯುಕ್ತಮುಕ್ತಮಿತಿ ಪ್ರೀತ್ಯಾ ತಮಾಹ ಪುನರಾದರಾತ್ ॥೧॥

ನರಸಾಮಾನ್ಯವೇಷೇಣ ಗಮ್ಯತೇ ಯದಿ ತತ್ರ ಮೇ ।
ಪ್ರವೇಶೋ ದುರ್ಲಭೋ ನೂನಂ ಸಾಯಂಕಾಲೇ ವಿಶೇಷತಃ ॥೨॥

ಸಾಯಂ ಶನಿತ್ರಯೋದಶ್ಯಾಂ ಶಾಂಭವಾಃ ಕೋಟಿಶಃ ಶಿವಂ ।
ಪೂಜಯಿಷ್ಯಂತಿ ರಾಜಾಪಿ ಸಾಮಾತ್ಯಃ ಪೂಜಯಿಷ್ಯತಿ ॥೩॥

ಇಪ್ಪತ್ತೇಳನೆಯ ಅಧ್ಯಾಯ

ಹೀಗೆ ಆ ಸನಂದನ ಮುನಿಯ ಮಾತನ್ನು ಕೇಳಿದ ಮೇಲೆ ನಾರಾಯಣನು, ತಾವು ಉಚಿತವಾಗಿ ಹೇಳಿದಿರಿ ಎಂದು ಸಂತೋಷಪಡುತ್ತಾ, ಮತ್ತೆ ಆದರದಿಂದ ಅವನೊಡನೆ ಹೀಗೆ ಮಾತನಾಡಿದನು. ॥೧॥

ನಾನು ಸಾಮಾನ್ಯ ಮನುಷ್ಯನ ವೇಷದಿಂದ ಆ ಶಿವದೇವಾಲಯಕ್ಕೆ ಹೋದರೆ ಅದರಲ್ಲೂ ವಿಶೇಷವಾಗಿ ಸಂಜೆಯ ಹೊತ್ತು ಪ್ರಯಾಣಮಾಡಿದರೆ ಖಂಡಿತವಾಗಿಯೂ ನನಗೆ ಒಳಕ್ಕೆ ಪ್ರವೇಶಮಾಡಲು ಕಷ್ಟವಾಗಬಹುದು. ॥೨॥

ಶನಿತ್ರಯೋದಶಿಯ ದಿನ ಸಂಜೆ ಈಶ್ವರನ ಗುಡಿಯಲ್ಲಿ ಶಾಂಭವರು ಶಂಕರನನ್ನು ಪೂಜಿಸುವರು. ಹಾಗೂ ಆ ರಾಜನೂ ತನ್ನ ಮಂತ್ರಿಗಳೊಂದಿಗೆ ಮಹಾದೇವನನ್ನು ಪೂಜಿಸುವನು. ॥೩॥

ರಾಜದಾರಾಃ ಕುಮಾರಾಶ್ಚ ರಾಜ್ಞಃ ಪ್ರಾಜ್ಞಬಲಾನ್ವಿತಾಃ ।
ತೇಷು ಸತ್ಸು ಪ್ರವೇಶೋ ಮೇ ಕಥಂ ವಾ ಸ್ಯಾತ್ ಶಿವಾಲಯೇ ॥೪॥

ಅಮಾನುಷೇಣ ರೂಪೇಣ ಗಮನಂ ಸ್ಯಾತ್ ಶಿವಾಲಯೇ ।
ಕೇನ ರೂಪೇಣ ಗಂತವ್ಯಮಿತಿ ಚಿಂತಾ ಪ್ರಜಾಯತೇ ॥೫॥

ಮತ್ವಾ ವಿಲಕ್ಷಣಂ ರೂಪಂ ಶಾಂಭವಾಶ್ಚೇದ್ಯತಾ ಯದಿ ।
ತದಾ ಖಲು ಶಿವದ್ರೋಹಸ್ತೇನ ಸ್ಯಾನ್ನರಕೇ ಸ್ಥಿತಿಃ ॥೬॥

ಶಿವದ್ರೋಹರತಾಃ ಪೂರ್ವಂ ನರಕೇ ಪತಿತಾಃ ಖಲು ।
ತೇಷಾಂ ನಿವೃತ್ತಿರದ್ಯಾಪಿ ನರಕೇಭ್ಯೋ ನ ಜಾಯತೇ ॥೭॥

ಪಾಪಾಂತರಾಣಿ ನಶ್ಯಂತಿ ಧರ್ಮಭೇದೈಃ ಕದಾಚನ ।
ಶಿವದ್ರೋಹಾರ್ಜಿತಂ ಪಾಪಂ ನ ನಶ್ಯತ್ಯೇವ ಸರ್ವಥಾ ॥೮॥

ಅಲ್ಲಿ ಆ ರಾಜನ ಹೆಂಡಿರು, ಮಕ್ಕಳು, ಮತ್ತು ಆತನ ಅಭಿಪ್ರಾಯವನ್ನು ಅನುಸರಿಸಿ ನಡೆಯುವ ಸೇನೆಗಳೂ ಸಹ ಅಲ್ಲಿ ಇರುವಾಗ ಈಶ್ವರ ದೇವಾಲಯವನ್ನು ನಾನು ಹೇಗೆ ಪ್ರವೇಶಿಸುವೆನು ? ॥೪॥

ಸ್ವಾಭಾವಿಕವಾಗಿ ಮನುಷ್ಯ ರೂಪವನ್ನು ಬಿಟ್ಟು ಬೇರೆ ವೇಷದಿಂದ ಈಶ್ವರನ ಗುಡಿಯನ್ನು ಪ್ರವೇಶಿಸಬೇಕಾಗುತ್ತದೆ. ಯಾವ ರೂಪವನ್ನು ಧರಿಸಿ ಹೋಗಬೇಕೆಂದು ತಿಳಿಯದೇ ತುಂಬಾ ಯೋಚನೆಯಾಗಿದೆ. ॥೫॥

ವಿಲಕ್ಷಣವಾದ ರೂಪವನ್ನು ತಾಳಿ ನಾನು ಹೋದರೆ ಅದನ್ನು ಮಹೇಶ್ವರ ಭಕ್ತರು ಒಂದು ವೇಳೆ ತಿಳಿದರೆ ಆಗ ಶಿವನಿಗೆ ದ್ರೋಹಮಾಡಿದಂತೆ ಆಗುತ್ತದೆ. ಆ ಶಿವದ್ರೋಹದಿಂದ ನರಕವಾಸವು ಸಂಭವಿಸಬಹುದು. ॥೬॥

ಹಿಂದೆ ಶಿವನಿಗೆ ದ್ರೋಹವನ್ನೆಸಗಿದವರು ನರಕವನ್ನು ಹೊಂದಿರುವರಷ್ಟೇ. ಅವರಿಗೆ ಈವರೆಗೂ ನರಕಗಳಿಂದ ಬಿಡುಗಡೆಯೇ ಆಗಲಿಲ್ಲ. ॥೭॥

ಕೆಲವು ವೇಳೆ ಧರ್ಮ ಭೇದಗಳಿಂದ ಬೇರೆ ಬೇರೆ ಪಾಪಗಳು ನಷ್ಟವಾಗುವುವುಂಟು. ಆದರೆ ಶಿವನಿಗೆ ಮೋಸಮಾಡುವುದರಿಂದ ಹುಟ್ಟಿದ ಪಾತಕವು ನಿಶ್ಚಯವಾಗಿಯೂ ಯಾವುದರಿಂದಲೂ ನಾಶವಾಗುವುದಿಲ್ಲ. ॥೮॥

ಶಿವಾರ್ಚನಸ್ಯ ವಿಘ್ನಶ್ಚೇತ್ಕ್ರಿಯತೇ ತೇನ ಮಾಂ ಯಮಃ ।
ನಯಿಷ್ಯತಿ ನ ಸಂದೇಹೋ ಘೋರಂ ರೌರವಮುದ್ಭುತಂ ॥೯॥

ನ ರೌರವಾನ್ನಿರ್ಗಮೋಽಪಿ ಕದಾಚಿದಪಿ ಸರ್ವಥಾ ।
ಭವಿಷ್ಯತ್ಯತ ಏವಾದ್ಯ ಸಂಕಟಂ ಸಮುಪಾಗತಂ ॥೧೦॥

ಶಿವಾರ್ಚನಪರಿತ್ಯಾಗಸ್ತದ್ವಿಘಾತಶ್ಚ ಸರ್ವಥಾ ।
ಪ್ರಾಯಶ್ಚಿತ್ತಸಹಸ್ರೈರ್ವಾ ನ ಶಾಂತಿಮುಪಯಾಸ್ಯತಿ ॥೧೧॥

ಮನ್ಯೇ ಪಾತಕಪಾತಕಂ ಬಹುವಿಧಾಪಾರವ್ಯಥಾಸಾಧನಂ ।
ಸಾಯಂ ಶಂಕರಲಿಂಗಪೂಜನಪರಿತ್ಯಾಗಂ ತಮುಪ್ಯದ್ಭುತಂ
ಸಾಕ್ಷಾದ್ರೌರವಹೇತುಭೂತಮಸಕೃತ್ಕಾಲೋಽಪಿ ತಂ ಪಾತಕಂ ।
ಮತ್ವಾ ವಿಸ್ಮಯಮೇತಿ ತೇನ ಸಹಸಾ ತಸ್ಮಾನ್ನಿವೃತ್ತಿಶ್ಚ ನ ॥೧೨॥

ಈಶ್ವರಪೂಜೆಗೆ ನಾನು ತೊಂದರೆ ಮಾಡಿದರೆ ಆಗ ನನ್ನನ್ನು ಯಮನು ಭಯಂಕರವಾದ ರೌರವವೆಂಬ ನರಕಕ್ಕೆ ಒಯ್ದು ಹಾಕುವನು. ಇದರಲ್ಲಿ ಸ್ವಲ್ಪವೂ ಸಂಶಯವಿಲ್ಲ. ॥೯॥

ಆ ರೌರವ ನರಕದಿಂದ ಯಾವಾಗಲೂ ಬಿಡುಗಡೆಯೇ ಆಗಲಾರದು. ಆದುದರಿಂದ ನಿಜವಾಗಿ ವಿಪತ್ತು ಈಗ ಒದಗಿದೆ. ॥೧೦॥

ಶಿವಪೂಜೆಯನ್ನು ಬಿಡುವಿಕೆ, ಮತ್ತು ಆ ಪೂಜೆಗೆ ತೊಂದರೆ ಮಾಡುವಿಕೆ, ಈ ಎರಡು ಬಗೆಯಿಂದುಂಟಾದ ಪಾಪವು ಅನೇಕ ಪ್ರಾಯಶ್ಚಿತ್ತಗಳನ್ನು ಮಾಡಿಕೊಂಡರೂ ನಾಶವಾಗುವುದಿಲ್ಲ. ॥೧೧॥

ಸಂಜೆಯ ಹೊತ್ತು ಶಿವಲಿಂಗಪೂಜೆ ಮಾಡುವುದನ್ನು ಬಿಡುವಿಕೆಯು ಅನಂತ ವಿಪತ್ತಿಗೆ ಸಾಧನವಾದುದು. ಅಲ್ಲದೆ ಇದು ಪಾಪಗಳಲ್ಲೆಲ್ಲಾ ಹೆಚ್ಚಿನ ಪಾಪವಾಗಿದೆ. ಅದ್ಭುತವೂ, ಭಯಂಕರವೂ, ಆದುದು ಇದೇ. ಈ ಪಾಪವು ರೌರವ ನರಕಕ್ಕೆ ಕಾರಣವೂ ಆಗಿರುತ್ತದೆ. ಯಮನೂ ಸಹ ಅನೇಕಸಾರಿ ಈ ಪಾಪದ ಅದ್ಭುತವನ್ನು ತಿಳಿದು ಆಶ್ಚರ್ಯವನ್ನು ಹೊಂದುವನು. ಆದರೆ ಈ ಪಾಪದಿಂದ ಬಿಡುಗಡೆಯು ಮಾತ್ರ ಆಗಲಾರದು. ॥೧೨॥

ಕಿಂ ತೇನೇತಿ ವದಂತಿ ಚೇದತಿಖಲಾಃ ಕಿಂ ತಾವತಾ ತತ್ಸಮಂ
ತಸ್ಮಾದಪ್ಯಧಿಕಂ ಚ ಪಾತಕವರಂ ನೈವ ಪ್ರಪಶ್ಯಾಮ್ಯತಃ ।
ನ ಸ್ಯಾದೇವ ಮಹೇಶ್ವರಾರ್ಚನಪರಿತ್ಯಾಗೇ ಮತಿಃ ಸರ್ವಥಾ
ಸದ್ವಂಶಪ್ರಭವಸ್ಯ ಸಾ ಭವತಿಚೇತ್ ಸ್ಯಾಜ್ಜಾರಜಾನಾಂ ಪರಂ ॥೧೩॥

ನಿಧಾನಮಿದಮೇವ ನಃ ಶಿವಪದಾಂಬುಜಾರಾಧನಂ
ತದೇವ ಸುರಭೂರುಹಃ ಸುರಮಣಿರ್ಧೇನುಃ ಸುರಾಣಾಮಪಿ ।
ತೇನೈವಾಮರಜೀವನಂ ಸುರತರುಂ ಸೂತೇ ತದೈವಾದ್ಭುತಂ
ತಂ ಚಿಂತಾಮಣಿಮಂತತೋ ನವನಿಧೀನಾಂ ದೇವತಾನಾಂ ಸುಧಾಂ ॥೧೪॥

ನ ಶಿವಾರ್ಚನಸಾಮರ್ಥ್ಯಂ ಜ್ಞಾಯತೇ ಮನುಜೈಃ ಸುರೈಃ ।
ಗಂಧರ್ವೈರಪಿ ತತ್ತಾವತ್ ನಿಧಾನಮಿತಿ ಮೇ ಮತಿಃ ॥೧೫॥

ಶಿವಪೂಜೆಯಿಂದ ಏನೂ ಫಲವಿಲ್ಲವೆಂದು ದುರ್ಜನರು ಆಡಿಕೊಂಡ ಮಾತ್ರಕ್ಕೆ ಅದು ಪ್ರಯೋಜನ ರಹಿತವಾಗುವುದಿಲ್ಲ. ಅಲ್ಲದೆ ಹಾಗೆ ದೂಷಿಸುವುದಕ್ಕಿಂತ ಅಧಿಕವಾದ ಪಾಪವು ಬೇರೆ ಇಲ್ಲ. ಒಳ್ಳೆಯ ಕುಲದಲ್ಲಿ ಹುಟ್ಟಿದವನಿಗೆ ಮಹೇಶ್ವರ ಪೂಜೆಯನ್ನು ಬಿಡಬೇಕೆಂಬ ಬುದ್ಧಿ ಸರ್ವಥಾ ಹುಟ್ಟಲಾರದು. ಒಂದು ವೇಳೆ ಹಾಗೆ ಮತಿಯು ಉಂಟಾದರೆ ಆತನು ಜಾರವೃತ್ತಿಯಿಂದ ಜನಿಸಿದವನೆಂದು ಹೇಳಬಹುದು. ॥೧೩॥

ನಮಗೆ ಆಶ್ರಯವಾದುದು ಈಶ್ವರನ ಪಾದಪೂಜೆ. ಅದೇ ಕಲ್ಪವೃಕ್ಷ, ಕಾಮಧೇನು, ಚಿಂತಾಮಣಿ ಎಲ್ಲವೂ ಆಗಿದೆ. ದೇವತೆಗಳಿಗೂ ಕೂಡ ಈ ಶಿವಪಾದ ಪೂಜೆಯೇ ಜೀವನವಾಗಿದೆ. ಇದು ಕಲ್ಪವೃಕ್ಷವನ್ನೂ ಸೃಷ್ಟಿಸುತ್ತದೆ. ಇದೇ ಇದರಲ್ಲಿರುವ ಅದ್ಭುತಮಹಿಮೆ. ದೇವತೆಗಳಿಗೆ, ಚಿಂತಾಮಣಿ, ಅಮೃತ, ನವನಿಧಿ ಇವೆಲ್ಲಾ ಈ ಶಿವಪೂಜೆಯೇ ಹೊರತು ಬೇರೆಯಲ್ಲ. ॥೧೪॥

ಶಂಕರಾರ್ಚನೆಯ ಸಾಮರ್ಥ್ಯವನ್ನು ಮನುಷ್ಯರು, ದೇವತೆಗಳೂ, ತಿಳಿಯಲಾರರಾಗಿದ್ದಾರೆ. ಗಂಧರ್ವರಿಗೂ ಸಹ ಶಿವಪೂಜೆಯೇ ಆಶ್ರಯವೆಂದು ನನ್ನ ಅಭಿಪ್ರಾಯ. ॥೧೫॥

ಸಂಜೀವಿನೀ ಸಾ ಶಿವಲಿಂಗಪೂಜಾ
ಲಿಂಗಾರ್ಚನಾಕಾರಸುಧಾನಿಧಾನಂ ।
ಲೋಕೇ ಪರಂ ದುರ್ಲಭಮೇವ ನೂನಂ
ತದ್ಯೇನ ಲಬ್ಧಂ ಸುಕೃತೀ ಕೃತಾರ್ಥಃ ॥೧೬॥

ವಂದೇ ಶಂಕರಪೂಜಕಾಂಘ್ರಿಕಮಲಂ ವಂದೇ ಶಿವಾರಾಧನ
ಧ್ಯಾನಾರಾಧನಸಾಧಕಾನಿ ಬಹುಧಾ ತತ್ಪಾದುಕಾರಾಧಕಾನ್ ।
ತತ್ಪಾದಾಬ್ಜರಜೋಽಪಿ ಪಾವನತರಂ ತತ್ಯೇವ್ಯಮಿತ್ಯಾದರಾತ್
ತಸ್ಮಾದೀಶಪದಾಂಬುಜಾರ್ಚನಪರೋ ಧನ್ಯೋಽತಿಮಾನ್ಯೋ ಮಮ ॥೧೭॥

ಜಾತಿಸ್ತತ್ರ ವಿಚಾರ್ಯತೇ ನ ಚ ಮಯಾ ಯಃ ಶಂಕರಾರಾಧಕಃ
ಸಾಮಾನ್ಯೇನ ಸ ಏವ ಮೇ ಪ್ರಿಯಸಖಾ ತತ್ರ ದ್ವಿಜಶ್ಚೇತ್ತದಾ ।
ಮಾನ್ಯಃ ಸ್ಯಾತ್ ಸಮುದಾ ದ್ವಿಜೋ ಯದಿ ಭವೇತ್ ವಿಪ್ರಃ ಶಿವಾರಾಧಕಃ
ತಂ ಮನ್ಯೇ ಗುರುಮೀಶ್ವರಂ ಮಮ ಸಮೋ ಪೂಜ್ಯಂ ಪರಂ ದೈವತಂ ॥೧೮॥

ಸಂಜೀವನೌಷಧವೆಂದರೆ ಈಶ್ವರಲಿಂಗಪೂಜೆಯೇ ಹೊರತು ಬೇರೆಯಲ್ಲ. ಜಗತ್ತಿನಲ್ಲಿ ಲಿಂಗಾರ್ಚನರೂಪವಾದ ಅಮೃತದ ನಿಧಿಯು ಸಿಗುವುದು ಕಷ್ಟ. ಅಂತಹ ದುರ್ಲಭ ನಿಧಿಯನ್ನು ಹೊಂದಿದ ಮನುಷ್ಯನೇ ಧನ್ಯನು. ||೧೬||

ಪರಮೇಶ್ವರನನ್ನು ಪೂಜಿಸುವವನ ಪಾದಕಮಲಕ್ಕೆ ಎರಗುವೆನು. ಮತ್ತು ಶಿವಧ್ಯಾನ, ಆವನ ಪೂಜೆಯ ಉಪಕರಣಗಳು ಇವುಗಳಿಗೂ ನಮಸ್ಕರಿಸುತ್ತೇನೆ. ಅಲ್ಲದೆ ಹರಭಕ್ತರ ಪಾದುಕೆಗಳನ್ನು ಪೂಜಿಸುವ ವ್ಯಕ್ತಿಗಳಿಗೂ ವಿಶೇಷವಾಗಿ ತಲೆಬಾಗುವೆನು. ಆ ಈಶ್ವರ ಪೂಜಕರ ಪಾದಧೂಳಿಯು ಬಹು ಪವಿತ್ರವಾದುದು. ಆದುದರಿಂದ ಅದನ್ನು ಶಿರಸ್ಸಿನಿಂದ ಧರಿಸಬೇಕು. ಹಾಗೆ ಮಾಡಿ ಶಿವನನ್ನು ಭಜಿಸಿದ ಮನುಷ್ಯನು ಕೃತಾರ್ಥನಾಗುವನಲ್ಲದೆ ನನಗೆ ಮಾನ್ಯನೂ ಧನ್ಯನೂ ಎನಿಸುವನು. ||೧೭||

ಶಂಕರಾರಾಧಕನು ಯಾವ ಜಾತಿಯವನಾದರೂ ಅಡ್ಡಿಯಿಲ್ಲ. ಜಾತಿನಿಮಿತ್ತವಾದ ವಿಧಿನಿಷೇಧಗಳನ್ನು ನಾನು ವಿಚಾರಿಸುವುದಿಲ್ಲ. ಪ್ರಾಯಶಃ ಪರಮೇಶ್ವರ ಪೂಜಕನು ನನಗತ್ಯಂತ ಪ್ರಿಯನು. ಆದರಲ್ಲಿಯೂ ಆತನು ದ್ವಿಜನಾದರೆ ನಾನು ಅವನಿಗೆ ಹೆಚ್ಚು ಗೌರವವನ್ನು ಕೊಡುತ್ತೇನೆ. ಅದರಲ್ಲಿಯೂ ಶಿವಪೂಜಕನೂ ಆಗಿ

ಕೋ ವಾ ಶಂಕರಪೂಜಕೇನ ಸದೃಶೋ ವಿಪ್ರೇಣ ತುಲ್ಯೋ ಭವೇತ್
ಸಾಕ್ಷಾದ್ಬ್ರಾಹ್ಮಣರೂಪಮೇತ್ಯ ಭಗವಾನ್ ಶಂಭುಃ ಶಿವಾರಾಧನಂ ।
ಕೃತ್ವಾ ದರ್ಶಯತಿ ಪ್ರಯೋಜನಮಿದಂ ಶ್ರೇಷ್ಠಂ ನರಾಣಾಮಿತಿ
ಪ್ರಾತಃ ಸಾಯಮುಮಾಸಹಾಯಭಜನಂ ಕರ್ತವ್ಯಮಿತ್ಯಾದರಾತ್ ॥೧೯॥

ನ ವ್ಯಗ್ರಾಣಿ ಮಮೇಂದ್ರಿಯಾಣಿ ಸಕೃದಪ್ಯಭ್ಯರ್ಚಿತೇ ಶಾಂಭವೇ
ತತ್ಸಂಭಾವನಯಾ ಭವೋಽಪಿ ಸ ಭವೇತ್ ಸಂಭಾವಿತಃ ಶಾಂಭವಂ ।
ರೂಪಂ ದುರ್ಲಭಮೇವ ಶಂಭುಭುವನಂ ತದ್ರೂಪಮಿತ್ಯೇವ ಮೇ
ಬುದ್ಧಿಸ್ತತ್ಪದಪದ್ಮರೇಣುತರಣಿರ್ಮೋಹಾಂಧಕಾರಾಪಹಃ ॥೨೦॥

ವಿಪ್ರನೂ ಆಗಿದ್ದರೆ ಆತನನ್ನು ಗುರುವನ್ನಾಗಿ ಭಾವಿಸುತ್ತೇನೆ. ಅವನು ಪರಮ ದೇವತೆಯು, ನಾನವನನ್ನು ಪೂಜಿಸುವೆನು. (ಜನ್ಮನಾ ದ್ವಿಜತ್ವಂ ಕರ್ಮಣಾ ವಿಪ್ರತ್ವಂ ಎಂಬ ವಚನವನ್ನು ಅನುಸರಿಸಿ ಇಲ್ಲಿ ದ್ವಿಜನಿಗೂ ವಿಪ್ರನಿಗೂ ಪರಸ್ಪರ ವ್ಯತ್ಯಾಸ ಹೇಳಿದೆ ಎಂದು ತಿಳಿಯಬಹುದು.) ॥೧೮॥

ಯಾವನು ಮಹಾದೇವ ಭಕ್ತನಿಗೆ ಸಮಾನವಾಗಿರುವನೋ ಅವನು ಬ್ರಾಹ್ಮಣನ ಹೋಲಿಕೆಯನ್ನು ಹೊಂದುತ್ತಾನೆ. ಸಾಕ್ಷಾತ್ ಪರಮೇಶ್ವರನು ತಾನು ಬ್ರಾಹ್ಮಣರೂಪವನ್ನು ಹೊಂದಿ, ತಾನು ಶಿವಪೂಜೆಮಾಡಿ, "ಇದು ಶ್ರೇಷ್ಠವಾಗಿದೆ. ಮನುಷ್ಯರಿಗೆ ಇದರಿಂದ ಪ್ರಯೋಜನವುಂಟು" ಎಂಬುದನ್ನು ಲೋಕಕ್ಕೆ ತೋರಿಸಿ ಕೊಡುತ್ತಾನೆ. ಆದುದರಿಂದ ಮುಂಜಾನೆ ಮತ್ತು ಸಂಜೆ ಉಮಾಪತಿಯ ಭಜನೆಯನ್ನು ಆದರಪೂರ್ವಕವಾಗಿ ಮಾಡಲೇಬೇಕು. ॥೧೯॥

ಶಾಂಭವಾಕಾರದಲ್ಲಿ ಬಂದಿರುವ ಶಂಕರನ ಆರಾಧನೆಯಲ್ಲಿ ನನ್ನ ಇಂದ್ರಿಯಗಳು ಆಸಕ್ತವಾಗಲಿಲ್ಲ. ಚಂದ್ರಶೇಖರನ ಪೂಜಕನನ್ನು ಮರ್ಯಾದೆಯಿಂದ ಕಂಡರೆ ಅದರಿಂದ ಶಿವನು ಸಂಭಾವಿತನಾಗುತ್ತಾನೆ. ಲೋಕದಲ್ಲಿ ಹರಿಭಕ್ತನ ಜನ್ಮವು ಬಹಳ ದುರ್ಲಭ, ಅವನು ಶಿವಸ್ವರೂಪಿಯೇ ನಿಜ. ಆ ಮಹಾದೇವ ಭಕ್ತನ ಪಾದಧೂಳಿಯೆಂಬ ಸೂರ್ಯನು ಮೋಹವೆಂಬ ಕತ್ತಲೆಯನ್ನು ನಾಶಮಾಡುತ್ತಾನೆ. ಎಂದು ನಾನು ತಿಳಿಯುತ್ತೇನೆ. ॥೨೦॥

ಹಂತ್ಯಾಪತ್ಕುಲಮೇಕದಾ ಶಿವರತೋ ದೃಷ್ಟೋಽತಿಭಕ್ತ್ಯಾ ನತಃ
ಸಂಪದ್ವೃದ್ಧಿಕರಃ ಸ ಪಾಪನಿಕರಧ್ವಾಂತಪ್ರಚಂಡಾಂಶುಮಾನ್ ।
ತಸ್ಮಾತ್ತಚ್ಚರಣಾಂಬುಜಾರ್ಚನರತಾಃ ಸಂತಃ ಕ್ವಚಿತ್ ಸಂತಿ ತೇ
ಶಾಂತಾಸ್ತೇ ತು ಕೃತಾಂತಭೀತಿರಹಿತಾಸ್ತೇ ತಾವದತ್ಯುತ್ತಮಾಃ ॥೨೧॥

ಇತ್ಯಾಕರ್ಣ್ಯ ವಚಸ್ತಸ್ಯ ಸನಕೋ ಹೃಷ್ಟಮಾನಸಃ ।
ಗಂಭೀರಯಾ ಗಿರಾ ಪ್ರಾಹ ನಾರಾಯಣಮನಾಕುಲಃ ॥೨೨॥

ಸತ್ಯಮುಕ್ತಮಿದಂ ವಿಷ್ಣೋ ತತ್ತ್ವಜ್ಞೋಽಸಿ ನ ಸಂಶಯಃ ।
ಶಿವಪ್ರಸಾದಸಂಪನ್ನಸ್ತ್ವಮಿತ್ಯೇವ ಹಿ ಮೇ ಮತಿಃ ॥೨೩॥

ಜಾತಕಲ್ಪಃ ಪ್ರದೋಷೋಽಪಿ ಸ್ನಾತ್ವಾ ಸತ್ವರಮಾದರಾತ್ ।
ಉದ್ಧೂಲನತ್ರಿಪುಂಡ್ರಾಭ್ಯಾಂ ರುದ್ರಾಕ್ಷೈಶ್ಚಾಂಕಿತೋ ಭವ ॥೨೪॥

ಹರಭಕ್ತರನ್ನು ಒಂದು ಬಾರಿ ದರ್ಶನಮಾಡಿದರೆ ನಮ್ಮ ಸಮಸ್ತ ವಿಪತ್ತುಗಳೂ ಪರಿಹಾರವಾಗುತ್ತವೆ. ಅತಿಭಕ್ತಿಯಿಂದ ಅವನನ್ನು ನಮಸ್ಕರಿಸಿದವನು ಐಶ್ವರ್ಯವಂತನಾಗುತ್ತಾ ಆತನಿಗೆ ಸಂಪತ್ತು ಹೆಚ್ಚುತ್ತದೆ. ಅವನು ಪಾಪಗಳ ರಾಶಿಯೆಂಬ ಅಂಧಕಾರವನ್ನು ಪ್ರತಿಭಟಿಸುವ ಪ್ರಚಂಡಸೂರ್ಯನಾಗುತ್ತಾನೆ. ಆದುದರಿಂದ ಶಾಂಭವರ ಪಾದಪೂಜೆಗಳಲ್ಲಿ ಆಸಕ್ತರಾದ ಸತ್ಪುರುಷರು ಎಲ್ಲಿಯೋ ಕೆಲವು ಕಡೆ ಈಗಲೂ ಇದ್ದಾರೆ. ಅವರು ಶಾಂತಸ್ವಭಾವವುಳ್ಳವರು. ಮತ್ತು ಅವರಿಗೆ ಯಮನಿಂದ ಭಯಲೇಶವೂ ಇಲ್ಲ. ಅವರೇ ಅತಿಶ್ರೇಷ್ಠರಾದವರು. ಸರ್ವರಿಗೂ ಅವರು ಉತ್ತಮರಾಗಿದ್ದಾರೆ.'' ಎಂದು ವಿಷ್ಣುವು ನುಡಿದನು. ||೨೧||

ಹೀಗೆ ಹೇಳಿದ ನಾರಾಯಣನ ಮಾತನ್ನು ಕೇಳಿ ಸನಕ ಮುನಿಯು ಸಂತೋಷಗೊಂಡನು. ಹಾಗೆಯೇ ಸಮಾಧಾನ ಮನಸ್ಕನಾಗಿ ಶ್ರೀವಿಷ್ಣುವನ್ನು ಕುರಿತು ಗಂಭೀರವಾದ ವಾಣಿಯಿಂದ ಹೀಗೆಂದನು. ||೨೨||

ವಿಷ್ಣುವೇ! ನೀನು ನಿಜವಾದುದನ್ನು ಹೇಳಿದೆ. ನೀನು ತತ್ವವನ್ನು ನಿಶ್ಚಯವಾಗಿಯೂ ತಿಳಿದಿರುವೆ. ನೀನು ಶಿವನ ಅನುಗ್ರಹವನ್ನು ಹೊಂದಿದವನೆಂದು ನನಗೆ ತೋರುತ್ತದೆ. ||೨೩||

ಪ್ರದೋಷಕಾಲವು ಈಗ ಉತ್ಪನ್ನವಾದಹಾಗಿದೆ. ಜಾಗ್ರತೆ ನೀನು ಸ್ನಾನ

ದುಕೂಲೇ ಪರಿಧಾಯಾಶು ಗೃಹೀತ್ವಾ ಬಿಲ್ವಪಲ್ಲವಾನ್ ।
ಚಲಾತಿತ್ವರಯಾ ಪಾತ್ರೇ ಗೃಹೀತ್ವಾ ಜಲಮುಜ್ವಲಂ ॥೨೫॥

ಕಮಲೇ ವಿಮಲೇ ತ್ವಂ ಚ ಭೂತಿರುದ್ರಾಕ್ಷಭೂಷಿತೇ ।
ತಿಲಾಕ್ಷತಾನ್ ಗೃಹೀತ್ವಾಶು ಚಲ ನಾರಾಯಣಾನ್ವಿತಾ ॥೨೬॥

ಇತ್ಯುಕ್ತಃ ಸೋಽಪಿ ಸಂತುಷ್ಟಸ್ತಥೇತ್ಯುಕ್ತ್ವಾ ಹರಿಸ್ತದಾ ।
ಯಯೌ ಸ ಪದ್ಮಯಾ ಸಾಕಂ ಸನಕಾದ್ಯೈಶ್ಚ ಸಂಯುತಃ ॥೨೭॥

ತತಃ ಪ್ರವಿಷ್ಟೋ ನಿರ್ವಿಘ್ನಂ ವಿಷ್ಣುರ್ದೌರ್ವಾರಿಕೈರಪಿ ।
ಅವಾರಿತೋ ಮಹಾದೇವಮಂದಿರಂ ಸುಂದರಂ ಯಯೌ ॥೨೮॥

ಕರ್ಪೂರದೀಪಮಾಲಾಭಿರಭಿತಃ ಪರಿವೇಷ್ಟಿತಂ ।
ರತ್ನತೋರಣಸಂಕೀರ್ಣಂ ರತ್ನದ್ವಾರವಿರಾಜಿತಂ ॥೨೯॥

ಮಾಡು, ಅನಂತರ ಭಸ್ಮ ತ್ರಿಪುಂಡ್ರವನ್ನೂ ರುದ್ರಾಕ್ಷಿ ಮಾಲೆಗಳನ್ನೂ ಸಹ ಬೇಗ ಧರಿಸು. ॥೨೪॥

ಬೇಗ ಶುಭ್ರವಾದ ಮಡಿ ಪಂಚೆಗಳನ್ನು ಉಟ್ಟುಕೋ. ಆಮೇಲೆ ಬಿಲ್ವ ಪತ್ರೆಗಳನ್ನೂ, ಒಂದು ಪಾತ್ರೆಯಲ್ಲಿ ಶುದ್ಧೋದಕವನ್ನು ತೆಗೆದುಕೊಂಡು ಜಾಗ್ರತೆ ಹೊರಡು. ॥೨೫॥

ಎಲೌ, ಪವಿತ್ರಳಾದ ಲಕ್ಷ್ಮೀದೇವಿಯೇ, ನೀನೂ ಸಹ ವಿಭೂತಿ, ರುದ್ರಾಕ್ಷಿ ಇವುಗಳಿಂದ ಭೂಷಿತಳಾಗಿ ತಿಲಾಕ್ಷತೆಗಳನ್ನು ತೆಗೆದುಕೊಂಡು ಬೇಗ ಬೇಗ ಪೂಜೆಗಾಗಿ ನಾರಾಯಣನೊಡನೆ ಹೊರಡು ಎಂದು ಸನಕನು ಹೇಳಿದನು. ॥೨೬॥

ಸನಕನು ಹೀಗೆ ಹೇಳಿದನಂತರ ವಿಷ್ಣುವೂ ತೃಪ್ತನಾಗಿ, ಹಾಗೆಯೇ ಆಗಲೆಂದು ಒಪ್ಪಿಕೊಂಡನು. ಬಳಿಕ ಆವನು ಲಕ್ಷ್ಮಿಯೊಡನೆಯೂ ಮತ್ತು ಸನಕಾದಿ ಋಷಿಗಳಿಂದಲೂ ಕೂಡಿದವನಾಗಿ ಶಿವಪೂಜೆಗಾಗಿ ಹೊರ ಹೊರಟನು. ॥೨೭॥

ಬಳಿಕ ವಿಷ್ಣುವು ಯಾವ ತೊಂದರೆಯೂ ಇಲ್ಲದೇ ಒಳಕ್ಕೆ ಪ್ರವೇಶಿಸಿದನು. ಬಾಗಿಲು ಕಾಯುವವರು ಯಾರೂ ತಡೆಯಲಿಲ್ಲ. ಆಗ ನಾರಾಯಣನು ರಮಣೀಯವಾದ ಈಶ್ವರ ದೇವಾಲಯದ ಒಳಹೊಕ್ಕನು. ॥೨೮॥

ಆ ಶಿವ ದೇವಸ್ಥಾನದಲ್ಲಿ ಕರ್ಪೂರ ದೀಪಗಳನ್ನು ಹಚ್ಚಿದ್ದರು. ಸುತ್ತಲೂ

ರತ್ನಗೋಪುರಸಂಕೀರ್ಣಂ ರತ್ನನಂದಿಗಣಾವೃತಂ ।
ಸುಧಾಪ್ರವಾಹಸಂಸಿಕ್ತಂ ಮಂದಾರಕುಸುಮಾವೃತಂ ॥೩೦॥

ಫಲಮಾಲಾಸಮಾಕೀರ್ಣಂ ಗುಚ್ಛಮಾಲಾವಿರಾಜಿತಂ ।
ರತ್ನಮಾಲಾಸಮಾಕೀರ್ಣಂ ಶಿವಭಕ್ತಸಮಾವೃತಂ ॥೩೧॥

ಶುಕ್ಕೈರ್ಮಯೂರೈರ್ಹಂಸೈಶ್ಚ ಪರಿತಃ ಕಮಲಾಕರೈಃ ।
ಧ್ಯಾತ್ವಾ ಸ್ಥಿತಂ ತದಾ ಸರ್ವೈರ್ಭೂತಿರುದ್ರಾಕ್ಷಭೂಷಣೈಃ ॥೩೨॥

ಶಾರ್ದೂಲಾದ್ಯೈ ರ್ಮೃಗೇಂದ್ರೈಶ್ಚ ಭೂತಿರುದ್ರಾಕ್ಷಭೂಷಿತೈಃ ।
ಸೇವಿತಂ ಶಂಕರಸ್ಥಾನಂ ಶಿವಧ್ಯಾನಪುರಃಸರಂ ॥೩೩॥

ರತ್ನಮಯವಾದ ತೋರಣವನ್ನು ಕಟ್ಟಿದ್ದರು. ಅಲ್ಲಿಯ ಬಾಗಿಲುಗಳು ರತ್ನಗಳಿಂದ ನಿರ್ಮಿತವಾಗಿದ್ದುವು. ||೨೯||

ಅಲ್ಲಿನ ಹೊರಬಾಗಿಲು ರತ್ನಮಯವಾಗಿದ್ದಿತು. ಅಲ್ಲಿರುವ ನಂದಿಕೇಶ್ವರಾದಿ ವಿಗ್ರಹಗಳನ್ನೆಲ್ಲಾ ರತ್ನಗಳಿಂದ ರಚಿಸಿದ್ದರು. ಅಲ್ಲದೆ ಮಂದಾರಪುಷ್ಪಗಳನ್ನು ರಾಶಿರಾಶಿಯಾಗಿ ಹಾಕಿದ್ದರು. ||೩೦||

ಆ ಈಶ್ವರ ಗುಡಿಯ ಸುತ್ತಲೂ ಹಣ್ಣುಗಳನ್ನು ಜೋಡಿಸಿದ್ದರು. ಮತ್ತು ಆ ಗುಡಿಯು ಹೂಗೊಂಚಲುಗಳಿಂದ ಕಂಗೊಳಿಸುತ್ತಿತ್ತು. ರತ್ನಗಳನ್ನು ಎಲ್ಲೆಡೆಯಲ್ಲಿಯೂ ಹರಡಿದ್ದರು. ಶಿವಾಲಯದಲ್ಲಿ ಪರಮೇಶ್ವರನ ಸೇವಕರು (ಭಕ್ತರು) ಗುಂಪುಗುಂಪಾಗಿ ನೆರೆದಿದ್ದರು. ||೩೧||

ಗಿಳಿ, ನವಿಲು, ಹಂಸ ಮೊದಲಾದ ಹಕ್ಕಿಗಳು ಅಲ್ಲಿ ತುಂಬಿದ್ದುವು. ಅಲ್ಲದೆ ಆ ದೇವಸ್ಥಾನದ ಸುತ್ತಲೂ ಕಮಲಗಳಿಂದ ತುಂಬಿದ ಕೊಳಗಳು ಕಂಗೊಳಿಸುತ್ತಿದ್ದುವು. ಅಲ್ಲಿದ್ದವರೆಲ್ಲರೂ ವಿಭೂತಿ, ರುದ್ರಾಕ್ಷಿ ಇವುಗಳನ್ನು ಧರಿಸಿ, ಶಂಕರನ ಧ್ಯಾನದಲ್ಲಿ ನಿರತರಾಗಿದ್ದರು. ||೩೨||

ಹುಲಿ, ಸಿಂಹ ಮೊದಲಾದ ಮೃಗಗಳೂ ಸಹ ವಿಭೂತಿ, ರುದ್ರಾಕ್ಷಿ ಇವುಗಳನ್ನು ಧರಿಸಿದ್ದುವು. ಅವು ಶಿವಧ್ಯಾನವನ್ನು ಮಾಡುತ್ತಾ ಶಿವದೇವಾಲಯವನ್ನು ಸೇವಿಸುತ್ತಿದ್ದುವು. ||೩೩||

ಶಿವನಾಮಜಪೋದ್ಯುಕ್ತೈಸ್ತರುಭಿಶ್ಚ ವಿರಾಜಿತಂ ।
ಪ್ರಸೂನಮಂಡಲಾಕೀರ್ಣೈಃ ಭ್ರಮರೈರಪಿ ಶೋಭಿತೈಃ ॥೩೪॥

ಸುಧೂಪಧೂಮರೇಖಾಭಿರಲಂಕೃತಮಿತಸ್ತತಃ ।
ಉಪಹಾರಗಿರಿಶ್ರೇಷ್ಠೈಃ ಷಡ್ರಸಾಖ್ಯಾನಸೂಚಕೈಃ ॥೩೫॥

ವಿಪುಲಾಪೂಪಸಂಘೈಶ್ಚ ಘೃತಕುಲ್ಯಾದಿಭಿರ್ಯುತಂ ।
ಮಣಿಮಂಟಪಸಂಕೀರ್ಣಂ ನಾನಾಫಲವಿರಾಜಿತಂ ॥೩೬॥

ದ್ರಾಕ್ಷಾಮ್ರರಸಕುಲ್ಯಾಭಿರಲಂಕೃತಮನೇಕಧಾ ।
ದಧಿಸಾರಾಚಲಾಕೀರ್ಣಂ ದುಗ್ಧಸಾರಾಬ್ಧಿಸಂಕುಲಂ ॥೩೭॥

ಆ ಪರಮೇಶ್ವರನ ಆಲಯದಲ್ಲಿ ತರುಗಳು ತುಂಬಿದ್ದವು. ಮತ್ತುಹೂಗೊಂಚಲುಗಳಿಂದ ಮನೋಹರವಾಗಿದ್ದವು. ಮತ್ತು ದುಂಬಿಗಳು ಅವುಗಳನ್ನು ಮುತ್ತಿದ್ದವು. ಅಲ್ಲದೆ ವಿಶೇಷವಾಗಿ ಆ ವೃಕ್ಷಗಳು ಶಿವನಾಮ ಜಪವನ್ನೇ ಜಪಿಸುವಂತಿದ್ದವು. ॥೩೪॥

ಇಲ್ಲಿ, ಅಲ್ಲಿ, ಎಲ್ಲಾ ಕಡೆಯಲ್ಲಿಯೂ ಒಳ್ಳೊಳ್ಳೆಯ ಸುಗಂಧ ಧೂಪದ ಹೊಗೆಯು ತುಂಬಿದ್ದಿತು. ಅವುಗಳಿಂದ ಆ ದೇವಾಲಯವು ಶೋಭಿಸುತ್ತಿತ್ತು. ಸಿಹಿ, ಹುಳಿ, ಖಾರ, ಕಹಿ, ಉಪ್ಪು, ಒಗಚು ಇವೇ ಮೊದಲಾದ ಷಡ್ರಸಪೂರ್ಣಗಳಾದ ನೈವೇದ್ಯಕ್ಕೆ ಉಪಯುಕ್ತಗಳಾದ ಉಪಹಾರಗಳನ್ನು ಬೆಟ್ಟದಂತೆ ರಾಶಿ ಹಾಕಿದ್ದರು. ॥೩೫॥

ಆ ಈಶ್ವರದೇವಾಲಯವು ಹೇರಳವಾದ ತಿಂಡಿಗಳಿಂದ ತುಂಬಿತ್ತು. ಅಲ್ಲಿ ತುಪ್ಪದ ಕಾಲುವೆಯು ಒಂದು ಕಡೆ ಹರಿಯುತ್ತಿತ್ತು. ಅಲ್ಲಲ್ಲಿ ಮಣಿಖಚಿತಗಳಾದ ಮಂಟಪಗಳು ಕಂಗೊಳಿಸುತ್ತಿದ್ದವು. ಮತ್ತು ಬಗೆ ಬಗೆಯಾದ ಹಣ್ಣುಗಳು ಅಲ್ಲಿ ಭರಿತವಾಗಿದ್ದವು. ॥೩೬॥

ದ್ರಾಕ್ಷಿ, ಮಾವು, ಇವುಗಳ ರಸಗಳ ಕಾಲುವೆಗಳಿಂದ ಅದು ಅತ್ಯಂತವಾಗಿ ಶೋಭಿಸುತ್ತಿತ್ತು. ಮೊಸರು, ಹಾಲುಗಳಂತೂ ಸಮುದ್ರದೋಪಾದಿಯಲ್ಲಿ ಶೇಖರಿತವಾಗಿದ್ದವು. ॥೩೭॥

ಏತಾದೃಶಂ ಶಿವಸ್ಥಾನಂ ದಿವ್ಯನಾಟ್ಯಾಂಗನಾವೃತಂ ।
ದದರ್ಶ ಕಮಲಾಕಾಂತಃ ಸ ಕೈಲಾಸಮಿವಾಪರಂ ॥೩೮॥

ಕಲ್ಪವೃಕ್ಷಸಮಾನೀತಂ ಫಲಪುಷ್ಪಸಮನ್ವಿತಂ ।
ಕಾಮಧೇನುಪ್ರಭೂತೋರುಕ್ಷೀರಧಾರಾಸಮಾವೃತಂ ॥೩೯॥

ವಿಸ್ಮಿತೋ ದೂರತೋ ದೃಷ್ಟ್ವಾ ಸ ಕೃತಾರ್ಥಮಮನ್ಯತ ।
ಸ್ವಾತ್ಮಾನಂ ಕಮಲಾಮಾಹ ಪಶ್ಯ ಪಶ್ಯೇತಿ ಸಾದರಂ ॥೪೦॥

ಕಿಂ ಕಿಂ ಕೃತಂ ಪುಣ್ಯಮಪೂರ್ವಮಾದೌ
ದೃಷ್ಟಂ ಶಿವಸ್ಥಾನಮಿದಂ ಮನೋಜ್ಞಂ ।
ಅತಃ ಪರಂ ಜನ್ಮಕೃತಾರ್ಥಮೇವ
ನೇತ್ರೇ ಕೃತಾರ್ಥೇ ಚರಣೌ ಕೃತಾರ್ಥೌ ॥೪೧॥

ಇಂತಹ ಆ ಶಿವ ದೇವಾಲಯವು ಒಳ್ಳೆಯ ವಿಖ್ಯಾತ ನಟಿಯರಿಂದ ಕೂಡಿತ್ತು. ಎರಡನೆಯ ಕೈಲಾಸದಂತಿರುವ ಅದನ್ನು ನಾರಾಯಣನು ಅಚ್ಚರಿಯಿಂದ ನೋಡಿದನು. ||೩೮||

ಕಲ್ಪವೃಕ್ಷಗಳಿಗೆ ಸಮನಾದ ವೃಕ್ಷಗಳ ಗುಂಪು ಅಲ್ಲಿ ಶೋಭಿಸುತ್ತಿತ್ತು. ಹಣ್ಣು ಹೂಗಳಿಂದ ಅವೆಲ್ಲವೂ ಪ್ರಕಾಶಿಸುತ್ತಿದ್ದುವು. ಕಾಮಧೇನುವಿಗೆ ಸಮಾನವಾಗಿ ಹಾಲು ಧಾರೆಗಳನ್ನು ಸುರಿಸುವ ಹಸುಗಳಿಂದ ಆ ಶಿವಾಲಯವು ಕಂಗೊಳಿಸುತ್ತಿತ್ತು. ||೩೯||

ದೂರದಿಂದಲೇ ಹರಿಯು ಶಿವದೇವಾಲಯವನ್ನು ನೋಡಿ ವಿಸ್ಮಯಗೊಂಡನು; ಮತ್ತು ತನ್ನನ್ನು ಧನ್ಯನೆಂದು ತಿಳಿದನು. ಬಳಿಕ ಲಕ್ಷ್ಮಿಯನ್ನು ಕುರಿತು ಪ್ರಿಯೇ, ನೋಡು, ನೋಡು, ಈ ಶಿವಾಲಯವನ್ನು. ಎಂದು ಪ್ರೀತಿಯಿಂದ ಹೇಳಿದನು. ||೪೦||

ಹಿಂದೆ ಯಾವ ಯಾವ ಅಪೂರ್ವವಾದ ಪುಣ್ಯಕರ್ಮವನ್ನು ಮಾಡಿದ್ದೆನೋ! ಅದರಿಂದಲೇ ರಮಣೀಯವಾದ ಶಿವದೇವಾಲಯದ ದರ್ಶನವು ಈಗ ನನಗೆ ಲಭಿಸಿತು. ಆದುದರಿಂದ ನನ್ನ ಜನ್ಮವು ಸಾರ್ಥಕವಾಯಿತು. ಅಲ್ಲದೇ ಈ ನನ್ನ ಕಣ್ಣುಗಳೂ ನನ್ನ ಪಾದಗಳೂ ಸಹ ಕೃತಕೃತ್ಯಗಳಾದುವು. ||೪೧||

ಪ್ರದೋಷಕಾಲೇ ಗಿರಿಶಾಲಯಸ್ಯ
ವಿಲೋಕನೇನಾಪಿ ಕೃತಾರ್ಥಮೇವ ।
ಇದಂ ಪರಂ ಜೀವನಮಿತ್ಯಮನ್ಯೆ
ಜಿತಂ ಚ ಲೋಕತ್ರಯಮೇವ ತೇನ ॥೪೨॥

ಏತಾದೃಶಂ ಭಾಗ್ಯಮದೃಷ್ಟಸಂಧೌ
ವಿನಾ ನ ಕಸ್ಯಾಪ್ಯತಿದುರ್ಲಭತ್ವಾತ್ ।
ದೃಷ್ಟಂ ಶಿವಾರಾಧನಸಾಧನಂ ಚ
ತದಪ್ಯಪೂರ್ವಂ ಪರಮಂ ಪವಿತ್ರಂ ॥೪೩॥

ಪಂಚಾಮೃತಾಭಿಷೇಕಾನಾಂ ಪ್ರವಾಹೈರ್ವ್ಯಾವೃತಂ ವನಂ ।
ಏತಾದೃಶಂ ನ ಕುತ್ರಾಪಿ ದೃಷ್ಟಪೂರ್ವಂ ಮಯಾ ಖಲು ॥೪೪॥

ಅಯಂ ನ ರಾಜಾ ಶಿವ ಏವ ಸಾಕ್ಷಾತ್
ಭೂಮಂಡಲಾನುಗ್ರಹ ವಾಂಛಯಾತ್ರ ।
ಕರೋತಿ ಲಿಂಗಾರ್ಚನಮಾದರೇಣ
ನರಸ್ಯ ಕಿಂ ವಾ ಮತಿರೀದೃಶೀ ಸ್ಯಾತ್ ॥೪೫॥

ಪ್ರದೋಷದ ವೇಳೆಯಲ್ಲಿ ಈಶ್ವರನ ಗುಡಿಯನ್ನು ದರ್ಶನ ಮಾಡಿದುದರಿಂದಲೇ ನನ್ನ ಜೀವನವು ಕೃತಾರ್ಥವಾಯಿತೆಂದು ನಾನು ತಿಳಿಯುತ್ತೇನೆ. ಅದರಿಂದ ನಾನು ಮೂರು ಲೋಕವನ್ನೂ ಜಯಿಸಿದಂತೆಯೇ ಆಯಿತು. ॥೪೨॥

ಇಂತಹ ಭಾಗ್ಯವು ಒಳ್ಳೆಯ ಪುಣ್ಯಸಂಬಂಧವಿಲ್ಲದಿದ್ದರೆ ಯಾರಿಗೂ ಸಾಧ್ಯವಾಗುವುದಿಲ್ಲ. ಮತ್ತು ಅಪೂರ್ವವಾದ ಈಶ್ವರಪೂಜಾಸಾಮಗ್ರಿಗಳ ದರ್ಶನವನ್ನೂ ಮಾಡಿದೆನು. ಇದೂ ನನ್ನ ಅದೃಷ್ಟವಿಶೇಷದಿಂದಲೇ ಒದಗಿತಲ್ಲವೆ! ॥೪೩॥

ಹಾಲು, ಮೊಸರು, ತುಪ್ಪ, ಜೇನು, ಸಕ್ಕರೆ ಇವೇ ಮೊದಲಾದ ಪಂಚಾಮೃತಾಭಿಷೇಕಗಳ ಹೊಳೆಯಿಂದ ಈ ವನವೆಲ್ಲಾ ಆವೃತವಾಗಿಹೋಗಿದೆ. ಇಂತಹ ವೈಭವವನ್ನು ಹಿಂದೆ ನಾನೆಲ್ಲಿಯೂ ನೋಡಿರಲಿಲ್ಲ. ॥೪೪॥

ಈತನು ರಾಜನಲ್ಲ. ಭೂಮಂಡಲವನ್ನು ಅನುಗ್ರಹಿಸಬೇಕೆಂಬ ಇಚ್ಛೆಯಿಂದ ಅವತರಿಸಿ ಲಿಂಗಾರ್ಚನೆ ಮಾಡುತ್ತಿರುವಾತನು. ಸಾಕ್ಷಾತ್ ಶಿವನೇ ಆಗಿದ್ದಾನೆ.

ಸಾಮಗ್ರೀ ಕಥಮೀದೃಶೀ ಬಹುವಿಧಾ ಲಿಂಗಾರ್ಚನಾಯಾ ಭವೇತ್
ದೇವಾನಾಮಪಿ ದುರ್ಲಭಾಂ ಸುರಸರಿತ್ತುಲ್ಯಾಶ್ಚ ಕುಲ್ಯಾ ಅಪಿ ।
ಕ್ಷೀರಸ್ಯಾಪಿ ಘೃತಸ್ಯ ತಸ್ಯ ಮಧುನೋ ದಧ್ನಃ ಸಿತಾಃ ಪರ್ವತಾಃ
ಸಂಪನ್ನಾಃ ಸ್ವಯಮಾಗತಾಃ ಕಥಮಯಂ ರಾಜಾ ಶಿವಃ ಕೇವಲಂ ॥೪೬॥

ಅತಃ ಪರಂ ನೇತ್ರವಿಶಾಲತಾಯಾಃ
ಕೃತ್ಯಂ ಚ ಸಂಪನ್ನಮಿದಂ ವಿಲೋಕ್ಯ ।
ತೃಪ್ತಂ ಮನೋ ಮೇ ಜನಿದುಃಖನಾಶಃ
ಶಿವಾಲಯಸ್ಯಾಸ್ಯ ವಿಲೋಕನೇನ ॥೪೭॥

ನಕ್ಷತ್ರಮಂಡಲಮತೀತ್ಯ ವಿಭಾತಿ ಶೃಂಗಂ
ತುಂಗಂ ವಿಲೋಕಯ ವಿಲೋಕಯ ಸಾವಧಾನಂ ।
ಏತನ್ನಿಧಾನಮಿತಿ ಮೇ ಮತಿರಾವಿರಾಸೀತ್
ಕೈಲಾಸತುಂಗನಿಭಮೇವ ಶುಭಾವಹಂ ಮೇ ॥೪೮॥

ಹಾಗಲ್ಲದಿದ್ದರೆ ಸಾಮಾನ್ಯ ಮನುಷ್ಯನಿಗೆ ಇಂತಹ ಲಿಂಗಾರ್ಚನೆಯಲ್ಲಿ ಬುದ್ಧಿ ಹೇಗೆ ತಾನೇ ಹುಟ್ಟೀತು? ॥೪೫॥

ಆಹಾ! ಶಿವಾರ್ಚನೆಗಾಗಿ ಇಂತಹ ಅನೇಕ ತೆರನಾದ ಸಾಮಗ್ರಿಗಳು ಹೇಗೆ ಒದಗಿಸಲ್ಪಟ್ಟುವೋ? ದೇವತೆಗಳಿಗೂ ಕೂಡ ಇಷ್ಟು ಪೂಜಾ ಸಂಪತ್ತು ಒದಗುವುದು ಕಷ್ಟ. ಮತ್ತು ಹಾಲು, ತುಪ್ಪ, ಜೇನು, ಮೊಸರು, ಇವುಗಳ ನಾಲೆಗಳು ತಾವಾಗಿಯೇ ಪ್ರಾಪ್ತವಾಗಿವೆ. ಅಲ್ಲದೇ ಕಲ್ಲುಸಕ್ಕರೆಯಂತೂ ಪರ್ವತಾಕಾರವಾಗಿ ಬಿದ್ದಿದೆ. ಆದುದರಿಂದಲೇ ಈತನು ಕೇವಲ ರಾಜನೆನಿಸದೇ ಸಾಕ್ಷಾತ್ ಪರಮೇಶ್ವರನೇ ಆಗಿರುತ್ತಾನೆಂದು ತಿಳಿಯುವೆನು. ॥೪೬॥

ಇದರಿಂದಲೇ ಈಶ್ವರ ಗುಡಿಯು ದರ್ಶನೀಯವಾಗಿದೆ. ಇದರ ದರ್ಶನದಿಂದ ನನ್ನ ಮನಸ್ಸು ತೃಪ್ತಿಹೊಂದಿತು. ಅಲ್ಲದೇ ಈ ಶಿವದೇವಾಲಯದ ದರ್ಶನದಿಂದ ನನಗೆ ಈಗ ಪುನರ್ಜನ್ಮ ದುಃಖವೂ ನಷ್ಟವಾಯಿತು. ॥೪೭॥

ಪ್ರಿಯೇ! ಲಕ್ಷ್ಮಿ! ನೋಡು. ಈ ದೇವಾಲಯದ ಶಿಖರವು ಎಷ್ಟು ಎತ್ತರವಾಗಿದೆ? ಅಗೋ! ಅದು ನಕ್ಷತ್ರಮಂಡಲವನ್ನು ಮುಟ್ಟುತ್ತಾ ಹೇಗೆ ಕಂಗೊಳಿಸು

ಶಿವಾಲಯಸ್ಯಾಸ್ಯ ಸಹಾರತಾರಾ
ಮಾಲಾಸಮೇತಸ್ಯ ಮನೋಹರಸ್ಯ ।
ದೀಪಾವಲೀಮಂಡನಮಂಡಿತಸ್ಯ
ಶೃಂಗಸ್ಯ ಶೋಭಾಂ ಪರಿಪಶ್ಯ ಪಶ್ಯ ॥೪೯॥

ಆಮೂಲಚೂಲಾಮಿತದೀಪಕಾಂತಿ
ನಿರಾಜಿತಂ ಮಂದಿರಮೀಶ್ವರಸ್ಯ ।
ಮುಕ್ತಾಪ್ರವಾಳಪ್ರಭಯಾತಿಪೀತಂ
ರತ್ನಪ್ರಭಾಮಂಡಲಮಂಡಿತಂ ಚ ॥೫೦॥

ಇಂದ್ರನೀಲಮಣಿಕಾಂತಿಸಮೂಹೈಃ
ಪಶ್ಯ ಪಶ್ಯ ಶಿವಮಂದಿರಮೂಲೇ ।
ಮೌಕ್ತಿಕಾದಿಸಹಿತಂ ಗಗನತ್ವ
ಭ್ರಾಂತಿಮದ್ಯ ಜನಯತ್ಯಮಿತಾಂಗೇ ॥೫೧॥

ತ್ತದೆ. ? ಇದು ಕೈಲಾಸ ಪರ್ವತದಷ್ಟು ಎತ್ತರವಾಗಿರುವುದೆಂದು ನಾನು ಭಾವಿಸಿರುವೆನು. ಇದು ನಮಗೆ ಮಂಗಳದಾಯಕವಾಗಿದೆಯಲ್ಲವೆ! ॥೪೮॥

ಕಾಂತೇ! ಈ ಈಶ್ವರನ ಗುಡಿಯು ನಕ್ಷತ್ರಮಾಲಾಕಾರಗಳಾದ ಹಾರಗಳಿಂದ ಎಷ್ಟು ಚನ್ನಾಗಿ ಶೋಭಿಸುತ್ತದೆ. ನೋಡು! ದೀಪಮಾಲೆಗಳಿಂದ ಅಲಂಕೃತವಾದ ಇದರ ಶೃಂಗವು ಎಷ್ಟು ಸೊಗಸಾಗಿದೆ! ॥೪೯॥

ಈ ಶಂಕರನ ಮಂದಿರವು ಬುಡದಿಂದ ಕೊನೆಯ ಶಿಖರದ ವರೆಗೂ ದೀಪಮಾಲೆಗಳಿಂದ ಶೋಭಿಸುತ್ತಿರುವುದು. ಮುತ್ತು, ಹವಳ, ಇವುಗಳ ಪ್ರಭೆಗಳಿಂದ ಬಹಳ ಮಟ್ಟಿಗೆ ಪೀತವರ್ಣವುಳ್ಳದಾಗಿದೆ. ರತ್ನಗಳನ್ನು ಗುಂಪುಗುಂಪುಗಳಾಗಿ ವಿಭಾಗಿಸಿ ಅಲ್ಲಲ್ಲಿ ಕಟ್ಟಿರುವುದರಿಂದ ಈ ದೇವಾಲಯವು ಬಹು ಸುಂದರವಾಗಿದೆ. ॥೫೦॥

ಪ್ರಿಯೇ, ಈ ದೇವಾಲಯದ ಮೂಲಭಾಗವನ್ನು ನೋಡು. ಇದು ಇಂದ್ರನೀಲಮಣಿಗಳಿಂದ ಹೊಳೆಯುತ್ತಾ ಹೇಗೆ ಶೋಭಿಸುತ್ತಿದೆ? ಮತ್ತು ಇದು ಮುತ್ತಿನ ಮಣಿಗಳಿಂದ ಕೂಡಿರುವುದರಿಂದ ಆಕಾಶವೋ ಎಂದು ಭ್ರಾಂತಿಯನ್ನುಂಟುಮಾಡುತ್ತಿರುವುದು. ॥೫೧॥

ಪಶ್ಯೇಹ ಕಾರ್ತಸ್ವರಕಾಂತಿರೇಷಾ
ತಟಿತ್ಪ್ರವಾಹಂ ಚ ಮಮಾತನೋತಿ ।
ಸಾಚೇಂದ್ರನೀಲಪ್ರಭಯಾ ಸಮೇತಾ
ಕರೋತಿ ಮೇ ನೀರದಬುದ್ಧಿಮೇವ ॥೫೨॥

ಸುಧಾಕರಃ ಶಂಕರಮಂದಿರಾಗ್ರೇ
ವಿತಾನವತ್ತಿಷ್ಠತಿ ತಸ್ಯ ಭಾನಿ ।
ಮುಕ್ತಾಫಲಾನ್ಯಂಚಲಚಂಚಲಾನಿ
ಶೋಭೇಯಮೇತಸ್ಯ ಮನೋಹರಾಣಿ ॥೫೩॥

ಹರ ಹರ ರುಚಿರೇಯಂ ನಿರ್ಮಿತಾ ಕಾಂತಿರೇಷಾ
ಶಿವಜನಹಿತಹೇತುರ್ಧರ್ಮಸೇತುಃ ಸಕೇತುಃ ।
ಶಿವಪದವಿಭವಸ್ಯ ಸ್ವಾಪದಂ ನೇತುರೇವಂ
ತವ ಶಿವ ಕಥನೀಯಂ ಕಿಂ ಕಿಮತ್ರಾದ್ಭುತಂ ಸ್ಯಾತ್ ॥೫೪॥

ಈ ಬಂಗಾರದ ಕಾಂತಿಯು ನನಗೆ ಮಿಂಚಿನಬಳ್ಳಿಯ ಭ್ರಾಂತಿಯನ್ನುಂಟು ಮಾಡುತ್ತಿದೆ. ಮತ್ತು ಆ ಇಂದ್ರನೀಲಮಣಿಗಳ ಕಾಂತಿಯೊಡನೆ ಸೇರಿದ ಆ ಬಂಗಾರದ ಕಾಂತಿಯು ಅತ್ಯಂತವಾದ ಮೋಡವೆಂಬ ಬುದ್ಧಿಯನ್ನು ನನಗೆ ಕೊಡುತ್ತಿದೆ. ॥೫೨॥

ಈ ಶಿವದೇವಸ್ಥಾನದ ಅಗ್ರಭಾಗದಲ್ಲಿ ಚಂದ್ರನು ಮೇಲ್ಕಟ್ಟಿನ ಹಾಗೆ ಕಾಣುತ್ತಾನೆ. ನಕ್ಷತ್ರಗಳಾದರೋ ಮುತ್ತಿನ ಮಣಿಗಳ ಹಾಗೆ ಚಾಂಚಲ್ಯವುಳ್ಳದ್ದಾಗಿ ವಿಶೇಷ ಸೌಂದರ್ಯವನ್ನು ಬೀರುತ್ತಿರುವುವು. ॥೫೩॥

ಹರ, ಶಂಕರ, ಈ ಮನೋಹರವಾದ ದೇವಾಲಯ ಕಾಂತಿಯು ಧರ್ಮ ಸಾಧನವಾಗಿಯೂ ಸದ್ಗತಿಯನ್ನು ಕೊಡಬಲ್ಲುದೂ ಆಗಿದೆ. ಈ ಶಿವಸ್ಥಾನದ ವೈಭವವು ನನ್ನ ಆಪತ್ತುಗಳನ್ನೆಲ್ಲಾ ಹರಣಮಾಡಬಲ್ಲದು. ಏನದ್ಭುತವು ! ಈ ಶಿವಸ್ಥಾನ ವೈಭವದಿಂದ ಉಂಟಾದುದೆಂದು ಹೇಳಲು ಸಾಧ್ಯವಿಲ್ಲವಾಗಿದೆ. ಶಿವಮಹಿಮೆಯೇ ಇದಕ್ಕೆ ಕಾರಣ. ॥೫೪॥

ಕರುಣಾಮಯಿ ತೇಽನುವರ್ತತೇ
ಯದಿದಂ ದೃಷ್ಟಮಘಾಪಹಂ ಮಯಾ ।
ಶಿವ ಶಂಕರ ಮಂದಿರಂ ಮಹೋ
ಕಿಮಪೂರ್ವಂ ತದಿದಂ ಜಗತ್ರಯೇ ॥೫೫॥

ಧನ್ಯೋ ಮಾನಸಮೀಶಪೂಜನರತಧ್ಯಾನಾನುರಕ್ತಂ ಮುಹುಃ
ಧನ್ಯಂ ಮೇ ನಯನಾಂಬುಜಂ ಚ ಗಿರಿಶಾಸ್ಥಾನಾರ್ಚನಾವೇಕ್ಷಣೈಃ ।
ಏತಾವನ್ಮಮ ಸಿದ್ಧಿದಂ ಪುನರಿದಂ ಸಂಪ್ರಾರ್ಥನೀಯಂ ಮಯಾ
ಕಸ್ಯೇದಂ ಸುಲಭಂ ಪುರಾತನಮಹಾಪುಣ್ಯಾಬ್ಧಿಲಬ್ಧಂ ಪರಂ ॥೫೬॥

ಕ್ವಾಹಂ ಕುತ್ರ ಶಿವಾರ್ಚನಾನ್ವಿತಶಿವಸ್ಥಾನಂ ತದಾಲೋಕನಂ
ತನ್ಮಧ್ಯಸ್ಥಿತಿರೀಶನಾಮಕಥನಂ ತತ್ಸರ್ವಮತ್ಯದ್ಭುತಂ ।
ಈಶಾನುಗ್ರಹಭೇದಲಬ್ಧಮಧುನಾ ಧನ್ಯೋಽಸ್ಮ್ಯಹಂ ಸರ್ವಥಾ
ಧನ್ಯಾಗ್ರೇಸರಶಂಗಪೂಜಾಂಭೋಜಾನುರಕ್ತಂ ಮನಃ ॥೫೭॥

ಶಿವನೇ, ನನ್ನ ವಿಷಯದಲ್ಲಿ ನಿನಗೆ ದಯೆಯಿದ್ದದ್ದೇ ಆದರೆ ಈ ದೇವಾಲಯ ದರ್ಶನಮಾತ್ರದಿಂದಲೇ ನನ್ನ ಪಾಪಗಳೆಲ್ಲಾ ನಷ್ಟವಾಗಲಿ. ಈಶ್ವರ ಗುಡಿಯ ಮಾಹಾತ್ಮ್ಯವು ಮೂರು ಲೋಕಗಳಲ್ಲಿಯೂ ಅಪೂರ್ವ ಮತ್ತು ಅದ್ಭುತವೆನಿಸಿಯೂ ಇರುವುದಲ್ಲವೇ ? ॥೫೫॥

ಶ್ರೀಶಂಕರನ ಪೂಜೆಯಲ್ಲಿ ತೊಡಗಿದ್ದ ನನ್ನ ಮನಸ್ಸು ಧನ್ಯವಾದದ್ದು. ಹಾಗೂ ಪಾರ್ವತೀಪತಿಯ ವಾಸಸ್ಥಳ, ಪೂಜೆ, ಇವುಗಳನ್ನು ಬಾರಿ ಬಾರಿಗೂ ನೋಡಿದ ಕಣ್ಣುಗಳೂ ಸಹ ಕೃತಕೃತ್ಯಗಳಾದುವು. ಇಷ್ಟರಿಂದಲೇ ನನಗೆ ಸಿದ್ಧಿಯು ಲಭಿಸಿತು. ಇನ್ನು ಪ್ರಾರ್ಥನೀಯವಾದದ್ದು ಬೇರೆ ಯಾವುದೂ ಇರುವುದಿಲ್ಲ. ಏಕೆಂದರೆ ಪರಮ ಪವಿತ್ರವಾದ ಮಹಾಪುಣ್ಯಗಳಿಂದ ಹೊಂದತಕ್ಕ ಈ ಈಶ್ವರಸ್ಥಾನ ದರ್ಶನವು ನನಗೆ ಸುಲಭವಾಗಿ ದೊರಕಿತು. ॥೫೬॥

ನಾನೆಲ್ಲಿ ? ಶಂಕರ ಪೂಜೆಗೆ ಸ್ಥಾನವಾದ ಇದೆಲ್ಲಿ ? ಮತ್ತು ಈ ಶಿವಾಲಯದ ದರ್ಶನವೆಲ್ಲಿಯದು ? ಹರಭಕ್ತರ ಮಧ್ಯೆ ಸೇರಿ ಶಿವನ ನಾಮಗಳನ್ನು ಪಠಿಸುವುದೆಲ್ಲಿ ? ಆ ಎಲ್ಲವೂ ಆಶ್ಚರ್ಯವನ್ನುಂಟುಮಾಡುತ್ತದೆ. ಶ್ರೀಶಂಕರನ ಅನುಗ್ರಹಕ್ಕೆ

ಸಾಯಂ ಶಂಕರದರ್ಶನೇನ ವಿಲಯಂ ಪ್ರಾಪ್ತಾನಿ ಪಾಪಾನ್ಯತಃ
ಸರ್ವಾಪದ್ವಿಲಯೋಽಪಿ ಜಾತ ಇತಿ ಮೇ ಮುಕ್ತಿಶ್ಚ ಸಂಭಾವಿತಾ ।
ಲಿಂಗಂ ಮಂಗಳದಂ ವಿಲೋಕಿತಮಿದಂ ಬಿಲ್ವೈರ್ದಳೈರ್ಭ್ಯರ್ಚಿತಂ
ತಸ್ಮಾದಭ್ಯಧಿಕಂ ಪ್ರದಾಸ್ಯತಿ ಫಲಂ ತನ್ನೈವ ಜಾನೇಽಧುನಾ ॥೫೮॥

ಸವ್ಯಾಸವ್ಯವಿಧಾನತಃ ಪ್ರತಿಪದವ್ಯಗ್ರಾಃ ಶಿವಾರಾಧಕಾಃ
ಸರ್ವೇ ತೇ ಪ್ರಣಮಂತಿ ಭೂತಿವಿಲಸದ್ಗಾತ್ರಾಃ ಪವಿತ್ರಾಃ ಪರಂ ।
ಸ್ವೇದಸ್ಯಾಪನಯೇನ ಭೂತಿಮಪಿ ತೇ ಗೃಹ್ಣಂತಿ ಫಾಲೇ ಪುನಃ
ನೃತ್ಯಂತಿ ಪ್ರಜಪಂತಿ ಶಂಕರಮಹಾದೇವೇತಿ ನಾಮಾನ್ಯಪಿ ॥೫೯॥

ಆನಂದಾಮೃತಸಾಗರಾನಪಿ ಮುಹುಃ ಸಂಪಾದಯಂತ್ಯೇವ ತೇ
ಶಬ್ದಾಃ ಶಂಕರ ಚಂದ್ರಶೇಖರ ಮಹಾದೇವೇತಿ ಮೇ ಚ ಶ್ರುತಾಃ ।

ಪಾತ್ರವಾಗಿರದ ಈ ನನ್ನ ಮನಸ್ಸು ಈಗ ಶಂಕರ ಪೂಜಕರ ಪಾದಕಮಲಗಳಲ್ಲಿ ನಟ್ಟಿತು. ಆದುದರಿಂದ ನಾನು ಕೃತಕೃತ್ಯನಾದೆನು. ॥೫೭॥

ಈ ಸಂಜೆಯಲ್ಲಿ ನಾನು ಶಂಕರದರ್ಶನ ಮಾಡಿದುದರಿಂದ ನನ್ನ ಪಾಪಗಳೆಲ್ಲವೂ ನಷ್ಟವಾದುವು. ಆದುದರಿಂದ ಎಲ್ಲಾ ವಿಪತ್ತುಗಳಿಂದಲೂ ಮುಕ್ತನಾದ ನನಗೆ ಮೋಕ್ಷವು ದೊರೆಯಬಹುದೆಂದು ಊಹಿಸುತ್ತೇನೆ. ಅತ್ಯಂತ ಮಂಗಳಪ್ರದವಾದ, ಬಿಲ್ವದಳಗಳಿಂದ ಪೂಜೆ ಮಾಡಿರುವ ಲಿಂಗದ ದರ್ಶನವನ್ನೂ ಮಾಡಿದೆನು. ಅದರಿಂದ ಇಮ್ಮಡಿಯಷ್ಟು ಫಲವು ದೊರೆಯುವುದು ಖಂಡಿತ. ಆ ಪ್ರಯೋಜನದ ಸ್ವರೂಪವನ್ನು ಈಗ ನಾನು ತಿಳಿಯಲಾರೆ. ॥೫೮॥

ಶಿವಪೂಜಕರು ಸವ್ಯ, ಅಪಸವ್ಯ ಕ್ರಮದಿಂದ (ಬಲದಿಂದ, ಎಡಕ್ಕೆ, ಎಡದಿಂದ ಬಲಕ್ಕೆ) ಪ್ರತಿಯೊಂದು ಹೆಜ್ಜೆಯನ್ನೂ ವಿಚಾರಪೂರ್ವಕವಾಗಿ ವಿನ್ಯಾಸ ಮಾಡುತ್ತಾ ನರ್ತನ ಮಾಡುತ್ತಾರೆ. ವಿಭೂತಿಯಿಂದ ಅಲಂಕೃತರಾದ ಅವರೆಲ್ಲರೂ ಪದೇ ಪದೇ ನಮಸ್ಕಾರ ಮಾಡುತ್ತಾರೆ. ಅಲ್ಲದೆ ಕುಣಿಯುವ ರಭಸದಿಂದ ಉಂಟಾದ ಮೈ ಬೆವರಿನಿಂದ ಅಳಿಸಿಹೋದ ವಿಭೂತಿಯನ್ನು ಪುನಃ ಇಟ್ಟುಕೊಳ್ಳುತ್ತಾರೆ. ಮತ್ತು ಶಂಕರ! ಮಹಾದೇವ, ಎಂದು ಆತನ ನಾಮಗಳನ್ನೇ ಜಪಿಸುತ್ತಾ ಕಾಲಕಳೆಯುತ್ತಾರೆ. ॥೫೯॥

ಹೀಗೆ ನರ್ತನಮಾಡುತ್ತಿರುವ ಅವರಿಗೆ ಅಪಾರವಾದ ಸಂತೋಷವುಂಟಾಗುವುದು. ಅಲ್ಲಿ ಶಂಕರ! ಚಂದ್ರಶೇಖರ! ಮಹಾದೇವ! ಎಂದು ಕೊಂಡಾಡುವ

ಸಂಪನ್ನಂ ಜನುಷಃ ಫಲಂ ಚ ವಿದುಷಾಂ ಸಂಪ್ರಾರ್ಥನೀಯಂ ಚ ಕಿಂ
ತಸ್ಮಾದಭ್ಯಧಿಕಂ ತದೇವ ಸುಕೃತಾಂಭೋಧಿಪ್ರವೃದ್ಧ್ಯೈ ಭವೇತ್ ॥೬೦॥

ಇತ್ಯುಕ್ತ್ವಾ ಸನಕಾದಿಭಿಃ ಸಹ ಮಹಾವಿಷ್ಣುಃ ಶಿವಾರಾಧಕವ್ಯಾಪ್ತಂ
ಶಂಕರಮಂದಿರಂ ನೃಪವಧೂವ್ಯಾಪ್ತಂ ಪ್ರವೇಷ್ಟುಂ ತದಾ ।
ಸಾಯಂ ಶಂಕಿತ ಏವ ತಾವದಸಕೃದ್ಗತ್ವಾ ಪುನರ್ನಿರ್ಗತೋ
ಸತ್ವಾ ತುಂಗತರಂಗವಾದನರತಃ ತಸ್ಥೌ ಸ ನೃತ್ಯಾಂಗಣೇ ॥೬೧॥

ಶಂಕರ ಶಂಕರ ಪಶ್ಯ ವಿನೋದಂ
ಅವಶ್ಯಂ ಭವಹರಹರಮಃಖಂ ।
ಹರ ಹರ ಹರ ಹರ ಕುರು ಕುರು ಕುರು
ಕುರು ಕುರು ಕುರು ಕೌತುಕಮನುವೇಲಂ ॥೬೨॥

ಶಿವ ಶಿವ ಶಿವ ಶಿವ ಶಿವ ಶಿವ ಶಿವ ಶಿವ
ಶಿವ ಶಿವ ಶಿವ ಶಿವ ಶಿವ ಶಿವ ಶಿವ ಶಿವ ।
ಶಿವ ಶಿವ ಶಿವ ಶಿವ ಶಿವ ಶಿವ ಶಿವ ಶಿವ
ಶಿವ ಶಿವ ಶಿವ ಶಿವ ಶಿವ ಶಿವ ಶಿವ ಶಿವ ॥೬೩॥

ಶಿವನಾಮಗಳು ನನ್ನ ಕಿವಿಗೆ ಬಿದ್ದವು. ವಿದ್ವಾಂಸರಾದ ಅವರ ಜನ್ಮ ಸಾರ್ಥಕವಾಯಿತು. ಇದಕ್ಕಿಂತ ಇನ್ನೇನು ಅವರಿಗೆ ಬೇಕು ? ಆಗಲೇ ಅವರಿಗೆ ಹೆಚ್ಚು ಹೆಚ್ಚಿನ ಪುಣ್ಯಾತಿಶಯವು ಲಭಿಸುವುದು. ಎಂದು ವಿಷ್ಣುವು ಹೇಳಿದನು. ॥೬೦॥

ಅನಂತರ ಶ್ರೀಮಹಾವಿಷ್ಣುವು ಸನಕಾದಿಗಳೊಂದಿಗೆ ಶಂಕರದೇವಾಲಯವನ್ನು ಪ್ರವೇಶಿಸಿದನು. ಅಲ್ಲಿ ರಾಜಸ್ತ್ರೀಯರು ಬಹಳವಾಗಿ ತುಂಬಿದ್ದರು. ಸಾಯಂಕಾಲದಲ್ಲಿ ಮೊದಲು ಪ್ರವೇಶಮಾಡಲು ಸಂಶಯಗೊಂಡ ಆ ವಿಷ್ಣುವು ಈಗ ಧೈರ್ಯದಿಂದ ಒಳಹೊಕ್ಕು ಹೊರಟು, ಅನಂತರ ಮಹಾಧ್ವನಿಯುಳ್ಳ ವಾದ್ಯಗಳಿಂದ ಮೊಳಗುತ್ತಿರುವ ನಾಟ್ಯಜಗಲಿಯಲ್ಲಿ ನಿಂತನು. ॥೬೧॥

ಎಲೈ ಶಂಕರನೇ, ಪರಮೇಶ್ವರನೇ, ಆಹಾ, ಈ ವಿನೋದವನ್ನು ಲಾಲಿಸು. ಸಾಂಸಾರಿಕ ದುಃಖವನ್ನು ಬೇಗ ಹೋಗಲಾಡಿಸು. ಯಾವಾಗಲೂ ಶಿವನಾಮಸ್ಮರಣೆ

ಶಿವ ಶಿವ ಶಿವ ಶಿವ ಶಿವ ಶಿವ ಶಂಭೋ
ಶಿವ ಶಿವ ಶಿವ ಶಿವ ಶಿವ ಶಿವ ಶಂಭೋ ।
ಶಿವ ಶಿವ ಶಿವ ಶಿವ ಶಿವ ಶಿವ ಶಂಭೋ
ಶಿವ ಶಿವ ಶಿವ ಶಿವ ಶಿವ ಶಿವ ಶಂಭೋ ॥೬೪॥

ಭವ ಭವ ಭವ ಭೂತಿವಿಭೂಷಿತ
ಭವ ಭವ ಭವ ಭವ ಭೂತಪತೇ ।
ಭವ ಭವ ಭವ ಭವ ಭಗವನ್ನಮನಂ
ಭವ ಭವ ಭವ ಭವ ಭವ ಭವ ತೇ ॥೬೫॥

ಶಂಕರ ಶಂಕರ ಶಂಕರ ಶಂಕರ
ಶಂಕರ ಶಂಕರ ಶಂಕುರು ನೋ ।
ಶಂಕರ ಶಂಕರ ಶಂಕರ ಶಂಕರ
ಶಂಕರ ಶಂಕರ ಶಂಕುರು ನೋ ॥೬೬॥

ಇತಿ ಮರ್ದನವಾದನೋತ್ಸವಂ
ವಿನತಂ ಸಂಭೃತಕಂಠಮಾದರಾತ್ ।
ಪರಿತೋ ದದೃಶುಃ ಶಿವಾರ್ಚಕಾಃ
ಶಿವಲಿಂಗಾರ್ಪಿತಶುದ್ಧಮಾನಸಂ ॥೬೭॥

ಯಿಂದ ಕೌತುಕವನ್ನುಂಟುಮಾಡು. ನೀನು ಪ್ರಪಂಚವನ್ನು ಸೃಷ್ಟಿಸುವೆ, ಸಮಸ್ತ ಪ್ರಾಣಿಗಳಿಗೆ ನೀನು ಒಡೆಯನು, ಸುಖವನ್ನುಂಟುಮಾಡುವವನು ನೀನೆ. ಓ ಶಂಕರ, ಶಂಕರ, ಬಾರಿಬಾರಿಗೂ ಅನೇಕ ಸಲ ನಿನ್ನನ್ನು ಕೀರ್ತನೆ ಮಾಡುತ್ತೇನೆ, ನನಗೆ ಮಂಗಳವನ್ನು ನೀಡು. ಅನಾಥರಕ್ಷಕನೂ, ಆಪನ್ನಿವಾರಕನೂ ನೀನೇ ಆಗಿರುವೆ. ॥೬೨-೬೩-೬೪-೬೫-೬೬॥

ಈ ಹಿಂದೆ ಹೇಳಿದಂತೆ ಶಿವನನ್ನು ಕೊಂಡಾಡುತ್ತಾ ತಮಟೆಯನ್ನು ಬಾರಿಸುತ್ತ ಕುಣಿಯುವ ಭಕ್ತವೃಂದವನ್ನು ಶ್ರೀವಿಷ್ಣುವು ನೋಡಿದನು. ಶಂಕರಲಿಂಗದಲ್ಲಿ ನಟ್ಟ ಮನಸ್ಸುಳ್ಳ ಈಶ್ವರಭಕ್ತರನೇಕರನ್ನು ಸುತ್ತಲೂ ನೋಡಿದನು. ॥೬೭॥

ಸ ರಾಜಾ ಸಾಧನೈಶ್ಶುದ್ಧೈಃ ಸಮಭ್ಯರ್ಚ್ಯ ಮಹೇಶ್ವರಂ ।
ಶಿವಧ್ಯಾನರತೋ ನಿತ್ಯಂ ಪ್ರಣತಶ್ಚ ಮುಹುರ್ಮುಹುಃ ॥೬೮॥

ರಾಜದಾರಕುಮಾರಾಶ್ಚ ಪೂಜಯಿತ್ವಾ ಸದಾಶಿವಂ ।
ಸಂತುಷ್ಟಾಃ ಶಂಕರಧ್ಯಾನರತಾ ಏವ ಸಸಾದರಂ ॥೬೯॥

ದಾರೈಃ ಕುಮಾರೈರ್ಗೀತಾನಿ ಕರ್ತುಮಾರೇಭಿರೇ ಮುದಾ ।
ಪ್ರತಿಕ್ಷಣಂ ಪುಷ್ಪವೃಷ್ಟಿರಷ್ಟದಿಕ್ಷ್ವಪಿ ವಿಶ್ರುತಾ ॥೭೦॥

ಪುನಃ ಪುನರಭೂದೇವ ಸಾ ಕಲ್ಪತರುಸಂಭವಾ ।
ದೇವದುಂದುಭಯೋ ನೇದುರ್ಮಂದಮಂದಾನಿಲಾ ವವುಃ ॥೭೧॥

ಶಿವಧ್ವನಿಸಮಾಕೀರ್ಣಂ ತದಾ ಬ್ರಹ್ಮಾಂಡಮಂಡಲಂ ।
ಏವಂ ಶಿವೋತ್ಸವೇನೈವ ಸಾ ನೀತಾ ರಾತ್ರಿರಾದರಾತ್ ॥೭೨॥

ಆ ರಾಜನು ಪವಿತ್ರಗಳಾದ ಅರ್ಚನಸಾಮಗ್ರಿಗಳಿಂದ ಈಶ್ವರನನ್ನು ಪೂಜೆ ಮಾಡಿ, ಬಳಿಕ ಪುನಃ ಪುನಃ ಶಿವನಿಗೆ ಎರಗುತ್ತಾ ಆತನ ಧ್ಯಾನದಲ್ಲಿ ಆಸಕ್ತನಾದನು. ॥೬೮॥

ರಾಜನ ಹೆಂಡತಿ, ಮಕ್ಕಳು ಕೂಡ ಶಿವನನ್ನು ಆರಾಧಿಸಿ ಸಂತೋಷ ಹೊಂದಿದರು. ಹಾಗೆಯೇ ಶಂಕರನ ಧ್ಯಾನದಲ್ಲಿ ನಿರತರಾದರು. ॥೬೯॥

ಅನಂತರ ಸಂತೋಷದಿಂದ ರಾಜಪುತ್ರರು ಮತ್ತು ರಾಣಿಯರು ಇವರುಗಳಿಂದ ಕೂಡಿ ಸಂಗೀತವನ್ನು ಹಾಡಲಾರಂಭಿಸಿದರು. ಪ್ರತಿಕ್ಷಣದಲ್ಲಿಯೂ ಹೂಮಳೆಯು ಪ್ರತಿದಿಕ್ಕುಗಳನ್ನೂ ವ್ಯಾಪಿಸಿತು. ॥೭೦॥

ಕಲ್ಪವೃಕ್ಷಗಳಿಂದ ಸುರಿಸಲ್ಪಟ್ಟ ಹೂಮಳೆಯು ಬಾರಿ ಬಾರಿಗೂ ಸುರಿಯುತ್ತಿತ್ತು. ದೇವತೆಗಳು ದುಂದುಭಿವಾದ್ಯವನ್ನು ಬಾರಿಸಿದರು. ಮೆಲ್ಲಮೆಲ್ಲನೆ ತಂಗಾಳಿಯು ಬೀಸಲಾರಂಭಿಸಿತು. ॥೭೧॥

ಆ ಸಂಜೆಯ ಹೊತ್ತು ಎಲ್ಲಾ ಭೂಮಂಡಲವೂ ಶಿವಭಜನೆಯಿಂದ ಮುಸುಕಿ ಹೋಗಿತ್ತು. ಹೀಗೆ ಶಿವನ ಉತ್ಸವದಿಂದಲೇ ಆ ದಿನದ ರಾತ್ರಿಯೂ ಕೂಡ ವಿಷ್ಣುವಿಗೆ ಕಳೆಯಿತು. ॥೭೨॥

ಅರುಣಸ್ಯೋದಯೇ ವೃತ್ತಸ್ತತಃ ಸ್ನಾತೋ ನೃಪೋಽಪಿ ಸಃ ।
ಸ ರಾಜಾ ಪುನರಾದಾಯ ಶಿವಪೂಜನಸಾಧನಂ ॥೭೩॥

ನಿರ್ಮಾಲ್ಯಂ ಪರಿಹೃತ್ಯಾಶು ಪೂಜಯಾಮಾಸ ಶಂಕರಂ ।
ತತಃ ಪರಂ ರಾಜದಾರಾಃಕುಮಾರಾದ್ಯಾಶ್ಚ ಶಂಕರಂ ॥೭೪॥

ಸ್ನಾತ್ವೋದ್ಧೂಲ್ಯ ತ್ರಿಪುಂಡ್ರಾಂಕಾ ತೇ ರುದ್ರಾಕ್ಷಾಂಕಿತಾ ಅಪಿ ।
ಶಿವಲಿಂಗಾರ್ಚನಂ ಚಕ್ರುಃ ಬಿಲ್ವಪತ್ರಾದಿಭಿರ್ಮುದಾ ॥೭೫॥

ಗಂಧರ್ವಾದ್ಯಾಶ್ಚ ತೇ ಚಕ್ರುಃ ಸುರಾಶ್ಚ ಶಿವಪೂಜನಂ ।
ತತಃ ಪ್ರಸನ್ನವದನಃ ಸರಾಜಾ ಶಿವತತ್ಪರಃ ॥೭೬॥

ಸರ್ವಾನ್ ಸಂಭಾವಯಾಮಾಸ ಶಿವನೈವೇದ್ಯದಾನತಃ ।
ರಾಜಪ್ರಸಾದಸಂಪ್ರಾಪ್ತಂ ಶಿವನೈವೇದ್ಯಮಾಸ್ತಿಕಾಃ ॥೭೭॥

ಸಂಪ್ರಾಪ್ಯ ಸರ್ವೇ ಸಂತುಷ್ಟಾಃ ಸಂತುಷ್ಟಃ ಕಮಲಾಪತಿಃ ।
ಇಂದಿರಾಪತಿರಾದಾಯ ಶಿವನೈವೇದ್ಯಮುತ್ತಮಂ ॥೭೮॥

ಸೂರ್ಯೋದಯವಾದ ಕೂಡಲೇ ಆ ರಾಜನು ಎದ್ದು ಸ್ನಾನ ಮಾಡಿದನು. ಪುನಃ ಶಿವಪೂಜೆಯ ಸಾಮಗ್ರಿಗಳನ್ನು ತೆಗೆದುಕೊಂಡು ಹೊರಟನು. ॥೭೩॥

ಬಳಿಕ ಜಾಗ್ರತೆಯಾಗಿ ನಿರ್ಮಾಲ್ಯವನ್ನು ತೆಗೆದುಹಾಕಿ ಪರಶಿವನನ್ನು ಪೂಜೆ ಮಾಡಿದನು. ಬಳಿಕ ಆತನ ರಾಣಿಮತ್ತು ರಾಜಪುತ್ರರೂ ಕೂಡ ಅಲ್ಲಿಗೆ ಬಂದನು. ॥೭೪॥

ಹಾಗೆಯೇ ಅವರು ಸ್ನಾನಮಾಡಿ, ಭಸ್ಮತ್ರಿಪುಂಡ್ರವನ್ನುಧರಿಸಿದರು. ಹಾಗೂ ರುದ್ರಾಕ್ಷಿಯನ್ನು ಧಾರಣೆಮಾಡಿಕೊಂಡು, ಸಂತೋಷದಿಂದ ಬಿಲ್ವಪತ್ರೆಗಳಿಂದ ಶಿವಲಿಂಗವನ್ನು ಅರ್ಚಿಸಿದರು. ॥೭೫॥

ಗಂಧರ್ವರು, ದೇವತೆಗಳು, ಇವರೇ ಮೊದಲಾದವರೆಲ್ಲಾ ಹರನನ್ನು ಪೂಜಿಸಿದರು. ಅದರಿಂದ ಸಂತುಷ್ಟನಾದ ಆ ದೊರೆಯು ಶಂಕರಪೂಜೆಯಲ್ಲಿ ತಾನೂ ಆಸಕ್ತನಾದನು. ॥೭೬॥

ಆತನು ಶಿವನ ನೈವೇದ್ಯ, ಭಕ್ಷ್ಯಗಳನ್ನು ಎಲ್ಲರಿಗೂ ಕೊಟ್ಟು, ಉಪಚರಿಸಿದನು. ಆ ಆಸ್ತಿಕರೆಲ್ಲರೂ ರಾಜನಿತ್ತ ಶಂಕರ ಪ್ರಸಾದವನ್ನು ಸ್ವೀಕರಿಸಿ ಸಂತೋಷ

ಆನಂದಾಶ್ರುಸಮಾಕೀರ್ಣೋ ನನರ್ತ ಸಶಿವಾಂಗಣೇ ॥೭೯॥

ಹಾರೋಪಹಾರೋಯಮನೇನ ಯುಕ್ತೌ
ಕರೌ ವರೌ ಪಾವನಪಾವನೌ ಮೇ ।
ಅಯಂ ಪ್ರಸಾದೋ ಗಿರಿಶಸ್ಯ ಸಾಕ್ಷಾತ್
ನೈವೇದ್ಯರೂಪೇಣ ಸಮಾಗತೋ ಮಾಂ ॥೮೦॥

ಹಾರೋಪಹಾರೋಽತಿಮನೋಹರೋ ಮೇ
ಹರತ್ಯಶೇಷಾಪದುಪಾಧಿಸಂಘಾನ್
ಆನಂದಧಾರಾಂಬುಧಿವರ್ಧಕೋಽಯಂ ॥೮೧॥

ಭಾಗ್ಯೇನ ಲಬ್ಧಃ ಸ ಶಿವೋಪಹಾರಃ
ಶಿವೋಪಹಾರಾರ್ಹಮಿದಂ ಶರೀರಂ ।
ಅನೇನ ತಾವನ್ಮಮ ಮುಕ್ತಿರೇವ
ಮುಕ್ತಿಪ್ರಸಾಹೇತುರಯಂ ವಿಶೇಷಾತ್ ॥೮೨॥

ಹೊಂದಿದರು. ಲಕ್ಷ್ಮೀಪತಿಯಾದ ವಿಷ್ಣುವೂ ಕೂಡ ಅತಿಶ್ರೇಷ್ಠವಾದ ಶಂಕರ ನೈವೇದ್ಯವನ್ನು ಸ್ವೀಕರಿಸಿ ತೃಪ್ತನಾದನು. ॥೭೭-೭೮॥

ಶಂಕರ ಸಂಬಂಧವಾದ ನೈವೇದ್ಯ ಭಕ್ಷ್ಯವನ್ನು ಸ್ವೀಕರಿಸಿದ ನನ್ನ ಈ ಎರಡು ಹಸ್ತಗಳು ಅತಿ ಪವಿತ್ರಗಳಾದುವು. ಇದು ಪರಮೇಶ್ವರನ ಸಾಕ್ಷಾದನುಗ್ರಹವು. ನನಗೆ ಇದು ನೈವೇದ್ಯರೂಪದಿಂದ ಲಭಿಸಿತು. ॥೮೦॥

ಈ ಶಿವಾನುಗ್ರಹವು ಅನೇಕ ಪಾಪಗಳಿಗೆ ಪ್ರಳಯಾಗ್ನಿಯಹಾಗಿದೆ. ಅತಿ ಮನೋಹರವಾದ ಈ ಶಿವನೈವೇದ್ಯವು ಅನೇಕ ಆಪತ್ತುಗಳೆಂಬ ಸಮುದ್ರವನ್ನು ನಾಶಮಾಡುವುದಲ್ಲದೇ ಆನಂದವೆಂಬ ಪ್ರವಾಹವನ್ನು ಹೆಚ್ಚಿಸುವುದು. ॥೮೧॥

ಆ ಶಿವನೈವೇದ್ಯವು ಅದೃಷ್ಟವಶದಿಂದ ನನಗೆ ಲಭಿಸಿತು. ಈ ನನ್ನ ದೇಹವು ಶಂಕರನ ಉಪಹಾರವನ್ನು ಸ್ವೀಕರಿಸಲು ಯೋಗ್ಯವಾಯಿತು. ಇದರಿಂದ ನಿಜವಾಗಿಯೂ ನನಗೆ ಮುಕ್ತಿಯು ದೊರಕುವುದು. ಈ ಶಿವ ಪ್ರಸಾದವು ಮುಕ್ತಿಯೆಂಬ ಅರವಟ್ಟಿಗೆಗೆ ಕಾರಣವಾಗಿದೆ. ಇದೇ ಇದರ ವೈಶಿಷ್ಟ್ಯ. ॥೮೨॥

ಜಿಹ್ವಾ ಜಾಡ್ಯವಿನಾಶಕೋಽಯಮಧುನಾ ತದ್ಭೋಜನಾಭಾಜನಂ
ಪುಣ್ಯಾನಾಂ ಭವತೀತಿ ಮೇ ಮತಿರಭೂದತ್ಯದ್ಭುತಂ ಪಾವನಂ ।
ಹಾರಂ ಕಿಂ ನ ಮಹೋಪಹಾರಮಸಕೃತ್ಯಂಪ್ರಾಪ್ಯ ನಂದೀಶ್ವರೋ
ಗಾಣಾಪತ್ಯಮವಾಪ ಭಾಗ್ಯಮತುಲಂ ತದ್ಭಾಗ್ಯದಾನೋದ್ಯತಂ ॥೮೩॥

ಇತಿ ತದ್ವಚನಂ ಶ್ರುತ್ವಾ ರಾಜಾ ಸಂತುಷ್ಟಮಾನಸಃ
ತಮಾಹೂಯಾಹ ಕೋಽಸೀತಿ ಸ ವಿಷ್ಣುಂ ಪ್ರಾಹ ಭೂಪತಿಃ ॥೮೪॥

ತದಾ ಸನಂದನಃ ಪ್ರಾಹ ರಾಜಾನಂ ಶೈವಪುಂಗವಂ ।
ಅಯಂ ನಾರಾಯಣೋ ರಾಜನ್ ಆಗತೋಽತ್ರ ನಿಶಾಮುಖೇ ॥೮೫॥

ಇತಿ ತದ್ವಚನಂ ಶ್ರುತ್ವಾ ರಾಜಾಪಿ ಕಮಲಾಪತಿಂ ।
ಶಿವಾರ್ಚನರತಂ ಪ್ರಾಹ ಕಸ್ತೇ ಧರ್ಮ ಇತಿ ಸ್ವತಃ ॥೮೬॥

ಶಿವನ ಉಪಹಾರವು ಜಿಹ್ವಾಚಾಪಲ್ಯವನ್ನು ನಾಶಮಾಡುವುದು. ಇದು ಅತಿ ಪರಿಶುದ್ಧವಾಗಿಯೂ ಅದ್ಭುತವಾಗಿಯೂ ಇದೆ. ಶಿವನೈವೇದ್ಯವನ್ನು ಸೇವಿಸುವುದು ಪುಣ್ಯಪ್ರಾಪ್ತಿಗೆ ಕಾರಣವಾಗಿದೆ. ನಂದಿಕೇಶ್ವರನು ಅನೇಕ ಬಾರಿ ಶಂಕರನ ಉಪಹಾರವನ್ನು ಭುಂಜಿಸಿ, ಅದರ ಪುಣ್ಯವಿಶೇಷದಿಂದ ಅಸಾಧಾರಣವಾದ ಗಣಾಧಿಪತ್ಯವನ್ನು ಸಂಪಾದಿಸಿದನಲ್ಲವೇ ?" ॥೮೩॥

ಹೀಗೆ ಹೇಳಿದ ವಿಷ್ಣುವಿನ ಮಾತನ್ನು ಕೇಳಿ ಆ ರಾಜನು ಸಂತೋಷಗೊಂಡು, ಆ ವಿಷ್ಣುವನ್ನು ಹತ್ತಿರಕ್ಕೆ ಕರೆಯಿಸಿ, ನೀನು ಯಾರೆಂದು ವಿಷ್ಣುವನ್ನು ಪ್ರಶ್ನಿಸಿದನು. ॥೮೪॥

ಆಗ, ಸನಂದನಯೋಗಿಯು ಈಶ್ವರಭಕ್ತರಲ್ಲಿ ಶ್ರೇಷ್ಠವಾದ ಆ ರಾಜನನ್ನು ಕುರಿತು "ಎಲೈ ರಾಜನೇ! ಈತನು ಶ್ರೀಮನ್ನಾರಾಯಣನು. ಇಲ್ಲಿಗೆ ಪ್ರದೋಷಕಾಲದಲ್ಲಿ ಶಿವದರ್ಶನಾರ್ಥವಾಗಿ ಬಂದನು ಎಂದನು." ॥೮೫॥

ಹೀಗೆ ಸನಂದನನು ಹೇಳಿದುದನ್ನು ಕೇಳಿ ಆ ರಾಜನು ಶಿವಾರ್ಚನೆಯಲ್ಲಿ ಅಭಿಲಾಷೆಯುಳ್ಳ ವಿಷ್ಣುವನ್ನು ಕುರಿತು ನಿಜವಾದ ನಿನ್ನ ಧರ್ಮವೇನೆಂದು ಮತ್ತೆ ಕೇಳಿದನು. ॥೮೬॥

॥ ವಿಷ್ಣುರುವಾಚ ॥

ಧನ್ಯಃ ಕಿಮನ್ಯೋಽಸ್ತಿ ನೃಪೋಽಪಿ ಲೋಕೇ
ಮನ್ಯೇ ಶಿವಾರಾಧನಮೇವ ಧರ್ಮಂ ।
ಅನ್ಯತ್ರ ಧರ್ಮಂ ಭ್ರಮತಃ ಪ್ರವೃತ್ತಿಃ
ಜನ್ಮಾನುವೃತ್ತ್ಯೈ ಮರಣಾನುವೃತ್ತ್ಯೈ ॥೮೭॥

ಧರ್ಮಃ ಶಂಕರಪೂಜನಂ ನವಲಸದ್ಬಿಲ್ವೀದಳೈಃ ಕೋಮಲೈಃ
ಭಸ್ಮಾಂಗೇ ನಿಟಿಲೇ ವಿಭೂತಿವಿಲಸದ್ರೇಖಾವಳೀ ಕೇವಲಾ ।
ರುದ್ರಾಕ್ಷಾಮಲಮಾಲಿಕಾ ಶಿರಸಿ ವಾ ಕಂಠೇಽಪಿ ವಾ ಕರ್ಣಯೋಃ ।
ಶ್ರೀಪಂಚಾಕ್ಷರಮಂತ್ರರಾಜಜಪನಂ ಮನ್ಯೇ ಪರಂ ಮುಕ್ತಿದಂ ॥೮೮॥

ಧನ್ಯಾನಾಂ ಶಿವಪೂಜನೇ ಖಲು ಮತಿಪ್ರಾಗ್ಜನ್ಮಪುಣ್ಯಾರ್ಣವೈಃ
ತೂರ್ಣಂ ಶಂಕರಪೂಜನೇನ ಸ ಜನಿಃ ಸಂಸಾರವಾರ್ತಾ ಕುತಃ ।
ಭಾಗ್ಯೇನೈವ ಪರಂ ಮಹೇಶ್ವರಪದಾಂಭೋಜಾರ್ಚನೇ ಜಾಯತೇ
ಬುದ್ಧಿಃ ಸಿದ್ಧಿರಿಯಂ ವಿಶುದ್ಧಮನಸೋಽಪ್ಯನ್ಯಾನಸಿದ್ಧಿರ್ಯತಃ ॥೮೯॥

ಈ ಲೋಕದಲ್ಲಿ ಶಿವಾರಾಧನೆಗಿಂತ ಶ್ರೇಷ್ಠವಾದ ಧರ್ಮವೊಂದು ಕಾಣುವುದೇ? ನಾನು ಶಿವಾರಾಧನೆಯೇ ಧರ್ಮದ ಸ್ವರೂಪವೆಂದು ತಿಳಿದಿದ್ದೇನೆ. ಬೇರೆ ವಿಷಯಗಳಲ್ಲಿ ಧರ್ಮವೆಂಬ ಭ್ರಾಂತಿಯುಂಟಾಗಿ ಅದರಲ್ಲಿ ಅನೇಕರಿಗೆ ಪ್ರವೃತ್ತಿಯುಂಟಾಗುತ್ತದೆ. ಆ ಪ್ರವೃತ್ತಿಯು ಪುನರ್ಜನ್ಮಕ್ಕೂ, ಪುನರ್ಮೃತಿಗೂ ಕಾರಣವಾಗುವುದು. ॥೮೭॥

ಧರ್ಮವೆಂದರೆ ಕೋಮಲವಾದ ಹೊಸ ಬಿಲ್ವದಳಗಳಿಂದ ಶಿವಪೂಜೆ ಮಾಡುವುದೊಂದೇ. ಹಾಗೂ ಹಣೆಯಲ್ಲಿ ಭಸ್ಮತ್ರಿಪುಂಡ್ರವನ್ನು ಧರಿಸುವಿಕೆ; ಮತ್ತು ಶಿರಸ್ಸು, ಕಂಠ, ಕಿವಿಗಳು ಇವುಗಳಲ್ಲಿ ರುದ್ರಾಕ್ಷಮಾಲಿಕೆಯನ್ನು ಹಾಕಿಕೊಳ್ಳುವುದು, ಎಲ್ಲಾ ಮಂತ್ರಗಳಿಗೂ ಶ್ರೇಷ್ಠವಾಗಿಯೂ, ಮುಕ್ತಿಪ್ರದವೂ ಆದ ಶಿವಪಂಚಾಕ್ಷರ ಮಂತ್ರವನ್ನು ಜಪಿಸುವುದು, ಇವೂ ಧರ್ಮಕಾರ್ಯಗಳೆಂದು ತಿಳಿದಿದ್ದೇನೆ. ॥೮೮॥

ಹಿಂದಿನ ಜನ್ಮದಲ್ಲಿ ಮಾಡಿದ ಅಮಿತಪುಣ್ಯವಿಶೇಷದಿಂದ ಪುಣ್ಯವಂತರಿಗೆ ಮಾತ್ರ ಶಿವಪೂಜೆ ಮಾಡಬೇಕೆಂದು ಬುದ್ಧಿಯುದ್ಭವಿಸುವುದು. ಕೇವಲ ಶ್ರೀ ಶಂಕ

ನ ಜಾಸಂತ್ಯೇವಾನ್ಯೇ ಶಿವಪದಪದಾಂಭೋಜಭಜನ
ಪ್ರಭಾವಂ ಭಾವಾನಾಂ ಭವತಿ ಪರಮಾ ಸಾ ಮತಿರಪಿ ।
ಅಪಾರಂ ತತ್ಪುಣ್ಯಂ ಗಣಿತಮಪಿ ಕೇನಾಪಿ ಗಣನಾ
ಮತೀತ್ಯಾಸ್ತೇ ವಸ್ತುಪ್ರಕಟಮಪಿ ದೃಷ್ಟಂ ಭವತಿ ಕಿಂ ॥೯೦॥

ಅಖಂಡಭೂಮಂಡಲದಾನತೋಽಪಿ
ವಾಮಾರ್ಧಜಾನಿಪ್ರವಣಂ ಮನಃ ಕಿಂ ।
ಪರಂ ತು ತತ್ಸ್ಯಾದ್ಗಿರಿಜಾಸಹಾಯ
ಪದಾಂಬುಜಾರಾಧನಮಾತ್ರತಃ ಸ್ಯಾತ್ ॥೯೧॥

ಕತಿ ಕತಿ ಭುವಿ ಸಂತಃ ಸಂತಿ ತೇ ಸ್ವಾಂತರೂಪೇ
ಕನಕಕಮಲಕೋಶೇ ಶಂಕರಂ ಭಾವಯಂತಃ ।

ರನ ಪೂಜೆ ಮಾಡಿದುದರಿಂದಲೇ ಪುನಃ ಮನುಷ್ಯನು ಜನ್ಮಹೊಂದಲಾರನು. ಎಂದಮೇಲೆ ಆತನಿಗೆ ಸಂಸಾರಕ್ಲೇಶವಾದರೂ ಎಲ್ಲಿಯದು? ಅದೃಷ್ಟದಿಂದಲೇ ಶಿವನ ಪಾದಕಮಲಗಳ ಪೂಜೆಯಲ್ಲಿ ಮನುಷ್ಯನಿಗೆ ಮತಿಯುದಯಿಸುತ್ತದೆ. ಪರಿಶುದ್ಧವಾದ ಮನಸ್ಸುಳ್ಳವನಿಗೆ ಇದರಿಂದಲೇ ಸಿದ್ಧಿಯೊದಗುವುದು. ಬೇರೆ ಸಿದ್ಧಿಯು ಸಿದ್ಧಿಯೆಂದು ಹೇಳಿಸಿಕೊಳ್ಳಲಾರದು. ॥೮೯॥

ಇತರರು ಶಂಕರನ ಪಾದಕಮಲಗಳ ಭಜನೆಯ ಮಹಿಮೆಯನ್ನು ತಿಳಿಯಲಾರರು. ಅದೃಷ್ಟಶಾಲಿಗಳಿಗೆ ಮಾತ್ರ ಶಿವಭಜನೆಯಲ್ಲಿ ಪವಿತ್ರವಾದ ಬುದ್ಧಿಯು ಹುಟ್ಟುವುದು. ಆ ಶಿವಭಜನೆಯ ಪುಣ್ಯವು ಅಪಾರವಾದುದು. ಯಾವನೂ ಅದನ್ನು ಲೆಕ್ಕಮಾಡಿದವನಿಲ್ಲ. ಹೀಗೆ ಲೆಕ್ಕಕ್ಕೆ ಸಿಕ್ಕದ ಶಂಕರ ಭಜನೆಯ ಮಹಿಮೆಯು ಒಂದು ವೇಳೆ ಗೋಚರವಾದರೆ ಅದನ್ನು ನೋಡುವುದಕ್ಕಾದರೂ ಸಾಧ್ಯವೇ! ॥೯೦॥

ಸಮಸ್ತ ಭೂಮಂಡಲವನ್ನು ದಾನ ಮಾಡಿದ ಮಾತ್ರಕ್ಕೆ ಈ ಮನಸ್ಸು ಅರ್ಧಾಂಗನಾರೀಶ್ವರನಲ್ಲಿ ಆಸಕ್ತವಾಯಿತೆಂದು ಹೇಳಲು ಸಾಧ್ಯವಿಲ್ಲ. ಕೇವಲ ಗೌರೀಪತಿಯ ಪಾದಕಮಲಗಳ ಆರಾಧನೆಯಿಂದಲೇ ಆ ಎಲ್ಲಾ ಭೂಮಂಡಲವನ್ನೂ ದಾನಮಾಡಿದ ಪುಣ್ಯ ಲಭಿಸಬಹುದು. ಅಷ್ಟೇ! ॥೯೧॥

ಲೋಕದಲ್ಲಿ, ಕನಕಮಯವಾದ ಹೃದಯ ಪದ್ಮದಲ್ಲಿ ಶಿವನನ್ನು ಧ್ಯಾನಿಸುತ್ತಾ, ವಿಭೂತಿಭೂಷಿತರಾದ ಸತ್ಪುರುಷರು ಎಷ್ಟು ಮಂದಿ ಇರಬಹುದು? ಅವರೆ

ಸಿತಭಸಿತವಿಭೂಷಾಃ ಶಂಗಲಿಂಗಾಂಗಭೋಗೈಃ
ಚ್ಯುತಜಲಲವಪಾನಾಃ ಪೀನಮಾನಾನುಮೋದಾಃ ॥೯೨॥

ಯೇ ಯೇ ಶಂಕರಲಿಂಗಪೂಜನರತಾಸ್ತೇ ಸರ್ವಥಾ ದುರ್ಲಭಾಃ ।
ಶಂಭುಸ್ತುಷ್ಯತಿ ಯೇನ ಕೇನ ಸತತಂ ಧರ್ಮೇಣ ಲಭ್ಯಂ ಸುಖಂ ।
ಲಿಂಗಾರಾಧನಮೇವ ತಾವದಸಕೃತ್ಸೌಭಾಗ್ಯಸಂವರ್ಧಕಂ
ಬ್ರಹ್ಮಾನಂದಪದಮುಷ್ಯತಃ ಪರಮಪಿ ಪ್ರಾಯಃ ಕಿಮನ್ಯದ್ಭವೇತ್ ॥೯೩॥

ಯಾಗೈರ್ವಾ ತಪಸಾಪಿ ವಾ ಶಿವಪದಾಂಭೋಜಪ್ರಸಾದಂ ವಿನಾ ।
ಭಾಗ್ಯಂ ನೈವ ತದೇವ ಭಾಗ್ಯಮಸಕೃದ್ವೃದ್ಧಿಂ ಶಿವಾರಾಧನೈಃ
ಗೌರೀನಾಥಪದಾರವಿಂದಭಜನಾತ್ಕಿಂ ಕಿಂ ನ ಲಭ್ಯಂ ಭವೇತ್
ಭಾಗ್ಯಾನಾಂ ನಿಧಿರೇವ ಶಂಕರಪದಾಂಭೋಜಾರ್ಚನಂ ಸರ್ವಥಾ ॥೯೪॥

ಲ್ಲರೂ ಶಿವಲಿಂಗಾರ್ಚನೆಯಲ್ಲಿ ಆಸಕ್ತರಾಗಿ ಅನ್ನ ನೀರು ಇವನ್ನು ಬಿಟ್ಟಿದ್ದರೂ ದೇಹದಲ್ಲಿ ಪುಷ್ಟರಾಗಿಯೇ ಇರುವರು. ಆದರೆ ಅಂತಹ ಸಜ್ಜನರು ದುರ್ಲಭ. ॥೯೨॥

ಶಂಭುಲಿಂಗಾರ್ಚನೆಯಲ್ಲಿ ಆಸಕ್ತರಾದವರು ಸಿಗುವುದು ತುಂಬಾ ಕಷ್ಟ! ಅಂತಹ ಶಿವೋಪಾಸಕರಿಂದ ಈಶ್ವರನು ಸಂತೋಷಪಡುತ್ತಾನೆ. ಸುಖವಾದರೋ ಧರ್ಮದಿಂದ ಸಾಧ್ಯವಾದದ್ದು. ಯಾವಾಗಲೂ ಲಿಂಗಾರ್ಚನೆ ಮಾಡುತ್ತಿದ್ದರೆ ಅದು ಸೌಭಾಗ್ಯವನ್ನು ಬೆಳೆಸುತ್ತದೆ. ಮತ್ತು ಬ್ರಹ್ಮಾನಂದಕ್ಕೆ ಸಮಾನವಾದ ಆನಂದವನ್ನುಂಟುಮಾಡುತ್ತದೆ. ಸಾಮಾನ್ಯವಾಗಿ ಇದಕ್ಕೆ ಸರಿಯಾದ ಅಥವಾ ಶ್ರೇಷ್ಠವಾದ ಬೇರೊಂದು ಧರ್ಮವೇ ಇಲ್ಲ. ॥೯೩॥

ಪರಮೇಶ್ವರನ ಅನುಗ್ರಹವಿಲ್ಲದೇ ಯಾಗಗಳಿಂದಾಗಲಿ ತಪಸ್ಸಿನಿಂದಲಾಗಲೀ ಸ್ವರ್ಗಾದಿ ಭಾಗ್ಯಗಳು ದೊರಕಲಾರವು. ಪುನಃ ಪುನಃ ಲಿಂಗಾರ್ಚನೆ ಮಾಡುವಿಕೆಯು ಪುಣ್ಯಗಳ ಅಭಿವೃದ್ಧಿಗೆ ಕಾರಣವಾಗುವುದು. ಎಲ್ಲಾ ವಿಧವಾದ ಭಾಗ್ಯಗಳಿಗೂ ನಿಧಿಯುಂತಿರುವ ಪರಮೇಶ್ವರನ ಪಾದಾರ್ಚನೆಯು ನಿಜವಾಗಿಯೂ ಭಾಗ್ಯಪ್ರದವಾದುದು. ಗೌರೀನಾಥನಾದ ಆ ಶಂಕರನ ಸೇವೆಯಿಂದ ಮನುಷ್ಯನಿಗೆ ಏನುತಾನೆ ಲಭಿಸುವುದಿಲ್ಲ? ॥೯೪॥

‡

ಯತ್ಪಾದಾಂಬುಜಪೂಜಯಾ ಕೃತಮಹಾಪಾಪಕ್ಷಯಃ ಸ್ಯಾತ್ತತಃ
ಸಂಪದ್ವೃದ್ಧಿರನುಕ್ಷಣಂ ಪ್ರತಿದಿನಂ ಸಂತೋಷಧಾರೋದಯಃ ।
ಧೀರೋದಾರಕುಮಾರದಾರವಿಭವಪ್ರಾಪ್ತಿಶ್ಚ ತಂ ಶೈಲಜಾ
ಕಾಂತಸ್ವಾಂತಮುಪೇಕ್ಷತೇ ಮಮ ಸದಾ ಸಂಸೇವನಂ ಸರ್ವಥಾ ॥೯೫॥

ಯತ್ಪಾದಾಬ್ಜರಜಃಪ್ರಭಾವಮಹಿಮಾ ವೇದೈರ್ನ ವಿಜ್ಞಾಯತೇ
ವೇದಾಂತೈರಪಿ ಸಂತತಂ ಮುನಿಜನಸ್ವಾಂತೈರಸಂತೈರಪಿ ।
ತಂ ದೇವೋತ್ತಮಮಾಮನಂತಿ ಗಿರಿಶಂ ವೇದಾಶ್ಚ ತತ್ಪಾದುಕಾ
ಧ್ಯಾನಾರಾಧನಸಾಧನಂ ಮಮ ಮನೋ ನಾನ್ಯಂ ನ ಜಾನೇ ಪರಂ ॥೯೬॥

ಸ್ಮೃತೋಽಪಿ ಯಃ ಸರ್ವಸುರಾಸುರೇಶ್ವರೋ
ದದಾತಿ ಮುಕ್ತಿಂ ಸ ಶಿವಃ ಕಥಂ ವಾ ।
ನಾರಾಧನೀಯೋ ನ ಚ ಸೇವನೀಯಃ
ಸ ಏವ ತಾವತ್ಸುರಭೂರುಹೋ ಮೇ ॥೯೭॥

ಶ್ರೀಪರಮೇಶ್ವರನ ಅಡಿದಾವರೆಗಳನ್ನು ಅರ್ಚಿಸುವುದರಿಂದ ನಾವು ಮಾಡಿದ ಮಹಾಪಾಪಗಳು ಅಳಿಯುತ್ತವೆ. ಪ್ರತಿದಿನವೂ ಪ್ರತಿ ಕ್ಷಣದಲ್ಲಿಯೂ ಸಂಪತ್ತಿನೊಡನೆ ಸಂತೋಷಧಾರೆಯುದ್ಭವಿಸುತ್ತದೆ. ಮತ್ತು ಆ ಶೈಲಪುತ್ರಿಯ ಪತಿಯಾದ ಶಿವನ ಆರಾಧನೆಯ ಪುಣ್ಯವಿಶೇಷದಿಂದ, ಧೀರರೂ, ದಾನಶಾಲಿಗಳೂ ಆದ ಮಕ್ಕಳು ಹೆಂಡಿರು ಇವರ ಸಂಪರ್ಕವು ಲಭಿಸುತ್ತದೆ. ಆದುದರಿಂದ ನನಗೆ ಯಾವಾಗಲೂ ಶ್ರೀಹರನ ಸೇವೆಯೇ ಇಷ್ಟವಾಗಿದೆ. ॥೯೫॥

ದೇವಶ್ರೇಷ್ಠನಾದವನೆಂದು ಋಷಿಗಳೆಲ್ಲಾ ಶಂಕರನನ್ನು ಹೊಗಳುವರು. ಆತನ ಪಾದಕಮಲಗಳ ಧೂಳಿನ ಮಹಿಮೆಯನ್ನು ವೇದಗಳಿಂದಲೂ ತಿಳಿಯಲು ಸಾಧ್ಯವಿಲ್ಲ. ಮತ್ತು ವೇದಾಂತಗಳಿಂದಾಗಲೀ, ಅದರ ಮಹಿಮೆಯು ತಿಳಿಯಲಸಾಧ್ಯವಾಗುವುದು. ವೇದಗಳು ಶ್ರೀಶಂಕರನ ಪೂಜೆಗಳಿಗೆ ಸಾಧಕನಾಗುವುವೇ ಹೊರತು ಅಪಾರವಾದ ಆತನ ಮಹಿಮೆಯನ್ನು ತಿಳಿಸಲಾರವು. ಅಂಥ ನನ್ನ ಈ ಮನಸ್ಸು ಶಂಕರನನ್ನು ಬಿಟ್ಟು ಬೇರೊಬ್ಬನನ್ನು ಎಂದೂ ತಿಳಿಯದಾಗಿದೆ. ॥೯೬॥

ದೇವತೆಗಳಿಗೂ ರಾಕ್ಷಸರಿಗೂ ಕೂಡ ಅಧಿಪತಿಯಾದ ಶಿವನು ಸ್ಮರಣೆ ಮಾಡಿದ ಮಾತ್ರಕ್ಕೆ ಮುಕ್ತಿಯನ್ನು ಕೊಡುವನು. ಇಂತಹ ಶಿವನನ್ನು ಪೂಜಿಸದೆ,

ಯನ್ನಾಮಸ್ಮರಣಪ್ರವೀಣಚರಣಾಂಭೋಜಾರ್ಚಕಾ ವಾಸುಕಿ
ಬ್ರಹ್ಮೇಂದ್ರಾದಿಮರುದ್ಗಣಾ ಅಪಿ ತಥಾ ಗಂಧರ್ವಸಿದ್ಧಾದಯಃ ।
ತಸ್ಯೈಶ್ವರ್ಯಮಪಾರಮಪ್ರತಿಮಮಪ್ಯಾರ್ತಿಪ್ರಹಾಣೋದ್ಯತಂ
ತಂ ದೇವೋತ್ತಮಮಂತಕಾಂತಕಮಹಂ ಮನ್ಯೇ ಸುರಾಧೀಶ್ವರಂ ॥೯೮॥

ಯಲ್ಲಿಂಗಾರ್ಚನಮಾತ್ರಲಬ್ಧಮಧುನಾ ವೈಕುಂಠರೂಪಂ ಪರಂ
ಸ್ಥಾನಂ ಮೇ ತದಪಾರದಿವ್ಯಮಹಿಮಾ ವಿಜ್ಞಾಯತೇ ಕೇನ ವಾ ।
ತಂ ನತ್ವಾ ಸಕೃದಪ್ಯುಮಾಪತಿಮತರ್ಕ್ಯೈಶ್ವರ್ಯಸೌಭಾಗ್ಯದಂ
ಪ್ರಾಪ್ತೈಶ್ವರ್ಯಮಪಾರಮೇವ ಬಹವಃ ಪ್ರಾಪ್ತಾಶ್ಚ ಮುಕ್ತಿಂ ಪರಂ ॥೯೯॥

ಅಸ್ಮಾಕಂ ಶಿವಲಿಂಗಮೇವ ಸತತಂ ಪೂಜ್ಯಂ ತದಭ್ಯರ್ಚನಾತ್
ಪ್ರಾಪ್ತಂ ಭಾಗ್ಯಮತಃ ಪರಂ ಪುನರಪಿ ಪ್ರಾಪ್ತವ್ಯಮೇವಾಸಕೃತ್ ।

ಭಜಿಸದೇ ಯಾವುದನ್ನೂ ತಾನೇ ಹೊಂದಲಾದೀತು! ಆದುದರಿಂದ ಆತನೇ ನನಗೆ ಕಲ್ಪವೃಕ್ಷಪ್ರಾಯನಾಗಿರುವನು. ॥೯೭॥

ನಾನು ಉಮಾಕಾಂತನಾದ ಮಹಾದೇವನನ್ನು ದೇವಶ್ರೇಷ್ಠನೆಂದು ತಿಳಿಯುತ್ತೇನೆ. ಆತನು ದೇವತೆಗಳಿಗೆಲ್ಲಾ ಅಧಿಪತಿಯು, ಆತನು ಕಷ್ಟನಿವಾರಕನು. ಅಲ್ಲದೆ ಆತನ ಐಶ್ವರ್ಯವು ಅಪಾರವೂ ಅಸಾಧಾರಣವೂ ಆಗಿದೆ. ವಾಸುಕಿ, ಬ್ರಹ್ಮ, ಇಂದ್ರ ಮೊದಲಾದ ದೇವತೆಗಳ ಸಮೂಹವೂ, ಹಾಗೆಯೇ ಗಂಧರ್ವರೂ ಸಿದ್ಧರೂ ಸಹ ಆತನ ಧ್ಯಾನ ಮಾಡುವುದರಲ್ಲಿ ಪ್ರವೀಣರಾಗಿರುವರು. ॥೯೮॥

ಯಾವನ ಲಿಂಗಾರ್ಚನ ಮಾತ್ರದಿಂದ ನನಗೆ ಶ್ರೇಷ್ಠವಾದ ವೈಕುಂಠವು ಪ್ರಾಪ್ತವಾಯಿತೋ ಅಂಥವನ ಮಹಿಮೆಯನ್ನು ಯಾವನು ತಾನೆ ಬಲ್ಲನು? ಹೇಗೆ ತಾನೆ ತಿಳಿಯಲಾದೀತು? ಅನೇಕರು ಅಪರಿಮಿತವಾದ ಐಶ್ವರ್ಯವನ್ನೀಯುವ ಆ ಉಮಾಪತಿಯನ್ನು ಒಂದು ಬಾರಿ ಸ್ಮರಣೆ ಮಾಡಿ ಅಷ್ಟರಿಂದಲೇ ಅಪಾರ ವೈಭವವನ್ನು ಹೊಂದಿ ಶಾಶ್ವತವಾದ ಮುಕ್ತಿಯನ್ನು ಪಡೆದಿರುವರು. ॥೯೯॥

ನಮಗೆ ಯಾವಾಗಲೂ ಶಿವಲಿಂಗವೇ ಪೂಜ್ಯವಾದದ್ದು. ಅದರ ಪೂಜೆಯಿಂದಲೇ ನಮಗೆ ಐಶ್ವರ್ಯವು ಪ್ರಾಪ್ತವಾಗಿದೆ. ಆದುದರಿಂದ ಇನ್ನು ಮುಂದೆಯೂ ಅನೇಕ ಸಲ

ಸೌಭಾಗ್ಯಂ ಸುಖದಾನಮಾತ್ರನಿಪುಣಃ ಕಾರುಣ್ಯಪೂರ್ಣಾರ್ಣವಃ
ತಂ ಗೌರೀರಮಣಂ ಕ್ಷಣೇನ ಶರಣಂ ಪ್ರಾಪ್ತಾಃ ಸುರಾಃ ಸರ್ವದಾ ॥೧೦೦॥

ಚಕ್ರಂ ಪ್ರಾಪ್ತಮುಮಾಸಹಾಯಚರಣಾಂಭೋಜಾರ್ಚನೇನಾದರಾತ್
ತೇನೈವಾಸುರವೈರಿಶಾಸನಕರಃ ಸೋಽಹಂ ತದಾಜ್ಞಾಕರಃ ।
ತದ್ಭೃತ್ಯೈರಪಿ ನಂದಿಕೇಶ್ವರಮುಖೈರ್ವಿಜ್ಞಾಯತೇ ಮದ್ಬಲಂ
ಶರ್ವಾರಾಧನಸಾಧಿತಂ ತದಪಿ ಮೇ ವೃದ್ಧಿಂ ಶಿವಾರಾಧನಾತ್ ॥೧೦೧

ಕಂಸಃ ಶಂಕರಪಾದಪದ್ಮಭಜನಪ್ರಾಪ್ತಾತ್ ಬಲಾತ್ ಸಂಹತಃ
ಚಾಣೂರೋಽಪಿ ಮುರೋಽಪಿ ತತ್ಪದರಜಃಪುಂಜಪ್ರಸಾದಾತ್ತಥಾ ।
ಸರ್ವಾರ್ಥಪ್ರದ ಏವ ಶಂಕರ ಇತಿ ಜ್ಞಾತಸ್ತದಾರಾಧನೇ
ಕಿಂ ವಾ ದುರ್ಲಭಮಿತ್ಯವೈಮಿ ಸ ನಿಧಿಃ ಸಾಕ್ಷಾನ್ನಿಧೀನಾಂ ನಿಧಿಃ ॥೧೦೨॥

ಈಶ್ವರನನ್ನೇ ಪೂಜಿಸಬೇಕು. ಕರುಣಾಳುವಾದ ಆತನು ಸುಖಸೌಭಾಗ್ಯವನ್ನು ದಯಪಾಲಿಸುವನು. ಸುಖವನ್ನೀಯುವವರೊಳಗೆ ನಿಪುಣನಾದ ಆ ಗೌರೀಶಂಕರನನ್ನು ದೇವತೆಗಳು ಭಜಿಸಿ, ಶಾಶ್ವತವಾದ ಸುಖವನ್ನು ಹೊಂದಿದರು. ॥೧೦೦॥

ಪರಮೇಶ್ವರನನ್ನು ಆರಾಧನೆಮಾಡಿದುದರಿಂದ ನನಗೆ ಸುದರ್ಶನ ಚಕ್ರವು ಲಭಿಸಿತು. ಆ ಶಿವನ ಆರಾಧನೆಯಿಂದಲೇ ನಾನು ರಾಕ್ಷಸರನ್ನು ಸಂಹರಿಸಲು ಶಕ್ತನಾದೆನು. ನಾನು ಶಂಕರನ ಆಜ್ಞೆಯಂತೆ ನಡೆದುಕೊಳ್ಳತಕ್ಕವನು. ಮಹಾದೇವನ ಸೇವಕರಾದ ನಂದಿಯೇ ಮೊದಲಾದವರು ನನ್ನ ಶಕ್ತಿಯನ್ನು ಬಲ್ಲರು. ಆ ಶಕ್ತಿಯೂ ಕೂಡ ಶಿವನ ಪೂಜೆಯಿಂದಲೇ ಸಂಪಾದಿಸಿದುದಾಗಿದೆ. ಅದರ ವೃದ್ಧಿಯೂ ಸಹ ಶಿವನ ಪ್ರಭಾವದಿಂದಲೇ ಆಗುವುದು. ॥೧೦೧॥

ಕಂಸ, ಚಾಣೂರ, ಮುರ ಇವರನ್ನು ಶ್ರೀಶಂಕರನ ಪಾದಧೂಳಿಯ ಬಲದಿಂದ ಸಂಹರಿಸಿದೆನು. ಆತನು ಸಮಸ್ತ ಇಷ್ಟಾರ್ಥಗಳನ್ನೂ ದಯಪಾಲಿಸುವವನಾಗಿದ್ದಾನೆ, ಎಂದು ತಿಳಿಯಿತು. ಅವನ ಪೂಜೆಯು ದುರ್ಲಭವೆಂದು ತಿಳಿದಿದ್ದೇನೆ. ಸಾಕ್ಷಾತ್ ನವನಿಧಿ ಮುಂತಾದ ನಿಧಿಗಳಿಗೂ ನಿಧಿಯೆಂದರೆ ಶ್ರೀಮಹಾದೇವನ ಅರ್ಚನೆಯೇ ಹೊರತು ಬೇರೆಯಲ್ಲ. ॥೧೦೨॥

ಯನ್ನಾಮಾಮೃತಪಾನಪೀನಮನಸಾಂ ಸಿದ್ಧಿಃ ಕರಸ್ಥಾ ಸದಾ
ಸರ್ವೇ ತೇ ನಿಧಯೋಽಪಿ ತದ್ಗೃಹಗತಾಸ್ತಂ ದೇವದೇವಂ ಭವಂ ।
ಭಕ್ತಾಭೀಪ್ಸಿತದಾನಲೋಲಮಮಲಜ್ವಾಲಾಲವಾಲೋಲ್ಲಸ
ತ್ಫಾಲಂ ಬಾಲಸುಧಾಕರಾಮಲಜಟಾಲೀಲಾಕಲಾಪಂ ಭಜೇ ॥೧೦೩॥

ಇತಿ ತದ್ವಚನಂ ಶ್ರುತ್ವಾ ರಾಜಾ ಸಂತುಷ್ಟಮಾನಸಃ ।
ದದೌ ಹಾರಾನಪಾರಾಂಶ್ಚ ಹಾರಬುದ್ಧ್ಯಾ ಸ ವಿಷ್ಣವೇ ॥೧೦೪॥

ಕಮಲಾ ರಾಜದಾರಾಣಾಂ ನಿಕಟೇ ಶಿವಗಾಯನ್ನೈಃ ।
ವೀಣಾಂ ಗೃಹೀತ್ವಾ ಸಂತೋಷಂ ಜನಯಾಮಾಸ ಸಾದರಂ ॥೧೦೫॥

ತಾಮಿಂದಿರಾಮಿಂದುಕಲಾವತಂಸ
ಗಾನಾನುರಕ್ತಾಂ ನೃಪನವ್ಯದಾರಾಃ ।
ವಿಲೋಕ್ಯ ಭಾಗ್ಯಂ ಕಮಲೇ ತವೇತಿ
ತಾಮೂಚುರತ್ಯಾದರಮಬ್ಧಿಕನ್ಯಾಂ ॥೧೦೬॥

ಪರಶಿವನ ನಾಮಾಮೃತವನ್ನು ಪಾನಮಾಡುವವರಿಗೆ ನಿಜವಾಗಿಯೂ ಸಿದ್ಧಿಯು ಹಸ್ತಗತವಾದಂತೆಯೇ ಸರಿ. ಎಲ್ಲಾ ನಿಧಿಗಳೂ ಅವರ ಮನೆಗೆ ಬಂದು ಸೇರುತ್ತವೆ. ಭಕ್ತರಿಗೆ ಬೇಕಾದುದನ್ನು ನೀಡುವವನೂ, ಪ್ರಕಾಶಿಸುತ್ತಿರುವ ಅಗ್ನಿಯಿಂದ ಕಂಗೊಳಿಸುವ ಹಣೆಯುಳ್ಳವನೂ, ಎಳೆಯ ಬಾಲ ಚಂದ್ರನ ಸ್ವಚ್ಛವಾದ ಕಿರಣಗಳಿಂದ ರಂಜಿಸುತ್ತಿರುವ ಜಡೆಯುಳ್ಳವನೂ ಆದ ಆ ಮಹಾದೇವನನ್ನು ನಾನು ಯಾವಾಗಲೂ ಭಜಿಸುವೆನು. ॥೧೦೩॥

ಹೀಗೆಂದ ಮಾತನ್ನು ಕೇಳಿ ಆ ರಾಜನು ಸಂತೋಷ ಹೊಂದಿದನು. ಮತ್ತು ಅನೇಕ ಹಾರಗಳನ್ನು, ವಿಷ್ಣುವು ಈಶ್ವರನ ಸಂಬಂಧಿಯೆಂದು ಭಾವಿಸಿ, ಆತನಿಗೆ ದಾನ ಮಾಡಿದನು. ॥೧೦೪॥

ಲಕ್ಷ್ಮೀದೇವಿಯೂ ರಾಜಪತ್ನಿಯರ ಸಮೀಪದಲ್ಲಿ ಕುಳಿತುಕೊಂಡು ಹಾಗೆಯೇ ವೀಣೆಯನ್ನು ಬಾರಿಸುತ್ತಾ ಶಿವ ಕೀರ್ತನೆಗಳನ್ನು ಹಾಡಿದಳು. ॥೧೦೫॥

ಆ ಚಂದ್ರಶೇಖರನ ಕೀರ್ತನೆಗಳನ್ನು ಹಾಡುವುದರಲ್ಲಿ ತೊಡಗಿರುವ ಲಕ್ಷ್ಮೀದೇವಿಯನ್ನು ಆ ರಾಣಿಯರು ನೋಡಿ, ಲಕ್ಷ್ಮೀದೇವಿ! ನೀನೇ ಅದೃಷ್ಟಶಾಲಿನಿಯು ಎನ್ನುತ್ತಾ ತುಂಬಾ ಆದರದಿಂದ ಹೀಗೆ ನುಡಿದರು. ॥೧೦೬॥

ವೈಕುಂಠಭವನೇ ನಿತ್ಯಂ ಕಿಂ ತೇ ಕಾರ್ಯಂ ಕಥಂ ತ್ವಯಾ ।
ಸಮಯೋ ನೀಯತೇ ಪದ್ಮೇ ವದ ಸಾದರಮದ್ಯ ನಃ ॥೧೦೭॥

ತತ್ರಾಸ್ತಿ ಸದನಂ ರಮ್ಯಂ ಹರ್ಮ್ಯಸ್ಯಾಧೋ ಮನೋಹರಂ ।
ತತ್ರ ಲಿಂಗಾನಿ ತಿಷ್ಠಂತಿ ನಾರ್ಮದಾನ್ಯೇವ ಕೇವಲಂ ॥೧೦೮॥

ತಾನಿ ಲಿಂಗಾನಿ ಮಂದಾರೈಃ ಕೋಮಲೈರ್ಬಿಲ್ವಪಲ್ಲವೈಃ ।
ಪೂಜ್ಯಂತೇ ಪರಿತಸ್ತಸ್ಯ ಮಂದಾರಾಃ ಸಂತಿ ಕೋಟಿಶಃ ॥೧೦೯॥

ತತ್ರೈವ ಬಿಲ್ವತರವಃ ಸಂತಿ ತಾವತ್ಸಹಸ್ರಶಃ ।
ಅಖಂಡಬಿಲ್ವಪತ್ರಾಣಾಮಾಕರಾ ಏವ ಸರ್ವದಾ ॥೧೧೦॥

ತತ್ಪೂಜನಾರ್ಥಮುದ್ಯೋಗೇ ಕೃತೇ ಸತ್ಯೇವ ಶಾಖಿನಃ ।
ಅವಾಙ್ಮುಖಾ ಭವಂತ್ಯೇವ ಕರಗ್ರಾಹ್ಯಾಸ್ತಥೋನ್ನತಾಃ ॥೧೧೧॥

ಲಕ್ಷ್ಮೀದೇವಿಯೇ! ನೀನು ವೈಕುಂಠದಲ್ಲಿ ಯಾವ ಕೆಲಸವನ್ನು ನಿತ್ಯವೂ ನಿರ್ವಹಿಸುವೆ? ಹೇಗೆ ನೀನು ಕಾಲಕಳೆಯುತ್ತಿಯೆ! ಎಂಬುದನ್ನು ಆದರದಿಂದ ನಮಗೆ ಹೇಳು ಎಂದು ರಾಜನ ಭಾರ್ಯೆಯರು ಕೇಳಿಕೊಂಡರು. ಆಗ ಲಕ್ಷ್ಮಿಯು ಹೀಗೆಂದಳು. ॥೧೦೭॥

“ವೈಕುಂಠಲೋಕದಲ್ಲಿರುವ ದೊಡ್ಡ ಉಪ್ಪರಿಗೆಯ ಕೆಳಭಾಗದಲ್ಲಿ ಒಂದು ರಮಣೀಯವಾದ ಸೌಧವಿದೆ. ಅಲ್ಲಿ ನರ್ಮದಾಸಂಬಂಧವಾದ ಅನೇಕ ಶಿವಲಿಂಗಗಳನ್ನು ಸ್ಥಾಪಿಸಿದ್ದಾರೆ. ॥೧೦೮॥

ಆ ಲಿಂಗಗಳನ್ನು ನಿತ್ಯವೂ ಮನೋಹರಗಳಾದ ಮಂದಾರ ಮತ್ತು ಬಿಲ್ವ ಪಲ್ಲವಗಳಿಂದ ಅರ್ಚಿಸುತ್ತಾರೆ. ಆ ಸೌಧದ ಸುತ್ತಲೂ ಅನೇಕ ಮಂದಾರವೃಕ್ಷಗಳು ಬೆಳದಿವೆ. ॥೧೦೯॥

ಅಲ್ಲಿ ಅನೇಕ ಸಾವಿರಗಟ್ಟಲೆ ಬಿಲ್ವವೃಕ್ಷಗಳೂ ವಿರಾಜಿಸುತ್ತಿವೆ. ಅವೆಲ್ಲಾ ಹುಳುಕುಗಳಿಲ್ಲದೆ ಶುದ್ಧಗಳಾದ ಬಿಲ್ವಪತ್ರೆಗಳಿಗೆ ಗಣಿಯಂತಿವೆ. ॥೧೧೦॥

ಆ ಶಿವಲಿಂಗಪೂಜೆಗೆ ಆರಂಭವಾದೊಡನೆ ಆ ವೃಕ್ಷಗಳೆಲ್ಲಾ ತಾವಾಗಿಯೇ ಬಗ್ಗುತ್ತವೆ. ಆಗ ಅವುಗಳ ಪತ್ರೆ ವೊದಲಾದುವನ್ನು ನೆಲದಲ್ಲಿ ನಿಂತು ಕೈಯಿಂದಲೇ ಕೊಯ್ಯಬಹುದು. ॥೧೧೧॥

ಉಪವಿಶ್ಯೈವ ತತ್ಪತ್ರೈಃ ಕುಸುಮೈರಪಿ ಶಂಕರಃ ।
ಪೂಜ್ಯತೇ ಸಾವಧಾನೇನ ಪಂಚಾಕ್ಷರಪುರಃಸರಂ ॥೧೧೨॥

ಕರ್ಪೂರದೀಪಮಾಲಾಭಿರ್ಮಂಡಿತಂ ಶಿವಮಂದಿರಂ ।
ಮುಕ್ತಾಕಲಾಪಸಂಕೀರ್ಣಂ ಮಣಿದೀಪವಿರಾಜಿತಂ ॥೧೧೩॥

ತತ್ರ ಹೇಮಮರಾಳಾನಾಂ ಸಮೂಹಾಃ ಸಂತಿ ಕೋಟಿಶಃ ।
ತೇ ಚ ಹೇಮಾಂಬುಜೈರ್ನಿತ್ಯಂ ಪೂಜಯಂತಿ ಮಹೇಶ್ವರಂ ॥೧೧೪॥

ಶಿವಂ ಪ್ರದಕ್ಷಿಣೀಕೃತ್ಯ ಶಿವನಾಮಜಪೋತ್ಸುಕಾಃ ।
ನೃತ್ಯಂತಿ ಹಂಸಾಃ ಸರ್ವೇಽಪಿ ತಸ್ಮಿನ್ ಶಿವಗೃಹಾಂಗಣೇ ॥೧೧೫॥

ತೇಷಾಂ ತು ಕೃತ್ಯಮನ್ಯಂ ತು ಹಂಸಾನಾಂ ನೈವ ದೃಶ್ಯತೇ ।
ತಿರ್ಯಂಚತ್ವಮಪಾಸ್ಯಾಪಿ ಕುರ್ವಂತಿ ಶಿವಪೂಜನಂ ॥೧೧೬॥

ಕೆಳಗೆ ಕುಳಿತುಕೊಂಡೇ ಶಂಕರನನ್ನು ಆ ವೃಕ್ಷಗಳ ಹೂ ಪತ್ರೆಗಳಿಂದ ಪಂಚಾಕ್ಷರಮಂತ್ರಪುರಃಸರವಾಗಿ ಪೂಜೆಮಾಡಬಹುದು. ॥೧೧೨॥

ಅಲ್ಲಿರುವ ಪರಮೇಶ್ವರನ ಗುಡಿಯು ಮುತ್ತಿನ ಮಣಿಗಳಿಂದ ಕಂಗೊಳಿಸುತ್ತಿದೆ. ಮತ್ತು ಕರ್ಪೂರ ದೀಪಗಳನ್ನು ಅಲಂಕಾರಕ್ಕಾಗಿ ಜೋಡಿಸಿರುವರು. ರತ್ನಮಯಗಳಾದ ದೀಪಗಳು ರಂಜಿತವಾಗಿವೆ. ॥೧೧೩॥

ಅಲ್ಲಿ ಕಾಂಚನಮಯವಾದ ಹಂಸಗಳ ಸಮೂಹವನೇಕವಿವೆ. ಅವು ಬಂಗಾರದ ಕಮಲಗಳಿಂದ ಪ್ರತಿನಿತ್ಯವೂ ಶಂಕರನನ್ನು ಪೂಜಿಸುತ್ತಿವೆ. ॥೧೧೪॥

ಆ ಪರಮೇಶ್ವರದೇವಾಲಯದ ಅಂಗಳದಲ್ಲಿ ಹಂಸಗಳು ಶಿವಜಪಗಳನ್ನು ಆಚರಿಸುತ್ತಿವೆ. ಅಲ್ಲದೆ ಪರಶಿವನಿಗೆ ಪ್ರದಕ್ಷಿಣೆಮಾಡಿ ಅನಂತರ ನಾಟ್ಯವನ್ನು ಮಾಡುತ್ತಿವೆ. ॥೧೧೫॥

ಆ ಹಂಸಗಳಿಗೆ ಈ ಕೆಲಸದ ಹೊರತು ಬೇರೆ ಕೃತ್ಯವಿರುವುದಿಲ್ಲ. ಅವು ತಿರ್ಯಕ್‌ಪ್ರಾಣಿಗಳಿಗೆ ಸಿದ್ಧವಾದ ಮೌಢ್ಯಾದಿ ಸ್ವಭಾವವನ್ನೂ ಬಿಟ್ಟು ಶಿವಪೂಜೆಯನ್ನು ನೆರವೇರಿಸುತ್ತವೆ. ॥೧೧೬॥

ತೇ ಸುವರ್ಣಮೃಣಾಳಾನಾಂ ಮಾಲ್ಯಾನ್ಯಾನೀಯ ಸಾದರಂ ।
ಪ್ರಯಚ್ಛಂತಿ ಮಹೇಶಾಯ ಸೋಪಭೋಜ್ಯಾನಿ ಸರ್ವದಾ ॥೧೧೭॥

ತೇಽಪಿ ಭೂತಿತ್ರಿಪುಂಡ್ರಾಂಕಾ ಭೂತಿರುದ್ರಾಕ್ಷಭೂಷಣಾಃ ।
ತೇಷಾಮಾಲೋಕನೇನಾಪಿ ಭಕ್ತಿರ್ಭವತಿ ಶಂಕರೇ ॥೧೧೮॥

ತತ್ರ ಯೇ ಯೇ ವಿಹಂಗಾಶ್ಚ ತೇ ತೇ ಹಿ ಶಿವಪೂಜಕಾಃ ।
ಪಠಂತಿ ಶಿವನಾಮಾನಿ ತೇಽಪಿ ತಾವನ್ಮುಹುರ್ಮುಹುಃ ॥೧೧೯॥

ಪೂಜಾಂತೇ ಶಿವನೈವೇದ್ಯಂ ತೈಃ ಸಹೈವ ವಿಗೃಹ್ಯತೇ ।
ತೇಽಪಿ ಶಂಕರನೈವೇದ್ಯಭೋಜನಾಸಕ್ತಮಾನಸಾಃ ॥೧೨೦॥

ಪ್ರತಿಯಾಮೇ ಮಹಾದೇವ ಶಂಕರೇತಿ ವದಂತಿ ತೇ ।
ಶಿವನಾಮಾನುಸಂಧಾನನಿರತಾಸ್ತೇನ ಸರ್ವದಾ ॥೧೨೧॥

ಗೌರೀಪತೇ ಮಹಾದೇವ ಶಂಕರಾಮರನಾಯಕ ।
ಪಾಹಿ ಪಾಹೀತಿ ಸರ್ವೇಽಪಿ ತೇ ವದಂತಿ ಪ್ರತಿಕ್ಷಣಂ ॥೧೨೨॥

ಮೇಲೆ ಹೇಳಿದ ಹಂಸಪಕ್ಷಿಗಳು ಬಂಗಾರದಂತೆ ಹೊಳೆಯುವ ಕಮಲದ ದಂಟಿನ ಮಾಲೆಗಳನ್ನು ಶಿವನಿಗೆ ನೈವೇದ್ಯವಾಗಿ ಅರ್ಪಿಸುತ್ತವೆ. ||೧೧೭||

ಆ ಹಂಸಗಳು ವಿಭೂತಿ, ರುದ್ರಾಕ್ಷಗಳನ್ನು ಧರಿಸಿವೆ. ಅಂತಹವುಗಳ ದರ್ಶನ ಮಾತ್ರದಿಂದಲೇ ಜನರಿಗೆ ಶಿವನಲ್ಲಿ ಭಕ್ತಿ ಹುಟ್ಟುತ್ತದೆ. ||೧೧೮||

ಅಲ್ಲಿರುವ ಎಲ್ಲಾ ಹಕ್ಕಿಗಳೂ ಕೂಡ ಶಿವನನ್ನು ಪೂಜಿಸತಕ್ಕವುಗಳೇ ಆಗಿವೆ. ಅವೆಲ್ಲಾ ಪುನಃ ಪುನಃ ಶಿವನಾಮಗಳನ್ನು ಪಠಿಸುತ್ತವೆ. ||೧೧೯||

ಪೂಜೆಯ ಅವಸಾನಕಾಲದಲ್ಲಿ ಶಿವನೈವೇದ್ಯವನ್ನು ಅವು ಸ್ವೀಕರಿಸುತ್ತವೆ. ಮತ್ತು ಅವು ಶಿವನೈವೇದ್ಯ ಭೋಜನದಲ್ಲಿ ಅತ್ಯಾಸಕ್ತಗಳಾಗಿವೆ. ||೧೨೦||

ಪ್ರತಿ ಯಾಮದಲ್ಲಿಯೂ ಅವು ಮಹಾದೇವ, ಶಂಕರ, ಎಂದು ಶಿವನಾಮಗಳನ್ನುಚ್ಚರಿಸುತ್ತಾ ಯಾವಾಗಲೂ ಶಿವನಾಮಗಳನ್ನೇ ಅನುಸಂಧಾನಮಾಡುತ್ತಲಿವೆ. ||೧೨೧||

ಗೌರೀಪತೇ! ಶಂಕರ, ಮಹಾದೇವ, ಅಮರನಾಯಕ, ನಮ್ಮನ್ನು ಕಾಪಾಡು ಎಂದು ಅವುಗಳೆಲ್ಲಾ ಪ್ರತಿಕ್ಷಣದಲ್ಲಿಯೂ ಪ್ರಾರ್ಥಿಸುತ್ತವೆ. ||೧೨೨||

ಶಿವನಾಮಸುಧಾಧಾರಾವೀತಂ ಶಂಕರಮಂದಿರಂ ।
ಮದರ್ಥಮೇವ ರಚಿತಂ ತತ್ತ್ವಾಪದತಿಸುಂದರಂ ॥೧೨೩॥

ಮಮ ವ್ರತಂ ಮಹೇಶಸ್ಯ ಪೂಜನಂ ಸರ್ವದಾ ಖಲು ।
ವ್ರತಾಂತರಂ ನ ಜಾನೇಽಹಂ ಶಪಥಂ ಶಿವಪಾದಯೋಃ ॥೧೨೪॥

ಕಾರ್ಯಾಂತರೇಷು ವ್ಯಾಸಂಗಾತ್ ಶಿವಲಿಂಗಸಮರ್ಚನಂ ।
ವಿಘ್ನಿತಂ ಸ್ಯಾದಿತಿ ತ್ಯಕ್ತಂ ಮಯಾ ಕಾರ್ಯಾಂತರಂ ಖಲು ॥೧೨೫॥

ಅನ್ಯದ್ದ್ರವ್ಯಂ ನ ಮೇ ಕಿಂಚಿತ್ ಶಿವಲಿಂಗಾವಲೋಕನಾತ್ ।
ಭಿನ್ನಂ ನ ಸ್ವಪ್ನವಾರ್ತಾಽಪಿ ನಿದ್ರಾವಾರ್ತಾಽಪಿ ದೂರತಃ ॥೧೨೬॥

ಇತಿ ತದ್ವಚನಂ ಶ್ರುತ್ವಾ ರಾಜದಾರಾಃ ಪರಸ್ಪರಂ ।
ವಿಲೋಕ್ಯ ವಿಸ್ಮಯಾವಿಷ್ಟಾ ಕಮಲಾಮೂಚುರಾದರಾತ್ ॥೧೨೭॥

ಆ ಈಶ್ವರಗುಡಿಯು ಶಿವನಾಮಾಮೃತ ಧಾರೆಯಿಂದ ಸದಾ ವ್ಯಾಪ್ತವಾಗಿದೆ. ಅಂತಹ ಶಿವಮಂದಿರವು ನನಗಾಗಿಯೇ ನಿರ್ಮಿತವಾಗಿದೆ. ॥೧೨೩॥

ಯಾವಾಗಲೂ ಶಂಕರನನ್ನು ಆರಾಧಿಸುವುದೇ ನನ್ನ ವ್ರತವಷ್ಟೆ! ಈ ವ್ರತವನ್ನು ಬಿಟ್ಟು ಬೇರೆ ವ್ರತವನ್ನು ನಾನರಿಯೆನು. ಇದು ಶಿವನ ಪಾದದಾಣೆಯಾಗಿಯೂ ನಿಜ. ॥೧೨೪॥

ಇತರ ಕೆಲಸಗಳಿಂದ ಶಿವಪೂಜೆಗೆ ತೊಂದರೆಯಾದೀತೆಂದು ತಿಳಿದು ನಾನು ಬೇರೆ ಕಾರ್ಯಕಲಾಪಗಳನ್ನು ತೊರೆದಿರುವೆನು. ॥೧೨೫॥

ಸ್ವಪ್ನದಲ್ಲಿಯಾಗಲೀ ನಿದ್ರೆಯಲ್ಲಿಯಾಗಲೀ ಶಿವಲಿಂಗಸ್ಮರಣೆಯನ್ನು ಬಿಟ್ಟು ಬೇರೆ ಯೋಚನೆಯನ್ನೇ ನಾನು ತಿಳಿಯೆನು. ಶಿವಲಿಂಗಕ್ಕಿಂತ ಉತ್ತಮವಾದ ದ್ರವ್ಯವೇ ಇಲ್ಲವೆಂದು ನನ್ನ ಭಾವನೆ." ॥೧೨೬॥

ಹೀಗೆಂದ ಲಕ್ಷ್ಮಿಯ ಮಾತನ್ನು ಆ ರಾಜಪತ್ನಿಯರು ಕೇಳಿ ಆತ್ಯಾಶ್ಚರ್ಯಭರಿತರಾದರು. ಮತ್ತು ಆದರದಿಂದ ಲಕ್ಷ್ಮೀದೇವಿಯೊಂದಿಗೆ ಕೂಡಿ ಹೀಗೆ ಮಾತನಾಡಿದರು. ॥೧೨೭॥

ಕಮಲೇ ವಿಮಲೇ ಭದ್ರೇ ಭದ್ರಮಸ್ತ್ವನೃತಂ ತ್ಯಜ ।
ರಹಸ್ಯಮೇಕಂ ವದ ಮೇ ಸಂದೇಹಸ್ತತ್ರ ತಿಷ್ಠತಿ ॥೧೨೮॥

ಪತಿವ್ರತಾಸಿ ಸುಭಗೇ ಸಮಯೇ ಪತಿಸೇವನಂ ।
ಕ್ರಿಯತೇ ಕಿಂ ನ ಚರತಿ ಭರ್ತರ್ಯಪಿ ವಿಹಾರಿಣೀ ॥೧೨೯॥

ಇತಿ ತದ್ವಚನಂ ಶ್ರುತ್ವಾ ಲಜ್ಜಾನಮ್ರಾನನಾ ತದಾ ।
ಪ್ರಾಹ ಸತ್ಯವ್ರತರತಾ ಕಮಲಾ ರಾಜಸುಂದರೀಂ ॥೧೩೦॥

ಅಭಿಲಾಷೋಪನೀತಾನಿ ಸುಖಾನ್ಯಸುಖವೈರಿಣಾಂ ।
ಅಂಗನಾಲಿಂಗನಾಪೇಕ್ಷಾ ನ ತೇಷಾಮಿತಿ ಮನ್ಯತಾಂ ॥೧೩೧॥

ಅಮರೀಣಾಂ ಸ್ವಭಾವೇನ ನ ತು ಕಾಲೋಪಿ ಸರ್ವದಾ ।
ನವಯೌವನಸಂಪನ್ನಾಃ ಸಂಪನ್ನಾಃ ಸುಖಸಾಧನೈಃ ॥೧೩೨॥

ಲಕ್ಷ್ಮೀದೇವಿಯೇ, ನೀನು ಪರಿಶುದ್ಧಳು. ಮತ್ತು ಮಂಗಳದಾಯಕಳು. ಆದುದರಿಂದ ನಿನ್ನಲ್ಲಿ ಅನೇಕ ಸದ್ಗುಣಗಳಿವೆ, ಸುಳ್ಳನ್ನು ಬಿಡು. ಒಂದು ರಹಸ್ಯ ವಿಚಾರವನ್ನು ಮಾತ್ರ ನಮಗೆ ತಿಳಿಸು. ಆವಿಷಯದಲ್ಲಿ ನಮಗೆ ಬಹುಕಾಲದಿಂದ ಸಂಶಯವುಂಟಾಗಿದೆ. ॥೧೨೮॥

ನೀನು ಪತಿವ್ರತೆಯಾಗಿರುವೆ. ಆಯಾ ಕಾಲದಲ್ಲಿ ನೀನು ಪತಿಶುಶ್ರೂಷೆಯನ್ನು ತಪ್ಪದೆ ನಿರ್ವಹಿಸುವೆಯಾ ? ಅಥವಾ ಇಲ್ಲವೋ ? ನೀನು ನಿನ್ನ ಪತಿಯಲ್ಲಿಯೂ ಪ್ರೀತಿಯಿಂದಿರುವೆಯಾ ? ಎಂದು ಅರಸಿಯರು ಲಕ್ಷ್ಮೀದೇವಿಯನ್ನು ಮತ್ತು ಪ್ರಶ್ನಿಸಿದರು. ॥೧೨೯॥

ಹೀಗೆಂದ ಆ ಅರಸಿಯರ ಮಾತನ್ನು ಕೇಳಿ ಲಕ್ಷ್ಮಿಯು ನಾಚಿಕೆಯಿಂದ ತಲೆ ಬಗ್ಗಿಸಿಕೊಂಡಳು. ಹಾಗೂ ಸತ್ಯಪರಾಯಣೆಯಾದ ಆಕೆಯು ರಾಜಪತ್ನಿಯೊಡನೆ ಇಂತೆಂದಳು. ॥೧೩೦॥

ನಿತ್ಯ ಸುಖವನ್ನು ಆಪೇಕ್ಷಿಸುವವರಿಗೆ ಇಚ್ಛಾ ಮೂಲಕ ಪ್ರಾಪ್ತವಾಗುವ ಸ್ರಕ್ ಚಂದನಾದಿ ಸುಖಗಳು ಬೇಕಾಗುವುದಿಲ್ಲ. ಅಲ್ಲದೇ ಯುವತಿಯ ಆಲಿಂಗನಾದಿ ಸೌಖ್ಯವಂತೂ ಅವರಿಗೆ ಇಷ್ಟವಿಲ್ಲವೆಂದು ತಿಳಿಯಿರಿ. ॥೧೩೧॥

ದೇವತಾ ಸ್ತ್ರೀಯರು ಸ್ವಭಾವದಿಂದಲೇ ಯೌವನ ಶಾಲಿಗಳೂ ಮತ್ತು ಸುಖ

ಭರ್ತಾ ನಿಯಾಮಕಸ್ತ್ವೇನ ಶಂಕರೇಣಾಪಿ ಕಲ್ಪಿತಃ ।
ಅಸುರೀಣಾಂ ಹಿ ಪುರುಷೇ ವಾಂಛಾಪಿ ಖಲು ಸರ್ವಥಾ ॥೧೩॥

ಅತೋ ನ ಸುರತಾಪೇಕ್ಷಾ ಪರಸ್ಪರಮತಃ ಪರಂ ।
ಸಮಯೋ ನೀಯತೇ ನಿತ್ಯಂ ಕೇವಲಂ ಶಿವಪೂಜಯಾ ॥೧೪॥

ಇತಿ ತದ್ವಚನಂ ಶ್ರುತ್ವಾ ದತ್ವಾಭರಣಮುತ್ತಮಂ ।
ಪುನಸ್ತಾಮಾಹುರಮಲಾಂ ಕಮಲಾಂ ಸ್ಮಿತಪೂರ್ವಕಂ ॥೧೫॥

ಸೌಂದರ್ಯಮೇತತ್ತವ ಶೃಂಗತುಂಗ
ಸಂಕಾಶವಕ್ಷೋಜವರಾತಿಶೋಭಾ ।
ಅಣೋರಣೀಯೋಪಿ ಸಮಧ್ಯಭಾಗಃ
ಸುಖಾಯ ಕಸ್ಯೇತಿ ವದಾಧುನಾ ನಃ ॥೧೬॥

ಸಾಮಗ್ರಿಗಳನ್ನು ಹೊಂದಿರುವರೂ ಆಗಿರುತ್ತಾರೆ. ಆದರೆ ಎಲ್ಲಾ ಕಾಲದಲ್ಲಿಯೂ ಅವರಿಗೆ ಸುಖಾಪೇಕ್ಷೆಯಿರುವುದಿಲ್ಲ. ॥೧೨॥

ಸ್ತ್ರೀಯರಿಗೆ ಗಂಡನು ನಿಯಾಮಕನೆಂಬುದು ಶ್ರೀ ಶಂಕರನಿಂದಲೇ ನಿಯಮಿತವಾಗಿದೆ. ಹಾಗಾದರೂ ದೇವತಾ ಸ್ತ್ರೀಯರಿಗೆ ಖಂಡಿತವಾಗಿಯೂ ಪುರುಷ ಸ್ಪರ್ಶ ಸುಖವು ಹಿತವಾಗುವುದಿಲ್ಲ. ॥೧೩॥

ಆದುದರಿಂದ ಅನ್ಯೋನ್ಯವಾಗಿ ಅವರಿಗೆ ಸುರತದಲ್ಲಿ ಅಪೇಕ್ಷೆ ಇರುವುದಿಲ್ಲ. ಪ್ರತಿನಿತ್ಯವೂ ಅವರು ಕೇವಲ ಶಿವಾರ್ಚನೆಯಿಂದಲೇ ಕಾಲವನ್ನು ತಳ್ಳುವರು. ಎಂದು ಲಕ್ಷ್ಮೀದೇವಿಯು ಹೇಳಿದಳು. ॥೧೪॥

ಹೀಗೆ ಹೇಳಿದ ಆಕೆಯ ಮಾತನ್ನು ಕೇಳಿ ಆ ರಾಜಪತ್ನಿಯರು ಆಕೆಗೆ ಉತ್ತಮವಾದ ಒಡವೆವಸ್ತುಗಳನ್ನು ಕೊಟ್ಟರು. ಬಳಿಕ ಮುಗುಳುನಗೆ ನಕ್ಕು ಪರಿಶುದ್ಧಳಾದ ಆಕೆಯೊಡನೆ ಹೀಗೆ ಮಾತನಾಡಿದರು. ॥೧೫॥

ಲಕ್ಷ್ಮೀಯೇ! ನಿನ್ನ ಈ ಎತ್ತರವಾದ ಪರ್ವತಶೃಂಗದಂತಿರುವ ಸ್ತನಗಳು ನಿನ್ನ ಸೌಂದರ್ಯವನ್ನು ಹೆಚ್ಚಿಸಿವೆ. ಮತ್ತು ಅತಿ ಸೂಕ್ಷ್ಮವಾದ ನಿನ್ನ ಮಧ್ಯಭಾಗವು ಸುಂದರವಾಗಿ ಶೋಭಿಸುತ್ತಿದೆ. ಇದು ಯಾರ ಸುಖಕ್ಕಾಗಿ ನಿರ್ಮಿತವಾಗಿದೆ! ॥೧೬॥

ಆಸ್ಯಂ ಸ್ಯಾದರವಿಂದಸುಂದರಮಿದಂ ನೇತ್ರಾರವಿಂದಪ್ರಭಾ
ವೇಣೀ ನೀಲಫಣಿಪ್ರಭಾಪಿ ಜಘನಾಪಾರಪ್ರಭಾಸ್ಯಬ್ಜಜೇ ।
ಕಸ್ಯ ಸ್ಯಾದುಪಭೋಗಹೇತುರಿಯಮಪ್ಯಾವರ್ತಶೋಭಾಶುಭಾ
ಹಿತ್ವಾ ಸೋಽಪಿ ನಪುಂಸಕೋ ಹರಿರಪಿ ಪ್ರಾಯಸ್ತ್ವದುಕ್ತ್ಯೋಕ್ತಿಭಿಃ ॥೧೩೭॥

ತರುಣೀಂ ರಮಣೀಮುಪಾಸ್ಯ ಕೋ ವಾ
ವಿರತಸ್ಸ್ಯಾದತಿಶುದ್ಧಭೋಗಯುಕ್ತಃ ।
ನ ಪುಮಾನಿತಿ ನಿಶ್ಚಿತೋಽತ ಏವ
ಪ್ರತಿಭಾತೀಹ ವಿಡಂಬನೇತಿ ನೂನಂ ॥೧೩೮॥

ವಿನೋದವಾರ್ತಾಭಿರಲಂ ಕಿಲೇದಂ
ವೃತ್ತಂ ಪರಂ ತಾವದಿದಂ ತವಾಪಿ ।
ವಿಚಾರಿತಂ ಸತ್ಯಮಿದಂ ವದಂತಿ
ಶ್ರುತ್ವಾ ವಚಸ್ತತ್ಪುನರಾಹ ಪದ್ಮಾ ॥೧೩೯॥

ಈ ನಿನ್ನ ಮುಖವು ಕಮಲದಂತೆ ರಮ್ಯವಾಗಿದೆ. ಕಣ್ಣು ತಾವರೆಯಂತೆ ಹೊಳೆಯುತ್ತಿದೆ. ಈ ಜಡೆಯು ಕೃಷ್ಣಸರ್ಪದಂತೆ ನೀಳವಾಗಿದೆ. ಎಲೌ ಲಕ್ಷ್ಮಿಯೇ, ನಿನ್ನ ಜಘನಸ್ಥಳವು ವಿಪುಲವಾಗಿದೆ. ಇವೆಲ್ಲಾ ಯಾವನ ಉಪಭೋಗಕ್ಕೆ ಸಾಧನ ವಾಗಿದೆ ಹೇಳು? ಈ ನಾಭಿಯಾದರೋ ಸುಳಿಯಂತೆ ಕಂಗೊಳಿಸುತ್ತಿರುವುದು. ನಿನ್ನ ಮಾತಿನ ರೀತಿಯಿಂದ ಈ ಉಪಭೋಗವಸ್ತುಗಳನ್ನು ತೊರೆದಿರತಕ್ಕ ನಾರಾಯಣನು ಪ್ರಾಯಶಃ ನಪುಂಸಕನಿರಬಹುದು. ॥೧೩೭॥

ಯೌವನಶಾಲಿನಿಯೂ, ತನ್ನಿಷ್ಟದಂತೆ ನಡೆಯುವವಳೂ ಆದ ಪ್ರಿಯತಮೆ ಯನ್ನು ಬಿಟ್ಟು ಯಾವನಾದರೂ ವಿರತಿಯನ್ನು ಹೊಂದುವನೇ? ಹಾಗೆ ವಿರಕ್ತ ನಾದವನನ್ನು ಸಾಮಾನ್ಯವಾಗಿ ನಪುಂಸಕನೆಂದು ನಿಶ್ಚೈಸಬಹುದಲ್ಲವೆ! ॥೧೩೮॥

ಈ ಮಾತು ವಿನೋದಕ್ಕಾಗಿ ಆಡಿದುದಲ್ಲ; ನಿಜವಾದ ಅಂಶವು ಈ ವೃತ್ತಾಂತದಲ್ಲಿದೆ. ಅಥವಾ ಇದು ನಡೆದ ಸಂಗತಿಯಷ್ಟೇ! ಇದನ್ನು ವಿಚಾರಿಸಲು ನಿಜ ಎಂದು ಎಲ್ಲರೂ ಹೇಳುತ್ತಾರೆ ಎಂದು ರಾಜಪತ್ನಿಯರು ಹೇಳಿದರು. ಅವರ ಮಾತನ್ನು ಕೇಳಿ ಪುನಃ ಲಕ್ಷ್ಮೀದೇವಿಯು ಹೀಗೆಂದಳು. ॥೧೩೯॥

ಪತಿವ್ರತಾನಾಂ ಪರಮಃ ಸಧರ್ಮಃ
ಪತಿಪ್ರಿಯಾಲಾಪನಸಾಧನಾನಾಂ ।
ಸಂಪಾದನಂ ಸ್ಯಾತ್ತದಿಲಾಗತಾನಾಂ
ತನ್ಮಾನುರಾಣಾಮಿತಿ ನಿಶ್ಚಯೋ ಮೇ ॥೧೪೦॥

ಯಾವತ್ತತ್ತ್ವವಿಚಾರತತ್ಪರಮತಿಸ್ತಾವನ್ನ ನಾರೀಮುಖಂ
ದ್ರಷ್ಟುಂ ವಾಂಛತಿ ಮಾನವೋಽಪಿ ನಿತರಾಂ ದೇವಸ್ಯ ತತ್ತ್ವಂ ಯತಃ ।
ಜಾನಾತೀತಿ ಸತೀಯುತೋಽಪಿ ನ ಸತೀಸಂಗಪ್ರಭೇದೇ ಮತಿಂ
ಕರ್ತುಂ ವಾಂಛತಿ ಚಿತ್ತಮೇವ ನ ತಥಾ ನಾರೀಗತಂ ಜಾಯತೇ ॥೧೪೧॥

ವಿಷಯೇಽತಿನಿಸ್ಪೃಹಂ ಮನೋ
ನ ಕದಾಪೀತಿ ನರಸ್ಯ ತತ್ಕಥಂ ।
ತ್ರಿದಶಸ್ಯ ಭವಿಷ್ಯತೀತ್ಯಪಿ
ತ್ರಿದಶಾಸ್ತತ್ತ್ವವಿಬೋಧಲಾಲಸಾಃ ॥೧೪೨॥

ಪತಿಯೊಡನೆ ಪ್ರಿಯವಾದ ಮಾತುಗಳನ್ನಾಡುವುದು, ಆತನಿಗೆ ಇಷ್ಟವಾದ ಸಾಮಗ್ರಿಗಳನ್ನು ತರುವಿಕೆ ಇವೆಲ್ಲಾ ಪತಿವ್ರತಾಸ್ತ್ರೀಯರಿಗೆ ಶ್ರೇಷ್ಠವಾದ ಧರ್ಮವಾಗಿದೆ. ಆದರೆ ಈ ಧರ್ಮವು ಮನುಷ್ಯಸ್ತ್ರೀಯರಿಗೆ ಅನ್ವಯಿಸುವುದೇ ಹೊರತು ವಿಷಯವ್ಯಾಪಾರ ವಿಮುಕ್ತರಾದ ದೇವಸ್ತ್ರೀಯರಿಗಲ್ಲ ಎಂಬುದು ನನ್ನ ನಿಶ್ಚಯ. ||೧೪೦||

ಮನುಷ್ಯನು ಎಲ್ಲಿಯ ವರೆಗೆ ವಿಚಾರಪರನಾಗುವನೋ ಅಲ್ಲಿಯವರೆಗೆ ಆತನು ಸ್ತ್ರೀಮುಖವನ್ನು ನೋಡಲು ಅಪೇಕ್ಷಿಸುವುದಿಲ್ಲ. ಆದುದರಿಂದ ಆತನಿಗೆ ಈಶ್ವರನ ತತ್ತ್ವವು ತಿಳಿಯುತ್ತದೆ. ಈಶ್ವರನ ತತ್ತ್ವವನ್ನು ತಿಳಿದ ಆತನು ಸಪತ್ನೀಕನಾದರೆ ತನ್ನ ಸತಿಯ ಸಂಗವನ್ನು ಬಿಡಲು ಅಪೇಕ್ಷಿಸುವುದಿಲ್ಲ. ಕಾಂತೆಯಲ್ಲಿ ಆಸಕ್ತನಾಗಿದ್ದರೂ ಆತನ ಮನಸ್ಸೆಲ್ಲಾ ಈಶ್ವರನಲ್ಲಿ ನಟ್ಟಿರುತ್ತದೆ. ||೧೪೧||

ಸ್ರಕ್, ಚಂದನ, ವನಿತಾದಿ ವಿಷಯಗಳ ಉಪಭೋಗೇಚ್ಛೆಯಿಂದ ಮನುಷ್ಯನ ಮನಸ್ಸು ಯಾವಾಗಲೂ ಹಿಮ್ಮೆಟ್ಟಲಾರದು. ಆದರೆ ದೇವತೆಗಳಿಗೆ ನಿಸ್ಪೃಹತೆಯು ಉಂಟಾಗಲು ಕಾರಣವೇನಿರಬಹುದೆಂದರೆ ಆ ದೇವತೆಗಳು ಯಾವಾಗಲೂ ತತ್ತ್ವ ವಿಚಾರವನ್ನು ತಿಳಿಯಲು ಬಹಳ ಮಟ್ಟಿಗೆ ಆಸಕ್ತರಾಗಿರುವುದೇ. ||೧೪೨||

ಶಿವಧ್ಯಾನಾನಂದಪ್ರವಣಮನಸಾಮಲ್ಪವಿಷಯೇ
ನ ಬುದ್ಧಿರ್ಧೀರಾಣಾಮಿತಿ ಖಲು ಮನೋ ನ ಪ್ರಸರತಿ ।
ಅತೋ ನಾರೀಸಂಗೇ ವಿರತಿರತಿಭಾಗ್ಯೇನ ಮಹತಾಂ
ಸುರಾಣಾಂ ಸಾ ತಾವತ್ ಗಿರಿಶಚರಣಾಂಭೋಜಭಜನಾತ್ ॥೧೪೩॥

ಪ್ರಸಾದಂ ಚಿತ್ತಸ್ಯ ತ್ರಿನಯನಪದಾಂಭೋಜಭಜನಂ
ಕರೋತೀತಿ ಶ್ರಾಂತಂ ನ ಭವತಿ ಮನೋ ದುಷ್ಟವಿಷಯೇ ।
ಅತಃ ಶರ್ವಃ ಸರ್ವೈರನುದಿನಮನುಧ್ಯೇಯ ಇತಿ ನೋ
ಸುಧಾರೂಪಾ ಬುದ್ಧಿರ್ಭವತಿ ಭವತಾಮಪ್ಯಭಿಮತಾ ॥೧೪೪॥

ಪ್ರಸಾದಂ ಮನ್ಯೇಽಹಂ ಶಿವಚರಣಪಂಕೇರುಹಭವಂ
ಸುರಾಣಾಮೈಶ್ವರ್ಯಂ ತದಪಿ ನ ಮನೋ ವಾಂಛತಿ ಯತಃ ।
ಶಿವಾ ಕಾಂತಾ ಶ್ರಾಂತಾ ಪ್ರವಿತತಕಥಾರೂಪಸುಧಯಾ
ಮನಸ್ತೃಪ್ತಂ ತೃಪ್ತಂ ಕಿಮಪಿ ವಿಷಯಂ ವಾಂಛತಿ ಜನಃ ॥೧೪೫॥

ಶಿವಧ್ಯಾನದಲ್ಲಿ ಮನಸ್ಸಿರುವ ಧೀರಪುರುಷರಿಗೆ ಕ್ಷುದ್ರ ವಿಷಯಗಳ ಕಡೆಗೆ ಮನಸ್ಸು ಪ್ರಸರಿಸುವುದಿಲ್ಲ. ಆದುದರಿಂದ ಸ್ತ್ರೀಸಂಗವು ಅವರಿಗೆ ಬೇಡವಾಗಿದೆ. ಅಂತಹ ಒಂದು ವಿರಕ್ತಿಯು ಶ್ರೀಶಂಕರನ ಭಜನೆಯಿಂದಲೇ ದೇವತೆಗಳಿಗುಂಟಾಗಿದೆ. ॥೧೪೩॥

ಪರಮೇಶ್ವರನ ಪಾದಕಮಲಗಳ ಭಜನೆಮಾಡುವಿಕೆಯಿಂದ ಮನಸ್ಸಿಗೆ ಹರ್ಷವುಂಟಾಗುತ್ತದೆ. ಆ ಭಜನೆ ಮನಸ್ಸಿಗೆ ಆಯಾಸವಾಗುವುದಿಲ್ಲ. ಮತ್ತು ಇತರ ದುಷ್ಟ ವಿಷಯಗಳ ಕಡೆಗೆ ಮನಸ್ಸು ಪ್ರವೇಶಿಸುವುದಿಲ್ಲ. ಆದುದರಿಂದ ಪ್ರತಿನಿತ್ಯವೂ ಶಂಕರನನ್ನು ಎಲ್ಲರೂ ಧ್ಯಾನಿಸಬೇಕು. ಎಂಬ ಅಮೃತ ರೂಪದಂತಿರುವ ಈ ಬುದ್ಧಿಯು ನನಗೂ ತಮಗೂ ಇಷ್ಟವೆಂದು ನಾನು ಭಾವಿಸುತ್ತೇನೆ. ॥೧೪೪॥

ದೇವತೆಗಳಿಗೆ ಐಶ್ವರ್ಯವು ಶ್ರೀಶಂಕರನ ಪಾದಕಮಲಗಳ ಭಜನದಿಂದ ಲಬ್ಧವಾದ ಅನುಗ್ರಹ ರೂಪವೆಂದು ತಿಳಿಯುತ್ತೇನೆ. ಅವರು ಮನಸ್ಸಿನಿಂದ ಅಂತಹ ಐಶ್ವರ್ಯವನ್ನು ಬಯಸಲಿಲ್ಲ. ಶಿವಭಜನ ಪ್ರಭಾವವು ಹಾಗಾಯಿತು. ಅಷ್ಟೇ! ಮನೋಹರವಾದ ಮತ್ತು ಮಂಗಳಕರವಾದ ಆ ಶಿವಕಥಾಎಂಬ ಅಮೃತ ಪಾನವನ್ನು ಮಾಡಿದಷ್ಟೂ ಈ ನನ್ನ ಮನಸ್ಸಿಗೆ ತೃಪ್ತಿಯೇ ಆಗಲಾರದು. ಈ ಶಿವಕಥಾಮೃತ

ಕಸ್ತೂರಿಕಾಕರ್ದಮಲೇಪನೇನ
ಕರ್ಪೂರಪಾಟೀರರಸಾಭಿಷಿಕ್ತಃ ।
ಸಿಕ್ತಾಮಿತಾಂಗಾರರಜಃಪ್ರಸಾರಂ
ಕಿಂ ವಾಂಛತೀತಿ ಪ್ರತಿಭಾತಿ ಚಿತ್ರೈಃ ॥೧೪೬॥

ಆಮಸ್ತಮಂತಃಕರಣಂ ಮಮೇದಂ
ಉಮಾಸಹಾಯಾಂಘ್ರಿಸರೋಜಭೃಂಗಃ ।
ಅತೋ ನ ವಾಂಛಾ ವಿಷಯೇತಿತುಚ್ಛೇ
ಪ್ರಭಾವತೋ ವೃಶ್ಚಿಕಪುಚ್ಛತುಚ್ಛೇ ॥೧೪೭॥

ಅಮಂದಮಧುರಸ್ಫುರತ್ಕಿರಣಪಾದಪದ್ಮೋಲ್ಲಸ
ನ್ಮರಂದರಸಧಾರಣಂ ಖಲು ಮನಃ ಪರಂ ಕ್ರೀಡತಿ ।
ತಥಾ ಚ ಮೃಡ ಶಂಕರ ಸ್ಮರಹರಾಮರಾಧೀಶ್ವರ
ಪ್ರಸಾದಸುಮುಖೋ ಭವೇತ್ಯಸುನಯಪ್ರವೃತ್ತಂ ಮನಃ ॥೧೪೮॥

ದಿಂದ ತೃಪ್ತಿಹೊಂದಿದ ಜನರ ಚಿತ್ತವು ಬೇರೊಂದು ವಿಷಯವನ್ನು ಬಯಸುವುದಿಲ್ಲ. ||೧೪೫||

ಒಳ್ಳೆ ತಂಪಾದ ಕಸ್ತೂರಿಯನ್ನು ಮೈಗೆ ಲೇಪಿಸಿಕೊಂಡು ಕರ್ಪೂರ, ಚಂದನ ಇವುಗಳ ರಸದಿಂದ ಸ್ನಾನ ಮಾಡಿದವನು ಚನ್ನಾಗಿ ನೀರು ಹಾಕಿ ಆರಿಸಿ ತಯಾರು ಮಾಡಿದ ಇದ್ದಲಿನ ಪುಡಿಯನ್ನು ಅಪೇಕ್ಷಿಸುವನೇನು? ಹಾಗೆ ಶಿವಕಥೆಯೆಂಬ ಅಮೃತ ಪಾನಮಾಡಿದವನು ಇನ್ನೊಂದನ್ನು ಬಯಸಲಾರನು. ಇದೇನೂ ಆಶ್ಚರ್ಯವಲ್ಲ.||೧೪೬||

ಶಿರಸ್ಸು ಮೊದಲಾದ ಈ ನನ್ನ ಎಲ್ಲಾ ಅಂತಃಕರಣಪ್ರವೃತ್ತಿಯೂ ಕೂಡ ಮಹೇಶ್ವರನ ಪಾದಕಮಲಗಳಲ್ಲಿ ಭೃಂಗದೋಪಾದಿಯಲ್ಲಿ ಆಶ್ರಯಿಸುತ್ತದೆ. ಆದುದರಿಂದ ಚೇಳಿನ ಬಾಲದಹಾಗೆ ನಿಂದನೀಯವಾದ ವಿಷಯಭೋಗದಲ್ಲಿ ನನಗೆ ಅಪೇಕ್ಷೆ ಎಂದೂ ಹುಟ್ಟುವುದಿಲ್ಲ. ||೧೪೭||

ಅಮಿತವಾಗಿ ಜನಗಳಿಗೆ ಆಹ್ಲಾದಕರವಾದ ಕಿರಣಗಳುಳ್ಳವನನ್ನು ಧರಿಸಿದ ಅಂದರೆ ಚಂದ್ರಮೌಳೀಶ್ವರನ ಕಮಲದಂತಿರುವ ಪಾದಗಳ ಮಕರಂದ ರಸದಲ್ಲಿ ನನ್ನ ಮನಸ್ಸು ಕ್ರೀಡಿಸುತ್ತದೆ. ಹಾಗೆಯೇ ಮೃಡನೇ, ಶಂಕರನೇ, ಸ್ಮರಹರನೇ,

ಶಿವಾಕರ ಶಿವಾಪತೇ ಶಿವಶಿವೇತಿ ನಾಮಾಮೃತಂ
ಪಿಬತ್ಯನುದಿನಂ ಮನೋ ಮಮ ವಿಚಾರ ಏವಾತ್ರ ನ ।
ಅತಃಪರಮುಮಾಪತಿರ್ಗತಿರಿತಿ ಪ್ರಪನ್ನಂ ಮನಃ
ಕಿಮನ್ಯದಪಿ ವಾಂಛತೀತ್ಯಪಿ ವಿಚಾರಲೇಶೋಽಪಿ ನ ॥೧೪೯॥

ಭಾಗ್ಯಸ್ಯಾವಧಿರೇವ ನೇತ್ಯಪಿ ಮತಿರ್ಜಾತಾ ಭವದ್ದರ್ಶನಾತ್
ನಾರೀಣಾಂ ಗಿರಿಶಾರ್ಚನೇ ಯದಿ ರತಿಃ ಸಾಸ್ಯಾದ್ಭವಾನೀ ಖಲು ।
ನಾರೀರೂಪಮುಪೇತ್ಯ ಶಂಕರಪದಾಂಭೋಜಾರ್ಚನಾತ್ಯಾದರಾತ್
ಸಾ ಗೌರೀತಿ ವಿನಿಶ್ಚಯೋ ಮಮ ಸಮುತ್ಪನ್ನಶ್ಶಿವಾರಾಧನಾತ್ ॥೧೫೦॥

ಇತಿ ಶ್ರೀಶಿವರಹಸ್ಯೇ ಹರಾಖ್ಯೇ ತೃತೀಯಾಂಶೇ ಉತ್ತರಾರ್ಧೇ
ಜನಕಯಾಜ್ಞವಲ್ಕ್ಯಸಂವಾದೇ ರಾಜಪ್ರದೋಷಪೂಜಾವರ್ಣನಂ
ವಿಷ್ಣುಸಂಭಾಷಣಂ ರಾಜದಾರಲಕ್ಷ್ಮೀಸಂವಾದವರ್ಣನಂ ನಾಮ
ಸಪ್ತವಿಂಶೋಽಧ್ಯಾಯಃ.

ಅಮರೇಶ್ವರನೇ, ಸುಮುಖನಾಗು, ಅನುಗ್ರಹಿಸು ಎಂದು ನನ್ನ ಮನಸ್ಸು ಶಂಕರನನ್ನು ಸದಾ ಅನುನಯಮಾಡುವುದರಲ್ಲಿ ತೊಡಗಿದೆ. ||೧೪೮||

ಎಲೈ ಮಂಗಳಕರನೇ, ಉಮಾಪತಿಯೇ, ಶಿವನೇ ಎಂದು ಶಿವನಾಮಾಮೃತವನ್ನು ಪ್ರತಿದಿನವೂ ಈ ನನ್ನ ಮನಸ್ಸು ಪಾನಮಾಡಲಿ. ಇದರಲ್ಲಿ ಬೇರೆ ವಿಚಾರದ ಆವಶ್ಯಕತೆ ಇಲ್ಲ. ಇನ್ನು ಮುಂದೆ ನನಗೆ ಶಂಕರನೇ ದಿಕ್ಕು ಎಂದು ಶರಣುಹೊಂದಿದ ಈ ಚಿತ್ತವು ಬೇರೆಯದನ್ನು ಅಪೇಕ್ಷಿಸುವುದಿಲ್ಲ ಮತ್ತು ವಿಚಾರ ಮಾಡುವುದೂ ಇಲ್ಲ. ||೧೪೯||

ಈಗ ತಮ್ಮ ದರ್ಶನದಿಂದ ಅಪರಿಮಿತವಾದ ಅದೃಷ್ಟವು ನನಗೆ ಉಂಟಾಯಿತು. ಸ್ತ್ರೀಯರಿಗೆ ಶಿವಪೂಜೆಯಲ್ಲಿ ಆಸೆ ಹುಟ್ಟಿದರೆ ಅಂತಹವಳು ಸಾಕ್ಷಾತ್ ಭವಾನೀಯೇ ಸರಿ. ಆ ಶ್ರೀಭವಾನಿಯೇ ತಾನು ಸ್ತ್ರೀರೂಪವನ್ನು ಧರಿಸಿ ಶಿವನ ಪಾದಕಮಲಗಳನ್ನು ಅರ್ಚನೆ ಮಾಡುವಳು. ಆಕೆಯು ಗೌರೀ ದೇವಿಯ ಸ್ವರೂಪವನ್ನು ಹೊಂದುವಳೆಂದು ನನ್ನ ಮತ. ಹೀಗೆ ಶಿವಪೂಜೆಯಿಂದ ನನಗೆ ಈ ಅರಿವು

ಲಭಿಸಿರುತ್ತದೆ. ಎಂದು ಲಕ್ಷ್ಮೀದೇವಿಯು ಆ ರಾಜ ಪತ್ನಿಯರಿಗೆ ಶಿವಪೂಜಾ ವಿಚಾರವನ್ನು ತಿಳಿಸಿದಳು". ಎಂದು ಯಾಜ್ಞವಲ್ಕ್ಯಮಹರ್ಷಿಯು ಜನಕರಾಜನಿಗೆ ಪ್ರದೋಷಕಾಲದ ಶಿವಪೂಜಾಮಹಿಮೆಯನ್ನೂ ವಿವರಿಸಿ ಹೇಳಿದನು. ||೧೫೦||

ಇಲ್ಲಿಗೆ ಶ್ರೀ ಶಿವರಹಸ್ಯದ ಹರನಾಮಕವಾದ ಮೂರನೆಯ ಅಂಶದ
ಉತ್ತರಾರ್ಧದಲ್ಲಿ ಜನಕ ಯಾಜ್ಞವಲ್ಕ್ಯ ಇವರ ಸಂವಾದ ಸಂದರ್ಭದಲ್ಲಿ, ರಾಜನು
ಪ್ರದೋಷಪೂಜೆಯನ್ನು ವರ್ಣಿಸಿದುದು, ವಿಷ್ಣುವಿನ ಸಂಭಾಷಣೆ,
ರಾಜಪತ್ನಿಯರ ಮತ್ತು ಮಹಾಲಕ್ಷ್ಮಿಯ ಸಂವಾದ
ಎಂಬ ಶಿವಪ್ರಸಾದಮಹಿಮಾವರ್ಣನರೂಪವಾದ ವಿಷಯಗಳುಳ್ಳ
ಇಪ್ಪತ್ತೇಳನೆಯ ಅಧ್ಯಾಯವು ಮುಗಿದುದು.